# ಮಹಾನಾರಾಯಣೋಪನಿಷತ್ತು



ಅಧ್ಯಾತ್ಮಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ - 573 211
www.adhyatmaprakasha.org
ಬೆಂಗಳೂರು. ದೂರವಾಣಿ: 26765548

ಸ್ಥಾಪನೆ : 1920 ದೂ. : 08175-273820

# ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

## (ಪಬ್ಲಿಕ್ ಛಾರಿಟಬಲ್ ಟ್ರಸ್ಟ್)

**ಹೊಳೆನರಸೀಪುರ-573 211**

## ವೇ ॥ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳಿಂದ ರಚಿಸಲ್ಪಟ್ಟು ಪ್ರಕಾಶನಗೊಂಡಿರುವ ಗ್ರಂಥಗಳು

**I. ವೇದಸಾಹಿತ್ಯಪ್ರಿಯರಿಗೆ :** (ಕರ್ಮಕಾಂಡದಲ್ಲಿ ಶ್ರದ್ಧಾವಂತರಿಗೆ)

ಪುಟಗಳು


1. ರುದ್ರಭಾಷ್ಯಪ್ರಕಾಶನ : (ನಮಸ್ತೇ ರುದ್ರ –ಎಂಬ ವೇದಭಾಗದ – ಲಲಿತವಾದ ಕನ್ನಡ ವಿವರಣೆ ) 154
2. ಚಮಕಾಧ್ಯಾಯಭಾಷ್ಯ : (ಚ.ಮೇ – ಎಂಬ ವೇದಭಾಗಗಳ ಸರಳ ವ್ಯಾಖ್ಯಾನ) 96
3. ಪುರುಷಸೂಕ್ತಭಾಷ್ಯ : (ಸಹಸ್ರಶೀರ್ಷಾ–ಎಂಬ ಸೂಕ್ತದ ಅರ್ಥವಿವರಣೆ ) 86
4. ಶ್ರೀಸೂಕ್ತಭಾಷ್ಯ : (ಹಿರಣ್ಯವರ್ಣಾಂ– ಎಂಬ ಸೂಕ್ತದ ಅರ್ಥ ) 64
5. ವಿಷ್ಣುಸೂಕ್ತಭಾಷ್ಯ : (ಋಗ್ವೇದದ ವಿಷ್ಣುಸೂಕ್ತದ 45 ಋಕ್ಕುಗಳ ಅರ್ಥ ವಿವರಣೆ – ನಾರಾಯಣ ಸೂಕ್ತಭಾಷ್ಯ ಸಮೇತ ) 103
6. ಸೌರಸೂಕ್ತಭಾಷ್ಯ :(ಋಗ್ವೇದದ ಸೌರಸೂಕ್ತದ 64 ವಾಕ್ಕುಗಳ ಅರ್ಥವಿವರಣೆ) 82

**II. ಪುರಾಣಸ್ತೋತ್ರಪ್ರಿಯರಿಗೆ** (ಭಕ್ತಿಪ್ರಧಾನರಾದ ಸಾಧಕರಿಗೆ)

7. ಅಧ್ಯಾತ್ಮರಾಮಾಯಣ : (ಸಂಪೂರ್ಣ ಮೂಲ, ಭಾವಾರ್ಥ ಸಹಿತ ) 620
8. ಅಧ್ಯಾತ್ಮ ಶಂಕರವಿಜಯ : (ಶಂಕರಾಚಾರ್ಯರ ಚರಿತ್ರೆ ) 188
9. ಸದ್ಗುರುಚರಿತಾಮೃತ : (ಶ್ರೀ ಶ್ರೀಗಳವರ ಜೀವನ ಚರಿತ್ರೆ ಮತ್ತು ಕಾರ್ಯಾಲಯದ ಇತಿಹಾಸ ) 234
10. ಸ್ತೋತ್ರಮಾಲಾ – ಭಾಗ 1 ಪಂಚರತ್ನಗಳು : 1) ಭೀಷ್ಮಸ್ತವರಾಜ 2) ಹರಿಶರಣಾಷ್ಟಕ 3) ಅನುಸ್ಮೃತಿ 4) ಗಜೇಂದ್ರಮೋಕ್ಷ 5) ಆದಿತ್ಯಹೃದಯ 120
11. ಸೋತ್ರಮಾಲಾ – ಭಾಗ 2 : 4 ಗಣಪತಿ ಸ್ತೋತ್ರಗಳು, 11 ಶಿವಸ್ತೋತ್ರಗಳು, 2 ವಿಷ್ಣುಸ್ತೋತ್ರಗಳು – ಪಾಂಡವಗೀತೆ ಸಹಿತ) 84
12. ಶಿವಾಪರಾಧಕ್ಷಮಾಪಣಾ ಸ್ತೋತ್ರ : (ವಿವರಣೆ ಸಹಿತ) 38


(ರಕ್ಷಾಪುಟದ ಮೂರನೆಯ ಪುಟದಲ್ಲಿ ಮುಂದುವರೆದಿದೆ)

ಅಧ್ಯಾತ್ಮಗ್ರಂಥಾವಳಿ

# ಮಹಾನಾರಾಯಣೋಪನಿಷತ್ತು

(ಮೂಲ– ವಿವರಣೆಗಳೊಡನೆ)

ಬರೆದವರು :

ಅಧ್ಯಾತ್ಮವಿದ್ಯಾಪ್ರವೀಣ, ವೇದವಿದ್ಯಾಭೂಷಣ

ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ

ಕ್ರಮಾಂಕ : 194

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ– 573211

ದೂರವಾಣಿ : 08175 –273820

www.adhyatmaprakasha.Org.

ಬೆಂಗಳೂರು –26765548

2012

MAHĀNARAYANŌPANISHATTU
Written by **Vidwan H.S. LAKSHMINARASIHMA MURTHY :**
Published by Adhyatma Prakasha Karyalaya, Public Charitable Trust, Holenarasipur - 573211(INDIA)
**Phone : 08175-273820** website : www.adhyatmaprakasha.org.

ಮೊದಲನೆಯ ಮುದ್ರಣ **I** 1989 (1000 ಪ್ರತಿಗಳು)
ಎರಡನೆಯ ಮುದ್ರಣ **II** 1997 (2000 ಪ್ರತಿಗಳು)
ಮೂರನೆಯ ಮುದ್ರಣ **III** 2012 (2000 ಪ್ರತಿಗಳು)

ಆಕಾರ : 1/8 ಡೆಮ್ಮಿ

ಕಾಗದ : ಮ್ಯಾಪ್‌ಲಿತೋ 70 ಜಿಎಸ್‌ಎಮ್

ಪುಟಗಳು : 6 + 236 = 242

ಬೆಲೆ : ರೂ. 50/-

© ಅಧ್ಯಾತ್ಮಪ್ರಕಾಶಕಾರ್ಯಾಲಯ

**ಅಕ್ಷರ ಜೋಡಣೆ :**
ಪ್ರಶಾಂತ್ ಎಂಟರ್‌ಪ್ರೈಸಸ್
ನಂ. 45, 3ನೇ ಮುಖ್ಯರಸ್ತೆ, ಟಿ.ಆರ್.ನಗರ ಪೋಸ್ಟ್
ನಾಗಸಂದ್ರ, ಬೆಂ - 28, ದೂರವಾಣಿ : 26761529

**ಮುದ್ರಣಸ್ಥಾನ :**
ಶ್ರೀರಾಮ ಪ್ರಿಂಟರ್‍ಸ್
ನಂ. 25, 15ನೇ ಕ್ರಾಸ್,
ಶ್ರೀನಿಧಿ ಲೇಔಟ್, ಬೆಂಗಳೂರು - 560 062
ದೂ. 98453 46197

# ಮುನ್ನುಡಿ

ಮಹಾನಾರಾಯಣೋಪನಿಷತ್ತು ಯಜುರ್ವೇದದ ತೈತ್ತರೀಯ ಶಾಖೆಗೆ ಸೇರಿದ್ದು ಅದರ ಆರಣ್ಯಕಭಾಗದ ಕಡೆಯ ಪ್ರಶ್ನವಾಗಿದೆ. ಇದರಲ್ಲಿ ಆಂಧ್ರಪಾಠದಂತೆ ಎಂಭತ್ತು ಅನುವಾಕಗಳಿವೆ. ಇಲ್ಲಿ ಪ್ರತಿಪಾದಿಸಲ್ಪಟ್ಟಿರುವ ಬ್ರಹ್ಮವಿದ್ಯೆಯು ಸಾಧನಗಳ ಸಮೇತವಾಗಿ ಪರಿಪೂರ್ಣವಾಗಿದೆ. ವೈದಿಕ ಸಂಪ್ರದಾಯದಂತೆ ಈ ಉಪನಿಷತ್ತಿಗೆ ಆರ್ಷೇಯಕ್ರಮದ ಸ್ವರಪಾಠವೂ ಇದ್ದು ವೇದಪಾರಾಯಣಕ್ಕೆ ತಕ್ಕದ್ದಾಗಿದೆ. ಹಾಗೆಯೇ ಕರ್ಮೋಪಾಸನೆಗಳ ಮತ್ತು ಬ್ರಹ್ಮಜ್ಞಾನದ ತಿರುಳನ್ನು ಹೊರಪಡಿಸುವ ಮಂತ್ರಗಳು ಅಧ್ಯಾತ್ಮವಿದ್ಯಾರಸಿಕರಿಗೆ ಅನುಸಂಧಾನಕ್ಕೆ ಯೋಗ್ಯವಾಗಿಯೂ ಇವೆ. ಶ್ರೀಶಂಕರ ಭಗವತ್ಪಾದರವರು ತಮ್ಮ ಭಾಷ್ಯಗ್ರಂಥಗಳಲ್ಲಿ ಅಲ್ಲಲ್ಲಿ ಈ ಉಪನಿಷತ್ತಿನ ವಾಕ್ಯಗಳನ್ನು ಪ್ರಮಾಣವಚನಗಳಾಗಿ ಉದಾಹರಿಸಿರುತ್ತಾರೆ. ಹೀಗೆ ವೈದಿಕ ಸಂಸ್ಕೃತಿಯಲ್ಲಿ ಹೆಚ್ಚು ಜನಪ್ರಿಯವಾಗಿದ್ದು ತ್ರಿಮತಸ್ಥರೂ ಅಧ್ಯಯನಮಾಡುತ್ತಿರುವ ಈ ಉಪನಿಷತ್ತಿಗೆ ಕನ್ನಡದಲ್ಲಿ ವಿವರಣೆಯನ್ನೂ ಬರೆದರೆ ಹೆಚ್ಚು ಪ್ರಯೋಜನವಾದೀತೆಂದು ಭಾವಿಸಿ ಶ್ರೀ ಸಾಯಣಾಚಾರ್ಯರ ಭಾಷ್ಯಾನುಗುಣವಾಗಿ ಹಾಗೂ ಅಧ್ಯಾತ್ಮವಿಚಾರಗಳಿಗೆ ಶ್ರೀಶಂಕರ ಭಗವತ್ಪಾದರವರ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಪ್ರತಿಪಾದಿತವಾಗಿರುವ ವೇದಾಂತ ಸಿದ್ಧಾಂತಾನುಗುಣವಾಗಿ ವಿವರಣೆಯನ್ನು ಬರೆದು 1989ರಲ್ಲಿ ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಮೂಲಕ ಮೊದಲನೆಯ ಬಾರಿಗೆ ಪ್ರಕಟಿಸಲಾಯಿತು.

ಮಹಾಜನರು ಈ ಗ್ರಂಥವನ್ನು ಗೌರವದಿಂದ ಸ್ವೀಕರಿಸಿ ಪ್ರೋತ್ಸಾಹಿಸಿದ್ದರಿಂದ ಇದರ ಪ್ರತಿಗಳೆಲ್ಲ ಮಾರಾಟವಾಗಿದ್ದು ಓದುಗರು ಮತ್ತೆ ಗ್ರಂಥವನ್ನು ಬಯಸಿದ್ದರಿಂದ ಎರಡನೆಯಬಾರಿಗೆ 1997ರಲ್ಲಿ ಮುದ್ರಿಸಲಾಯಿತು; ಮತ್ತೆ ಈಗ ಮುದ್ರಣದ ತಪ್ಪುಗಳನ್ನೆಲ್ಲಾ ತಿದ್ದಿ ಗ್ರಂಥ ಶರೀರದಲ್ಲಿ ಯಾವ ಬದಲಾವಣೆಯೂ ಇಲ್ಲದೆ ಮೂರನೆಯ ಬಾರಿಗೆ ಮುದ್ರಿಸಿ ಹೊರತರಲಾಗಿದೆ.

ಈ ಕೆಳಕಂಡ ಮಹನೀಯರುಗಳು ಈ ಮರುಮುದ್ರಣ ಗ್ರಂಥ ಪ್ರಕಟನೆಗೆ ಉದಾರವಾಗಿ ಸಹಾಯ ಮಾಡಿರುತ್ತಾರೆ.

1) ಎಮ್.ವಿ. ಶ್ರೀಧರ್ ಮೈಸೂರು 2) ಸಾವಿತ್ರಿ ದೇವರಾಜ್ (ಯು.ಎಸ್.ಎ) 3) ರೂಪಾ ರಮೇಶ್, ಬೆಂಗಳೂರು 4) ಬಿ.ಜಿ. ಶ್ರೀನಾಥ್ ಬೆಂ., 5) ಡಾ|| ಎಸ್.

ಹೇಮಲತಾ, ಬೆಂ., 6) ಬಿ.ಎಸ್. ನಾಗರಾಜ್, ಬೆಂ., 7) ಹೆಚ್. ಎನ್. ರಂಗಸ್ವಾಮಿ ಬೆಂ., 8) ಬಿ.ಸಿ. ಜನಾರ್ಧನ, ಬೆಂ., 9) ಟಿ.ಬಿ ಲಕ್ಷ್ಮಣರಾವ್, ಬೆಂ. ಈ ಎಲ್ಲಾ ಮೇಲ್ಕಂಡ ಮಹಾಶಯರಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕವಾದ ವಂದನೆಗಳು.

ಅಧ್ಯಾತ್ಮ ಪ್ರಕಾಶಕಾರ್ಯಾಲಯವು ತನ್ನ ಚಟುವಟಿಕೆಗಳಲ್ಲಿ ಅಧ್ಯಾತ್ಮಗ್ರಂಥಗಳ ಪ್ರಕಟನೆಗೇ ಅಗ್ರಸ್ಥಾನವನ್ನು ನೀಡಿದ್ದು ಈವರೆಗೆ 250ಕ್ಕೂ ಹೆಚ್ಚು ಪುಸ್ತಕಗಳನ್ನು ಹೊರತಂದಿದೆ. ಕೆಲವು ಗ್ರಂಥಗಳು 5–6 ಸಲ ಮರು ಮರುಮುದ್ರಣಗಳನ್ನು ಕಂಡಿವೆ : ಇಂಥ ಸಾರಸ್ವತಿಸೇವೆಯು ಕನ್ನಡನಾಡಿನಲ್ಲಿ ಅಪೂರ್ವವಾದದ್ದೇ ಆಗಿದೆ. ಆದ್ದರಿಂದ ಮಹಾಜನರು ಈ ಸಂಸ್ಥೆಯ ಗ್ರಂಥಪ್ರಕಟನೆಗೆ ತಮ್ಮ ಉದಾರವಾದ ಧನಸಹಾಯವನ್ನು ನೀಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ

ನಂದನ ಸಂವತ್ಸರ
ವೈಶಾಖ ಶುದ್ಧ ಪಂಚಮಿ
26.04.2012

ಪ್ರಕಾಶಕರು

# ಪರಿವಿಡಿ


| | | |
|---|---|---|
| 1. | ಪೀಠಿಕೆ | 1 |
| 2. | ಬ್ರಹ್ಮಪ್ರತಿಪಾದಕಮಂತ್ರಗಳು | 3 |
| 3. | ಗಾಯತ್ರೀಮಂತ್ರಗಳು | 35 |
| 4. | ದೂರ್ವಾಸೂಕ್ತ | 44 |
| 5. | ಮೃತ್ತಿಕಾಸೂಕ್ತ | 45 |
| 6. | ಶತ್ರುಜಯಮಂತ್ರಗಳು | 50 |
| 7. | ಅಘಮರ್ಷಣಸೂಕ್ತ | 65 |
| 8. | ದುರ್ಗಾಸೂಕ್ತ | 78 |
| 9. | ಪಾಪಕ್ಷಯಮಂತ್ರಗಳು | 88 |
| 10. | ಧಾರಣಾಸಿದ್ಧಿಗಾಗಿ ಜಪಮಂತ್ರ | 90 |
| 11. | ತತ್ತ್ವೋಪದೇಶ | 93 |
| 12. | ನಾರಾಯಣಸೂಕ್ತ (ಸಹಸ್ರಶೀರ್ಷಂ ದೇವಂ...) | 108 |
| 13. | ಆದಿತ್ಯಮಂಡಲದಲ್ಲಿ ಬ್ರಹ್ಮೋಪಾಸನೆ | 111 |
| 14. | ಶಿವೋಪಾಸನಮಂತ್ರಗಳು | 115 |
| 15. | ಅಗ್ನಿಹೋತ್ರಹವಣೆಯ ಮಹಿಮೆ | 129 |
| 16. | ರಾಕ್ಷೋಘ್ನಮಂತ್ರಗಳು | 131 |
| 17. | ಪೃಥಿವೀದೇವತಾಪ್ರಾರ್ಥನೆ | 134 |
| 18. | ಜಲದೇವತಾಪ್ರಾರ್ಥನಾಮಂತ್ರ | 136 |
| 19. | ಸಂಧ್ಯಾವಂದನಮಂತ್ರಗಳು | 138 |
| 20. | ಆದಿತ್ಯಾದೇವತಾಚಿಂತನೆ | 149 |
| 21. | ತ್ರಿಸುಪರ್ಣಮಂತ್ರಗಳು | 150 |
| 22. | ಮೇಧಾಸೂಕ್ತ | 158 |
| 23. | ಮೃತ್ಯುನಿವಾರಣಮಂತ್ರಗಳು | 162 |

| | | |
|---|---|---|
| 24. | ಪ್ರಜಾಪತಿ ಪ್ರಾರ್ಥನಾಮಂತ್ರ | 168 |
| 25. | ಪಾಪನಿವಾರಕಮಂತ್ರಗಳು | 172 |
| 26. | ವಿರಜಾಹೋಮಮಂತ್ರಗಳು | 178 |
| 27. | ವೈಶ್ವದೇವಮಂತ್ರಗಳು | 188 |
| 28. | ಪಾಪನಿವಾರಕಜಪಮಂತ್ರ | 194 |
| 29. | ಪ್ರಾಣಾಹುತಿಮಂತ್ರಗಳು | 195 |
| 30. | ಇಂದ್ರ–ಸಪ್ತರ್ಷಿಸಂವಾದ | 201 |
| 31. | ಅಗ್ನಿಸ್ತುತಿಮಂತ್ರ | 203 |
| 32. | ಅಭೀಷ್ಟಯಾಚನಾಮಂತ್ರ | 204 |
| 33. | ಪರತತ್ತ್ವನಿರೂಪಣ | 205 |
| 34. | ಜ್ಞಾನಸಾಧನನಿರೂಪಣ | 211 |
| 35. | ಆತ್ಮಯಜ್ಞ | 230 |

|| ಓಂ ||

# ಮಹಾನಾರಾಯಣೋಪನಿಷತ್ತು

## (ಮೂಲ–ವಿವರಣೆಯೊಡನೆ)

**ನಾರಾಯಣಂ ಮಹಾಜ್ಞೇಯಂ ಸಚ್ಚಿದಾನಂದಮದ್ವಯಮ್ ।**
**ವಾಸುದೇವಂ ಜಗದ್ಯೋನಿಂ ನೌಮಿ ಸದ್ಗುರುರೂಪಿಣಮ್ ॥**

## ಪೀಠಿಕೆ

ಯಜುರ್ವೇದ ತೈತ್ತಿರೀಯಶಾಖೆಗೆ ಸೇರಿದ ಆರಣ್ಯಕಭಾಗದಲ್ಲಿರುವ ಮಹಾನಾರಾಯಣೋಪನಿಷತ್ತು ಅಧ್ಯಯನಪ್ರವಚನಗಳಿಗೆ ತಕ್ಕದ್ದಾಗಿದ್ದು ಅರ್ಥಾನು ಸಂಧಾನಕ್ಕೂ ಯೋಗ್ಯವಾಗಿದೆ. ಈ ಉಪನಿಷತ್ತಿನ ವಾಕ್ಯಗಳನ್ನು ಶ್ರೀಶಂಕರ ಭಗವತ್ಪಾದರು ತಮ್ಮ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಅಲ್ಲಲ್ಲಿ ಪ್ರಮಾಣವಚನಗಳಾಗಿ ಉದಾಹರಿಸಿರುತ್ತಾರೆ. ಇದಕ್ಕೆ ಸಾಯಣಾಚಾರ್ಯ ವಿರಚಿತ ಭಾಷ್ಯವಿದೆ. ವೈದಿಕರು ಈ ಉಪನಿಷತ್ತನ್ನು ದೇವಾಲಯಗಳಲ್ಲಿ ವಿಶೇಷೋತ್ಸವ, ರಥೋತ್ಸವಾದಿಸಂದರ್ಭಗಳಲ್ಲಿ ವೇದಪಾರಾಯಣಕ್ಕಾಗಿ ಬಳಸುತ್ತಾರೆ. ಇದರ ಕೆಲವು ಮಂತ್ರಗಳನ್ನು ಸಮಯಾನುಸಾರ ಸ್ವಸ್ತಿವಾಚನ, ಮಂತ್ರಪುಷ್ಪ , ಅಷ್ಟಾವಧಾನಸೇವೆಗಳಲ್ಲೂ ಭೋಜನ ಸಮಯ ದಲ್ಲಿಯೂ ಬಳಸುವುದುಂಟು. ಹೀಗೆ ಈ ವೇದಭಾಗವು ಉಳಿದ ವೇದಭಾಗಗಳಿಗಿಂತ ಹೆಚ್ಚಾಗಿ ಜನರ ಬಾಯಲ್ಲಿ ನಲಿದಾಡುತ್ತಿದೆ. ಆದರೆ ಈ ಉಪನಿಷತ್ತಿಗೆ ಕನ್ನಡ ವಿವರಣೆಯು ಎಲ್ಲಿಯೂ ಕಂಡುಬಂದಿಲ್ಲ. ಅಧ್ಯಯನಶೀಲರಿಗೂ ಉಳಿದ ಆಸ್ತಿಕ ಮಹಾಜನರಿಗೂ ಈ ವೇದಭಾಗದ ಅರ್ಥವೂ ತಿಳಿದಿದ್ದರೆ ಹೆಚ್ಚು ಪ್ರಯೋಜನಕರ ವಾದೀತೆಂದು ಭಾವಿಸಿ ನಾನು ಈ ವಿವರಣೆಯನ್ನು ಬರೆಯಲು ಪ್ರಾರಂಭಿಸಿದ್ದೇನೆ. ಈವರೆಗೆ ಕೆಲವು ವೇದ ಮಂತ್ರಗಳಿಗೂ ಸೂಕ್ತಗಳಿಗೂ ವಿವರಣೆಯನ್ನು ಬರೆದಿರುವ ರೀತಿಯಲ್ಲೇ ಸರಳವಾಗಿಯೂ ಸರ್ವಸಮ್ಮತವಾಗಿಯೂ ಅಧ್ಯಾತ್ಮವಿಚಾರಪ್ರಧಾನ ವಾಗಿಯೂ ಇರುವಂತೆ ವಿವರಣೆಯನ್ನು ರೂಪಿಸಿದ್ದೇನೆ. ವೇದಾಧ್ಯಯನಕ್ಕೆ ಅವಕಾಶವಿಲ್ಲದವರು ಕೂಡ ಈ ಮಂತ್ರಗಳ ಅರ್ಥಾನುಸಂಧಾನದಿಂದ ತಮ್ಮ ಬ್ರಹ್ಮವಿದ್ಯೆಯ ಮಟ್ಟವನ್ನು ಹೆಚ್ಚಿಸಿಕೊಳ್ಳಬಹುದು. ಹಾಗೂ ಸಾಧನಮಾರ್ಗದಲ್ಲಿ ಸೂಕ್ತಮಾರ್ಗದರ್ಶನವನ್ನು ಹೊಂದಬಹುದು. ಹೀಗೆ ಅಧ್ಯಾತ್ಮವಿದ್ಯಾಪ್ರೇಮಿ ಗಳೆಲ್ಲರಿಗೂ ಈ ವಿವರಣವು ಉಪಯುಕ್ತವಾದೀತೆಂದು ಭಾವಿಸಿದ್ದೇನೆ.

ಈ ಉಪನಿಷತ್ತಿನಲ್ಲಿರುವ ಮಂತ್ರಗಳು ಅರ್ಥದೃಷ್ಟಿಯಿಂದ ವಿಷಯ ಪ್ರಧಾನವಾಗಿ ಒಂದು ಕ್ರಮದಲ್ಲಿ ಜೋಡಿಸಲ್ಪಟ್ಟಿಲ್ಲ. ಆದ್ದರಿಂದ ಪ್ರತಿಯೊಂದು ಅನುವಾಕವೂ ಸ್ವತಂತ್ರವೇ ಎಂದು ಹೇಳಬಹುದು. ಆದರೆ ಅಧ್ಯಯನಪರಂಪರೆಯು ಪ್ರಾಚೀನವಾಗಿ ಯಾವ ರೀತಿಯಲ್ಲಿ ಅನುಕ್ರಮವಾಗಿ ಬಂದಿದೆಯೋ ಅದೇ ರೀತಿಯಲ್ಲೇ ಭಾಷ್ಯಕಾರರೂ ವ್ಯಾಖ್ಯಾನಮಾಡಿರುವದರಿಂದ ನಾನೂ ಆ ಕ್ರಮವನ್ನೇ ಅನುಸರಿಸಿರುತ್ತೇನೆ. ಇದರಲ್ಲಿರುವ ಪಾಠಪ್ರಭೇದಗಳಂತೆ ಆಂಧ್ರಪಾಠವು ಎಂಭತ್ತು ಅನುವಾಕಗಳಿಂದ ಕೂಡಿದೆ. ದ್ರಾವಿಡಪಾಠದಲ್ಲಿ ಅರವತ್ತುನಾಲ್ಕು ಅನುವಾಕಗಳಿವೆ. ಭಾಷ್ಯಕಾರರು ದ್ರಾವಿಡಪಾಠವನ್ನೇ ಅನುಸರಿಸಿದ್ದಾರೆ. ಆದರೆ ಆಂಧ್ರಪಾಠದಂತೆಯೂ ಭಾಷ್ಯವೊಂದು ದೊರೆತಿರುತ್ತದೆ. ಅದನ್ನೂ ಆನಂದಾಶ್ರಮ, ಪೂನಾದವರು ಪ್ರಕಾಶಗೊಳಿಸಿದ್ದಾರೆ. ಅದು ಯಾರ ಕೃತಿಯೆಂಬುದು ಮಾತ್ರ ತಿಳಿದಿಲ್ಲ. ಇರಲಿ. ಮಂತ್ರಾರ್ಥಗಳನ್ನು ತಿಳಿಯಲು ಹೀಗೆ ಅವಕಾಶವು ದೊರತಿರುವದರಿಂದ ನಾನು ವಿವರಣೆಗೆ ಆಂಧ್ರಪಾಠವನ್ನೇ ಆರಿಸಿಕೊಂಡಿದ್ದೇನೆ.

ಅಧ್ಯಾತ್ಮವಿದ್ಯೆಯನ್ನು ಸರಹಸ್ಯವಾಗಿ ವಿವರಿಸುವ ಉಪನಿಷತ್ತುಗಳು ಕರ್ಮ, ಉಪಾಸನೆ, ಜ್ಞಾನ–ಎಂಬ ಸಾಧನತ್ರಯಗಳನ್ನೂ ಮೋಕ್ಷವೆಂಬ ಫಲವನ್ನೂ ಕುರಿತು ವಿಚಾರಮಾಡಿರುತ್ತವೆ. ಕೆಲವು ಉಪನಿಷತ್ತುಗಳು ಕೇವಲ ಜ್ಞಾನಪ್ರಧಾನವಾಗಿರುವವು. ಇನ್ನು ಕೆಲವು ಉಪಾಸನೆ, ಜ್ಞಾನ–ಎರಡನ್ನೂ ಒಳಗೊಂಡಿರುವವು. ಈ ಉಪನಿಷತ್ತಾದರೊ, ಸಾಧನತ್ರಯಗಳನ್ನೂ ಮುಕ್ತಿಯೆಂಬ ಫಲವನ್ನೂ ಪೂರ್ಣವಾಗಿ ಒಳಗೊಂಡಿದೆ. ಅದರಲ್ಲಿಯೂ ಕ್ರಮಮುಕ್ತಿ, ದೇವಯಾನ, ಪಿತೃಯಾಣಮಾರ್ಗಗಳ ವಿಚಾರ, ಸದ್ಯೋಮುಕ್ತಿ–ಇತ್ಯಾದಿ ವಿಷಯಗಳೆಲ್ಲವೂ ಸಂದರ್ಭಾನುಸಾರವಾಗಿ ಇದರಲ್ಲಿ ಅಡಕವಾಗಿದೆ. ಆದ್ದರಿಂದ ಇಲ್ಲಿರುವ ಎಲ್ಲಾ ವಿಚಾರಗಳನ್ನೂ ಶಾಸ್ತ್ರೀಯವಾಗಿಯೂ ಕ್ರಮಬದ್ಧವಾಗಿಯೂ ಪರಸ್ಪರ ಸಂಬಂಧವುಳ್ಳದ್ದಾಗಿಯೂ ಇರುವಂತೆ ತಿಳಿಸಬೇಕಾದರೆ ಶ್ರೀಶಂಕರಭಗವತ್ಪಾದರ ಪ್ರಸ್ಥಾನತ್ರಯ ಭಾಷ್ಯಗಳಲ್ಲಿರುವ ವಿಚಾರಸರಣಿಯನ್ನೇ ಅವಲಂಬಿಸಬೇಕಾಗುವದು. ಇಲ್ಲವಾದರೆ ಸಮನ್ವಯವು ಸಿಗುವದಿಲ್ಲ . ಕೇವಲ ಕರ್ಮಕಾಂಡಪರವಾಗಿಯೊ, ಕರ್ಮೋಪಾಸನಾಸಮುಚ್ಚಯಪರವಾಗಿಯೊ ಅರ್ಥ ಮಾಡಿದರೆ ಇದರ ಏಕದೇಶವನ್ನು ಮಾತ್ರ ಗ್ರಹಿಸಿದಂತಾಗುವದು. ವೇದಾರ್ಥವನ್ನು ಯಾಜ್ಞಿಕ, ದೈವಿಕ, ಆಧ್ಯಾತ್ಮಿಕ–ಎಲ್ಲಾ ದೃಷ್ಟಿಕೋನಗಳಿಂದ ವಿವರಿಸಿ ಪರಸ್ಪರಸಂಬಂಧವನ್ನೂ ಒಂದಕ್ಕಿಂತ ಮತ್ತೊಂದರ ಹೆಚ್ಚುಗಾರಿಕೆಯನ್ನೂ ಪರಮತಾತ್ಪರ್ಯವನ್ನೂ ನಿಷ್ಕೃಷ್ಟವಾಗಿ ತಿಳಿಯಬೇಕೆನ್ನುವವರು ಶಾಂಕರಭಾಷ್ಯವಿಚಾರಸಂಸರಣಿಯನ್ನೇ ಅನುಸರಿಸಬೇಕು.

# ಬ್ರಹ್ಮಪ್ರತಿಪಾದಕಮಂತ್ರಗಳು

**ಓಂ ॥ ಸಹ ನಾವವತು । ಸಹ ನೌ ಭುನಕ್ತು । ಸಹ ವೀರ್ಯಂ ಕರವಾವ ಹೈ।**
**ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ । ಓಂ ಶಾಂತಿಃ ಶಾಂತಿಃ ಶಾಂತಿಃ ।**

ತೈತ್ತಿರೀಯೋಪನಿಷತ್ತಿನ ನಾಲ್ಕನೆಯ ಪ್ರಶ್ನವು ಇದೆಂದು ಅಧ್ಯಯನ ನಿಷ್ಣಾತರು ಗೊತ್ತುಪಡಿಸಿರುತ್ತಾರೆ. ಆದ್ದರಿಂದ ಇದರ ಹಿಂದಿನ ಪ್ರಶ್ನಗಳಾದ ಆನಂದವಲ್ಲಿ , ಭೃಗುವಲ್ಲಿಗಳಂತೆಯೇ ಇದಕ್ಕೂ 'ಸಹ ನಾವವತು' ಎಂಬಿದೇ ಶಾಂತಿಪಾಠವಾಗಿದೆ. ''ಬ್ರಹ್ಮವು ನಮ್ಮಿಬ್ಬರನ್ನೂ (ಆಚಾರ್ಯ–ಶಿಷ್ಯ) ಕಾಪಾಡಲಿ. ನಾವು ಜೊತೆಯಲ್ಲಿಯೇ ಬ್ರಹ್ಮವಿದ್ಯಾಫಲವನ್ನು ಅನುಭವಿಸುವಂತಾಗಲಿ! ಮುಂದೆಯೂ ವಿದ್ಯೆಯ ಸಾಮರ್ಥ್ಯವನ್ನು ಒಟ್ಟಾಗಿಯೇ ಹೊಂದುವಂತಾಗಲಿ ! ನಾವಿಬ್ಬರೂ ಅಧ್ಯಯನಮಾಡಿದ್ದು ತೇಜಸ್ವಿಯಾಗಲಿ! ಆಧ ತ್ಮಿಕಾದಿ ತಾಪತ್ರಯಗಳು ಶಾಂತವಾಗಲಿ''–ಎಂದು ಪ್ರಾರಂಭದಲ್ಲಿ ಪ್ರಾರ್ಥಿಸಲಾಗಿ ೆ. ಅನಂತರ ಉಪನಿಷತ್ತು ಆರಂಭವಾಗಿದೆ. ಮೊದಲಿಗೆ ಪರಬ್ರಹ್ಮಪ್ರತಿಪಾ ಕ ವಾದ ಮಂತ್ರಗಳು ಇವೆ. ಮೊದಲನೆಯ ಅನುವಾಕದ ಮೊದಲನೆಯ ಮಂತ್ರ ವಿದು:

**ಓಂ ॥ ಅಂಭಸ್ಯ ಪಾರೇ ಭುವನಸ್ಯ ಮಧ್ಯೇ ನಾಕಸ್ಯ ಪೃಷ್ಠೇ**
**ಮಹತೋ ಮಹೀಯಾನ್ । ಶುಕ್ರೇಣ ಜ್ಯೋತೀಗ್ಂಷಿ**
**ಸಮನುಪ್ರವಿಷ್ಟಃ ಪ್ರಜಾಪತಿಶ್ಚರತಿ ಗರ್ಭೇ ಅಂತಃ ॥1॥**

ಬ್ರಹ್ಮವನ್ನು 'ಮಹತೋ ಮಹೀಯಾನ್' ಎಂದು ಇಲ್ಲಿ ವರ್ಣಿಸಿದೆ. ಕಠೋಪನಿಷತ್ತಿನಲ್ಲಿಯು (2–20ರಲ್ಲಿ) ಹೀಗೆಯೇ ಹೊಗಳಿದೆ. ವಿಶೇಷವೇನೆಂದರೆ ಯಾವಯಾವದಕ್ಕಿಂತ ದೊಡ್ಡದು ಎಂಬುದನ್ನು ಇಲ್ಲಿ ಎತ್ತಿ ಹೇಳಿದೆ. 'ಅಂಭಸ್ಯ' ಎಂದರೆ ಬಹಳವಾದ ನೀರಿನಿಂದ ತುಂಬಿ ಆಗಾಧವಾಗಿರುವ ಸಮುದ್ರವು ಏನಿದೆಯೋ ಅದರ ದಡದಲ್ಲಿರುವ ಮಹತ್ತರವಾದ ಲೋಕಾಲೋಕ ಪರ್ವತಗಳೇ ಮುಂತಾದ ದೊಡ್ಡ ಬೆಟ್ಟಗಳಿವೆಯೋ ಅವುಗಳಿಗಿಂತ ದೊಡ್ಡದಾಗಿರುವದು ಬ್ರಹ್ಮವು–ಎಂದು ಅರ್ಥ. ಹಾಗೆಯೇ ಭುವನಗಳೆಂದರೆ ಪೃಥಿವಿಯೇ ಮುಂತಾದ ಲೋಕಗಳು. ಈ ಮಹಾಲೋಕಗಳ ನಡುವೆ ಇರುವ ಮೇರು, ಸುಮೇರು ಮುಂತಾದ ಪರ್ವತಗಳಿಗಿಂತ ದೊಡ್ಡದು ಬ್ರಹ್ಮವು–ಎಂದು ಅಭಿಪ್ರಾಯ. ಇನ್ನೂ ಮುಂದುವರೆದು ನಾಕವೆಂದರೆ ಸ್ವರ್ಗದ ಪೃಷ್ಠೇ–ಮೇಲ್ಭಾಗದಲ್ಲಿಯೂ ಇರುವ ಬ್ರಹ್ಮಲೋಕಾದಿಗಳಿವೆಯಲ್ಲವೆ, ಅವುಗಳಿಗಿಂತಲೂ ಮಹತ್ತರನಾದವನು ಪರಮಾತ್ಮನು–ಎಂದು ಹೊಗಳಲಾಗಿದೆ.

ಛಾಂದೋಗ್ಯೋಪನಿಷತ್ತಿನ ಒಂದು ಮಂತ್ರ (3–14–3) ದಲ್ಲಿ 'ಈ ಆತ್ಮನು ಪೃಥಿವಿಗಿಂತಲೂ, ಅಂತರಿಕ್ಷಕ್ಕಿಂತಲೂ, ದ್ಯುಲೋಕಕ್ಕಿಂತಲೂ ಈ ಎಲ್ಲಾ ಲೋಕಗಳಿಗಿಂತಲೂ ದೊಡ್ಡವನು–ಎಂದೇ ಚಿಂತಿಸಬೇಕೆಂದು ತಿಳಿಸಿದೆ. ಅದೇ ಅಭಿಪ್ರಾಯವು ಇಲ್ಲಿಯೂ ಇದೆ.

ಈಗ ಮಂತ್ರದ ಉತ್ತರಾರ್ಧವನ್ನು ವಿಚಾರಮಾಡೋಣ. ಆ ಪರಮಾತ್ಮನು ಶುಕ್ರೇಣ– ಎಂದರೆ ಎಲ್ಲವನ್ನೂ ಬೆಳಗುವ ಜೀವಚೈತನ್ಯರೂಪದಿಂದ ಜ್ಯೋತೀಂಷಿ– ಎಂದರೆ ನಿರ್ಮಲವಾದ ಅಂತಃಕರಣಗಳನ್ನು ಪ್ರವೇಶಮಾಡಿದವನಾಗಿ ಗರ್ಭೆ–ಎಂದರೆ ಬ್ರಹ್ಮಾಂಡದ ಒಳಗೆಲ್ಲ ವ್ಯಾಪಿಸಿಕೊಂಡು ಪ್ರಜಾಪತಿಯಾಗಿ ವಿರಾಡ್ರೂಪದಿಂದ ಚರತಿ–ಇದ್ದುಕೊಂಡಿರುತ್ತಾನೆ–ಎಂದು ತಿಳಿಸಿದೆ. ಪರಮಾತ್ಮನು ಜೀವರೂಪದಿಂದ ಪ್ರವೇಶಿಸುವದೆಂದರೆ ಹೃದಯದಲ್ಲಿ ಕಂಡುಬರುವದೇ ಆಗಿದೆ. ಏಕೆಂದರೆ ಮುಖ್ಯಾರ್ಥವು ಹೊಂದುವದಿಲ್ಲ. ಪರಿಚ್ಛಿನ್ನಪದಾರ್ಥವಾದರೆ, ದೇಶಕಾಲಗಳಲ್ಲಿದ್ದರೆ– ಹೇಗೆ ಇಲಿಯು ಬಿಲವನ್ನು ಹೊಕ್ಕಿತು ಎನ್ನುವೆವೋ ಹಾಗೆ ಪರಮಾತ್ಮನೂ ಜಗತ್ತನ್ನು ಹೊಕ್ಕನು–ಎನ್ನಬಹುದು. ಇಲ್ಲಿ ಹಾಗೆ ಹೇಳಲು ಬರುವದಿಲ್ಲ. ಪ್ರವೇಶಮಾಡುವದಕ್ಕೆ ಮೊದಲೇ ಎಲ್ಲೆಲ್ಲಿಯೂ ಪರಮಾತ್ಮನೇ ವ್ಯಾಪಿಸಿಕೊಂಡಿರುತ್ತಾನೆ. ಅವನಿಲ್ಲದ ಜಾಗವೇ ಇಲ್ಲ. ಆದ್ದರಿಂದ ಅಂತಃಕರಣದಲ್ಲಿ ಆತನ ಚೈತನ್ಯವು ಪ್ರತಿಬಿಂಬಿಸಿರುವದೇ ಪ್ರವೇಶವು–ಎಂದರೆ ಉಪಚಾರಕ್ಕಾಗಿ ಹಾಗೆ ಹೇಳಿದೆ. ಆದರೆ ಈ ಪ್ರವೇಶವು ಸಾಮಾನ್ಯರ ದೃಷ್ಟಿಯಿಂದ ಅತ್ಯಾಶ್ಚರ್ಯಕರವಾಗಿದೆ. ದೇವಾಸುರನರತಿರ್ಯಗಾದಿ ಅನೇಕ ವಿಧವಾದ ಶರೀರಗಳನ್ನು ಜೀವಾತ್ಮರೂಪದಿಂದ ಹೊಕ್ಕು ಬೆಳಗುತ್ತಿರುವ ಈತನನ್ನು ವಿರಾಟ್–ಎಂದೂ ಪ್ರಜಾಪತಿಯೆಂದು ಸ್ತೋತ್ರಮಾಡಿದೆ. **ವಿವಿಧಂ ರಾಜತೇ ಇತಿ ವಿರಾಟ್**–ಎಂಬಂತೆ ನಾನಾವಿಧವಾಗಿ ನಾನಾನಾಮರೂಪಗಳಿಂದ ಭಗವಂತನೊಬ್ಬನೇ ಎಲ್ಲೆಲ್ಲೂ ಕಂಡುಬರುತ್ತಿರುವನು. ಈ ವಿರಾಡ್ರೂಪವು ಗೀತೆಯಲ್ಲಿ ಚೆನ್ನಾಗಿ ವರ್ಣಿಸಲ್ಪಟ್ಟಿದೆ. ಈ ವಿರಾಡಾತ್ಮನನ್ನೇ ಪ್ರಜಾಪತಿಯೆಂದೂ ಕರೆಯುವರು. ಆತನು ಪ್ರಜೆಗಳೆಲ್ಲರಿಗೂ ಒಡೆಯನು. ಇಂಥ ವಿರಾಡ್ರೂಪನಾದ ಭಗವಂತನಿಗೆ ಅಗ್ನಿಯೇ ತಲೆಯು ; ಸೂರ್ಯಚಂದ್ರರು ಕಣ್ಣುಗಳು ; ದಿಕ್ಕುಗಳೇ ಕಿವಿಗಳು ; ವೇದಗಳೇ ಬಾಯಿಯು; ವಾಯುವೇ ಪ್ರಾಣನು ; ವಿಶ್ವವೇ ಹೃದಯವು ; ಭೂಮಿಯೇ ಕಾಲುಗಳು. ಸರ್ವಭೂತಗಳ ಅಂತರಾತ್ಮನಾದ ಈ ಪ್ರಜಾಪತಿಯು ತಾನೇ ಎಲ್ಲವೂ ಆಗಿಬಿಟ್ಟಿರುವನು–ಎಂದು ಮುಂಡಕೋಪನಿಷತ್ತಿನಲ್ಲಿಯೂ ತಿಳಿಸಿದೆ. ಉಪಾಧಿವಿಶಿಷ್ಟವಾಗಿ ವರ್ಣಿಸಿದ್ದರೂ ಉಪಹಿತಚೈತನ್ಯವನ್ನೇ ವಿವಕ್ಷೆಮಾಡಿದಾಗ ನಿರ್ವಿಶೇಷ ಪರಬ್ರಹ್ಮದಲ್ಲಿಯೂ ಈ ಮಂತ್ರವು ಸಮನ್ವಯವಾಗುತ್ತದೆ. ಸಾಮಾನ್ಯರಿಗೆಲ್ಲ ಉಪಾಧಿ ವಿಶಿಷ್ಟರೂಪವೇ ಧ್ಯೇಯವಾಗಿರುತ್ತದೆ.

**ಯಸ್ಮಿನ್ನಿದಗ್ಂ ಸಂ ಚ ವಿಚೈತಿ ಸರ್ವಂ ಯಸ್ಮಿನ್ ದೇವಾ ಅಧಿ ವಿಶ್ವೇ ನಿಷೇದುಃ । ತದೇವ ಭೂತಂ ತದು ಭವ್ಯಮಾ ಇದಂ ತದಕ್ಷರೇ ಪರಮೇ ವ್ಯೋಮನ್ ॥2॥**

ಈ ಮಂತ್ರದಲ್ಲಿ ಜಗತ್ಕಾರಣವಾದ ಅವ್ಯಾಕೃತತತ್ತ್ವವನ್ನು ಪ್ರಸ್ತಾಪಿಸಿ ಆ ಅವ್ಯಾಕೃತವೂ ಯಾವ ಬ್ರಹ್ಮದಲ್ಲಿದ್ದುಕೊಂಡಿದೆಯೋ ಅದೇ ಪರಮತತ್ತ್ವವು ಎಂದು ತಿಳಿಸಿದೆ. ಇದಂ-ಎಂದರೆ ನಾಮರೂಪಗಳಿಂದ ಬಿಡಿಬಿಡಿಯಾಗಿ ತೋರುತ್ತಿರುವ ವ್ಯಾಕೃತಪ್ರಪಂಚವು. ಇದು ಇಂದ್ರಿಯಗೋಚರವಾಗಿರುತ್ತದೆ. ಇದಕ್ಕೆ ಕಾರಣವಾಗಿರುವ ಅವ್ಯಾಕೃತವು ವ್ಯವಹಾರಗೋಚರವಲ್ಲ . ಆದರೆ ಅನುಮೇಯವಾಗಿರುತ್ತದೆ. ಹೇಗೆ ಒಂದು ಮರವನ್ನು ನೋಡಿದಾಗ ಅದು ಒಂದು ಬೀಜದಿಂದ ಹುಟ್ಟಿದೆ-ಎಂಬಿದು ನಿಜ. ಆದರೆ ಮರವನ್ನು ನೋಡುತ್ತಿರುವಾಗ ಬೀಜವು ಕಾಣಿಸುವದಿಲ್ಲ. ಆದರೂ ಮರಕ್ಕಿಂತ ಮುಂಚೆಯೇ ಅದು ಇದ್ದುಕೊಂಡಿರಬೇಕು-ಎಂದು ಊಹಿಸಬಹುದಾಗಿದೆ. ಹಾಗೆಯೇ ಈ ಜಗತ್ತೆಲ್ಲವೂ ಸೃಷ್ಟಿಗೆ ಮುಂಚೆ ಬೀಜರೂಪದಿಂದ ಇದ್ದುಕೊಂಡಿರಲೇಬೇಕಲ್ಲವೆ? ಅದನ್ನು ಅವ್ಯಾಕೃತವೆನ್ನುವರು. ಅದನ್ನು ಕುರಿತು ಇಲ್ಲಿ ಪ್ರಸ್ತಾಪಮಾಡಿದೆ. ಯಾವ ಅವ್ಯಾಕೃತಬೀಜದಲ್ಲಿ ಈ ಬ್ರಹ್ಮಾಂಡವು ಅಡಗಿದ್ದು ಸೃಷ್ಟಿಕಾಲಕ್ಕೆ ಹೊರತೋರಿ ಕೊಂಡಿತೋ ಈಗಲೂ ಸದನುಗತವಾಗಿ ಇದ್ದುಕೊಂಡಿದೆಯೋ ಮತ್ತೆ ಪ್ರಲಯದಲ್ಲಿ ಅದರಲ್ಲಿಯೇ ಒಂದಾಗುವದೋ ಆ ಅವ್ಯಾಕೃತವು ಜಗತ್ಕಾರಣವಾಗಿದೆ-ಎಂದರ್ಥ. ಮತ್ತು ಅದನ್ನಾಶ್ರಯಿಸಿಯೇ ಎಲ್ಲಾ ದೇವತೆಗಳೂ ಇದ್ದುಕೊಂಡಿರುವರು. ಹಿಂದಿನ ಕಾಲ, ಈಗಿನ ಕಾಲ, ಭವಿಷ್ಯತ್ಕಾಲಗಳೂ ಕಾಲಾಂತರ್ಗತವಸ್ತುಗಳೂ ಆ ಅವ್ಯಾಕೃತಕ್ಕಿಂತ ಬೇರೆಯಾಗಿಲ್ಲವಾದ್ದರಿಂದ ಅದೇ ಎಲ್ಲವೂ ಆಗಿದೆ. ಬೃಹದಾರಣ್ಯಕೋಪನಿಷತ್ತಿನಲ್ಲಿ ಇದನ್ನು '**ಆಕಾಶ**' ವೆಂದು ಕರೆದಿದ್ದಾರೆ. ಈ ಆಕಾಶವು ಅಕ್ಷರ (ವೆಂಬ ಪರಬ್ರಹ್ಮ) ದಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿದೆ-ಎಂದೂ ಅಲ್ಲಿ ತಿಳಿಸಿದೆ. ಇಲ್ಲಿಯೂ ಹಾಗೆಯೇ ವರ್ಣನೆಮಾಡಿದೆ. ಈವರೆಗೆ ವರ್ಣಿಸಲ್ಪಟ್ಟ ಅವ್ಯಾಕೃತವು ಅಕ್ಷರವೆಂಬ ಪರಮವ್ಯೋಮವನ್ನು ಆಶ್ರಯಿಸಿರುತ್ತದೆ. ಆದ್ದರಿಂದ ಆ ವ್ಯೋಮವು ಎಂಥ ಸೂಕ್ಷ್ಮವಾಗಿದ್ದಿರಬಹುದು? ಎಂದಭಿಪ್ರಾಯ. ಋಗ್ವೇದದ '**ಋಚೋ ಅಕ್ಷರೇ ಪರಮೇ**' (2-3-23) ಎಂಬ ಮಂತ್ರಾಭಿಪ್ರಾಯವನ್ನೂ ಇಲ್ಲಿ ಅನುಸಂಧಾನ ಮಾಡಿಕೊಳ್ಳಬಹುದು. ಪರಬ್ರಹ್ಮವನ್ನರಿಯುವದು ಸಾಮಾನ್ಯವಲ್ಲ. ವ್ಯಾಕೃತಾವ್ಯಾಕೃತಗಳ ಎಲ್ಲೆಕಟ್ಟನ್ನೂ ಮೀರಿ ಅವುಗಳಿಗೂ ವಿಲಕ್ಷಣವಾಗಿರುವ ಬ್ರಹ್ಮವು ದೇಶಕಾಲಾದಿಸವ್ಯಪೇಕ್ಷವಾದ ವ್ಯಾಕೃತಪ್ರಪಂಚಕ್ಕೂ , ನಿರಪೇಕ್ಷವಾದ ಅವ್ಯಾಕೃತಪ್ರಪಂಚಕ್ಕೂ ಮಿಗಿಲಾದದ್ದಾಗಿರುವದು-ಎಂದಭಿಪ್ರಾಯ.

**ಯೇನಾವೃತಂ ಖಂ ಚ ದಿವಂ ಮಹೀಂ ಚ ಯೇನಾದಿತ್ಯಸ್ತಪತಿ ತೇಜಸಾ ಭ್ರಾಜಸಾ ಚ । ಯಮಂತಃಸಮುದ್ರೇ ಕವಯೋ ವಯಂತಿ ಯದಕ್ಷರೇ ಪರಮೇ ಪ್ರಜಾಃ ॥3॥**

ಈ ಮಂತ್ರದಲ್ಲಿ ಅವ್ಯಾಕೃತೋಪಹಿತವಾದ ಬ್ರಹ್ಮವನ್ನು ತಿಳಿಸಿದೆ. ಬ್ರಹ್ಮವು ಯಾವಾಗಲೂ ಚೈತನ್ಯರೂಪವು ಯಾವಾಗಲೂ ಇದ್ದುಕೊಂಡಿರುವದು. ಹಾಗೂ ಎಲ್ಲೆಕಟ್ಟುಗಳಿಲ್ಲದ್ದಾಗಿರುವದು. ಈ ಮೂರು ವಿಶೇಷಣಗಳನ್ನೂ ಸೇರಿಸಿ ಸಚ್ಚಿದನಂತ ರೂಪವಾದ ಬ್ರಹ್ಮವು ಪರಮಾರ್ಥವು–ಎಂದು ವೇದಾಂತಗಳಲ್ಲಿ ತಿಳಿಸಿರುತ್ತದೆ. ತನ್ನ ಸಚ್ಚಿದ್ರೂಪದಿಂದಲೇ ಅಂತರಿಕ್ಷವನ್ನೂ , ಸ್ವರ್ಗಲೋಕವನ್ನೂ , ಭೂಲೋಕವನ್ನೂ ಬ್ರಹ್ಮವು ವ್ಯಾಪಿಸಿಕೊಂಡಿದೆ. ಕೇವಲ ಲೋಕಗಳನ್ನಷ್ಟೇ ಅಲ್ಲ, ಆಯಾ ಲೋಕಗಳಲ್ಲಿರುವ ಶರೀರಗಳನ್ನೆಲ್ಲ ಹೊಕ್ಕು ಎಲ್ಲವನ್ನೂ ವ್ಯಾಪಿಸಿಕೊಂಡಿದೆ. ಆದ್ದರಿಂದಲೇ ಯಾವ ವಸ್ತುವೇ ಆದರೂ ಇದೆ, ಬೆಳಗುತ್ತಿದೆ, ಪ್ರಿಯವಾಗಿದೆ–ಎಂದೇ ಬ್ರಹ್ಮಗುಣಗಳಿಂದ ಅನ್ವಿತವಾಗಿ ತೋರುತ್ತಿರುವದು. ಹಾಗೆಯೇ ಆಧಿದೈವಿಕಪ್ರಪಂಚಕ್ಕೆ ಸೇರಿದ ಶ್ರೇಷ್ಠಜ್ಯೋತಿಯಾದ ಸೂರ್ಯನು ಈ ಬ್ರಹ್ಮದ ಬೆಳಕಿನಿಂದಲೇ ಬೆಳಗುತ್ತಿರುವನು. ಮತ್ತು ತನ್ನ ರಶ್ಮಿಗಳನ್ನೆಲ್ಲ ಸುತ್ತಲೂ ಹರಡಿ ಪ್ರಕಾಶಗೊಳಿಸುತ್ತಿರುವನು. ಇನ್ನು ಕವಿಗಳು ಎಂದರೆ ಜ್ಞಾನಿಗಳು ಸಮುದ್ರದಂತೆ ವಿಶಾಲವಾಗಿರುವ ಇಡಿಯ ಬ್ರಹ್ಮಾಂಡದಲ್ಲೆಲ್ಲ ಆ ಚೈತನ್ಯವು–ಪಂಚೆಯನ್ನೆಲ್ಲ ನೂಲುಗಳು ಹಾಸುಹೊಕ್ಕಿರುವಂತೆ–ವ್ಯಾಪಿಸಿರುವದನ್ನು ಕಂಡುಕೊಂಡಿರುವರು. ಮತ್ತು ಆ ಬ್ರಹ್ಮವು ಪರಮವಾದ ತನ್ನ ಅಕ್ಷರಸ್ವರೂಪದಲ್ಲಿದ್ದು ಕೊಂಡೇ ಏನೂ ಪರಿಣಾಮವಾಗದೆ, ಪ್ರಜೆಗಳನ್ನೆಲ್ಲ ಉಂಟುಮಾಡುತ್ತಿರುವದು. ಇದು ಆ ಬ್ರಹ್ಮದ ವಿಚಿತ್ರಶಕ್ತಿಯೋಗವೇ ಸರಿ. ತಾನು ಎಲ್ಲಕ್ಕೂ ಆಧಾರವಾಗಿದ್ದರೂ ಅದು ತನಗೆ ಯಾವ ಆಧಾರವೂ ಇಲ್ಲದ್ದಾಗಿರುವದು. ಅಥವಾ ಸ್ವಮಹಿಮೆಯಲ್ಲಿಯೇ ನೆಲೆಗೊಂಡಿರುವದು. ಆಧಾರಾಧೇಯಭಾವವೆಂಬ ವಿಶೇಷವು ಕೂಡ ಬ್ರಹ್ಮದಲ್ಲಿರುವದಿಲ್ಲ–ಎಂದಭಿಪ್ರಾಯ.

**ಯತಃ ಪ್ರಸೂತಾ ಜಗತಃ ಪ್ರಸೂತೀ ತೋಯೇನ ಜೀವಾನ್ ವ್ಯಚಸರ್ಜ ಭೂಮ್ಯಾಮ್ । ಯದೋಷಧೀಭಿಃ ಪುರುಷಾನ್ ಪಶೂಗ್ಂಶ್ಚ ವಿವೇಶ ಭೂತಾನಿ ಚರಾಚರಾಣಿ ॥4॥**

ಈ ಮಂತ್ರದಲ್ಲಿ ಬ್ರಹ್ಮವೇ ಪ್ರಪಂಚಕ್ಕೆ ಉಪಾದಾನಕಾರಣವೆಂದು ತಿಳಿಸಿದೆ. ಕಾರ್ಯಕಾರಣಪ್ರಕ್ರಿಯೆಯಲ್ಲಿ ಕಾರಣವನ್ನು ವಿವರಿಸುವಾಗ ನಿಮಿತ್ತ– ಉಪಾದಾನ ಎಂದು

ವಿಂಗಡಿಸುವರು. ನಿಮಿತ್ತಕಾರಣವೆಂದರೆ ಅದಿಲ್ಲದೆ ಕಾರ್ಯವುಂಟಾಗುವದಿಲ್ಲವೆಂದರ್ಥ. ಹೇಗೆಂದರೆ ಮಣ್ಣಿದ್ದರೂ ಕುಂಬಾರನಿಲ್ಲದೆ ಮಡಕೆಯಾಗುವದಿಲ್ಲ–ಎಂದಂತೆ ತಿಳಿಯಬೇಕು. ಉಪಾದಾನವೆಂದರೆ ಅದೇ ಕಾರ್ಯವಾಗಿಬಿಡುವದು. ಹೇಗೆ ಮಣ್ಣೇ ಮಡಕೆಯಾಗುವದೋ ಹಾಗೆ–ಎಂದಭಿಪ್ರಾಯ. ಒಬ್ಬ ವ್ಯಕ್ತಿಯ ಹುಟ್ಟಿಗೆ ತಂದೆಯೂ ತಾಯಿಯೂ ಇಬ್ಬರೂ ಹೇಗೆ ಕಾರಣರೋ–ತಂದೆಯನ್ನು ನಿಮಿತ್ತಕಾರಣನೆಂದೂ ತಾಯಿಯನ್ನು ಉಪದಾನಕಾರಣವೆಂದೂ ಕರೆಯಬಹುದೋ ಹಾಗೆ ಪ್ರಪಂಚಕ್ಕೆಲ್ಲ ಬ್ರಹ್ಮವೇ ತಂದೆಯು. ಬ್ರಹ್ಮವೇ ತಾಯಿಯು. ಏಕೆಂದರೆ ಅದೊಂದೇ ಏಕವೂ ಅದ್ವಿತೀಯವೂ ಆಗಿದ್ದುಕೊಂಡಿರುವದು. **'ಆತ್ಮನಿಂದಲೇ ಆಕಾಶವುಂಟಾಯಿತು'** ಎಂದು ತೈತ್ತಿರೀಯಬ್ರಹ್ಮವಲ್ಲಿಯಲ್ಲಿ ಹೇಳಿದೆ. ಹೀಗೆ ಉಪಾದಾನಕಾರಣವೂ ಆದ ಬ್ರಹ್ಮದಿಂದ ಜಗತ್ತಿನ ಸೃಷ್ಟಿಯು ಹೊರಹೊಮ್ಮಿತು. ಆ ಕಾರಣವೆನಿಸಿದ ಬ್ರಹ್ಮವು ಮೊದಲು ಜಲವನ್ನುಂಟುಮಾಡಿ ಅನಂತರ ಪಂಚಭೂತಗಳನ್ನೂ ಸೃಷ್ಟಿಮಾಡಿ ಆ ಮಹಾಭೂತಗಳನ್ನೆಲ್ಲ ಒಳಹೊಕ್ಕು ಅವುಗಳ ಸಂಯೋಗದಿಂದ ಮನುಷ್ಯರು ಗೋವುಗಳೇ ಮುಂತಾದ ಎರಡು ಕಾಲಿನ ಹಾಗೂ ನಾಲ್ಕು ಕಾಲಿನ ಜೀವರುಗಳನ್ನೆಲ್ಲ ಸೃಷ್ಟಿಮಾಡಿರುತ್ತದೆ. ಮುಂದುವರೆದು ಗಿಡ, ಮರ, ಸಸ್ಯಗಳನ್ನೂ –ಪಶ್ವಾದಿಗಳನ್ನೂ –ಎಲ್ಲಾಸ್ಥಾವರಜಂಗಮಪ್ರಾಣಿಶರೀರಗಳನ್ನೂ ಜೀವಾತ್ಮರೂಪದಿಂದ ಒಳಹೊಕ್ಕಿರುತ್ತದೆ. ಚೈತನ್ಯದಿಂದ ಸಕಲ ಬ್ರಹ್ಮಾಂಡವೂ ವ್ಯಾಪ್ತವಾಗಿದೆ–ಎಂದು ಭಾವ. ಬ್ರಹ್ಮಕ್ಕಿಂತ ಬೇರೊಂದು ಯಾವದೂ ಇಲ್ಲವೆಂದು ತಿಳಿಯಬೇಕು. ಅದನ್ನೇ ಈಗ ಮತ್ತೆ ದೃಢಪಡಿಲಾಗುವದು.

**ಅತಃ ಪರಂ ನಾನ್ಯದಣೀಯಸಗ್ಂ ಹಿ ಪರಾತ್ಪರಂ ಯನ್ಮಹತೋ ಮಹಾಂತಮ್ । ಯದೇಕಮವ್ಯಕ್ತಮನಂತರೂಪಂ ವಿಶ್ವಂ ಪುರಾಣಂ ತಮಸಃ ಪರಸ್ತಾತ್** ॥5॥

ಹಿಂದಿನ ಮಂತ್ರದಲ್ಲಿ ಜಗತ್ಕಾರಣವಾಗಿ ಪರಾಮರ್ಶಿಸಿದ್ದ ತತ್ತ್ವವನ್ನು ಈಗ ಶುದ್ಧವಾಗಿ ವರ್ಣನೆ ಮಾಡಲಾಗುವದು. ಇದು ಪರಾತ್ಪರವು. ಪರನೆಂದರೆ ಹಿರಣ್ಯಗರ್ಭನು. ಅವನಿಗಿಂತಲೂ ಪರವು ಎಂದರೆ ಉತ್ಕೃಷ್ಟವೆಂದರ್ಥ. ಹಾಗೆಯೇ ಆಕಾಶವೇ ಮುಂತಾದ ಮಹತ್ಪದಾರ್ಥಗಳಿಗಿಂತಲೂ ಮಹತ್ತಾದುದು. ಇದಕ್ಕಿಂತ ಇನ್ನು ದೊಡ್ಡದೆಂಬುದಿಲ್ಲವೇ ಇಲ್ಲ. ಹಾಗೆಯೇ ಅಣುವಾದುದೂ ಇಲ್ಲ, ಸೂಕ್ಷ್ಮಕ್ಕಿಂತಲೂ ಇದು ಸೂಕ್ಷ್ಮತರವಾದುದಾಗಿದೆ. ಮತ್ತು ಇದೊಂದೇ ಇರುವದರಿಂದ ಏಕವು. ಇಂದ್ರಿಯ ಗೋಚರವಲ್ಲದ್ದರಿಂದ ಅವ್ಯಕ್ತವು. ದೇಶ, ಕಾಲ, ವಸ್ತು, ಪರಿಚ್ಛೇದಗಳಿಲ್ಲದ್ದಾದ್ದರಿಂದ

ಅನಂತವು. ಜಗದಾತ್ಮವಾದ್ದರಿಂದ ಔಪಾಧಿಕವಾಗಿ ವಿಶ್ವವೆನಿಸುವದು. ಅನಾದಿಸಿದ್ಧವಾಗಿರುವದರಿಂದಲೂ ಎಷ್ಟು ಕಾಲವಾದರೂ ಹಳತಾಗುವದಿಲ್ಲವಾದ್ದರಿಂದಲೂ ಪುರಾಣವೆನಿಸಿರುವದು. ಸ್ವಯಂಜ್ಯೋತಿಃ ಸ್ವಭಾವದ್ದಾದ್ದರಿಂದ ಕತ್ತಲೆಯಿಂದ ಆಚೆಗಿರುವದು. ಅಥವಾ ಬ್ರಹ್ಮದ ಸನ್ನಿಧಿಯು ತಿಳಿದುಬಂದಾಗ ಅಜ್ಞಾನವೆಂಬ ಕತ್ತಲೆಯಿರುವದೇ ಇಲ್ಲ–ಎಂದಭಿಪ್ರಾಯ.

**ತದೇವರ್ತಂ ತದು ಸತ್ಯಮಾಹುಸ್ತದೇವ ಬ್ರಹ್ಮ ಪರಮಂ**
**ಕವೀನಾಮ್ । ಇಷ್ಟಾಪೂರ್ತಂ ಬಹುಧಾ ಜಾತಂ ಜಾಯಮಾನಂ**
**ವಿಶ್ವಂ ಬಿಭರ್ತಿ ಭುವನಸ್ಯ ನಾಭಿಃ ।**
**ತದೇವಾಗ್ನಿಸ್ತದ್ವಾಯುಸ್ತತ್ಸೂರ್ಯಸ್ತದು ಚಂದ್ರಮಾಃ ।**
**ತದೇವ ಶುಕ್ರಮಮೃತಂ ತದ್ಬ್ರಹ್ಮ ತದಾಪಸ್ಸ ಪ್ರಜಾಪತಿಃ ॥6॥**

ಈ ಮಂತ್ರವೂ ಬ್ರಹ್ಮಸ್ವರೂಪಪ್ರತಿಪಾದಕವಾಗಿದೆ. ಮನಸ್ಸಿನಲ್ಲಿ ವಸ್ತುವಿಗೆ ಅನುಗುಣವಾಗಿ ಚಿಂತಿಸುವದನ್ನು ಋತವೆನ್ನುವರು. ಮಾತಿನಿಂದ ಅದನ್ನೇ ಹೇಳಿದರೆ ಸತ್ಯವೆನ್ನುವರು. ಬ್ರಹ್ಮವು ಈ ಎರಡೂ ತಾನೇ ಆಗಿರುವದು. ಹಾಗೆಯೇ ಅದು ಕವಿಗಳಿಗೆ ಎಂದರೆ ವೇದಶಾಸ್ತ್ರಪಾರಂಗತರಿಗೆ ಪ್ರಮಾಣಭೂತವಾದ ವೇದವೆನಿಸಿರುವದು. ಆದ್ದರಿಂದ ಅಗ್ನಿಹೋತ್ರದರ್ಶಪೂರ್ಣಮಾಸಾದಿ ಇಷ್ಟವೆಂಬ ಕರ್ಮಗಳೂ ಕೆರೆಬಾವಿಗಳ ನಿರ್ಮಾಣವೇ ಮುಂತಾದ ಪೂರ್ತವೆಂಬ ಕರ್ಮಗಳೂ ಬ್ರಹ್ಮವೇ ಎಂಬುದರಲ್ಲಿ ಸಂಶಯವಿಲ್ಲ . ಈ ಹಿಂದೆ ಹುಟ್ಟಿರುವ ಮತ್ತು ಇನ್ನು ಮುಂದೆ ಹುಟ್ಟಲಿರುವ ನಾನಾವಿಚಿತ್ರವಾದ ಪ್ರಪಂಚಕ್ಕೆಲ್ಲ ಈ ಬ್ರಹ್ಮವೇ ಕೇಂದ್ರವಾಗಿದ್ದುಕೊಂಡಿರುವದು. ಎಲ್ಲವನ್ನೂ ಧರಿಸಿರುವದು. ಅಗ್ನಿ, ವಾಯು, ಸೂರ್ಯ, ಚಂದ್ರನೇ–ಮುಂತಾದ ದೇವತೆಗಳೂ ಬ್ರಹ್ಮದ ವಿಭೂತಿಗಳೇ ಆಗಿರುವರು. ಆಕಾಶದಲ್ಲಿ ಹೊಳೆಯುತ್ತಿರುವ ಶುಕ್ರ (ಶುದ್ಧ)ವಾದ ನಕ್ಷತ್ರಾದಿಗಳು, ದೇವತೆಗಳಿಗೆ ಆಹಾರವೆನಿಸಿರುವ ಅಮೃತ, ದೇವತೆಗಳಲ್ಲಿ ಹಿರಿಯನಾದ ಹಿರಣ್ಯಗರ್ಭ, ಮತ್ತು ಆಪಃ–ಎಂದರೆ ಜಲವೇ ಮುಂತಾದ ಪಂಚಮಹಾಭೂತಗಳು, ಸ್ಥೂಲೋಪಾದಿಯೆನಿಸಿರುವ ವಿರಾಟ್ ಪ್ರಜಾಪತಿಯೇ ಮೊದಲಾದ ಎಲ್ಲಾ ಸೃಷ್ಟಿಯೂ ಬ್ರಹ್ಮವೇ–ಎಂದಭಿಪ್ರಾಯ. ಏನೇನು ಜಗತ್ತು ಕಂಡುಬರುತ್ತಿದೆಯೋ ಅದೆಲ್ಲವೂ ಅಖಂಡೈಕರಸವಾದ ಬ್ರಹ್ಮವೇ ಆಗಿದೆ. ಆದರೆ ಬ್ರಹ್ಮವಾಗಿದ್ದರೆ ಸಾಲದು. ಸಾಧಕನು ತನ್ನ ಪ್ರತ್ಯಗ್ದೃಷ್ಟಿಯಿಂದ ಅದನ್ನು ಎಲ್ಲೆಲ್ಲೂ ಯಾವಾಗಲೂ ಕಂಡುಕೊಳ್ಳಬೇಕು. ಹಾಗೆ ಕಂಡುಕೊಳ್ಳುವವರೆಗೂ ಅವಿದ್ಯಾದೃಷ್ಟಿ

ಯಿಂದ ದ್ವೈತವೇ ಕಾಣುತ್ತಿರುವದು. ದ್ವೈತವಾದರೊ ಪರಮಾರ್ಥವಲ್ಲ. 'ದ್ವೈತವಿದ್ದಂತೆ ಕಂಡುಬರುವದೋ'—ಎಂದು ಶ್ರುತಿಯಲ್ಲಿಯೇ 'ಇವ' ಶಬ್ದದಿಂದ ಮಿಥ್ಯಾತ್ವವನ್ನು ಹೇಳಿದೆ. ಅನುಭವವೂ ಹಾಗೇ ಇದೆ. ಆದ್ದರಿಂದ ಬ್ರಹ್ಮವೊಂದೇ ಸತ್ಯವು—ಎಂದಾಯಿತು. ಅದೇ ಎಲ್ಲವೂ ಆಗಿದೆ—ಎಂಬುದು ಈ ಮಂತ್ರದ ಅಭಿಪ್ರಾಯವು.

**ಸರ್ವೇ ನಿಮೇಷಾ ಜಜ್ಞಿರೇ ವಿದ್ಯುತಃ ಪುರುಷಾದಧಿ ।**
**ಕಲಾ ಮುಹೂರ್ತಾಃ ಕಾಷ್ಠಾಶ್ಚಾಹೋರಾತ್ರಾಶ್ಚ ಸರ್ವಶಃ ॥**
**ಅರ್ಧಮಾಸಾ ಮಾಸಾ ಋತವಃ ಸಂವತ್ಸರಶ್ಚ ಕಲ್ಪಂತಾಮ್ ।**
**ಸ ಆಪಃ ಪ್ರದುಘೇ ಉಭೇ ಇಮೇ ಅಂತರಿಕ್ಷಮಥೋಸುವಃ ॥7॥**

ಈ ಮಂತ್ರದಲ್ಲಿ ಕಾಲವೂ ಪರಮೇಶ್ವರನಿಂದ ಸೃಷ್ಟವಾಗಿದೆ—ಎಂಬ ತತ್ತ್ವವನ್ನು ತಿಳಿಸಲು ಹೊರಟಿದೆ. ವಿಷ್ಣುಪುರಾಣದಲ್ಲಿ ಒಂದು ಕಡೆಯಲ್ಲಿ 'ಪ್ರಕೃತಿ, ಪುರುಷ, ಕಾಲ—ಇವು ನಿತ್ಯವೆಂದು ತಿಳಿ' ಎಂಬ ಉಪದೇಶವಿದೆ. ಆದ್ದರಿಂದ ಪರಮಪುರುಷನಂತೆಯೇ ಕಾಲಾದಿಗಳೂ ನಿತ್ಯವೆಂಬ ಸಂಶಯವು ಯಾರಿಗಾದರೂ ಬರಬಹುದು. ಅದನ್ನು ಪರಿಹರಿಸುವದಕ್ಕಾಗಿ ಇಲ್ಲಿ ನಿಮೇಷಾದಿ ರೂಪವಾದ ಕಾಲವಿಭಾಗವೆಲ್ಲವೂ ಪುರುಷನಿಂದಲೇ ಸೃಷ್ಟಿಯಾಗಿ ಹೊರಬಂದಿದೆ—ಎಂಬುದನ್ನು ವಿವರಿಸಿದೆ. ಅವಿದ್ಯಾದೃಷ್ಟಿಯಲ್ಲಿ ಅಥವಾ ವ್ಯವಹಾರದೃಷ್ಟಿಯಲ್ಲಿ ಕಾಲಾದಿಗಳು ನಿತ್ಯವೆಂಬ ಭಾವನೆಯಿಂದ ಪುರಾಣದಲ್ಲಿ ಹಾಗೆ ಹೇಳಿದೆ ಎಂದು ಅರ್ಥಮಾಡಿಕೊಳ್ಳಬೇಕು. ಏಕೆಂದರೆ ಸ್ಮೃತಿಗಿಂತಲೂ ಶ್ರುತಿಯು ಪ್ರಬಲವು. ಪ್ರಕೃತದಲ್ಲಿ ನಿಮೇಷಗಳೆಲ್ಲವೂ ಭಗವಂತನಿಂದ ಹುಟ್ಟಿವೆ—ಎಂಬ ವಿಷಯವನ್ನು ನೋಡೋಣ. ಜನಕಮಹಾರಾಜನ ವಂಶದ ಹಿರಿಯಪುರುಷನಾದ ನಿಮಿ ಎಂಬುವನೊಬ್ಬನಿದ್ದನು. ಅವನೇ ಮೊದಲನೆಯ ಮಿಥಿಲಾಧಿಪತಿಯು. ದೇವತೆಗಳ ವರಪ್ರಸಾದದಿಂದ ಅವನು ಎಲ್ಲಾ ಮನುಷ್ಯರ ಕಣ್ಣುರೆಪ್ಪೆಗಳಲ್ಲಿಯೂ ನೆಲಸಿದನು. ಆದ್ದರಿಂದಲೇ ಲೋಕದ ಜನರನ್ನು ನಿಮೇಷರೆಂದು ಕರೆಯಲಾಗಿದೆ. ರೆಪ್ಪೆಹೊಡೆಯುವಷ್ಟು ಅಳತೆಯ ಕಾಲವನ್ನು ನಿಮೇಷವೆನ್ನುವರು. ಇದು ಕಾಲಗಣನೆಯಲ್ಲಿ ಸೂಕ್ಷ್ಮವಿಭಾಗವಾಗಿದೆ. ಇದಕ್ಕಿಂತಲೂ ಸೂಕ್ಷ್ಮವಾಗಿರುವ ಕಾಲವಿಭಾಗವೂ ಇದೆ. ಅದನ್ನು ಲವ—ತ್ರುಟಿ ಎನ್ನುವರು. ಇವುಗಳನ್ನು ಅಳೆಯುವ ಕ್ರಮವು ಹೇಗೆಂದರೆ: ಒಂದುನೂರು ತಾವರೆ ಎಲೆಗಳನ್ನು ಜೋಡಿಸಿಟ್ಟು ಒಂದು ಚೂಪಾದ ಸೂಜಿಯಿಂದ ಚುಚ್ಚಿದರೆ ಒಂದನೆಯ ಎಲೆಯಿಂದ ಎರಡನೆಯ ಎಲೆಗೆ ಸೂಜಿಯು ಪ್ರವೇಶಿಸುವಷ್ಟು ಕಾಲವು ಲವ—ವೆನಿಸುವದು. ಮೂವತ್ತು ಲವಗಳು ಸೇರಿದರೆ ಒಂದು ತ್ರುಟಿಯೆನಿಸುವದು. ಹೀಗೆ **ಸರ್ವಶಃ**—ಎಲ್ಲಾ ರೀತಿಯಿಂದಲೂ, ಲವತ್ರುಟ್ಯಾದಿಗಳಿಂದಾರಂಭಿಸಿ ನಿಮೇಷ, ಕಾಷ್ಠಾ,

ಕಲಾ, ಮುಹೂರ್ತ, ಅಹೋರಾತ್ರಗಳು, ಪಕ್ಷಗಳು, ಮಾಸಗಳು, ಋತುಗಳು, ಸಂವತ್ಸರಗಳು–ಎಲ್ಲವೂ **ವಿದ್ಯುತಃ ಪುರುಷಾತ್**–ಸ್ವಯಂಪ್ರಕಾಶಸ್ವರೂಪನಾದ ಪರಮಪುರಷನಿಂದಲೇ ಹುಟ್ಟಿಬಂದಿವೆ–ಎಂದು ಅಭಿಪ್ರಾಯ.

ಈಗ ಲವ–ತ್ರುಟಿಗಳಂತೆಯೇ ಕಲಾದಿಗಳ ಪ್ರಮಾಣವನ್ನು ತಿಳಿಯೋಣ. ಹದಿನೆಂಟು ನಿಮೇಷಗಳಿಗೆ ಒಂದು ಕಾಷ್ಠೆಯೆಂದೂ ಮೂವತ್ತು ಕಾಷ್ಠೆಗಳಿಗೆ ಒಂದು ಕಲೆಯೆಂದೂ ಮೂವತ್ತು ಕಲೆಗಳಿಗೆ ಒಂದು ಕ್ಷಣವೆಂದೂ ಹನ್ನೆರಡು ಕ್ಷಣಗಳಿಗೆ ಒಂದು ಮುಹೂರ್ತವೆಂದೂ ಪ್ರಾಚೀನರೂ ತಿಳಿಸಿದ್ದಾರೆ. ಇಂಥ ಮುಹೂರ್ತಗಳು ಹದಿನೈದು ಸೇರಿದರೆ ಒಂದು ಹಗಲು, ಹಾಗೆಯೇ ಇನ್ನು ಹದಿನೈದು ಕೂಡಿದರೆ ಒಂದು ರಾತ್ರಿಯಾಗುವದು. ಹಗಲು ರಾತ್ರಿಗಳೆರಡೂ ಕೂಡಿದರೆ ಒಂದು ದಿನವು. ಹದಿನೈದು ದಿನಗಳಿಗೆ ಒಂದು ಪಕ್ಷವು–ಎರಡು ಪಕ್ಷಗಳಿಗೆ ಒಂದು ತಿಂಗಳು ಅಥವಾ ಮಾಸವು. ಹನ್ನೆರಡು ಮಾಸಗಳಿಗೆ ಒಂದು ಸಂವತ್ಸರವು. ಹೀಗೆ ಕಾಲಗಣನೆಯನ್ನು ಪೂರ್ವಿಕರು ಮಾಡಿರುತ್ತಾರೆ. ಈ ಎಲ್ಲಾ ಕಾಲವಿಭಾಗಗಳೂ ಪರಮಪುರುಷನಿಂದಲೇ ಸೃಷ್ಟಿಯಾಗಿವೆ–ಎಂಬಿದು ಇಲ್ಲಿ ಪ್ರಕೃತವಾಗಿದೆ.

ಇಂಥ ಪರಮೇಶ್ವರನು ತಾನೇ ಉಂಟುಮಾಡಿದ ಕಾಲಾನುಗುಣವಾಗಿ–ಎಂದರೆ ಕಾಲವೆಂಬ ಉಪಾಧಿಯನ್ನು ಆಶ್ರಯಿಸಿದವನಾಗಿ ಆಯಾ ಕಾಲಕ್ಕೆ ಉಚಿತವಾದ ರೀತಿಯಿಂದ **ಆಪಃ ಪ್ರದುಘೇ**–ಎಂದರೆ ಜಲೋಪಲಕ್ಷಿತವಾದ ಭೂಮಿಯನ್ನುಂಟು ಮಾಡಿ ಕರೆದನು–ಎಂದರೆ ಭೂಮಿಯಲ್ಲಿ ಜೀವಿಸಿರತಕ್ಕ ಪ್ರಾಣಿಗಳಿಗಾಗಿ ಅನ್ನರೂಪವಾಗಿರುವ ಸಸ್ಯಗಳೇ ಮುಂತಾದದ್ದನ್ನು ಉಂಟುಮಾಡಿದನು–ಎಂದರ್ಥ. ಹಾಗೆಯೇ ಅಂತರಿಕ್ಷವೆಂಬ ಸ್ಥಾನವನ್ನೂ ಸ್ವರ್ಗವೆಂಬ ಸ್ಥಾನವನ್ನೂ ನಿರ್ಮಾಣಮಾಡಿ ಎರಡನ್ನೂ ಆಯಾ ಜೀವಿಗಳಿಗೆ ವಾಸಕ್ಕೂ ಅಶನಾದಿಗಳಿಗೂ ಬೇಕಾದ ಪದಾರ್ಥಗಳಿಂದ ತುಂಬಿದನು–ಪರಿಪೂರ್ಣಗೊಳಿಸಿದನು–ಎಂದಭಿಪ್ರಾಯ. ಆಕಾಶ–ಎಂದರೆ ಅಂತರಿಕ್ಷನಿವಾಸಿಗಳಾದವರಿಗೂ ಸ್ವರ್ಗಲೋಕ ನಿವಾಸಿಗಳಾದವರಿಗೂ ತಕ್ಕ ಭೋಗ್ಯವಸ್ತುಗಳನ್ನು ಉಂಟುಮಾಡಿ ಲೋಕತ್ರಯಗಳಲ್ಲಿಯೂ ಜೀವರುಗಳು ಬದುಕಿ ಬಾಳುವಂತೆ ವ್ಯವಸ್ಥೆಮಾಡಿದವನಾದನು–ಎಂದು ಅಭಿಪ್ರಾಯ.

**ನೈನಮೂರ್ಧ್ವಂ ನ ತಿರ್ಯಂಚಂ ನ ಮಧ್ಯೇ ಪರಿಜಗ್ರಭತ್ ।**
**ನ ತಸ್ಯೇಶೇ ಕಶ್ಚನ ತಸ್ಯ ನಾಮ ಮಹದ್ಯಶಃ ॥8॥**

ಪರಮೇಶ್ವರನು ಕಾಲ, ಲೋಕಾದಿಗಳೆಲ್ಲವನ್ನೂ ಸೃಷ್ಟಿಮಾಡಿರುತ್ತಾನೆಂದು ಹಿಂದಿನ ಮಂತ್ರದಲ್ಲಿ ತಿಳಿಸಿದ್ದಾಯಿತು. ಮತ್ತು ಎಲ್ಲವನ್ನೂ ಅವನೇ ವ್ಯಾಪಿಸಿರುತ್ತಾನೆಂದೂ

ಹೇಳಿದಂತಾಯಿತು. ಆದರೆ ಲೋಕತ್ರಯನಿವಾಸಿಗಳಾದ ಪ್ರಾಣಿಗಳಿಗೆ ಅದರಲ್ಲಿಯೂ ಬುದ್ಧಿಜೀವಿಗಳಾದ ಮನುಷ್ಯರಿಗಾಗಲಿ, ದೇವತೆಗಳಿಗಾಗಲಿ ಆತನು ಗೊತ್ತಾಗಬೇಡವೆ? ಯಾರೊಬ್ಬರೂ ಪರಮೇಶ್ವರನನ್ನು ಕಂಡೆವು–ಎನ್ನುವವರಿಲ್ಲವಲ್ಲ? ಏಕೆ ? ಸೃಷ್ಟಿಯನ್ನು ಕಂಡಿರುತ್ತೇವೆ–ಎಂದು ಎಲ್ಲರೂ ಹೇಳುತ್ತಾರೆ. ಸೃಷ್ಟಿಕರ್ತನನ್ನು ಕಂಡಿರುತ್ತೇವೆ–ಎನ್ನುವವರು ತೀರ ವಿರಳವಾಗಿರುತ್ತಾರೆ. ಇದರ ರಹಸ್ಯವೇನು? ಎಂಬುದನ್ನೀಗ ವಿವರಿಸುತ್ತಾರೆ. ನಿಜ ; ಪರಮೇಶ್ವರನನ್ನು ಯಾವನೊಬ್ಬ ಪುರುಷನೂ ಕಂಬದಂತೆ ಎತ್ತರವಾಗಿ ಉದ್ದವಾಗಿ ಮೇಲಕ್ಕೆ ಚಾಚಿರುವಂತೆಯಾಗಲಿ, ಗಿಡಮರಗಳೂ ಪೈರುಗಳೂ ತಮ್ಮ ಫಲಗಳನ್ನು ನೆಲದ ಕಡೆಗೆ ಚಾಚುವಂತೆ ಕೆಳಮುಖವಾಗಿ ಭಗವಂತನು ಹರಡಿಕೊಂಡಿರುವದನ್ನಾಗಲಿ, ಅಥವಾ ಒಂದು ಮನೆಯ ಒಳಗಡೆ ನಡುವೆ ದೇವದತ್ತನೆಂಬ ಮನುಷ್ಯನಿರುವಂತೆ ಮಧ್ಯದಲ್ಲಿಯಾಗಲಿ ಯಾರೂ ಆತನನ್ನು ಕಂಡಿರುವದಿಲ್ಲ. ಏಕೆಂದರೆ ಮೇಲು, ಕೆಳಗು, ನಡುವೆ–ಎಂಬ ಸ್ಥಾನಗಳಾಗಲಿ, ಆಕಾರಗಳಾಗಲಿ–ಆತನಿಗೆ ಇರುವದಿಲ್ಲ. ಹಾಗೆಯೇ ಜಗತ್ತಿನಲ್ಲಿ ಯಾವನೊಬ್ಬನೂ ಭಗವಂತನನ್ನು ಕುರಿತು ''ದೇವ, ನಿನ್ನನ್ನು ನಾನು ತಿಳಿಯಬೇಕಾಗಿದೆಯಾದ್ದರಿಂದ ಇಂಥ ದೇಶದಲ್ಲಿ ಇಂಥ ಆಕಾರದಲ್ಲಿ ಹೀಗೆಹೀಗೆ ಇರುವವನಾಗು'' ಎಂದು ಕಟ್ಟು ಮಾಡುವಂತಿಲ್ಲ –ಎಂದರೆ ಶಾಸನ ಮಾಡುವಂತಿಲ್ಲ. ಆದ್ದರಿಂದಲೇ ಅವನ ಹೆಸರು ಕೂಡ ಹೆಚ್ಚಿನ ಯಶಸ್ಸನ್ನು ಕೊಂಡಾಡುತ್ತಿದೆ–ಎಂದಭಿಪ್ರಾಯ.

ಉಪನಿಷತ್ತಿನ ಈ ಮಂತ್ರದಲ್ಲಿರುವ 'ತಸ್ಯ ನಾಮ ಮಹದ್ಯಶಃ' ಎಂಬ ವಾಕ್ಯವು ಬಹಳ ಅರ್ಥಗರ್ಭಿತವಾಗಿದೆ. ಸಾಮಾನ್ಯವಾಗಿ ಎಲ್ಲಾ ಉಪನಿಷತ್ತುಗಳಲ್ಲಿಯೂ ಪರಬ್ರಹ್ಮವನ್ನು ನಾಮರೂಪಗಳನ್ನು ಮೀರಿದ್ದೆಂದೂ ಅದು ಮಾತಿಗೂ ಮನಸ್ಸಿಗೂ ನಿಲುಕದೆ ಇರುವ ವಸ್ತುವೆಂದೂ ವರ್ಣಿಸಿರುತ್ತದೆ. ಇದು ಪರಮಾರ್ಥವೂ ಹೌದು. ಆದರೂ ವೇದವು ಮಂದಮಧ್ಯಮಾಧಿಕಾರಿಗಳನ್ನೂ ವರ್ಣಾಶ್ರಮಧರ್ಮಬಾಹಿರರಾಗಿದ್ದರೂ ಸಂಸ್ಕಾರವಶದಿಂದ ಮುಮುಕ್ಷುಗಳಾಗಿದ್ದು ಜ್ಞಾನಪ್ರಾಪ್ತಿಗಾಗಿ ಪ್ರಯತ್ನಮಾಡುವಂಥ ಸಾಧಕರನ್ನೂ ಮನಸ್ಸಿನಲ್ಲಿಟ್ಟುಕೊಂಡು ಆ ಪರಾತ್ಪರವಸ್ತುವಿನಲ್ಲಿ ನಾಮರೂಪಗಳನ್ನು ಅಧ್ಯಾರೋಪಿಸಿ ಭಗವನ್ನಾಮವು ಸ್ವಯಂ ಮಹಿಮಾನ್ವಿತವೆಂದೂ ನಾಮವೇ ಬ್ರಹ್ಮವೆಂದೂ ನಾಮಕೀರ್ತನೆಯೇ ಶ್ರೇಯಸ್ಕರವೂ ಯಶಸ್ಕರವೂ ಆಗಿರುವದೆಂದೂ ತಿಳಿಸುತ್ತಿದೆ. ಮತ್ತು ನಾಮಗ್ರಹಣಮಾತ್ರದಿಂದ ಮಾನವನು ಉದ್ಧಾರವಾಗುತ್ತಾನೆಂದೂ ಕ್ರಮವಾಗಿ ಮೋಕ್ಷವೆಂಬ ಪರಮಪುರುಷಾರ್ಥಕ್ಕೂ ಭಾಗಿಯಾಗುವೆನೆಂದೂ ಹೇಳುತ್ತಿದೆ. ಇತಿಹಾಸಪುರಾಣಗಳಲ್ಲಿಯಂತೂ ನಾಮಮಹಿಮೆಯನ್ನು ತಾತ್ಪರ್ಯದಿಂದಲೇ ತಿಳಿಸಿರುತ್ತದೆ. ಅನೇಕ ಜನರು ಸಾಧುಸತ್ಪುರುಷರು,

ಮಹಾತ್ಮರು, ಭಕ್ತಶ್ರೇಷ್ಠರು ಕೂಡ ನಾಮಮಾಹಾತ್ಮ್ಯವನ್ನು ನಮ್ಮ ದೇಶದಲ್ಲಿ ಪ್ರಚಾರ ಮಾಡಿರುತ್ತಾರೆ. ಹೀಗೆ ಶ್ರೌತಸ್ಮಾರ್ತಕರ್ಮಗಳು, ವೈದಿಕೋಪಾಸನೆಗಳು, ಜಪ, ತಪ, ಯಾಗ, ಹೋಮಾದಿಗಳಿಂದ ಭಗವತ್ಪ್ರಾಪ್ತಿಯನ್ನು ಬಯಸುವಂತೆಯೇ ಸಾಧಕರಾದವರು ನಾಮಕೀರ್ತನ, ಸ್ಮರಣ, ಜಪ, ಭಜನಾದಿಗಳಿಂದಲೂ ಭಗವಂತನ ಸಾನ್ನಿಧ್ಯವನ್ನು ಪಡೆಯಬಹುದೆಂಬ ಅಭಿಪ್ರಾಯವನ್ನು ಈ ವಾಕ್ಯವು ತಿಳಿಸುತ್ತದೆ. ನಾಮಕೀರ್ತನೆಯೂ ವೈದಿಕೋಪದೇಶವೇ–ಎಂಬುದನ್ನು ಈ ಮಾತು ಸಮರ್ಥಿಸುತ್ತದೆ. ಆದ್ದರಿಂದ ಕರ್ಮಠರಾದವರು ನಾಮಕೀರ್ತನ, ಭಜನಾದಿಗಳಿಂದಲೂ ಮೋಕ್ಷಪ್ರಾಪ್ತಿಯ ಅವಕಾಶವಿದೆಯೆಂದು ತಿಳಿದು ಗೌರವಿಸಬೇಕು. ಹಾಗೆಯೇ ಕೀರ್ತನಭಜನಾದಿಗಳಲ್ಲಿ ಆಸಕ್ತರಾದವರು ವೇದೋಕ್ತಕರ್ಮಗಳ ಅಂತಸ್ತನ್ನು ಅರಿತು ಅವುಗಳ ಅನುಷ್ಠಾನ ದಲ್ಲಿಯೂ ಆದರವನ್ನು ತೋರಿಸಬೇಕು. ಆಗ ನಾವು ವೇದಮಾತೆಯ ಹೃದಯಾಂತರ್ಗತ ವಾದ ಪೂರ್ಣಾರ್ಥವನ್ನು ಬಲ್ಲವರಾಗುವೆವು.

**ನ ಸಂದೃಶೇ ತಿಷ್ಠತಿ ರೂಪಮಸ್ಯ ನ ಚಕ್ಷುಷಾ ಪಶ್ಯತಿ**
**ಕಶ್ಚನೈನಮ್ । ಹೃದಾ ಮನೀಷಾ ಮನಸಾಭಿಕ್ಲೃಪ್ತೋ**
**ಯ ಏನಂ ವಿದುರಮೃತಾಸ್ತೇ ಭವಂತಿ ॥9॥**

ಈ ಮಂತ್ರವು ಕಠೋಪನಿಷತ್ತಿನಲ್ಲಿಯೂ ಇದೆ. ಹಿಂದಿನ ಮಂತ್ರದಲ್ಲಿ ತಿಳಿಸಿರುವಂತೆ ಪರಮಾತ್ಮನು ಯಾವ ಉಪಾಧಿಯೂ ಇಲ್ಲದವನಾದ್ದರಿಂದ ಅವನನ್ನು ಕಾಣುವದೇ ಸಾಧ್ಯವಿಲ್ಲವೆಂದಾಗುವದಾದರೆ, ಹಾಗಿಲ್ಲ , ಉಪಾಯಾಂತರದಿಂದ ಕಂಡುಕೊಳ್ಳಬಹುದು–ಎಂದು ಈ ಮಂತ್ರವು ತಿಳಿಸುತ್ತದೆ. ಪ್ರತ್ಯಗಾತ್ಮನಾಗಿರುವ ಈತನ ರೂಪವು ಕಣ್ಣುಗಳಿಗೆ ಗೋಚರವಾಗುವ ಸ್ಥಿತಿಯಲ್ಲಿರುವದಿಲ್ಲ. ಹಾಗೆಯೇ ಕಣ್ಣಿನ ಜೊತೆಗೆ ಉಳಿದ ಯಾವ ಇಂದ್ರಿಯಗಳೂ ಈತನನ್ನು ಗ್ರಹಿಸಲಾರವು. ಎಂಥ ಸೂಕ್ಷ್ಮದರ್ಶನವುಳ್ಳವನಾಗಲಿ, ಯಂತ್ರಗಳನ್ನು ಬಳಸಿಯಾದರೂ ಸೂಕ್ಷ್ಮವಸ್ತುವನ್ನು ಕಂಡುಕೊಳ್ಳುವೆನು–ಎಂಬ ಜಾಣನೇ ಆಗಲಿ–ಯಾರಿಗೂ ಈ ಪ್ರತ್ಯಗಾತ್ಮನನ್ನು ಕಾಣುವದು ಸಾಧ್ಯವಾಗಲಾರದು. ಆದರೆ ಯಾವನು ಹೃದಯದಲ್ಲಿರುವ ಬುದ್ಧಿಯಿಂದ– ಎಂದರೆ ಬುದ್ಧಿಯನ್ನು ಹೊರಮುಖವಾಗಿ ತರ್ಕಪ್ರಧಾನವಾಗಿ ಬಳಸದೆ ಯೋಗಾದಿಗಳಿಂದ ಅಂತರ್ಮುಖವಾಗಿ ಮಾಡಿಕೊಂಡು ಪ್ರತ್ಯಗ್‌ದೃಷ್ಟಿಯುಳ್ಳವನಾಗಿ ಮತ್ತು ಸಂಕಲ್ಪವಿಕಲ್ಪಗಳನ್ನು ಹೊಂದುವ ವೃತ್ತಿರೂಪವಾದ ಮನಸ್ಸನ್ನೂ ನಿಯಮನ ಮಾಡುವಂಥ ದೃಢವಾದ ಸ್ಥಿರವಾದ ಬುದ್ಧಿಯಿಂದ ಕೂಡಿದವನಾಗಿ ಪ್ರಯತ್ನಮಾಡು ವನೋ ಅವನು ತನ್ನ ಸ್ವರೂಪಭೂತನೇ ಆಗಿರುವ ಈ ಪರಮಾತ್ಮನನ್ನು

ತ್ರಿಪುಟಿರಹಿತವಾಗಿ ಕೇವಲಾನುಭವರೂಪವಾಗಿ ಕಂಡುಕೊಳ್ಳುವನು. ಹೀಗೆ ವಿಚಾರಮಾಡಿ ತಿಳಿದ ಸ್ಥಿತಪ್ರಜ್ಞರೆಲ್ಲರೂ ಅಮೃತರಾಗಿ ಬಿಡುವರು– ಎಂದು ಅಭಿಪ್ರಾಯ.

**ಅದ್ಭ್ಯಃ ಸಂಭೂತೋ ಹಿರಣ್ಯಗರ್ಭ ಇತ್ಯಷ್ಟೌ ॥10॥**

ಬ್ರಹ್ಮಪ್ರತಿಪಾದಕಮಂತ್ರಗಳುಳ್ಳ ಈ ಅನುವಾಕದಲ್ಲಿ ಇಲ್ಲಿ ಪ್ರತೀಕಗ್ರಹಣದಿಂದ ಕೆಲವು ಮಂತ್ರಗಳನ್ನು ಸೂಚಿಸಿದೆ. **'ಅದ್ಭ್ಯಃ ಸಂಭೂತಃ'** ಎಂದು ಆರಂಭವಾಗಿ **'ಸರ್ವಂ ಮನಿಷಾಣ'** ಎಂಬಲ್ಲಿಯವರೆಗಿನ ಒಂದು ಅನುವಾಕವನ್ನೂ **'ಹಿರಣ್ಯಗರ್ಭಃ ಸಮವರ್ತತಾಗ್ರೇ'** ಎಂದು ಆರಂಭವಾಗಿ **'ಕಸ್ಮೈದೇವಾಯ ಹವಿಷಾ ವಿಧೇಮ'** ಎಂದು ಪೂರೈಸುವ ಎಂಟು ಮಂತ್ರಗಳನ್ನೂ ಇಲ್ಲಿ ಅನುಸಂಧಾನಮಾಡಿಕೊಳ್ಳಬೇಕು– ಹಾಗೂ ಅಧ್ಯಯನ ಮಾಡಬೇಕು ಎಂದಭಿಪ್ರಾಯ. ಈ ಮಂತ್ರಗಳೆಲ್ಲವೂ ಕ್ರಮವಾಗಿ ತೈತ್ತಿರೀಯಾರಣ್ಯಕದ ಮೂರನೆಯ ಪ್ರಶ್ನದಲ್ಲಿಯೂ ತೈತ್ತರೀಯಸಂಹಿತೆಯ ನಾಲ್ಕನೆಯ ಕಾಂಡದ ಪ್ರಥಮಪ್ರಪಾಠಕದಲ್ಲಿಯೂ ಇವೆ. ಈಗ ಇವುಗಳ ಅಭಿಪ್ರಾಯವನ್ನು ತಿಳಿಯೋಣ.

**ಅದ್ಭ್ಯಃ ಸಂಭೂತ ಪೃಥಿವ್ಯೈ ರಸಾಚ್ಚ । ವಿಶ್ವಕರ್ಮಣಃ**
**ಸಮವರ್ತತಾಧಿ । ತಸ್ಯ ತ್ವಷ್ಟಾ ವಿದಧದ್ ರೂಪಮೇತಿ ।**
**ತತ್ಪುರುಷಸ್ಯ ವಿಶ್ವಮಾಜಾನಮಗ್ರೇ ॥11॥**

ನೀರು, ಭೂಮಿ, ರಸ– ಎಂದರೆ ಹಾಲಿನ ಜಿಡ್ಡಾದ ತುಪ್ಪವೆಂದು ಅರ್ಥಮಾಡಿ ತುಪ್ಪವು ತೇಜೋದ್ರವ್ಯವೆಂದು ವೈದಿಕ ಪ್ರಸಿದ್ಧಿಯಿರುವದರಿಂದ ತೇಜಸ್ಸೆಂದು ಪರಿಗಣಿಸಿದರೆ ಪೃಥಿವ್ಯಾದಿಭೂತತ್ರಯಗಳಾಗುವವು. ಈ ಮೂರು ಮಹಾಭೂತಗಳನ್ನೂ ಉಪಲಕ್ಷಣವೆಂದು ಭಾವಿಸಿದರೆ ವಾಯ್ವಾಕಾಶಗಳೂ ಗೃಹಿತವಾಗುತ್ತವೆ. ವಿಶ್ವಕರ್ಮನೆನಿಸಿರುವ ಸೃಷ್ಟಿಕರ್ತನಿಂದ ಬ್ರಹ್ಮಾಂಡ ಸೃಷ್ಟಿಯು ಈ ಪಂಚಮಹಾ ಭೂತಗಳ ದ್ವಾರದಿಂದ ಹೊರಬಂದಿತು. ಬ್ರಹ್ಮಾದಿಸ್ತಂಬಪರ್ಯಂತವಾದ ಎಲ್ಲಾ ಭೂತಗಳೂ ಎಂದರೆ ದೇವತೆಗಳು, ತಿರ್ಯಕ್‌ಪ್ರಾಣಿಗಳು, ಮನುಷ್ಯರು– ಆದಿತ್ಯಾದಿಗ್ರಹಗಳು– ಇತ್ಯಾದಿ– ಎಲ್ಲಾ ಸೃಷ್ಟಿಯೂ ವಿಶ್ವಕರ್ಮನ ಕೃತಿಯೇ ಆಗಿದೆ. ಇವರಲ್ಲಿ ದೇದೀಪ್ಯನಾಗಿ ಬೆಳಗುತ್ತಿರುವ ತ್ವಷ್ಟನು ಎಂದರೆ ಸೂರ್ಯನು ಪರಮಾತ್ಮನ ವಿಭೂತಿರೂಪನೇ ಆಗಿದ್ದು 'ಏತಿ' ಎಂದರೆ ಉದಯಾಚಲಪರ್ವತವನ್ನೇರುವನು– ಎಂದರ್ಥ. ಇಂಥ ಸವಿತೃದೇವನು ತನ್ನ ಕಿರಣಗಳಿಂದ ಈ ಪ್ರಸಿದ್ಧವಾದ ಸೃಷ್ಟಿಯನ್ನೆಲ್ಲ ವಿಶ್ವವನ್ನೆಲ್ಲ ವ್ಯಾಪಿಸಿಕೊಂಡಿರುವನು. ಇವನೇ ಸಮಸ್ತಜಗತ್ತಿನ ಆತ್ಮನು. ಏಕೆಂದರೆ

ಸೂರ್ಯಾಂತರ್ಗತನಾದ ಭಗವಂತನೇ ಅಲ್ಲವೆ ಸರ್ವಾಂತರಾತ್ಮನೆನಿಸಿರುವನು? ಇಂಥ ವಿಶ್ವಕರ್ಮನೂ ಜಗತ್ಸಾಕ್ಷಿಯೂ, ನಿಖಿಲಜಗದ್ವ್ಯಾಪಕನೂ, ತೇಜೋಮಯನೂ, ಸರ್ವಾತ್ಮನೂ ಆದ ಪುರುಷನನ್ನು ನಾನು ತಿಳಿದವನಾಗಿರುತ್ತೇನೆ–ಎಂದು ಮುಂದಿನ ಮಂತ್ರದೊಡನೆ ಅನ್ವಯಿಸಿಕೊಳ್ಳಬೇಕು.

**ವೇದಾಹಮೇತಂ ಪುರುಷಂ ಮಹಾಂತಮ್ । ಆದಿತ್ಯವರ್ಣಂ ತಮಸಃ ಪರಸ್ತಾತ್ । ತಮೇವಂ ವಿದ್ವಾನಮೃತ ಇಹ ಭವತಿ । ನಾನ್ಯಃ ಪಂಥಾ ವಿದ್ಯತೇಽಯನಾಯ ॥12॥**

ಈ ಮಂತ್ರವನ್ನು ಹಿಂದಿನ ಮಂತ್ರದೊಡನೆ ಅನ್ವಯಿಸಿ ಅಭಿಪ್ರಾಯ ಮಾಡಿಕೊಳ್ಳಬೇಕು. ಒಬ್ಬಾನೊಬ್ಬ ಸೂರ್ಯೋಪಾಸಕನ ಅಭಿಪ್ರಾಯವು ಹೀಗಿದೆ : ಆಕಾಶಮಂಡಲದಲ್ಲಿ ಕಂಡುಬರುತ್ತಿರುವ ಈ ಆದಿತ್ಯವರ್ಣನಾದ ಹಾಗೂ ಕತ್ತಲೆಯ ಆಚೆಗೆ ಇರುವ ಮಹಾಂತನಾದ ಈ ಪುರುಷನನ್ನು ನಾನು ಬಲ್ಲೆನು. ಇವನೇ ನನ್ನ ಆತ್ಮನು, ಹಾಗೂ ಎಲ್ಲದರ ಆತ್ಮನೂ ಆಗಿರುವನು. ಸೂರ್ಯನಲ್ಲಿ ಕಾಣಿಸಿಕೊಳ್ಳುವಂತೆಯೇ ನನ್ನಲ್ಲಿಯೂ ಕಾಣಿಸಿಕೊಂಡಿರುವನು. ನಾನಾಗಿರುವ ದೇಹೋಪಾಧಿಯನ್ನೂ ಸೂರ್ಯನೆನಿಸಿ ಬೆಳಗುವ ಮಂಡಲೋಪಾಧಿಯನ್ನೂ ಕಳಚಿದರೆ ಅವನೇ ನಾನು, ನಾನೇ ಅವನಾಗಿರುವೆನು, ಅಥವಾ ನಾನು–ಅವನು ಎಲ್ಲವೂ ಮುಳುಗಿದ ಆತ್ಮನಾಗಿರುವದು. ಇಂಥ ಪರಬ್ರಹ್ಮಸ್ವರೂಪವನ್ನು ಹೀಗೆ ವಿಚಾರಮಾಡಿ ಶಾಸ್ತ್ರಾಚಾರ್ಯೋಪದೇಶಗಳಿಂದ ಪ್ರತ್ಯಗಾತ್ಮನಾಗಿ ಅರಿತುಕೊಂಡವನು ಇಲ್ಲಿಯೇ ಅಮೃತನಾಗಿಬಿಡುವನು. ಇದೇ ಮುಕ್ತಿಯು. ಹೀಗೆ ಅರಿತುಕೊಳ್ಳುವದನ್ನು ಬಿಟ್ಟರೆ ಮುಕ್ತಿಗೆ. ಬೇರೆಯ ಹಾದಿಯಿರುವದಿಲ್ಲ– ಎಂಬಿದು ಉಪಾಸಕನ ಅಭಿಪ್ರಾಯವು. ಇಂಥ ವಸ್ತುತತ್ತ್ವಚಿಂತಕನು ಪೂರ್ಣಜ್ಞಾನಿಯೇ ಆಗಿರುವನೆಂಬುದರಲ್ಲಿಸಂಶಯವಿಲ್ಲ. ಇದರಿಂದ ಮುಕ್ತಿಗೆ ಜ್ಞಾನವೊಂದೇ ಸಾಧನವೆಂದೂ ಸಿದ್ಧವಾಗುತ್ತದೆ.

**ಪ್ರಜಾಪತಿಶ್ಚರತಿ ಗರ್ಭೇ ಅಂತಃ । ಅಜಾಯಮಾನೋ ಬಹುಧಾ ವಿಜಾಯತೇ । ತಸ್ಯ ಧೀರಾಃ ಪರಿಜಾನಂತಿ ಯೋನಿಮ್ । ಮರೀಚೀನಾಂ ಪದಮಿಚ್ಛಂತಿ ವೇಧಸಃ ॥13॥**

ಈ ಮಂತ್ರದಲ್ಲಿ ಪರಮಾತ್ಮನ ಮಹಿಮೆಯನ್ನು ಹೇಳಿದೆ. ಸರ್ವಾತ್ಮನಾದ ಭಗವಂತನೇ ಪ್ರಜೆಗಳಿಗೆಲ್ಲ ಪತಿಯಾಗಿರುವದರಿಂದ ಪ್ರಜಾಪತಿಯೆನಿಸಿರುವನು. ಆ ಪ್ರಜಾಪತಿಯು ಬ್ರಹ್ಮಾಂಡಗರ್ಭದಲ್ಲೆಲ್ಲ ಒಳಹೊಕ್ಕು ಓಡಾಡುತ್ತಿರುವನು. ಹೇಗೆ ಗಾಳಿಯು

ಆಕಾಶವನ್ನೆಲ್ಲ ವ್ಯಾಪಿಸಿರುವದೋ ಹಾಗೆ ಎಲ್ಲಾ ಪ್ರಾಣಿಗಳೂ ಆ ಪ್ರಜಾಪತಿಯ ಗರ್ಭದಲ್ಲೇ ಅಡಗಿರುವವು—ಎಂದೂ ಅರ್ಥಮಾಡಬಹುದು. ಹೀಗೆ ನಾನಾ ಜೀವರುಗಳಾಗಿ ಹುಟ್ಟಿ ತೋರಿಕೊಂಡಿದ್ದರೂ ಆ ಪರಮಾತ್ಮನು ಸ್ವತಃ ಅಜನು— ಎಂದರೆ ಜನ್ಮವಿಲ್ಲದವನು. ಆದರೂ ನಾನಾವಿಧವಾಗಿ ಹುಟ್ಟಿದಂತೆ ತೋರುತ್ತಿರುವನು. ಭಗವಂತನಿಗೂ ಹುಟ್ಟು ಮುಂತಾದ ವಿಕಾರಗಳು ಇರಲಿ? ಎಂದು ಶಂಕಿಸಬಾರದು. ಹುಟ್ಟಿದ ವಸ್ತುವು ನಾಶವಾಗಲೇಬೇಕಾದ್ದರಿಂದ ಭಗವಂತನೂ ಅನಿತ್ಯನೆಂದಾಗಿ ಬಿಡುವದು. ಆಗ ಆತ್ಮನೂ ನಿತ್ಯನೆಂದೂ ಅವಿಕಾರಿಯೆಂದೂ ಹೇಳುವ ಶ್ರುತಿಗಳಿಗೆ ವಿರೋಧವಾಗುವದು. ಮತ್ತು ಜನ್ಮಮರಣಗಳಿಗೆ ಸಾಕ್ಷಿಯಾದ ಆತ್ಮನಿಗೆ ಜನ್ಮವುಂಟೆಂಬುದು ಅನುಭವವಿರುದ್ಧವೂ ಆಗುವದು. ಆದ್ದರಿಂದ ಈ ಶ್ರುತಿಯಲ್ಲಿರುವ **'ಅಜಾಯಮಾನಃ'** ಎಂಬುದು ಯಥಾರ್ಥನಿರ್ದೇಶವು. **'ಬಹುಧಾ ವಿಜಾಯತೇ'** ಎಂಬಿದು ಅನುವಾದವು—ಎಂದರೆ ಲೋಕದೃಷ್ಟಿಯನ್ನು ಅನುಸರಿಸಿ ಹೇಳಿದ್ದು ಎಂದು ತಿಳಿಯಬೇಕು. ಎರಡೂ ವಿರುದ್ಧಧರ್ಮಗಳನ್ನು ಕೂಡಿಸಿ ಹೀಗೆ ಹೇಳುವದು ಸರಿಯೆ? ಎಂದರೆ **'ವಿಜಾಯತೇ ಇವ'** (ಹುಟ್ಟಿದವನಂತೆ ತೋರುತ್ತಾನೆ) ಮಾಯೆಯಿಂದ ಹುಟ್ಟುತ್ತಾನೆ— ಎಂದು ಹೊಂದಾವಣೆ ಮಾಡಿಕೊಳ್ಳಬೇಕೆಂದು ಸಂಪ್ರದಾಯವನ್ನು ಬಲ್ಲವರು ತಿಳಿಸುತ್ತಾರೆ.

ಇಂಥ ಪರಮಾತ್ಮನು ನಮಗೆಲ್ಲ ಅನುಗ್ರಹಿಸುವದಕ್ಕಾಗಿ ಸೂರ್ಯನಾಗಿ ಕಂಡು ಬರುತ್ತಿರುವನಷ್ಟೆ ! ಈ ಸೂರ್ಯರೂಪನಾದ ದೇವತೆಯನ್ನು ಮೊದಲು ವಿಚಾರಮಾಡಿ ಕಂಡುಕೊಂಡ ಪ್ರಾಜ್ಞರುಗಳು ಮರೀಚಿಗಳ—ಎಂದರೆ ವೇದಗಳ ಪರಮಸ್ಥಾನವಾದ ನಾರಾಯಣನನ್ನು ಸೇರಲಿಚ್ಛಿಸುವವರಾಗಿರುವರು. ಅವರಿಗೆ ಸೂರ್ಯನಿಗೂ ಕಾರಣನಾದ ಭಗವಂತನ ಅರಿವುಂಟಾಗಿರುವದು. ಆದ್ದರಿಂದ ಅವರು ಧೀರರೆನಿಸಿರುವರು. ತಮ್ಮ ಅಂತರ್ಮುಖವಾದ ಧೀಶಕ್ತಿಯಿಂದ ಸರ್ವಾತ್ಮನಾದ ನಾರಾಯಣನನ್ನೇ ಬಳಿಸಾರಿ ಕೃತಕೃತ್ಯರಾಗಿಬಿಡುವರು—ಎಂದರ್ಥ.

**ಯೋ ದೇವೇಭ್ಯ ಆತಪತಿ । ಯೋ ದೇವಾನಾಂ ಪುರೋಹಿತಃ ।**
**ಪೂರ್ವೋ ಯೋ ದೇವೇಭ್ಯೋ ಜಾತಃ । ನಮೋ ರುಚಾಯ**
**ಬ್ರಾಹ್ಮಯೇ ॥14॥**

ಈ ಮಂತ್ರದಲ್ಲಿ ಮತ್ತೆ ಸೂರ್ಯರೂಪನಾದ ಭಗವಂತನನ್ನು ಸ್ತುತಿಸಲಾಗಿದೆ. ಯಾವ ಸೂರ್ಯದೇವನು ದೇವತೆಗಳಿಗಾಗಿ ಪ್ರಕಾಶಿಸುವನೋ—ಎಂದರೆ ದೇವತೆಗಳನ್ನು ಉದ್ದೇಶಿಸಿ ಕರ್ಮಾನುಷ್ಠಾನವನ್ನು ಮಾಡುವ ಜನರಿಗೆ ಹಗಲು—ರಾತ್ರಿಗಳನ್ನು

ಉಂಟುಮಾಡುತ್ತಾ ಕಾಲರೂಪದಿಂದ ಅನುಗ್ರಹಿಸುತ್ತಿರುವನೋ ಹಾಗೂ ಯಾವ ಆದಿತ್ಯನು ದೇವತೆಗಳಲ್ಲಿ ಮುಂದಾಳಾಗಿ (ಪುರೋಹಿತನಾಗಿ)ದ್ದುಕೊಂಡು ಎಲ್ಲಾ ದೇವತೆಗಳಿಗಿಂತಲೂ ಮೊದಲು ಜನಿಸಿದವನಾದನೋ ಅವನ ಬ್ರಾಹ್ಮವಾದ ತೇಜಸ್ಸಿಗೆ ನಮಸ್ಕಾರಗಳು–ಎಂದು ಅಭಿಪ್ರಾಯ. ಸೂರ್ಯಾಂತರ್ಗತವಾದ ತೇಜಸ್ಸೆಂಬುದು ಬ್ರಹ್ಮವೇ. ಏಕೆಂದರೆ ಅದರ ಬೆಳಕಿನಿಂದಲೇ ಉಳಿದೆಲ್ಲವೂ ಬೆಳಗುತ್ತಿರುವದು. ಆದ್ದರಿಂದ ಸೂರ್ಯನನ್ನು ಬ್ರಾಹ್ಮತೇಜಸ್ಸಿನ ಗನಿಯೆನ್ನಬಹುದು. ಯಾರು ಬ್ರಹ್ಮತೇಜೋಮಯರಾಗಿ ಬಾಳಲಿಚ್ಛಿಸುವರೋ ಅಂಥವರು ಮೊದಲು ಸೂರ್ಯನನ್ನು ಆರಾಧಿಸಬೇಕು. ಸಂಧ್ಯಾವಂದನೆಯ ಪರಮೋದ್ದೇಶವೇ ಇದಾಗಿರುವದು. ಸೂರ್ಯೋಪಾಸನೆಯೇ ಸಂಧ್ಯಾವಂದನೆಯ ಸಾರವಾಗಿರುತ್ತದೆ. ಇಂಥ ಸೂರ್ಯಾತ್ಮಕವಾದ ಬ್ರಾಹ್ಮತೇಜಸ್ಸಿಗೆ ವಂದನೆಗಳು–ಎಂದಭಿಪ್ರಾಯ.

**ರುಚಂ ಬ್ರಾಹ್ಮಂ ಜನಯಂತಃ । ದೇವಾ ಅಗ್ರೇ ತದಬ್ರುವನ್ ।**
**ಯಸ್ತ್ವೈವಂ ಬ್ರಾಹ್ಮಣೋ ವಿದ್ಯಾತ್ । ತಸ್ಯ ದೇವಾ ಅಸನ್ ವಶೇ ॥15॥**

ಬ್ರಾಹ್ಮತೇಜಸ್ಸು–ಎಂಬಿದು ತಪಸ್ಸಿನಿಂದಲೂ ವಿದ್ಯೆಯಿಂದಲೂ ಸಂಪಾದಿಸ ತಕ್ಕದ್ದಾಗಿದೆ. ಇದಕ್ಕೆ ದೇವತೆಗಳ ಸಹಕಾರವೂ ಬೇಕಾಗುತ್ತದೆ. ಶ್ರದ್ಧೆ, ಮುಮುಕ್ಷುತ್ವಾದಿ ಗುಣಗಳನ್ನು ಅಧಿಕಾರಿಯಾದ ಸಾಧಕನಿಗೆ ದೇವತೆಗಳೇ ಅನುಗ್ರಹಿಸುತ್ತಾರೆ. ಅಂಥ ಸಾಧಕನು ಬ್ರಾಹ್ಮತೇಜಸ್ಸನ್ನು ಗಳಿಸಿಕೊಳ್ಳುತ್ತಾನೆ. ಅನಂತರ ಅದರ ಪ್ರಭಾವದಿಂದ ದೇವತೆಗಳನ್ನೆಲ್ಲ ತನ್ನ ವಶದಲ್ಲಿರಿಸಿಕೊಳ್ಳುತ್ತಾನೆ. ನಿಜವೇನೆಂದರೆ ಇವನು ಎಲ್ಲ ದೇವತೆಗಳ ಆತ್ಮನಾಗಿಬಿಡುವನು. ಆಗ ದೇವತೆಗಳೆಂಬುವರು ಇವನಿಗಿಂತ ಅನನ್ಯರಾಗಿಬಿಡುವದರಿಂದ ಇವನ ವಶದಲ್ಲಿದ್ದಂತೆ ಆಗುವರು. ಹೀಗೆ ಯಾವನು ತಿಳಿವಳಿಕೆಯಿಂದ ಪರಬ್ರಹ್ಮರೂಪವನ್ನು ಹೊಂದುವನೋ ಅವನೇ ಬ್ರಹ್ಮವಿದನು. ಇಂಥ ಬ್ರಹ್ಮನಿಷ್ಠನನ್ನು ಇಲ್ಲಿ ಸ್ತುತಿಸಿದೆ–ಎಂದು ತಿಳಿಯಬೇಕು.

**ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ । ಅಹೋ ರಾತ್ರೇ ಪಾರ್ಶ್ವೇ ।**
**ನಕ್ಷತ್ರಾಣಿ ರೂಪಮ್ । ಅಶ್ವಿನೌ ವ್ಯಾತ್ತಮ್ । ಇಷ್ಟಂ**
**ಮನಿಷಾಣ । ಅಮುಂ ಮನಿಷಾಣಂ । ಸರ್ವಂ ಮನಿಷಾಣ ॥16॥**

ಈ ಮಂತ್ರವನ್ನು ಸೂರ್ಯಾಂತರ್ಗತನಾದ ನಾರಾಯಣನನ್ನು ವಿಶೇಷವಾಗಿ ಸ್ತುತಿಸಲಾಗಿದೆ. ವಿರಾಡ್ರೂಪನಾಗಿಯೂ ತೋರಿಕೊಂಡಿರುವ ನಾರಾಯಣನಿಗೆ ಜಗತ್ತೆಲ್ಲವೂ ಶರೀರವಾಗಿದೆ. ಹ್ರೀ ಎಂಬವಳೂ ಲಕ್ಷ್ಮೀಯೂ ಪತ್ನಿಯರಾಗಿರುವರು. ಹಗಲುರಾತ್ರಿಗಳೆಂಬಿವೇ ಎಡಬಲಪಕ್ಕಗಳು. ನಕ್ಷತ್ರಗಳಂತೆ ಆತನ ರೂಪವು

ಸುಂದರವಾಗಿರುವದು. ಮುಖವು ಅಶ್ವಿನೀದೇವತೆಗಳಂತೆ ವಿಶಾಲವೂ ರಮಣೀಯವೂ ಆಗಿರುವದು. ಇಂಥ ನಾರಾಯಣನನ್ನು ಕುರಿತು ಭಕ್ತನು ತನ್ನ ಇಷ್ಟಾರ್ಥಗಳನ್ನು ಬೇಡಿಕೊಳ್ಳುತ್ತಿದ್ದಾನೆ. ''ಎಲೈ ಭಗವಂತನೆ, ನನಗೆ ಇಷ್ಟವಾದದ್ದನ್ನೆಲ್ಲ ದಯಪಾಲಿಸುವವನಾಗು. ಪರಲೋಕ (ಸುಖ)ವನ್ನು ಕೊಡುವವನಾಗು. ಮತ್ತು ಸರ್ವವನ್ನೂ ಎಂದರೆ ಸರ್ವವಿಧವಾದ ಸುಖ–ಶಾಂತಿ–ಸ್ವಾತಂತ್ರ್ಯಗಳನ್ನೂ ಕೊಟ್ಟು ಕಾಪಾಡುವವನಾಗು.'' ಈ ರೀತಿಯಲ್ಲಿ ಈ ಮಂತ್ರಗಳಲ್ಲಿ ಜ್ಞಾನೋಪಾಸನಾದಿಸಾಧನಗಳಿಂದ ಮುಕ್ತಿಪರ್ಯಂತವಾದ ಪುರುಷಾರ್ಥಗಳನ್ನು ಭಗವಂತನಲ್ಲಿ ಕೇಳಿಕೊಳ್ಳುವಂತೆ ತಿಳಿಸಲಾಗಿದೆ.

ಈಗ 'ಹಿರಣ್ಯಗರ್ಭಃ ಸಮವರ್ತತ.....'' ಎಂಬ ಎಂಟು ಮಂತ್ರಗಳ ಅರ್ಥವನ್ನು ವಿಚಾರಮಾಡೋಣ. ಭಾಷ್ಯಕಾರರಾದ ಸಾಯಣಾಚಾರ್ಯರು ಈ ಮಂತ್ರಗಳನ್ನು ಹಿರಣ್ಯಗರ್ಭಪ್ರಜಾಪತಿಗೆ ಅನ್ವಯಿಸುವಂತೆ ವ್ಯಾಖ್ಯಾನ ಮಾಡಿದ್ದಾರೆ. ಆದರೆ ಇಲ್ಲಿ ಉಪನಿಷತ್ತಿನ ಪ್ರಕರಣದಲ್ಲಿ ಇವು ಬಂದಿರುವದರಿಂದ ಪರಮಾತ್ಮಪರವಾಗಿ ಅರ್ಥಮಾಡಿ ವಿವರಿಸಲಾಗಿದೆ:–

ಓಂ ॥ ಹಿರಣ್ಯಗರ್ಭಃ ಸಮವರ್ತತಾಗ್ರೇ
ಭೂತಸ್ಯ ಜಾತಃ ಪತಿರೇಕ ಆಸೀತ್ ।
ಸ ದಾಧಾರ ಪೃಥಿವೀಂ ದ್ಯಾಮುತೇಮಾಂ
ಕಸ್ಮೈ ದೇವಾಯ ಹವಿಷಾ ವಿಧೇಮ ॥17॥

ಈ ಎಂಟು ಮಂತ್ರಗಳಲ್ಲಿಯೂ ಕೊನೆಯ ಪಾದವು ಒಂದೇ ಆಗಿದೆ. '**ಕಸ್ಮೈ ದೇವಾಯ**' ಎಂಬಲ್ಲಿ ಏಕಾರಲೋಪವಾಗಿರುವದರಿಂದ ಅದನ್ನು ಸೇರಿಸಿಕೊಂಡರೆ '**ಏಕಸ್ಮೈ ದೇವಾಯ**' ಎಂದಾಗುವದು. ಆಗ ಇರತಕ್ಕ ಒಬ್ಬನೇ ದೇವನಿಗೆ ನಾವು ಹವಿಸ್ಸುಗಳಿಂದ ಪೂಜೆಯನ್ನು ಅರ್ಪಿಸುವೆವು–ಎಂದಭಿಪ್ರಾಯವಾಗುತ್ತದೆ. ಇದು ಏಕದೇವತಾವಾದವನ್ನು ಸಮರ್ಥಿಸುವ ವೇದಭಾಗವಾಗಿದೆ–ಎಂದು ಹೇಳಬಹುದು. ವೇದದ ಕರ್ಮಕಾಂಡದಲ್ಲಿ ನಾನಾ ದೇವತೆಗಳ ಪ್ರಸ್ತಾಪವಿದೆ. ಅದು ಕರ್ಮದೃಷ್ಟಿಯಿಂದ ಹೇಳಿದ್ದಾಗಿದೆ. ಪರಮತಾತ್ಪರ್ಯವಾದರೊ, ದೇವನೊಬ್ಬನೇ–ಎಂಬಿದೇ ಆಗಿದೆ. ಇವೇ ಮಂತ್ರಗಳು ಋಗ್ವೇದದ ಎಂಟನೆಯ ಅಷ್ಟಕದಲ್ಲಿಯೂ ಇವೆ. ಅಲ್ಲಿ '**ಮಾನೋ ಹಿಂಸೀ**' ಎಂಬ ಒಂಭತ್ತನೆಯ ಮಂತ್ರವೂ ಇದ್ದು ಕಡೆಯಲ್ಲಿ '**ಪ್ರಜಾಪತೇ ನ ತ್ವದೇತಾನ್ಯನ್ಯಃ**' ಎಂಬ ಮಂತ್ರವೂ ಕೂಡಿ ಹತ್ತು ಋಕ್ಕುಗಳ ಒಂದು ಸೂಕ್ತವಾಗಿದೆ. ಅಲ್ಲಿಯೂ ಭಾಷ್ಯಕಾರರು ಹಿರಣ್ಯಗರ್ಭನ ಪರವಾಗಿಯೇ ವ್ಯಾಖ್ಯಾನಮಾಡಿರುತ್ತಾರೆ. ಕ–ಎಂದರೆ

ಸೃಷ್ಟಿನಿಮಿತ್ತವಾಗಿ ಕಾಮನೆಮಾಡಿರುವದರಿಂದ 'ಕ–ನು' ಎಂದರೆ ಪ್ರಜಾಪತಿಯು ಎಂದು ತಾತ್ಪರ್ಯವನ್ನು ಮಾಡಿದ್ದಾರೆ. ಈ ಎಲ್ಲಾ ವಿಷಯಗಳನ್ನೂ ಒಳಗೊಂಡಂತೆ ಪ್ರಜಾಪತಿಗೂ ತಂದೆಯೆನಿಸಿ ಜಗತ್ತಿಗೆ ಪಿತಾಮಹನೆನಿಸಿರುವ ಪರಬ್ರಹ್ಮವು ತಾನೊಂದೇ ತನ್ನ ವಿಭೂತಿಬಲಶಕ್ತಿವೀರ್ಯತೇಜೋಮಹಿಮಾದಿಗಳಿಂದ ನಾನಾದೇವತಾ ರೂಪವಾಗಿಯೂ ತೋರಿಕೊಂಡಿರುವದರಿಂದ 'ಏಕಸ್ಮೈ' ಒಬ್ಬನೇ ಆಗಿರುವ ದೇವನಿಗೆ–ಎಂಬ ಆಧ್ಯಾತ್ಮಿಕಾರ್ಥವು ಉಳಿದ ಅಭಿಪ್ರಾಯಗಳಿಗೆ ವಿರುದ್ಧವೇನೂ ಆಗುವದಿಲ್ಲ. ಆದ್ದರಿಂದ ಇನ್ನು ಮುಂದೆ ಈ ಎಲ್ಲಾ ಮಂತ್ರಗಳನ್ನೂ ಪರಮಾತ್ಮ ಪರವಾಗಿಯೇ ವ್ಯಾಖ್ಯಾನ ಮಾಡಲಾಗುವದು.

''ಯಾವ ಪರಮಾತ್ಮನ ಕಡೆಯಿಂದ ಚತುರ್ಮುಖನೂ ಸೃಷ್ಟಿಕರ್ತನೂ ಆದ ಹಿರಣ್ಯಗರ್ಭಪ್ರಜಾಪತಿಯು ಹೊರಬಂದನೋ, ಹಾಗೆಯೇ ಯಾವಾತನ ಪ್ರಸಾದದಿಂದ ಹುಟ್ಟಿರುವ ಪ್ರಾಣಿಸಮೂಹಕ್ಕೆಲ್ಲ ಅವನು ಒಡೆಯನಾದನೋ ಆ ಭಗವಂತನು ದ್ಯುಲೋಕವನ್ನೂ , ಮತ್ತು ಈ ಸುಪ್ರಸಿದ್ಧವಾಗಿರುವ ಭೂಮಿಯನ್ನೂ ಧರಿಸಿರುವನು. ಇವನಲ್ಲದೆ ಬೇರೆ ಯಾರಿಗೆ ತಾನೆ ನಾವು ಹವಿರರ್ಪಣೆ ಮಾಡಿ ಪೂಜಿಸೋಣ?'' ಎಂಬಿದು ಮಂತ್ರದ ಅಭಿಪ್ರಾಯವು. ಸೃಷ್ಟಿಕರ್ತನಾದ ಬ್ರಹ್ಮನನ್ನು ಮೊಟ್ಟಮೊದಲಿಗೆ ಭಗವಂತನೇ ಉಂಟುಮಾಡಿ ಅವನಿಗೆ ಮುಂದಿನ ಸೃಷ್ಟಿಯ ತಿಳಿವಳಿಕೆಗಾಗಿ ವೇದಗಳನ್ನೂ ದಯಪಾಲಿಸುವನೆಂದು ಬೇರೊಂದು ಶ್ರುತಿಯಲ್ಲಿದೆ. ಜ್ಞಾನಶಕ್ತಿಬಲೈಶ್ವರ್ಯವೀರ್ಯ ತೇಜಸ್ಸುಗಳಿಂದ ಸದಾಸಂಪನ್ನನಾದ ಭಗವಂತನು ತಾನೇ ಹಿರಣ್ಯಗರ್ಭಾದಿದೇವತೆಗಳ ರೂಪದಿಂದಲೂ ಇದ್ದುಕೊಂಡಿರುವನು. ಎಲ್ಲಾ ದೇವತೆಗಳ ಅಂತರ್ಯಾಮಿಯಾಗಿದ್ದು ಕೊಂಡು ನಿಯಮನ ಮಾಡುತ್ತಿರುವನು. ಆಯಾ ದೇವತೆಗಳು ತಾವೇ ಸ್ವತಂತ್ರರೆಂದೂ ಶಕ್ತಿಬಲಗಳೆಲ್ಲ ತಮ್ಮವೇ–ಎಂದೂ ಭಾವಿಸಿರುವರು. ಆದರೆ ತಮ್ಮೊಳಗೆ ಒಬ್ಬ ಅಂತರ್ಯಾಮಿಯಿರುವನೆಂದು ಅವರು ತಿಳಿಯರು. ಇದು ಹಾಗಿರಲಿ ಹೀಗೆ ದೇವತೆಗಳಿಗೂ ದೇವತೆಯಾದ, ಈಶ್ವರರಿಗೂ ಈಶ್ವರನಾದ ಪರಮಾತ್ಮನೇ ದ್ಯುಲೋಕಾದಿಗಳನ್ನೆಲ್ಲ ಧರಿಸಿ ವ್ಯಾಪಿಸಿಕೊಂಡಿರುವನು. ಆತನ ವಿರಾಟ್‌ಶರೀರವೇ ಈ ಸ್ಥೂಲಪ್ರಪಂಚವು. ಅವನನ್ನು ಬಿಟ್ಟರೆ ಈ ಪ್ರಪಂಚಕ್ಕೆ ಅಸ್ತಿತ್ವವೇ ಇಲ್ಲ . ಆದ್ದರಿಂದ ಎಲ್ಲಾ ಲೋಕಗಳ ಧಾರಕನಾದ ಅವನನ್ನು ಬಿಟ್ಟು ಬೇರೆ ದೇವನು ಯಾವನಿದ್ದಾನು? ಇಂಥ ದೇವನಿಗೆ ನಾವು ಹವಿರರ್ಪಣೆಯನ್ನು ಮಾಡುವೆವು. ಶ್ರೌತಸ್ಮಾರ್ತ ಕರ್ಮಗಳೆಲ್ಲವನ್ನೂ ಈತನಿಗಾಗಿಯೇ ಅನುಷ್ಠಿಸಿ ಸಮರ್ಪಿಸುವೆವು–ಎಂದಭಿಪ್ರಾಯ.

**ಓಂ ॥ ಯಃ ಪ್ರಾಣತೋ ನಿಮಿಷತೋ ಮಹಿತ್ವೈಕ**
**ಇದ್ರಾಜಾ ಜಗತೋ ಬಭೂವ ।**

**ಯ ಈಶೇ ಅಸ್ಯ ದ್ವಿಪದಶ್ಚತುಷ್ಪದಃ**
**ಕಸ್ಮೈ ದೇವಾಯ ಹವಿಷಾ ವಿಧೇಮ ॥18॥**

ಈ ಮಂತ್ರದಲ್ಲಿ ಭಗವಂತನು ಎಲ್ಲಕ್ಕೂ ಅಧಿಪತಿಯೆಂಬುದನ್ನು ತಿಳಿಸಿದೆ. ಪ್ರಾಣನಕ್ರಿಯೆಮಾಡುವ ಹಾಗೂ ರೆಪ್ಪೆಗಳನ್ನಾಡಿಸುವ ಜಂಗಮಭೂತಗಳಿಗೂ ಮತ್ತು ಅಚೇತನವಾದ ಸ್ಥಾವರಭೂತಗಳಿಗೂ ಮಹಿತ್ವೇನ–ಎಂದರೆ ಪೂಜ್ಯನಾಗಿರುವದರಿಂದ ರಾಜಾ ಬಭೂವ–ಒಡೆಯನಾಗಿ ವಿರಾಜಮಾನನಾಗಿರುವನೋ–ಯಾವನು ಜಗತ್ತಿನಲ್ಲಿರುವ ಈ ಎರಡು ಕಾಲಿನ ಹಾಗೂ ನಾಲ್ಕು ಕಾಲಿನ ಪ್ರಾಣಿಗಳನ್ನೆಲ್ಲ ಆಳುತ್ತಿರುವನೋ ಆ ಪರಮಾತ್ಮನನ್ನು ಬಿಟ್ಟು ಬೇರೆ ಯಾರನ್ನು ನಾವು ಹವಿಸ್ಸುಗಳಿಂದ ಅರ್ಚಿಸೋಣ?–ಎಂದು ಅರ್ಥ. ಪ್ರಪಂಚವನ್ನೆಲ್ಲ ಆಳುವದೆಂದರೆ ಸುಲಭಸಾಧ್ಯವಾದದ್ದಲ್ಲ . ಹಿಂದಿನ ಯುಗಗಳಲ್ಲಿ ಇಡಿಯ ಭೂಮಂಡಲಕ್ಕೆಲ್ಲ ಒಡೆಯನಾಗಿ ಸಾರ್ವಭೌಮನೆನಿಸಿದ ಒಬ್ಬ ರಾಜನಿರುತ್ತಿದ್ದನು. ಈಗ ಅದೂ ಇಲ್ಲ. ಸಾರ್ವಭೌಮನೂ ಕೂಡ ಕೆಲವೇ ವಿಷಯಗಳಲ್ಲಿ ಪ್ರಜೆಗಳ ಒಡೆಯನಾಗಿರುತ್ತಿದ್ದನು. ಆದರೆ ಪ್ರತಿಯೊಬ್ಬ ಜೀವಿಯ ಹುಟ್ಟುಸಾವುಗಳು, ಸುಖದುಃಖಗಳು, ವಿದ್ಯಾವಿದ್ಯೆಗಳಿಗೇನೂ ಅವನು ಪ್ರಭುವಾಗುವದು ಸಾಧ್ಯವಿರಲಿಲ್ಲ. ಅಥವಾ ಹಿಂದಿನ, ಈಗಿನ, ಮುಂದಿನ ಕಾಲದ ಎಲ್ಲಾ ಪ್ರಜೆಗಳಿಗೂ ಪ್ರಾಣಿಗಳಿಗೂ ಒಡೆಯನಾಗುವದೂ ಅವನಿಂದ ಸಾಧ್ಯವಿರಲಿಲ್ಲ . ಪರಮಾತ್ಮನಾದರೊ, ಎಲ್ಲ ಪ್ರಾಣಿಗಳ ಎಲ್ಲಾ ಆಗುಹೋಗುಗಳಿಗೂ ಒಡೆಯನಾಗಿ ತ್ರಿಕಾಲದಲ್ಲಿಯೂ ಇದ್ದುಕೊಂಡಿರುವ ಭೂತಭವ್ಯಭವನ್ನಾಥನು. ನಿಜವಾದ ಸಾರ್ವಭೌಮನೆಂದರೂ ಮಹಾರಾಜನೆಂದರೂ ಇವನೊಬ್ಬನೇ. ಆದ್ದರಿಂದಲೇ ವೈದಿಕರು ದೇವರಿಗೆ ಮಂಗಳಾರತಿಯ ಅನಂತರ ಸ್ತೋತ್ರಮಾಡುವ ಮಂತ್ರಪುಷ್ಪವೆಂಬ ಉಪಚಾರಕ್ಕಾಗಿ ಬಳಸುವ ವೇದಭಾಗದಲ್ಲಿ "ರಾಜಾಧಿರಾಜಾಯ ಪ್ರಸಹ್ಯ ಸಾಹಿನೇ" ಎಂದು ಪಠಿಸುತ್ತಾರೆ. ಈತನೊಬ್ಬನೇ ರಾಜಾಧಿರಾಜನು. ಈತನ ಅಪ್ಪಣೆಯಿಲ್ಲವಾದರೆ ಒಂದು ಹುಲ್ಲುಕಡ್ಡಿಯೂ ಅಲ್ಲಾಡಲಾರದು. ವಾಯು, ಅಗ್ನಿ–ಮೊದಲಾದ ದೇವತೆಗಳೂ ಕೂಡ ಈತನ ಭಯದಿಂದಲೇ ತಮ್ಮತಮ್ಮ ಕಾರ್ಯಗಳಲ್ಲಿ ತೊಡಗುತ್ತಾರೆಂದು ತೈತ್ತಿರೀಯೋಪನಿಷತ್ತಿನಲ್ಲಿದೆ. ಇಂಥ ಮಹಾಪ್ರಭುವಾದ ಪರಮಾತ್ಮನಿಗೇ ನಾವು ಹವಿಸ್ಸುಗಳನ್ನು ಅರ್ಪಿಸಿ ವಂದಿಸುವೆವು–ಎಂದಭಿಪ್ರಾಯ.

**ಓಂ ॥ ಯ ಆತ್ಮದಾ ಬಲದಾ ಯಸ್ಯ ವಿಶ್ವ**
**ಉಪಾಸತೇ ಪ್ರಶಿಷಂ ಯಸ್ಯ ದೇವಾಃ ।**

ಯಸ್ಯ ಛಾಯಾಮೃತಂ ಯಸ್ಯ ಮೃತ್ಯುಃ
ಕಸ್ಮೈ ದೇವಾಯ ಹವಿಷಾ ವಿಧೇಮ ||19||

''ಯಾವನು ಜೀವಾತ್ಮನನ್ನು ಉಂಟುಮಾಡುವನೋ, ಹಾಗೂ ಬಲವನ್ನು ನೀಡುವನೋ, ಯಾವನ ಆಜ್ಞೆಯನ್ನು ದೇವತೆಗಳು ಪರಿಪಾಲಿಸುವರೋ ಯಾವನ ಛಾಯೆ–ಎಂದರೆ ಶರಣಾಗತಿಯು ಜೀವರಿಗೆ ಅಮೃತವೋ, ಹಾಗಿಲ್ಲವಾದರೆ ಮೃತ್ಯುವಿಗೇ ಕಾರಣವಾಗುವದೋ ಅಂಥ ದೇವನನ್ನು ಹೊರತಾಗಿ ಬೇರೆ ಯಾರಿಗೆ ಹವಿರರ್ಪಣೆಯನ್ನು ಮಾಡೋಣ?'' ಎಂದು ಅರ್ಥ. ಪರಮಾತ್ಮನಿಂದಲೇ ಜೀವರುಗಳೆಲ್ಲರೂ ಹುಟ್ಟುತ್ತಾರೆ–ಎಂದು ಮುಂಡಕೋಪನಿಷತ್ತಿನಲ್ಲಿಯೂ ಬೃಹದಾರಣ್ಯಕೋಪನಿಷತ್ತಿನಲ್ಲಿಯೂ ವಿವರಿಸಿದೆ. ಪ್ರಾಣ, ಮನೋಬುದ್ಧೀಂದ್ರಿಯಗಳಿಂದಾರಂಭಿಸಿ ಆಕಾಶಾದಿ ಪಂಚಮಹಾಭೂತಗಳೊಡನೆ ಎಲ್ಲವೂ ಆತ್ಮನಿಂದಲೇ ಹುಟ್ಟುವವು. ವ್ಯವಹಾರ ದೃಷ್ಟಿಯಿಂದ ಆತ್ಮನೇ ಎಲ್ಲಾ ಜೀವರುಗಳ ಪರಮಜೀವನು. ಹಾಗೆಯೇ ಎಲ್ಲಕ್ಕೂ ಬಲಪ್ರದನು. ಪುಷ್ಟಿವರ್ಧನನೂ ಆಗಿರುವನು. ಈ ಭಗವಂತನ ಆಳ್ವಿಕೆಗೆ ಒಳಪಟ್ಟು ಈತನ ಆಣತಿಯಂತೆ ದೇವತೆಗಳೆಲ್ಲರೂ ನಡೆದುಕೊಳ್ಳುವರು. ಅಧ್ಯಾತ್ಮ, ಅಧಿಭೂತ, ಅಧಿದೈವ – ಎಂದು ವಿಂಗಡವಾಗಿರುವ ಬ್ರಹ್ಮಾಂಡದಲ್ಲಿ ವ್ಯಾಪಿಸಿರುವ ದೇವತೆಗಳೆಲ್ಲರೂ ಇವನಿಗೆ ಅಧೀನರು ಎಂದರ್ಥ. ಮತ್ತು ಈತನನ್ನು ಆಶ್ರಯಿಸಿದವರು ಉದ್ಧಾರವಾಗುವರು. ತಿರಸ್ಕರಿಸಿದವರು ಇಲ್ಲವಾಗುವರು. 'ಬ್ರಹ್ಮವನ್ನು ಇಲ್ಲವೆಂದವನು ತಾನೇ ಇಲ್ಲವಾಗುವನು' ಎಂದು ಶ್ರುತಿಯಲ್ಲಿದೆ. ಹೀಗಿರುವಲ್ಲಿ ಈ ದೇವನನ್ನು ಬಿಟ್ಟು ಮಾನವನು ಹೇಗೆ ಕೃತಾರ್ಥನಾಗಬಲ್ಲನು? ಆದ್ದರಿಂದ ಭಗವಂತನನ್ನು ಮರೆಯುವದೇ ಪ್ರಮಾದವು. ಅದೇ ಮೃತ್ಯುವೆನಿಸುವದು. ಅದರ ಬದಲಾಗಿ ಆತನನ್ನು ನೆನೆದು ಬಳಿಸಾರುವದೇ ಅಮೃತವೆನಿಸುವದು. ಇಂಥ ಭಗವಂತನ ಹೊರತಾಗಿ ಯಾರಿಗೆ ಹವಿರರ್ಪಣೆಯನ್ನು ಮಾಡೋಣ? ಎಂದಭಿಪ್ರಾಯ.

ಓಂ || ಯಸ್ಯೇಮೇ ಹಿಮವಂತೋ ಮಹಿತ್ವಾ
ಯಸ್ಯ ಸಮುದ್ರಗ್ಂ ರಸಯಾ ಸಹಾಽಽಹುಃ |
ಯಸ್ಯೇಮಾಃ ಪ್ರದಿಶೋ ಯಸ್ಯ ಬಾಹೂ
ಕಸ್ಮೈ ದೇವಾಯ ಹವಿಷಾ ವಿಧೇಮ ||20||

''ಈ ಭೂಮಂಡಲದಲ್ಲಿರುವ ಹಿಮವಂತನೇ ಮೊದಲಾದ ಪರ್ವತಗಳೆಲ್ಲವೂ ಯಾವ ಪರಮಾತ್ಮನ ವಿಭೂತಿಗಳೋ ಮತ್ತು ರಸಯಾ–ಎಂದರೆ ಗಂಗಾದಿತೀರ್ಥ

ಗಳೊಡನೆ ಸಮುದ್ರವೆಲ್ಲವೂ ಯಾವನ ಮಹಿಮೆಯೋ, ಪೂರ್ವಾದಿ ದಿಕ್ಕುಗಳೂ ಆಗ್ನೇಯಾದಿ ವಿದಿಕ್ಕುಗಳೂ ಯಾವನ ಬಾಹುಗಳೋ ಆ ದೇವನನ್ನು ಹೊರತಾಗಿ ಯಾವನಿಗೆ ತಾನೆ ನಾವು ಹವಿರರ್ಪಣೆಯನ್ನು ಮಾಡೋಣ?'' ಎಂದರ್ಥ. ಈ ಮಂತ್ರದಲ್ಲಿ ನದೀನದಪರ್ವತಗಳೆಲ್ಲವೂ ಭಗವಂತನ ವಿಭೂತಿಗಳೇ–ಎಂದು ತಿಳಿಸಿದೆ. ನಾವು ಭಗವಂತನನ್ನು ನೋಡುವದು ದುರ್ಲಭವಾದರೂ ಆತನ ಮಹಿಮೆಗಳಾದ ತೀರ್ಥ–ನದೀ–ಪರ್ವತಾರಣ್ಯಗಳನ್ನು ಧಾರಾಳವಾಗಿ ನೋಡಬಹುದು. ಆದರೆ ಇವುಗಳು ಆತನ ವಿಭೂತಿಗಳೇ ಎಂಬ ತಿಳಿವಳಿಕೆಯು ಮಾತ್ರ ಬೇಕಾಗುವದು. ಹಿಮಾಲಯವನ್ನು ಬಹುಜನರು ನೋಡಿರಬಹುದಾದರೂ ಅವನಲ್ಲಿ ಭಗವಂತನ ವಿಭೂತಿಯನ್ನು ಕಂಡುಕೊಂಡಿರುವವರು ವಿರಳರೇ ಸರಿ. ಈಗಿನ ನಾಗರಿಕತೆಯ ಪರಿಣಾಮವಾಗಿ ನದಿಗಳೂ, ಕಾಡುಗಳೂ, ಸಮುದ್ರಗಳೂ ಅಪವಿತ್ರವಾಗುತ್ತಿವೆ. ದುರುಪಯೋಗವೂ ಆಗುತ್ತಿವೆ. ಮಾನವನ ದುರಾಶೆ, ಸ್ವಾರ್ಥತೆಗಳೇ ಇದಕ್ಕೆ ಕಾರಣ. ಹೀಗಿರುವಲ್ಲಿ ಮನುಷ್ಯನು ವಿಭೂತಿಗಳನ್ನು ಕಾಣುವದು ಹೇಗೆ ಸಾಧ್ಯವಾದೀತು? ದೊಡ್ಡದೊಡ್ಡ ಗೌರವಾನ್ವಿತ ರಾಷ್ಟ್ರಗಳು–ಎನ್ನಿಸಿಕೊಂಡವರು ಕೂಡ ಸಮುದ್ರಗಳನ್ನು ವಿಷಮಯವಾದ ಶಸ್ತ್ರಾಸ್ತ್ರಗಳ ಪರೀಕ್ಷೆಗೆ ದುರುಪಯೋಗಮಾಡುತ್ತಿರುವರು. ಇವು ಭಗವಂತನ ವಿಭೂತಿಗಳು–ಎಂಬ ಭಾವನೆಯುಂಟಾದರೆ ಹೀಗೆ ಮಾಡಲಾದೀತೆ? ನಿಜವಾಗಿಯೂ ಸಮುದ್ರ, ನದಿ, ಪರ್ವತಗಳನ್ನು ದೇವರು ಮಾನವನ ಉದ್ಧಾರಕ್ಕಾಗಿ ಸೃಷ್ಟಿಸಿರುತ್ತಾನೆ. ಈಗಲೂ ಜನರು ತಮ್ಮ ಪಾಪಪರಿಹಾರಕ್ಕಾಗಿ ಗಂಗಾದಿ ನದಿಗಳಲ್ಲಿ ಸ್ನಾನ ಮಾಡುವರು. ಬೆಟ್ಟಗಳನ್ನೇರಿ ದೇವರ ದರ್ಶನವನ್ನು ಮಾಡುವರು. ತೀರ್ಥಕ್ಷೇತ್ರಗಳಿಗೆ ಪಾದಯಾತ್ರೆಯನ್ನು ಕೈಗೊಳ್ಳುವರು. ಇವಕ್ಕೆಲ್ಲ ಕಾರಣವೆಂದರೆ ಇಲ್ಲಿ ತಿಳಿಸಿದಂತೆ ಆಯಾ ತೀರ್ಥ–ಕ್ಷೇತ್ರ–ಅರಣ್ಯಾದಿಗಳು ಭಗವಂತನ ವಿಭೂತಿಗಳಾಗಿರುವದೇ ಆಗಿದೆ. 'ಸ್ಥಾವರಗಳಲ್ಲಿ ನಾನು ಹಿಮಾಲಯವು' ಎಂದೂ 'ನದಿಗಳಲ್ಲಿ ಗಂಗೆಯು ನಾನು' ಎಂದೂ ಗೀತೆಯಲ್ಲಿ ಭಗವಂತನೇ ತಿಳಿಸಿರುತ್ತಾನೆ. ಹೀಗೆ ದಿಕ್ಕುವಿದಿಕ್ಕುಗಳನ್ನೆಲ್ಲ ತುಂಬಿದವನಾಗಿಯೂ ಸ್ಥೂಲವಾದ ಸ್ಥಾವರರೂಪದಿಂದ ಗೋಚರನಾಗಿಯೂ ಜನರನ್ನು ಉದ್ಧರಿಸುತ್ತಿರುವ ಭಗವಂತನಿಗೆ ನಮ್ಮ ಹವಿರರ್ಪಣೆಯನ್ನು ಮಾಡುವೆವು–ಎಂದು ಸ್ತುತಿಸಲಾಗಿದೆ.

ಓಂ ॥ ಯಂ ಕ್ರಂದಸೀ ಅವಸಾ ತಸ್ತಭಾನೇ
ಅಭ್ಯೈಕ್ಷೇತಾಂ ಮನಸಾ ರೇಜಮಾನೇ ।
ಯತ್ರಾಧಿ ಸೂರ ಉದಿತೌ ವ್ಯೇತಿ
ಕಸ್ಮೈ ದೇವಾಯ ಹವಿಷಾ ವಿಧೇಮ ॥21॥

''ಯಾವ ದ್ಯಾವಾಪೃಥಿವಿಗಳ ಅಂತರಾಳದಲ್ಲಿ ಉದಯಿಸಿದ ಸೂರ್ಯನು ಶಿಂಶುಮಾರಚಕ್ರದ ಸುತ್ತಲೂ ತಿರುಗುತ್ತಾ ಇರುವನೋ, ಆ ದ್ಯಾವಾಪೃಥಿವಿಗಳು ಅತಿವೃಷ್ಟಿ, ವಿದ್ಯುತ್ಪಾದಾದಿಗಳಿಂದ ಪ್ರಾಣಿಗಳ ಕ್ರಂದನಕ್ಕೆ ಎಂದರೆ ವಿನಾಶಕ್ಕೆ ಹೇತುಗಳಾಗಿವೆಯೋ, ಮತ್ತು ಅವಸಾ–ಎಂದರೆ ಅನ್ನದಿಂದ, ತಸ್ತಭಾನೇ–ಜೀವರ ಸ್ಥಿತಿಯನ್ನೂ ಉಂಟುಮಾಡುತ್ತಿವೆಯೋ–ಹೀಗೆ ಜಗತ್ತಿನ ಉತ್ಪತ್ತಿಸ್ಥಿತಿಲಯ ಕಾರಣಭೂತವಾಗಿವೆಯೋ ಅಂಥ ಈ ಲೋಕಗಳು ಯಾವ ಪರಮಾತ್ಮನನ್ನೇ ಧ್ಯಾನಿಸುವಂತೆ ನಿಶ್ಚಲವಾಗಿ ಪ್ರತಿಷ್ಠಿತವಾಗಿರುವವೋ ಆ ಭಗವಂತನಲ್ಲದೆ ಬೇರೆ ಯಾರಿಗೆ ಹವಿರರ್ಪಣೆಯನ್ನು ಮಾಡೋಣ?'' ಎಂದು ಅಭಿಪ್ರಾಯ. ಈ ಮಂತ್ರದಲ್ಲಿ ದ್ಯುಲೋಕ–ಪೃಥಿವೀಲೋಕಗಳ ಪ್ರಸ್ತಾಪವಿದೆ. ಈ ಲೋಕಗಳಲ್ಲಿ ಸುರನರತಿರ್ಯಗಾದಿ ಜೀವರುಗಳು ವಾಸಿಸುವರು. ಪ್ರತಿಯೊಂದು ಜೀವಿಯ ಹುಟ್ಟು–ಜೀವನ–ಸಾವುಗಳು ಈ ಲೋಕಗಳಲ್ಲಿ ನಿಯತವಾಗಿ ಆಗುತ್ತಿರುವವು. ಆದರೆ ಈ ಲೋಕವ್ಯಾಪಾರಗಳು ಯಾವನೊಬ್ಬ ಪ್ರೇರಕನಿಲ್ಲದೆ ನಡೆಯಲಾರವು. ಏಕೆಂದರೆ ಭೋಕ್ತೃಭೋಗ್ಯರೂಪದಿಂದ ಹರಡಿಕೊಂಡಿರುವ ಈ ಜಗತ್ತು ಪ್ರೇರಕನಿಗೆ ಅಧೀನವಾಗಿರುವದು. ಸೂರ್ಯನಂಥ ದೇವತೆಯು ಕೂಡ ಆವಿರ್ಭಾವತಿರೋಭಾಗಳುಳ್ಳವನೇ ಆಗಿರುವನು. ಹೀಗೆ ಎಲ್ಲಾ ಜೀವರಾಶಿಗಳಲ್ಲೂ ಪ್ರೇರಕನಾಗಿದ್ದುಕೊಂಡು ನಿಯಂತ್ರಣಮಾಡುತ್ತಿರುವ ಪರಮಾತ್ಮನು ಈ ಲೋಕಗಳಲ್ಲೆಲ್ಲ ಮೀರಿದವನಾಗಿ ಮೇಲಿರುವನು. ಇವನನ್ನೇ ಕಣ್ಣಿಗೆ ಕಣ್ಣಾಗಿ ಕಿವಿಗೆ ಕಿವಿಯಾಗಿರುವನೆಂದು ಕೇನೋಪನಿಷತ್ತಿನಲ್ಲಿ ತಿಳಿಸಿದೆ. ಇಂಥ ಭಗವಂತನು ದ್ಯುಲೋಕಾದ್ಯಭಿಮಾನಿದೇವತೆಗಳಿಂದ ಯಾವಾಗಲೂ ಚಿಂತಿಸಲ್ಪಡುತ್ತಿರುವನು. ಇವನನ್ನೇ ನಾವು ಹವಿಸ್ಸುಗಳಿಂದ ಆರಾಧಿಸುವೆವು–ಎಂದು ಸ್ತೋತ್ರಮಾಡಿದೆ.

**ಓಂ ॥ ಯೇನ ದ್ಯೌರುಗ್ರಾ ಪೃಥಿವೀ ಚ ದೃಢೇ**
**ಯೇನ ಸುವಃ ಸ್ತಭಿತಂ ಯೇನ ನಾಕಃ ।**
**ಯೋ ಅಂತರಿಕ್ಷೇ ರಜಸೋ ವಿಮಾನಃ**
**ಕಸ್ಮೈ ದೇವಾಯ ಹವಿಷಾ ವಿಧೇಮ ॥22॥**

''ಯಾವ ಪರಮಾತ್ಮನಿಂದ ಉಗ್ರವಾದ ಎಂದರೆ ಸಿಡಿಲು ಮುಂತಾದ ವಿಕಾರಗಳಿಂದ ಭಯಂಕರವಾದ ದ್ಯುಲೋಕವೂ ಮತ್ತು ಪ್ರಾಣಿವಾಸಕ್ಕೆ ಆಧಾರವಾದ ಪೃಥಿವೀಲೋಕವೂ ದೃಢೇ–ಸ್ಥಿತಿಕಾಲದಲ್ಲಿ ಜೀವರುಗಳ ಪಾಲನೆಗಾಗಿ ದೃಢವಾಗಿ ಸ್ಥಾಪಿಸಲ್ಪಟ್ಟಿರುವವೋ, ಮತ್ತು ಸುವಃ–ಎಂದರೆ ಆದಿತ್ಯಲೋಕವೂ ಅಂತರಿಕ್ಷದಲ್ಲಿಯೇ, ಸ್ತಭಿತಂ–ನಿರಾಧಾರವಾಗಿ ಸ್ಥಾಪಿಸಲ್ಪಟ್ಟಿದೆಯೋ ಭೂಮಿಯ ಮೇಲೆ ಬೀಳದಂತೆ

ತಡೆಹಿಡಿಯಲ್ಪಟ್ಟಿದೆಯೋ–ಮತ್ತು ಯಾವ ಭಗವಂತನು ನಾಕ–ಎಂದರೆ ಸ್ವರ್ಗಲೋಕವನ್ನು ಸಹ, ಪ್ರಾಣಿಗಳ ಪುಣ್ಯೋಪಭೋಗಕ್ಕಾಗಿ ನೆಲೆಗೊಳಿಸಿರುವನೋ– ಮತ್ತು ಅಂತರಿಕ್ಷದಲ್ಲಿ ರಜಸಃ–ಎಂದರೆ ಮಳೆಯರೂಪವಾದ ಜಲದ, **ವಿಮಾನಃ**– ಸೃಷ್ಟಿಕರ್ತನಾಗಿರುವನೋ ಅಂಥ ದೇವನನ್ನು ಹೊರತು ಬೇರೆ ಯಾರಿಗೆ ಹವಿರರ್ಪಣೆಯನ್ನು ಮಾಡೋಣ?'' ಎಂದಭಿಪ್ರಾಯ. ಈ ಮಂತ್ರದಲ್ಲಿ ಲೋಕಧಾರಣೆಗಳೆಂಬ ಪರಮಾತ್ಮನ ಮಹಿಮೆಯನ್ನು ಕೊಂಡಾಡಿದೆ. ಬಾದರಾಯಣ ಸೂತ್ರಗಳಲ್ಲಿ 'ಧೃತೇಶ್ಚ ಮಹಿಮ್ನಃ......' ಎಂಬಲ್ಲಿ ಈ ವಿಚಾರವಿದೆ. ಲೋಕಗಳ ಸೃಷ್ಟಿಯೇ ಸಾಮಾನ್ಯರ ಬುದ್ಧಿಗೆ ಎಟಕುವಂತಿಲ್ಲ. ಇನ್ನು ಅವುಗಳ ಧಾರಣೆಯಂತೂ ತರ್ಕಾತೀತವಾಗಿರುತ್ತದೆ. ಹೇಗೆಂದರೆ ಅತ್ಯಂತ ಭಾರವಾಗಿರುವ ಈ ಪೃಥಿವಿಯು ನೀರಿನಲ್ಲಿ ಮುಳುಗದಂತೆ ಹಿಡಿದಿಟ್ಟಿರುವವನು ಯಾರು? ಹಾಗೆಯೇ ಅದು ಮುಳುಗಿದ್ದರೂ ತೇಲದಂತೆ ಒಂದೇ ಕಡೆಯಲ್ಲಿ ದೃಢವಾಗಿ ನೆಲೆನಿಂತಿರುವಂತೆ ಮಾಡಿರುವವನು ಯಾರು? ಇನ್ನು ಆದಿತ್ಯನನ್ನು ಅಂತರಿಕ್ಷದಲ್ಲಿ ತೂಗುಹಾಕಿರುವದು, ಅಂತರಾಳದಲ್ಲಿ ಜಲವನ್ನು ಉಂಟುಮಾಡುವದು, ಮೇಲ್ಭಾಗದಲ್ಲಿ ಸ್ವರ್ಗವನ್ನು ಸ್ಥಾಪಿಸಿ ಪುಣ್ಯಜೀವಿಗಳಿಗೆ ಭೋಗಗಳನ್ನು ಒದಗಿಸಿರುವದು, ಗ್ರಹಮಂಡಲಗಳೂ ನಕ್ಷತ್ರಗಳೂ ತಮ್ಮತಮ್ಮ ಪಥದಲ್ಲಿ ಚಲಿಸುವಂತೆ ನೇಮಕಮಾಡಿರುವದು–ಇತ್ಯಾದಿ ಸೃಷ್ಟಿವೈಚಿತ್ರ್ಯಗಳೆಲ್ಲವನ್ನೂ ಉಂಟುಮಾಡಿರುವವನೇ ಭಗವಂತನು. ಶ್ರೀಶಂಕರಾಚಾರ್ಯರು ಒಂದು ಕಡೆ ಹೀಗೆ ಬರೆದಿದ್ದಾರೆ; ''ಪರಮಾತ್ಮನ ಜಗತ್‌ಸೃಷ್ಟಿಕಾರ್ಯವನ್ನು ಪರಿಶೀಲಿಸಿದಾಗ ಜಗತ್ತು ಕಾರ್ಯಕಾರಣಭಾವದಿಂದಲೂ ನಿಯತವಾದ ದೇಶಕಾಲನಿಮಿತ್ತಕ್ರಿಯಾಫಲಗಳಿಂದಲೂ ಹೆಣೆಯಲ್ಪಟ್ಟು–ಎಂಥ ಜಾಣನೂ ತನ್ನ ಬುದ್ಧಿಯಿಂದ ಊಹಿಸಲಾಗದಂಥ ವಿಶಿಷ್ಟರೀತಿಯಲ್ಲಿ ಸಂಘಟಿಸಲ್ಪಟ್ಟಿರುವದನ್ನು ನೋಡಿದರೆ ಆ ಮಹಾಮಹಿಮನು ಎಂಥ ಸರ್ವಜ್ಞನೂ ಸರ್ವಶಕ್ತನೂ ಆಗಿರಬೇಕೆಂಬುದರ ಅರಿವಾಗುವದು'' ಎಂದು ತಿಳಿಸಿದ್ದಾರೆ. ಇದೇ ಭಗವಂತನ ಮಹಿಮೆಯು, ಆತನಾದರೊ, ಈ ಮಹಿಮೆಯನ್ನೆಲ್ಲ ತುಂಬಿರುವನಲ್ಲದೆ ಇದನ್ನು ದಾಟಿಯೂ ಇದ್ದುಕೊಂಡಿರುವನು. ಇಂಥ ದೇವನಿಗೆ ಹವಿರರ್ಪಣೆಯನ್ನು ಮಾಡುವೆವು–ಎಂದಭಿಪ್ರಾಯ.

ಓಂ ॥ ಆಪೋ ಹ ಯನ್ಮಹತೀರ್ವಿಶ್ವಮಾಯಂ
ದಕ್ಷಂ ದಧಾನಾ ಜನಯಂತೀರಗ್ನಿಮ್ ।
ತತೋ ದೇವಾನಾಂ ನಿರವರ್ತತಾಸುರೇಕಃ
ಕಸ್ಮೈ ದೇವಾಯ ಹವಿಷಾ ವಿಧೇಮ ॥

ಯಾವಾಗ ಆ ಭಗವಂತನು ಜಗತ್ತನ್ನು ಉಂಟುಮಾಡಬೇಕೆಂದು ಸಂಕಲ್ಪಿಸಿದನೋ ಆಗ ಮಹತೀಃ–ಎಂದರೆ ಪೂಜಾರ್ಹವಾದ ಜಲವನ್ನು ಮೊದಲು ಸೃಷ್ಟಿಸಿದನು. ಅವು ಪ್ರಾಣಿಸೃಷ್ಟಿಕರ್ಮದಲ್ಲಿ ದಕ್ಷ (ಸಮರ್ಥ)ವಾಗಿದ್ದವು. ಹಾಗೂ ಮುಂದೆ ಅವೇ ಅಗ್ನಿಯನ್ನು ಉಂಟುಮಾಡಿದವು. ಇಂಥ ಜಲನ್ಮೂಲನಾದ ಆತನು ತಾನೊಬ್ಬನೇ ಆಗಿದ್ದುಕೊಂಡು ದೇವತೆಗಳೆಲ್ಲರನ್ನೂ ಪ್ರಾಣನಾದಿ ಕ್ರಿಯೆಗಳನ್ನು ಮಾಡುವಂತೆ ಪ್ರೇರಿಸಿದನು. ಇಂಥ ದೇವನಿಗೆ ನಾವು ಹವಿರರ್ಪಣೆಯನ್ನು ಮಾಡುವೆವು–ಎಂದಭಿಪ್ರಾಯ. ಈ ಮಂತ್ರದಲ್ಲಿ ಜಲತತ್ತ್ವವನ್ನು ಭಗವಂತನು ಮೊಟ್ಟ ಮೊದಲು ಉಂಟುಮಾಡಿದನೆಂಬುದು ವಿವಕ್ಷಿತವಾಗಿದೆ. ನೀರು ಸಕಲಪ್ರಾಣಿಗಳ ಪ್ರಾಣಾಧಾರ ವಾಗಿದೆ. ಪ್ರಾಣಗಳು ನೀರನ್ನು ಬಿಟ್ಟು ಇರಲಾರವು. ಆದ್ದರಿಂದಲೇ ಪ್ರಾಣಿಗಳೆಲ್ಲವೂ ನೀರಾದ ವೀರ್ಯದಿಂದಲೇ ಹುಟ್ಟುವವು. ಸೃಷ್ಟಿಯಲ್ಲಿ ಮೊದಲನೆಯ ಪದಾರ್ಥವೇ ಜಲವು. ಪ್ರಳಯವಾದಾಗಲೂ ಜಗತ್ತೆಲ್ಲವೂ ಜಲಮಯವಾಗಿರುತ್ತದೆ–ಎಂದು ಪುರಾಣಗಳಲ್ಲಿ ವರ್ಣಿಸಿದೆ. ಜಲದಿಂದ ಅಗ್ನಿಯೂ ಉಂಟಾಗುತ್ತದೆ. ಜಲಪಾತಗಳಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವದು ಪ್ರಸಿದ್ಧವಾಗಿದೆ. ಜಲದಲ್ಲಿ ಅಗ್ನಿಯು ಅಡಗಿರುವದರಿಂದಲೇ ಬೆತ್ತಲೆಯಾಗಿ ನೀರಿನಲ್ಲಿ ಮುಳುಗಿ ಸ್ನಾನಮಾಡಬಾರದೆಂದು ಹೇಳುತ್ತಾರೆ. ಹೀಗೆ ಯಾವ ಜಲವು ಮೊಟ್ಟಮೊದಲು ಪರಮಾತ್ಮನಿಂದುಂಟಾಯಿತೋ ಅದೇ ಮುಂದೆ ಜಗತ್ತಿಗೆ ಬೀಜವಾಯಿತೋ ಅಂಥ ಜಲಕ್ಕೂ ಮೂಲನಾದ ಮತ್ತು ಉಳಿದ ದೇವತೆಗಳಿಗೂ ಪ್ರಾಣಾಧಾರನೂ ನಿಯಾಮಕನೂ ಆದ ದೇವನಿಗೆ ನಾವು ಹವಿರರ್ಪಣೆಯನ್ನು ಮಾಡುವೆವು–ಎಂದಭಿಪ್ರಾಯ.

ಓಂ॥ ಯಶ್ಚಿದಾಪೋ ಮಹಿನಾ ಪರ್ಯಪಶ್ಯದ್
ದಕ್ಷಂ ದಧಾನಾ ಜನಯಂತೀರಗ್ನಿಮ್ ।
ಯೋ ದೇವೇಷ್ವಧಿ ದೇವ ಏಕ ಆಸೀತ್
ಕಸ್ಮೈ ದೇವಾಯ ಹವಿಷಾ ವಿಧೇಮ ॥

'ಶ್ರೌತಸ್ಮಾರ್ತಕರ್ಮಾನುಷ್ಠಾನ ಸಮರ್ಥವಾದ ಅಗ್ನಿಯನ್ನು ಉಂಟುಮಾಡುವ ಜಲವನ್ನು ಯಾವ ದೇವನು ತನ್ನ ಮಹಿಮೆಯಿಂದ ಸಂಪಾದಿಸಿ ಪ್ರಾಣಿಗಳಿಗೆ ಜೀವನಸಾಧನವಾಗಿ ಮಾಡಿದನೋ ಮತ್ತು ಯಾವನು ದೇವತೆಗಳಲ್ಲೆಲ್ಲ ಹೆಚ್ಚಿನವನಾಗಿ ತಾನೊಬ್ಬನೇ ಇದ್ದುಕೊಂಡಿರುವನೋ ಅವನಿಗಲ್ಲದೆ ಮತ್ತೆ ಯಾರಿಗೆ ನಾವು ಹವಿರರ್ಪಣೆಯನ್ನು ಮಾಡೋಣ?' ಎಂದಭಿಪ್ರಾಯ. ಸಮುದ್ರದ ನೀರಿನಲ್ಲಿ ವಡವಾಗ್ನಿಯು ವಾಸಿಸುತ್ತಿರುವನೆಂದು ಪುರಾಣಗಳಲ್ಲಿ ವರ್ಣಿಸಿದೆ. ಆದ್ದರಿಂದ ನೀರಿನಲ್ಲಿ

ಈ ಕಾರಣದಿಂದಲೂ ಅಗ್ನಿಯಿದೆ–ಎಂದಾಯಿತು. ಅಗ್ನಿಗೆ ಅನೇಕ ರೂಪಗಳಿವೆ. ಯಾವ ಯಜ್ಞಾದಿಕರ್ಮಗಳೇ ಆಗಲಿ, ಅಗ್ನಿಯಿಲ್ಲದೆ ಆಗುವಂತಿಲ್ಲ. ಏಕೆಂದರೆ ಆಹುತಿಗಳನ್ನೆಲ್ಲ ಅಗ್ನಿಯಲ್ಲಿಯೇ ಅರ್ಪಿಸಬೇಕಾಗುತ್ತದೆ. ಅಷ್ಟೇ ಅಲ್ಲ. ಪದಾರ್ಥಗಳನ್ನು ಬೇಯಿಸಿ ಹವಿಸ್ಸಾಗಿ ಪರಿವರ್ತಿಸುವವನೂ ಅವನೇ. ಪ್ರಾಣಿಗಳ ಹೊಟ್ಟೆಯಲ್ಲಿದ್ದು ಆಹಾರವನ್ನು ಪಚನಮಾಡುವವನೂ ಅವನೇ ಆಗಿರುತ್ತಾನೆ. ಔಷ್ಣ್ಯವಿಲ್ಲದೆ ಸೃಷ್ಟಿಯಿಲ್ಲ; ಜೀವನವಿಲ್ಲ. ಇಂಥ ಅಗ್ನಿಯಲ್ಲಿಯೂ ಪರಮಾತ್ಮನೇ ವ್ಯಾಪಿಸಿಕೊಂಡಿರುವನು. ಹೀಗೆ ವಿಚಾರಿಸಿದರೆ ವಾಯು, ಜಲ, ಅಗ್ನ್ಯಾದಿದೇವತೆಗಳ ರೂಪದಿಂದಲೂ ಭಗವಂತನೇ ತೋರಿಕೊಳ್ಳುತ್ತಿರುವನೆಂದು ಗೊತ್ತಾಗುವದು. ಆದ್ದರಿಂದ ಅವನು ದೇವಾಧಿದೇವನೆನಿಸುವನು. ಅವನಿಗೇ ನಾವು ಅಗ್ನಿಯ ಮೂಲಕ ಹವಿರರ್ಪಣೆ ಮಾಡುವೆವು. ಇಷ್ಟಾಪೂರ್ತಕರ್ಮಗಳನ್ನೆಲ್ಲ ಭಗವಂತನ ಪ್ರೀತಿಗಾಗಿಯೇ ಮಾಡತಕ್ಕದ್ದು ಹೆಚ್ಚಿನದು ಸರಿ. ಪಾಕಯಜ್ಞಗಳು ಏಳು. ಹವಿರ್ಯಜ್ಞಗಳು ಏಳು, ಸೋಮಸಂಸ್ಥೆಗಳು ಏಳು–ಈ ರೀತಿಯಾಗಿ ಇಪ್ಪತ್ತೊಂದು ಕರ್ಮಗಳಾಗುವವು. ಇವೆಲ್ಲ ಇಷ್ಟ ಎಂಬ ಪಟ್ಟಿಯಲ್ಲಿ ಅಡಕವಾಗುತ್ತವೆ. ಇನ್ನು ಪೂರ್ತಗಳೆಂದರೆ ಭಾವಿ, ಕೆರೆಗಳನ್ನು ನಿರ್ಮಾಣಮಾಡಿಸುವದು, ದೇವಾಲಯ, ಅನ್ನಸತ್ರ, ಮರಗಳ ತೋಪುಗಳನ್ನು ನಿರ್ಮಿಸುವದು–ಇವೆಲ್ಲವೂ ಸೇರುತ್ತವೆ. ಅಂತೂ ಯಾವದೇ ವಿಧವಾದ ಇಷ್ಟಾಪೂರ್ತಕರ್ಮಗಳಿರಲಿ–ಇವೆಲ್ಲವನ್ನೂ ದೇವದೇವನಾದ ಭಗವಂತನನ್ನು ಕುರಿತಲ್ಲದೆ ಬೇರೆ ಯಾವ ದೇವತೆಗಾಗಿ ಮಾಡಲಾದೀತು? ಭಗವಂತನು ತುಷ್ಟನಾದರೆ ಎಲ್ಲಾ ದೇವತೆಗಳೂ ತೃಪ್ತರಾಗುತ್ತಾರೆ–ಎಂದಭಿಪ್ರಾಯ.

ಈಗ ಮುಂದಿನ ಮಂತ್ರಗಳನ್ನು ವಿಚಾರಮಾಡೋಣಃ

**ಓಂ ॥ ಏಷ ಹಿ ದೇವಃ ಪ್ರದಿಶೋऽನು ಸರ್ವಾಃ ಪೂರ್ವೋ ಹಿ**
**ಜಾತಃ ಸ ಉ ಗರ್ಭೇ ಅಂತಃ । ಸ ವಿಜಾಯಮಾನಃ**
**ಸ ಜನಿಷ್ಯಮಾಣಃ ಪ್ರತ್ಯಙ್ಮುಖಾಸ್ತಿಷ್ಠತಿ ವಿಶ್ವತೋ ಮುಖಃ ॥**

ಈ ಮಂತ್ರ ಹಾಗೂ ಮುಂದಿನ ಮಂತ್ರಗಳಿಂದ ಪರಮಾತ್ಮನು ಸೃಷ್ಟಿಸಿರುವ ಸ್ಥಾವರಜಂಗಮಾತ್ಮಕವಾದ ಜಗತ್ತು ಅವನನ್ನೇ ನೆನಪುಮಾಡಿಕೊಡುತ್ತದೆ ಹಾಗೂ ವ್ಯಕ್ತಗೊಳಿಸುತ್ತದೆ–ಎಂಬಿದನ್ನು ತಿಳಿಸಲಾಗುವದು. ಜ್ಞಾನಿಗಳಿಂದ ಯಾವಾಗಲೂ ಹೃದಯದಲ್ಲಿ ಅನುಭವಿಸಲ್ಪಡುತ್ತಿರುವ ಸ್ವಯಂಪ್ರಕಾಶರೂಪನಾದ **ಈ ದೇವನು, ಪ್ರದಿಶಃ**– ಎಂದರೆ ಪ್ರಕೃಷ್ಟವಾದ ಪೂರ್ವಾದಿದಿಕ್ಕುಗಳನ್ನೆಲ್ಲ ಅನುಪ್ರವೇಶ ಮಾಡಿರುವನು–ಎಂದರೆ ವ್ಯಾಪಿಸಿಕೊಂಡಿರುವನು, **ಹಿ** ಎಂದರೆ ಹಾಗೆಂತ

ಶ್ರುತಿಪ್ರಸಿದ್ಧವಾಗಿದೆ–ಎಂದರ್ಥ. ಮತ್ತು ಹಿರಣ್ಯಗರ್ಭಾದಿಗಳಿಗಿಂತ ಮೊದಲೇ ಇದ್ದುಕೊಂಡಿರುವದರಿಂದ ಅವರುಗಳಿಗಿಂತ **ಪೂರ್ವಜಾತ**ನೆನ್ನಬಹುದಾಗಿದೆ. ಪರಮಾತ್ಮನನ್ನು **ಸದ್ಯೋಜಾತ**ನೆಂದು ಕರೆಯುವಂತೆಯೇ ಇದನ್ನು ತಿಳಿಯಬೇಕು. ಮತ್ತು **ಸ ಉ**–ಎಂದರೆ ಅವನೇ ಬ್ರಹ್ಮಾಂಡದ ಒಳಗೂ ಇದ್ದುಕೊಂಡಿರುವದರಿಂದ **ಗರ್ಭೇ ಅಂತಃ**– ಎಂದು ತಿಳಿಸಿದೆ. ಅವನು ದೇವಾಸುರನರತಿರ್ಯಗಾದಿಪ್ರಾಣಿಗಳ ರೂಪದಿಂದ ವಿಧವಿಧವಾಗಿ ಹುಟ್ಟಿರುವವನಾದ್ದರಿಂದ **ವಿಜಾಯಮಾನ**ನಾಗಿಯೂ ಮುಂದಿನ ಭವಿಷ್ಯತ್ಕಾಲದಲ್ಲಿ ಹುಟ್ಟಲಿರುವ ಪ್ರಾಣಿಗಳಲ್ಲಿಯೂ ವ್ಯಾಪಿಸಿರುವದರಿಂದ **ಜನಿಷ್ಯಮಾಣ**ನಾಗಿಯೂ ಇರುವನು. ಮತ್ತು **ಪ್ರತ್ಯಙ್** ಎಂದರೆ ಅನ್ನಮಯಾಧ್ಯಾತ್ಮರುಗಳಿಗಿಂತ ಒಳಗಿರುವವನಾಗಿ ದೇಹೇಂದ್ರಿಯಗಳಿಗೆ ಒಡೆಯನಾಗಿದ್ದು **ಮುಖ**ಗಳಂತಿರುವ ಇಂದ್ರಿಯದ್ವಾರಗಳಿಂದ ವಿಷಯೋಪಲಬ್ಧಿಯನ್ನು ಮಾಡಿಕೊಳ್ಳುತ್ತಿರುವನು, ಆದ್ದರಿಂದಲೇ **ವಿಶ್ವತೋಮುಖ**ನೆಂದೂ ಈತನನ್ನು ಬಲ್ಲವರು ಕರೆಯುತ್ತಾರೆ. ಹೀಗೆ ಭಗವಂತನು ದೇಹೇಂದ್ರಿಯಾಧ್ಯಕ್ಷನೂ ಪ್ರತ್ಯಗಾತ್ಮನೂ, ಸ್ವಯಂಪ್ರಕಾಶನೂ, ಸರ್ವವ್ಯಾಪಕನೂ ಆಗಿದ್ದುಕೊಂಡು ಜ್ಞಾನಿಗಳಿಗೆ ಯಾವಾಗಲೂ ಅನುಭವಗೋಚರನಾಗುತ್ತಿರುವನೆಂದು ಇಲ್ಲಿ ತಿಳಿಸಿದೆ. ವೈದಿಕರು ಈ ಮಂತ್ರವನ್ನು ಹೋಮಕಾಲಕ್ಕೆ 'ಅಗ್ನಿಮುಖ' ಎಂಬ ಕರ್ಮವನ್ನು ಮಾಡುವಾಗ ಅಗ್ನಿಯನ್ನು ತಮ್ಮ ಕಡೆಗೆ ಎದುರಾಗಿ ಸನ್ನಿಹಿತನಾಗುವಂತೆ ಕೇಳಿಕೊಳ್ಳುವದಕ್ಕೆ ಪ್ರಾರ್ಥನಾಮಂತ್ರವಾಗಿಯೂ ಬಳಸುತ್ತಾರೆ. ಅದೂ ಸೂಕ್ತವಾಗಿದೆ. ಬೆಂಕಿಯು ಉರಿಯುತ್ತಿರುವಾಗ ಅದಕ್ಕೆ ಮುಖವು ಯಾವದು? ಎಂದು ಕೇಳಿದರೆ ಹೇಳಲು ಬರುವದಿಲ್ಲ, ಕೇಳುವವನಿಗೆ ಇದಿರಾಗಿದೆ–ಎಂದು ಬೇಕಾದರೆ ಹೇಳಬಹುದು. ಹೀಗೆ ಅಗ್ನಿದೇವನನ್ನು ಪಶ್ಚಿಮಾಭಿಮುಖನಾಗುವಂತೆಯೂ ಪೂರ್ವಾಭಿಮುಖವಾಗಿ ಕುಳಿತಿರುವ ಕರ್ತೃವಿಗೆ ಇದಿರಾಗುವಂತೆಯೂ ಪ್ರಾರ್ಥಿಸುವದಕ್ಕೂ ಈ ಮಂತ್ರವು ವಿನಿಯುಕ್ತವಾಗಿದೆ. ಪರಮಾತ್ಮನೇ ಅಗ್ನಿರೂಪದಿಂದ ಪ್ರತ್ಯಕ್ಷನಾಗಿರುವನು–ಎಂದು ಭಾವನೆ ಮಾಡಿಕೊಂಡರಂತೂ ಅಂಥ ಕರ್ಮವು ಸಾದ್ಗುಣ್ಯವನ್ನು ಹೊಂದುವದರಲ್ಲಿ ಸಂಶಯವಿಲ್ಲ.

**ಓಂ ॥ ವಿಶ್ವತಶ್ಚಕ್ಷುರುತ ವಿಶ್ವತೋ ಮುಖೋ ವಿಶ್ವತೋ ಹಸ್ತ**
**ಉತ ವಿಶ್ವತಸ್ಪಾತ್ । ಸಂ ಬಾಹುಭ್ಯಾಂ ನಮತಿ**
**ಸಂಪತತ್ರೈರ್ದ್ಯಾವಾ ಪೃಥಿವೀ ಜನಯನ್ ದೇವ ಏಕಃ ॥**

ಈ ಮಂತ್ರವೂ ಭಗವಂತನ ಮಹಿಮೆಯನ್ನೇ ಕೊಂಡಾಡುತ್ತದೆ. ಭಗವಂತನು ಸೃಷ್ಟಿಸಿರುವ ಜೀವರಾಶಿಗಳು ಅನಂತವಾಗಿವೆ. ಒಂದೊಂದೂ ವಿಶಿಷ್ಟವಾಗಿದ್ದು ಮತ್ತೊಂದಕ್ಕಿಂತ ವಿಲಕ್ಷಣವಾಗಿದೆ. ಒಂದೇ ಜಾತಿಯ ಜೀವರುಗಳು ಕೂಡ ಒಬ್ಬರಿದ್ದಂತೆ

ಇನ್ನೊಬ್ಬರಿರುವದಿಲ್ಲ. ಹೀಗೆ ಹುಡುಕುತ್ತಾ ಹೋದರೆ ಜಗದ್ವೈಚಿತ್ರ್ಯದ ಆಳವನ್ನು ಕಂಡವನೇ ಇರಲಾರನು. ಹೀಗಿದ್ದರೂ ಈ ಎಲ್ಲಾ ಭೇದವೂ ತಾರತಮ್ಯಗಳೂ ಒಬ್ಬ ದೇವನದೇ ತೋರಿಕೆ ಎಂಬುದು ಅನೇಕರಿಗೆ ತಿಳಿದಿರಲಾರದು. ಉಪನಿಷತ್ತು ಈಗ ಅದನ್ನು ತಿಳಿಸಿಕೊಡುತ್ತಿದೆ. ಈ ಪರಮಾತ್ಮನು ಎಲ್ಲೆಲ್ಲಿಯೂ ಕಣ್ಣು-ಮುಖಗಳುಳ್ಳವನು. ಲೋಕದಲ್ಲಿ ಯಾವಯಾವ ಪ್ರಾಣಿ-ಪಕ್ಷಿಗಳು-ಮನುಷ್ಯ-ದೇವ-ರಾಕ್ಷಸಾದಿ ಜೀವರುಗಳಿರುವರೋ ಆಯಾ ದೇಹಗಳಲ್ಲೆಲ್ಲ ಈತನೇ ಅನುಪ್ರವೇಶ ಮಾಡಿರುವದರಿಂದ ಎಲ್ಲಾ ದೇಹೇಂದ್ರಿಯ ಸಂಘಾತಗಳಿಂದಲೂ ವ್ಯಾಪಾರಮಾಡುವನು ಈತನೇ ಆಗಿರುವನು. ಆದ್ದರಿಂದ ಈತನಿಗೆ ಎಲ್ಲೆಲ್ಲಿಯೂ ಕಣ್ಣುಗಳು, ಮುಖಗಳು, ಕೈಗಳು, ಕಾಲುಗಳು-ಇದ್ದುಕೊಂಡಿವೆ. ಈ ಮಂತ್ರವು ಭಗವದ್ಗೀತೆಯ **'ಸರ್ವತಃ ಪಾಣಿಪಾದಂ ತತ್'** ಎಂಬ ಶ್ಲೋಕವನ್ನು ನೆನಪಿಗೆ ತಂದುಕೊಡುತ್ತದೆ. ಇಂಥ ಭಗವಂತನು **ಬಾಹುಭ್ಯಾಮ್**-ಎಂದರೆ ತೋಳುಗಳಂತಿರುವ ಧರ್ಮಾಧರ್ಮಗಳಿಂದ ಇಡಿಯ ಜಗತ್ತನ್ನು ವಶಪಡಿಸಿಕೊಂಡಿರುವನು. ಧರ್ಮಾಧರ್ಮಗಳನ್ನು ನಿಮಿತ್ತವಾಗಿ ಮಾಡಿಕೊಂಡೇ ಆಯಾ ಜೀವರುಗಳನ್ನು ಅನುಶಾಸನ ಮಾಡುತ್ತಿರುವನು. **ಸಂನಮತಿ** ಎಂಬ ಮಾತಿಗೆ ಹೀಗೆ ಅರ್ಥಮಾಡಬೇಕು. ಮತ್ತು ಈತನು **ಸಂಪತತ್ರೈಃ**- ಪತನಶೀಲವಾದ ಎಂದರೆ ನಾಶವಾಗುವ ಸ್ವಭಾವವುಳ್ಳ ಪಂಚೀಕೃತವಾದ ಆಕಾಶಾದಿಮಹಾಭೂತಗಳಿಂದ ಸಂನಮತಿ-ಜಗತ್ತನ್ನು ಉಂಟುಮಾಡುತ್ತಿರುವನು- ಎಂದಾದರೂ ಅರ್ಥಮಾಡಬಹುದು. ಜಗತ್ತನ್ನೆಲ್ಲ ವ್ಯಾಕರಣಮಾಡಿದ ಮೇಲೂ, ದ್ಯಾವಾಪೃಥಿವಿಗಳನ್ನು ಉಂಟುಮಾಡಿದ ಮೇಲೂ ಇಡಿಯ ಬ್ರಹ್ಮಾಂಡವನ್ನೆಲ್ಲ ತನ್ನಲ್ಲಿಯೇ ಅಡಕಮಾಡಿಕೊಂಡು ಏಕಃ-ತಾನೊಬ್ಬನೇ ಇರುತ್ತಿರುವನು. ಮಣ್ಣಿನ ಮುದ್ದೆಯು ಮಡಿಕೆ, ಕುಡಿಕೆ, ಶ್ರಾವೆಗಳೆಂಬ ಭೇದದಿಂದ ಅನೇಕವಾಗಿ ವ್ಯಾಕೃತವಾದರೂ ಮಣ್ಣೊಂದೇ ಆಗಿರುವಂತೆ ಪರಮಾತ್ಮನೊಬ್ಬನೇ ಎಲ್ಲವೂ ಆಗಿರುವನು. ಈ ಸೃಷ್ಟ್ಯಾದಿಗಳಿಂದ ಅವನ ಏಕತ್ವಕ್ಕೇನೂ ಹಾನಿಯಿಲ್ಲ-ಎಂದಭಿಪ್ರಾಯ.

**ಓಂ ॥ ವೇನಸ್ತತ್ ಪಶ್ಯನ್ ವಿಶ್ವಾಭುವನಾನಿ ವಿದ್ವಾನ್ ಯತ್ರ**
**ವಿಶ್ವಂ ಭವತ್ಯೇಕನೀಳಮ್ । ಯಸ್ಮಿನ್ನಿದಗ್‍ಂ ಸಂ ಚ ವಿ**
**ಚೈಕಗ್‍ಂ ಸ ಓತಃ ಪ್ರೋತಶ್ಚ ವಿಭು ಪ್ರಜಾಸು ॥**
**ಪ್ರತದ್ವೋಚೇ ಅಮೃತಂ ನು ವಿದ್ವಾನ್ ಗಂಧರ್ವೋ ನಾಮ**
**ನಿಹಿತಂ ಗುಹಾಸು । ತ್ರೀಣಿ ಪದಾ ನಿಹಿತಾ ಗುಹಾಸು**
**ಯಸ್ತದ್ವೇದ ಸವಿತುಃ ಪಿತಾಽಸತ್ ॥**

ಈ ಎರಡು ಮಂತ್ರಗಳಿಂದ ಈವರೆಗೆ ಪ್ರತಿಪಾದಿಸಿರುವ ಪರಮಾತ್ಮತತ್ತ್ವದಲ್ಲಿ ಶ್ರದ್ಧೆಯನ್ನುಂಟುಮಾಡುವದಕ್ಕಾಗಿ ಗಂಧರ್ವವೃತ್ತಾಂತವನ್ನು ಪ್ರಸ್ತಾಪಮಾಡಲಾಗಿದೆ. **ವೇನ** ಎಂಬುದು ಒಬ್ಬ ಗಂಧರ್ವನ ಹೆಸರು. ಆತನು ಸಕಲ ಪ್ರಾಣಿಗಳ **ಗುಹಾಸು** ಎಂದರೆ ಬುದ್ಧಿಗಳಲ್ಲಿ **ನಿಹಿತಮಮೃತಂ**–ಇದ್ದುಕೊಂಡಿರುವ ಅಮೃತವಸ್ತುವನ್ನು ಸ್ವಾನುಭವದಿಂದ ಕಂಡುಕೊಂಡವನಾಗಿ **ವಿದ್ವಾನ್–ಪ್ರವೋಚೇ** ಜ್ಞಾನಿಯಾಗಿ ಹೇಳಿದನು. ಆ ವೇನನು ಎಂಥವನು? ಎಂದರೆ **ಯತ್ರ**–ಯಾವ ಪರಮಾತ್ಮನಲ್ಲಿ **ವಿಶ್ವಂ**–ಜಗತ್ತೆಲ್ಲವೂ **ಏಕನೀಳಂಭವತಿ**–ಒಂದೇ ಆಶ್ರಯದಲ್ಲಿ ಇದ್ದುಕೊಂಡಿರುವದೋ ಆ ತತ್ತ್ವವನ್ನು ಗುರುಪ್ರಸಾದಶಾಸ್ತ್ರಾಧ್ಯಯನಗಳಿಂದ **ಪಶ್ಯನ್**– ಸಾಕ್ಷಾತ್ಕರಿಸಿ ಕೊಂಡವನಾಗಿ **ವಿಶ್ವಾಭುವನಾನಿ**–ಸಮಸ್ತಬ್ರಹ್ಮಾಂಡವೂ ಬ್ರಹ್ಮವೇ ಆಗಿದೆ–ಎಂಬಿದನ್ನು ಬಲ್ಲವನಾಗಿದ್ದನು. ಹೇಗೆಂದರೆ ತನ್ನ ಆತ್ಮನನ್ನರಿತವನಾದರೆ ಬ್ರಹ್ಮವನ್ನರಿತವನಾಗುವನು. ಬ್ರಹ್ಮವನ್ನರಿತರೆ ಎಲ್ಲವನ್ನೂ ಅರಿತಂತಾಗುವದು. ಇದನ್ನೇ ಗೀತೆಯಲ್ಲಿ 'ಸರ್ವಭೂತ ಗಳಲ್ಲಿಯೂ ಇರುವ ತನ್ನನ್ನೂ ಮತ್ತು ಸರ್ವಭೂತಗಳನ್ನೂ ತನ್ನಲ್ಲಿಯೂ ಕಂಡು ಕೊಂಡವನು ಸಮದರ್ಶಿಯು' ಎಂದು ತಿಳಿಸಿರುತ್ತದೆ. ವೇನನು ಇಂಥ ಸಮದರ್ಶಿಯಾಗಿದ್ದನು. ಮತ್ತು ಆ ವೇನನು ಕಂಡುಕೊಂಡ ಪರಬ್ರಹ್ಮವಸ್ತುವಿನಲ್ಲಿಯೇ **ಇದಂ ಜಗತ್**–ಈ ಪ್ರಪಂಚವೆಲ್ಲವೂ **ಸಂಚವಿಚೈತಿ**–ಹುಟ್ಟಿ ತೋರಿಕೊಳ್ಳುತ್ತದೆ. ಮತ್ತು ಕಣ್ಮರೆಯಾಗುತ್ತದೆ. ಆ ಪರಮಾತ್ಮನಾದರೋ **ಏಕ**ನಾಗಿ **ವಿಭು**ವಾಗಿ **ಪ್ರಜಾಸು**–ಎಂದರೆ ಈ ಲೋಕಗಳಲ್ಲೆಲ್ಲ **ಓತಃ ಪ್ರೋತಶ್ಚ**–ಹಾಸು ಹೊಕ್ಕಾಗಿ ಹೆಣೆದುಕೊಂಡಿರುವನು. 'ಹೇಗೆ ದಾರದಲ್ಲಿ ಮಣಿಗಳು ಪೋಣಿಸಲ್ಪಟ್ಟಿರುವವೋ ಹಾಗೆ ನನ್ನಲ್ಲಿ ಈ ಜಗತ್ತೆಲ್ಲವೂ ಹಾಸುಹೊಕ್ಕಾಗಿ ಹೆಣೆದುಕೊಂಡಿರುವವು' ಎಂದು ಗೀತೆಯಲ್ಲಿ ಭಗವಂತನೂ ತಿಳಿಸಿರುತ್ತಾನೆ. ಇಲ್ಲಿ ನಿಜವೇನೆಂದರೆ: ಜಗತ್ತೆಂಬುದು ಇಲ್ಲ. ಇದ್ದಂತೆ ವ್ಯವಹೃತವಾಗು ವದು. ಹೇಗೆಂದರೆ: ಒಂದು ಪಂಚೆಯನ್ನು ತೆಗೆದುಕೊಳ್ಳೋಣ. ಅದನ್ನು ನೂಲಿನಿಂದ ನೇಯ್ದಿರುತ್ತಾರೆ. ಹಾಗೆ ನೇಯುವಾಗ ನೂಲುಗಳನ್ನು ಉದ್ದವಾಗಿಯೂ ಅಡ್ಡಡ್ಡಲಾಗಿಯೂ ಜೋಡಿಸಿ ಒಂದಕ್ಕೊಂದು ಹತ್ತಿರವಾಗಿರುವಂತೆ ಹೆಣೆದಿರುತ್ತಾರೆ. ಹೀಗೆ ಹೆಣೆಯಲ್ಪಟ್ಟಿರುವ ನೂಲನ್ನೇ ನಾವು ಪಂಚೆಯೆನ್ನುವೆವು. ನಿಜವಾಗಿ ನೋಡಿದರೆ ನೂಲಿಗಿಂತ ಬೇರೆಯಾಗಿ ಪಂಚೆಯೆಂಬ ವಸ್ತುವಾದರೂ ಎಲ್ಲಿದೆ? ಪಂಚೆ ಎಂಬ ವ್ಯವಹಾರವು ಮಾತ್ರವೇ ಇದೆ. ಹಾಗೆಯೇ ಜಗತ್ತೆಂಬುದೂ ವಾಚಾರಂಭಣವೇ. ಬ್ರಹ್ಮವೇ ಪರಮಾರ್ಥ ಸತ್ಯವು–ಎಂದಭಿಪ್ರಾಯ. ಜಗತ್ತನ್ನು ಕಾಣುತ್ತಿರುವಾಗ ಅದು ಬ್ರಹ್ಮದಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿದೆ ಎಂದು ಉಪಚಾರಕ್ಕಾಗಿ ಹೇಳಿರುತ್ತದೆ. ಬ್ರಹ್ಮವನ್ನೇ ಕಾಣುತ್ತಿರುವವನಿಗೆ ಜಗತ್ತು ಬ್ರಹ್ಮದೊಡನೆ ಎಂದೆಂದೂ ಕಾಣಿಸುವದಿಲ್ಲ. ಏಕೆಂದರೆ ಬ್ರಹ್ಮಬುದ್ಧಿಯಿಂದ

ನಾಮರೂಪಬುದ್ಧಿಯ ಉಪಮೃದಿತವಾಗಿರುತ್ತದೆ. ಹೀಗೆ ಬ್ರಹ್ಮವನ್ನು ಕಂಡುಕೊಂಡವನೇ ವಿದ್ವಾಂಸನೆನಿಸುವನು.

ವೇನವೆಂಬುವನು ಹೀಗೆ ಬ್ರಹ್ಮವನ್ನು ಕಂಡುಕೊಂಡವನಾಗಿ ಪ್ರಾಣಿಗಳ ಗುಹಾಸು ಎಂದರೆ ಬುದ್ಧಿಯಲ್ಲಿ ತ್ರೀಣಿ ಪದಾ–ಎಚ್ಚರ, ಕನಸು, ನಿದ್ರೆಗಳೆಂಬ ಮೂರು ಅವಸ್ಥೆಗಳಲ್ಲಿಯೂ ನಿಹಿತಾ–ಇದ್ದುಕೊಂಡಿರುವ ಸಾಕ್ಷಿಯಾದ ಬ್ರಹ್ಮವನ್ನು ಅನುಭವಿಸಿದನು. ತಾನು ಅವಸ್ಥಾತ್ರಯಸಾಕ್ಷಿಯೂ ಅವಸ್ಥಾಧರ್ಮಗಳ ಸಂಪರ್ಕ ವಿಲ್ಲದವನೂ ಸಚ್ಚಿದಾನಂದನೂ ಆಗಿರುವೆನೆಂದು ಕಂಡುಕೊಂಡನು. ಅನಂತರ ಆ ಗಂಧರ್ವನು ಸವಿತುಃ–ಎಂದರೆ ತನ್ನನ್ನು ಹುಟ್ಟಿಸಿದ ತಂದೆಗೂ ಪಿತಾಸತ್–ತಂದೆಯಾದನು. ಹೇಗೆಂದರೆ: ಲೋಕದಲ್ಲಿ ತಂದೆಯು ಮಗನಿಗೆ ಪಾಂಚಭೌತಿಕವಾದ ದೇಹಕ್ಕೆ ಜನ್ಮವನ್ನು ನೀಡುತ್ತಾನೆ. ಆ ಮಗನು ಬ್ರಹ್ಮತತ್ತ್ವಜ್ಞನಾದನೆಂದರೆ ಪರಮಾತ್ಮರೂಪದಿಂದ ಸಕಲಜಗತ್ತನ್ನೂ ವ್ಯಾಪಿಸಿ ತಾನೇ ಜಗಜ್ಜನಕನಾಗಿಬಿಡುವದರಿಂದ ಜಗತ್ತಿನೊಳಗೇ ಸೇರಿರುವ ತನ್ನ ತಂದೆಗೂ ಜನಕನಾಗುವನು. ಹೇಗೆ ಶಿಶುರೂಪದಿಂದ ಕೃಷ್ಣನು ವಸುದೇವನಿಗೆ ಮಗನಾಗಿದ್ದರೂ ವಾಸುದೇವನಾಗಿ ಎಂದರೆ ಸರ್ವಭೂತ ನಿವಾಸನಾಗಿ ತನ್ನ ನಿಜರೂಪದಿಂದಿರುವಾಗ ಅವನ ಉದರದಲ್ಲಿಯೇ ವಸುದೇವನೂ ಸೇರಿಹೋಗಿರುವನೋ ಹಾಗೆಯೇ ಜ್ಞಾನಿಯಾದ ಗಂಧರ್ವನ ವಿಷಯಕ್ಕೂ ತಿಳಿಯಬೇಕು.

ಓಂ ॥ ಸ ನೋ ಬಂಧುರ್ಜನಿತಾ ಸ ವಿಧಾತಾ ಧಾಮಾನಿ ವೇದ
ಭುವನಾನಿ ವಿಶ್ವಾ । ಯತ್ರ ದೇವಾ ಅಮೃತಮಾನಶಾನಾ–
ಸ್ತೃತೀಯೇ ಧಾಮಾನ್ಯಭ್ಯೈರಯಂತ ॥
ಪರಿ ದ್ಯಾವಾಪೃಥಿವೀ ಯಂತಿ ಸದ್ಯಃ ಪರಿ ಲೋಕಾನ್ ಪರಿ
ದಿಶಃ ಪರಿ ಸುವಃ । ಋತಸ್ಯ ತಂತುಂ ವಿತತಂ ವಿಚೃತ್ಯ
ತದಪಶ್ಯತ್ ತದಭವತ್ ಪ್ರಜಾಸು ॥

ಈ ಎರಡು ಮಂತ್ರಗಳಲ್ಲಿ–ಪರಮೇಶ್ವರನು ತನ್ನ ಸ್ವಸ್ವರೂಪದಿಂದ ನಿತ್ಯಶುದ್ಧಬುದ್ಧಮುಕ್ತನೂ ವ್ಯವಹಾರಾತೀತನೂ ಆಗಿದ್ದರೂ ತನ್ನ ಉದಾರವಾದ ಕರುಣೆಯ ನಿಮಿತ್ತ ಜೀವರುಗಳ ಉದ್ಧಾರಕ್ಕಾಗಿ ಪ್ರಪಂಚಸೃಷ್ಟಿಕರ್ತನೆನಿಸಿ ವ್ಯವಹಾರ ದೃಷ್ಟಿಯಿಂದ ಆ ಪ್ರಪಂಚದ ಒಡೆಯನೆನಿಸಿ ಎಲ್ಲರನ್ನೂ ಸಲಹುತ್ತಿರುವನು, ಎಲ್ಲರಿಗೂ ಉಪಕಾರಿಯಾಗಿರುವನು–ಎಂದೂ ಆ ಪರಮೇಶ್ವರನನ್ನು ಅರಿತವನು ಮುಕ್ತನಾಗುವ ನೆಂದೂ ಮುಕ್ತಿಯೆಂಬ ಆ ಸೌಭಾಗ್ಯವನ್ನೂ ಅವನೇ ದಯಪಾಲಿಸುವನೆಂದೂ ತಿಳಿಸ

ಹೊರಟಿರುತ್ತದೆ. ಹೇಗೆಂದರೆ: **ಸ ನಃ**– ಆ ಭಗವಂತನೇ ನಮಗೆಲ್ಲ **ಬಂಧುಃ**– ನೆಂಟನಾಗಿರುವನು. ನಾವು ಅನುಷ್ಠಾನಮಾಡಿರುವ ಕರ್ಮಗಳಿಗೆ ಅನುಸಾರವಾಗಿ ಹಿತವನ್ನುಂಟುಮಾಡುವದರಿಂದ ಬಂಧುವೆನಿಸಿರುವನು ಲೋಕದಲ್ಲಿ ಬಂಧುಗಳೆಂದರೆ ಬಂಧನ ಮಾಡುತ್ತಾರಾದ್ದರಿಂದ ಬಂಧುಗಳೆನಿಸುತ್ತಾರೆ. ಪ್ರತಿಯೊಬ್ಬ ಮನುಷ್ಯನಿಗೂ ತನ್ನವರು– ಎಂದು ಕೆಲವೇ ಜನರಲ್ಲಿ ಅಭಿಮಾನವಿರುತ್ತದೆ. ಆ ಮೂಲಕ ಅವರು ಇವನನ್ನು ಕಟ್ಟಿಹಾಕುವರು. ಅರ್ಜುನನಿಗೆ ಕೂಡ ಈ ಬಂಧುವ್ಯಾಮೋಹವೇ ವಿಷಾದಕ್ಕೆ ಕಾರಣವಾಯಿತು. ಭಗವಂತನಾದರೊ, ಅಂಥ ಬಂಧುವಲ್ಲ . ಅವನು ನಮ್ಮನ್ನು ವ್ಯಾಮೋಹದಿಂದ ಬಿಡಿಸುವ ಬಂಧುವಾಗಿರುವನು. ಮತ್ತು **ಜನಿತಾ**– ತಂದೆಯಾಗಿರುವನು. ನಮ್ಮನ್ನು ಹುಟ್ಟಿಸಿರುವವನೆ ಅವನು– ಎಂದರ್ಥ. ಆತನ ಸಂಕಲ್ಪವಿಲ್ಲವಾದರೆ ನಾವು ಹುಟ್ಟುವದಾದರೂ ಹೇಗೆ ಸಾಧ್ಯ? ಆದ್ದರಿಂದ ಅವನು ಇಚ್ಛಿಸಿದಾಗ ನಮಗೆ ಜನ್ಮವುಂಟಾಗುವದು. ಆ ದೇಹಕ್ಕೆ ಸಂಬಂಧಪಟ್ಟಂತೆ ತಂದೆತಾಯಿಗಳು ನಿಮಿತ್ತಮಾತ್ರರಾಗುವರು. ಕೇವಲ ತಂದೆತಾಯಿಗಳ ಸಂಕಲ್ಪವಾಗಲಿ, ಕರ್ಮವಾಗಲಿ ನಾವು ಹುಟ್ಟಲು ಸಾಲದು. ಭಗವಂತನೇ ಇಚ್ಛಿಸಬೇಕು. ಬಲ್ಲವರಾದ ತಂದೆತಾಯಿಗಳು ಕೂಡ ತಮ್ಮ ಮಕ್ಕಳನ್ನು 'ದೇವರು ಕೊಟ್ಟದ್ದು' ಎಂದೇ ಭಾವಿಸುತ್ತಾರೆ. ಹೀಗೆ ಆತನು ಜನಕನಾಗಿರುವನು. ಮತ್ತು ಆತನೇ **ವಿಧಾತಾ**– ಜಗತ್ತಿನ ಮಹಾಸೃಷ್ಟಿಕರ್ತನಾಗಿ **ವಿಶ್ವಾಭುವನಾನಿ**– ಉತ್ತಮಾಧಮಮಧ್ಯಮಗಳೆಂಬ ಲೋಕಗಳೆಲ್ಲಕ್ಕೂ ಕರ್ತನಾಗಿ **ಧಾಮಾನಿ ವೇದ**– ದೇವತೆಗಳೇ ಮುಂತಾದವರಿಗೆ ಯೋಗ್ಯವಾದ ಸ್ಥಾನಗಳನ್ನು ಬಲ್ಲವನಾಗಿ ಆಯಾ ಜೀವರುಗಳನ್ನು ಅವರವರ ಯೋಗ್ಯತಾನುಗುಣವಾಗಿ ಸ್ವರ್ಗಾದಿಲೋಕಗಳಲ್ಲಿ ಸ್ಥಾಪಿಸಿರುವನು. ಆ ದೇವತೆಗಳಾದರೊ, **ಯತ್ರ**– **ದೇವಾಃ** ಮೂರನೆಯ ಲೋಕವಾದ ಸ್ವರ್ಗದಲ್ಲಿ ಆ ಇಂದ್ರಾದಿಗಳು **ಅಮೃತಮಾನಶಾನಾಃ**– ಅಮೃತಸುಧೆಯನ್ನು ಪಾನಮಾಡಿದವರಾಗಿ **ಧಾಮಾನಿ**– ತಮ್ಮತಮ್ಮ ಸ್ಥಾನಗಳನ್ನು **ಅಭ್ಯೈರಯಂತ**– ಎಲ್ಲೆಲ್ಲಿಯೂ ಪಡೆದುಕೊಂಡಿರುವರು. ಹೀಗಿದ್ದರೂ ದೇವತೆಗಳಿಗೂ ಮುಕ್ತಿಯು ಇಷ್ಟವಾದ್ದರಿಂದ ಅವರುಗಳೂ ಮುಮುಕ್ಷುಗಳಾಗಿ ಗುರುವಾದ ಪ್ರಜಾಪತಿಬ್ರಹ್ಮನಲ್ಲಿ ತತ್ತ್ವವಿಚಾರಮಾಡಿ ತಿಳಿದುಕೊಂಡು **ದ್ಯಾವಾಪೃಥಿವೀ**– ದ್ಯುಲೋಕ– ಪೃಥಿವಿಗಳೆರಡನ್ನೂ **ಸದ್ಯಃ ಪರಿಯಂತಿ**– ಎಲ್ಲೆಲ್ಲಿಯೂ ಸುತ್ತುತ್ತಿರುವರು. ಮತ್ತು **ಲೋಕಗಳನ್ನೂ ದಿಕ್ಕುಗಳನ್ನೂ ಸುವಃ**– ಸ್ವರ್ಗವನ್ನೂ ವ್ಯಾಪಿಸಿರುವರು. ದೇವತೆಗಳು ತಮ್ಮ ಬ್ರಹ್ಮಜ್ಞಾನದ ಬಲದಿಂದಲೇ ಎಲ್ಲಾ ಲೋಕಗಳನ್ನೂ ಸುತ್ತುತ್ತಾ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡು ಅಂತರ್ಧಾನಾದಿಶಕ್ತಿಯುಳ್ಳವರಾಗಿ ನಿಗ್ರಹಾನುಗ್ರಹ ಸಮರ್ಥರಾಗಿರುವರು. ಒಟ್ಟಿನಲ್ಲಿ ದೇವತೆಗಳಲ್ಲಿ ಅಡಗಿರುವ ಶಕ್ತಿಯೆಲ್ಲವೂ ಬ್ರಹ್ಮದ್ದೇ, ಅದು ಬ್ರಹ್ಮಜ್ಞಾನದ ಬಲದಿಂದಲೇ ಅವರಿಗೆ ದಕ್ಕಿರುತ್ತದೆ– ಎಂದಭಿಪ್ರಾಯ.

ಇನ್ನು ಯಾವನು **ಋತಸ್ಯ**–ಬ್ರಹ್ಮದ ಎಂದರೆ ಪರಬ್ರಹ್ಮತತ್ತ್ವದ **ತಂತುಂ**–ವ್ಯಾಪ್ತಿಯನ್ನು ಎಂದರೆ ಕಡಿವಡೆಯದೆ ಎಲ್ಲೆಲ್ಲಿಯೂ ಹರಡಿಕೊಂಡಿರುವದನ್ನು ಮತ್ತು **ವಿತತಂ**–ವಿಸ್ತೀರ್ಣವಾದ ಎಲ್ಲಾ ದೇಶಕಾಲಾದಿಗಳಲ್ಲಿಯೂ ಹಾಸುಹೊಕ್ಕಾಗಿರುವಿಕೆಯನ್ನು **ವಿಚಿತ್ಯ**–ಶಾಸ್ತ್ರಾಚಾರ್ಯೋಪದೇಶಗಳಿಂದ ಮನಗಂಡು ಸಾಕ್ಷಾತ್ಕರಿಸಿಕೊಂಡಿರುವನೋ ಅವನು **ಪ್ರಜಾಸು**–ಪ್ರಜೆಗಳ ನಡುವೆ **ತದಪಶ್ಯತ್–ತದಭವತ್**–ಆ ಬ್ರಹ್ಮವನ್ನು ಅರಿತವನಾಗಿರುವನು; ಹಾಗೂ ಬ್ರಹ್ಮವೇ ಆಗಿರುವನು. ಬ್ರಹ್ಮವನ್ನರಿತವನು ಬ್ರಹ್ಮವೇ ಆಗಿರುವನು–ಎಂದು ಬೇರೊಂದು ಶ್ರುತಿಯಲ್ಲಿಯೂ ಇದೆ.

**ಓಂ ॥ ಪರೀತ್ಯ ಲೋಕಾನ್ ಪರೀತ್ಯ ಭೂತಾನಿ ಪರೀತ್ಯ ಸರ್ವಾಃ ಪ್ರದಿಶೋ ದಿಶಶ್ಚ । ಪ್ರಜಾಪತಿಃ ಪ್ರಥಮಜಾ ಋತಸ್ಯಾತ್ಮನಾ–(ಆ)ತ್ಮಾನಮಭಿ ಸಂಬಭೂವ ॥**

ಈಗ ಈವರೆಗೆ ವರ್ಣಿಸಿದ ಬ್ರಹ್ಮವಿದ್ಯೆಯನ್ನು ಉಪಸಂಹಾರ ಮಾಡಲಾಗುವದು. **ಋತಸ್ಯ**–ಎಂದರೆ ಪರಬ್ರಹ್ಮದ **ಪ್ರಥಮಜಾಃ**–ಪ್ರಥಮೋತ್ಪನ್ನನಾದ **ಪ್ರಜಾಪತಿಃ**–ಹಿರಣ್ಯಗರ್ಭನು **ಲೋಕಾನ್**–ಭೂಮಿಯೇ ಮೊದಲಾದ ಲೋಕಗಳನ್ನು ಮತ್ತು **ಭೂತಾನಿ**–ದೇವಮನುಷ್ಯಾದಿ ಪ್ರಾಣಿಗಳನ್ನೂ **ಪ್ರದಿಶಃ**–ವಿದಿಕ್ಕುಗಳ್ನೂ **ದಿಶಶ್ಚ**–ಪೂರ್ವಾದಿದಿಕ್ಕುಗಳನ್ನೂ **ಪರೀತ್ಯ**–ಎಲ್ಲೆಲ್ಲಿಯೂ ವ್ಯಾಪಿಸಿಕೊಂಡವನಾಗಿ **ಆತ್ಮನಾ–ಆತ್ಮಾನಂ**–ತನ್ನ ಸ್ವರೂಪದಿಂದ ತನ್ನನ್ನೇ **ಅಭಿಸಂಬಭೂವ**–ಪಡೆದುಕೊಂಡನು. ಸತ್ಯಜ್ಞಾನಾನಂತಲಕ್ಷಣನಾದ ಪರಮಾತ್ಮನನ್ನು ಪ್ರಥಮಪ್ರಜೆಯಾದ ಹಿರಣ್ಯಗರ್ಭನು ಅರಿತುಕೊಂಡವನಾಗಿ ಸರ್ವಾತ್ಮಭಾವವನ್ನು ಹೊಂದಿ ಎಲ್ಲವೂ ತಾನೇ ಆದನು. ಈ ಮಹಾವಿಭೂತಿಯಿಂದ ಆತನು ವಿರಾಜಿಸಿದನು–**ಬ್ರಹ್ಮವಿದ್ಯೆಯ ಫಲವೇ ಸರ್ವಾತ್ಮಭಾವವು.** ಅದನ್ನು ಪಡೆದುಕೊಂಡನು–ಎಂದಭಿಪ್ರಾಯ.

ಈ ರೀತಿಯಾಗಿ ಬ್ರಹ್ಮವಿದ್ಯೆಯನ್ನು ಪ್ರತಿಪಾದಿಸಿದ ಅನಂತರ ಅದನ್ನು ಪಡೆದುಕೊಳ್ಳುವದಕ್ಕೆ ಸಾಧನಗಳಾಗಿರುವ ಸೋಪಾಧಿಕಬ್ರಹ್ಮದ ಉಪಾಸನೆಗಳನ್ನೂ ಜಪಮಂತ್ರಗಳನ್ನೂ ಈಗ ತಿಳಿಸಲಾಗುವದು. ಮತ್ತು ಉಪಾಸನೆಗೆ ಮನಸ್ಸನ್ನು ಸಜ್ಜುಗೊಳಿಸಲು ಅಗತ್ಯವಾದ ಬಹಿರಂಗವಾದ ಸ್ನಾನ, ಆಹ್ನಿಕ, ನಿತ್ಯಕರ್ಮಾದಿಗಳಿಗೆ ಬೇಕಾದ ಮಂತ್ರಗಳನ್ನೂ ಪ್ರಸ್ತಾಪಿಸಲಾಗುವದು. ಹಿಂದೆ ಕರ್ಮಕಾಂಡದಲ್ಲಿ ಶ್ರೌತಕರ್ಮಗಳನ್ನು ವಿವರಿಸಿದ್ದರೂ ಅಲ್ಲಿ ಹೇಳದೆ ಬಿಟ್ಟಿರುವಂಥ ಮತ್ತೆ ಕೆಲವು ಕರ್ಮಗಳನ್ನು ಈ ಖಿಲಕಾಂಡದಲ್ಲಿ ತಿಳಿಸಿಕೊಟ್ಟು ಅವುಗಳಿಗೆ ವಿನಿಯೋಗಿಸಬೇಕಾದ

ಮಂತ್ರಗಳನ್ನು ವಿಶೇಷವಾಗಿ ತಿಳಿಸಲಾಗುವದು. ಈಗ ಒಂದು ಮಂತ್ರದಿಂದ ಅಂತರ್ಯಾಮಿಯನ್ನು ಪ್ರಾರ್ಥಿಸಲಾಗಿದೆ.

**ಓಂ ॥ ಸದಸಸ್ಪತಿಮದ್ಭುತಂ ಪ್ರಿಯಮಿಂದ್ರಸ್ಯ ಕಾಮ್ಯಮ್ ।**
**ಸನಿಂ ಮೇಧಾಮಯಾಸಿಷಮ್ ॥**

ಪ್ರಲಯಕಾಲದಲ್ಲಿ ಜಗತ್ತೆಲ್ಲವೂ ಏತರಲ್ಲಿ ಅಡಗಿದೆಯೋ ಆ ಅವ್ಯಾಕೃತವನ್ನು ಸದಃ–ಎಂದು ಹೆಸರಿಸಿದೆ. ಅದಕ್ಕೆ ಒಡೆಯನೇ ಸದಸಸ್ಪತಿಯು. ಈತನು ಯಾವನೊಬ್ಬನೂ ಮನಸ್ಸಿನಿಂದ ಕೂಡ ಊಹಿಸಲಾಗದಂಥ ಅದ್ಭುತ ರಚನೆಯುಳ್ಳ ಜಗತ್ತನ್ನು ಸೃಷ್ಟಿಸುತ್ತಾನೆ. ಇಂಥ ದೇವನನ್ನು ನಾನು ಬಳಿಸಾರಿರುತ್ತೇನೆ. ಈತನು ಇಂದ್ರನಿಂದಲೂ ಬಯಸಲ್ಪಡುವವನಾಗಿರುವನು. ಮತ್ತು ಇಂದ್ರನಿಗೂ ಬೇಕಾದವನಾಗಿರುವನು. ಹಾಗೂ ಸನಿಯು–ಎಂದರೆ ಕರ್ಮಫಲಗಳನ್ನು ಕೊಡುವವನಾಗಿರುವನು. ಮತ್ತು ಮೇಧೆಯನ್ನು (ಧಾರಣಶಕ್ತಿಯನ್ನು) ಕೊಡುವವನೂ ಆಗಿದ್ದಾನೆ–ಎಂದರ್ಥ. ಮೇಧಾಶಕ್ತಿಯಿಲ್ಲದೆ ಬ್ರಹ್ಮವಿದ್ಯೆಯನ್ನು ಕಾಪಾಡಿಕೊಳ್ಳಲಾಗುವದಿಲ್ಲ. ಆದ್ದರಿಂದ ಅದನ್ನು ದಯಪಾಲಿಸುವಂತೆಯೂ ಇಲ್ಲಿ ಕೇಳಿಕೊಂಡಂತಾಗಿದೆ.

ಯಜುರ್ವೇದಿಗಳು ಉಪಾಕರ್ಮಕಾಲಕ್ಕೆ ಕಾಂಡಋಷಿಗಳ ಜೊತೆಗೆ ಸದಸಸ್ಪತಿಯೆಂಬ ದೇವತೆಯನ್ನೂ ಆರಾಧಿಸುತ್ತಾರೆ. ಕರ್ಮಕಾಂಡಪ್ರಕರಣಕ್ಕೆ ಸಂಬಂಧಿಸಿದಂತೆ ಸದಸಸ್ಪತಿಯೆಂದರೆ ಬ್ರಹ್ಮನು. ಚತುರ್ಮುಖಬ್ರಹ್ಮನು ಸದಸ್ಸು–ಎಂದರೆ ದೇವಸಭೆಗೆ ಅಧ್ಯಕ್ಷನು. ಆ ಮಹಾಸಭೆಯಲ್ಲಿ ಋಷಿಗಳು ನಾಲ್ಕುವೇದಗಳನ್ನೂ ಉಪವೇದಗಳನ್ನೂ ಇತಿಹಾಸಪುರಾಣಾದಿ ಚತುರ್ದಶವಿದ್ಯೆಗಳನ್ನೂ ಪಠಿಸುತ್ತಿರುವರು. ಬ್ರಹ್ಮನಿಗೆ ಈ ಎಲ್ಲವೂ ಸಹಸಿದ್ಧವಾಗಿರುವವು. ಇಂಥ ಸಭಾಪತಿಯು ನಾವು ಮುಂದೆ ಅಧ್ಯಯನ ಮಾಡಲಿರುವ ವಿದ್ಯೆಗಳಿಗೆಲ್ಲ ಅನುಗ್ರಾಹಕನಾಗಿರುವನು. ಗ್ರಹಣಾಧಾರಣಶಕ್ತಿಗಳನ್ನು ದಯಪಾಲಿಸುವವನಾಗಿರುವನು. ವೇದಗಳ ಧಾರಣೆಗೆ ಅಪಾರವಾದ ಮೇಧಾಶಕ್ತಿಯು ಬೇಕು. ಅವುಗಳನ್ನು ಪುಸ್ತಕಪಾಠವಾಗಿ ಕಲಿಯುವಂತಿಲ್ಲ. ಬುದ್ಧಿಯಲ್ಲಿ ನೆನಪಿನಿಂದ ಧರಿಸಿಕೊಂಡೇ ಉಚ್ಚಾರಣೆಮಾಡಬೇಕು. ಪುಸ್ತಕವನ್ನು ಬಿಟ್ಟು ಮಸ್ತಕದಲ್ಲಿ ಧರಿಸಿರಬೇಕು. ಹೀಗಿರುವದರಿಂದ ಮೇಧಾಧಾರಣಾಶಕ್ತಿಗಳನ್ನು ಪಡೆಯುವದಕ್ಕಾಗಿ ಉಪಾಕರ್ಮದಲ್ಲಿ ಸದಸಸ್ಪತಿಯೆಂಬ ಹೆಸರಿನಿಂದ ಬ್ರಹ್ಮನನ್ನು ಪೂಜಿಸಲಾಗುತ್ತದೆ. ಬ್ರಹ್ಮನ ವಾಕ್‌ಶರೀರವೇ ವೇದಗಳು. ಅವುಗಳ ಉಚ್ಚಾರಣೆಯೇ ಬ್ರಹ್ಮಪತ್ನಿಯಾದ ಸರಸ್ವತಿಯೆನಿಸುವಳು. ಹೀಗೆ ವಾಗ್ದೇವಿಯು ಬ್ರಹ್ಮನೊಡನೆ ಅವಿನಾಭಾವದಿಂದ ಕೂಡಿರುವಳು. ಆದ್ದರಿಂದ ವೈದಿಕರಿಗೆ ಸದಸಸ್ಪತಿಯು ಆರಾಧ್ಯದೇವತೆಯೆನಿಸಿರುವನು. ಅವನನ್ನು ಈ ಮಂತ್ರದಲ್ಲಿ ಸ್ತುತಿಸಲಾಗಿದೆ.

ಓಂ ॥ ಉದ್ದೀಪ್ಯಸ್ವ ಜಾತವೇದೋಽಪಘ್ನನ್ ನಿರ್ಋತಿಂ ಮಮ ।
ಪಶೂಗ್‌ಂಶ್ಚ ಮಹ್ಯಮಾವಹ ಜೀವನಂ ಚ ದಿಶೋ ದಿಶ ॥

ಈ ಪ್ರಾರ್ಥನಾಮಂತ್ರವೂ ಸುಂದರವಾಗಿದೆ. ಅಗ್ನಿದೇವತೆಯ ರೂಪದಿಂದ ಜಗತ್ತನ್ನು ಅನುಗ್ರಹಿಸುತ್ತಿರುವ ಭಗವಂತನನ್ನು ಇಲ್ಲಿ ಸ್ತುತಿಸಲಾಗಿದೆ. ಅಗ್ನಿಯನ್ನು **ಜಾತವೇದ**ನೆನ್ನುವರು. ಹುಟ್ಟಿರುವ ಪ್ರಾಣಿಜಾತವೆಲ್ಲಕ್ಕೂ ಜಠರಾಗ್ನಿರೂಪದಿಂದ ತನ್ನ ಶಕ್ತಿಯನ್ನು ದಯಪಾಲಿಸಿ ಸಲಹುತ್ತಿರುವ ಅಗ್ನಿಗೆ ಜಾತವೇದನೆಂಬ ಹೆಸರು ಬಂದಿರುತ್ತದೆ. ಭೂಮಿಯ ಮೇಲೆ ಸೌದೆ, ಎಣ್ಣೆ–ಮುಂತಾದ ಉಪಾಧಿಗಳನ್ನಾಶ್ರಯಿಸಿ ಅಗ್ನಿಯು ಕಾಣಿಸಿಕೊಳ್ಳುವನು. ಆಕಾಶದಲ್ಲಿ ಸೂರ್ಯನೆಂಬ ತೆಜೋರೂಪದಿಂದ ಆತನು ಪ್ರತ್ಯಕ್ಷನಾಗಿರುವನು. ಚಿನ್ನವೇ ಮುಂತಾದ ಕೆಲವು ಲೋಹವಸ್ತುಗಳು ಕೂಡ ಅಗ್ನಿಯ ಅಂಶದವೇ ಎಂದು ಬಲ್ಲವರು ಹೇಳುವರು. ಹೀಗೆ ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿರುವ ಜಾತವೇದನನ್ನು 'ಹೇ ದೇವ, ನೀನು ನನಗಾಗಿ ಪ್ರಕಾಶವನ್ನು ಬೀರಿ ಕಾಣಿಸಿಕೊಳ್ಳುವವನಾಗು, ದೀಪ್ತನಾಗಿ ಉರಿಯುತ್ತಿರುವವನಾಗು. ನಿನ್ನ ಸಾನ್ನಿಧ್ಯವಿದ್ದರೆ ನಿರ್ಋತಿಯೆಂಬ ಪಾಪದೇವತೆಯ ಭಯವಿರುವದಿಲ್ಲ. ಅದನ್ನು ಹಿಮ್ಮೆಟ್ಟಿಸಿದವನಾಗಿ ನೀನು ಪ್ರಸನ್ನನಾಗು' ಎಂದು ಭಕ್ತನು ಪ್ರಾರ್ಥಿಸುತ್ತಿದ್ದಾನೆ. ಅಗ್ನಿಯನ್ನು **'ರಾಕ್ಷೋಘ್ನ'** (ರಾಕ್ಷಸರನ್ನು ನಾಶಗೊಳಿಸುವವನು) ಎಂದೂ ಕರೆಯುತ್ತಾರೆ. ಬೆಳಕಿದ್ದಲ್ಲಿ ಭೂತಪ್ರೇತಪಿಶಾಚಿಗಳ ಭಯವಿರುವದಿಲ್ಲವಷ್ಟೆ ! ಆದ್ದರಿಂದ ತೇಜಸ್ಸೆಂಬುದು ರಾಕ್ಷಸರನ್ನು ಹಿಮ್ಮೆಟ್ಟಿಸತಕ್ಕದ್ದಾಗಿದೆ. ಇಂಥ ತೇಜೋದೇವತೆಯನ್ನು ಪ್ರತ್ಯಕ್ಷನಾಗುವಂತೆ ಪ್ರಾರ್ಥಿಸಿದ ಅನಂತರ ಇಷ್ಟಾರ್ಥಗಳನ್ನೂ ಆತನಲ್ಲಿ ಬೇಡಿಕೊಳ್ಳುತ್ತಿದಾನೆ. **'ಶ್ರಿಯಮಿಚ್ಛೇದ್ ಹುತಾಶತಾನ್'** ಎಂಬ ವಾಕ್ಯದಂತೆ ಅಗ್ನಿಯನ್ನು ಆರಾಧಿಸಿಯೇ ಐಶ್ವರ್ಯವನ್ನು ಪಡೆದುಕೊಳ್ಳಬೇಕಾಗಿರುವದು. ಇಲ್ಲಿ ಭಕ್ತನು ತನಗೆ ಪಶುಗಳನ್ನೂ ದೀರ್ಘಾಯುಷ್ಯವನ್ನೂ ಇನ್ನೂ ಉಳಿದ ಎಲ್ಲಾ ಸಂಪತ್ತನ್ನೂ ದಯಪಾಲಿಸಬೇಕೆಂದು ಬೇಡುತ್ತಿದ್ದಾನೆ. ಹೋಮಗಳನ್ನು ಕೈಗೊಂಡ ಅನಂತರ ಕಡೆಯಲ್ಲಿ ವೈದಿಕರು ಪಠಿಸುವ ಈ ಪ್ರಾರ್ಥನಾವಾಕ್ಯವನ್ನು ಕೇಳಿರಿ. ಅದು ಹೀಗಿದೆ. **'ಶ್ರದ್ಧಾಂ ಮೇಧಾಂ ಯಶಃ ಪ್ರಜ್ಞಾಂ ವಿದ್ಯಾಂ ಬುದ್ಧಿಂ ಶ್ರಿಯಂ ಬಲಂ ಆಯುಷ್ಯಂ ತೇಜಃ ಆರೋಗ್ಯಂ ದೇಹಿ ಮೇ ಹವ್ಯವಾಹನ'** ಈ ಪ್ರಾರ್ಥನೆಯಲ್ಲಿ ಎಲ್ಲಾ ಇಷ್ಟಾರ್ಥಗಳೂ ಬಹಳ ಮಟ್ಟಿಗೆ ಅಡಗಿವೆ. ಇವುಗಳನ್ನೆಲ್ಲ ಕೊಡುವಂತೆ ಅಗ್ನಿಯನ್ನು ಕೇಳಿಕೊಂಡಿದೆ. ಹೀಗೆ ಅಗ್ನಿಯ ಆರಾಧನೆಯಿಂದಲೂ ಆತನ ಅನುಗ್ರಹದಿಂದಲೂ ನಾವುಗಳು ಪಾಪರಹಿತರಾಗಿ ಐಶ್ವರ್ಯವಂತರಾಗಿ ಸುಖಿಗಳಾಗಿ ಬಾಳಬಹುದಾಗಿದೆ. ಈಗಿನ ಜನರಿಗೆ ಇದು ರುಚಿಸದೆ ಇರುವದು ದುರದೃಷ್ಟವೆಂದೇ ಹೇಳಬೇಕು.

**ಓಂ ॥ ಮಾ ನೋ ಹಿಗ್ಂಸೀಜ್ಜಾತವೇದೋ ಗಾಮಶ್ವಂ ಪುರುಷಂ ಜಗತ್ । ಅಬಿಭ್ರದಗ್ನ ಆಗಹಿ ಶ್ರಿಯಾ ಮಾ ಪರಿಪಾತಯ ॥**

ಈ ಮಂತ್ರವೂ ಹಿಂದಿನ ಮಂತ್ರದಂತೆ ಮುಂದುವರೆದ ಪ್ರಾರ್ಥನೆಯಾಗಿದೆ. ದೇವತೆಗಳ ಪ್ರಸಾದದಿಂದ ಮನುಷ್ಯನಿಗೆ ಐಶ್ವರ್ಯವು ಒಮ್ಮೆ ದೊರಕಬಹುದು. ಆದರೆ ಅವನು ವಿವೇಕಿಯಲ್ಲವಾದರೆ ಎಲ್ಲವನ್ನೂ ಕಳೆದುಕೊಂಡುಬಿಡುವನು. ಹಾಗಾಗ ಬಾರದಲ್ಲವೆ? ಅದಕ್ಕಾಗಿ ಇಲ್ಲಿ ಮತ್ತೆ ಅಗ್ನಿದೇವನನ್ನು ಬೇಡಿಕೊಳ್ಳಲಾಗಿದೆ. ''ಎಲೈ ಜಾತವೇದನೆ, ನೀನೇ ಕೊಟ್ಟಿರುವ ಗೋವು, ಕುದುರೆ, ಮಕ್ಕಳು, ಮನೆ, ಹೊಲ– ಇತ್ಯಾದಿಗಳನ್ನು ನಾನು ಉಳಿಸಿಕೊಂಡು ಸುಖವಾಗಿ ಬಾಳುವಂತೆ ಮಾಡು. ಅವುಗಳನ್ನು ಹಿಂಸೆ ಮಾಡಬೇಡ– ಅಥವಾ ಕಳೆಯಬೇಡ'' ಎಂದು ಪ್ರಾರ್ಥಿಸಲಾಗಿದೆ. ಕೆಲವು ವೇಳೆ ಆಯಾ ವಸ್ತುಗಳು ನಮ್ಮಲ್ಲಿಯೇ ಉಳಿದಿರಬಹುದು. ಅವುಗಳಿಂದ ಸುಖವಾಗುವ ಬದಲು ದುಃಖವೇ ಆದರೇನು ಪ್ರಯೋಜನ ? ಹೊಲಗದ್ದೆಗಳಾಗಲಿ, ಕೈಗಾರಿಕೆ–ಇತ್ಯಾದಿ ಉದ್ಯೋಗಗಳಾಗಲಿ, ಕೇವಲ ನಮ್ಮ ಶ್ರಮಕ್ಕೆ ಮಾತ್ರ ಕಾರಣವಾಗಿದ್ದು ಲಾಭವಿಲ್ಲದವುಗಳಾದರೆ ಅವು ಕೂಡ ನಮ್ಮನ್ನು ಹಿಂಸೆಮಾಡಿದಂತೆಯೇ ಸರಿ. ಹೀಗೆಯೇ ಮೂರ್ಖಶಿಷ್ಯ, ಪುತ್ರರು, ಹೆಂಡತಿ–ಮುಂತಾದವರನ್ನೂ ತಿಳಿಯಬೇಕು. ಆದ್ದರಿಂದ ಇವೆಲ್ಲವೂ ನಮಗೆ ಸುಖಸಂತೋಷಕರವಾಗಿ ಒದಗಿಬಂದು ನಮ್ಮೊಡನಿದ್ದು ನಾವು ಅನುಭವಿಸಬೇಕಾದರೆ ಕೇವಲ ಮನುಷ್ಯಪ್ರಯತ್ನವು ಸಾಕಾಗಲಾರದು. ಅದರೊಡನೆ 'ಪುಣ್ಯ'ವೆಂಬ ಅತೀಂದ್ರಿಯವಾದ ಒಂದು ವಸ್ತುವೂ ಬೇಕು. ಅಂಥ ಪುಣ್ಯವನ್ನು ನಾವು ದೇವತಾರಾಧನೆಯಿಂದಲೇ ಸಂಪಾದಿಸಿಕೊಳ್ಳಬೇಕು. ಆದ್ದರಿಂದಲೇ ಆರಾಧ್ಯನಾದ ಅಗ್ನಿಯನ್ನು ಇಲ್ಲಿ ಎಲ್ಲವನ್ನೂ ಸುಖಕರವಾಗಿ ದಯಪಾಲಿಸಿ ರಕ್ಷಿಸುವಂತೆಯೂ ಕೇಳಿಕೊಂಡಿದೆ. ಹಿಂಸೆಮಾಡಬಾರದೆಂದೂ ಬೇಡಿಕೊಳ್ಳಲಾಗಿದೆ.

ಅನಂತರ ಭಕ್ತನು ಪ್ರಾರ್ಥಿಸುವದೇನೆಂದರೆ: 'ಹೇ ದೇವ, ನೀನು ನಮ್ಮ ಅಪರಾಧಗಳೇನಾದರೂ ಇದ್ದರೆ ಅವುಗಳನ್ನು **ಅಬಿಭ್ರತ್**– ಧರಿಸದೆ ಇರುವವನಾಗಿ– ಎಂದರೆ ಮನಸ್ಸಿಗೆ ತಂದುಕೊಳ್ಳದವನಾಗಿ ನಮ್ಮನ್ನು ಅನುಗ್ರಹಿಸುವ ಸಲುವಾಗಿ ಎದುರಿಗೆ ಬರುವವನಾಗು. ಅನಂತರ ನನ್ನನ್ನು ಐಶ್ವರ್ಯದಿಂದ (ಕೂಡಿದವನನ್ನಾಗಿ ಮಾಡಿ) ಕಾಪಾಡುವವನಾಗು'– ಎಂದು ಕೇಳಿದ್ದಾನೆ. ಹೀಗೆ ಅಗ್ನಿದೇವನ ಪ್ರಾರ್ಥನಾರೂಪವಾದ ಈ ಸ್ತುತಿಯು ಪರಂಪರೆಯಿಂದ ಅಗ್ನ್ಯಂತರ್ಗತನಾದ ಪರಮಾತ್ಮನನ್ನೇ ಕುರಿತು ಮಾಡಿದ್ದಾಗಿದೆ. ಸಾಮಾನ್ಯಜನರಿಗೆ ಪರಮಾರ್ಥತತ್ತ್ವವು ಜ್ಞಾನಗೋಚರವಾಗ ಲಾರದಾದ್ದರಿಂದ ಉಪಾಧಿಗಳಲ್ಲಿ ಅದೇ ತತ್ತ್ವವನ್ನು ದೇವತಾರೂಪದಿಂದ ಭಾವಿಸಿಕೊಂಡು ಆರಾಧಿಸಲು ಇಲ್ಲಿ ಸೂಚಿಸಲಾಗಿದೆ.

# ಗಾಯತ್ರೀ ಮಂತ್ರಗಳು

ಈಗ ಗಾಯತ್ರೀಛಂದಸ್ಸಿನ ಹನ್ನೆರಡು ಮಂತ್ರಗಳಿಂದ ಆಯಾ ದೇವತಾಪರವಾದ ಸ್ತುತಿಗಳನ್ನು ಮಾಡಲಾಗುವದು. ಬ್ರಹ್ಮವೊಂದೇ ನಾನಾದೇವತೆಗಳ ರೂಪದಿಂದಿದ್ದು ಕೊಂಡಿದೆಯಾಗಿ ಒಂದೇ ಬ್ರಹ್ಮವನ್ನು ನಾನಾ ಪ್ರಕಾರಗಳಿಂದ ಹೊಗಳುವದು ವೇದಗಳಲ್ಲಿ ಕಂಡುಬರುತ್ತದೆ. ಆಯಾ ದೇವತಾರೂಪದಿಂದ ಹೊಗಳುವಾಗ ಅದದೇ ದೇವತೆಗೆ ವಿಶಿಷ್ಟವಾದ ರೂಪ, ಗುಣ, ಆಕಾರ, ಭೂಷಣಾಯುಧಗಳ ವರ್ಣನೆಯೂ ಸೇರಿರುತ್ತದೆ. ಇದರಿಂದ ಉಪಾಸಕರಿಗೆ ಅನುಕೂಲವುಂಟು. ಜ್ಞಾನಿಗಳಿಗಾದರೊ, ಒಂದೇ ಪರಬ್ರಹ್ಮವು ಜ್ಞೇಯವಾಗಿರುತ್ತದೆ. ಆದ್ದರಿಂದ ಅವರಲ್ಲಿ ಮತಭೇದವಿಲ್ಲ. ಉಪಾಸಕರಿಗಾದರೊ, ಅವರವರ ಇಚ್ಛಾನುಸಾರವಾಗಿ ಬ್ರಹ್ಮವನ್ನು ಕಲ್ಪಿಸಿಕೊಳ್ಳುವ ಸ್ವಾತಂತ್ರ್ಯವಿರುವದರಿಂದ ಅನೇಕ ವಿಧವಾದ ಮನಸ್ಸಿನ ಉಪಾಸಕರ ದೃಷ್ಟಿಯಿಂದ ಬ್ರಹ್ಮವೂ ಅನೇಕ ವಿಧವಾಗಿ ತೋರಿಕೊಳ್ಳುತ್ತದೆ. ಬ್ರಹ್ಮದಲ್ಲಿ ಸರ್ವವಿಧವಾದ ಶಕ್ತಿಜ್ಞಾನಬಲೈಶ್ವರ್ಯಾದಿಗಳು ಅಪರಿಮಿತವಾಗಿರುವದರಿಂದ ಇದೇನೂ ಆಶ್ಚರ್ಯವಲ್ಲ. ಹೀಗೆ ನಾನಾ ರೂಪಗಳಿಂದ ತೋರಿಕೊಂಡಾಗ ಬ್ರಹ್ಮವೊಂದೇ ಗಂಡು , ಹೆಣ್ಣು, ಬ್ರಹ್ಮಚಾರಿ, ಗೃಹಸ್ಥ, ಯುವಕ, ವೃದ್ಧ–ಇತ್ಯಾದಿ ಎಲ್ಲಾ ಆಕಾರಗಳಿಂದಲೂ ಆಯಾ ಚಿಂತಕರ ಮನಸ್ಸಿನ ಕಲ್ಪನೆಗನುಗುಣವಾಗಿ ತೋರಿಕೊಳ್ಳುತ್ತದೆ. ಇಂಥ ರೂಪಗಳಲ್ಲಿ ಪ್ರತಿಯೊಂದಕ್ಕೂ ಒಂದೊಂದು ಬೇರೆಬೇರೆಯ ಹೆಸರು, ಸ್ವರೂಪ, ಶಕ್ತಿ, ಗುಣಗಳು, ಮಹಿಮೆ, ವರ್ಣನೆಗಳು ಇರುವವು. ಈ ಔಪಾಧಿಕರೂಪಗಳನ್ನೇ ದೇವತೆಗಳೆಂದು ಕರೆಯಲಾಗಿದೆ. ವೇದಗಳಿಗಿಂತಲೂ ಪುರಾಣೇತಿಹಾಸಗಳಲ್ಲಿ ದೇವತೆಗಳ ವರ್ಣನೆಯು ಹೆಚ್ಚಾಗಿರುತ್ತದೆ. ಸರಿಯಾದ ತತ್ತ್ವಜ್ಞಾನವಿಲ್ಲದವರು ಈ ದೇವತಾವಿಭಾಗಗಳಲ್ಲಿಯೇ ಯಾವದಾದ ರೊಂದು ದೇವತೆಯ ಕಡೆಗೆ ಪಕ್ಷಪಾತವನ್ನು ವಹಿಸಿ ತಮ್ಮ ದೇವರೇ ಹೆಚ್ಚಿನದೆಂದೂ ಉಳಿದವು ಕಡಿಮೆಯೆಂದೂ ವಾದಿಸುತ್ತಾರೆ. ಈ ವಾದಕ್ಕೆ ವೇದಾಂತಗಳಲ್ಲಿ ಆಧಾರವಿಲ್ಲ. ಉಪಾಸನಾ ಸೌಕರ್ಯಕ್ಕಾಗಿ ಕಲ್ಪಿಸಿರುವ ರೂಪಾಕಾರಗಳನ್ನು ಉಪಯೋಗಿಸಿಕೊಂಡು ಮುಂದೆ ಸರ್ವಾತ್ಮನಾದ ಬ್ರಹ್ಮವನ್ನರಿಯಲು ಪ್ರಯತ್ನಿಸಬೇಕೇ ಹೊರತು ಆಯಾ ಔಪಾಧಿ ಕರೂಪಗಳ ಉಪಾಸನೆಯಲ್ಲಿಯೇ ಸಾಧಕನು ನಿಲ್ಲಬಾರದು. ಆದರೂ ಸಾಧನದ ಪ್ರಾರಂಭದದಶೆಯಲ್ಲಿ ಈ ರೂಪಾಕಾರಕಲ್ಪನೆಗಳನ್ನು ಆಶ್ರಯಿಸುವದರಿಂದ ಪ್ರಯೋಜನವಿದೆ. ಅದಕ್ಕಾಗಿಯೇ ಶಾಸ್ತ್ರವೂ ಈ ಭೇದಚಿಂತನೆಯನ್ನು ಕೆಳಮಟ್ಟದಲ್ಲಿ ಒಪ್ಪಿಕೊಂಡಿದೆ. ಪ್ರಕೃತ–ಇಂಥ ಮಂದಮಧ್ಯಮಾಧಿಕಾರಿಗಳ ದೃಷ್ಟಿಯಿಂದ ಇಲ್ಲಿ ದೇವತೋಪಾಸನೆಗಳನ್ನು ಪ್ರಸ್ತಾಪಿಸಿ ಆಯಾ ದೇವತೆಗೆ ಸಂಬಂಧಿಸಿದಂತೆ ಪ್ರಾರ್ಥನಾಮಂತ್ರಗಳನ್ನು ಗಾಯತ್ರೀಛಂದಸ್ಸಿನಲ್ಲಿ ಕೊಡಲಾಗಿದೆ.

ಓಂ ॥ ಪುರುಷಸ್ಯ ವಿದ್ಮಹೇ ಸಹಸ್ರಾಕ್ಷಸ್ಯ ಮಹಾದೇವಸ್ಯ ಧೀಮಹಿ ।
ತನ್ನೋ ರುದ್ರಃ ಪ್ರಚೋದಯಾತ್ ॥

ಈ ವಿಧವಾದ ಮಂತ್ರಗಳಲ್ಲಿ 'ಧೀಮಹಿ' ಮತ್ತು 'ಪ್ರಚೋದಯಾತ್' ಎಂಬೀ ಎರಡು ಶಬ್ದಗಳು ಸರಿಸಮಾನವಾಗಿರುವವು. ಧೀಮಹಿ ಎಂದರೆ ಚಿಂತಿಸುವೆವು–ಎಂದೂ ಪ್ರಚೋದಯಾತ್ –ಎಂದರೆ ಪ್ರೇರಣೆ ಮಾಡಲಿ–ಎಂದೂ ಅರ್ಥ. ಇಂಥ ಮಂತ್ರಗಳಲ್ಲಿ ಅಗ್ರಗಣ್ಯವಾದದ್ದು ಸವಿತೃಗಾಯತ್ರಿಯು. ಅದನ್ನೇ ವೇದಗಳ ಸಾರವೆಂದು ಕರೆಯುವರು. ಅದರ ವಿಚಾರವಾಗಿ ಸಂದರ್ಭವೊದಗಿದಾಗ ವಿವರಿಸೋಣ. ಇಲ್ಲಿ ರುದ್ರನೆಂಬ ದೇವತೆಯನ್ನು ಬುದ್ಧಿಪ್ರಚೋದನೆ ಮಾಡುವಂತೆ ಪ್ರಾರ್ಥಿಸಿದೆ. ಆ ರುದ್ರನಾದರೋ– ಹಿಂದೆ ವಿಶ್ವತಶ್ಚಕ್ಷುವೆಂದು ವರ್ಣನೆ ಮಾಡಿದ ಪರಬ್ರಹ್ಮನೇ ಆಗಿರುವನು. ಆದರೂ ಪ್ರಾಣಿಗಳ ದುಃಖವನ್ನು ನಾಶಗೊಳಿಸುವವನೆಂಬ ಅರ್ಥದಲ್ಲಿ ರುದ್ರನೆಂದಿದೆ. ಪುರಗಳಲ್ಲಿ ಎಂದರೆ ಶರೀರಗಳಲ್ಲೆಲ್ಲ ಹೊಕ್ಕಿರುವದರಿಂದ ಅವನು ಪುರುಷನೆನಿಸಿರುವನು. ಎಲ್ಲಾ ಪ್ರಾಣಿಗಳ ಕಣ್ಣುಗಳೂ ಅವನದೇ ಆದ್ದರಿಂದ ಸಹಸ್ರಾಕ್ಷನು. ದೇವತೆಗಳಿಗೂ ಒಡೆಯನಾದ್ದರಿಂದ ಮಹಾದೇವನು–ಇಂಥ ದೇವನನ್ನು ನಾವು ಬಲ್ಲೆವು ಆತನು ನಮ್ಮನ್ನು ಪ್ರೇರಿಸಲಿ–ಎಂದಭಿಪ್ರಾಯ.

ಓಂ ॥ ತತ್ಪುರುಷಾಯ ವಿದ್ಮಹೇ ಮಹಾದೇವಾಯ ಧೀಮಹಿ ।
ತನ್ನೋ ರುದ್ರಃ ಪ್ರಚೋದಯಾತ್ ॥

ಈ ಮಂತ್ರವನ್ನು ರುದ್ರಗಾಯತ್ರೀ–ಎಂದು ಕರೆಯುವರು. ವ್ಯವಹಾರ ದೃಷ್ಟಿಯಲ್ಲಿ ರುದ್ರನಿಗೆ ಜಗತ್ಸಂಹಾರವೆಂಬ ಕಾರ್ಯವು ಗೊತ್ತುಮಾಡಲ್ಪಟ್ಟಿದೆ. ಸ್ಥಿತಿಕಾಲದಲ್ಲಿಯೂ ಪ್ರಾಣಿಗಳು ಕರ್ಮಗಳು ಸವೆದಂತೆಲ್ಲ, ಆಯುಷ್ಯವು ತೀರಿದಂತೆಲ್ಲ ನಾಶವಾಗುತ್ತಲೇ ಇರುವವು. ಇದು ಅವಶ್ಯವೂ ಹೌದು. ಇಲ್ಲವಾದರೆ ಹೊಸದಾಗಿ ಹುಟ್ಟಿಬರುವವರಿಗೆ ಭೂಮಿಯ ಮೇಲೆ ಸ್ಥಳವೇ ಇಲ್ಲದಂತಾಗಿಬಿಡುವದು. ಆದ್ದರಿಂದ ರುದ್ರನು ಕಾಲಾನುಗುಣವಾಗಿ ತನ್ನ ಸಂಹಾರಕಾರ್ಯವನ್ನು ಮಾಡುತ್ತಿರುವನು. ಜನರಿಗೆ ಕಾಲಮೃತ್ಯುವು ಒದಗಿದಾಗ ಅಷ್ಟೇನೂ ದುಃಖವಾಗುವದಿಲ್ಲ. ಆದರೆ ಅಕಾಲಮೃತ್ಯುವು ಬರಬಾರದು. ಹಾಗೆ ಬಾರದಿರಬೇಕಾದರೆ ರುದ್ರನ ಅನುಗ್ರಹವಿರಬೇಕು. ಮತ್ತು ರುದ್ರನು ಶಿವನಾದ್ದರಿಂದ ಅವನನ್ನು ಆರಾಧಿಸಿದವರಿಗೆ ಮಂಗಳವನ್ನುಂಟುಮಾಡುವನು. ಅವನ ಪತ್ನಿಯು ಮಂಗಳಗೌರಿಯು. ಇಂಥ ಶಿವನನ್ನು ಇಲ್ಲಿ ರುದ್ರನೆಂದು ಹೊಗಳಿದೆ. ಹೆಚ್ಚಿನ ವಿವರಗಳಿಗೆ ಯಜುರ್ವೇದದ ರುದ್ರಾಧ್ಯಾಯವನ್ನು ನೋಡಬೇಕು* ಗ್ರಂಥವನ್ನು

*ಇದೇ ಲೇಖಕರಿಂದ "ರುದ್ರಭಾಷ್ಯ ಪ್ರಕಾಶ" ಎಂಬ ಹೆಸರಿನಿಂದ ಬರೆಯಲ್ಪಟ್ಟು ಕಾರ್ಯಾಲಯದ ಮೂಲಕ ಪ್ರಕಾಶಿತವಾಗಿರುವ ಪುಸ್ತಕವನ್ನು ನೋಡಿರಿ.

ನೋಡಿರಿ. ಈ ರುದ್ರನಿಗೆ ತತ್ಪುರುಷನೆಂದೂ ಹೆಸರಿದೆ. **ತತ್** ಎಂದರೆ ವೇದಾಗಮ ಪ್ರಸಿದ್ಧನಾದ ಆ ಪುರುಷನಾದ, ಮಹಾದೇವನಾದ ರುದ್ರನನ್ನು ನಾವು ಬಲ್ಲವರಾಗಿದ್ದು ಈಗ ಧ್ಯಾನಿಸುವೆವು. ಆತನು ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಿಸಲಿ– ಎಂದಭಿಪ್ರಾಯ.

**ಓಂ ॥ ತತ್ಪುರುಷಾಯ ವಿದ್ಮಹೇ ವಕ್ರತುಂಡಾಯ ಧೀಮಹಿ ।**
**ತನ್ನೋ ದಂತಿಃ ಪ್ರಚೋದಯಾತ್ ॥**

ಈ ಮಂತ್ರವನ್ನು ಗಣೇಶಗಾಯತ್ರೀ–ಎಂದು ಕರೆಯುತ್ತಾರೆ. ಇದೇ ಮಂತ್ರದ ಪೂರ್ವಾರ್ಧವನ್ನು 'ಗಣಪತ್ಯಥರ್ವಶೀರ್ಷ' ವೆಂಬ ಉಪನಿಷತ್ತಿನಲ್ಲಿ 'ಏಕದಂತಾಯ ವಿದ್ಮಹೇ ವಕ್ರತುಂಡಾಯ ಧೀಮಹಿ' ಎಂದುಕೊಟ್ಟಿರುತ್ತದೆ. ಈ ಎರಡು ಪಾಠಭೇದಗಳಿಂದ ಕೂಡಿದ ಪ್ರಕೃತಮಂತ್ರವನ್ನು ಗಣಪತಿಯ ಪೂಜಾ, ಹೋಮ, ಜಪ, ತರ್ಪಣಾದಿಗಳೆಲ್ಲಕ್ಕೂ ವೈದಿಕರು ವಿನಿಯೋಗಿಸುತ್ತಾರೆ. ಪೌರಾಣಿಕಕಥೆಯಂತೆ ಗಣಪತಿಯನ್ನು ಈಶ್ವರನ ಪುತ್ರನೆಂದು ಭಾವಿಸಲಾಗಿದೆ. ಆತನು ಎಲ್ಲಾ ದೇವಗಣಗಳಿಗೂ ನಾಯಕನು. ಅಧ್ಯಾತ್ಮವಾಗಿ ಇಂದ್ರಿಯಗಳು, ಮನೋಬುದ್ಧಿಗಳೆಂಬ ಕಾರ್ಯಕರಣಸಂಘಾತಕ್ಕೂ ಒಡೆಯನು. ಅವನ ದಂತವು ಭಿನ್ನವಾಗಿರುವದರಿಂದ ವಕ್ರತುಂಡನೆಂದು ಕರೆಯುವರು. ಅವನು ಮುಖ್ಯವಾಗಿ ವಿಘ್ನಗಳಿಗೆ ಒಡೆಯನು. ಆದ್ದರಿಂದ ದೇವಾಸುರನರರಾದಿಯಾಗಿ ಎಲ್ಲರೂ ತಮ್ಮ ತಮ್ಮ ಕಾರ್ಯಗಳಲ್ಲಿ ಸಿದ್ಧಿಯಾಗುವಂತೆಯೂ ವಿಘ್ನಗಳು ಬಾರದಂತೆಯೂ ಮಾಡಿಕೊಳ್ಳುವದಕ್ಕಾಗಿ ಸಕಲಕಾರ್ಯಾರಂಭಗಳಲ್ಲಿಯೂ ಈ ಗಣಪತಿಯನ್ನು ಪೂಜಿಸುವರು. ಇಷ್ಟೇ ಅಲ್ಲದೆ ಈತನು ಸಕಲವಿದ್ಯಾಪ್ರದನು. ಭೂಮಿತತ್ತ್ವದವನು. ಆದ್ದರಿಂದ ವಿದ್ಯಾರ್ಥಿಗಳೂ ಕೃಷಿಕರೂ ಸಹ ತಮ್ಮ ಇಷ್ಟಾರ್ಥಸಿದ್ಧಿಗಾಗಿ ಈತನನ್ನೇ ಪೂಜಿಸುವರು. ಈತನು ಮಹಾಯೋಗಿಯಾದ್ದರಿಂದ ಅಧ್ಯಾತ್ಮವಾಗಿ ಯೋಗಸಿದ್ಧಿಗಳನ್ನು ಬಯಸುವವರೂ ಇವನನ್ನು ಆರಾಧಿಸುತ್ತಾರೆ. ಹೀಗೆ ಸರ್ವಜನಪ್ರಿಯನಾದ ಈತನು ಕೈಯಲ್ಲಿ ತನ್ನ ಕೋರೆದಾಡೆಯ ಮುರುಕುಭಾಗವನ್ನು ಹಿಡಿದಿರುವದರಿಂದ ದಂತಿಯೆನಿಸುವನು. ವಿಘ್ನೇಶ್ವರನಾದ ಈ ಗಣೇಶನ ಹೆಚ್ಚಿನ ಮಹಿಮೆಗಳನ್ನೂ ವಿಭೂತಿಗಳನ್ನೂ ಪುರಾಣಗಳಿಂದ ಅರಿತುಕೊಳ್ಳಬೇಕು. ಇಂಥ ದಂತಿಯು ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಿಸಲಿ–ಎಂದು ಇಲ್ಲಿ ಪ್ರಾರ್ಥಿಸಲಾಗಿದೆ.

**ಓಂ ॥ ತತ್ಪುರುಷಾಯ ವಿದ್ಮಹೇ ಚಕ್ರತುಂಡಾಯ ಧೀಮಹಿ ॥**
**ತನ್ನೋ ನಂದಿಃ ಪ್ರಚೋದಯಾತ್ ॥**

ಈ ಮಂತ್ರವನ್ನು **ವೃಷಭಗಾಯತ್ರೀ**–ಎನ್ನಬಹುದು. ವೃಷಭನು ಅಥವಾ ನಂದಿಯು ಪರಮೇಶ್ವರನ ಅತ್ಯಂತಪ್ರಿಯನಾದ ಸೇವಕನಾಗಿರುವನು. ಈತನು ಧರ್ಮಕ್ಕೆ ಪ್ರತಿನಿಧಿಯಾಗಿರುತ್ತಾನೆ. ಪರಮೇಶ್ವರನು ಧರ್ಮವನ್ನೇ ಎತ್ತಿಹಿಡಿದಿದ್ದಾನೆ–ಎಂಬುದಕ್ಕೆ ಗುರುತೇನೆಂದರೆ: ತನ್ನ ಧ್ವಜದಲ್ಲಿ ನಂದಿಯನ್ನು ಧರಿಸಿರುತ್ತಾನೆ. ಇಂಥ ನಂದಿಯು ನಾಲ್ಕು ಕಾಲಿನ ಒಂದು ಜಂಗಮಪ್ರಾಣಿಯಲ್ಲವೆ? ಎಂದು ಯಾರೂ ಶಂಕಿಸಬಾರದು. ಲೋಕದ ಜನರಿಗೆ ಉಪಕಾರಮಾಡುವದಕ್ಕಾಗಿ ಅಂಥ ಗೋರೂಪವನ್ನೂ ಧರಿಸಿದ್ದರೂ ಆತನು ತನ್ನ ತಪಸ್ಸು–ಈಶ್ವರಭಕ್ತಿನಿಷ್ಠೆಗಳ ಬಲದಿಂದ ಇಚ್ಛಾರೂಪವನ್ನು ಧರಿಸಬಲ್ಲನು. ಮಹಾಜ್ಞಾನಿಯಾದುದರಿಂದ ಜಗತ್ತಿಗೆಲ್ಲ ಶಿವತತ್ತ್ವೋಪದೇಶ ಮಾಡಬಲ್ಲವನಾಗಿರುತ್ತಾನೆ. ಈ ಅರ್ಥದಲ್ಲಿ ಗುರುವಾಗಿರುತ್ತಾನೆ. ಪರಮೇಶ್ವರನ ಸನ್ನಿಧಿಯಲ್ಲಿ ತನ್ನ ದಿವ್ಯರೂಪದಿಂದ ಇದ್ದುಕೊಂಡು ಅವನಿಗೆ ವಾಹನವಾಗಿದ್ದು ಯುದ್ಧಗಳಲ್ಲಿ ರಾಕ್ಷಸಸಂಹಾರವನ್ನೂ ಮಾಡುವನು. ಅವನ ಕೋಡುಗಳು ವಿಷ್ಣುವಿನ ಸುದರ್ಶನ ಚಕ್ರದಂತೆ ಇದ್ದುಕೊಂಡವಾಗಿದ್ದು ಅವುಗಳಿಂದಲೇ ದೈತ್ಯಸಂಹಾರವನ್ನು ಕೈಗೊಳ್ಳುವನು. ಇಂಥ ಮಹಾಬಲಶಾಲಿಯೂ ವೀರ್ಯವಂತನೂ ಸ್ವಾಮಿಭಕ್ತನೂ ಆದ ನಂದಿಯು ಈ ಕಾರಣದಿಂದ ಚಕ್ರತುಂಡನೆನಿಸಿರುವನು. ಈ ದೇವನು ನಮ್ಮ ಬುದ್ಧಿವೃತ್ತಿಗಳನ್ನು ಪ್ರಚೋದನೆ ಮಾಡಲಿ–ಎಂದು ಅಭಿಪ್ರಾಯ.

**ಓಂ ॥ ತತ್ಪುರುಷಾಯ ವಿದ್ಮಹೇ ಮಹಾಸೇನಾಯ ಧೀಮಹಿ ।**
**ತನ್ನಃ ಷಣ್ಮುಖಃ ಪ್ರಚೋದಯಾತ್ ॥**

ಈ ಮಂತ್ರವನ್ನು **ಷಣ್ಮುಖಗಾಯತ್ರೀ** ಅಥವಾ **ಸ್ಕಂದಗಾಯತ್ರೀ** ಎನ್ನುವರು. ಗಣಪತಿಯಂತೆಯೇ ಷಣ್ಮುಖನೂ ಈಶ್ವರನ ಪುತ್ರನು. ದಿವ್ಯಜ್ಞಾನಿಯು. ಅನೇಕ ವೇಳೆ ಋಷಿಮುನಿಗಳಿಗೆ ಈತನು ತತ್ತ್ವೋಪದೇಶವನ್ನು ಮಾಡಿರುತ್ತಾನೆ. ತಾನು ಸ್ವತಃ ಪರಮೇಶ್ವರನಿಂದ ತತ್ತ್ವವಿಚಾರವನ್ನು ಶ್ರವಣಮಾಡಿರುತ್ತಾನೆ. ಒಮ್ಮೆ ಈತನು ಸನತ್ಕುಮಾರ ಋಷಿಗಳ ರೂಪದಿಂದ ನಾರದರಿಗೆ ಭೂಮವಿದ್ಯೆ ಎಂಬ ಹೆಸರಿನಿಂದ ಬ್ರಹ್ಮೋಪದೇಶವನ್ನು ಮಾಡಿದನೆಂದು ಛಾಂದೋಗ್ಯೋಪನಿಷತ್ತಿನಲ್ಲಿದೆ. ಅಲ್ಲದೆ ಈತನು ದೇವಸೇನಾಪತಿಯೆನಿಸಿರುವನು. ಹುಟ್ಟಿದ ಏಳು ದಿನಗಳಲ್ಲಿಯೇ ತಾರಕಾಸುರನೆಂಬ ರಾಕ್ಷಸನನ್ನು ಸಂಹಾರಮಾಡಿದನು. ಇವನ ಇನ್ನೂ ಅನೇಕ ಲೀಲೆಗಳನ್ನು ಪುರಾಣಗಳಲ್ಲಿ ವರ್ಣಿಸಿರುತ್ತದೆ. ಇಂಥ ಮಹಾಸೇನನು ಅಥವಾ ಷಣ್ಮುಖನು ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಿಸಲಿ–ಎಂದು ಪ್ರಾರ್ಥಿಸಲಾಗಿದೆ.

**ಓಂ ॥ ತತ್ಪುರುಷಾಯ ವಿದ್ಮಹೇ ಸುವರ್ಣಪಕ್ಷಾಯ ಧೀಮಹಿ ।**
**ತನ್ನೋ ಗರುಡಃ ಪ್ರಚೋದಯಾತ್ ॥**

ಗರುಡನೆಂಬುವನು ಮಹಾವಿಷ್ಣುವಿನ ಪ್ರಿಯಭಕ್ತನು. ಈತನು ಪಕ್ಷಿಜಾತಿಗೆ ಸೇರಿದವನು. ವಿನತಾ ಎಂಬ ಹೆಸರಿನ ಕಶ್ಯಪರ ಪತ್ನಿಯೇ ಈತನ ತಾಯಿಯು. ತನ್ನ ಮಹಾತಪಃಫಲವಾಗಿ ವಿಷ್ಣುವಿಗೆ ವಾಹನನಾಗಿರುವನು. ಗೀತೆಯಲ್ಲಿ ಗರುಡನನ್ನು ಒಂದು ವಿಭೂತಿಯಾಗಿ ಭಗವಂತನು ವರ್ಣಿಸಿದ್ದಾನೆ. ಈತನನ್ನು **ಛಂದೋಮಯನೆಂದು** ಭಾಗವತದಲ್ಲಿ ವರ್ಣಿಸಿದೆ. ಛಂದಸ್ಸುಗಳೆಂದರೆ ವೇದಗಳು. ಹೇಗೆ ವೇದಗಳ ಮೂಲಕವೇ ಪರಬ್ರಹ್ಮವನ್ನರಿತುಕೊಳ್ಳಬೇಕಾಗಿದೆಯೋ ಹಾಗೆಯೇ ಗರುಡನ ಮೂಲಕವೇ ವಿಷ್ಣುವಿನ ದರ್ಶನವಾಗಬೇಕಾಗಿದೆ. ಸಾಹೇಬರನ್ನು ಡ್ರೈವರ್ ಮಹಾಶಯನು ಕರೆತರುವಂತೆ ಮಹಾವಿಷ್ಣುವನ್ನು ಭಕ್ತರ ಬಳಿಗೆ ಒಯ್ದು ತರುವವನೇ ಗರುಡನು. ಆದ್ದರಿಂದ ಭಕ್ತನು ಗರುಡನ ಅನುಗ್ರಹವನ್ನು ಸಂಪಾದಿಸಿಕೊಳ್ಳಬೇಕು. ಆತನು ಶೋಭನವಾದ ರೆಕ್ಕೆಗಳುಳ್ಳವನು. ಆದ್ದರಿಂದ **ಸುವರ್ಣಪಕ್ಷನು**–ಎಂದಿದೆ. ವಿಷ್ಣುವು ಗರುಡಧ್ವಜನೂ ಆಗಿರುತ್ತಾನೆ–ಅಂದರೆ ಒಂದರ್ಥದಲ್ಲಿ ವೇದಗಳನ್ನು ಎತ್ತಿ ಹಿಡಿದಿರುತ್ತಾನೆ –ಎಂದಭಿಪ್ರಾಯ. ವೇದಾಧ್ಯಯನ ಮಾಡಿ ತತ್ತ್ವವಿಚಾರಮಾಡಿದರೆ ಜ್ಞಾನವು ಲಭಿಸಿ ಮುಕ್ತಿಯ ಪ್ರಾಪ್ತಿಯಾಗುವದು. 'ವೇದಾನುವಚನದಿಂದ ಬ್ರಾಹ್ಮಣರು ಬ್ರಹ್ಮವನ್ನು ತಿಳಿಯಲೆಳಸುತ್ತಾರೆ'– ಎಂದು ಬೃಹದಾರಣ್ಯಕೋಪನಿಷತ್ತಿನಲ್ಲಿದೆ. ಇಂಥ ವೇದವೇ ಗರುಡನು. ವಿಷ್ಣುವಿಗೆ **ಗರುಡೋತ್ಸವ**–ಎಂಬ ಉಪಚಾರವು ಆಗಮಗಳಲ್ಲಿ ಹೇಳಲ್ಪಟ್ಟಿದೆ. ಅದರ ಅಂತರಾರ್ಥವೇನೆಂದರೆ ಗರುಡನ ಸ್ಥಾನದಲ್ಲಿರುವ ವೇದಗಳನ್ನು ನಾವು ಅಧ್ಯಯನ ಮಾಡಿ ಅನಂತರ ವಿಷ್ಣುವನ್ನು ಆ ಮೂಲಕ ಪಡೆಯಲಿಚ್ಛಿಸಬೇಕು– ಎಂಬಿದೇ ಆಗಿದೆ. ಇಂಥ ಗರುಡನು ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಿಸಲಿ– ಎಂದಭಿಪ್ರಾಯ.

**ಓಂ ॥ ವೇದಾತ್ಮನಾಯ ವಿದ್ಮಹೇ ಹಿರಣ್ಯಗರ್ಭಾಯ ಧೀಮಹಿ ।**
**ತನ್ನೋ ಬ್ರಹ್ಮ ಪ್ರಚೋದಯಾತ್ ॥**

ಇದು ಬ್ರಹ್ಮಗಾಯತ್ರೀಮಂತ್ರವು. ಇಲ್ಲಿ ಬ್ರಹ್ಮನೆಂದರೆ ಪ್ರಜಾಪತಿಯಾದ ಹಿರಣ್ಯಗರ್ಭನೆಂದರ್ಥ. ಈತನು ಸೃಷ್ಟಿಯಲ್ಲೇ ಪ್ರಪ್ರಥಮ ಪ್ರಜೆಯಾಗಿರುವನು. ಪರಮಾತ್ಮನು ಇವನನ್ನು ಉಂಟುಮಾಡಿ ವೇದಗಳನ್ನೆಲ್ಲ ಅನುಗ್ರಹಿಸುವನು. ಇವನಲ್ಲಿಯೇ ಹದಿನಾಲ್ಕು ಲೋಕಗಳೂ ಅಡಕವಾಗಿರುವವಾದ್ದರಿಂದ ಇವನು ಬ್ರಹ್ಮಾಂಡಕ್ಕೆ

ಸೃಷ್ಟಿಕರ್ತನಾದ ಒಡೆಯನು. ಯಜುರ್ವೇದದಲ್ಲಿರುವ ಬ್ರಹ್ಮಸೂಕ್ತದಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದೆ. ಈತನನ್ನು ಸರಿಗಟ್ಟುವವರೇ ಇಲ್ಲ. ಈತನೇ ಮೂವತ್ತುಮೂರು ಕೋಟಿ ದೇವತೆಗಳ ರೂಪದಲ್ಲಿ ತನ್ನ ವಿಭೂತಿಯನ್ನು ಹರಡಿರುವನು. ಇಂದ್ರನೂ ಬೃಹಸ್ಪತಿಯೂ ಎಲ್ಲರೂ ಈತನ ಅಂಶಭೂತರೇ ಆಗಿರುವರು. ಈತನು ಹುಟ್ಟುವಾಗಲೇ ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯಗಳೆಂಬ ಗುಣಚತುಷ್ಟಯಗಳು ಸಹ ಸಿದ್ಧವಾಗಿರುವವು. ಹಿಂದೆಯೇ ಇವನನ್ನು ಸದಸಸ್ಪತಿ ಎಂದೂ ತಿಳಿಸಿದ್ದಾಗಿದೆ. ಇಂಥ ಬ್ರಹ್ಮನು ವೇದಾತ್ಮಕನು. ಇವನು ನಮ್ಮ ಬುದ್ಧಿವೃತ್ತಿಗಳನ್ನು ಪ್ರಚೋದನೆ ಮಾಡಲಿ– ಎಂದಭಿಪ್ರಾಯ.

**ಓಂ ॥ ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ ।**
**ತನ್ನೋ ವಿಷ್ಣುಃ ಪ್ರಚೋದಯಾತ್ ॥**

ಇದು ವಿಷ್ಣುಗಾಯತ್ರೀಮಂತ್ರವು. ವೇದಸಂಹಿತೆಗಳಲ್ಲಿ 'ವಿಷ್ಣು' ಎಂಬ ಹೆಸರು ಪ್ರಚುರವಾಗಿರುವಂತೆ 'ನಾರಾಯಣ' ಎಂಬ ಹೆಸರು ಪ್ರಚುರವಾಗಿಲ್ಲ. ಈ ಉಪನಿಷತ್ತಿನಲ್ಲಿ ಮಾತ್ರ ಇಲ್ಲಿ ನಾರಾಯಣ ಶಬ್ದವು ಶ್ರುತವಾಗಿದ್ದು ಮುಂದೆಯೂ 'ಸಹಸ್ರಶೀರ್ಷಂ ದೇವಂ' ಎಂಬ ಅನುವಾಕದಲ್ಲಿ ಮತ್ತೆ ಮತ್ತೆ ಪಠಿಸಲ್ಪಟ್ಟಿದೆ. ನಾರಾಯಣ, ವಾಸುದೇವಾದಿಶಬ್ದಗಳು ಸ್ಮೃತಿಪುರಾಣಗಳಲ್ಲಿ ವಿಸ್ತಾರವಾಗಿ ವ್ಯಾಖ್ಯಾನ ಮಾಡಲ್ಪಟ್ಟಿದೆ. ಇವೆಲ್ಲ ಪರಬ್ರಹ್ಮವಾಚಕಗಳೆಂದೇ ಭಾಷ್ಯಕಾರರುಗಳು ನಿರ್ಣಯಿಸಿರುತ್ತಾರೆ. ಭಗವಂತನ ದಿವ್ಯನಾಮಗಳಲ್ಲಿ ಇವೆರಡು ಹೆಸರುಗಳೂ ಮಹಾಮಂತ್ರಗಳೆನಿಸಿವೆ. **'ಓಂ ನಮೋ ನಾರಾಯಣಾಯ'** ಎಂಬ ಅಷ್ಟಾಕ್ಷರೀ ಮಂತ್ರವೂ **'ಓಂ ನಮೋ ಭಗವತೇ ವಾಸುದೇವಾಯ'** ಎಂಬ ದ್ವಾದಶಾಕ್ಷರಮಂತ್ರವೂ ವೈಷ್ಣವಸಂಪ್ರದಾಯದಲ್ಲಿ ಪರಮಪೂಜ್ಯವೂ ರಹಸ್ಯವೂ ಆಗಿದ್ದು ಗುರುಗಳಿಂದ ಶಿಷ್ಯರಿಗೆ ಉಪದೇಶಿಸಲ್ಪಡುತ್ತವೆ. ಜಗನ್ಮೂಲವಾದ ಜಲತತ್ತ್ವವನ್ನು **'ನಾರ'** ವೆನ್ನುವರು. ಆ ನಾರಕ್ಕೂ ಅಯನ– ಎಂದರೆ ಆಶ್ರಯಸ್ಥಾನವಾಗಿರುವವನೇ ನಾರಾಯಣನು. ಹಾಗೆಯೇ ಎಲ್ಲಾ ಭೂತಗಳ ಹೃದಯದಲ್ಲಿಯೂ ನಿವಾಸಮಾಡುವವನಾಗಿ ಮೂರು ಲೋಕಗಳನ್ನೂ ವ್ಯಾಪಿಸಿ ವಾಸಮಾಡಿಕೊಂಡಿರುವದರಿಂದ ಭಗವಂತನನ್ನು ವಾಸುದೇವನೆಂದೂ ಕರೆಯುವರು. ಇನ್ನು ಕೃಷ್ಣಾವತಾರಕಾಲಕ್ಕೆ ವಸುದೇವನ ಮಗನಾಗಿ ಅವತರಿಸಿದ್ದರಿಂದ ಆತನ ಮಗನು ಎಂಬರ್ಥದಲ್ಲಿಯೂ ವಾಸುದೇವನೆಂದು ಋಷಿಗಳು ಕರೆಯುತ್ತಾರೆ. ಇನ್ನು ವಿಷ್ಣುವೆಂದರೆ ಸರ್ವವ್ಯಾಪಕನೆಂದರ್ಥ. ಜಗದ್ವ್ಯಾಪಾರಗಳಲ್ಲಿ ಸ್ಥಿತಿಯೆಂಬುದು ವಿಷ್ಣುವಿನ ಅಧೀನವಾಗಿರುವದು. ಈಗ ಸ್ಥಿತಿಕಾಲವು. ಆದ್ದರಿಂದಲೇ ಎಲ್ಲರೂ ವಿಷ್ಣುವನ್ನು ಆರಾಧನೆ

ಮಾಡಬೇಕೆಂದು ಶಾಸ್ತ್ರಗಳು ತಿಳಿಸುತ್ತವೆ. ಇಂಥ ನಾರಾಯಣನೆಂಬ ವಿಷ್ಣುವು ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಿಸಲಿ–ಎಂದು ಇಲ್ಲಿ ಪ್ರಾರ್ಥಿಸಲಾಗಿದೆ.

**ಓಂ ॥ ವಜ್ರನಖಾಯ ವಿದ್ಮಹೇ ತೀಕ್ಷ್ಣದಂಷ್ಟ್ರಾಯ ಧೀಮಹಿ ।**
**ತನ್ನೋ ನಾರಸಿಂಹಃ ಪ್ರಚೋದಯಾತ್ ॥**

ಇದು ನರಸಿಂಹಗಾಯತ್ರೀಮಂತ್ರವು. ನರರಲ್ಲಿ ಶ್ರೇಷ್ಠನು ಎಂಬರ್ಥದಲ್ಲಿ ಶ್ರೀಮಹಾವಿಷ್ಣುವೇ ನರಸಿಂಹನು–ಪುರುಷೋತ್ತಮನಾಗಿರುವನು. ವೇದದಲ್ಲಿ ವಾಮನಾವತಾರದ ಕಥೆಯ ಪರಾಮರ್ಶವಿದೆ. '**ಇದಂ ವಿಷ್ಣುರ್ವಿಚಕ್ರಮೇ.....**'' ಎಂಬೀ ಮಂತ್ರಗಳಲ್ಲಿ ಈ ಕಥೆಯ ಸೂಚನೆಯು ಕಂಡು ಬರುತ್ತದೆ. ಆದರೆ ನರಸಿಂಹಾವತಾರದ ವಿಚಾರದ ಪರಾಮರ್ಶವಿರುವದು ಇಲ್ಲಿ ಉಪನಿಷತ್ತಿನಲ್ಲಿ ಮಾತ್ರ–ಎಂದು ಕಂಡುಬಂದಿದೆ. ಮಹಾವಿಷ್ಣುವಿನ ಪುರಾಣಪ್ರಸಿದ್ಧವಾದ ದಶಾವತಾರಗಳಲ್ಲಿ ನಾಲ್ಕನೆಯದು ನರಸಿಂಹಾವತಾರವು. ಪ್ರಹ್ಲಾದನ ಪರಿಪಾಲನೆಗಾಗಿಯೂ ಹಿರಣ್ಯ ಕಶಿಪುವಿನ ಸಂಹಾರಕ್ಕಾಗಿಯೂ ಈ ಅವತಾರವು ಸ್ವೀಕರಿಸಲ್ಪಟ್ಟಿತು. ಹಿರಣ್ಯಕಶಿಪುವಿಗೆ ಇದ್ದ ಕೆಲವು ವರಗಳ ನಿಮಿತ್ತ ಆತನನ್ನು–ಸಂಹರಿಸಲು ಭಗವಂತನು ಪ್ರಾಣಿಯೂ ಅಲ್ಲದ ಮನುಷ್ಯನೂ ಅಲ್ಲದ ಶರೀರವನ್ನು ಧರಿಸಿ ಯಾವದೇ ಆಯುಧಗಳ ಸ್ಪರ್ಶವಿಲ್ಲದೆ ಕೇವಲ ಉಗುರಿನಿಂದಲೇ ಆ ದೈತ್ಯನನ್ನು ಸೀಳಿದನು. ಆದ್ದರಿಂದ ವಜ್ರನಖನೆನಿಸಿದನು. ಕ್ರೂರವಾದ ಕೋರೆದಾಡೆಗಳುಳ್ಳವನಾಗಿದ್ದುದರಿಂದ ತೀಕ್ಷ್ಣದಂಷ್ಟ್ರನಾದನು. ಇಂಥ ನರಸಿಂಹನು ಇಲ್ಲಿ ಸ್ತುತಿಸಲ್ಪಟ್ಟಿರುತ್ತಾನೆ. ನರಸಿಂಹಾವತಾರದ ಚರಿತ್ರೆಯು ವಿಷ್ಣುಪುರಾಣ, ಶ್ರೀಮದ್ಭಾಗವತಾದಿಗಳಲ್ಲಿ ವಿಸ್ತಾರವಾಗಿ ವರ್ಣಿಸಲ್ಪಟ್ಟಿದೆ. ವೇದದಲ್ಲಿ ಸೂಚ್ಯವಾಗಿರುವ ಕಥೆಗಳನ್ನು ಇತಿಹಾಸಪುರಾಣಗಳು ವಿಸ್ತರಿಸುತ್ತವೆ. ಆದ್ದರಿಂದ ವೇದಾರ್ಥವನ್ನು ವಿವರಿಸುವಾಗ ಇತಿಹಾಸ ಪುರಾಣಗಳನ್ನು ಸಹಾಯಕ್ಕೆ ತೆಗೆದುಕೊಳ್ಳಲೇಬೇಕು. ಇವು ಕೂಡ ಋಷಿಗಳೇ ವೇದಾರ್ಥವನ್ನು ಸ್ಮರಿಸುತ್ತಾ ರಚಿಸಿದವುಗಳಾದ್ದರಿಂದ ಐದನೆಯ ವೇದವೆನಿಸಿರುತ್ತವೆ. ಹೀಗೆ ಪುರಾಣಗಳಲ್ಲಿ ತಿಳಿಸಿರುವ ಮಹಾವಿಷ್ಣುವಿನ ಅವತಾರನಾದ ನರಸಿಂಹನನ್ನು ಸ್ತುತಿಸಿ ಆತನು ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಿಸಲಿ–ಎಂದು ಪ್ರಾರ್ಥಿಸಿಕೊಂಡಿರುತ್ತದೆ.

**ಓಂ ॥ ಭಾಸ್ಕರಾಯ ವಿದ್ಮಹೇ ಮಹದ್ಯುತಿಕರಾಯ ಧೀಮಹಿ ।**
**ತನ್ನೋ ಆದಿತ್ಯಃ ಪ್ರಚೋದಯಾತ್ ॥**

ಇದು ಸೂರ್ಯಗಾಯತ್ರೀಮಂತ್ರವು. ಸೂರ್ಯನಿಗೇ ಭಾಸ್ಕರನೆಂದೂ ಸವಿತೃವೆಂದೂ ಇನ್ನೂ ಅನೇಕ ಹೆಸರುಗಳಿವೆ. ಇವುಗಳಲ್ಲಿ ಹನ್ನೆರಡು ಹೆಸರುಗಳು

ಮುಖ್ಯವಾದವು. ಇವರುಗಳನ್ನು ದ್ವಾದಶಾದಿತ್ಯರುಗಳೆಂದೂ ಕರೆಯುವದುಂಟು. ಅದಿತಿಯ ಮಕ್ಕಳನ್ನೆಲ್ಲ ಆದಿತ್ಯರೆಂದು ಕರೆಯಬಹುದಾದರೂ "ಆದಿತ್ಯ" ನೆಂಬುದು ಸೂರ್ಯನಿಗೇ ರೂಢನಾಮವಾಗಿರುವದು. ಈತನು ತೇಜೋಮಯನೂ ಪ್ರಕಾಶ ಸ್ವರೂಪನೂ ಆದ್ದರಿಂದ ಭಾಸ್ಕರನೆನಿಸಿರುವನು. ಇವನ ಮಹತ್ತಾದ ಕಿರಣಗಳು ಜಗತ್ತನ್ನೆಲ್ಲ ಬೆಳಗುವವು. ಈತನು ಪ್ರಾಣಿಗಳ ಜೀವನಾಧಾರನು. ಸಸ್ಯಗಳು, ಪ್ರಾಣಿಗಳು, ಮನುಷ್ಯರು–ಎಲ್ಲರೂ ಈತನ ಶಾಖ–ಪ್ರಕಾಶಗಳಿಂದಲೇ ಹುಟ್ಟಿ ಬೆಳೆಯುವರು. ಮಳೆಯೂ ಪೈರುಗಳೂ ಇವನ ಅಧೀನವೇ ಆಗಿರುವದು. ಅಲ್ಲದೆ ಇವನು ಕಾಲಾತ್ಮನು. ತಿಥಿ, ವಾರ, ಪಕ್ಷ, ಸಂವತ್ಸರಾದಿ ಕಾಲವಿಭಾಗವೆಲ್ಲವೂ ಈತನ ಸಂಚಾರದಿಂದ ಗೊತ್ತು ಪಡಿಸಲ್ಪಡುವವು. ಈತನ ಉದಯವಿಲ್ಲದೆ ವೈದಿಕಕರ್ಮಗಳನ್ನು ಮಾಡಲಾಗುವದಿಲ್ಲ. ದ್ವಿಜರೆಲ್ಲರೂ ಸಂಧ್ಯಾಕಾಲಗಳಲ್ಲಿ ಈತನನ್ನೇ ಉಪಾಸನೆಮಾಡುವರು. ಈತನು ಆರೋಗ್ಯಪ್ರದನು ಹಾಗೂ ನಮಸ್ಕಾರಪ್ರಿಯನು. ವೇದದಲ್ಲಿ ಈತನನ್ನು ಕುರಿತ ಸ್ತೋತ್ರ (ಸೂಕ್ತ)ಗಳು ಸಾಕಷ್ಟಿವೆ. ಇಂಥ ಸೂರ್ಯದೇವನು ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಿಸಲಿ–ಎಂದು ಪ್ರಾರ್ಥಿಸಲಾಗಿದೆ.

**ಓಂ ॥ ವೈಶ್ವಾನರಾಯ ವಿದ್ಮಹೇ ಲಾಲೀಲಾಯ ಧೀಮಹಿ ।**
**ತನ್ನೋ ಅಗ್ನಿಃ ಪ್ರಚೋದಯಾತ್ ॥**

ಇದು ಅಗ್ನಿಗಾಯತ್ರೀಮಂತ್ರವು. ಅಗ್ನಿದೇವನ ವಿಚಾರವಾಗಿ ಕೆಲವು ವಿಷಯಗಳನ್ನು ಹಿಂದೆ (ಪು. 33) ತಿಳಿಸಲಾಗಿದೆ. ಅಗ್ನಿಗೆ ಹವಿಸ್ಸುಗಳನ್ನು ಅರ್ಪಿಸುವದು ಯಜ್ಞವೆನಿಸುವದು. "ಅಗ್ರೇ ನಯತಿ ಇತ್ಯಗ್ನಿಃ"–ಎಂಬ ವ್ಯುತ್ಪತ್ತಿಯಂತೆ ಆತನಲ್ಲಿ ಅರ್ಪಿಸಿದ ಆಹುತಿಗಳನ್ನು ಆಯಾ ದೇವತೆಗಳಿಗೆ ಒಯ್ದುಕೊಡುವವನಾದ್ದರಿಂದ ಅಗ್ನಿಯೆಂದು ಹೆಸರು ಬಂದಿದೆ. ಎಲ್ಲಾ ನರರಿಗೂ ಹಿತಕರನಾದ್ದರಿಂದ ವೈಶ್ವಾನರನು. ಈ ಮಂತ್ರದಲ್ಲಿ ಭಾಷ್ಯಕಾರರು **'ವಿದ್ಮಹೇ–ಲಾಲೀಲಾಯ'** ಎಂಬಲ್ಲಿ **'ವಿದ್ಮ–ಹೇಲಾಲೀಲಾಯ'** ಎಂದೂ ಪದಚ್ಛೇದವನ್ನು ಮಾಡಿ ಹೇಲಾಲೀಲೆಯೆಂದರೆ ಕ್ರೀಡಾರ್ಥವಾಗಿ ಕೈಗೊಳ್ಳುವ ಚೇಷ್ಟಾವ್ಯಾಪಾರಗಳು–ಎಂದರ್ಥ ಮಾಡಿದ್ದಾರೆ. ಅಗ್ನಿದೇವನಲ್ಲಿ ಅರ್ಪಿಸುವ ಆಹುತಿಗಳು ಬೇರೆಬೇರೆ ದೇವತೆಗಳಿಗೆ ಸೇರಿದವಾದ್ದರಿಂದಲೂ ಆಯಾ ದೇವತೆಗಳು ಬೇರೆಬೇರೆಯ ಲೋಕಗಳಲ್ಲಿರುತ್ತಾರಾದ್ದರಿಂದಲೂ ಪ್ರತಿಯೊಬ್ಬ ಕರ್ಮಿಯೂ ಹವಿರರ್ಪಣೆಮಾಡುತ್ತಲೇ ಇರುವದರಿಂದ ಅವುಗಳನ್ನೆಲ್ಲ ಹೊತ್ತು ಆಯಾ ದೇವತೆಗಳಿಗೇ ತಲುಪಿಸುವದು ಹೆಚ್ಚಿನ ಶ್ರಮಸಾಧ್ಯವಾದ ಕೆಲಸವಲ್ಲವೆ? ಎಂದು ನಮಗೆ ಕಂಡು ಬರುತ್ತದೆ. ನಾವು ಪ್ರಯಾಣ ಹೊರಟಿರುವಾಗ ಯಾರಾದರೂ

ಬಂದು 'ಈ ಕಾಗದವನ್ನು ದಯವಿಟ್ಟು ಇಂಥವರಿಗೆ ತಲುಪಿಸಿರಿ' ಎಂದು ಕೊಟ್ಟರೆ ಅಷ್ಟಕ್ಕೇ ನಾವು ಬೇಸರಗೊಳ್ಳುತ್ತೇವೆ. ಏಕೆಂದರೆ ಒಂದೇ ಊರಿನಲ್ಲಿ ನಾವೂ ವಿಳಾಸದಾರರೂ ಇದ್ದರೂ ಅವರ ಮನೆಗೆ ಹೋಗಿ ಮುಟ್ಟಿಸುವದು ಕೆಲವು ವೇಳೆ ಶ್ರಮಸಾಧ್ಯವಾಗಿರುವದು. ಅಥವಾ ಪ್ರಯಾಣವು ಮುಗಿದನಂತರ ನಮಗೆ ಆ ಪತ್ರದ ವಿಷಯವೇ ಮರೆತು ಹೋಗಬಹುದು. ಹೀಗಿರುವಲ್ಲಿ ಅಗ್ನಿದೇವನು ಹೇಗೆ ತನ್ನ ಕರ್ತವ್ಯವನ್ನು ನಿರ್ವಹಿಸುವನು?–ಎಂದರೆ ಅದಕ್ಕೆ ಉತ್ತರವಿದೆ. ಇಷ್ಟೆಲ್ಲ ಜವಾಬ್ದಾರಿಗಳಿದ್ದರೂ ಆತನಿಗೆ ಈ ಎಲ್ಲಾ ಕಾರ್ಯಗಳೂ ಆಟದಂತೆ ಸುಲಭ ಸಾಧ್ಯವಾಗಿದೆ. ಅವನಿಗೆ ಶ್ರಮವಾಗಲಿ, ಬೇಸರಿಕೆಯಾಗಲಿ ಇಲ್ಲವೇ ಇಲ್ಲವೆಂದರ್ಥ. ಇದನ್ನೇ **''ಹೇಲಾಲೀಲ''** ಎಂದು ವೇದದಲ್ಲಿ ಕರೆದಿದೆ. ಇನ್ನು **'ವಿದ್ಮಹೇ''** ಎಂಬ ಪದವನ್ನು ಹಿಂದಿನ ಮಂತ್ರಗಳಂತೆಯೇ ಉಳಿಸಿಕೊಳ್ಳುವದು ನ್ಯಾಯವೆಂದು ಕಂಡುಬಂದರೆ ಲಾಲೀಲಾಯ–ಎಂಬ ಪದದ ಹಿಂದುಗಡೆ 'ಹೇ' ಎಂಬ ಅಕ್ಷರಲೋಪವಾಗಿದೆಯೆಂದು ಭಾವಿಸಿ ಸೇರಿಸಿಕೊಂಡು ಅರ್ಥಮಾಡುವಂತೆಯೂ ಭಾಷ್ಯಕಾರರು ಸೂಚಿಸಿದ್ದಾರೆ. ಅಗ್ನಿಯನ್ನು ದೇವತೆಗಳಲ್ಲಿ ಅಗ್ರಗಣ್ಯನೆಂದೂ ಕರೆಯುವರು. ಆತನು ಎಲ್ಲರಿಗಿಂತ ಮುಂದಿರುವದೇ ಇದಕ್ಕೆ ಕಾರಣವು. ಮತ್ತು ಮಾನವರಿಗೂ ದೇವತೆಗಳಿಗೂ ನಡುವಣ ದೂತನೂ ಆಗಿರುತ್ತಾನೆ. ಇವನನ್ನು ಪುರೋಹಿತನೆಂದೂ ದೂತನೆಂದೂ ವೈದಿಕ ಸೂಕ್ತಗಳಲ್ಲಿ ಸ್ತುತಿಸಿದೆ. ಅಗ್ನಿದೇವತೆಯ ಮಹಿಮೆಯನ್ನರಿಯಲು ವೈದಿಕಸಾಹಿತ್ಯವನ್ನೇ ಅನುಸಂಧಾನಮಾಡಬೇಕು. ಇಂಥ ಅಗ್ನಿದೇವನು ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಿಸಲಿ–ಎಂದಭಿಪ್ರಾಯ.

**ಓಂ ॥ ಕಾತ್ಯಾಯನಾಯ ವಿದ್ಮಹೇ ಕನ್ಯಾಕುಮಾರಿ ಧೀಮಹಿ ।**
**ತನ್ನೋ ದುರ್ಗಿಃ ಪ್ರಚೋದಯಾತ್ ॥**

ಇದು ದುರ್ಗಾಗಾಯತ್ರೀಮಂತ್ರವು. ಇಲ್ಲಿ ದೇವಿಯನ್ನು ಕನ್ಯಾಕುಮಾರಿ–ಎಂದು ಕರೆಯಲಾಗಿದೆ. ಯಾವಳು ಕನ್ಯೆಯೂ ಕುಮಾರಿಯೂ ಆಗಿರುವಳೋ ಅವಳು ಕನ್ಯಾಕುಮಾರಿಯು–ಎಂದು ಕರ್ಮಧಾರಯಸಮಾಸವನ್ನು ಮಾಡಿಕೊಳ್ಳಬೇಕು. ಭಗವತೀ ಆದಿಶಕ್ತಿಯು ದಕ್ಷಪ್ರಜಾಪತಿಯ ಮಗಳಾಗಿ **'ಸತೀ'** ಎಂಬ ಹೆಸರಿನಿಂದ ಮೊದಲು ಅವತರಿಸಿ ಪರಮೇಶ್ವರನನ್ನು ವರಿಸಿದ್ದಳು. ಅನಂತರ ತಂದೆಯಿಂದ ತನ್ನ ಗಂಡನಿಗೆ ಉಂಟಾದ ಅಪಮಾನವನ್ನು ಸಹಿಸಲಾರದೆ ಯೋಗಾಗ್ನಿಯಲ್ಲಿ ಆತ್ಮಾರ್ಪಣೆಮಾಡಿಕೊಂಡು ಹಿಮವಂತ–ಮೇನಾ ದಂಪತಿಗಳಿಗೆ ಪುತ್ರಿಯಾಗಿ ಹುಟ್ಟಿದಳು. ಕುಮಾರಿ ವಯಸ್ಸಿನಲ್ಲಿಯೇ ಈಶ್ವರನನ್ನು ಕುರಿತು ತಪಸ್ಸುಮಾಡಿ ಆತನನ್ನು

ಒಲಿಸಿಕೊಂಡು ಕನ್ಯಾವಸ್ಥೆಯಲ್ಲಿಯೇ ಆತನ ಸಹಧರ್ಮಿಣಿಯಾದಳು. ಆದ್ದರಿಂದ ಋಷಿಗಳು ಈಕೆಯನ್ನು ಕನ್ಯಾಕುಮಾರಿಯೆಂದು ಕರೆದರು. ಹಿಂದಿನ ಕಾಲಕ್ಕೆ ಎಂಟನೆಯ ವಯಸ್ಸಿಗೇ ರಜೋದರ್ಶನಕ್ಕೆ ಮುಂಚೆಯೇ ಹೆಣ್ಣುಮಕ್ಕಳಿಗೆ ವಿವಾಹ ಮಾಡುತ್ತಿದ್ದರು. ಅದು ಅನ್ವರ್ಥವಾಗಿ ಕನ್ಯಾದಾನವೆನಿಸುತ್ತಿತ್ತು . ಅನಂತರ ಐದು ವರ್ಷಗಳ ಕಾಲ ಪತಿಯ ದೀರ್ಘಾಯುಷ್ಯ, ಆರೋಗ್ಯಸಂಪದಾದಿಗಳಿಗಾಗಿ ವ್ರತಕಥೆಗಳ ಅನುಷ್ಠಾನ ಗಳನ್ನು ಏರ್ಪಡಿಸಿ ವಿವಾಹಿತಳಾದ ವಧುವಿನಿಂದ ಮಾಡಿಸುತ್ತಿದ್ದರು, ಇದು ಒಂದು ರೀತಿಯ ತಪಸ್ಸೆನಿಸಿತ್ತು. ಇದಕ್ಕೆಲ್ಲ ಈ ಗೌರಿಯೇ ಆದರ್ಶಳು. ಈಕೆಯು ತನ್ನ ತಪಃಫಲದಿಂದಲೇ ಪರಮೇಶ್ವರನನ್ನು ಪತಿಯಾಗಿ ಹೊಂದಿದಳು. ಏಕೆಂದರೆ ಕಾಮದಿಂದ ಪರಶಿವನನ್ನು ಗೆಲ್ಲಲಾಗಲಿಲ್ಲ. ಅದಕ್ಕೆ ಬದಲಾಗಿ ಕಾಮದೇವನನ್ನೇ ಆ ಮಹೇಶ್ವರನು ಭಸ್ಮಮಾಡಿದ್ದನು. ಹೀಗೆ ಸನ್ನಿವೇಶವು ಇದ್ದದ್ದರಿಂದ ಕುಮಾರಿಯಾಗಿ ತಪಸ್ಸುಮಾಡಿ ಲೋಕಕ್ಕೆಲ್ಲ ಆದರ್ಶಪ್ರಾಯಳಾದ ಈ ಸರ್ವಮಂಗಳೆಯು ಕನ್ಯಾಕುಮಾರಿಯೆನಿಸಿದ್ದು ಆಶ್ಚರ್ಯವಲ್ಲ. ಇನ್ನು ಈಕೆಯನ್ನು ಕಾತ್ಯಾಯನಿಯೆಂದೂ, ದಾಕ್ಷಾಯಣಿಯೆಂದೂ, ದುರ್ಗೆಯೆಂದೂ ಬಲ್ಲವರು ಕರೆಯುತ್ತಾರೆ. ದಕ್ಷನೆಂಬವನು ಕಾತ್ಯಾಯನಗೋತ್ರದವನು. ಅವನ ಮಗಳಾದ್ದರಿಂದ ಕಾತ್ಯಾಯನಿ, ದಾಕ್ಷಾಯಣಿ–ಎಂಬ ಹೆಸರುಗಳು ಈಕೆಗೆ ಬಂದಿವೆ. ಇನ್ನು ದುರ್ಗತಿಯನ್ನು ನಾಶಗೊಳಿಸಿ ಭಕ್ತರಿಗೆ ಅಭಯಪ್ರದಳಾದ್ದರಿಂದ 'ದುರ್ಗಾ' ಎಂದೂ ಇವಳನ್ನು ಸಂಬೋಧಿಸುವರು. ದೇವಿಯನ್ನು ಶರಣಾಗದೆ ಯಾವನೂ ಕಷ್ಟಗಳನ್ನು ದಾಟಲಾರನು. ದುರ್ಗೆಯೆಂದರೂ ಪರಬ್ರಹ್ಮವೆಂದರೂ ಒಂದೇ. ಬೆಂಕಿಯ ಸುಡುವಿಕೆಯನ್ನು 'ದಹನಶಕ್ತಿ' ಎಂದಂತೆ ಪರಬ್ರಹ್ಮದ ವಿವಿಧಶಕ್ತಿಗಳ ಸಮಷ್ಟಿಯನ್ನು 'ದುರ್ಗೆ'ಯೆನ್ನಲಾಗಿದೆ. ಶ್ವೇತಾಶ್ವತರೋಪನಿಷತ್ತಿನಲ್ಲಿ ಒಂದು ಕಡೆ ಹೀಗೆಂದಿದೆ: 'ಈ ಬ್ರಹ್ಮದ ಪರಾಶಕ್ತಿಯು–ಎಂದರೆ ಸ್ವಭಾವದಿಂದಲೇ ಇದ್ದುಕೊಂಡಿರುವ ಜ್ಞಾನ–ಬಲ–ಐಶ್ವರ್ಯ–ವೀರ್ಯ–ತೇಜಸ್ಸು–ಶಕ್ತಿಗಳು ನಾನಾಪ್ರಕಾರವಾಗಿರುವವು'–ಎಂಬಲ್ಲಿ ಈ ಶಕ್ತಿಯನ್ನು ಪರಾಮರ್ಶಿಸಿದೆ. ಇದನ್ನೇ ಪುರಾಣಗಳಲ್ಲಿ ಮಹಾಕಾಳಿ–ಮಹಾಲಕ್ಷ್ಮಿ–ಮಹಾಸರಸ್ವತಿ–ಮುಂತಾದ ಹೆಸರುಗಳಿಂದ ವರ್ಣಿಸಿರುತ್ತದೆ. ಶಕ್ತಿಯ ಆರಾಧಕರನ್ನು 'ಶಾಕ್ತ'ರೆಂದು ಕರೆಯಲಾಗುತ್ತದೆ. ಇಂಥ ಶಕ್ತಿರೂಪಳಾದ ದುರ್ಗಾ ದೇವಿಯು ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಿಸುವವಳಾಗಲಿ–ಎಂದಭಿಪ್ರಾಯ.

## ದೂರ್ವಾಸೂಕ್ತ

ಗಾಯತ್ರೀಮಂತ್ರಗಳ ಅನಂತರ ಈ ಉಪನಿಷತ್ತು ದೂರ್ವಾಸೂಕ್ತದಿಂದ ಮುಂದುವರೆಯುತ್ತದೆ. ಅದು ಹೀಗಿದೆ:–

ಓಂ ॥ ಸಹಸ್ರಪರಮಾ ದೇವೀ ಶತಮೂಲಾ ಶತಾಂಕುರಾ ॥
ಸರ್ವಂ ಹರತು ಮೇ ಪಾಪಂ ದೂರ್ವಾ ದುಃಸ್ವಪ್ನನಾಶಿನೀ ॥

ಈ ದೂರ್ವಾಸೂಕ್ತವೂ ಮುಂದಿನ ಸ್ನಾನಮಂತ್ರಗಳಿಗೆ ಪೀಠಿಕೆಯಾಗಿದೆ. ಸ್ನಾನಮಾಡುವವನು ದೂರ್ವೆಯನ್ನೂ ಮೃತ್ತಿಕೆಯನ್ನೂ ಸಂಗ್ರಹಿಸಿಕೊಳ್ಳಬೇಕು. ಅನಂತರ ಅವಗಾಹನ (ನೀರಿನಲ್ಲಿ ದೇಹವನ್ನು ಪೂರ ಮುಳುಗಿಸುವದು) ಸ್ನಾನಮಾಡುವಾಗ ಇವುಗಳನ್ನು ತಲೆಯ ಮೇಲೆ ಧರಿಸಿಕೊಳ್ಳಬೇಕು. ಆದ್ದರಿಂದ ಇಲ್ಲಿ ದೂರ್ವೆಯ ಮತ್ತು ಮೃತ್ತಿಕೆಯ ಮಹಿಮೆಯನ್ನು ತಿಳಿಸುತ್ತಾರೆ. ಪ್ರಕೃತ–ದೂರ್ವೆಯೆಂಬುದು ಹುಲ್ಲಿನ ಹೆಸರು. ಹಸಿರು ಹುಲ್ಲನ್ನು ಕಾಣದೆ ಇರುವವರಾರು? ಯಾರೂ ಉತ್ತುಬಿತ್ತಿಮಾಡದೆ ಇದ್ದರೂ ದನಕರುಗಳಿಗೆ ಆಹಾರವಾಗಿ ದೂರ್ವೆಯು ತಾನೇ ಹುಟ್ಟಿ ಬೆಳೆಯುತ್ತದೆ. ಓಡಾಡುವಾಗಲೆಲ್ಲ ಎಷ್ಟೋ ಬಾರಿ ನಾವು ಅದನ್ನು ಕಾಲಿನಲ್ಲಿ ತುಳಿಯುವೆವು. ಆದರೆ ಉಪನಿಷತ್ತು ಈಗ ನಮಗೆ ಒಂದು ತಿಳಿವಳಿಕೆಯನ್ನು ಕೊಡುತ್ತಿದೆ. 'ದೂರ್ವೆಯು ಬರಿಯ ಹುಲ್ಲು ಮಾತ್ರವಲ್ಲ. ಅದೂ ಒಂದು ದೇವತೆ–ಎಂದು ತಿಳಿಯಿರಿ' ಎಂಬಿದೇ ಆ ತಿಳಿವಳಿಕೆಯು. ದೂರ್ವೆಯೇ ಎತ್ತರವಾಗಿ ಬೆಳೆದಾಗ "ದರ್ಭೆ" ಯೆನಿಸುವದು. ದರ್ಭೆಯನ್ನು ವೈದಿಕಕರ್ಮಗಳಲ್ಲಿ ಬಳಸುವದು ಎಲ್ಲರಿಗೂ ಗೊತ್ತಿದೆ. ಅದು ಪವಿತ್ರವೂ ಪಾವನವೂ ಆಗಿರುವದು. ಆ ಹುಲ್ಲನ್ನು ಒಂದು ವಿಶಿಷ್ಟಕ್ರಮದಿಂದ ಗಂಟುಹಾಕಿ ಬೆರಳಲ್ಲಿ ಧರಿಸುವದನ್ನೇ ವೈದಿಕರು "ಪವಿತ್ರಧಾರಣೆ" ಯೆನ್ನುವರು. ಇರಲಿ; ದೂರ್ವೆ ಎಂದು ಹೆಸರು ಬರಲು ಕಾರಣವೇನೆಂದರೆ: 'ದೂರ್ವತಿ ಇತಿ ದೂರ್ವಾ'–ಎಂಬ ವ್ಯುತ್ಪತ್ತಿಯಂತೆ ಹಿಂಸೆಯನ್ನು ಅಥವಾ ಪಾತಕವನ್ನು ಕಳೆದು ನಮ್ಮನ್ನು ಪವಿತ್ರಗೊಳಿಸುವದರಿಂದ ದೂರ್ವೆಯೆನಿಸುವದು. ಇಂಥ ದೂರ್ವೆಗೆ ಅಭಿಮಾನಿದೇವತೆಯಾದವಳನ್ನು ಕುರಿತು ಈಗ ಪ್ರಾರ್ಥನೆ ಮಾಡಲಾಗುತ್ತಿದೆ. ಇವಳು ಎಂಥವಳು? ಎಂಬುದನ್ನು ವಿಶೇಷಣಗಳಿಂದ ಸ್ಪಷ್ಟಗೊಳಿಸುತ್ತಾರೆ. ಈಕೆಯು ಸಹಸ್ರ ಪರಮಳು. ಉತ್ಕೃಷ್ಟವಾದ ಸಹಸ್ರಾರು ವಸ್ತುಗಳಲ್ಲಿ ಇವಳು ಪರಮಳು–ಎಂದರೆ ಹೆಚ್ಚಿನವಳು ಎಂದರ್ಥ. **ಶತಮೂಲಳು** ಎಂದರೆ ನೂರಾರು ಬೇರುಗಳುಳ್ಳವಳು. **ಶತಾಂಕುರಳು** ಎಂದರೆ ನೂರಾರು ಚಿಗುರುಗಳುಳ್ಳವಳು. ಹುಲ್ಲು ಹೇಗೆ ಹರಡಿಕೊಂಡು ಕುಡಿಕುಡಿಗಳಾಗಿ ಬೆಳೆಯುತ್ತದೆ ಎಂಬುದು ಎಲ್ಲರಿಗೂ ಗೊತ್ತಿದೆಯಷ್ಟೆ? ಇಂಥ ದೇವಿಯು ದುಃಸ್ವಪ್ನನಾಶಿನಿಯೂ ಆಗಿದ್ದಾಳೆಂದು ಶ್ರುತಿಯು ತಿಳಿಸುತ್ತದೆ. ಕೆಟ್ಟಸ್ವಪ್ನಗಳನ್ನು ಕಂಡಾಗ ಮನುಷ್ಯನು ಎದ್ದು ಕೈಕಾಲುಗಳನ್ನು ತೊಳೆದು ಕೊಂಡು ದೂರ್ವೆಯನ್ನು ದರ್ಶನ ಮಾಡಬೇಕು–ಹಾಗೂ ಸ್ಪರ್ಶನ ಮಾಡಬೇಕು–ಎಂದಭಿಪ್ರಾಯ. ಪೂರ್ವಕಾಲಕ್ಕೆ ಋಷಿಗಳೆಲ್ಲ ಕಾಡಿನಲ್ಲಿಯೇ ಇರುತ್ತಿದ್ದರಾದ್ದರಿಂದ

ಅವರಿಗೆ ದೂರ್ವೆ–ದರ್ಭೆಗಳು ಸಮೃದ್ಧಿಯಾಗಿ ದೊರೆಯುತ್ತಿದ್ದವು. ಅವರುಗಳು ತಮ್ಮ ಅಗ್ನಿಹೋತ್ರಾದಿಕರ್ಮಗಳ ಉಪಯೋಗಕ್ಕಾಗಿ ಹಾಗೂ ದೇವತಾರ್ಚನಾದಿಗಳಿಗೆ ಬೇಕಾಗಿದ್ದ ಹಾಲು–ಮೊಸರು–ತುಪ್ಪಗಳಿಗೆ ಗೋವುಗಳನ್ನು ಸಾಕುತ್ತಿದ್ದರು. ತಮಗೂ ಗೋವುಗಳಿಗೂ ವಾಸಕ್ಕೆ ಯೋಗ್ಯವಾದ ತೃಣಜಲಸಮೃದ್ಧವಾದ ಸ್ಥಳಗಳನ್ನೇ ಆಶ್ರಯಿಸುತ್ತಿದ್ದರು. ಹೀಗೆ ಅವರ ನಾಗರಿಕತೆಯ ದೇವತಾರಾಧನೆಗೂ ತಪಸ್ಸಿಗೂ ಮನಶ್ಶಾಂತಿಗೂ ಅನುಕೂಲವಾಗಿತ್ತು. ಆದ್ದರಿಂದ ನಾವು ಅಲ್ಪವೆಂದು ಭಾವಿಸಿರುವ ಹುಲ್ಲುಕಡ್ಡಿಯಂಥ ವಸ್ತುವನ್ನೂ ಅವರು ದೇವತೆಯಾಗಿ ಮಾರ್ಪಡಿಸಿಕೊಂಡಿದ್ದರು. ಇಂಥ ಋಷಿಗಳು ಹಾಡಿರುವ ವೇದಗಳಲ್ಲಿ ದೂರ್ವೆಯ ಸ್ತುತಿಯು ಕಂಡುಬರುವದು ಸಹಜವಾಗಿದೆ. ಈ ದೂರ್ವಾದೇವತೆಯು ನನ್ನ ಎಲ್ಲಾ ಪಾಪಗಳನ್ನೂ ಕಳೆಯಲಿ–ಎಂದು ಕಡೆಯಲ್ಲಿ ಪ್ರಾರ್ಥಿಸಲಾಗಿದೆ. ನಾವೇಕೆ ಈ ದೃಷ್ಟಿಯನ್ನು ಅಳವಡಿಸಿಕೊಳ್ಳಬಾರದು?

**ಓಂ ॥ ಕಾಂಡಾತ್ ಕಾಂಡಾತ್ ಪ್ರರೋಹಂತೀ ಪರುಷಃ ಪರುಷಃ ಪರಿ ।**
**ಏವಾ ನೋ ದೂರ್ವೇ ಪ್ರತನು ಸಹಸ್ರೇಣ ಶತೇನ ಚ ॥**

ಈ ಮಂತ್ರದಲ್ಲಿಯೂ ದೂರ್ವೆಯನ್ನು ಸ್ತುತಿಸಿ ಪ್ರಾರ್ಥಿಸಲಾಗಿದೆ. "ಎಲೌ ದೂರ್ವಾದೇವಿಯೆ, ನೀನು ಒಂದೊಂದು ಕಾಂಡ (ಮೂಲ)ದಿಂದಲೂ ಚಿಗುರಿ ಮೇಲಕ್ಕೇಳುವವಳಾಗಿರುವೆ. ಹಾಗೆಯೇ ಪರುಷಃ–ಎಂದರೆ ಸುತ್ತಲೂ ಎಲ್ಲೆಲ್ಲಿಯೂ ಪ್ರತಿಯೊಂದು ಪರ್ವ (ಗೆಣ್ಣು)ದಲ್ಲಿಯೂ ಚಿಗುರಿಕೊಂಡು ಹರಡುವವಳಾಗಿರುವೆ. ಹೀಗೆ ಹುಟ್ಟುವ ನೀನು ನನಗೂ ನೂರಾರು–ಸಾವಿರಾರು ರೀತಿಗಳಿಂದ ಹರಡಿಕೊಳ್ಳುವ–ಅಭಿವೃದ್ಧಿ ಹೊಂದುವ ಶಕ್ತಿಯನ್ನು ದಯಪಾಲಿಸು'' ಎಂದರ್ಥ. ಮನುಷ್ಯನಿಗೆ ಅಭ್ಯುದಯ–ಎಂಬುದು ಪುರುಷಾರ್ಥವು. ಆತನಿಗೆ ತನ್ನ ವಂಶ, ಹುಟ್ಟು, ಧನಕನಕಾದಿ ವಸ್ತುಗಳು, ಬಂಧುಮಿತ್ರರು–ಹೀಗೆ ಎಲ್ಲಾ ದೃಷ್ಟಿಕೋನಗಳಿಂದಲೂ ಚಿಗುರಿ ಹರಡಿಕೊಂಡು ಪ್ರಸಿದ್ಧನಾಗಬೇಕೆಂಬ ಆಶೆಯಿರುತ್ತದೆ. ಹಾಗಾಗಬೇಕಾದರೆ ದೇವತಾನುಗ್ರಹವೇ ಬೇಕು. ಇಲ್ಲವಾದರೆ ಅಷ್ಟಷ್ಟೇ ಪರಿಮಿತಿಗೆ ಒಳಗಾಗಿ ಮೊಟಕಾಗುತ್ತಾನೆ. ಹೇಳ ಹೆಸರಿಲ್ಲವಾಗುವನು. ಹಾಗಾಗದಂತೆ ಅವಿಚ್ಛಿನ್ನವಾಗಿ ಬೆಳೆಯಬೇಕಾದರೆ ಭಗವದನುಗ್ರಹವು ಬೇಕು. ದೂರ್ವಾರೂಪಳಾದ ದೇವಿಯಲ್ಲಿ ಭಕ್ತನು ಈ ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದಾನೆ. ನಮ್ಮ ಋಷಿಪರಂಪರೆಯೇ ಇದಕ್ಕೆ ಉದಾಹರಣೆಯು. ಅವರು ಮಾಡಿರುವ ದೂರ್ವಾದೇವಿಯ ಪೂಜಾಪ್ರಾರ್ಥನೆಗಳೇ ನಮ್ಮ ಬಂಡವಾಳವಾಗಿದೆ. ಋಷಿಗಳು ಯಾವ ಪುರಾತನ ಕಾಲದಲ್ಲಿ ಇದ್ದರೋ ತಿಳಿಯದು. ಆದರೂ ಅವರ ವಂಶೀಕರಾದ ನಾವು ಈಗ ಇದ್ದುಕೊಂಡಿರುವೆವು. ಇಂಥಿಂಥ ಋಷಿಗಳ

ಗೋತ್ರೋತ್ಪನ್ನರೆಂದು ಅವರ ಹೆಸರುಗಳನ್ನು ಸ್ಮರಿಸುವೆವು. ಇದೇ ಅಭ್ಯುದಯವೆಂಬುದು. ಹೀಗೆ ಅಭ್ಯುದಯಕಾರಣಳಾದ ದೂರ್ವಾದೇವಿಯು ಪೂಜ್ಯಳೆಂದು ತಿಳಿಯಬೇಕು.

ಓಂ ॥ ಯಾ ಶತೇನ ಪ್ರತನೋಷಿ ಸಹಸ್ರೇಣ ವಿರೋಹಸಿ ।
ತಸ್ಯಾಸ್ತೇ ದೇವೀಷ್ಟಕೇ ವಿಧೇಮ ಹವಿಷಾ ವಯಮ್ ॥

ಇದೂ ದೂರ್ವಾದೇವಿಯ ಸ್ತುತಿಯಾಗಿದೆ. ಇಷ್ಟಕೇ ಎಂದರೆ ಇಷ್ಟವಾದ ಮಂತ್ರಗಳಿಂದ ಭಕ್ತರುಗಳಿಂದ ಸ್ತುತಿಮಾಡಲ್ಪಡುವವಳೆ, ಎಂದರ್ಥ. ಇಂಥ 'ದೇವಿಯೆ, ನೀನು ನಿನ್ನ ವಂಶವನ್ನು ನೂರಾರು ಕುಡಿಗಳಿಂದ ವಿಸ್ತರಿಸಿ ಸಾವಿರಾರು ಬೇರುಗಳಿಂದ ಚಿಗುರಿ ಹರಡಿಕೊಳ್ಳುವವಳಾಗಿರುವೆ. ಇಂಥ ನಿನಗೆ ನಾವು ಹವಿಸ್ಸುಗಳಿಂದ ಆರಾಧನೆಯನ್ನು ಅರ್ಪಿಸುವೆವು' ಎಂದಭಿಪ್ರಾಯ. ದೂರ್ವಾದೇವಿಯು ಕುಲ ವೃದ್ಧಿಯನ್ನುಂಟುಮಾಡುವವಳೆಂದು ಹಿಂದೆಯೇ ತಿಳಿಸಿದೆ. ನಮಗೂ ಆ ವರವು ಬೇಕಾಗಿದೆ. ಅದಕ್ಕಾಗಿ ಆಕೆಯಲ್ಲಿ ಪ್ರಾರ್ಥಿಸಿದೆ. ಇಲ್ಲಿಗೆ ದೂರ್ವಾಸೂಕ್ತವೂ ಪೂರೈಸಿದೆ.

## ಮೃತ್ತಿಕಾಸೂಕ್ತ

ಓಂ ॥ ಅಶ್ವಕ್ರಾಂತೇ ರಥಕ್ರಾಂತೇ ವಿಷ್ಣುಕ್ರಾಂತೇ ವಸುಂಧರಾ ।
ಶಿರಸಾ ಧಾರಯಿಷ್ಯಾಮಿ ರಕ್ಷಸ್ವ ಮಾಂ ಪದೇ ಪದೇ ॥

ಈ ಮಂತ್ರವು ಭೂದೇವಿಯ ಸ್ತುತಿಯಾಗಿದೆ. ನಾವು ಭೂಮಿಯ ಮೇಲೆಯೇ ವಾಸಮಾಡುತ್ತಿದ್ದರೂ ಭೂಮಿಯನ್ನು ದೇವತೆಯೆಂದು ಭಾವಿಸಿ ಆರಾಧಿಸುವದು ಅಪರೂಪವೇ ಆಗಿದೆ. ಮನೆಕಟ್ಟುವ ಮೊದಲು ಭೂಮಿ ಪೂಜೆಯನ್ನು ಮಾಡುವದುಂಟು. ಅಲ್ಲಿಯೂ ಶಂಕುಸ್ಥಾಪನೆ, ಗುದ್ದಲಿಪೂಜೆಗಳೆಂಬ ಶಬ್ದಗಳನ್ನು ಬಳಸುವೆವು. ಆದರೆ ನಿಜವಾಗಿ ಅದು ಭೂಮಿತಾಯಿಯ ಪೂಜೆಯಾಗಿದೆ. ಭೂಮಿಯು ಕ್ಷಮಾಗುಣ ಪರಿಪೂರ್ಣಳು. ವಿಷ್ಣುಪತ್ನಿ ಎಂದೂ ಕರೆಯಲ್ಪಡುತ್ತಾಳೆ. ಈಕೆಗೆ ಪೃಥಿವೀ ಎಂದೂ ಹೆಸರಿದೆ. ಸರ್ವಪ್ರಾಣಿವರ್ಗಕ್ಕೂ ಸಸ್ಯಗಳಿಗೂ ಆಶ್ರಯಳಾಗಿದ್ದಾಳೆ. ಅನಾದಿಕಾಲ ದಿಂದಲೂ ಈಕೆಯನ್ನು ತಮ್ಮವಳನ್ನಾಗಿ ಮಾಡಿಕೊಳ್ಳಲು ಹುಟ್ಟಿದವರೆಲ್ಲ ಹೊಡೆದಾಡುತ್ತಲೇ ಇರುವರು. ಆದರೂ ಯಾರಿಗೂ ಈಕೆಯು ದಕ್ಕಿರುವದಿಲ್ಲ . ಸಹಸ್ರಾರು ವರ್ಷಗಳ ಕಾಲ ರಾಜ್ಯಭಾರಮಾಡಿ ಆದರ್ಶಭೂಪತಿಗಳೆನಿಸಿದ್ದಂಥ ಮಾಂಧಾತಾ, ನಹುಷ, ಯಯಾತಿ, ನಳ, ರಾಮ, ಯುಧಿಷ್ಠಿರಾಧಿಗಳು ಕೂಡ ಈಕೆಯನ್ನು ಜೊತೆಯಲ್ಲಿ ಕರೆದೊಯ್ಯಲಿಲ್ಲ. ಇನ್ನುಳಿದವರ ಪಾಡೇನು? ವಿಷ್ಣುಪುರಾಣದಲ್ಲಿ

'ಪೃಥಿವೀಗೀತೆ' ಯೆಂಬ ಭಾಗದಲ್ಲಿ ಈ ವಿಚಾರವಿದೆ. ಇಂಥ ದುರಾಧರ್ಷಳಾದ ಪೃಥಿವಿಯನ್ನು ನಾವು ದೇವತೆಯಾಗಿ ಕಂಡುಕೊಂಡು ಗೌರವಿಸಬೇಕೇ ಹೊರತು ಜಗಳವಾಡಬಾರದು. ಈ ತಿಳಿವಳಿಕೆಯು ಪ್ರಜೆಗಳಿಗೆ ಉಂಟಾದದ್ದೇ ಆದರೆ ಅನೇಕ ರಾಜಕೀಯ ಸಮಸ್ಯೆಗಳು ಪರಿಹಾರವಾಗಿಬಿಡುವವು. ಕೋರ್ಟುಗಳಿಗೂ ಕೆಲಸವು ಹಗುರವಾಗಿಬಿಡುವದು. ಇರಲಿ. ಈಕೆಯನ್ನು ದೇವತೆಯಾಗಿ ಕಂಡು ಸ್ತುತಿಸಿರುವ ಋಷಿದೃಷ್ಟಿಯನ್ನು ಅಳವಡಿಸಿಕೊಳ್ಳೋಣ. ಇವಳು ಅಶ್ವಕ್ರಾಂತಳು. ವೈದಿಕರು ಅಗ್ನಿಚಯನ ಮಾಡುವಾಗ ಕುದುರೆಗಳಿಂದ ನೆಲವನ್ನು ಶೋಧಿಸುವರು. ಏಕೆಂದರೆ ಕುದುರೆಗಳು ಪವಿತ್ರವಸ್ತುಗಳೆಂದೂ ದೇವತಾಸ್ವರೂಪವೆಂದೂ ವೇದಗಳಲ್ಲಿ ತಿಳಿಸಿದೆ. ಕುದುರೆಗಳು ತುಳಿದ ಮಣ್ಣು ಪವಿತ್ರವೆಂದು ಶಿಷ್ಟಾಚಾರವಿದೆ. ಆದ್ದರಿಂದ ಯಜ್ಞಭೂಮಿಶುದ್ಧಿಗಾಗಿ ಅಶ್ವಗಳಿಂದ ಕ್ರಾಂತಳಾಗಿರುವ ಈಕೆಯು **ಅಶ್ವಕ್ರಾಂತಳೆ**ನಿಸುವಳು. ಹಾಗೆಯೇ ಕುದುರೆಗಳನ್ನು ಕಟ್ಟಿದ ರಥಗಳು ಸಂಚರಿಸುವಾಗ ಆ ಕಾರಣದಿಂದಲೂ ಭೂಮಿಯು ಪವಿತ್ರವಾಗುವದು. ಆದ್ದರಿಂದ **ರಥಕ್ರಾಂತಳು**. ಇನ್ನು ವಾಮನಾವತಾರದಲ್ಲಿ ವಿಷ್ಣುವು ತ್ರಿವಿಕ್ರಮನಾಗಿ ತನ್ನ ಒಂದು ಹೆಜ್ಜೆಯಿಂದ ಭೂಮಿಯನ್ನಳೆದದ್ದರಿಂದ ಆ ಭಗವಂತನ ಪಾದಸ್ಪರ್ಶವುಂಟಾಗಿ **ವಿಷ್ಣುಕ್ರಾಂತಳೆ**ನಿಸಿದ್ದಾಳೆ. ಹೀಗೆ ಅಶ್ವಗಳಿಂದಲೂ, ರಥಗಳಿಂದಲೂ, ವಿಷ್ಣುವಿನಿಂದಲೂ ಸ್ಪರ್ಶಿಸಲ್ಪಟ್ಟಿರುವ ಭೂದೇವಿಯು ಅತಿಪವಿತ್ರಳಾಗಿದ್ದು **ವಸುಂಧರೆ** ಎನಿಸಿರುವಳು. ವಸು ಎಂದರೆ ಧನಕನಕಾದಿಗಳು, ಭೂಮಿಯಲ್ಲಿ ಸಿಗುವ ಚಿನ್ನವೇ ಮುಂತಾದ ಲೋಹಗಳು, ರತ್ನಗಳು–ಎಲ್ಲವೂ ಬೆಲೆಬಾಳತಕ್ಕದ್ದಾಗಿರುವವು. ಈ ದೇವಿಯನ್ನು ರತ್ನಗರ್ಭೆಳೆಂದೂ ಕರೆಯುವರು. ಇಂಥ ಭಾವನೆಯಿಂದ ಕೂಡಿ ಪೃಥಿವೀಮಾತೆಯನ್ನು ನೆನೆಯುತ್ತಾ 'ಆಕೆಯ ಸ್ಥೂಲರೂಪವಾದ ಮೃತ್ತಿಕೆಯನ್ನು ನಾನು ತಲೆಯಲ್ಲಿ ಧರಿಸುವೆನು–ಅವಳು ನನ್ನನ್ನು ಹೆಜ್ಜೆಹೆಜ್ಜೆಗೂ ಕಾಪಾಡಲಿ' ಎಂದು ಕೇಳಿಕೊಳ್ಳಲಾಗಿದೆ. ಯಾರಿಗೆ ಭೂಮಿಯಲ್ಲಿ ದೇವತಾಭಾವನೆಯಿರುವದೋ ಅವರೇ ನಿಜವಾಗಿ ಮನುಷ್ಯರು. ಉಳಿದವರನ್ನೆಲ್ಲ ಅಸುರುರೆಂದರೂ ತಪ್ಪಾಗಲಾರದು. ಅಂತೂ ಸಾಧಕನಾದವನು ದೇಹ ಶುದ್ಧಿಗಾಗಿ ಸ್ನಾನಮಾಡುವಾಗ ಈ ರೀತಿಯಾದ ಪವಿತ್ರಭಾವನೆಯಿಂದ ದೂರ್ವೆಯನ್ನೂ ಮೃತ್ತಿಕೆಯನ್ನೂ ಶಿರಸ್ಸಿನಲ್ಲಿ ಧರಿಸಿಕೊಳ್ಳಬೇಕು. ವೈಜ್ಞಾನಿಕವಾಗಿ ಪರೀಕ್ಷಿಸಿದರೂ ಮಣ್ಣೆಂಬುದು ಅಚೇತನವಾಗಿ ಕಂಡರೂ ಅದರಲ್ಲಿ ಚೇತನಾಂಶ ಇದ್ದೇ ಇದೆ. ಅದಕ್ಕೆ ಯಾವ ಪದಾರ್ಥವನ್ನೇ ಆಗಲಿ, ತನ್ನಂತೆಯೇ ಪರಿವರ್ತಿಸಿಕೊಂಡುಬಿಡುವ ಶಕ್ತಿಯಿದೆ. ಭೂಮಿಯ ಮೇಲೇ ಏನು ಎಸೆದಿದ್ದರೂ ಕಾಲಕ್ರಮೇಣ ಅದು ಮಣ್ಣಾಗಿಬಿಡುವದು ಎಲ್ಲರಿಗೂ ತಿಳಿದಿದೆ. ಈ ಶಕ್ತಿಯು ಇಂದ್ರಿಯಗೋಚರವಲ್ಲವಾದ್ದರಿಂದ ಋಷಿಗಳು ತಮ್ಮ ದಿವ್ಯದೃಷ್ಟಿಯಿಂದ ಕಂಡುಕೊಂಡು

ದೇವತೆಯನ್ನಾಗಿ ಅರಿತು ಉಳಿದವರಿಗೂ ಬೋಧಿಸಿರುತ್ತಾರೆ. ಇಂಥ ಒಳ್ಳೆಯ ಚಿಂತನಾಮಾರ್ಗವನ್ನು ನಾವೂ ಅನುಸರಿಸೋಣ.

ಓಂ ॥ ಭೂಮಿರ್ಧೇನುರ್ಧರಣೀ ಲೋಕಧಾರಿಣೀ ।
ಉದ್ಧೃತಾಸಿ ವರಾಹೇಣ ಕೃಷ್ಣೇನ ಶತಬಾಹುನಾ ॥

ಈ ಮಂತ್ರದಲ್ಲಿಯೂ ಭೂದೇವಿಯನ್ನು ಸ್ತುತಿಮಾಡಲಾಗಿದೆ. ಈಕೆಯು ಗೋರೂಪಧರಳಾಗಿ ಪೃಥುಮಹಾರಾಜನಿಗೆ ಸರ್ವಕಾಮಗಳನ್ನೂ ಮಳೆಗರೆದಳೆಂದು ವಿಷ್ಣುಪುರಾಣದಲ್ಲಿದೆ. ಆದ್ದರಿಂದ ಧೇನು ಎಂದರೆ ಕಾಮಧೇನುವೆನಿಸಿರುವಳು. ಈಗಲೂ ಕಷ್ಟಪಟ್ಟು ದುಡಿಯುವವನಿಗೆ ಭೂಮಿಯು ಎಲ್ಲಾ ಬೆಳೆಗಳನ್ನೂ ನೀಡುವಳು. ಮತ್ತು ಬೆಟ್ಟ, ನದಿ, ಪರ್ವತಗಳು, ಕಾಡುಗಳು, ಕ್ರಿಮಿಕೀಟಪಕ್ಷ್ಯಾದಿಗಳು, ದ್ವಿಪಾತ್–ಚತುಷ್ಪಾತ್ ಪ್ರಾಣಿಗಳು ಎಲ್ಲರನ್ನೂ ತನ್ನ ಶರೀರದಲ್ಲಿ ಧರಿಸಿ ಸಾಕಿಸಲಹುತ್ತಿರುವಳು. ಆದ್ದರಿಂದ ಧರಣಿಯೆನಿಸಿದ್ದಾಳೆ. ಲೋಕಗಳನ್ನೆಲ್ಲ ಎಂದರೆ ಜೀವಿಗಳನ್ನೆಲ್ಲ ಧರಿಸಿದ್ದು ಲೋಕಧಾರಿಣಿಯೂ ಆಗಿರುವಳು. ಇಂಥ ದೇವಿಯನ್ನು ಕುರಿತು 'ಎಲೌ ತಾಯೆ, ನೀನು ಕೃಷ್ಣವರ್ಣನೂ ಶತಬಾಹುಯುಕ್ತನೂ ಆದ ವರಾಹನಿಂದ ಎತ್ತಲ್ಪಟ್ಟಿರುವೆ; ಆದ್ದರಿಂದ ಪವಿತ್ರಳು' ಎಂದರ್ಥ. ಪೂರ್ವಕಾಲಕ್ಕೆ ಹಿರಣ್ಯಾಕ್ಷನೆಂಬ ರಾಕ್ಷಸನು ಭೂದೇವಿಯನ್ನು ಚಾಪೆಯಂತೆ ಸುರುಳಿಸುತ್ತಿ ಎತ್ತಿಕೊಂಡು ರಸಾತಲವೆಂಬ ಅಧೋಲೋಕಕ್ಕೆ ಒಯ್ದುಬಿಟ್ಟಿದ್ದನು. ಆಗ ಶ್ರೀಮಹಾವಿಷ್ಣುವು ವರಾಹಾವತಾರವನ್ನೆತ್ತಿ ಆಕೆಯನ್ನು ಮೇಲಕ್ಕೆ ತಂದನೆಂದು ಪೌರಾಣಿಕ ಕಥೆಯಿದೆ. ಆ ಸಂದರ್ಭದಲ್ಲಿ ಭಗವಂತನ ಹಸ್ತಸ್ಪರ್ಶವನ್ನು ಹೊಂದಿದ್ದರಿಂದ ಭೂದೇವಿಯು ಪವಿತ್ರಳಾದಳು. ಹಾಗೆಂತ ಇಲ್ಲಿ ಸ್ತುತಿಸಿದೆ.

ಓಂ ॥ ಮೃತ್ತಿಕೇ ಹನ ಮೇ ಪಾಪಂ ಯನ್ಮಯಾ ದುಷ್ಕೃತಂ ಕೃತಮ್ ।
ಮೃತ್ತಿಕೇ ಬ್ರಹ್ಮದತ್ತಾಸಿ ಕಾಶ್ಯಪೇನಾಭಿಮಂತ್ರಿತಾ ॥

ಇಲ್ಲಿ ಭೂದೇವಿಯ ಸ್ಥೂಲಶರೀರವಾದ ಮೃತ್ತಿಕೆಯನ್ನು ಪ್ರಾರ್ಥಿಸಿದೆ. ''ಎಲೌ ಮೃತ್ತಿಕೆಯೆ, ನನ್ನ ಪಾಪಗಳನ್ನು ನಾಶಗೊಳಿಸುವವಳಾಗು ; ನನ್ನ ಕೆಟ್ಟಕೆಲಸಗಳ (ಫಲವನ್ನು) ಇಲ್ಲವಾಗಿಸು; ನೀನು ಪ್ರಾಣಿಗಳ ಅನುಕೂಲಕ್ಕಾಗಿ ಈ ಮೃತ್ತಿಕೆಯಾಗಿ ಬ್ರಹ್ಮನಿಂದ ಕೊಡಲ್ಪಟ್ಟವಳು. ಹಾಗೂ ಕಾಶ್ಯಪರೇ ಮುಂತಾದ ಋಷಿಗಳಿಂದ ಸ್ವೀಕರಿಸಲ್ಪಟ್ಟು ದುರಿತವನ್ನು ಕಳೆದವಳಾಗಿರುವೆ'' ಎಂದಭಿಪ್ರಾಯ. ಮಣ್ಣಿನಿಂದ ಯಾರು ಸ್ನಾನ ಮಾಡುತ್ತಾರೆ? ನೀರಿನಿಂದಲ್ಲವೆ? ಎಂದರೆ ನಿಜ. ನೀರಿನಂತೆಯೇ ಮಣ್ಣುಕೂಡ ಶುದ್ಧವಾದದ್ದು. ಅದೂ ಕೂಡಿದರೆ ಸ್ನಾನವು ಹೆಚ್ಚು ಸಾರ್ಥಕವಾಗುವದು. ಈ ಪದ್ಧತಿಯನ್ನು

ಋಷಿಗಳೇ ಆಚರಣೆಗೆ ತಂದಿರುತ್ತಾರೆ. ಆದ್ದರಿಂದ ಮೃತ್ತಿಕೆಯನ್ನು ಇಲ್ಲಿ ಅಭಿಮಂತ್ರಣ ಮಾಡಿದೆ.

**ಓಂ ॥ ಮೃತ್ತಿಕೇ ದೇಹಿ ಮೇ ಪುಷ್ಟಿಂ ತ್ವಯಿ ಸರ್ವಂ ಪ್ರತಿಷ್ಠಿತಮ್ ।**
**ಮೃತ್ತಿಕೇ ಪ್ರತಿಷ್ಠಿತೇ ಸರ್ವಂ ತನ್ಮೇ ನಿರ್ಣುದ ಮೃತ್ತಿಕೇ ॥**
**ತಯಾ ಹತೇನ ಪಾಪೇನ ಗಚ್ಛಾಮಿ ಪರಮಾಂ ಗತಿಮ್ ॥**

ಈ ಮಂತ್ರವೂ ಮೃತ್ತಿಕಾದೇವಿಯನ್ನು ಕುರಿತ ಪ್ರಾರ್ಥನೆಯಾಗಿದೆ. ''ಹೇ ಮೃತಿಕಾದೇವಿಯೆ, ನಿನ್ನಲ್ಲಿ ಎಲ್ಲಾ ಜೀವರುಗಳೂ ಆಶ್ರಯಿಸಿಕೊಂಡಿರುವರು. ಮುಖ್ಯವಾಗಿ ಪ್ರಾಣಿಗಳಿಗೆ ಆಹಾರವಾದ ಸಸ್ಯಗಳೆಲ್ಲವೂ ಇದ್ದುಕೊಂಡಿರುವವು. ಭೂಮಿಯ ಮೇಲೆ ಬೆಳೆದ ಪೈರನ್ನು ತಿಂದು ಮನುಷ್ಯರು ಜೀವಿಸುವರು. ಅವರುಗಳು ಕಾಯಿಲೆಯಾದರೆ ಔಷಧರೂಪವಾಗಿ ಸೇವಿಸುವ ನಾರುಬೇರುಗಳೂ ಧಾತುವರ್ಗವೂ ಪೃಥಿವಿಯ ಉತ್ಪನ್ನವೇ ಆಗಿವೆ. ಅನಾರೋಗ್ಯವನ್ನು ಕಳೆದು ಆರೋಗ್ಯವನ್ನೂ ಪುಷ್ಟಿಯನ್ನೂ ಕೊಡುವ ಸಸ್ಯಗಳಿಗೆ ಆಶ್ರಯಳಾದ ನೀನು ನನಗೆ ಪುಷ್ಟಿಯನ್ನುಂಟುಮಾಡು. ಮತ್ತು ಪ್ರತಿಷ್ಠಿತಳಾದ ಎಂದರೆ ಗೌರವಾನ್ವಿತಳಾದ ನೀನು ನನ್ನ ಪಾಪಗಳನ್ನು ಕಳೆಯುವವಳಾಗು. ಅನಂತರ ನಾನು ಪರಮಗತಿಯನ್ನು ಹೊಂದುವೆನು'' ಎಂದಭಿಪ್ರಾಯ. ಪರಮಗತಿ ಎಂದರೆ ಮುಕ್ತಿಯು. ಅದು ಜ್ಞಾನದಿಂದಲೇ ದೊರಕುವದು. ಜ್ಞಾನವುಂಟಾಗಬೇಕಾದರೆ ನಮ್ಮ ಮನಸ್ಸಿನಲ್ಲಿರುವ ಕಲ್ಮಷಗಳು ಹೋಗಬೇಕು. ಅವು ಹೋಗಲು ಸ್ನಾನಾದಿ ವಿಹಿತಕರ್ಮಗಳನ್ನು ಅನುಷ್ಠಿಸಬೇಕು. ಹೀಗೆ ಪರಂಪರೆಯಿಂದ ಶಾಸ್ತ್ರೀಯಕರ್ಮಗಳು ಚಿತ್ತಶುದ್ಧಿಯ ಮೂಲಕ ಜ್ಞಾನಕ್ಕೆ ತಕ್ಕಯೋಗ್ಯತೆಯನ್ನುಂಟುಮಾಡಿ ಮುಕ್ತಿಗೆ ಕಾರಣವಾಗುವವು. ಆದ್ದರಿಂದ ಸ್ನಾನಕಾಲದಲ್ಲಿ ಮೃತ್ತಿಕಾದೇವಿಯನ್ನು ಪಾಪಪರಿಹಾರ ಮಾಡುವಂತೆ ಪ್ರಾರ್ಥಿಸಲಾಗಿದೆ.

## ಶತ್ರುಜಯಮಂತ್ರಗಳು

ಇಲ್ಲಿಂದ ಮುಂದಕ್ಕೆ ಶತ್ರುಜಯಕಾರಕವಾದ ಕೆಲವು ಮಂತ್ರಸಮೂಹಗಳಿಂದ ಉಪನಿಷತ್ತು ಮುಂದುವರೆದಿದೆ. ನಡುನಡುವೆ ಬ್ರಹ್ಮ , ಭೂದೇವಿ, ಶ್ರೀದೇವಿ, ಜಲದೇವತೆಗಳನ್ನು ಕುರಿತು ಸ್ತೋತ್ರಗಳೂ ಇವೆ. ಶತ್ರುಜಯಾರ್ಥವಾದ ಮಂತ್ರಗಳು ಇಂದ್ರನನ್ನು ಕುರಿತದ್ದಾಗಿವೆ. ಇಂದ್ರನೆಂದರೆ–'ಇದಿ ಪರಮೈಶ್ವರ್ಯೇ' ಎಂಬ ಧಾತ್ವರ್ಥದಂತೆ ಪರಮೈಶ್ವರ್ಯಸಂಪನ್ನನಾದ ಪರಮಾತ್ಮನನ್ನೇ ಕುರಿತು ಸ್ತೋತ್ರಮಾಡುವ

ಮಂತ್ರಭಾಗವೆಂದು ಅಭಿಪ್ರಾಯವಾಗುತ್ತದೆ. ಕರ್ಮಕಾಂಡದ ಪ್ರಕರಣಾನುಗುಣವಾಗಿ ಅರ್ಥಮಾಡಿದರೆ ದೇವತೆಗಳೊಡೆಯನೂ ತ್ರಿಲೋಕಾಧಿಪತಿಯೂ ಶಚೀವಲ್ಲಭನೂ ಆದ ದೇವೇಂದ್ರನನ್ನು ಪರಾಮರ್ಶಿಸುತ್ತದೆ. ಎರಡೂ ಅರ್ಥಗಳೂ ಇಲ್ಲಿ ಹೊಂದುತ್ತವೆ. ಇನ್ನು ಶತ್ರುಗಳೆಂದರೆ ಆಧ್ಯಾತ್ಮಿಕವಾಗಿ ಕೋಪ–ತಾಪ–ಕಾಮ–ಅಸೂಯೆ–ರೋಗ–ಮುಂತಾದವುಗಳೆಂದರ್ಥ. ಆಧಿಭೌತಿಕವಾಗಿ ನೋಡಿದರೆ ನಮ್ಮನ್ನು ವಿನಾಕಾರಣವಾಗಿ ದ್ವೇಷಿಸುವ ಶತ್ರುಗಳೆಂದರ್ಥ. ಆಧಿದೈವಿಕವಾಗಿ ನೋಡಿದರೆ ಅತಿ ಚಳಿ, ಬಿಸಿಲು, ಮಳೆ, ಸಿಡಿಲು, ಪ್ರವಾಹ, ಕ್ಷಾಮ–ಮುಂತಾದವುಗಳು. ಇಂಥ ಎಲ್ಲಾ ನಿಮಿತ್ತಗಳಿಂದಲೂ ನಮಗೆ ರಕ್ಷಣೆಯು ಬೇಕಾಗಿರುತ್ತದೆ. ಅದಕ್ಕಾಗಿ ಈ ಮಂತ್ರಗಳನ್ನು ಅನುಸಂಧಾನ ಮಾಡೋಣ.

**ಓಂ ॥ ಯತ ಇಂದ್ರ ಭಯಾಮಹೇ ತತೋ ನೋ ಅಭಯಂ ಕೃಧಿ ।**
**ಮಘವನ್ ಶಗ್ಧಿ ತವ ತನ್ನ ಊತಯೇ ವಿದ್ವಿಷೋ**
**ವಿಮೃಧೋ ಜಹಿ ॥**

ಇದು ದೇವೇಂದ್ರನನ್ನು ಕುರಿತ ಪ್ರಾರ್ಥನಾಮಂತ್ರವಾಗಿದೆ. ''ಎಲೈ ಇಂದ್ರನೆ, ಯಾವ ನಿಮಿತ್ತಗಳಿಂದ ನಾವು ಭಯಪಡುತ್ತಿರುವೆವೋ ಅವುಗಳ ದೆಸೆಯಿಂದ ನಮ್ಮನ್ನು ರಕ್ಷಿಸಿ ಅಭಯವನ್ನು ನೀಡುವವನಾಗು; ಅಷ್ಟೇ ಅಲ್ಲ ಆ ನಿಮಿತ್ತಗಳನ್ನೆಲ್ಲ ನಾಶ ಗೊಳಿಸುವವನಾಗು. ನಿನ್ನ ಕಡೆಯವರಾದ ನಮಗೆ ರಕ್ಷಣೆಯನ್ನು ನೀಡಿ ಒಳಹೊರಗಿನ ಶತ್ರುಗಳನ್ನು ಎಂದರೆ ನಮ್ಮನ್ನು ದ್ವೇಷಿಸುವವರನ್ನು ಸಂಹಾರಮಾಡು. ಏಕೆಂದರೆ ಅವರು ನಮ್ಮನ್ನೇ ಪೀಡಿಸುತ್ತಿರುವರು. ಆದ್ದರಿಂದ ಅವರುಗಳ ಕಡೆಯಿಂದ ಆಗುವ ಬಾಧೆಯನ್ನು ಪರಿಹರಿಸು''–ಎಂದರ್ಥ. ಮನುಷ್ಯನಿಗೆ ಭಯವೆಂಬುದು ಯಾವಾಗಲೂ ಬೆನ್ನುಹಿಂದೆಯೇ ಇದ್ದುಕೊಂಡಿರುವದು. **'ಭೋಗೇ ರೋಗಭಯಂ'** ಎಂಬ ಭರ್ತೃಹರಿಯ ಶ್ಲೋಕವನ್ನು ಕೇಳಿದ್ದೀರಷ್ಟೆ. ಆತನ ಅಭಿಪ್ರಾಯದಂತೆ ಭೂಮಂಡಲದಲ್ಲಿ ಎಲ್ಲಾ ವಸ್ತುಗಳಿಗೂ ಎಲ್ಲಾ ವಸ್ತುಗಳಿಂದಲೂ ಪರಸ್ಪರವಾಗಿ ಒಂದಲ್ಲ ಒಂದು ರೀತಿಯ ಭಯವಿದ್ದೇ ಇದೆ. ನಮಗೆ ಪ್ರಿಯವಾದ ವಸ್ತುಗಳಲ್ಲಿ ಕೂಡ–ಅವು ನಮ್ಮನ್ನೆಲ್ಲಿ ಅಗಲಿ ಹೋಗುವವೋ–ಎಂಬ ಭಯವಿದ್ದೇ ಇದೆ. ಆದ್ದರಿಂದ ವೈರಾಗ್ಯವೊಂದೇ ಅಭಯವು–ಎಂದಿರುತ್ತಾನೆ. ಹೀಗೆ ಭಯವು ಯಾವಾಗಲೂ ಮಾನವನನ್ನು ಬಿಡದಿರುವ ಸಂಸಾರಧರ್ಮವೇ ಆಗಿರುವದು. ಬ್ರಹ್ಮವನ್ನರಿತವನು ಮಾತ್ರ **'ಅಭಯಂ ಪ್ರತಿಷ್ಠಾಂ ವಿಂದತೇ'** ಎಂಬಂತೆ ಅಭಯಪದವಿಯನ್ನು ಹೊಂದುವನು. ಹೀಗಿದ್ದರೂ ಭಯದಿಂದ ನಾವು ಸಂಪೂರ್ಣವಾಗಿ ಮುಕ್ತರಾಗುವದು ವ್ಯವಹಾರದಲ್ಲಿ ಅಸಾಧ್ಯವಾದರೂ ಯಾರಾದರೂ ರಕ್ಷಕರಿದ್ದಾರೆ–ಎಂದರೆ ಅದರ ಪರಿಣಾಮವು ಕಡಿಮೆಯಾಗಿ ಕಿಂಚಿತ್

ಸುಖವಾಗುವದು. ಮನೆಯ ಬಾಗಿಲು ತೆಗೆದು ಮಲಗುವದಕ್ಕಿಂತ ಬಾಗಿಲು–ಅಗುಳಿಹಾಕಿಕೊಂಡು ಮಲಗುವದು ಹೆಚ್ಚು ಸುರಕ್ಷತೆಗೆ ಕಾರಣವಲ್ಲವೆ? ಹಾಗೆಯೇ ಭಯನಾಶನನಾದ ದೇವೇಂದ್ರನು ನಮಗೆ ರಕ್ಷಕನಾಗಿರುತ್ತಾನೆ–ಎಂಬ ಅನುಸಂಧಾನವಿದ್ದರೆ ನೆಮ್ಮದಿಯಾಗಿರಬಹುದು. ಇನ್ನು ಇಂದ್ರನು ದೇವತೆಯಾದ್ದರಿಂದ ನಮ್ಮ ಭಯನಿಮಿತ್ತಗಳನ್ನು ಪರಿಹಾರಮಾಡಿ ಕಾಪಾಡಲೂ ಸಮರ್ಥನಾಗಿರುವದರಿಂದ ಆತನನ್ನು ನೆನೆಯುವದು ಸದಾಕಾಲವು ಭಯಪರಿಹಾರಕ್ಕೆ ಕಾರಣವಾಗಿರುತ್ತದೆ–ಎಂದು ತಿಳಿಯಬೇಕು.

**ಓಂ ॥ ಸ್ವಸ್ತಿದಾ ವಿಶಸ್ಪತಿರ್ವೃತ್ರಹಾ ವಿಮೃಧೋ ವಶೀ ।**
**ವೃಷೇಂದ್ರಃ ಪುರ ಏತು ನಃ ಸ್ವಸ್ತಿದಾ ಅಭಯಂಕರಃ ॥**

ಈ ಮಂತ್ರದಲ್ಲಿ ಇಂದ್ರನನ್ನು 'ಅಭಯಂಕರ' ನೆಂದು ಹೆಸರಿಸಿ ಆತನು ನಮಗೆ ಸ್ವಸ್ತಿಯನ್ನುಂಟು ಮಾಡುವದಕ್ಕಾಗಿ ಎದುರಿಗೇ ಬರಲಿ–ಎಂದು ಕೇಳಿಕೊಂಡಿದೆ. ಆತನು **ವಿಶಸ್ಪತಿಯು**–ಎಂದರೆ ಭಕ್ತರಿಗೆ ಒಡೆಯನು. ವಿಶ್ ಶಬ್ದಕ್ಕೆ ಸ್ತ್ರೀಲಿಂಗ ವಿವಕ್ಷೆ ಮಾಡಿದಾಗ ಪ್ರಜೆ–ಎಂಬರ್ಥವಿದೆ. ಭಾಷ್ಯಕಾರರು ಭಕ್ತನಾದ ಪ್ರಜೆ ಎಂದರ್ಥಮಾಡಿ ಭಜಿಸುವವರಿಗೆ ಒಡೆಯನೆಂದು ತಿಳಿಸಿದ್ದಾರೆ. ಇಂಥ ವಿಶಸ್ಪತಿಯಾದ ಹಾಗೂ ವೃತ್ರನೆಂಬ ರಾಕ್ಷಸನನ್ನು ಸಂಹಾರಮಾಡಿದ, ಆತ್ಮಜ್ಞಾನಬಲದಿಂದ ಸರ್ವವನ್ನೂ ತನ್ನ ವಶದಲ್ಲಿಟ್ಟು ಕೊಂಡಿರುವವನಾದ, ಶತ್ರುಗಳನ್ನು ಶಾಸನ ಮಾಡುವವನಾದ ವೃಷೇಂದ್ರನು ನಮಗೆ ಪ್ರತ್ಯಕ್ಷನಾಗಲಿ–ಎಂದರ್ಥ. ವೃಷಶಬ್ದಕ್ಕೆ ವೃಷ್ಟಿ ಎಂದರೆ ಮಳೆ ಎಂದರ್ಥ ಮಾಡಿದರೆ ಪುಷ್ಕರ, ಆವರ್ತಕ–ಎಂಬ ಮೇಘಗಳಿಗೂ ಅವುಗಳ ಸಂತತಿಗೂ ಒಡೆಯನಾದ ದೇವೇಂದ್ರನು–ಎಂದಭಿಪ್ರಾಯ. ಆತನೇ ಪರ್ಜನ್ಯವನ್ನು (ಮಳೆಯನ್ನು) ಉಂಟು ಮಾಡುವವನಾಗಿದ್ದಾನೆ. ಮಳೆಯನ್ನು ಸಕಾಲದಲ್ಲಿ ಭೂಮಿಯ ಮೇಲೆ ಯೋಗ್ಯಪ್ರಮಾಣದಲ್ಲಿ ಸುರಿಸುವದರಿಂದ ಸುಭಿಕ್ಷವುಂಟಾಗಿ ಕ್ಷಾಮಭಯವು ನಿವಾರಣೆಯಾಗಲಿದೆ. ಹೀಗೆಯೇ ಲೌಕಿಕವಾಗಿ ಆಯಾ ಜನರಿಗೆ ಅವರವರ ಸನ್ನಿವೇಶಕ್ಕೆ ತಕ್ಕಂತೆ ಭಯನಿಮಿತ್ತಗಳು ಏನೇ ಆಗುಂತುಕವಾಗಿ ಒದಗಿದರೂ ಈ ಅಭಯಂಕರನು ಮೈದೋರಿದವನಾಗಿ ನಮಗೆಲ್ಲ ಸ್ವಸ್ತಿಯನ್ನುಂಟು ಮಾಡಲಿ–ಎಂದು ಕೇಳಲಾಗಿದೆ.

**ಓಂ ॥ ಸ್ವಸ್ತಿ ನ ಇಂದ್ರೋ ವೃದ್ಧಶ್ರವಾಃ ।**
**ಸ್ವಸ್ತಿ ನಃ ಪೂಷಾ ವಿಶ್ವವೇದಾಃ ।**
**ಸ್ವಸ್ತಿ ನಸ್ತಾರ್ಕ್ಷ್ಯೋ ಅರಿಷ್ಟನೇಮಿ–**
**ಸ್ಸ್ವಸ್ತಿ ನೋ ಬೃಹಸ್ಪತಿರ್ದಧಾತು ॥**

ಈ ಮಂತ್ರದಲ್ಲಿ ದೇವೇಂದ್ರನ ಜೊತೆಗೆ ಪೂಷಾ, ತಾರ್ಕ್ಷ್ಯ, ಬೃಹಸ್ಪತಿ– ಎಂಬ ದೇವತೆಗಳನ್ನೂ ನಮಗೆಲ್ಲ ಸ್ವಸ್ತಿಯನ್ನುಂಟು ಮಾಡಲೆಂದು ಪ್ರಾರ್ಥಿಸಲಾಗಿದೆ. ಇಂದ್ರನು ವೃದ್ಧಶ್ರವನು– ಎಂದರೆ ಸಮೃದ್ಧವಾದ ಯಶಸ್ಸುಳ್ಳವನು. ಆತನ ಕೀರ್ತಿಯು ದಿಗಂತವಿಶ್ರಾಂತವಾಗಿರುವದು. ಹಾಗೆಯೇ ಪೂಷಾ ಎಂಬ ದೇವತೆಯು ವಿಶ್ವವೇದನು ಎಂದರೆ ಬಹುಜ್ಞಾನಸಂಪನ್ನನು ಮತ್ತು ಬಹುಧನವುಳ್ಳವನು. ಇನ್ನು ತಾರ್ಕ್ಷ್ಯನೆಂಬವನು ಅರಿಷ್ಟನೇಮಿಯು. ಇಲ್ಲಿ ನೇಮಿ ಶಬ್ದದಿಂದ ರಥವನ್ನು ತೆಗೆದುಕೊಳ್ಳಬೇಕು. ವಿಷ್ಣುರಥಕ್ಕೆ ಸಾರಥಿಯಾದ ಗರುಡನು ಅದನ್ನು ನಡೆಯಿಸುವಲ್ಲಿ ಸ್ವಲ್ಪವಾದರೂ ಯಜಮಾನನಿಗೆ ಹಿಂಸೆಯಾಗದಂತೆ ನಿರ್ವಹಿಸುವ ಶಕ್ತಿಯುಳ್ಳವನು– ಎಂದರ್ಥ. ವಿಷ್ಣುವು ರಾಕ್ಷಸರೊಡನೆ ಯುದ್ಧಮಾಡುವಾಗ ರಥಕ್ಕೆ ಹಾನಿಯಾಗುವ ಸಂಭವವುಂಟಾದರೂ ಅದು ಸಂಭವಿಸ ದಂತೆ ಚಾಕಚಕ್ಯತೆಯಿಂದ ಒಯ್ಯುವವನಾದ್ದರಿಂದ ಗರುಡನಿಗೆ ಅರಿಷ್ಟನೇಮಿಯೆಂದು ಹೆಸರು. ಇಂಥ ಗರುಡನು– ಎಂದರ್ಥ. ಇನ್ನು ಬೃಹಸ್ಪತಿಯು ದೇವಗುರುವಾಗಿರು ವವನು– ಹಾಗೂ ಇಂದ್ರನಿಗೆ ಪುರೋಹಿತನೂ ಆಗಿದ್ದುಕೊಂಡಿರುವನು. ಈ ಎಲ್ಲಾ ದೇವತೆಗಳೂ ನಮಗೆ ಸ್ವಸ್ತಿಯನ್ನುಂಟುಮಾಡಲಿ– ಎಂದರ್ಥ. ಸ್ವಸ್ತಿ ಎಂಬುದು ಅವ್ಯಯವು. ಋಗ್ವೇದದಲ್ಲಿ ಅಶ್ವಿನೀ ದೇವತೆಗಳೇ ಮೊದಲಾದವರು ನಮಗೆ ಸ್ವಸ್ತಿಯನ್ನುಂಟುಮಾಡಲಿ ಎಂದು ಪ್ರಾರ್ಥಿಸುವ ಸೂಕ್ತವು ಒಂದಿದೆ. ಅದು ದೇವತಾಪ್ರಾರ್ಥನೆಗೆ ಬಹಳ ಯೋಗ್ಯವಾದದ್ದಾಗಿದೆ. "**ಸ್ವಸ್ತಿನೋ ಮಿಮೀತಾವಶ್ವಿನಾ ಭಗಃ**" ಎಂದು ಅದರ ಆರಂಭವು. ಚೆನ್ನಾಗಿ ಅಧ್ಯಯನ ಮಾಡಿರುವ ಘನಪಾಠಿಗಳಿಂದ ಈ ಸೂಕ್ತವನ್ನು ಹೇಳಿಸಿ ಕೇಳಬೇಕು. ಇಂಥ ಮಂತ್ರಗಳನ್ನು ಈಗಿನ ಕಾಲಕ್ಕೆ ಕ್ಯಾಸೆಟ್‌ಗಳಾಗಿ ಮಾಡಿಯೂ ಪ್ರಚಾರಮಾಡಬಹುದು.

**ಓಂ ॥ ಅಪಾಂತಮನ್ಯುಸ್ತೃಪಲಪ್ರಭರ್ಮಾ**
**ಧುನಿಃ ಶಿಮೀವಾಂಛರುಮಾಗ್‌ಂ ಋಜೀಷೀ ।**
**ಸೋಮೋ ವಿಶ್ವಾನ್ಯತಸಾ ವನಾನಿ**
**ನಾರ್ವಾಗಿಂದ್ರಂ ಪ್ರತಿಮಾನಾನಿದೇಭುಃ ॥**

ಈಗ ಸೋಮ ಹಾಗೂ ಇಂದ್ರದೇವತೆಗಳನ್ನು ಒಟ್ಟಿಗೆ ಸ್ತೋತ್ರಮಾಡಲಾಗು ವದು. ಮೊದಲು ಸೋಮನ ಪ್ರಾರ್ಥನೆಯಿದೆ. ಇಲ್ಲಿ ಸೋಮನೆಂದರೆ ಚಂದ್ರನು ಎಂದರ್ಥ. ಈತನು ಆಕಾಶದಲ್ಲಿ ತನ್ನ ಸಂಚಾರಕ್ರಮದಿಂದ ಬೆಳದಿಂಗಳನ್ನು ಬೀರುತ್ತಾ ಗಿಡಮರಗಳನ್ನೂ ಪೈರುಗಳನ್ನೂ ಬೆಳೆಯಿಸಿ ಪುಷ್ಟಿಮಾಡುವನು. ಗೀತೆಯಲ್ಲಿಯೂ ಭಗವಂತನು 'ನಾನು ಚಂದ್ರನಾಗಿ ರಸಾತ್ಮಕನಾಗಿ ಎಲ್ಲಾ ಗಿಡಮರಗಳನ್ನು ಪೋಷಿಸುವೆನು'

ಎಂದು ಹೇಳಿರುತ್ತಾನೆ. ಆದ್ದರಿಂದ ಭಗವದಂಶನಾದ ಚಂದ್ರನು **ವಿಶ್ವಾನಿ** ಎಂದರೆ ಎಲ್ಲಾ **ವನಾನಿ**–ಪೈರುಗಳನ್ನೂ **ಅತಸಾ**–ತನ್ನ ಸಂತತವಾದ ಗಮನದಿಂದ ಅಥವಾ ಸಂಚಾರ ದಿಂದ ಪೋಷಿಸುತ್ತಾನೆ–ಎಂದಭಿಪ್ರಾಯ. ಇಂಥ ಸೋಮನು **ಆಪಾಂತಮನ್ಯು** ವಾಗಿರುವನು–ಎಂದರೆ ಮೇಲುನೋಟಕ್ಕೆ ಕೋಪವುಳ್ಳವನಾಗಿರುಂತೆ ಕಂಡುಬರುವನು. ಆದರೆ ಅವನ ಹೃದಯಾಂತರಂಗದಲ್ಲಿ ಎಂದಿಗೂ ಕ್ರೋಧವಿರುವದಿಲ್ಲ. ಹೇಗೆ ತಾಯಿತಂದೆಗಳು ಮಕ್ಕಳ ಮೇಲೆ ಕೋಪಮಾಡಿದರೆ ಅದು ತಾತ್ಕಾಲಿಕವೋ, ಮತ್ತು ಹೃದಯದಲ್ಲಿ ಅಸೂಯಾದಿಗಳಿರುವದಿಲ್ಲವೋ ಹಾಗೆಯೇ ನಕ್ಷತ್ರಗಳೊಡೆಯನಾದ ಚಂದ್ರನೂ ಮೇಲುನೋಟದ ಕೋಪವುಳ್ಳವನಾಗಿರವನು. ನಿಜವಾಗಿ ಪ್ರಾಣಿಗಳಲ್ಲಿ ದಯೆಯುಳ್ಳವನೇ ಆಗಿರುತ್ತಾನೆ. ತನ್ನ ಅಮೃತಕಿರಣಗಳಿಂದ ವನಸ್ಪತಿಗಳಿಗೂ ಬಿತ್ತಿ ಬೆಳೆಯುವ ಪೈರುಗಳಿಗೂ ರಸವನ್ನುಂಟುಮಾಡುತ್ತಾನೆ. ಪ್ರಾಣಿಗಳಿಗೆ ಸೂರ್ಯನು ತಂದೆಯೆಂದೂ ಚಂದ್ರನು ತಾಯಿಯೆಂದೂ ಈ ಅಗ್ನೀಷೋಮರಿಂದಲೇ ಪ್ರಜೆಗಳೆಲ್ಲ ಉತ್ಪತ್ತಿಯಾಗಿರುವರೆಂದೂ ಉಪನಿಷತ್ತುಗಳಲ್ಲಿ ವರ್ಣಿಸಿರುವದು ಕಂಡುಬರುತ್ತದೆ. ಆದ್ದರಿಂದಲೇ ಚಂದ್ರನ ಕೋಪವು ತಾಯಿಯ ಕೋಪಕ್ಕೆ ಸಮಾನವು. ಇನ್ನು ಈತನು **ತೃಪಲಪ್ರಭನು**. ತೃಪಲ ಎಂದರೆ ಚಂದ್ರಕಾಂತವೆಂಬ ಶಿಲೆಯು. ಇದರ ಸ್ವಭಾವ ವೇನೆಂದರೆ–ಚಂದ್ರಕಿರಣಗಳು ಸೋಂಕಿದಾಗ ಈ ಶಿಲೆಯು ನೀರಾಗಿ ತೊಟ್ಟಿಕ್ಕುತ್ತದೆ ಯಂತೆ. ಸಂಸ್ಕೃತಕಾವ್ಯಗಳಲ್ಲಿ ಈ ರೀತಿಯಾದ ವರ್ಣನೆಯಿದೆ. ಇಂಥ ಚಂದ್ರಕಾಂತ ಶಿಲೆಯಂತೆ ಪ್ರಭೆಯುಳ್ಳವನು–ಎಂದರ್ಥ. ಇನ್ನು ಈತನು **ಮಾಧುನಿಯು**. ಮಧು ಎಂದರೆ ವಸಂತಮಾಸವು. ಆ ಕಾಲದಲ್ಲಿ ಚಂದ್ರನು ಹೆಚ್ಚು ಆಹ್ಲಾದಕರನಾಗಿರುವನು, ಚಳಿಯಿರುವದಿಲ್ಲವಾದ್ದರಿಂದ ಬೆಳದಿಂಗಳು ಹಿತಕರವಾಗಿರುವದು. ಆದ್ದರಿಂದ ಮಧುಮಾಸದಲ್ಲಿ ಪ್ರಿಯನೆನಿಸಿರುವ ಚಂದ್ರನು ಮಾಧುನಿಯು. ಇನ್ನು ಈತನು **ಶಿಮೀವಾನ್** ಎನಿಸಿರುವನು. ಶಮೀವಾನ್ ಎಂಬುದು ವೈದಿಕಪ್ರಯೋಗದಲ್ಲಿ ಶಿಮೀವಾನ್ ಎಂದಾಗಿರುತ್ತದೆ. ಶಮೀ ಎಂಬುದು ಒಂದು ವೃಕ್ಷವು. ಬನ್ನಿಮರವೆಂದು ಕನ್ನಡದಲ್ಲಿ ಕರೆಯುವರು. ಬನ್ನಿಪತ್ರೆಯು ಕೂಡ ಬಿಲ್ವಪತ್ರೆಯಂತೆ ಪರಮೇಶ್ವರನ ಪೂಜೆಗೆ ಶ್ರೇಷ್ಠವಾದದ್ದಾಗಿರುವದರಿಂದ ಭಕ್ತರು ಅದನ್ನು ಶಿವನ ತಲೆಯ ಮೇಲೆ ಅರ್ಪಿಸುವರು. ಆ ಸ್ಥಳದಲ್ಲೇ ಎಂದರೆ ಮಹಾದೇವನ ಜಟಾಜೂಟದಲ್ಲಿಯೇ ಚಂದ್ರನೂ ಇರುವನು. ಹೀಗೆ ಒಂದೇ ಸ್ಥಳದಲ್ಲಿರುವ ಶಮಿಯೂ ಚಂದ್ರನೂ ಅನ್ಯೋನ್ಯ ಪ್ರಿಯರಾಗಿರುವದರಿಂದ ಚಂದ್ರನನ್ನು ಶಿಮೀವಾನ್ ಎಂದು ಸ್ತುತಿಸಲಾಗಿದೆ. ಇನ್ನು ಚಂದ್ರನು **ಶರುಮಾನ್** ಎಂದರೆ ಬಹಳ ಸುಖಿಯು ಎಂದರ್ಥ ಮತ್ತು **ಋಜೀಷಿಯು** ಎಂದರೆ ಅತಿಯಾಗಿ ತೇಜಸ್ವಿಯಾಗಿರುವನು. ಹೀಗೆ ಚಂದ್ರನನ್ನು ಸ್ತುತಿಮಾಡಿದ ಅನಂತರ

ಇಂದ್ರನನ್ನು ಹೊಗಳುತ್ತಾರೆ ಹೇಗೆಂದರೆ ಇಂದ್ರನು ನಿರುಪಮಾನನಾದವನು. ಇಂದ್ರನ ಮಟ್ಟದಿಂದ ಉಳಿದವರೆಲ್ಲರ **ಪ್ರತಿಮಾನಾನಿ**– ಗುಣಪರಾಕ್ರಮಾದಿಗಳೆಲ್ಲವೂ **ಅರ್ವಾಕ್** ಎಂದರೆ ಕೀಳಾಗಿರುವವು. ಆದ್ದರಿಂದಲೆ ಅವು ಯಾವವೂ ಇಂದ್ರನನ್ನು **ನ ದೇಭುಃ**– ಪೀಡಿಸಲಾರವು– ಎಂದರೆ ವ್ಯಥೆಗೊಳಿಸಲಾರವು. ಲೋಕದಲ್ಲಿ ತನಗೆ ಸರಿಸಮಾನವಾದ ಮತ್ತೊಂದು ವಸ್ತುವಿದೆ– ಅಥವಾ ವ್ಯಕ್ತಿಯಿದ್ದಾನೆ– ಎಂದರೆ ಯಾರಿಗಾದರೂ ವ್ಯಥೆಯಾಗುವದು. ಏಕೆಂದರೆ ತಾನೇ ಎಲ್ಲಕ್ಕಿಂತ ಶ್ರೇಷ್ಠನೂ ಅದ್ವಿತೀಯನೂ ಆಗಿರಬೇಕೆಂಬುದು ಎಲ್ಲರ ಇಚ್ಛೆಯಾಗಿರುತ್ತದೆ. ತನಗೆ ಸರಿಸಮಾನರಿಲ್ಲವೆಂದಾದರೆ ನಿರತಿಶಯ ಮಹತ್ತ್ವವು ತನ್ನದೇ ಎಂದಾಗಿ ಸಂತೋಷವಾಗುವದು. ಆದ್ದರಿಂದ ಇಂದ್ರನಿಗೆ ಸಮಾನರಾರೂ ಇಲ್ಲವೆಂದು ಹೇಳುವ ಪರಿಯಿಂದ ಇಲ್ಲಿ ಸ್ತುತಿಸಿ ಅನುಪಮಾನನಾದ ಶಚೀಪತಿಯು ನಮ್ಮನ್ನು ಕಾಪಾಡಲಿ– ಎಂದು ಬೇಡಿಕೊಳ್ಳಲಾಗಿದೆ.

**ಓಂ ॥ ಬ್ರಹ್ಮ ಜಜ್ಞಾನಂ ಪ್ರಥಮಂ ಪುರಸ್ತಾತ್**
**ವಿಸೀಮತಸ್ಸುರುಚೋ ವೇನ ಆವಃ ।**
**ಸ ಬುಧ್ನಿಯಾ ಉಪಮಾ ಅಸ್ಯ ವಿಷ್ಠಾಃ**
**ಸತಶ್ಚ ಯೋನಿಮಸತಶ್ಚ ವಿವಃ ॥**

ಈ ಮಂತ್ರದಲ್ಲಿ ಪರಬ್ರಹ್ಮವನ್ನು ಪ್ರಾರ್ಥನೆ ಮಾಡಲಾಗಿದೆ. ಆ ಬ್ರಹ್ಮವು ಮೂರು ಲೋಕಗಳನ್ನೂ ತನ್ನ ಪ್ರಕಾಶದಿಂದ **ವಿ– ಆವಃ** ವಿಸ್ತರಿಸಿತು. ಆ ಲೋಕಗಳೆಲ್ಲವೂ **ಸುರುಚಃ**– ಅತಿಯಾಗಿ ಶೋಭಿಸುತ್ತಿರುವವು. ಸರ್ವದೇವತೆಗಳಿಗೂ **ಪ್ರಥಮಂ** ಮೊದಲನೆಯದಾದ ಅದು **ಪುರಸ್ತಾತ್**– ಪೂರ್ವದಿಕ್ಕಿನಲ್ಲಿ ಸೂರ್ಯರೂಪದಿಂದ **ಜಜ್ಞಾನಂ**– ಉದಯಿಸುತ್ತದೆ. ಹಾಗೂ **ವೇನಃ**– ರಮಣೀಯವಾಗಿದೆ. **ಸೀಮತಃ**– ಎಲ್ಲೆಲ್ಲಿಯೂ ಸುತ್ತುವರೆದಿರುವದಾಗಿ ಅದು **ಬುಧ್ನಿಯಾಃ**– ಪೂರ್ವಾದಿದಿಕ್ಕುಗಳನ್ನೂ **ಸತಃ**– ಇದ್ದುಕೊಂಡಿರುವ ಮೂರ್ತದ್ರವ್ಯಗಳಾದ ಗಡಿಗೆ, ಬಟ್ಟೆ– ಮುಂತಾದವುಗಳನ್ನೂ **ಅಸತಃ**– ಅಮೂರ್ತವಾದ ಗಾಳಿ, ಆಕಾಶ– ಮುಂತಾದವುಗಳನ್ನೂ ಬೆಳಗುತ್ತಿರುವದು ಮತ್ತು ಎಲ್ಲಕ್ಕೂ **ಯೋನಿ**– ಎಂದರೆ ಕಾರಣವಾಗಿರುವದು. ಆದ್ದರಿಂದಲೇ **ವಿಷ್ಠಾಃ**– ವಿವಿಧವಾದ ಸ್ಥಾನಗಳನ್ನು ಹೊಂದಿರುವ ದಿಕ್ಕುಗಳು ಎಲ್ಲಕ್ಕೂ ಕಾರಣವಾದ ಬ್ರಹ್ಮವನ್ನೇ ಪ್ರಕಾಶಗೊಳಿಸುತ್ತಿರುವವು– ಎಂದರ್ಥ. ಈ ಮಂತ್ರದಲ್ಲಿ ಪರಬ್ರಹ್ಮವು ದೇಶ ಕಾಲಾದಿಗಳಿಗೂ ಮೂರ್ತಾಮೂರ್ತವಸ್ತುಗಳಿಗೂ ಸೂರ್ಯನೇ ಮೊದಲಾದ ದೇವತೆಗಳಿಗೂ ಎಲ್ಲಕ್ಕೂ ಮೂಲವಾಗಿದ್ದುಕೊಂಡಿದೆಯೆಂದೂ ಸ್ಪಷ್ಟವಾಗಿರುವ

ದಿಗ್ದೇಶಕಾಲದಿಗಳೆಲ್ಲವೂ ಬ್ರಹ್ಮವನ್ನೇ ಪ್ರತಿನಿಧಿಸುತ್ತಿವೆಯೆಂದೂ ಸ್ತೋತ್ರಮಾಡಲಾಗಿದೆ. ವೈದಿಕರು ಈ ಮಂತ್ರವನ್ನು ಬ್ರಹ್ಮಶಬ್ದಲಿಂಗವಿರುವದರಿಂದ ಚತುರ್ಮುಖಬ್ರಹ್ಮನ ಪೂಜಾ–ಹೋಮಾದಿಗಳಿಗೆ ಬಳಸುತ್ತಾರೆ. ಪರಬ್ರಹ್ಮವನ್ನು ತಿಳಿಸುವ ಯಾವ ಮಂತ್ರಗಳನ್ನಾದರೂ ಯಾವದೇ ದೇವತೆಯು ಆರಾಧನಾದಿಗಳಿಗೆ ಉಪಯೋಗಿಸಬಹುದು. ಏಕೆಂದರೆ ಎಲ್ಲಾ ದೇವತೆಯೂ ಪರಬ್ರಹ್ಮದ ಅಂಶವೇ ಆಗಿರುತ್ತದೆ. ಯಾವ ದೇವತೆಯನ್ನೇ ಆಗಲಿ, ಪರಬ್ರಹ್ಮಕ್ಕಿಂತ ಅನನ್ಯವೆಂದೇ ತಿಳಿಯಬೇಕೆಂದೂ ಅನ್ಯವೆಂದು ತಿಳಿದರೆ ಆ ದೇವತೆಯು ಉಪಾಸಕನನ್ನು ತಿರಸ್ಕರಿಸಿಬಿಡುವದೆಂದೂ ಉಪನಿಷತ್ತಿನಲ್ಲಿದೆ. ಆದ್ದರಿಂದ ಪರಬ್ರಹ್ಮವು ಎಲ್ಲಾದೇವತೆಯ ಆತ್ಮನೇ ಆಗಿದೆ. ಉಳಿದ ಸಮಸ್ತದೇವತೆಗಳೂ ಆಯಾ ದೇವತಾಸ್ತುತಿಪರವಾದ ಮಂತ್ರಗಳೂ ಪರಬ್ರಹ್ಮದಲ್ಲೇ ತಾತ್ಪರ್ಯವನ್ನು ಹೊಂದಿರುತ್ತವೆ. ಹೀಗೆ ಸಮನ್ವಯಮಾಡಿಕೊಂಡು ವೇದಾರ್ಥರಹಸ್ಯವನ್ನು ಅರಿತುಕೊಳ್ಳಬೇಕು.

**ಓಂ ॥ ಸ್ಯೋನಾ ಪೃಥಿವಿ ಭುವಾನೃಕ್ಷರಾ ನಿವೇಶನೀ ।**
**ಯಚ್ಛಾ ನಃ ಶರ್ಮಃ ಸಪ್ರಥಾಃ ॥**

ಈ ಮಂತ್ರವು ಭೂದೇವಿಯನ್ನು ಪ್ರಾರ್ಥಿಸುವ ಸ್ತುತಿರೂಪವಾಗಿದೆ. 'ಎಲೈ ಪೃಥಿವಿಯೆ, ನೀನು ನಮಗೆ ದುಃಖಗಳ ವಿನಾಶವನ್ನು ಮಾಡುವವಳಾಗು. ನೀನು **ನೃಕ್ಷರಳು**–ಎಂದರೆ ಮನುಷ್ಯರೇ ಮುಂತಾದ ಜರಾಯುಜ–ಅಂಡಜ–ಸ್ವೇದಜ–ಉದ್ಭಿಜ್ಜಗಳೆಂಬ ನಾಲ್ಕು ವಿಧವಾದ ಭೂತಗ್ರಾಮಗಳಿಗೆ ಜನನಿಯು–ಉತ್ಪಾದಕಳು ಆಗಿರುವೆ. ಮತ್ತು ಅವುಗಳೆಲ್ಲವನ್ನೂ **ನಿವೇಶನೀ**–ಆಯಾ ಯೋಗ್ಯವಾದ ಜಾಗಗಳಲ್ಲಿ ಸ್ಥಾಪಿಸುವವಳು ಆಗಿರುವೆ. ನೀನು **ಸಪ್ರಥಾಃ**–ಕೀರ್ತಿವಂತಳೂ ಆಗಿರುವೆ. ಇಂಥ ನೀನು ನಮಗೆ **ಶರ್ಮ**–ಸುಖವನ್ನು ನೀಡುವವಳಾಗು–ಎಂದಭಿಪ್ರಾಯ. ಭೂದೇವಿಯನ್ನು ಪ್ರತಿಯೊಬ್ಬ ಜೀವಿಯೂ ಪ್ರಾರ್ಥಿಸಲೇಬೇಕು. ಏಕೆಂದರೆ ಅವಳೇ ನಮಗೆ ಆಧಾರಳಾಗಿರುವಳು. ನಾವು ಹುಟ್ಟಿದಂದಿನಿಂದ ಸಾಯುವವರೆಗೂ ಭೂಮಿಯ ಮೇಲೆಯೇ ಬದುಕಿ ಬಾಳುತ್ತಿರುವೆವು. ನಮಗೆ ಬೇಕಾದ ದವಸಧಾನ್ಯಗಳನ್ನೂ ನಮ್ಮ ಪಶುಗಳಿಗೆ ಬೇಕಾದ ಹುಲ್ಲು–ಕಡ್ಡಿಗಳನ್ನೂ ಭೂಮಿಯೇ ಒದಗಿಸುತ್ತಿರುವಳು. ನಮ್ಮ ವಾಸದ ಮನೆ, ಊರು, ಕೇರಿಗಳು ಭೂಮಿಯ ಮೇಲೆಯೇ ಇರುವವು. ನಮ್ಮ ಉದ್ಯೋಗಾವಕಾಶಗಳೂ ಎಂದರೆ ಕೃಷಿ, ವ್ಯಾಪಾರ, ಖನಿಜಗಳ ಉತ್ಪತ್ತಿ, ಕೈಗಾರಿಕೆಗಳು–ಮುಂತಾಗಿ ಎಲ್ಲವೂ ಭೂಮಿಯನ್ನಾಶ್ರಯಿಸಿರುವವು. ರೈತಜೀವನವನ್ನು ಕೈಗೊಂಡಿರುವವರನ್ನು **'ಮಣ್ಣಿನ ಮಕ್ಕಳು'**–ಎಂದೇ ಕರೆಯುವೆವು. ನಾವು

ಉಗುಳುವದು, ಮಲಮೂತ್ರವಿಸರ್ಜನೆ ಮಾಡುವದು, ಕೊಳಕನ್ನುಂಟು ಮಾಡುವದು–ಮುಂತಾದ ರೀತಿಗಳಿಂದ ಅಪಚಾರವೆಸಗುತ್ತಿದ್ದರೂ ಆ ದೇವಿಯು ಎಲ್ಲವನ್ನೂ ಸಹಿಸಿಕೊಂಡಿರುವಳು, ಹೀಗೆಯೇ ವಿಚಾರಮಾಡುತ್ತಾ ಹೋದರೆ ಭೂಮಿಯಿಂದ ಪರಮೋಪಕಾರವನ್ನು ಹೊಂದುತ್ತಿರುವ ನಾವು ಆ ದೇವತೆಯನ್ನೇ ಆರಾಧಿಸುತ್ತಿಲ್ಲ . ಇದೊಂದು ವಿಪರ್ಯಾಸವೇ ಸರಿ. ಆದ್ದರಿಂದ ನಾವು ಶಾಸ್ತ್ರವನ್ನು ಓದಿ ತಿಳಿವಳಿಕೆಯನ್ನು ಸಂಪಾದಿಸಿದ ಮೇಲಾದರೂ ಭೂದೇವಿಯನ್ನು ಗೌರವಿಸಬೇಕು. ನಮ್ಮ ಪಾದಸ್ಪರ್ಶವನ್ನು ಕ್ಷಮಿಸುವಂತೆ ಬೆಳಗ್ಗೆ ಎದ್ದ ಕೂಡಲೆ ಬೇಡಿಕೊಳ್ಳಬೇಕು. ಮಹಾವಿಷ್ಣುವಿನ ಪತ್ನಿಯಾದ ಈಕೆಯು ಎಲ್ಲರಿಗೂ ಸುಖವನ್ನುಂಟುಮಾಡುವಂತೆ ಪ್ರಾರ್ಥಿಸಬೇಕು. ವೈದಿಕಕರ್ಮಾರಂಭಕ್ಕೆ ಮುಂಚಿತವಾಗಿ ಭೂದೇವಿಯನ್ನು ಈ ಮಂತ್ರದಿಂದ ಸ್ತುತಿಸಬೇಕು–ಎಂದಭಿಪ್ರಾಯ.

**ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಮ್ ।**
**ಈಶ್ವರೀಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಮ್ ॥**

ಈ ಮಂತ್ರವೂ ಭೂದೇವಿಯ ಸ್ತುತಿಯಾಗಿದೆ. ಇದು ಶ್ರೀಸೂಕ್ತದಲ್ಲಿಯೂ ಬಂದಿರುತ್ತದೆ. ಅಲ್ಲಿಯೂ ಈ ಮಂತ್ರಾರ್ಥವನ್ನು ವಿವರಿಸಲಾಗಿದೆ. ಇದನ್ನು ವೈದಿಕರು ದೇವರ ಪೂಜೆಯ ಸಮಯಕ್ಕೆ ಗಂಧವನ್ನು ದೇವರಿಗೆ ಅರ್ಪಿಸುವಾಗ ಪಠಿಸುತ್ತಾರೆ. ಆದರೆ ಇದರ ಅರ್ಥವು ಬೇರೆಯಾಗಿದೆ. ಗಂಧ –ಎಂಬ ಶಬ್ದ ಪ್ರಯೋಗವಿರುವದರಿಂದ ಗಂಧಸಮರ್ಪಣೆಗೆ ಉಪಯೋಗಿಸುವದು ರೂಢಿಯಾಗಿದೆ. ಇರಲಿ. ಈಗ ಭೂದೇವಿಯ ಪರವಾದ ಅರ್ಥವನ್ನು ವಿಚಾರಿಸೋಣ. ಈಕೆಯು ಗಂಧದ್ವಾರಳು ಎಂದರೆ ಗಂಧದಿಂದ ಪೃಥಿವಿಯೆಂದು ಊಹಿಸಲ್ಪಡುವವಳು–ಎಂದರ್ಥ. ಗಂಧವು ಪೃಥಿವಿಯ ಅಸಾಧಾರಣಗುಣವು. ಪೃಥಿವಿಯಲ್ಲಿರುವ ಗಂಧವು ನಾನೇ–ಎಂದು ಭಗವಂತನು ಗೀತೆಯಲ್ಲಿ ತಿಳಿಸಿರುತ್ತಾನೆ. ಎಲ್ಲೆಲ್ಲಿ ಗಂಧವು ಅನುಭವವಾದರೂ ಅದು ಪೃಥಿವೀತತ್ತ್ವವೇ ಎಂದು ತಿಳಿಯಬೇಕು. ಬೇಸಿಗೆಯು ದಾಟಿದ ಅನಂತರ ಬರುವ ಹೊಸಮಳೆಯ ನೀರು ಭೂಮಿಗೆ ಬಿದ್ದ ಕೂಡಲೆ ಸುವಾಸನೆಯು ಮೂಗಿಗೆ ಬರುವದನ್ನು ನಾವೆಲ್ಲರೂ ಅನುಭವಿಸಿದ್ದೇವಲ್ಲವೆ? ಇದೇ ಗಂಧವತ್ತ್ವವು. ಇಂಥ ಗಂಧದ್ವಾರಳಾದ ದೇವಿಯು ದುರಾಧರ್ಷಳೂ ಆಗಿರುತ್ತಾಳೆ. ಭೂಮಿಯನ್ನು ಎಷ್ಟೇ ಅಗೆಯಲಿ, ಬಗೆಯಲಿ, ಆಕೆಯು ಸ್ಥಿರಳಾಗಿಯೇ ಇರುವಳು. ಭೂಮಂಡಲದಲ್ಲಿ ಎಷ್ಟು ಗಣಿಗಳಿವೆ? ನೋಡಿರಿ. ಅಲ್ಲೆಲ್ಲ ಭೂಮಿಯನ್ನು ಬಗೆದು ಬಗೆದು ತೋಡಿದ್ದರೂ ಭೂಮಿಯು ಇನ್ನೂ ಅಳ್ಳಾಡದೆ ಇರುವದು. ಇದೇ ದುರಾಧರ್ಷತ್ವವು. ಇನ್ನು ಈಕೆಯು ನಿತ್ಯಪುಷ್ಟಳೂ ಕರೀಷಿಣಿಯೂ

ಆಗಿರುವಳು. ಭೂಮಿಯಲ್ಲಿ ಎಂದಿಗೂ ಬರಗಾಲವಾಗಲಾರದು. ಎಲ್ಲಿಯೊ ಕೆಲವು ಭಾಗಗಳಲ್ಲಿ ಬೆಳೆಯು ಬಾರದಿದ್ದರೂ ಮತ್ತೊಂದು ಕಡೆಯಲ್ಲಿ ಸಮೃದ್ಧವಾಗಿದ್ದೇ ಇರುವದು. ಇನ್ನು ಕಾಡುಗಳು, ಅರಣ್ಯಗಳು– ಯಾವಾಗಲೂ ಭೂಮಿಯನ್ನು ಅಲಂಕರಿಸಿರುವವು. ಹೀಗೆ ನಿತ್ಯವೂ ಪೈರುಪಚ್ಚೆಗಳಿಂದ ಕೂಡಿ ಶೋಭಿಸುತ್ತಿರುವ ದೇವಿಯು ನಿತ್ಯಪುಷ್ಪಳು. **ಕರೀಷಿಣಿ**ಯೆಂದರೆ ರೈತರಿಂದ ಉಳಲ್ಪಟ್ಟು ಪೈರುಗಳಿಂದ ಬಿತ್ತಲ್ಪಡುವವಳು. ಹಾಗೂ ದನಕರುಗಳ ಸಗಣಿ– ಮುಂತಾದವುಗಳಿಂದ ಫಲವತ್ತಾಗಿ ಮಾಡಲ್ಪಟ್ಟಿರುವವಳು. ಇನ್ನು ಈಕೆಯು ಸರ್ವಭೂತಗಳಿಗೂ **ಈಶ್ವರಿ**ಯು– ಒಡತಿಯು ಎಂದರ್ಥ. **ಶ್ರೀಯು**– ಎಂದರೆ ಭೂತಗಳಿಂದ ಆಶ್ರಯಿಸಲ್ಪಟ್ಟಿರುವವಳೂ ಆಗಿದ್ದಾಳೆ. ಇಂಥ ದೇವಿಯನ್ನು ಆಹ್ವಾನಿಸುತ್ತೇನೆ. ಆಕೆಯು ನನ್ನಿಂದ ಸ್ತುತಿಸಲ್ಪಟ್ಟವಳಾಗಿ ಸುಖವನ್ನುಂಟುಮಾಡಲಿ– ಎಂದಭಿಪ್ರಾಯ.

**ಶ್ರೀರ್ಮೇ ಭಜತು । ಅಲಕ್ಷ್ಮೀರ್ಮೇ ನಶ್ಯತು । ವಿಷ್ಣುಮುಖಾ ವೈ ದೇವಾಶ್ಛಂದೋಭಿರಿಮಾನ್ ಲೋಕಾನನಪಜಯ್ಯಮಭ್ಯಜಯನ್ ॥**

ಈಗ ಸಾಧಕನು ತನ್ನ ಅಭ್ಯುದಯಪ್ರಾಪ್ತಿಗಾಗಿ ದೇವತೆಗಳನ್ನು ಬೇಡಿಕೊಳ್ಳುತ್ತಿದ್ದಾನೆ, ''ಲಕ್ಷ್ಮಿಯು ನನ್ನನ್ನು ಬಂದು ಸೇರುವವಳಾಗಲಿ, ಅಲಕ್ಷ್ಮಿಯು ಕಣ್ಮರೆಯಾಗಲಿ'' ಎಂಬುದೊಂದು ಪ್ರಾರ್ಥನೆಯಾಗಿದೆ. ಲಕ್ಷ್ಮಿಯೆಂದರೆ ಕೇವಲ ಧನವೆಂದು ಅರ್ಥವಲ್ಲ. ಸ್ಮೃತಿ, ಧೃತಿ, ಮೇಧಾ, ಕ್ಷಮಾ, ದಮ– ಮುಂತಾದ ಅಧ್ಯಾತ್ಮ ಗುಣಗಳ ರೂಪದಲ್ಲಿರುವ ಲಕ್ಷ್ಮಿಯೂ ಸುಭಿಕ್ಷ, ಕ್ಷೇಮಾಯುಷ್ಯಾರೋಗ್ಯಾಭಯಾದಿರೂಪ ವಾದ ಲಕ್ಷ್ಮಿಯೂ ನನ್ನನ್ನು ಬಂದು ಸೇರಲಿ– ಎಂದಭಿಪ್ರಾಯ. ಈಗಿನ ಕಾಲದ ಜನರಿಗೆ ಹಣವನ್ನು ಮಾತ್ರ ಲಕ್ಷ್ಮಿಯೆಂದು ತಿಳಿದುಕೊಳ್ಳುವಷ್ಟು ಸಂಕುಚಿತಬುದ್ಧಿಯುಂಟಾಗಿದೆ. ಆದರೆ ಹಣವೊಂದಿದ್ದರೆ ಸಾಕೆ? ಆರೋಗ್ಯ, ಕುಟುಂಬಸೌಖ್ಯ, ವಿದ್ಯಾಬುಧ್ಯಾದಿಗಳು ಬೇಡವೆ? ಆದ್ದರಿಂದ ಎಲ್ಲವನ್ನೂ ಒಟ್ಟು ಗೂಡಿಸಿ '**ಶ್ರೀರ್ಮೇ ಭಜತು**'– ಎಂದು ಕೇಳಿಕೊಳ್ಳಲಾಗಿದೆ. ಹಾಗೆಯೇ ಅಲಕ್ಷ್ಮಿಯು ಕಣ್ಮರೆಯಾಗಲಿ– ಎಂಬುದನ್ನೂ ವಿಶಾಲವಾದ ಅರ್ಥದಲ್ಲಿ ತೆಗೆದುಕೊಳ್ಳಬೇಕು. ಪ್ರಮಾದ, ಆಲಸ್ಯ, ಅತಿನಿದ್ರೆ, ಕಾಮ, ಕ್ರೋಧಾದಿಗಳು, ಈರ್ಷ್ಯಾಸೂಯೆಗಳೇ ಮುಂತಾದ ಜ್ಯೇಷ್ಠಾಲಕ್ಷ್ಮಿಯರೂ ದಾರಿದ್ರ್ಯ, ಅನ್ನಾದ್ಯಭಾವ, ಕ್ಷಾಮ, ಹಸಿವು ಬಾಯಾರಿಕೆ– ಮುಂತಾದವುಗಳೂ ಅಲಕ್ಷ್ಮಿಯರೆನಿಸಿರುತ್ತಾರೆ ಅವರುಗಳು ಕೂಡ ಕಣ್ಮರೆಯಾಗಲಿ– ಎಂದಭಿಪ್ರಾಯ.

ಹೀಗೆ ಯಾರು ದೇವತಾನುಗ್ರಹದಿಂದ ಅಲಕ್ಷ್ಮಿಯನ್ನು ದಾಟಿ ಲಕ್ಷ್ಮಿಯನ್ನು ಪಡೆದುಕೊಳ್ಳಲಿಚ್ಛಿಸುವರೋ ಅಂಥವರು ದೇವತೆಗಳಂತೆ ಸದ್ಗುಣಗಳಿಂದ

ಕೂಡಿದವರಾಗಬೇಕು. ಶಾಸ್ತ್ರೀಯವಾದ ಯಜ್ಞಾದ್ಯನುಷ್ಠಾನಗಳನ್ನು ಕೈಗೊಳ್ಳಬೇಕು. ಹಿಂದೆ ದೇವತೆಗಳಲ್ಲಿ ಶ್ರೇಷ್ಠನಾದ ಮಹಾವಿಷ್ಣುವನ್ನು ಮುಂದಾಳಾಗಿ ಮಾಡಿಕೊಂಡು ಹೊರಟ ದೇವತೆಗಳು ವೇದಗಳ ಉಪದೇಶದಂತೆಯೂ ಸೂಚನೆಯಂತೆಯೂ ಯಜ್ಞಗಳನ್ನು ಕೈಗೊಂಡರು. ಆದರೆ ಅವರಿಗೆ ಯಾವಾಗಲೂ ಅಸುರರು ಎದುರಾಳಿಗಳಾಗಿದ್ದರು. ಅಸುರರ ಸಂಖ್ಯಾಬಲವೂ ದೊಡ್ಡದೇ ಆಗಿತ್ತು. ಆದರೂ ಮಹಾವಿಷ್ಣುವಿನ ಸಹಾಯದಿಂದ ದೇವತೆಗಳು ಅಸುರರನ್ನು ಹಿಮ್ಮೆಟ್ಟಿಸಿ ಅಸುರರು ಕೂಡ ಜಯಿಸಲಾಗದಂಥ ಸ್ವರ್ಗಾದಿ ಲೋಕಗಳನ್ನು ಗೆದ್ದುಕೊಂಡರು. ಈಗಲೂ ಅಸುರರು ಪಾತಾಳದಲ್ಲಿಯೂ ದೇವತೆಗಳು ಸ್ವರ್ಗದಲ್ಲಿಯೂ ಇದ್ದುಕೊಂಡಿರುವರು. ಆದ್ದರಿಂದ ಸಾಧಕನು ದೈವೀಗುಣಗಳೆಂಬ ಶ್ರೀಯನ್ನು ಆಶ್ರಯಿಸಿ ಆಸುರೀಗುಣಗಳೆಂಬ ಅಲಕ್ಷ್ಮಿಯನ್ನು ಗೆದ್ದು ಪರಮಪುರುಷಾರ್ಥಕ್ಕೆ ಭಾಗಿಯಾಗಬೇಕು–ಎಂದಭಿಪ್ರಾಯ.

**ಮಹಾಗ್ಂ ಇಂದ್ರೋ ವಜ್ರಬಾಹುಷ್ಷೋಡಶೀ ಶರ್ಮ ಯಚ್ಛತು ।**
**ಸ್ವಸ್ತಿನೋ ಮಘವಾ ಕರೋತು ಹಂತು ಪಾಪ್ಮಾನಂ ಯೋಽಸ್ಮಾನ್ ದ್ವೇಷ್ಟಿ॥**

ಈ ಮಂತ್ರವು ಇಂದ್ರನನ್ನು ಕುರಿತದ್ದಾಗಿದೆ. ವಜ್ರಬಾಹುವೂ ಮಹಾಂತನೂ ಷೋಡಶಕಲಾಪೂರ್ಣನಾದ ಚಂದ್ರನಂತೆ ಸರ್ವಾಭೀಷ್ಟಸಿದ್ಧಿಪ್ರದನೂ ಮಘವಂತನೂ ಆದ ಇಂದ್ರನು ನಮಗೆ ಸುಖವನ್ನುಂಟುಮಾಡಲಿ, ಹಾಗೂ ಪಾಪವನ್ನು ಪರಿಹಾರ ಮಾಡಿಯಾರು, ನಮ್ಮನ್ನು ದ್ವೇಷಿಸುವರೋ ಅವರನ್ನು ನಾಶಗೊಳಿಸಿ ಸ್ವಸ್ತಿಯನ್ನುಂಟು ಮಾಡಲಿ–ಎಂದಭಿಪ್ರಾಯ. ಷೋಡಶೀ ಎಂಬ ಪದಕ್ಕೆ ಷೋಡಷಾಕ್ಷರೀವಿದ್ಯೆಯನ್ನು ಜಪಿಸಿ ಶ್ರೀದೇವಿಯ ಪ್ರಸಾದದಿಂದ ತ್ರೈಲೋಕ್ಯರಾಜ್ಯಶ್ರೀಯನ್ನು ಹೊಂದಿದ ಮಹಾನುಭಾವನು ಇಂದ್ರನು–ಎಂದೂ ಅರ್ಥಮಾಡಬಹುದೆಂದು ಭಾಷ್ಯಕಾರರು ತಿಳಿಸಿದ್ದಾರೆ.

**ಸೋಮಾನಗ್ಗ್ ಸ್ವರಣಂ ಕೃಣುಹಿ ಬ್ರಹ್ಮಣಸ್ಪತೇ । ಕಕ್ಷೀವಂತಂ ಯ ಔಶಿಜಮ್ । ಶರೀರಂ ಯಜ್ಞಶಮಲಂ ಕುಸೀದಂ ತಸ್ಮಿನ್ ಸೀದತು ಯೋಽಸ್ಮಾನ್ ದ್ವೇಷ್ಟಿ ॥**

ಈ ಮಂತ್ರವು ಭಗವಂತನ ಪ್ರಾರ್ಥನಾರೂಪವಾಗಿದೆ. ಶಾಖೋಪಶಾಖೆ ಗಳಿಂದ ಕೂಡಿದ ಸಮಸ್ತವೇದಗಳಿಗೂ ಪರಿಪಾಲಕನಾದ ಬ್ರಹ್ಮಣಸ್ಪತಿಯೆ, ನನ್ನನ್ನು ಸೋಮಾನನ್ನಾಗಿ ಮಾಡು. ಸೋಮಲತೆಯನ್ನು ಹಿಂಡಿ ರಸವನ್ನು ತೆಗೆಯುವವನು ಸೋಮಾನನೆನಿಸುವನು. ಅಂದರೆ ನಾನು ಸೋಮಯಾಜಿ (ಸೋಮಯಾಗವನ್ನು

ಮಾಡುವವನು) ಯಾಗುವಂತೆ ವರವನ್ನು ದಯಪಾಲಿಸು ಮತ್ತು ಸ್ವರಣನನ್ನಾಗಿ ಮಾಡು. ಸ್ವರವೆಂದರೆ ವೈದಿಕವಾದ ಉದಾತ್ತಾದಿಸ್ವರಗಳು. ಎಲ್ಲಾ ವೇದಶಾಖೆಯ ಮಂತ್ರಗಳ ಸ್ವರಗಳನ್ನೂ ನಾನು ಅರಿತವನಾಗಿ ಪ್ರಯೋಗಿಸುವಂತೆ ಜ್ಞಾನವನ್ನೂ ದಯಪಾಲಿಸುವವ ನಾಗು—ಎಂದರ್ಥ. ಇನ್ನು ಉಶಿಜ್ ಎಂಬವಳ ಮಗನಾದ ಕಕ್ಷೀವಂತನೆಂಬ ಒಬ್ಬ ಋಷಿಯು ಹಿಂದೆ ಇದ್ದನು. ಅವನು ಎಂಥೆಂಥ ಕಷ್ಟಕರವಾದ ದೈಹಿಕ ಶ್ರಮಸಾಧ್ಯವಾದ ತಪೋಪವಾಸಜಾಗರಣಾದಿನಿಯಮಗಳುಳ್ಳ ಯಜ್ಞಗಳಿದ್ದರೂ ನೆರವೇರಿಸುವಷ್ಟು ಶರೀರದಾರ್ಢ್ಯವುಳ್ಳವನಾಗಿದ್ದನು. ಹಾಗೆಯೇ ನನ್ನ ಶರೀರವೂ ಕಕ್ಷೀವಂತನ ಶರೀರದಂತೆ ಯಜ್ಞಶಮಲವಾಗಿ—ಎಂದರೆ ಯಜ್ಞಶ್ರಮವನ್ನು ಸಹಿಸುವಂಥದ್ದಾಗಿ ಆಗುವಂತೆ ಮಾಡುವವನಾಗು—ಎಂದು ಪ್ರಾರ್ಥಿಸಿದೆ. ಮತ್ತು ಯಾವನು ನಮ್ಮನ್ನು ದ್ವೇಷಿಸುವನೋ ಅಂಥವನು ಕುಸೀದವೆನಿಸಿದ ಎಂದರೆ ಕುತ್ಸಿತಕರ್ಮಗಳನ್ನು ಮಾಡುವ ಪಾಪಿಗಳು ವಾಸಿಸುವ ನರಕದಲ್ಲಿ ನೆಲೆಗೊಳ್ಳುವಂತಾಗಲಿ—ಎಂದು ಕೇಳಿಕೊಂಡಿದೆ.

**ಚರಣಂ ಪವಿತ್ರಂ ವಿತತಂ ಪುರಾಣಂ**
**ಯೇನ ಪೂತಸ್ತರತಿ ದುಷ್ಕೃತಾನಿ ।**
**ತೇನ ಪವಿತ್ರೇಣ ಶುದ್ಧೇನ ಪೂತಾ**
**ಅತಿ ಪಾಪ್ಮಾನಮರಾತಿಂ ತರೇಮ ॥**

ಈ ಮಂತ್ರದಲ್ಲಿ ಶ್ರೀಮಹಾವಿಷ್ಣುವಿನ ಪಾದಗಳನ್ನು ಸ್ತೋತ್ರಮಾಡಿದೆ. ಭಗವಂತನಾದ ಆತನು ತನ್ನ ಪಾದಕ್ರಮಣದಿಂದ ತ್ರಿವಿಕ್ರಮಾವತಾರದಲ್ಲಿ ಮೂರು ಲೋಕಗಳನ್ನೂ ಪವಿತ್ರಗೊಳಿಸಿರುವನು. ಅಂಥ ಪವಿತ್ರವೂ ಪುರಾಣವೂ ಆದ ವಿಸ್ತಾರವಾಗಿ ಚಾಚಲ್ಪಟ್ಟ ಶ್ರೀವಿಷ್ಣುವಿನ ಪಾದಗಳು ಯಾವಾಗಲೂ ಆಶ್ರಯಿಸಿದವರಿಗೆ ಶ್ರೇಯಸ್ಕರವಾಗಿವೆ. ಲೋಕವನ್ನೆಲ್ಲಾ ಪವಿತ್ರಗೊಳಿಸುವ ಗಂಗೆಯು ಅವೇ ಪಾದಗಳಿಂದ ಉದ್ಭವಿಸಿರುವಳಾದ್ದರಿಂದ ಅವು ಪವಿತ್ರಗಳಲ್ಲಿ ಪವಿತ್ರವಾದವುಗಳೆನಿಸಿವೆ. ಆ ಪಾದಸ್ಪರ್ಶದಿಂದ ಅಥವಾ ಪಾದಗಳಿಗೆ ಶರಣುಹೋಗುವದರಿಂದ ಮಾನವನು ಪಾಪಗಳನ್ನೆಲ್ಲ ದಾಟಿ ಪವಿತ್ರನಾಗುವನು. ಅಂಥ ಶುದ್ಧವಾದ, ಪವಿತ್ರವಾದ ವೈಷ್ಣವ ಚರಣಾಶ್ರಯದಿಂದ ನಾವುಗಳೂ ಪವಿತ್ರರಾಗುವೆವು. ಶತ್ರುವಿನಂತೆ ಇರುವ—ಎಂದರೆ ನರಕಾದಿಗಳನ್ನುಂಟುಮಾಡುವ ದುರಿತವನ್ನೆಲ್ಲ ದಾಟಿದವರಾಗಿ ನಾವು ಉದ್ಧಾರವಾಗುವೆವು—ಎಂದಭಿಪ್ರಾಯ. ಭಗವಂತನ ಚರಣಾರವಿಂದಗಳಲ್ಲಿ ಪ್ರಪತ್ತಿಯನ್ನು ಮಾಡುವದು ಅಧ್ಯಾತ್ಮಸಾಧನಗಳಲ್ಲೆಲ್ಲ ಕಿರೀಟಪ್ರಾಯವಾಗಿರುವದು. ಹಾಗೆಯೇ ಪ್ರಪತ್ತಿಗೆ ಯೋಗ್ಯವಾದ ಆ ಮಹಾವಿಷ್ಣುವಿನ ಪಾದಾರವಿಂದಗಳೂ ಉಪಮಾರಹಿತವಾಗಿರುವವು.

ಪರಮಾತ್ಮನ ಪಾದಸೇವೆಯನ್ನು ಸಾಕ್ಷಾತ್ತಾಗಿ ಶ್ರೀಮಹಾಲಕ್ಷ್ಮಿಯೇ ಕೈಗೊಂಡಿರುವಳು. ಇಂಥ ಪಾದಗಳು ಇಲ್ಲಿ ಸ್ತುತಿಸಲ್ಪಟ್ಟಿವೆ. ಇದರಿಂದ ಪ್ರಪತ್ತಿಯೆಂಬುದೂ ವೈದಿಕವಾದ ಸಾಧನವೇ ಎಂದು ಸಿದ್ಧವಾಗುವದು. ಈ ಮಂತ್ರವನ್ನು ವೈದಿಕಕರ್ಮಜ್ಞರು ಬ್ರಾಹ್ಮಣರ ಪಾದಗಳನ್ನು ತೊಳೆಯುವಾಗ ಹೇಳುತ್ತಾರೆ. ಪಾದಗಳಿಗೆ ವಿಷ್ಣುವೇ ಅಧಿದೇವತೆಯೆಂದು ಸ್ಮೃತಿಗಳಲ್ಲಿದೆ. ಆದ್ದರಿಂದ ಪಾದಪೂಜೆ, ನಮಸ್ಕಾರಗಳು ಶ್ರೀವಿಷ್ಣುಪೂಜೆಯೇ ಆಗಿರುತ್ತವೆ. ಈಗಲೂ ಪೀಠಾಧಿಪತಿಗಳಾದ ಸಂನ್ಯಾಸಿಗಳೂ ಮಹಾತ್ಮರೂ ದಯಮಾಡಿಸಿದಾಗ ಜನರು ಪಾದಪೂಜೆಯನ್ನು ಮಾಡಿ ಗೌರವಿಸುವ ಪದ್ಧತಿಯಿದೆ. ದೊಡ್ಡದೊಡ್ಡ ಸಂನ್ಯಾಸಿಗಳನ್ನು 'ಶ್ರೀಪಾದಂಗಳವರು' ಎಂದೇ ಗೌರವಪೂರ್ವಕವಾಗಿ ಸಂಬೋಧಿಸುತ್ತಾರೆ. ಮಹಾತ್ಮರ ಪಾದಧೂಳಿಯು ಪರಮಪವಿತ್ರವೆಂದೂ ಅಂಥವರ ಪಾದಕ್ರಮಣವು ಶ್ರೇಯಸ್ಕರವೆಂದೂ ಭಕ್ತರು ಭಾವಿಸಿ ಮನೆಗಳಿಗೆ ಕರೆದೊಯ್ದು ಪೂಜೆ ಮಾಡುತ್ತಾರೆ. ಈ ಆಚಾರಗಳಿಗೆಲ್ಲ ವೇದದ ಸಮ್ಮತಿಯಿದೆ–ಎಂದು ಈ ಮಂತ್ರದಿಂದ ತಿಳಿದುಬರುತ್ತದೆ.

ಓಂ ॥ ಸಜೋಷಾ ಇಂದ್ರ ಸಗಣೋ ಮರುದ್ಭಿಃ ಸೋಮಂ ಪಿಬ
ವೃತ್ರಹನ್ ಶೂರ ವಿದ್ವಾನ್ । ಜಹಿ ಶತ್ರೂಗ್ಂರಪ
ಮೃಧೋ ನುದಸ್ವಾಥಾಭಯಂ ಕೃಣುಹಿ ವಿಶ್ವತೋ ನಃ ॥

ಈ ಮಂತ್ರದಲ್ಲಿ ಇಂದ್ರನನ್ನು ಅಭಯಪ್ರದಾನಮಾಡುವಂತೆ ಪ್ರಾರ್ಥಿಸಲಾಗಿದೆ. ಮಾನವನಿಗೆ ಭಯವೆಂಬುದೊಂದು ದೊಡ್ಡ ದೋಷವು. ಅದು ಒಂದಲ್ಲ–ಒಂದು ರೀತಿಯಿಂದ ಮನಸ್ಸಿನಲ್ಲಿ ಪೀಡಿಸುತ್ತಲೇ ಇರತ್ತದೆ. ಇಂದ್ರನನ್ನು ಭಯವನ್ನು ಹೋಗಲಾಡಿಸಬೇಕೆಂದು ಇಲ್ಲಿ ಕೇಳಲಾಗಿದೆ. ಸರ್ವಜ್ಞನಾದ ಆತನು ಜೋಷಾ ಎಂದರೆ ಪ್ರೀತಿಯುಕ್ತನಾಗಿ ದೇವತಾಗಣಗಳಿಂದ ಕೂಡಿದವನಾಗಿ ಬಂದು ನಾವು ಕೈಗೊಂಡಿರುವ ಯಜ್ಞದಲ್ಲಿ ಸೋಮಪಾನವನ್ನು ಮಾಡಲಿ. ಅವನು ವೃತ್ರಾಸುರನೆಂಬ ರಾಕ್ಷಸನನ್ನೂ ಸಂಹರಿಸಿದವನೂ ಶೂರನೂ ಆಗಿರುವನು. ಇಂಥ ದೇವೇಂದ್ರನು ಶತ್ರುಗಳನ್ನು ಪರಾಭವಗೊಳಿಸಿ ನಾಶಮಾಡುವವನಾಗಲಿ. ಅನಂತರ ನಮಗೆ ಎಲ್ಲಾ ದಿಕ್ಕುಗಳಿಂದಲೂ ಭಯವಾಗದಂತೆ ಅನುಗ್ರಹಮಾಡಲಿ–ಎಂದು ಕೇಳಲಾಗಿದೆ. ಅಭಯಂಕರನೆಂದೂ ಇಂದ್ರನನ್ನು ವೇದದಲ್ಲಿ ಸ್ತುತಿಸಿದೆ. ದೇವರಾಜನಾದ ಆತನು ನಮಗೆ ರಕ್ಷಕನಾಗಿದ್ದರೆ ಭಯವೆಲ್ಲ ನಿವಾರಣೆಯಾಗುವದು. ಈಗಿನ ಪರಿಸ್ಥಿತಿಯಲ್ಲಿ ಎಂಥೆಂಥ ದೊಡ್ಡ ಅಧಿಕಾರಿಗಳಿಗೂ ಮಂತ್ರಿಗಳಿಗೂ ರಾಷ್ಟ್ರಾಧ್ಯಕ್ಷರಿಗೂ ಭಯವು ಸುತ್ತಿಕೊಂಡಿರುವದು. ಅಂಥವರು ಲೌಕಿಕವಾಗಿ ಸಾಧ್ಯವಾಗಬಹುದಾದ ರಕ್ಷಣಾ–ಉಪಾಯಗಳನ್ನೆಲ್ಲ

ಬಳಸಿಕೊಂಡು ಕಾಲಹಾಕುತ್ತಿರುವರು. ಆದರೂ ದೇವೇಂದ್ರನ ದಯೆಯಿರುವವರೆಗೆ ಯಾವ ಅಪಾಯವೂ ಇರುವದಿಲ್ಲವೆಂತ ತಿಳಿಯಬೇಕು. ಶತ್ರುಗಳೆಂಬುವರು ಹೊರಗಿರುವಂತೆ ರೋಗರುಜಿನಾದಿಗಳ ರೂಪದಿಂದ ಒಳಗೂ ಇರುತ್ತಾರೆ. ಈಗಿನ ಖಾಯಿಲೆಗಳಂತೂ ವಿಚಿತ್ರವಾಗಿವೆ. ಯಾರಿಗೆ ಯಾವಾಗ ಏನು ಖಾಯಿಲೆಯು ಆವರಿಸಿಕೊಳ್ಳುವದೋ ಯಾರೂ ತಿಳಿಯರು. ಹೀಗೆ ಜನಸಾಮಾನ್ಯರಿಂದ ಹಿಡಿದು ಅತ್ಯಂತ ಹಿರಿಯರವರೆಗೂ ಎಲ್ಲರಿಗೂ ಶತ್ರುಭಯ, ರೋಗಭಯ, ಪ್ರಾಣಭಯ, ಸ್ಥಾನಚ್ಯುತಿಭಯ, ಕಳ್ಳಕಾಕರಭಯ, ಸರ್ಕಾರದ ಕಾನೂನುಗಳ ಉಲ್ಲಂಘನೆಯಭಯ, ಮಾನಭಯ, ವಿಷಜಂತುಗಳಭಯ, ವಿಷವಸ್ತುಗಳಭಯ, ಭೂತಪ್ರೇತಾದಿಗಳಭಯ, ಆಸ್ತಿಕರಾದವರಿಗೆ ಗ್ರಹಪೀಡಾಭಯ, ದೇವತಾಪಚಾರಭಯ–ಇತ್ಯಾದಿ ಭಯಗಳ ಕಾಟವಿದ್ದೇ ಇರುವದು. ಒಂದು ಭಯವನ್ನು ತಪ್ಪಿಸಿಕೊಳ್ಳುವದರೊಳಗಾಗಿ ಮತ್ತೊಂದು ಭಯವು ಮನಸ್ಸನ್ನು ಹಿಡಿದುಕೊಳ್ಳುವದು. ಆದ್ದರಿಂದ ಅಭಯಂಕರನಾದ ದೇವೇಂದ್ರನನ್ನು ಕುರಿತು ಪೂಜಾಯಜ್ಞಾದಿಗಳನ್ನು ಕೈಕೊಂಡು ಪ್ರಾರ್ಥನೆ ಮಾಡಿ ಸದಾಕಾಲವೂ ಆತನನ್ನು ನೆನೆಯುತ್ತಿರುವದೊಂದೇ ಭಯನಿವಾರಣೋಪಾಯವಾಗಿದೆ. ಇನ್ನು ದೇವೇಂದ್ರನೆಂಬವನಿಗೂ ರಾಕ್ಷಸಾದಿಗಳಿಂದ ಭಯವುಂಟೆಂದು ಪುರಾಣಗಳಲ್ಲಿ ಬರೆದಿದೆಯಲ್ಲವೆ? ಕೆಲವು ಸಲ ಋಷಿಗಳ ಶಾಪದಿಂದ ಅವನೂ ಸ್ಥಾನಭ್ರಷ್ಟನಾದನಲ್ಲವೆ? ಆದ್ದರಿಂದ ಸಂಸಾರಿಯಾದ ಅವನೂ ಭಯಮಧ್ಯಸ್ಥನೇ ಅಲ್ಲವೆ? ಅವನ ಪ್ರಾರ್ಥನೆ ಯಿಂದೇನು ಪ್ರಯೋಜನ? ಎಂದು ಕೇಳಬಹುದು. ನಿಜ. ಆದರೆ ಮನುಷ್ಯರಿಗಿರುವಷ್ಟು ಭಯಸನ್ನಿವೇಶಗಳು ಅವನಿಗೆ ಇರುವದಿಲ್ಲ, ಹೇಗೆಂದರೆ ದೇವತೆಯಾದ ಅವನಿಗೆ ಹಸಿವು, ಬಾಯಾರಿಕೆ, ರೋಗ, ಮುಪ್ಪು, ಅಪಮೃತ್ಯು–ಮುಂತಾದ ಭಯಗಳಿಲ್ಲ, ಅವನ ಪುಣ್ಯವು ಪೂರೈಸಿ ಮನ್ವಂತರ ಕಾಲವು ಮುಗಿಯುವವರೆಗೂ ಸ್ಥಾನಚ್ಯುತಿಯ ಭಯವಿಲ್ಲ. ಹೀಗೆ ಮನುಷ್ಯರಿಗಿಂತ ಕೋಟಿಪಾಲು ಅವನ ಪರಿಸ್ಥಿತಿಯು ಉತ್ತಮವಾಗಿರುವದು. ಅವನ ಪದವಿಗಿಂತಲೂ ಹೆಚ್ಚಿನ ಅಭಯಪದವಿಯು ದೊರಕಬೇಕಾದರೆ ಭಗವಂತನನ್ನೇ ನಾವು ಶರಣುಹೊಗಬೇಕು. ಪರಮಾತ್ಮನನ್ನರಿತವನು ಮಾತ್ರ ಶಾಶ್ವತವಾದ ಅಭಯಪ್ರತಿಷ್ಠೆ ಯನ್ನು ಹೊಂದುವನು. ಆಗ ಮುಖ್ಯಾರ್ಥದಲ್ಲಿ ಇಂದ್ರನೆಂದರೆ ಪರಬ್ರಹ್ಮವೆಂದೇ ಅರ್ಥವಾಗುವದು. ಅಭಯಂಕರನೆಂದರೂ ಆ ಭಗವಂತನೇ ಆಗಿರುವನು. ಈ ಮಂತ್ರವು ಅಂಥ ಭಗವಂತನ ಸ್ತುತಿಯೂ ಆಗಿದೆ–ಎಂದೂ ತಾತ್ಪರ್ಯಗ್ರಹಣ ಮಾಡಬಹುದು.

ಓಂ ॥ ಸುಮಿತ್ರಾ ನ ಆಪ ಓಷಧಯಃ ಸಂತು ದುರ್ಮಿತ್ರಾಸ್ತಸ್ಮೈ
ಭೂಯಾಸುರ್ಯೋಽಸ್ಮಾನ್ ದ್ವೇಷ್ಟಿ ಯಂ ಚ ವಯಂ ದ್ವಿಷ್ಮಃ॥

ಈ ಮಂತ್ರದಲ್ಲಿ ಆಪ್–ದೇವತೆಗಳನ್ನೂ ಓಷಧಿವನಸ್ಪತಿ ದೇವತೆಗಳನ್ನೂ ಕುರಿತು ಪ್ರಾರ್ಥಿಸಲಾಗಿದೆ. ಪೃಥಿವಿಯಲ್ಲಿ ಬೆಳೆಯುವ ಸಸ್ಯವರ್ಗವನ್ನೆಲ್ಲ ಓಷಧಿ ವನಸ್ಪತಿಗಳೆಂದು ಕರೆಯುವರು. ಜಲದೇವತೆಗಳಂತೂ ನದಿ, ಕೆರೆ, ಭಾವಿ ಮುಂತಾದ ರೂಪದಿಂದಲೂ ಪರ್ಜನ್ಯರೂಪದಿಂದಲೂ ಕಂಡುಬರುತ್ತಾರೆ. ಈ ಎರಡು ರೀತಿಯಾದ ದೇವತೆಗಳೂ ನಮಗೆ ಒಳ್ಳೆಯ ಸ್ನೇಹಿತರಾಗಲಿ, ಹಾಗೆಯೇ ಯಾರು ನಮ್ಮನ್ನು ದ್ವೇಷ ಮಾಡುತ್ತಾರೋ ನಾವು ಯಾರನ್ನು ದ್ವೇಷಮಾಡುವೆವೋ, ಅಂಥವರಿಗೆ ದುರ್ಮಿತ್ರ ರಾಗಲಿ, ಶತ್ರುಗಳಾಗಲಿ–ಎಂದಭಿಪ್ರಾಯ. ಮಿತ್ರರಾದರೆ ಸುಖವನ್ನುಂಟುಮಾಡುವರು. ಶತ್ರುಗಳಾದರೆ ದುಃಖವನ್ನುಂಟುಮಾಡುವರು. ಆದ್ದರಿಂದ ನಮ್ಮನ್ನು ದ್ವೇಷಿಸುವವರಿಗೆ ಈ ಉಭಯದೇವತೆಗಳೂ ಪ್ರತಿಕೂಲರಾಗಲಿ–ಎಂದರ್ಥ. ದೇವತೆಗಳು ಪ್ರತಿಕೂಲರಾದರೆ ಮನುಷ್ಯನ ಆಟವೇನೂ ನಡೆಯದು. ಉದಾಹರಣೆಗೆ ಒಬ್ಬ ಅಹಂಕಾರಿಯು ತಾನೆ ಹೆಚ್ಚಿನವನೆಂದೂ ತೋರಿಸಿಕೊಳ್ಳುವ ಸಲುವಾಗಿ ಒಂದು ದೊಡ್ಡ ಸಭೆಯನ್ನೇರ್ಪಡಿಸಿ ಜನರನ್ನು ಕೂಡಿಸಿ ಭಾಷಣವನ್ನು ಬಿಗಿಯಲಾರಂಭಿಸುವಷ್ಟರಲ್ಲಿ ದೊಡ್ಡಮಳೆಯು ಧಾರಕಾರವಾಗಿ ಬಂದು ಸಿಡಿಲು ಬಡಿದು ಜನರೆಲ್ಲ ಚೆದುರಿ, ಚಪ್ಪರವೆಲ್ಲ ಗಾಳಿಗೆ ಹಾರಿಹೋದಾಗ ಗಿಡಮರಗಳೂ ಉರುಳಿದಾಗ ಆತನೇನು ಮಾಡಿಯಾನು? ಹೀಗೆ ದೇವತೆಗಳ ಕೋಪಕ್ಕೆ ಪಾತ್ರರಾದವರಿಗೆ ತಕ್ಕ ಶಾಸ್ತಿಯಾಗಿಬಿಡುವದು. ಅದರಲ್ಲಿಯೂ ಸಜ್ಜನರನ್ನು ಪೀಡಿಸಿದವರಿಗೆ ದೇವತೆಗಳೇ ಶಿಕ್ಷೆಯನ್ನು ವಿಧಿಸಿಬಿಡುವರು. ಏಕೆಂದರೆ ಸಜ್ಜನರಿಗೆ ಯಾವಾಗಲೂ ಭಗವಂತನ ಬೆಂಬಲವಿರುವದು. ಅವರನ್ನು ದ್ವೇಷಿಸುವದೂ ಭಗವಂತನನ್ನು ದ್ವೇಷಿಸುವದೂ ಒಂದೇ ರೀತಿಯಾದ ದುಷ್ಫಲ ವನ್ನುಂಟುಮಾಡುವದು. ಪಾಂಡವರನ್ನು ಹಿಂಸಿಸಲು ಹತ್ತಾರು ಬಾರಿ ಪ್ರಯತ್ನಪಟ್ಟು ತಾನೇ ಕಷ್ಟ ಪರಂಪರೆಗಳಿಗೆ ಸಿಕ್ಕಿಹಾಕಿಕೊಂಡ ದುರ್ಯೋಧನನ ಕಥೆಯನ್ನು ಕೇಳಿದ್ದೀರಷ್ಟೆ ! ಇನ್ನು ಅಂಥ ಮಹಾತ್ಮರು ಉಸ್ಸೆಂದರೆ ಸಾಕು–ಶತ್ರುವಿಗೆ ಇನ್ನೂ ಕೆಡುಕಾಗುವದು. ಹೀಗೆ ಈ ಮಂತ್ರದಲ್ಲಿ ಶತ್ರುನಿಗ್ರಹಕ್ಕಾಗಿ ಸಜ್ಜನರು ದೇವತೆಗಳನ್ನೇ ಪ್ರಾರ್ಥಿಸಿಕೊಳ್ಳುತ್ತಾರೆಂಬ ಭಾವವು ಅಡಗಿದೆ.

ಓಂ ॥ ಆಪೋ ಹಿ ಷ್ಠಾ ಮಯೋ ಭುವಸ್ತಾನ ಊರ್ಜೇ ದಧಾತನ।
ಮಹೇ ರಣಾಯ ಚಕ್ಷಸೇ । ಯೋ ವಶ್ಶಿವತಮೋ ರಸಸ್ತಸ್ಯ
ಭಾಜಯತೇಹ ನಃ । ಉಶತೀರಿವ ಮಾತರಃ । ತಸ್ಮಾ
ಅರಂಗಮಾಮವೋ ಯಸ್ಯ ಕ್ಷಯಾಯ ಜಿನ್ವಥ ।
ಆಪೋ ಜನಯಥಾ ಚ ನಃ ॥

ಈ ಮಂತ್ರವು ಜಲದೇವತೆಗಳನ್ನು ಕುರಿತು ಪ್ರಾರ್ಥಿಸತಕ್ಕದ್ದಾಗಿದೆ. ಇದನ್ನು ಋಗ್ವೇದಿಗಳೂ ಪಠಿಸುತ್ತಾರೆ. ಕರ್ಮಠರು ಈ ಮಂತ್ರದಿಂದ ಸಂಧ್ಯಾಕರ್ಮದಲ್ಲಿ ಪೂಜೆಯಲ್ಲಿ ಅಭಿಷೇಕಕಾಲಕ್ಕೂ ಪಠಿಸುತ್ತಾರೆ. ಇದು ಹೆಚ್ಚು ಪ್ರಸಿದ್ಧವಾಗಿದೆ. 'ಎಲೈ ಆಪ್–ದೇವತೆಗಳಿರಾ, ನೀವು ನಮಗೆ ಸ್ನಾನಪಾನಾದಿಗಳಿಗೆ ಒದಗುವವರಾಗಿ ನಮಗೆ ಸುಖವನ್ನುಂಟುಮಾಡಿ ಪೋಷಿಸಿರಿ. ಏತಕ್ಕೆಂದರೆ ಮಹತ್ತಾದ ಹಾಗೂ ರಮಣೀಯವಾದ ಪರಬ್ರಹ್ಮದ ದರ್ಶನಕ್ಕೆ ನಾವು ಸಿದ್ಧರಾಗುವದಕ್ಕಾಗಿ ಕಾಪಾಡಿರಿ' ಎಂದು ಮೊದಲನೆಯ ಎರಡು ವಾಕ್ಯಗಳ ಅಭಿಪ್ರಾಯ. ನಮ್ಮ ಬದುಕನ್ನು ಮಂಗಳಮಯವಾಗಿಯೂ ದೀರ್ಘವಾಗಿಯೂ ಮಾಡುವಂತೆ ಕೇಳಿಕೊಳ್ಳುವ ಪ್ರಾರ್ಥನೆಗಳು ವೇದದಲ್ಲಿವೆ. ಆದರೆ ಈ ಜೀವನದ ಮುಖ್ಯೋದ್ದೇಶವೇನೆಂದರೆ ಭಗವಂತನನ್ನು ಜ್ಞಾನದಿಂದ ಕಂಡುಕೊಂಡು ಕೃತಾರ್ಥರಾಗುವದು. ಅಲ್ಲಿಯವರೆಗೆ ಭಗವದರ್ಥವಾಗಿಯೇ ಕರ್ಮಗಳನ್ನು ಮಾಡುತ್ತಿರುವದು. ಅಂಥ ಕೋರಿಕೆಯನ್ನೇ ಇಲ್ಲಿ ಪ್ರಸ್ತಾಪಿಸಲಾಗಿದೆ. ಮುಂದುವರೆದು ಹೀಗೆ ಕೇಳಲಾಗಿದೆ. ''ಎಲೈ ದೇವತೆಗಳಿರಾ, ನಿಮ್ಮಲ್ಲಿ ಯಾವ ಮಂಗಳಕರವಾದ ರಸ (ರುಚಿ) ವಿದೆಯೋ ಅದಕ್ಕೆ ಈ ಭೂಮಿಯಲ್ಲಿರುವ ನಾವು ಪಾತ್ರರಾಗುವಂತೆಮಾಡಿರಿ. ತಾಯಂದಿರು ತಮ್ಮ ಮಕ್ಕಳನ್ನು ಪ್ರೀತಿಸಿ ಬೆಲ್ಲ–ಸಕ್ಕರೆಗಳನ್ನು ಕೊಟ್ಟು ಸಲಹುವಂತೆ ನಮ್ಮನ್ನು ಸಲಹಿರಿ. ನಿಮ್ಮಲ್ಲಿರುವ ರಸವು ನಮ್ಮನ್ನು ಸೇರುವಂತೆಯೂ ಮಾಡಿರಿ. ನಾವು ನಿಮಗೆ ಶರಣಾಗತರಾಗಿದ್ದೇವೆ. ನಮ್ಮ ಪಾಪಸಮೂಹಗಳನ್ನೆಲ್ಲ ತೊಳೆದು ಪ್ರೀತಿಯಿಂದ ನೋಡುವವರಾಗಿರಿ. ಮತ್ತು ನಮಗೆ ಪುತ್ರರೇ ಮುಂತಾದವರನ್ನು ಪಡೆಯುವಂತೆ ಸಾಮರ್ಥ್ಯವನ್ನು ನೀಡಿರಿ''–ಎಂದು ಉಳಿದ ಮಂತ್ರಾರ್ಥವು. ಭಗವದ್ಗೀತೆಯಲ್ಲಿ ಪರಮಾತ್ಮನು 'ನೀರಿನಲ್ಲಿರುವ ರಸವು ನಾನು' ಎಂದು ತಿಳಿಸಿರುತ್ತಾನೆ. ರಸವೆಂಬುದು ಜಲತತ್ತ್ವದ ಅಸಾಧಾರಣ ಗುಣವು. ನೀರಿನಿಂದಲೇ ನಮ್ಮ ಜೀವನವು ಸಾಗುತ್ತಿರುವದು. ಪ್ರಾಣನ ವ್ಯಾಪಾರಕ್ಕೆ ನೀರೇ ಆಧಾರವು. ಯಾವನಿಗೆ ನೀರು ಕೂಡ ಒಳಹೋಗುವದಿಲ್ಲವೋ ಅವನು ಬದುಕಲಾರನೆಂದೇ ತೀರ್ಮಾನವು. ಆದ್ದರಿಂದ ರಸವೆಂಬ ಗುಣವಿಶಿಷ್ಟವಾದ ನೀರು ಪ್ರಾಣಿಗಳ ಜೀವನಾಧಾರವಾಗಿದೆ. ಇದನ್ನು ಜಲದೇವತೆಗಳಾಗಿ ಋಷಿಗಳು ಕಂಡುಕೊಂಡಿದ್ದಾರೆ. ಜಲ. ಆಪ–ಎಂಬಿವು ಪರ್ಯಾಯ ಶಬ್ದಗಳು. ಆಪ್ ಶಬ್ದವು ಸಂಸ್ಕೃತವ್ಯಾಕರಣನಿಯಮದಂತೆ ಸ್ತ್ರೀಲಿಂಗವೂ ನಿತ್ಯಬಹುವಚನಾಂತವೂ ಆಗಿದೆ. ಅದರ ಸಂಬೋಧನಾವಿಭಕ್ತಿಯ ರೂಪವೇ '**ಆಪಃ**' ಎಂಬಿದು. ಹೀಗೆ ರಸಮಯರಾದ ಅಬ್ದೇವತೆಗಳು ಅನುಗ್ರಹಿಸಿದಾಗ ಮನುಷ್ಯನು ಶಕ್ತಿಶಾಲಿಯೂ ಸತ್ತ್ವಸಂಪನ್ನನೂ ಆಗುವನು. ಶಬ್ದಸ್ಪರ್ಶರೂಪರಸಗಂಧಗಳೇ ಅಧ್ಯಾತ್ಮವಾಗಿ ಮಾನವನಲ್ಲಿ ಇಂದ್ರಿಯಗಳಾಗಿರುವವು. ಅವುಗಳಲ್ಲಿ **ಆಪ್** ಎಂಬಿದೇ

ರಸನೇಂದ್ರಿಯ ಅಥವಾ ನಾಲಗೆಯೆನಿಸಿರುವದು. ಮನುಷ್ಯನು ರುಚಿಯನ್ನು ನಾಲಗೆಯಿಂದಲೇ ಗ್ರಹಿಸುತ್ತಾನೆ. ಹೀಗೆ ಅಧಿದೈವವಾಗಿ ಅಬ್‌ದೇವತೆಗಳಾಗಿಯೂ ಅಧಿಭೂತವಾಗಿ ಜಲರೂಪದಲ್ಲಿಯೂ ಅಧ್ಯಾತ್ಮವಾಗಿ ನಾಲಗೆಯಾಗಿಯೂ ಒಂದೇ ತತ್ತ್ವವು ತೋರಿಕೊಂಡಿದೆ. ಅಧಿದೇವತವಾದ ಜಲದೇವತೆಯನ್ನೇ ಇಲ್ಲಿ ಸ್ತುತಿಮಾಡುತ್ತಾ ಆ ದೇವತೆಗಳು ತಮ್ಮ ಸಾರಭೂತವಾದ ರಸವನ್ನು ನಮಗೆ ದಯಪಾಲಿಸಲಿ; ಅದರಿಂದ ನಾವು ಹೃಷ್ಟರಾಗಿ ಪುಷ್ಟರಾಗಿ ಬಾಳೋಣ; ಆ ಬಾಳನ್ನೆಲ್ಲ ಮತ್ತೆ ದೇವತೆಗಳ ಆರಾಧನೆಗೇ ವಿನಿಯೋಗಿಸೋಣ. ಅನಂತರ ದೇವತೆಗಳು ಶ್ರದ್ಧಾದಿಗುಣಗಳಿಂದ ನಮ್ಮನ್ನು ಅನುಗ್ರಹಿಸಿದಾಗ ನಾವು ನಮ್ಮ ಆತ್ಮನಾದ ಪರಬ್ರಹ್ಮವನ್ನೇ ಅರಿತು ಮುಕ್ತರಾಗೋಣ. ಅವನೇ ಜಲದೇವತೆಗಳಲ್ಲಿಯೂ ರಸತತ್ತ್ವವಾಗಿ ತನ್ನ ಮಹಿಮೆಯಿಂದ ಪ್ರಕಟವಾಗಿರುವನೆಂಬುದನ್ನು ತಿಳಿಯೋಣ–ಎಂದು ಋಷಿಗಳು ಪ್ರಾರ್ಥಿಸುತ್ತಾರೆ. ಪಾಂಚಭೌತಿಕವಾಗಿರುವ ನಮ್ಮ ದೇಹದಲ್ಲಿ ರಕ್ತವೂ, ಮೂತ್ರವೂ, ತೇಜಸ್ಸೂ ಜಲರೂಪವೇ ಆಗಿವೆ. ಅವುಗಳ ಪರಿಶುದ್ಧಿ ಹಾಗೂ ಸಂಚಾರಗಳು ಉತ್ಸರ್ಗಗಳು ನಮ್ಮ ಆರೋಗ್ಯಮೂಲವಾಗಿವೆ. ಹೀಗೆ ಆರೋಗ್ಯವು ಜಲದೇವತೆಗಳ ಕೃಪೆಯೇ ಆಗಿದೆ. ಆದ್ದರಿಂದಲೇ ಜಲವನ್ನು ಔಷಧವೆಂದೇ ವೇದಗಳಲ್ಲಿ ಹೊಗಳಿದೆ. ಜಲದೇವತೆಯ ಅನುಗ್ರಹವನ್ನು ಸಂಪಾದಿಸಿಕೊಂಡಲ್ಲಿ ಎಲ್ಲಾ ರೋಗಗಳನ್ನೂ ಜಲಚಿಕಿತ್ಸೆಯಿಂದಲೇ ಗುಣಪಡಿಸಬಹುದು. ಹೀಗೆ ಜಲದೇವತೆಯು ಮಾನವನ ಜೀವನಾಧಾರವೂ ರೋಗಪರಿಹಾರಕವೂ ಆಗಿದೆ. ಇಂಥ ದೇವತೆಯ ಸ್ತುತಿಯೇ ಈ ಮಂತ್ರವು. ಬೇರೊಂದು ಮಂತ್ರದಲ್ಲಿ ನೀರನ್ನು ಎಲ್ಲಾ ದೇವತೆಗಳ ಸ್ವರೂಪವೆಂದೂ ಹೊಗಳಿದೆ. ಆದ್ದರಿಂದಲೇ ಯಾವ ದೇವತೆಯನ್ನು ಆಹ್ವಾನಿಸಬೇಕಾದರೂ ಒಂದು ಕಲಶವನ್ನಿಟ್ಟು ಅದರಲ್ಲಿ ನೀರನ್ನು ತುಂಬಿ ಆವಾಹಿಸುವರು. ಎಲ್ಲಾ ಉಪಚಾರಗಳಿಗೂ ನೀರನ್ನು ಬಳಸುವರು. ಹೀಗೆ ಅಬ್‌ದೇವತೆಗಳು ಸರ್ವೋಪಯೊಗಿಗಳಾಗಿದ್ದಾರೆ.

## ಅಘಮರ್ಷಣಸೂಕ್ತ

ಈಗ ಅಘಮರ್ಷಣಸೂಕ್ತವನ್ನು ವಿಚಾರಮಾಡೋಣ. ಉಪನಿಷತ್ತಿನ ಈ ಮಂತ್ರಭಾಗಕ್ಕೆ ಕೊಟ್ಟಿರುವ ಹೆಸರು ಅನ್ವರ್ಥವಾಗಿದೆ. ಅಘವೆಂದರೆ ಪಾಪವು. ಅದನ್ನು ಹೋಗಲಾಡಿಸುವದೇ ಮರ್ಷಣವು. ಪ್ರತಿಯೊಬ್ಬ ಮನುಷ್ಯನೂ ಪಾಪಕರ್ಮದ ಅಂಶವುಳ್ಳವನಾಗಿಯೇ ಇರುತ್ತಾನೆ. ಪುಣ್ಯಪಾಪಗಳ ಸಮತೂಕವಿದ್ದಾಗಲೇ ಮನುಷ್ಯಜನ್ಮವು ಜೀವನಿಗೆ ಬಂದೊದಗುತ್ತದೆ. ಇದರ ಜೊತೆಗೆ ಬದುಕಿರುವವರೆಗೂ

ಮನುಷ್ಯನು ಏನಾದರೊಂದು ಕರ್ಮವನ್ನು ಮಾಡಲೇಬೇಕಾಗಿರುವದರಿಂದ ಪುಣ್ಯಕರ್ಮಗಳನ್ನೇ ಮಾಡುತ್ತಿದ್ದರೂ ಅದರಲ್ಲಿಯೂ ಲೋಪದೋಷಗಳು ಸಂಭವಿಸಿ ಪಾಪಸಂಘಟನೆಯಾಗುವದು. ಕೆಲವು ವೇಳೆ ನಾವು ತಿಳಿಯದಂತೆಯೇ ಪಾಪವನ್ನು ಮಾಡುವದೂ ಉಂಟು. ಹೀಗೆ ಸಂಭವಿಸುವ ಪಾಪಗಳನ್ನು ಆಯಾ ದಿನವೇ ತೊಳೆದು ಕೊಂಡು ಶುದ್ಧರಾಗುವಕದಕ್ಕಾಗಿ ಋಷಿಗಳು ಬೆಳಗಿನ ಸ್ನಾನ–ಅಗ್ನಿಹೋತ್ರಾದಿಗಳನ್ನು ಏರ್ಪಡಿಸಿರುತ್ತಾರೆ. ಲೌಕಿಕವಾಗಿ ನೋಡಿದರೂ ನಾವು ಶರೀರದ ಕಶ್ಮಲಗಳನ್ನೂ ಪರಿಸರದ ಕಶ್ಮಲಗಳನ್ನೂ ತೊಳೆಯಲು ನೀರನ್ನು ಬಳಸುತ್ತೇವೆ. ಆ ನೀರನ್ನೇ ದೇವಾತಾರೂಪದಿಂದ ಕಂಡಾಗ ವರುಣನೆಂದೂ ಅಘಮರ್ಷಣನೆಂದೂ ಸ್ತುತಿಸಲಾಗುತ್ತದೆ. ಅಂತಃಕರಣದ ಕಶ್ಮಲಗಳನ್ನು ಕೇವಲ ನೀರಿನಿಂದ ತೊಳೆಯಲಾಗುವದಿಲ್ಲ. ಅದಕ್ಕೆ ದೇವತಾಭಾವನೆಯೇ ಬೇಕಾಗುವದು. ನೀರನ್ನೇ ದೇವತಾರೂಪದಿಂದ ಕಂಡುಕೊಳ್ಳುವ ಕ್ರಮವನ್ನು ವೇದಶಾಸ್ತ್ರಗಳಲ್ಲಿ ತಿಳಿಸಿರುತ್ತದೆ. ಅದರಂತೆ ಜಲದೇವತೆಯನ್ನು ಈಗ ಸ್ನಾನಸಮಯಕ್ಕೆ ಸ್ತುತಿಸುವ ಮಂತ್ರಭಾಗವೇ ಈ ಸೂಕ್ತವು. ಇದರ ಅಭಿಪ್ರಾಯವನ್ನು ಮನನಮಾಡೋಣ.

**ಓಂ ॥ ಹಿರಣ್ಯಶೃಂಗಂ ವರುಣಂ ಪ್ರಪದ್ಯೇ ತೀರ್ಥಂ ಮೇ ದೇಹಿ ಯಾಚಿತಃ । ಯನ್ಮಯಾ ಭುಕ್ತಮಸಾಧೂನಾಂ ಪಾಪೇಭ್ಯಶ್ಚ ಪ್ರತಿಗ್ರಹಃ । ಯನ್ಮೇ ಮನಸಾ ವಾಚಾ ಕರ್ಮಣಾ ವಾ ದುಷ್ಕೃತಂ ಕೃತಮ್ । ತನ್ನ ಇಂದ್ರೋ ವರುಣೋ ಬೃಹಸ್ಪತಿಃ ಸವಿತಾಚ ಪುನಂತು ಪುನಃ ಪುನಃ ॥**

''ವರುಣನೆಂಬ ದೇವತೆಯನ್ನು ನಾನು ಬಳಿ ಸಾರುತ್ತೇನೆ. ಆತನು ಚಿನ್ನದ ಶಿಖರದಂತೆ ವಿರಾಜಮಾನವಾದ ಕಿರೀಟವನ್ನು ಧರಿಸಿರುವನು. ಎಲೈ ವರುಣನೆ; ಬೇಡುತ್ತಿರುವ ನನಗೆ ತೀರ್ಥವನ್ನು ನೀಡುವವನಾಗು. ಇನ್ನು ನಾನು ಅಯೋಗ್ಯರ ಮನೆಯಲ್ಲಿ ಊಟಮಾಡಿದ್ದರ ದೋಷವನ್ನೂ ಪಾಪಿಗಳಿಂದ ದಾನವನ್ನು ಸ್ವೀಕರಿಸಿದ್ದರ ದೋಷವನ್ನೂ ಇನ್ನೂ ನಾನು ಮನಸ್ಸಿನಿಂದ, ಮಾತಿನಿಂದ, ಶರೀರದಿಂದ ಮಾಡಿರ ಬಹುದಾದ ಪಾಪಕರ್ಮಗಳನ್ನೂ ಇಂದ್ರ, ವರುಣ, ಬೃಹಸ್ಪತಿ, ಸೂರ್ಯನೇ–ಮುಂತಾದ ದೇವತೆಗಳು ಕಳೆದು ನನ್ನನ್ನು ಪರಿಶುದ್ಧನನ್ನಾಗಿ ಮಾಡಲಿ''–ಎಂದು ಅಭಿಪ್ರಾಯ.

ಇಲ್ಲಿ ತೀರ್ಥವೆಂಬ ಶಬ್ದವಿರುವದನ್ನು ಗಮನಿಸಬೇಕು. ಪೃಥಿವಿಯಲ್ಲಿರುವ ಜಲವೆಲ್ಲವೂ ತೀರ್ಥವೇ–ಪವಿತ್ರವೇ ಆಗಿರುವದು. ಆದರೆ ಜನರು ಅದನ್ನು ಕೂಡ ಅಪವಿತ್ರವಾಗಿ ಮಾಡುತ್ತಿರುವರು. ಈಗಿನ ನಾಗರಿಕತೆಯ ಹೆಸರಿನ ಜೀವನದಲ್ಲಿ

ಕೈಗಾರಿಕೆ—ಮುಂತಾದ ನಿಮಿತ್ತವಾಗಿ ಎಂಥೆಂಥ ಮಹಾನದಿಗಳು ಕೂಡ ಮಲಿನವಾಗಿಬಿಟ್ಟಿವೆ. ಶುದ್ಧವಾಗಿ ಕುಡಿಯುವ ನೀರು ಸಹ ಕೆಲವು ಕಡೆಗಳಲ್ಲಿ ದುರ್ಲಭವಾಗಿದೆ, ಇದೆಲ್ಲ ಮಾನವನ ಪಾಪದ ಫಲವೇ—ಎಂದು ಬೇರೆಯಾಗಿ ಹೇಳಬೇಕಾಗಿಲ್ಲ. ಹೀಗಿರುವಲ್ಲಿ ಸ್ನಾನಮಾಡುವಾಗ ನಾವು ಸಾಮಾನ್ಯಜಲವನ್ನು ಮಂತ್ರದಿಂದ ಮೊದಲು 'ತೀರ್ಥ'ವಾಗಿ ಮಾಡಿಕೊಳ್ಳಬೇಕು. ಅನಂತರ ಅದರಲ್ಲಿ ಸ್ನಾನಮಾಡಿದರೆ 'ತೀರ್ಥಸ್ನಾನ' ಮಾಡಿದಂತಾಗಿ ಪವಿತ್ರರಾಗುವೆವು. ಜಲವನ್ನು ತೀರ್ಥವಾಗಿ ಮಾರ್ಪಡಿಸುವವನು ವರುಣನು. ಆ ದೇವತೆಯನ್ನೇ ಕುರಿತು ಇಲ್ಲಿ ತೀರ್ಥವನ್ನು ಕೊಡು—ಎಂದು ಕೇಳಲಾಗಿದೆ. ನಾವು ತೀರ್ಥಯಾತ್ರೆಗಳಿಗಾಗಿ ಪ್ರವಾಸಹೋಗುವದು ಎಲ್ಲರಿಗೂ ತಿಳಿದಿದೆ. ಈಗಿನ ಕಾಲಕ್ಕೆ ತೀರ್ಥಕ್ಷೇತ್ರಗಳೆಲ್ಲ ವ್ಯಾಪಾರಕೇಂದ್ರಗಳಾಗಿದ್ದು , ದಟ್ಟವಾದ ಜನಸಂದಣಿಯ ನಿಮಿತ್ತ ದಿನದಿನವೂ ಮಲಿನವಾಗುತ್ತಿವೆ. ಆದರೆ ಹಿಂದಿನ ಕಾಲದಲ್ಲಿ ಕೇವಲ ಕಾಲುನಡಿಗೆಯಿಂದಲೇ ಯಾತ್ರೆಯನ್ನು ಕೈಗೊಳ್ಳುತ್ತಿದ್ದಾಗ ಕ್ಷೇತ್ರಗಳು ನಿಜವಾಗಿಯೂ ತೀರ್ಥಗಳಾಗಿದ್ದವು—ಎಂದರೆ ಪವಿತ್ರವೇ ಆಗಿದ್ದವು. ಈಗಲೂ ನಾವು—ಹೊರಗಿನ ಸನ್ನಿವೇಶವು ಏನೇ ಇರಲಿ—ಮಂತ್ರಪೂತವಾದ ಜಲವನ್ನು ಎಲ್ಲಿ ಬೇಕಾದರೂ ತೀರ್ಥವಾಗಿ ಕಂಡುಕೊಳ್ಳಬಹುದು. ಇದೇ ಈ ಮಂತ್ರದ ಪ್ರಯೋಜನವು. ಆದ್ದರಿಂದ ನಮಗೆ ದೊರಕುವ ಜಲವನ್ನು ವರುಣನನ್ನು ಪ್ರಾರ್ಥಿಸಿ ತೀರ್ಥವಾಗಿ ಮಾರ್ಪಡಿಸಿಕೊಂಡು ಸ್ನಾನಮಾಡಬೇಕು. ಇನ್ನು ಅನ್ನದೋಷಪರಿಹಾರಕ್ಕಾಗಿಯೂ ವರುಣನನ್ನು ಕೇಳಿಕೊಳ್ಳಲಾಗಿದೆ. ಅನ್ನದ ಸಾರಭೂತವಾದ ಭಾಗವೇ ನಮ್ಮೊಳಗೆ ಮನಸ್ಸಾಗಿರುವದು. ನಾವು ಎಂಥ ಅನ್ನವನ್ನು ತಿನ್ನುವೆವೋ—ಅಂಥ ಮನಸ್ಸು ಮೊಳೆಯುವದು. ಉದಾಹರಣೆಗೆ ಒಬ್ಬ ಕಳ್ಳನ ಮನೆಯ ಅನ್ನವನ್ನು ತಿಂದರೆ ನಮಗೂ ಕಳ್ಳತನದ ಬುದ್ಧಿಯೇ ಬರುವುದು, ಜನರಿಗೆ ಪಾಪದ್ರವ್ಯವೇ ಸಂಪಾದನೆಯಾಗಿರುವದರಿಂದ ಪವಿತ್ರವಾದ ಅನ್ನವು ದುರ್ಲಭವೇ ಸರಿ. ಆದರೂ ನಾವು ಎಲ್ಲಿ ಊಟಮಾಡಿದರೂ ಎಚ್ಚರಿಕೆಯಿಂದ ಅದನ್ನು ಮಂತ್ರದಿಂದ ಪರಿಶುದ್ಧಿಮಾಡಿ ಕೊಂಡು ಸೇವಿಸಬೇಕು. ಅನಂತರವೂ ವರುಣನನ್ನು ಕುರಿತು ''ಎಲೈ ವರುಣನೆ, ನಾನು ಪಾಪಾನ್ನವನ್ನು ತಿಂದದ್ದರಿಂದಲೂ ಪಾಪಪ್ರತಿಗ್ರಹವನ್ನು ಮಾಡಿದ್ದರಿಂದಲೂ ಉಂಟಾಗಿರುವ ದೋಷವನ್ನು ನೀನು ಕಳೆಯುವವನಾಗು'' ಎಂದು ಹೇಳಿಕೊಳ್ಳಬೇಕು. ಪ್ರತಿಗ್ರಹವೆಂದರೆ ದಾನವನ್ನು ಸ್ವೀಕರಿಸುವದು. ದಾನವನ್ನು ಕೊಡುವವನು ತನ್ನ ಪಾಪವನ್ನು ಕಳೆದುಕೊಳ್ಳುವದಕ್ಕಾಗಿಯೇ ಕೊಡುತ್ತಾನೆ. ತೆಗೆದುಕೊಳ್ಳುವವನು ಅದನ್ನು ಹೊತ್ತುಕೊಳ್ಳುತ್ತಾನೆ. ಆದ್ದರಿಂದ ದಾನವನ್ನು ತೆಗೆದುಕೊಳ್ಳುವದು ಶ್ರೇಯಸ್ಕರವೇನಲ್ಲ. ಆದರೆ ಯಾರು ತೆಗೆದುಕೊಳ್ಳದಿದ್ದರೆ ದಾನವು ನಡೆಯಲಾರದಾದ್ದರಿಂದ

ಅವಶ್ಯಕತೆಯಿರುವವನು ತೆಗೆದುಕೊಳ್ಳಬಹುದೆಂದೂ ಹಾಗೆ ತೆಗೆದುಕೊಂಡಾಗ ಪ್ರತಿಗ್ರಹದೋಷಪರಿಹಾರಾರ್ಥವಾಗಿ ಜಪಾದಿಗಳನ್ನು ನಡೆಯಿಸಿ ಸಮಯವು ಬಂದಾಗ ತಾನೂ ದಾನಮಾಡಬೇಕೆಂದೂ ಶಾಸ್ತ್ರದಲ್ಲಿ ತಿಳಿಸಿರುತ್ತದೆ. ಮತ್ತು ವರುಣನನ್ನು ಕುರಿತು ಪ್ರತಿಗ್ರಹದೋಷವನ್ನು ಪರಿಹರಿಸುವಂತೆಯೂ ಪ್ರಾರ್ಥಿಸಿಕೊಳ್ಳಬೇಕು.

ಈಗ ತ್ರಿಕರಣಗಳಿಂದಲೇ ಮಾಡಿರಬಹುದಾದ ಪಾಪಗಳನ್ನು ಕಳೆಯುವಂತೆ ಕೆಲವು ದೇವತೆಗಳನ್ನು ಕೇಳಿಕೊಳ್ಳಲಾಗಿದೆ. ವರುಣನೊಡನೆ, ಇಂದ್ರ, ಬೃಹಸ್ಪತಿ, ಸವಿತಾ–ಎಂಬ ದೇವತೆಗಳನ್ನೂ ಬೇಡಿಕೊಳ್ಳಲಾಗಿದೆ. ಇಂದ್ರನು ದೇವರಾಜನು. ಬೃಹಸ್ಪತಿಯು ದೇವಪುರೋಹಿತನು. ಸೂರ್ಯನು ದೇವತೆಗಳಲ್ಲೆಲ್ಲ ಪ್ರಕಾಶವಂತನು. ಇವರುಗಳು ಒಬ್ಬೊಬ್ಬರೂ ಪಾಪಪರಿಹಾರ ಮಾಡುವ ಸಾಮರ್ಥ್ಯವುಳ್ಳವರಾಗಿರುತ್ತಾರೆ. ಇವರುಗಳು ಅಧ್ಯಾತ್ಮವಾಗಿ ಬಲ, ವಾಕ್ಕು, ದೃಷ್ಟಿ–ರೂಪಗಳಿಂದ ನಮ್ಮ ಶರೀರದಲ್ಲಿಯೇ ಇದ್ದಾರೆ. ಆದ್ದರಿಂದ ಈ ದೇವತೆಗಳನ್ನು ನೆನೆದಾಗಲೆಲ್ಲ ನಮ್ಮ ಶರೀರ–ವಾಕ್–ಮನಸ್ಸುಗಳು ಶುದ್ಧಿಯಾಗುವವು. ನಾವು ಮಾಡಿರಬಹುದಾದ ಪಾಪಗಳೂ ಅವರ ಕೃಪೆಯಿಂದ ನಾಶವಾಗುವವು. ಹೀಗೆ ವರುಣನೊಡನೆ ಉಳಿದ ದೇವತೆಗಳನ್ನೂ ಕೂಡಿಸಿ ಇಲ್ಲಿ ಪಾಪಪರಿಹಾರಕ್ಕಾಗಿ ಪ್ರಾರ್ಥಿಸಲಾಗಿದೆ.

**ಓಂ॥ ನಮೋಽಗ್ನಯೇಽಪ್ಸುಮತೇ ನಮೋ ಇಂದ್ರಾಯ ನಮೋ**
**ವರುಣಾಯ ನಮೋ ವಾರುಣ್ಯೈ ನಮೋಽದ್ಭ್ಯಃ। ಯದಪಾಂ**
**ಕ್ರೂರಂ ಯದಮೇಧ್ಯಂ ಯದಶಾಂತಂ ತದಪಗಚ್ಛತಾತ್।**
**ಅತ್ಯಾಶನಾದತೀಪಾನಾತ್ ಯಚ್ಚ ಉಗ್ರಾತ್ ಪ್ರತಿಗ್ರಹಾತ್।**
**ತನ್ನೋ ವರುಣೋ ರಾಜಾ ಪಾಣಿನಾ ಹ್ಯವಮರ್ಶತು॥**

ಈ ಮಂತ್ರದಲ್ಲಿ ಜಲಮಧ್ಯದಲ್ಲಿ ಅಡಗಿರುವವನಾದ ಅಗ್ನಿಗೆ ನಮಸ್ಕಾರ ಎಂದು ಮೊದಲು ಪ್ರಾರ್ಥಿಸಿದೆ. ಸಮುದ್ರದಲ್ಲಿ ಬಡಬಾಗ್ನಿಯೆಂಬ ತೇಜಸ್ಸಿದೆ–ಎಂದು ಪುರಾಣಗಳಲ್ಲಿದೆ. ನೀರಿನಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವದರಿಂದ ಅಗ್ನಿಯು ಜಲಾಂತರ್ಗತನಾಗಿರುವನೆಂಬುದು ಒಪ್ಪತಕ್ಕದ್ದಾಗಿದೆ. ಇಂಥ ಅಗ್ನಿಗೂ ಇಂದ್ರ, ವರುಣ, ವರುಣನ ಪತ್ನಿ, ಆಪ್ ದೇವತೆಗಳು–ಎಲ್ಲರಿಗೂ ವಂದನೆಗಳು–ಎಂದು ತಿಳಿಸಿದೆ. ಅನಂತರ ಸ್ನಾನಮಾಡುವ ಸಮಯಕ್ಕೆ ಕೆರೆ, ನದಿ, ಸಮುದ್ರ–ಮುಂತಾದ ಯಾವದೇ ಜಲಪ್ರದೇಶದಲ್ಲಿ ನಿಂತು ಪ್ರಾರ್ಥಿಸುವ ಮಂತ್ರವು ಮನನೀಯವಾಗಿದೆ. ಮನೆಯಿಂದ ಹೊರಗಡೆ ನದೀ–ಮುಂತಾದ ಸ್ಥಳದಲ್ಲಿ ಮಾಡುವ ಸ್ನಾನವನ್ನು 'ಅವಗಾಹನಸ್ನಾನ' ವೆನ್ನುವರು. ಏಕೆಂದರೆ ಅಂಥ ಜಾಗಗಳಲ್ಲಿ ಶರೀರವನ್ನು ಸಂಪೂರ್ಣವಾಗಿ ನೀರಿನಲ್ಲಿ

ಮುಳುಗಿಸಿ ಸ್ನಾನಮಾಡಬಹುದು. ಮನೆಯಲ್ಲಾದರೆ ಪಾತ್ರೆಯಿಂದ ನೀರನ್ನು ತುಂಬಿ ಮೈಗೆ ಹಾಕಿಕೊಳ್ಳುವದರಿಂದ ಅವಗಾಹನವಾಗುವದಿಲ್ಲ . ಇರಲಿ; ಈಗ ಎಲ್ಲಿ ಅವಗಾಹನಸ್ನಾನವನ್ನು ಮಾಡುವೆವೋ ಅಲ್ಲಿ ನದಿಯ ನೀರಿನಲ್ಲಿ ನಿಂತು ಆ ಭಾಗವನ್ನು ಶುದ್ಧಿಗೊಳಿಸಿಕೊಳ್ಳಬೇಕು. ಹಾಗೂ ಅಪಾಯವಾಗುವಂಥ ನೀರಿನ ಸುಳಿಗಳು, ಮಡುವು, ಕ್ರೂರವಾದ ಜಲಚರಪ್ರಾಣಿಗಳು–ಏನಾದರೂ ಇದ್ದಲ್ಲಿ ಅವುಗಳನ್ನು ನಿವಾರಿಸು ವಂತೆಯೂ ವರುಣದೇವನನ್ನು ಪ್ರಾರ್ಥಿಸಿಕೊಳ್ಳಬೇಕು. ಜಲದಲ್ಲಿರಬಹುದಾದ ಕ್ರೂರವಾದ ಸನ್ನಿವೇಶಗಳು, ಅಪವಿತ್ರವಸ್ತುಗಳು, ರೋಗಾದಿಗಳನ್ನುಂಟುಮಾಡಬಹು ದಾದ ದೋಷಗಳು–ಇವೆಲ್ಲವೂ ಈ ಸ್ಥಳದಿಂದ ತೊಲಗಲಿ–ಎಂದು ಪ್ರಾರ್ಥಿಸಬೇಕು. ಅನಂತರ ಅತ್ಯಶನ, ಅತಿಪಾನ, ಕ್ರೂರವಾದ ದಾನ–ಇವುಗಳಿಂದ ಸಂಭವಿಸಿರುವ ಪಾಪಗಳೆಲ್ಲವನ್ನೂ ವರುಣ ರಾಜನು ತನ್ನ ಕೈಗಳಿಂದ ಸವರಿಹಾಕಲಿ; ನನ್ನನ್ನು ಶುಭ್ರನನ್ನಾಗಿ ಮಾಡಲಿ–ಎಂದೂ ಕೇಳಿಕೊಳ್ಳಲಾಗಿದೆ. ಅತ್ಯಶನವೆಂದರೆ ಅತಿಯಾಗಿ ತಿನ್ನುವದು– ಎಂದು ಸಾಮಾನ್ಯಾರ್ಥವು. ಮನುಷ್ಯನು ಬಾಯಿರುಚಿಗಾಗಿ ಅನವಶ್ಯಕವಾಗಿ ತಿನ್ನುವದೂ ಉಂಟು. ಹಾಗೆಯೇ ಶಾಸ್ತ್ರವನ್ನು ಅತಿಕ್ರಮಿಸಿ ಅಕಾಲದಲ್ಲಿ–ದೇವತೆಗಳಿಗೆ ಸಮರ್ಪಿಸದೆ ತಿಂದರೂ ಅತ್ಯಶನವೆನಿಸುವದು. ಈಗಿನ ಕಾಲದಲ್ಲಿ ಮನಬಂದಂತೆ ಪೆಪ್ಪರಮೆಂಟ್, ಚಾಕೋಲೇಟ್, ಕರಿದ ತಿಂಡಿಗಳು, ಪಾನೀಯಗಳು–ಮುಂತಾದವನ್ನು ಸ್ವೇಚ್ಛೆಯಿಂದ ಜನರು ಸೇವಿಸುವದನ್ನು ನೋಡಿದರೆ ಶ್ರೋತ್ರಿಯರಿಗೆ ನಾಚಿಕೆಯೂ ಭಯವೂ ಆಗುತ್ತದೆ. ಬಾಯಿ ಇದೆ–ಎಂದ ಮಾತ್ರಕ್ಕೆ ಹಾಗೆ ತಿನ್ನುವದು ಎಂದಿಗೂ ಸರಿಯಲ್ಲ. ಇದರಂತೆಯೇ ಪಾನೀಯವೂ ದೇವತೆಗಳಿಗೆ ಅರ್ಪಿತವಾಗದೆ ಬಾಯಿರುಚಿಗಾಗಿ ತೆಗೆದುಕೊಂಡಾಗ, ಖುಷಿಗಾಗಿ ಕುಡಿಯುವಾಗ ಅತಿಪಾನವೆನಿಸುವದು. ಇಷ್ಟೇ ಅಲ್ಲದೆ ನಿಷಿದ್ಧ ಪಾನೀಯಗಳನ್ನು ಕೂಡ ಜನರು ಈಗ ಅತಿಯಾಗಿ ಸೇವಿಸುತ್ತಾರೆ. ಧೂಮಪಾನಾದಿ ಗಳಂತೂ ಸರ್ವವ್ಯಾಪಕವಾಗಿವೆ. ಇಂಥ ದುಷ್ಟಚಟಗಳಿಂದ ಆರೋಗ್ಯವೂ ಹಾಳಾಗಿ ದೇವತೆಗಳ ಕೋಪಕ್ಕೂ ಪಾತ್ರರಾಗಿ ದುರಾಚಾರಿಗಳಾಗಿ ಜನರು ಕೆಡುವರು. ಆದ್ದರಿಂದ ಸ್ನಾನಮಾಡುವಾಗ ವರುಣದೇವತೆಯನ್ನು ನೆನೆದು ''ಎಲೈ ದೇವನೆ, ನಾನು ಅನಿವಾರ್ಯಕಾರಣದಿಂದ ಅಥವಾ ಅಜ್ಞಾನದಿಂದ ಹೀಗೇನಾದರೂ ಅತ್ಯಶನ, ಅತಿಪಾನಗಳನ್ನು ಮಾಡಿದ್ದರೆ ನೀನು ಕ್ಷಮಿಸಿ ಜಲರೂಪವಾದ ನಿನ್ನ ಕೈಗಳಿಂದ ತೊಳೆದುಬಿಡುವವನಾಗು'' ಎಂದು ಇಲ್ಲಿ ಕೇಳಿಕೊಂಡಿದೆ. ಇದು ನಿಜವಾಗಿಯೂ ಅತ್ಯುಪಯುಕ್ತವಾದ ಪ್ರಾರ್ಥನೆಯಾಗಿದೆ.

ಈಗ ಉಗ್ರಪ್ರತಿಗ್ರಹವೆಂಬುದನ್ನು ವಿಚಾರಮಾಡೋಣ. ದಾನವನ್ನು ತೆಗೆದುಕೊಂಡಾಗ ಪ್ರತಿಗ್ರಹದೋಷವು ಸಂಭವಿಸುತ್ತದೆ. ದಾನಗಳಲ್ಲಿಯೂ ವೈದಿಕರು

ಕಬ್ಬಿಣ, ಎಣ್ಣೆ, ಎಳ್ಳು, ಹತ್ತಿ, ಎಮ್ಮೆ—ಮುಂತಾದವುಗಳನ್ನು ದುರ್ದಾನವೆನ್ನುವರು. ಇಂಥವುಗಳನ್ನು ಕೈಹಿಡಿಯುವದೇ ಉಗ್ರಪ್ರತಿಗ್ರಹವು. ಅನಿವಾರ್ಯವಾಗಿ ಇಂಥ ದಾನಗಳನ್ನು ತೆಗೆದುಕೊಂಡಾಗ ನದೀಸ್ನಾಮಾಡಿ ಗಾಯತ್ರೀಮಂತ್ರವನ್ನು ಜಪಿಸಿ ಪಾಪಪರಿಹಾರವನ್ನು ಮಾಡಿಕೊಳ್ಳಬೇಕು. ಯಾರಿಗೆ ಪ್ರತಿಗ್ರಹದಿಂದ ಬರಬಹುದಾದ ಪಾಪಗಳನ್ನು ಕಳೆದುಕೊಳ್ಳುವ ಶಕ್ತಿಯಿಲ್ಲವೋ ಅಂಥವರು ಹಾಗೂ ಅವಶ್ಯಕತೆಯಿಲ್ಲದವರು ಪ್ರತಿಗ್ರಹವನ್ನು ಮಾಡಲೇಬಾರದು. ಇಲ್ಲಿ ಭಾಷ್ಯಕಾರರು ಉಗ್ರಪ್ರತಿಗ್ರಹ—ಎಂದರೆ ತನಗೆ ಅಧೀನನಾಗಿರುವವನಿಂದ ಧನಾದಿಗಳನ್ನು ತೆಗೆದುಕೊಳ್ಳುವದು—ಎಂದರ್ಥ ಮಾಡಿದ್ದಾರೆ. ಇಂಥ ಸಂದರ್ಭದಲ್ಲಿ ಮೈನರ್ ಆಸ್ತಿಗಳನ್ನು ವಶಮಾಡಿಕೊಳ್ಳುವದು, ಅನಾಥರಾದವರಿಂದ ಒತ್ತಾಯವಾಗಿ ಆಸ್ತಿಗಳನ್ನು ಬರೆಸಿಕೊಳ್ಳುವದು, ತನ್ನ ಅಧೀನರಾದವರಿಂದ ಅಕ್ರಮವಾಗಿ ಸಂಭಾವನೆಯನ್ನು ಸ್ವೀಕರಿಸುವದೇ ಮುಂತಾದ ವ್ಯವಹಾರಗಳೆಲ್ಲವೂ ಸೇರುತ್ತವೆ. ಇವುಗಳೆಲ್ಲವೂ ಉಗ್ರಪ್ರತಿಗ್ರಹಗಳೆನಿಸುವವು. ಒಂದು ರೀತಿಯಲ್ಲಿ ಕೈಯೆತ್ತಿಕೊಟ್ಟ ದುರ್ದಾನಗಳಿಗಿಂತಲೂ ಇವು ಇನ್ನೂ ಕೆಡುಕನ್ನುಂಟು ಮಾಡುವವಾಗಿರುವವು. ಇಂತಹವುಗಳನ್ನು ಮನುಷ್ಯನು ಬುದ್ಧಿಪೂರ್ವಕವಾಗಿ ಖಂಡಿತ ಮಾಡಬಾರದು. ತಿಳಿವಳಿಕೆಯು ಬರುವ ಮುಂಚೆ ಹಾಗೇನಾದರೂ ಮಾಡಿದ್ದಲ್ಲಿ ವರುಣನ ಕೃಪೆಯಿಂದ ಅಂಥ ಪಾಪಗಳನ್ನು ಪರಿಹರಿಸಿಕೊಳ್ಳಬೇಕು—ಎಂದಭಿಪ್ರಾಯ.

**ಓಂ ॥ ಸೋಽಹಮಪಾಪೋ ವಿರಜೋ ನಿರ್ಮುಕ್ತೋ ಮುಕ್ತಕಿಲ್ಬಿಷಃ ।**
**ನಾಕಸ್ಯ ಪೃಷ್ಠಮಾರುಹ್ಯ ಗಚ್ಛೇದ್ ಬ್ರಹ್ಮ ಸ ಲೋಕತಾಮ್ ॥**
**ಯಶ್ಚಾಪ್ಸು ವರುಣಃ ಸ ಪುನಾತ್ವಘಮರ್ಷಣಃ ॥**

ವರುಣನ ಕೃಪೆಯಿಂದ ಮಾನವನು ಪಾಪಗಳನ್ನು ಕಳೆದುಕೊಂಡು ಶುದ್ಧನಾದಾಗ ವಿರಜನೂ ದೋಷರಹಿತನೂ ಆಗುವನು. ಆಗ ಪ್ರಾರ್ಥಿಸುವದೇನೆಂದರೆ "ಹೀಗೆ ಅಪಾಪನಾದ ನಾನು ಸ್ವರ್ಗದ ತುದಿಯನ್ನೇರಿ ಬ್ರಹ್ಮನೊಡನೆ ಸಮಾನವಾದ ಲೋಕವನ್ನು ಹೊಂದಲಿರುವೆನು. ಇನ್ನು ಯಾವ ವರುಣದೇವತೆಯು ಮಹಾಸಮುದ್ರ, ನದಿ, ಕೆರೆ—ಮುಂತಾದವುಗಳಲ್ಲಿರುವನೋ ಆ ಅಘಮರ್ಷಣನು ನನ್ನನ್ನು ಪವಿತ್ರಗೊಳಿಸಲಿ" ಎಂಬೀ ಸ್ತುತಿಯು ಸುಂದರವಾಗಿದೆ. ಪ್ರತಿಯೊಂದು ಕರ್ಮಾರಂಭದಲ್ಲಿಯೂ ದೇಹ, ಸ್ಥಳ, ದ್ರವ್ಯಾದಿಗಳ ಶುದ್ಧಿಗಾಗಿ ವೈದಿಕರು 'ಪುಣ್ಯಾಹ' ವೆಂಬ ಕರ್ಮವನ್ನು ಮಾಡುತ್ತಾರೆ. ಅದರಲ್ಲಿ ವರುಣಪೂಜೆಯೂ ಜಲದೇವತೆಗಳನ್ನು ಕುರಿತು ಸ್ತುತಿರೂಪವಾದ ಮಂತ್ರಪಠನವೂ ಪ್ರಧಾನವಾಗಿರುವದು. 'ಉದಕಶಾಂತಿ' ಎಂಬ ಕರ್ಮದಲ್ಲಿಯೂ ಹೀಗೆಯೇ ವರುಣಸ್ತುತಿಯೂ ಅಂತರಂಗಬಹಿರಂಗಗಳನ್ನು

ಶುದ್ಧಿಗೊಳಿಸುವ ಮಂತ್ರಭಾಗಗಳೂ ಇವೆ. ಇವುಗಳ ಅರ್ಥವನ್ನೆಲ್ಲ ಮನನಮಾಡಿದರೆ ನಮಗೆ ಮತ್ತೆಂದಿಗೂ ಪಾಪಗಳನ್ನು ಮಾಡುವ ಇಚ್ಛೆಯೇ ಬರಲಾರದು. ಈಗ ಮುಂದಿನ ಮಂತ್ರವನ್ನು ವಿಚಾರಮಾಡೋಣ.

ಓಂ ॥ ಇಮಂ ಮೇ ಗಂಗೇ ಯಮುನೇ ಸರಸ್ವತಿ ಶುತುದ್ರಿ
ಸ್ತೋಮಗ್ಂ ಸಚತಾ ಪರುಷ್ಣಿಯಾ । ಅಸಿಕ್ನಿಯಾ ಮರುದ್ವೃಧೇ
ವಿತಸ್ತಯಾರ್ಜೀಕೀಯೇ ಶೃಣುಹ್ಯಾ ಸುಷೋಮಯಾ ॥

ಈ ಮಂತ್ರದಲ್ಲಿ ಗಂಗೆಯೆ ಮುಂತಾದ ತೀರ್ಥದೇವತೆಗಳನ್ನು ಕರೆಯುವ ಅಭಿಪ್ರಾಯವು ಇದೆ. ವೈದಿಕಸಾಹಿತ್ಯದ ಭಾಷೆಯು ವ್ಯಾವಹಾರಿಕಸಾಹಿತ್ಯ ಭಾಷೆಗಿಂತ ಭಿನ್ನವಾಗಿರುವದು ಸಹಜವಾಗಿದೆ. ಆದ್ದರಿಂದ ಭಾಷ್ಯಕಾರರ ವಿವರಣೆಯಂತೆ ಕೆಲವು ಶಬ್ದಗಳ ಅರ್ಥವನ್ನು ಮೊದಲು ತಿಳಿಯೋಣ. **ಆರ್ಜೀಕಿಯೇ**, ಹಾಗೂ **ಮರುದ್ ವೃಧೇ**–ಇವು ಸರೋವರಗಳ ಹೆಸರುಗಳು. **ಸ್ತೋಮ**ವೆಂದರೆ ಸ್ತುತಿಸಮುದಾಯ ವೆಂದರ್ಥ. **ಸಚತಾ** ಎಂಬಲ್ಲಿ ಕಡೆಯಲ್ಲಿರುವ 'ಆ' ಕಾರರನ್ನು ಮೊದಲಿಗೇ ಸೇರಿಸಿಕೊಂಡು **ಆಸಚತ** ಎಂದು ಮಾಡಿಕೊಳ್ಳಬೇಕು. ಆಗ ಆಗಚ್ಛತ–ಬನ್ನಿರಿ–ಎಂದರ್ಥವಾಗುವದು. ಈಗ ಭಕ್ತನು ತೀರ್ಥದೇವತೆಗಳನ್ನು ಆಹ್ವಾನಿಸುತ್ತಿದಾನೆ. ''ಎಲೌ ಗಂಗೆಯೆ, ಯಮನೆಯೆ, ಸರಸ್ವತಿಯೆ, ಶುತುದ್ರಿಯೆ, ಆರ್ಜೀಕೀಯಳೆ, ಮರುದ್ವೃಧೆಯೆ, ನೀವುಗಳು ನಾನು ಪಠಿಸುತ್ತಿರುವ ಈ ಸ್ತೋತ್ರವನ್ನು ಕೇಳಿರಿ. ಅನಂತರ ನನ್ನ ಬಳಿಗೆ ಬನ್ನಿರಿ. ನಾನು ಸ್ನಾನ ಮಾಡುತ್ತಿರುವ ನೀರಿನ ಮಧ್ಯಭಾಗಕ್ಕೆ ನನ್ನನ್ನು ಪವಿತ್ರಗೊಳಿಸುವದಕ್ಕಾಗಿ ಬನ್ನಿರಿ. ಹಾಗೆ ಬರುವಾಗ ಪರುಷ್ಣಿ, ಅಸಿಕ್ನಿ, ವಿತಸ್ತಾ, ಸುಷೋಮಾ ಎಂಬ ನದೀದೇವತೆಗಳನ್ನೂ ನಿಮ್ಮೊಡನೆ ಕರೆತನ್ನಿರಿ''– ಎಂದು ಮಂತ್ರಾರ್ಥವು. ಗಂಗೆಯು ವಿಷ್ಣುಪಾದದಲ್ಲಿ ಹುಟ್ಟಿ ಪರಮೇಶ್ವರನ ಜಟಾಜೂಟವನ್ನು ಸೇರಿ ಅನಂತರ ಭೂಮಿಯಲ್ಲಿ ಹರಿದು ಆರ್ಯಾವರ್ತವನ್ನೆಲ್ಲ ಪುಣ್ಯಭೂಮಿಯಾಗಿ ಮಾಡಿರುವಳು. ಗಂಗಾತೀರದಲ್ಲಿ ಅಸಂಖ್ಯಾತವಾದ ಪುಣ್ಯಕ್ಷೇತ್ರಗಳಿವೆ. ಯಮುನೆಯಾದರೊ, ಸೂರ್ಯಪುತ್ರಿಯಾಗಿದ್ದು ಶ್ರೀಕೃಷ್ಣಭಗವಂತನ ಜನ್ಮಸ್ಥಾನವಾದ ಮಥುರೆಯಲ್ಲೂ ಕ್ರೀಡಾಸ್ಥಾನವಾದ ಗೋಕುಲದಲ್ಲಿಯೂ ಹರಿದು–ಆತನ ಸ್ಪರ್ಶದಿಂದ ಪವಿತ್ರಳಾಗಿ ಮುಂದೆ ಗಂಗೆಯೊಡನೆ ಕೂಡಿಕೊಂಡಿರುವಳು. ಬ್ರಹ್ಮಪತ್ನಿಯಾದ ಸರಸ್ವತಿಯು ನದಿಯಾಗಿ ಹರಿದು ಅನಂತರ ಗುಪ್ತಗಾಮಿನಿಯಾಗಿರುವಳು. ಈಕೆಯ ಮಹಿಮೆಯನ್ನು ಋಗ್ವೇದಸೂಕ್ತಗಳಲ್ಲಿ ಕೊಂಡಾಡಿದೆ. ಇನ್ನುಳಿದ ನದಿಗಳ ಹಾಗೂ ಸರೋವರಗಳ ಮಾಹಾತ್ಮ್ಯೆಯನ್ನು ಇತಿಹಾಸಪುರಾಣಗಳಿಂದ ತಿಳಿಯಬೇಕು. ಈಗ ಭಕ್ತನು ಮತ್ತೆ ಪ್ರಾರ್ಥಿಸುವದೇನೆಂದರೆ

“ನದೀ, ಜಲಾಭಿಮಾನಿಗಳಾದ ನೀವುಗಳೆಲ್ಲರೂ ಎಂದರೆ ನಾನು ಹೆಸರಿಟ್ಟು ಕರೆದವರು ಹಾಗೂ ಕರೆಯದವರು ಸಹ ನನಗೆ ಕೃಪೆಮಾಡಿರಿ. ನಾನು ಎಲ್ಲಾ ನದಿಗಳ ತೀರಕ್ಕೂ ಹೋಗಿ ಹೆಚ್ಚು ಕಾಲ ಉಳಿದುಕೊಂಡು ಸ್ನಾನಮಾಡಿ, ತೀರ್ಥಗಳಲ್ಲಿ ನಡೆಸಬೇಕಾದ ಜಪೋಪವಾಸಯಜ್ಞದಾನಾದಿಗಳನ್ನೆಲ್ಲ ಕೈಗೊಂಡು ಬಹಳ ದಿನಗಳನ್ನು ಕಳೆಯಲು ಅಸಮರ್ಥನಾಗಿರುವೆನು. ಹೀಗಿದ್ದರೂ ನನಗೆ ಸುಲಭವಾಗಿ ಒದಗುವ ಯಾವದಾದರೊಂದು ಕೆರೆ, ಕೊಳ, ಬಾವಿ–ಮುಂತಾದವುಗಳಲ್ಲಿಯೇ ಸ್ನಾನಕಾಲಕ್ಕೆ ನಿಮ್ಮೆಲ್ಲರನ್ನೂ ಕರೆಯುವೆನು. ಹಾಗೂ ಬಳಿಸಾರಿ ಸ್ತೋತ್ರಮಾಡುವೆನು. ಇಂಥ ಸಂದರ್ಭದಲ್ಲಿ ನೀವು ಸನ್ನಿಧಾನವನ್ನು ಕರುಣಿಸಿದವರಾಗಿ ನನ್ನ ಎಲ್ಲಾ ಮಹಾಪಾಪ–ಉಪಪಾತಕಗಳನ್ನೂ ವಿನಾಶಗೊಳಿಸಿದವರಾಗಿ ನನಗೆ ಅನುಗ್ರಹಮಾಡಿರಿ.” “ನೀನು ಪಾಪಗಳಿಂದ ಬಿಡುಗಡೆಯನ್ನು ಹೊಂದಿರುವೆ, ಶುದ್ಧನಾಗಿರುವೆ, ಐಹಿಕವಾದ ಪಶುಪುತ್ರಧನಕನಕಾದಿ ಭೋಗಗಳನ್ನು ಅನುಭವಿಸುವವನಾಗು, ಕಡೆಯಲ್ಲಿ ನಿನ್ನ ಎಲ್ಲಾ ಪರಿವಾರದವರೊಡನೆ ಪುಣ್ಯಲೋಕಗಳನ್ನು ಹೊಂದುವವನಾಗು” ಎಂದು ಹರಸಿರಿ–ಎಂಬುದಾಗಿ ಬೇಡಿಕೊಳ್ಳುತ್ತಿದ್ದಾನೆ ಹೀಗೆ ಈ ಮಂತ್ರವು ಪ್ರಧಾನರಾದ ಜಲದೇವತೆಗಳ ಸ್ತೋತ್ರವಾಗಿದೆ. ಇದನ್ನು ದೇವತಾರ್ಚನ, ಪುಣ್ಯಾಹ, ಕಲಶಸ್ಥಾಪನ, ವ್ರತಾನುಷ್ಠಾನವೇ ಮುಂತಾದ ಕರ್ಮಗಳಲ್ಲೆಲ್ಲ ಕಲಶಪೂಜೆಗಾಗಿ ವೈದಿಕರು ಬಳಸುತ್ತಾರೆ. ಈಗ ಮುಂದಿನ ಮಂತ್ರವನ್ನು ವಿಚಾರಮಾಡೋಣ.

ಓಂ ॥ ಋತಂ ಚ ಸತ್ಯಂ ಚಾಭೀದ್ಧಾತ್ತಪಸೋಽಧ್ಯಜಾಯತ ।
ತತೋ ರಾತ್ರಿರಜಾಯತ ತತಃ ಸಮುದ್ರೋ ಅರ್ಣವಃ ॥
ಸಮುದ್ರಾದರ್ಣವಾದಧಿ ಸಂವತ್ಸರೋಽಜಾಯತ ।
ಅಹೋರಾತ್ರಾಣಿ ವಿದಧದ್ ವಿಶ್ವಸ್ಯ ಮಿಷತೋ ವಶೀ ॥
ಸೂರ್ಯಾಚಂದ್ರಮಸೌ ಧಾತಾ ಯಥಾಪೂರ್ವಮಕಲ್ಪಯತ್ ।
ದಿವಂ ಚ ಪೃಥಿವೀಂ ಚಾಂತರಿಕ್ಷಮಥೋ ಸುವಃ ॥

ಈ ಮಂತ್ರಗಳಲ್ಲಿ ಜಲಾದಿಸಮಸ್ತಭೂತಗಳೂ ಬ್ರಹ್ಮಾಂಡವೂ ಪರಬ್ರಹ್ಮದಿಂದಲೇ ಸೃಷ್ಟಿಯಾಯಿತೆಂದು ತಿಳಿಸುತ್ತಾರೆ. ಅಭೀದ್ಧಾತ್–ಎಂದರೆ ಎಲ್ಲೆಲ್ಲೂ ಹೊಳೆಯುತ್ತಿರುವ ಪರಮಾತ್ಮನ ಕಡೆಯಿಂದ ಋತುವು ಎಂದರೆ ಪೃಥಿವಿಯು ಮುಂತಾದ ಪಂಚಮಹಾಭೂತಗಳು ಉಂಟಾದವು. ಸತ್ಯವೆಂದರೆ ಸತ್ಯಲೋಕದವರೆಗಿನ ಎಲ್ಲಾ ಲೋಕಗಳು ಎಂದರ್ಥ. ಪೃಥಿವ್ಯಾದಿಭೂತಗಳನ್ನೂ ಸತ್ಯಾದಿಲೋಕಗಳನ್ನೂ ಋತಸತ್ಯಗಳೆಂದು ಕರೆದದ್ದು ಸರಿಯೆ? ಅವು ನಾಶವಾಗುವದಿಲ್ಲವೆ? ಎಂದರೆ ಹಾಗಲ್ಲ

ಜ್ಞಾನವುಂಟಾಗುವವರೆಗೂ ಅವು ಬಾಧಿತವಾಗದಿರುವದರಿಂದಲೂ ವ್ಯವಹಾರದೃಷ್ಟಿಯಿಂದ ಕರ್ಮಕ್ಕೆ ಫಲವೂ ಆ ನಿಮಿತ್ತವಾಗಿ ಜೀವರಿಗೆ ಜನ್ಮಾಂತರ ಲೋಕಾಂತರಗಳಾಗುವದರಿಂದಲೂ ಹಾಗೆ ಕರೆಯಲಾಗಿದೆ. ಹೀಗೆ ಉಂಟಾದ ಋತಸತ್ಯಗಳು ಆ ಭಗವಂತನ ತಪಸ್ಸಿನ–ಎಂದರೆ ಅನ್ವಾಲೋಚನೆಯ ಫಲವಾಗಿದೆ. ಆತನ ಸಂಕಲ್ಪದ ಫಲವಾಗಿಯೇ ರಾತ್ರಿಯೂ ಉಂಟಾಯಿತು. ಶ್ರುತಿಯಲ್ಲಿ ರಾತ್ರಿಯನ್ನು ಮಾತ್ರ ಹೇಳಿದ್ದರೂ ಅದರೊಡನೆ ಹಗಲೂ ಉಂಟಾಯಿತೆಂದು ಸೇರಿಸಿಕೊಳ್ಳಬೇಕು. ಅನಂತರ **ಅರ್ಣವ** ಸಮುದ್ರಗಳು ಹುಟ್ಟಿದವು. ಇಲ್ಲಿ ಸಮುದ್ರಶಬ್ದವಿರುವದರಿಂದ ಅರ್ಣವಶಬ್ದಕ್ಕೆ ಪುನರುಕ್ತಿಯಾಗದೆ ಇರುವದಕ್ಕಾಗಿ **ಅರ್ಣಾಂಸಿ** ಎಂದರೆ ಜಲಗಳು, **ವಿದ್ಯಂತೇ**– ಇದ್ದುಕೊಂಡಿರುವ ನದೀ, ಕೆರೆ ಬಾವಿಗಳೆಂದು ಅರ್ಥಮಾಡಬೇಕು. ಇವೆಲ್ಲವೂ ಉಂಟಾದ ಅನಂತರ ಸಂವತ್ಸರವು ಉಂಟಾಯಿತು. ಹನ್ನೆರಡು ಅಥವಾ ಹದಿಮೂರು ತಿಂಗಳುಗಳುಳ್ಳ ಸಂವತ್ಸರವು ಹುಟ್ಟಿದ್ದಲ್ಲದೆ–ಹಗಲು, ರಾತ್ರೆ, ಘಳಿಗೆ, ಮುಹೂರ್ತ, ಪ್ರಹರಾದಿ ಕಾಲದೇವತೆಯ ಅವಾಂತರಪ್ರಭೇದಗಳೂ ಉಂಟಾದವು. ಹೀಗೆ ಅಹೋರಾತ್ರೆಗಳನ್ನುಂಟುಮಾಡಿದ ಭಗವಂತನು ರೆಪ್ಪೆಗಳನ್ನು ಅಳ್ಳಾಡಿಸುವಂಥ ಪ್ರಾಣಿಗಳ ಹಾಗೂ ಅಳ್ಳಾಡಿಸದೆ ಇರುವಂಥ ದೇವತಾದಿಗಳೆಲ್ಲರನ್ನೂ ತನ್ನ ವಶವಾಗಿ ಮಾಡಿಕೊಂಡನು. ಕಾಲರೂಪದಿಂದ ಜಗತ್ತೆಲ್ಲವನ್ನೂ ಆವರಿಸಿಕೊಂಡನು. ಅನಂತರ ದ್ಯುಲೋಕ, ಭೂಮಿ, ಅಂತರಿಕ್ಷ, ಸ್ವರ್ಗಲೋಕಗಳನ್ನೂ ಸೂರ್ಯಚಂದ್ರರನ್ನೂ ಉಂಟುಮಾಡಿದನು. ಹೀಗೆ ಉಂಟುಮಾಡುವಾಗ ಯಾವಯಾವ ಲೋಕಗಳು ಹಾಗೂ ಜೀವರು ಹೇಗೆಹೇಗೆ ಇರಬೇಕು? ನಾಮರೂಪಗಳು ಏನಿರಬೇಕು? ಸ್ವಭಾವಗಳು ಹೇಗಿರಬೇಕು? ಮುಂತಾದದ್ದೆಲ್ಲವನ್ನೂ ಆಯಾ ಹಿಂದಿನ ಕಲ್ಪಗಳಲ್ಲಿ ಅವು ಹೇಗೆಹೇಗೆ ಇದ್ದವೋ ಏನೇನು ಹೆಸರುಗಳು ಆಕಾರಗಳಿದ್ದವೋ ಹಾಗೆಹಾಗೆಯೇ ಉಂಟುಮಾಡಿದನು. ಇದೆಲ್ಲವನ್ನೂ ಉಂಟು ಮಾಡಿದವನನ್ನು ಬ್ರಹ್ಮಾ ಅಥವಾ ಹಿರಣ್ಯ ಗರ್ಭನೆನ್ನುವರು. ಇವನು ಭಗವಂತನ ವಿಭೂತಿಯೇ ಆಗಿರುವನು. ಆ ಭಗವಂತನೇ ಇವನಿಗೆ ಜ್ಞಾನಶಕ್ತಿ ಕ್ರಿಯಾಶಕ್ತಿಗಳನ್ನೂ ವೇದರೂಪವಾದ ತಿಳಿವಳಿಕೆಯನ್ನೂ ಅನುಗ್ರಹಿಸಿ ಸೃಷ್ಟಿಕರ್ಮದಲ್ಲಿ ನಿಯೋಜಿಸುವನಾದ್ದರಿಂದ ಹಿರಣ್ಯಗರ್ಭನು ಮಾಡುವ ಸೃಷ್ಟಿಯೂ ಪರಬ್ರಹ್ಮದ ಪ್ರಸಾದವೇ ಆಗಿದೆ. ಹೇಗೆ ಆಗಲಿ–ಈ ಚತುರ್ದಶ ಲೋಕಗಳ ಹಾಗೂ ದೇವಾಸುರನರತಿರ್ಯಗಾದಿ ಜೀವರುಗಳ ಸೃಷ್ಟಿವೈಚಿತ್ರ್ಯವು ಎಂಥ ಪ್ರಾಜ್ಞನಾದ ಶಿಲ್ಪಿಗೂ ಯೋಚಿಸಲು ಸಹ ದುಸ್ಸಾಧ್ಯವಾಗಿದೆ. ವಿಶ್ವರಚನಾಪ್ರವೀಣನಾದ ವಿಶ್ವಕರ್ಮನೆನಿಸಿದ ಭಗವಂತನು ಸೃಷ್ಟಿಕರ್ತರಾದ ಚತುರ್ಮುಖಬ್ರಹ್ಮಾದಿಗಳನ್ನೇ ಉಂಟುಮಾಡಿರುವ ಮಹಾಸೃಷ್ಟಿಕರ್ತನಾಗಿರುತ್ತಾನೆ. ಅವನ ಮಹಿಮೆಯು ಅನಂತವಾದದ್ದು–ಎಂದಭಿಪ್ರಾಯ.

ಈಗ ಮುಂದಿನ ಮಂತ್ರಗಳನ್ನು ವಿಚಾರಮಾಡೋಣ:

ಓಂ ॥ ಯತ್ಪೃಥಿವ್ಯಾಂ ರಜಃ ಸ್ವಮಾಂತರಿಕ್ಷೇ ವಿರೋದಸಿ ।
ಇಮಾಗ್‌ಂ ಸ್ತದಾಪೋ ವರುಣಃ ಪುನಾತ್ವಘಮರ್ಷ್ರಣ ಃ
ಪುನಂತು ವಸವಃ ಪುನಾತು ವರುಣಃ ಪುನಾತ್ವಘಮರ್ಷಣಃ ।
ಏಷ ಭೂತಸ್ಯ ಮಧ್ಯೇ ಭುವನಸ್ಯ ಗೋಪ್ತಾ ।
ಏಷ ಪುಣ್ಯಕೃತಾಂ ಲೋಕಾನೇಷ ಮೃತ್ಯೋರ್ಹಿರಣ್ಮಯಮ್।
ದ್ಯಾವಾಪೃಥಿವ್ಯೋರ್ಹಿರಣ್ಮಯಗ್‌ಂ ಸಂಶ್ರೀತಂ ಸುವಃ ।
ಸ ನಃ ಸುವಃ ಸಗ್‌ಂ ಶಿಶಾಧಿ ॥

ಈ ಮಂತ್ರಭಾಗದಲ್ಲಿ ವರುಣನೆಂಬ ದೇವತೆಯನ್ನು ಪ್ರಾರ್ಥಿಸಲಾಗಿದೆ. ಆತನಿಗೆ ಅಘಮರ್ಷಣನೆಂದೂ ಹೆಸರಿದೆ. ಲೋಕದ ಜನರ ಪಾಪಗಳನ್ನೆಲ್ಲ ತೊಳೆಯುವವನಾದ್ದರಿಂದ ಈ ಹೆಸರು ಅನ್ವರ್ಥವಾಗಿದೆ. ಈ ಮಂತ್ರಭಾಗವನ್ನು ಕಂಡುಹಿಡಿದಿರುವ ಋಷಿಯ ಹೆಸರೂ ಅಘಮರ್ಷಣನೆಂದೇ ಪ್ರಸಿದ್ಧವಾಗಿದೆ. ಆದ್ದರಿಂದ ಈ ಶಬ್ದವನ್ನು ಎರಡು ಬಾರಿ ಬಳಸಲಾಗಿದೆ. ಇಲ್ಲಿ ಋಷಿಯು ಕೇಳಿಕೊಳ್ಳುವದೇನೆಂದರೆ: ಈ ಭೂಲೋಕದಲ್ಲಿಯೂ ಅಂತರಿಕ್ಷ ಹಾಗೂ ದ್ಯುಲೋಕಗಳಲ್ಲಿಯೂ ಮತ್ತು ಭೂಮಿಯ ಕೆಳಬಾಗದಲ್ಲಿರುವ ಪಾತಾಳಾದಿ ಲೋಕಗಳಲ್ಲಿಯೂ ಆಯಾ ಕರ್ಮಫಲವನ್ನನುಭವಿಸುತ್ತಾ ಇದ್ದುಕೊಂಡಿರುವ ಯಾವ ಜೀವರಾಶಿಗಳಿದ್ದಾರೆಯೋ ಅಂಥ ಜೀವರಾಶಿಗಳಲ್ಲಿ ನಾವೂ ಸೇರಿರುವೆವೋ—ಈ ನಮ್ಮೆಲ್ಲರ ಪಾಪಗಳನ್ನೂ ಜಲರೂಪನಾದ ವರುಣನೆಂಬ ಅಘಮರ್ಷಣನು ಕಳೆಯುವವನಾಗಲಿ. ಅವನೊಡನೆ ವಸುಗಳೆಂಬ ದೇವತೆಗಳೂ ಪಾಪಪರಿಹಾರವನ್ನು ಮಾಡಲಿ. ಈ ವರುಣನೇ ಈವರೆಗೆ ಕಳೆದುಹೋಗಿರುವ ಕಾಲದಲ್ಲಿದ್ದ ಪ್ರಪಂಚಕ್ಕೂ ಒಡೆಯನಾಗಿದ್ದನು. ಮುಂದೆಯೂ ಈತನೇ ಎಲ್ಲಾ ಲೋಕಗಳಿಗೂ ಪ್ರಭುವಾಗಿರುವನು. ಮತ್ತು ಜ್ಯೋತಿಷ್ಟೋಮವೇ ಮುಂತಾದ ಪುಣ್ಯಕರ್ಮಗಳನ್ನು ಮಾಡಿರುವವರಿಗೆ ಸ್ವರ್ಗಲೋಕವನ್ನು ದಯಪಾಲಿಸುವವನೂ ಮೃತ್ಯುದೇವತೆಯ ನಿವಾಸಸ್ಥಾನವಾದ ಹಿರಣ್ಮಯವೆಂಬ ಲೋಕವಿಶೇಷವನ್ನು ಅನುಗ್ರಹಿಸುವವನೂ ಈತನೇ ಆಗಿರುವನು. ಎಲೈ ವರುಣನೆ, ದ್ಯುಲೋಕಪೃಥಿವಿಗಳ ನಡುವೆ ಸ್ವರ್ಗವೆಂಬ ಹೆಸರಿನ ಮತ್ತೊಂದು ಸುವರ್ಲೋಕವಿದೆಯಷ್ಟೆ. ಅದನ್ನು ನಮಗೆ ಅನುಗ್ರಹಿಸುವವನಾಗು—ಎಂದು ಋಷಿಯು ಕೇಳಿಕೊಂಡಿರುತ್ತಾನೆ. ಪೃಥಿವಿಗಿಂತ ಮೇಲಿನ ಲೋಕಗಳೆಲ್ಲವೂ ಪುಣ್ಯಜೀವಿಗಳಿಗೇ ಮೀಸಲಾಗಿರುವವು. ಅಲ್ಲಿಗೆ ಹೋಗುವವರು ಕರ್ಮೋಪಾಸನಾದಿ ಪುಣ್ಯಸಾಧನಗಳನ್ನು

ಕೈಗೊಂಡಿರಲೇಬೇಕು. ಅನಂತರವೂ ಆ ವಿಶೇಷಲೋಕಗಳಲ್ಲಿರುವಾಗ ಆತ್ಮಪ್ರಶಂಸೆ, ಅಸೂಯೆ, ದ್ವೇಷಾದಿಗಳನ್ನು ಸಾಧಿಸಿದರೆ ಅಲ್ಲಿಂದ ಬೇಗನೆ ಹಿಂದಿರುಗಬೇಕಾಗುವದು. ಆದ್ದರಿಂದ ಪುಣ್ಯಲೋಕಗಳಲ್ಲಿರುವಾಗಲೂ ವರುಣನು ನಮ್ಮನ್ನು ದೋಷಗಳಿಂದ ಬಿಡಿಸಿ ಕಾಪಾಡಲಿ—ಎಂದು ಕೇಳಿದೆ.

**ಓಂ ॥ ಆರ್ದ್ರಂ ಜ್ವಲತಿ ಜ್ಯೋತಿರಹಮಸ್ಮಿ । ಜ್ಯೋತಿರ್ಜ್ವಲತಿ ಬ್ರಹ್ಮಾಹಮಸ್ಮಿ । ಯೋಽಹಮಸ್ಮಿ ಬ್ರಹ್ಮಾಹಮಸ್ಮಿ । ಅಹಮಸ್ಮಿ ಬ್ರಹ್ಮಾಹಮಸ್ಮಿ । ಅಹಮೇವಾಹಂ ಮಾಂ ಜುಹೋಮಿ ಸ್ವಾಹಾ ॥**

ಈ ಮಂತ್ರಭಾಗವನ್ನು ಕರ್ಮಾಂಗವಾಗಿ ಆಚಮನಕ್ಕೆ ಉಪಯೋಗಿಸಬೇಕೆಂದು ಭಾಷ್ಯಕಾರರು ಸೂಚಿಸಿದ್ದಾರೆ. ಸ್ನಾನಮಾಡಿದ ಅನಂತರ ಮಾಡಬೇಕಾದ ಆಚಮನಮಂತ್ರವಿದು. ಶರೀರದ ಒಳಭಾಗವನ್ನೂ ಜಲದೇವತೆಯು ಶುಚಿಗೊಳಿಸಲು ಆಚಮನವು ಉಪಯೋಗವಾಗುತ್ತದೆ. ಸೃಷ್ಟಿಯ ಆದಿಕಾಲದಲ್ಲಿ ಜಲವೇ ಮೊದಲು ಬ್ರಹ್ಮನಿಂದ ಉಂಟಾಯಿತು. ಅದನ್ನು ಆರ್ದ್ರವೆಂದು ಕರೆಯಲಾಗಿದೆ. ನೀರು ಯಾವಾಗಲು ಒದ್ದೆಯಾಗಿರುತ್ತದೆ. ಆದರೆ ಅದನ್ನು ಒಳಹೊಕ್ಕಿರುವ ಪರಮಾತ್ಮಚೈತನ್ಯವು ಆ ತತ್ತ್ವವನ್ನು ತೇಜೋಮಯವಾಗಿ ಮಾಡಿರುವದು. ಜಲದಿಂದ ಉಂಟಾದ ಜೀವರುಗಳೆಲ್ಲರೂ ಆ ಭಗವಂತನ ತೇಜಸ್ಸಿನಿಂದ ಕೂಡಿಯೇ ಇರುವರು. ಇಂಥ ಜ್ಯೋತಿಯು ನಾನಾಗಿರುವೆನು—ಎಂದು ಋಷಿಯು ತಿಳಿಸುತ್ತಿದಾನೆ. ಅಷ್ಟೇ ಅಲ್ಲ, 'ಸದಾ ಬೆಳಗುತ್ತಿರುವ ಜ್ಯೋತಿಯೇ ಬ್ರಹ್ಮವೆನಿಸಿರುವದು. ಅಂಥ ಬ್ರಹ್ಮವು ನಾನಾಗಿರುವೆನು. ಏಕೆಂದರೆ ಬ್ರಹ್ಮದಿಂದಲೇ ಹೊರಬಂದಿರುವ ನಾನು—ಮಣ್ಣಿನಿಂದಲೇ ಹೊರಬಂದಿರುವ ಮಡಕೆಯು ಮಣ್ಣೇ ಆಗಿರುವಂತೆ—ಬ್ರಹ್ಮವಾಗಿದ್ದುಕೊಂಡೇ ಇರುವೆನು. ಹಿಂದೆ 'ನಾನು' ಎನಿಸಿಕೊಂಡಾಗ ಜೀವಭಾವದಿಂದ ಕೂಡಿದವನಾಗಿ ಅಜ್ಞಾನವಶದಿಂದ ಬ್ರಹ್ಮಕ್ಕಿಂತ ನಾನು ಬೇರೆಯೆಂದು ತಿಳಿದಿದ್ದೆನು. ಆದರೆ ಈಗ ವಿವೇಕಜ್ಞಾನವುಂಟಾಗಿರುವದರಿಂದ ಹಿಂದೆಯೂ ಬ್ರಹ್ಮವೇ ಆಗಿದ್ದೆನೆಂದೂ ಈಗಲೂ ಬ್ರಹ್ಮವಾಗಿದ್ದೇನೆಂದೂ ತಿಳಿದಿರುತ್ತೇನೆ.' ಇದರಿಂದ ಸಿದ್ಧವಾಗುವದೇನೆಂದರೆ: 'ನನ್ನ ಬ್ರಹ್ಮತ್ವವು ಹೊಸದಾಗಿ ಬಂದದ್ದಲ್ಲ, ಇದ್ದಂಥ ಸ್ವರೂಪವನ್ನೇ ಈಗ ತಿಳಿವಳಿಕೆಯ ಮೂಲಕ ಪಡೆದುಕೊಂಡಿದ್ದೇನೆ. ಹೀಗೆ ಎಂದೆಂದೂ ಬ್ರಹ್ಮವಾಗಿರುವ ನಾನು ನನ್ನನ್ನು ನನ್ನಲ್ಲಿಯೇ ಹೋಮ ಮಾಡಿಕೊಳ್ಳುವೆನು—ಎಂದರೆ ಕುಡಿಯುವ ನೀರು, ನಾನು, ಆಚಮನವೆಂಬ ಕರ್ಮ—ಎಲ್ಲವೂ ನಾನಾದ ಬ್ರಹ್ಮವೇ ಆಗಿದೆ'—ಎಂದರ್ಥ. ಬ್ರಹ್ಮಕ್ಕಿಂತ ಬೇರೆಯಾದದ್ದು ಏನೇನೂ ಇರುವದಿಲ್ಲ—ಎಂದು ತನ್ನ

ಬ್ರಹ್ಮಾನುಭವವನ್ನು ಋಷಿಯು ಇಲ್ಲಿ ಪ್ರಕಟಮಾಡಿರುತ್ತಾನೆ. ಈ ಮಂತ್ರಭಾಗವು ಕರ್ಮಾಂಗವಾಗಿರುವಂತೆ ಕಂಡರೂ ನಿಜವಾದ ತತ್ತ್ವಜ್ಞಾನವನ್ನೇ ಹೊರಪಡಿಸುತ್ತಿದೆ. ಜ್ಞಾನದಲ್ಲಿ ಕರ್ಮಗಳೆಲ್ಲವೂ ಮುಕ್ತಾಯವಾಗುತ್ತವೆ–ಎಂಬ ಗೀತಾವಾಕ್ಯವೂ ಈ ಅಭಿಪ್ರಾಯವನ್ನು ದೃಢಗೊಳಿಸುತ್ತದೆ. ದೇಹದೊಳಗೆ ಇರುವ ಪ್ರಾಣಾದಿ ದೇವತೆಗಳಿಗೆ ಜಲರೂಪವಾದ ಹವಿಸ್ಸು ಅರ್ಪಿಸಲ್ಪಡುವದೇ ಆಚಮನವೆನಿಸುತ್ತದೆ–ಎಂದಭಿಪ್ರಾಯ.

**ಓಂ ॥ ಅಕಾರ್ಯಕಾರ್ಯವಕೀರ್ಣೀ ಸ್ತೇನೋ ಭ್ರೂಣಹಾ ಗುರು ತಲ್ಪಗಃ । ವರುಣೋಽಪಾಮಘಮರ್ಷಣಸ್ತಸ್ಮಾತ್ ಪಾಪಾತ್ ಪ್ರಮುಚ್ಯತೇ । ರಜೋ ಭೂಮಿಸ್ತ್ವಮಾಗ್ಂ ರೋದಯಸ್ವ ಪ್ರವದಂತಿ ಧೀರಾಃ ॥**

ಈ ಮಂತ್ರವು ಆಚಮನಾನಂತರ ಮತ್ತೊಮ್ಮೆ ನೀರಿನಲ್ಲಿ ಮುಳುಗುಹಾಕುವಾಗ ಹೇಳತಕ್ಕದ್ದಾಗಿದೆ. ಇದು ಕೂಡ ವರುಣದೇವನ ಪ್ರಾರ್ಥನೆಯಾಗಿದೆ. ಪಾಪಗಳಲ್ಲಿ ಐದನ್ನು ಮಹಾಪಾಪಗಳೆನ್ನುವರು. ಇವುಗಳನ್ನಾಗಲಿ, ಉಳಿದ ಪಾಪಗಳನ್ನಾಗಲಿ– ಮಾಡಿದವನೂ ವರುಣನ ಕೃಪೆಯಿಂದ ಶುದ್ಧನಾಗಬಹುದಾಗಿದೆ. ಹೇಗೆಂದರೆ ಮಾಡಬಾರದ್ದನ್ನು ಮಾಡುವದೇ **ಅಕಾರ್ಯಕಾರಿತ್ವವು.** ಪರಸ್ತ್ರೀಗಮನ ಮಾಡುವದೇ **ಅವಕೀರ್ಣಿತ್ವವು.** ಬ್ರಾಹ್ಮಣನ ಚಿನ್ನವನ್ನು ಕದಿಯುವದೇ **ಸ್ತೈನ್ಯವು.** ವೇದವಿದನಾದ ಬ್ರಾಹ್ಮಣನನ್ನಾಗಲಿ, ಗರ್ಭದಲ್ಲಿರುವ ಶಿಶುವನ್ನಾಗಲಿ ಕೊಲ್ಲುವದು **ಭ್ರೂಣಹತ್ಯೆಯು.** ಗುರುವಾದ ಆಚಾರ್ಯನ ಪತ್ನಿಯನ್ನು ಗಮನಮಾಡುವದೇ **ಗುರುತಲ್ಪಗಮನವು.** ಈ ಐದನ್ನೂ ಮಹಾಪಾಪಗಳೆನ್ನುವರು. ಇವುಗಳನ್ನು ಮಾಡಿದವರಿಗೆ ಅತಿದೀರ್ಘಕಾಲದ ವರೆವಿಗೂ ರೌರವಾದಿನರಕಗಳಲ್ಲಿ ಶಿಕ್ಷೆಯಾಗುವದು. ಯಮನು ಇಂಥ ಪಾಪಿಗಳನ್ನೆಲ್ಲ ಶಿಕ್ಷಿಸುವನು. ಆದರೆ ವರುಣನನ್ನು ಆಶ್ರಯಿಸಿದವನಿಗೆ ಇಂಥ ಪಾಪಗಳು ಕೂಡ ಪರಿಹಾರವಾಗುವವು. ಜಲಾಭಿಮಾನಿಯಾದ ವರುಣನು ಪಾಪಗಳೆಲ್ಲದರಿಂದಲೂ ಪಾತಕಿಗಳನ್ನು ಬಿಡಿಸುವ ಸಾಮರ್ಥ್ಯವುಳ್ಳವನು. ಆ ಅಘಮರ್ಷಣನು ನಮ್ಮನ್ನು ಎಲ್ಲಾ ಪಾತಕಗಳಿಂದಲೂ ಬಿಡುಗಡೆ ಮಾಡಲಿ; ನರಕಭಯದಿಂದ ಕಾಪಾಡಲಿ–ಎಂದು ಕೇಳಿಕೊಳ್ಳಲಾಗಿದೆ. ಅನಂತರ ಪರಮಾತ್ಮನನ್ನು ಕುರಿತು ಭಕ್ತನು ಪ್ರಾರ್ಥಿಸುತ್ತಿದಾನೆ. 'ಎಲೈ ಭಗವಂತನೆ, ನಾನು ರಜೋಭೂಮಿಯು–ಎಂದರೆ ಪಾಪಗಳಿಗೆ ಆಶ್ರಯನು. ಆದರೂ ನೀನು ನನ್ನನ್ನು ಅಳುವಂತೆ ಮಾಡಬೇಡ. (ಇಲ್ಲಿನ–ಎಂಬುದನ್ನು ಅಧ್ಯಾಹಾರ ಮಾಡಿಕೊಂಡು ನ ರೋದಯಸ್ವ–ದುಃಖಗೊಳಿಸಬೇಡ–ಎಂದರ್ಥ ಮಾಡಬೇಕು.) ಏಕೆಂದರೆ ನಿನ್ನನ್ನು ಆಶ್ರಯಿಸಿರುವದರಿಂದ ನನ್ನ ಪಾಪಗಳನ್ನು ಕಳೆದು ಅವುಗಳ ಫಲವನ್ನು ನಾನು ಊಟಮಾಡದಂತೆ ಮಾಡಿಬಿಡು. ಬಲ್ಲವರೂ ಶಾಸ್ತ್ರಪಾರಂಗತರೂ ಹೀಗೆ

ಹೇಳುತ್ತಾರಾದ್ದರಿಂದ ನಾನೂ ಹಾಗೆಯೇ ಬೇಡಿಕೊಳ್ಳುವೆನು. ನನ್ನನ್ನು ಸಮಸ್ತಪಾಪಗಳಿಂದಲೂ ಮೇಲೆತ್ತಿ ಉದ್ಧಾರಮಾಡು' ಎಂದು ಕೇಳಿಕೊಂಡಿರುತ್ತಾನೆ. ಹೀಗೆ ವರುಣದೇವನಿಗೆ ಅಪರಿಮಿತವಾದ ಪಾಪಪರಿಹಾರಶಕ್ತಿಯಿರುವದರಿಂದಲೇ ವರುಣನ ಸ್ಥೂಲಶರೀರವಾದ ಜಲವನ್ನು ಪ್ರತಿದಿನವೂ ಬೆಳಗ್ಗೆ ಎದ್ದ ಕೂಡಲೇ ಆಶ್ರಯಿಸಿ ಅವಗಾಹನಸ್ನಾನ ಮಾಡಿ ಪರಿಶುದ್ಧರಾಗಬೇಕು–ಎಂದಭಿಪ್ರಾಯ.

ಈಗ ಸ್ನಾನವಾದ ಮೇಲೆ ಜಪಿಸಬೇಕಾದ ಮಂತ್ರಗಳನ್ನು ತಿಳಿಸುತ್ತಾರೆ–

**ಓಂ ॥ ಆಕ್ರಾಂತ್ಸಮುದ್ರಃ ಪ್ರಥಮೇ ವಿಧರ್ಮನ್ ಜನಯನ್ ಪ್ರಜಾ ಭುವನಸ್ಯ ರಾಜಾ । ವೃಷಾ ಪವಿತ್ರೇ ಅಧಿ ಸಾನೋ ಅವ್ಯೇ ಬೃಹತ್ ಸೋಮೋ ವಾವೃಧೇ ಸುವಾನ ಇಂದುಃ ॥**

ಇಲ್ಲಿ ಸಮುದ್ರನೆಂದರೆ ಪರಮಾತ್ಮನೆಂದೂ ಅರ್ಥಮಾಡಲಾಗಿದೆ. ಸಮುದ್ರವು ಯಾವಾಗಲೂ ನೀರಿನಿಂದ ತುಂಬಿರುವಂತೆ ಭಗವಂತನು ಆನಂದಪೂರ್ಣನಾಗಿರುವನು. ಹಾಗೂ ವಿಧರ್ಮನೂ ಆಗಿರುವನು. ವಿಧರ್ಮನೆಂದರೆ ಪ್ರಾಣಿಗಳು ಹಿಂದಿನ ಕಲ್ಪದಲ್ಲಿ ಮಾಡಿರುವ ವಿವಿಧವಾದ ಕರ್ಮಗಳಿಗೆ ಫಲವನ್ನು ಕೊಡುವದಕ್ಕಾಗಿ ಈ ಕಲ್ಪದಲ್ಲಿ ಅವುಗಳನ್ನು ಬೋಧಗೊಳಿಸುವವನು–ಎಂದರ್ಥ. ಮತ್ತು ಭುವನಗಳಿಗೆಲ್ಲ, ಲೋಕಗಳಿಗೆಲ್ಲ ಅವನು ರಾಜನಾಗಿರುವನು. ಸೃಷ್ಟಿಯ ಆದಿಕಾಲದಲ್ಲಿ ಪ್ರಜೆಗಳನ್ನು ಉಂಟುಮಾಡುತ್ತಿರುವವನೂ ಆಗಿರುವನು. ಜಗತ್ತನ್ನೆಲ್ಲ ಆಕ್ರಮಿಸಿಕೊಂಡೂ ಇರುವನು. ಇಂಥ ಭಗವಂತನು ಭಕ್ತರಿಗೆ ಇಷ್ಟಾರ್ಥಗಳನ್ನು ಮಳೆಗರೆಯುವವನೂ ಆಗಿರುವನು. ಇವನನ್ನು ಪವಿತ್ರವಾದ ಹೃದಯವೆಂಬ ದೇಹಾವಯವದಲ್ಲಿ ಚಿಂತಿಸಬೇಕು. ಇಡಿಯ ಶರೀರದಲ್ಲೆಲ್ಲ ಹೃದಯವು–ಹೇಗೆ ಬೆಟ್ಟದ ತಪ್ಪಲು ಪರಿಶುದ್ಧವಾಗಿರುವದೋ ಹಾಗೆ–ಪವಿತ್ರಪ್ರದೇಶವಾಗಿದೆ. ಅದರಲ್ಲಿ ಉನ್ನತಸ್ಥಾನದಲ್ಲಿ ಭಗವಂತನಿರುವನು. ಆ ಸ್ಥಳವು ಧ್ಯಾನಮಾಡುವವರನ್ನು ಕಾಪಾಡುವದರಿಂದ 'ಅವ್ಯ'ವೆನಿಸಿರುವುದು. ಅಂಥ ಜಾಗದಲ್ಲಿ ಉಮಾಸಹಿತನಾದ ಶಿವನಾದ ಮಹಾದೇವನು ಸೋಮನೆನಿಸಿ ವಾಸಿಸುತ್ತಿರುವನು. ಅವನು ಪ್ರಜೆಗಳ ಮನದಲ್ಲಿಯೂ ಸಾಕ್ಷಿಯಾಗಿದ್ದು ಧರ್ಮಾಧರ್ಮಗಳನ್ನು ಪ್ರೇರಿಸುತ್ತಿರುವನು. ಈ ಸೋಮನು ಬೃಹದಾಕಾರವಾಗಿ ಬೆಳೆದಿರುವನು. ಚಂದ್ರನಂತೆ ಆಹ್ಲಾದಕರನಾಗಿರುವನು. ಹೀಗೆಂದು ಸಾಧಕನು ಹೃದಯದಲ್ಲಿ ಚಿಂತಿಸುತ್ತಿರಬೇಕು–ಎಂದು ಈ ಮಂತ್ರದ ಅರ್ಥವು. ಜೀವನು ಗುರೂಪದೇಶದಿಂದ ತನ್ನ ಹೃದಯಪುಂಡರೀಕದಲ್ಲಿ ಸದಾ ಸನ್ನಿಹಿತನಾಗಿರುವ ತನ್ನ ಆತ್ಮನೇ ಆದ ಪರಬ್ರಹ್ಮವನ್ನು ಮೇಲೆ ಹೇಳಿದ ವಿಶೇಷಣಗಳ ಸಹಿತವಾಗಿ ಚಿಂತಿಸಿದ್ದೇ ಆದರೆ ತಾನೂ ಆ ಸ್ವರೂಪವನ್ನೇ ಪಡೆದು ಕೃತಾರ್ಥನಾಗುವನು–ಎಂದಭಿಪ್ರಾಯ.

# ದುರ್ಗಾಸೂಕ್ತ

ಈಗ ಎರಡನೆಯ ಅನುವಾಕವು ಪ್ರಾರಂಭವಾಗುತ್ತದೆ. ಈ ಅನುವಾಕವನ್ನು ದುರ್ಗಾಸೂಕ್ತವೆಂದು ಕರೆಯುತ್ತಾರೆ. ಇಲ್ಲಿ ದುರ್ಗಾದೇವಿಯ ಸ್ತುತಿಯೂ ಹಾಗೆಯೇ ಅಗ್ನಿದೇವನ ಸ್ತುತಿಯೂ ಇರುತ್ತದೆ. ಈ ಇಬ್ಬರೂ ದೇವತೆಗಳೂ ಮಾನವನನ್ನು ಹೊರಗಿನ ಹಾಗೂ ಒಳಗಿನ ಶತ್ರುಗಳಿಂದ ರಕ್ಷಿಸಬಲ್ಲವರಾಗಿರುತ್ತಾರೆ. ಆದ್ದರಿಂದ ಕಷ್ಟಪರಿಹಾರವನ್ನು ಬಯಸುವವನು ಈ ಸೂಕ್ತದಿಂದ ದೇವತಾಪ್ರಾರ್ಥನೆಯನ್ನು ಕೈಗೊಳ್ಳಬೇಕು. ಈಗ ಮೊದಲನೆಯ ಮಂತ್ರವನ್ನು ವಿಚಾರಮಾಡೋಣ:

**ಓಂ ||   ಜಾತವೇದಸೇ ಸುನವಾಮ ಸೋಮಮರಾತೀಯತೋ**
**ನಿದಹಾತಿ ವೇದಃ । ಸ ನಃ ಪರ್ಷದತಿ ದುರ್ಗಾಣಿ ವಿಶ್ವಾ**
**ನಾವೇವ ಸಿಂಧುಂ ದುರಿತಾತ್ಯಗ್ನಿಃ ||**

ಇದು ಅಗ್ನಿದೇವನನ್ನು ಪ್ರಾರ್ಥಿಸುವ ಮಂತ್ರವಾಗಿದೆ. ಅಗ್ನಿಯೆಂದರೆ ಯಾವನು ಮಾನವರನ್ನು ಅಗ್ರಸ್ಥಾನಕ್ಕೆ ಎಂದರೆ ಹೆಚ್ಚಿನ ಪದವಿಗೆ ಒಯ್ಯುವನೋ ಅವನು–ಎಂದರ್ಥ. ಆತನಿಗೆ ಜಾತವೇದನೆಂದೂ ಹೆಸರಿದೆ. ಏಕೆಂದರೆ ಏನೇನು ಕರ್ಮಗಳು ಪ್ರಾಣಿಗಳಿಂದ ಮಾಡಲ್ಪಡುವವೋ ಅವುಗಳನ್ನೆಲ್ಲ ಅರಿಯುವವನಾಗಿರುವನು. ಜಗತ್ತಿನಲ್ಲಿ ನಡೆಯುವ ಕರ್ಮಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ದೇವತೆಗಳ ಗುಂಪಿನಲ್ಲಿ ಅಗ್ನಿಯೂ ಒಬ್ಬನಾಗಿರುವನು. ಇಂಥ ಜಾತವೇದನಿಗಾಗಿ ನಾವು ಸೋಮರಸವನ್ನು ಹಿಂಡಿ ಸಿದ್ಧಗೊಳಿಸೋಣ. ಅವನಿಗೆ ಅರ್ಪಿಸುವ ಸಲುವಾಗಿ ಸೋಮವನ್ನು ಸಂಗ್ರಹಿಸೋಣ–ಎಂದರ್ಥ. ಈ ಎಲ್ಲವನ್ನೂ ಬಲ್ಲ ಅಗ್ನಿದೇವನು ಯಾರು ನಮ್ಮನ್ನು ದ್ವೇಷಿಸಲು ಹೊರಟಿರುವರೋ ಅಂಥವರನ್ನು ಚೆನ್ನಾಗಿ ಸುಟ್ಟು ಬೂದಿಮಾಡುವನು. ಮತ್ತು ಅವನು ನಮ್ಮನ್ನು ಎಲ್ಲಾ ಆಪತ್ತುಗಳಿಂದಲೂ ದಾಟಿಸುವವನಾಗಿರುವನು–ಎಂದರೆ ಸಂಕಟಗಳನ್ನು ನಾಶಗೊಳಿಸುವವನಾಗಿರುವನು. ನಾವಿಕನು ಹೇಗೆ ದೋಣಿಯ ಸಹಾಯದಿಂದ ನದಿಯನ್ನು ದಾಟಿಸುವನೋ ಹಾಗೆ ಈ ದೇವನು ಕಷ್ಟಗಳ ಸಮೂಹವೆಂಬ ನದಿಯನ್ನು ತನ್ನ ಕೃಪಾರೂಪವಾದ ತೆಪ್ಪದಿಂದ ದಾಟಿಸುವನು–ಎಂದರ್ಥ. ಶತ್ರುಗಳನ್ನು ಪರಿಹರಿಸುವದರ ಜೊತೆಗೆ ಸಂಕಟಗಳಿಂದಲೂ ಪಾರುಮಾಡಲಿ–ಎಂದಭಿಪ್ರಾಯ. ವೇದದ ಎಲ್ಲಾ ಶಬ್ದಗಳೂ ಪರಮಾತ್ಮನನ್ನೇ ಹೇಳುವದರಿಂದ ಅಗ್ನಿಶಬ್ದಕ್ಕೂ ಭಗವಂತನೆಂದೇ ಅರ್ಥ. ಆ ಭಗವಂತನನ್ನು ಬಳಿಸಾರಿದವರಿಗೆ ಕಷ್ಟಗಳು ಇಲ್ಲವಾಗುವವು. ಶತ್ರುಗಳೂ ಪರಾಜಿತರಾಗುವರು. ಇಲ್ಲಿ ಹೊರಗಿನ ಶತ್ರುಗಳಂತೆಯೇ ಕಾಮಕ್ರೋಧಮಾತ್ಸರ್ಯಾದಿ

ಒಳಗಿನ ಶತ್ರುಗಳನ್ನೂ ಗ್ರಹಿಸಬೇಕು. ಅಗ್ರಪದವಿಯೆಂದರೆ ಮೋಕ್ಷವು. ಅದನ್ನು ಪಡೆಯಲು ವಿಘ್ನಗಳು ಬಹಳವಾಗಿರುವವು. ಅವು ಒಳಗೂ ಹೊರಗೂ ತೋರಿಕೊಳ್ಳುತ್ತಲೇ ಇರುವವು. ಅಂತ ವಿಘ್ನಪರಂಪರೆಗಳಿಂದಲೂ ಕಡೆಹಾಯಿಸಿ ಕಾಪಾಡುವಂತೆ ಇಲ್ಲಿ ಅಗ್ನಿರೂಪನಾದ ಭಗವಂತನನ್ನು ಪ್ರಾರ್ಥಿಸಲಾಗಿದೆ.

**ಓಂ ॥ ತಾಮಗ್ನಿವರ್ಣಾಂ ತಪಸಾ ಜ್ವಲಂತೀಂ ವೈರೋಚನೀಂಕರ್ಮ ಫಲೇಷು ಜುಷ್ಟಾಮ್ । ದುರ್ಗಾಂ ದೇವೀಂ ಶರಣಮಹಂ ಪ್ರಪದ್ಯೇ ಸುತರಸಿ ತರಸೇ ನಮಃ ॥**

ಇದು ನೇರಾಗಿ ದುರ್ಗಾದೇವಿಯನ್ನೇ ಪ್ರಾರ್ಥಿಸುವ ಮಂತ್ರವಾಗಿದೆ. ಪರಮಾತ್ಮನ ಕ್ರಿಯಾಶಕ್ತಿಯನ್ನೇ ದುರ್ಗೆಯೆಂದು ಪುರಾಣಗಳಲ್ಲಿ ವರ್ಣಿಸಿದೆ. ಜ್ಞಾನಶಕ್ತಿಯನ್ನು ಸರಸ್ವತಿಯೆಂದೂ, ಜಗದ್ರಕ್ಷಣಶಕ್ತಿಯನ್ನು ಲಕ್ಷ್ಮಿಯೆಂದೂ ಕರೆಯುತ್ತಾರೆ. ಒಟ್ಟಿನಲ್ಲಿ ಬೇರೆ ಬೇರೆಯ ಹೆಸರುಗಳಿಂದ ವರ್ಣಿಸಿದ್ದರೂ ಶಕ್ತಿಯು ಒಂದೇ ಎಂದು ತಿಳಿಯಬೇಕು. ಕಡೆಯಲ್ಲಿ ವಿಚಾರಮಾಡಿದಾಗ ಬೆಂಕಿಯೂ ಬಿಸಿಯೂ ಒಂದೇ ಆಗಿರುವಂತೆ ಶಕ್ತಿವಂತನೂ ಶಕ್ತಿಯೂ ಒಂದೇ ತತ್ತ್ವವಾಗಿರುತ್ತದೆ. ಪ್ರಕೃತದಲ್ಲಿ ಶಕ್ತಿಸಂಪ್ರದಾಯದವರು ನಿರೂಪಿಸುವಂತೆ ದುರ್ಗಾ ಎಂಬ ಹೆಸರಿನ ಶಕ್ತಿದೇವಿಯು ಜನರ ದುರ್ಗಮವಾದ ಕಷ್ಟಕಾರ್ಪಣ್ಯಗಳನ್ನು ಪರಿಹರಿಸುವ ದೇವತೆಯಾಗಿರುತ್ತಾಳೆ. ಆಕೆಯನ್ನು ನಾನು ಶರಣುಹೋಗುವೆನು–ಎಂದರ್ಥ. ಆ ದೇವಿಯಾದರೊ, ಅಗ್ನಿಯಂತೆ ಹಳದಿ–ಕೆಂಪು ಮಿಶ್ರವಾದ ಬಣ್ಣವುಳ್ಳವಳು ಮತ್ತು ತನ್ನ ಮಹಿಮೆಯಿಂದ ಶತ್ರುಗಳನ್ನೆಲ್ಲ ಸುಡುತ್ತಿರುವವಳು ಹಾಗೂ ವಿರೋಚನನ ಅಂಶಭೂತಳಾಗಿರುವಳು. ಇಲ್ಲಿ ವಿರೋಚನ ನೆಂದರೆ–ವಿಶೇಷವಾಗಿ ರೋಚನ–ಎಂದರೆ ಪ್ರಕಾಶಮಾನನಾಗಿರುವವನು–ಭಗವಂತನು–ಎಂದರ್ಥ. ಇಂಥ ಭಗವಂತನ ಅಂಶಭೂತಳಾಗಿರುವವಳೇ ದುರ್ಗೆಯು. ಮತ್ತು ಈಕೆಯು ಸ್ವರ್ಗಾದಿಕರ್ಮಫಲಗಳನ್ನು ಬಯಸುವಂಥ ಸಾಧಕರಿಂದ ಸೇವಿಸಲ್ಪಡುವವಳೂ ಆಗಿರುವಳು. ಭೋಗವೂ ಮೋಕ್ಷವೂ ಈ ದುರ್ಗಾದೇವಿಯ ಉಪಾಸಕರಿಗೆ ಅವಶ್ಯವಾಗಿ ದೊರಕುವವು. ಆದ್ದರಿಂದ ಸಕಾಮರೂ ನಿಷ್ಕಾಮರೂ ಈ ದೇವಿಯನ್ನೇ ಆರಾಧಿಸುವರು. ಇಂಥ ಜಗನ್ಮಾತೆಯನ್ನು ಕುರಿತು ಭಕ್ತನು ಹೀಗೆಂದು ಸ್ತುತಿಸುತ್ತಿದಾನೆ: ''ಎಲೌ ದುರ್ಗಾದೇವಿಯೆ, ನೀನು ಸಂಸಾರಸಮುದ್ರವನ್ನು ದಾಟಿಸುವ ಸಾಧನಳಾಗಿರುವೆ. ನಾನು ನಿನಗೆ ಶರಣು ಬಂದಿರುವೆನು. ತಾರಯಿತ್ರಿಯಾದ ನಿನಗೆ ನಮಸ್ಕಾರಗಳು'', ಈ ಸೂಕ್ತದಲ್ಲಿ ಮೊದಲನೆಯ ಮಂತ್ರದಲ್ಲಿ ಅಗ್ನಿಯನ್ನೂ ಎರಡನೆಯ ಮಂತ್ರದಲ್ಲಿ ದುರ್ಗೆಯನ್ನೂ ಸ್ತೋತ್ರಮಾಡಿದ್ದರೂ, ಮುಂದಿನ ಮಂತ್ರಗಳಲ್ಲಿ ಮತ್ತೆ

ಅಗ್ನಿಯನ್ನೂ ಇಂದ್ರನನ್ನೂ ಸ್ತೋತ್ರಮಾಡಿದೆಯಾದರೂ ಏಳು ಮಂತ್ರಗಳ ಒಟ್ಟು ಸೂಕ್ತವನ್ನೇ ದುರ್ಗಾಸೂಕ್ತವೆಂದು ಕರೆದಿರುವದರ ಔಚಿತ್ಯವನ್ನು ಪ್ರಾಜ್ಞರು ವಿಚಾರಮಾಡಬೇಕು. ಪರಮಾರ್ಥದೃಷ್ಟಿಯಿಂದ ಅಗ್ನಿಯೆಂದರೂ, ಇಂದ್ರನೆಂದರೂ, ದುರ್ಗೆಯೆಂದರೂ ಒಂದೇ. ಪರಬ್ರಹ್ಮದ ನಾಮಗಳಾಗಿರುವದರಿಂದ ಸ್ತ್ರೀ–ಪುಲ್ಲಿಂಗಗಳಿಂದ ಕೂಡಿರುವ ಶಬ್ದಗಳಿಂದ ಸ್ತುತಿಸಿದ್ದರೂ ಒಬ್ಬನೇ ಪರಮಾತ್ಮನನ್ನು ಕುರಿತ ಸ್ತುತಿಯಿದು–ಎಂದು ಸಮನ್ವಯ ಮಾಡಿಕೊಳ್ಳಬಹುದಾಗಿದೆ.

**ಓಂ ॥ ಅಗ್ನೇ ತ್ವಂ ಪಾರಯಾ ನವ್ಯೋ ಅಸ್ಮಾನ್ ಸ್ವಸ್ತಿಭಿರತಿ**
**ದುರ್ಗಾಣಿ ವಿಶ್ವಾ । ಪೂಶ್ಚ ಪೃಥ್ವೀ ಬಹುಲಾ ನ ಉರ್ವೀ**
**ಭವಾ ತೋಕಾಯ ತನಯಾಯ ಶಂಯೋಃ ॥**

ಇದು ಅಗ್ನಿಯನ್ನು ಸ್ತುತಿಸುವ ಮಂತ್ರವಾಗಿದೆ. "ಎಲೌ ಅಗ್ನಿದೇವನೆ, ನೀನು ನವ್ಯನು–ಎಂದರೆ ಜರಾಮರಣಗಳಿಲ್ಲದವನಾದ್ದರಿಂದ ಯಾವಾಗಲೂ ನೂತನ ನೆನಿಸಿರುವೆ. ಆದ್ದರಿಂದ ನಮ್ಮನ್ನು ಎಲ್ಲಾ ಕಷ್ಟಕರವಾದ ಸನ್ನಿವೇಶಗಳಿಂದಲೂ ದಾಟಿಸುವವನಾಗು. ಹಾಗೂ ಕ್ಷೇಮಕರವಾದ ಉಪಾಯಗಳಿಂದ ಸಂಸಾರದ ಆಚೆಯ ದಡವನ್ನು ಮುಟ್ಟಿಸುವವನಾಗು. ನಿನ್ನ ಅನುಗ್ರಹದಿಂದ ನಾವು ಇರುವ ಜಾಗವು ಎಂದರೆ ಗ್ರಾಮವು ನಿವಾಸಯೋಗ್ಯವಾಗಲಿ; ಹಾಗೂ ಭೂಮಿಯು ಪೈರುಗಳನ್ನು ಹೆಚ್ಚಾಗಿ ಬೆಳೆಯಲು ತಕ್ಕಂತೆ ವಿಸ್ತೀರ್ಣವಾಗಲಿ. ಕೃಷಿಭೂಮಿಯ ವಿಸ್ತಾರವು ಹೆಚ್ಚಲಿ–ಎಂದರ್ಥ. ಮತ್ತು ನೀನು ನಮ್ಮ ಮಕ್ಕಳಿಗೆ ಸುಖಮಿಶ್ರವಾದ ಜೀವನವನ್ನು ದಯಪಾಲಿಸು. **ಶಂ** ಎಂದರೆ ಅತಿ ಹೆಚ್ಚಿನ ಸುಖವು. ಅದನ್ನು ಜೀವನದಲ್ಲಿ ಒಂದುಗೂಡಿಸುವವನಾಗು" ಎಂದು ಮಂತ್ರಾರ್ಥವು. ಅಗ್ನಿಯನ್ನು ಆರಾಧನೆ ಮಾಡುವವರು ಬ್ರಾಹ್ಮಣರು. ಅಂಥ ಅಗ್ನಿಹೋತ್ರಿಗಳು ಯಾವ ಗ್ರಾಮದಲ್ಲಿ ವಾಸವಾಗಿರುವರೋ ಅಲ್ಲಿ ಅವರು ಮಾಡುವ ಸತ್ಕರ್ಮ ಹಾಗೂ ದೇವತಾಪ್ರಾರ್ಥನೆಗಳಿಂದ ಗ್ರಾಮಕ್ಕೆ ಒದಗಿಬರಬಹುದಾದ ಕಷ್ಟಕೋಟಲೆಗಳು ಪರಿಹಾರವಾಗುವವು. ಭೂಮಿಯು ಪೈರುಪಚ್ಚೆಗಳಿಂದ ಕಂಗೊಳಿಸುವಳು. ಗ್ರಾಮದ ಜನರಿಗೆಲ್ಲ ಕ್ಷೇಮವೂ ಸುಭಿಕ್ಷವೂ ನೀರೋಗತ್ವವೂ ಶಾಂತಿಸಮಾಧಾನಗಳೂ ಲಭಿಸುವವು. ಆದರೆ ಈ ಕಾಲಕ್ಕೆ ಇಂಥ ಮಂತ್ರಜ್ಞರೂ ಕರ್ಮಠರೂ ಆದ ಬ್ರಾಹ್ಮಣರು ಕಣ್ಮರೆಯಾಗುತ್ತಿದಾರೆ. ಗ್ರಾಮಗಳೆಲ್ಲ ಕುಗ್ರಾಮಗಳಾಗುತ್ತಿವೆ. ಜನರು ಹೆಚ್ಚುಹೆಚ್ಚಿನ ಕಷ್ಟಗಳಿಗೆ ಗುರಿಯಾಗುತ್ತಿದಾರೆ. ಯಾವ ರಾಜಕೀಯ ವ್ಯವಸ್ಥೆಯೂ ಅವರನ್ನು ಸುಖಿಗಳನ್ನಾಗಿ ಪರಿವರ್ತಿಸುತ್ತಿಲ್ಲ. ದೇವತಾನುಗ್ರಹವಿಲ್ಲದೆ ಸುಖವು ಹೇಗೆ ತಾನೆ ದೊರಕೀತು? ಈ ದೃಷ್ಟಿಯಿಂದಲಾದರೂ

ವೈದಿಕಸಂಸ್ಕೃತಿಯ ಪ್ರಚಾರವನ್ನು ಕೈಗೊಂಡು ಗ್ರಾಮಗಳನ್ನು ಉದ್ಧರಿಸಲೂ ಜನರೂ ಆಡಳಿತಮಾಡುವವರೂ ಪ್ರಯತ್ನಿಸಬೇಕು. ಬ್ರಾಹ್ಮಣನು ಸದ್ಬ್ರಾಹ್ಮಣನಾಗಿ ಬಾಳುವಂತೆಯೂ ಗ್ರಾಮವಾಸವನ್ನು ಬಿಡದಂತೆಯೂ ಸನ್ನಿವೇಶಗಳನ್ನು ಕಲ್ಪಿಸಿಕೊಡಬೇಕು. ಹೀಗೆ ಬ್ರಾಹ್ಮಣ್ಯರಕ್ಷಣೆ ಮಾಡಿದರೆ ಜಗದ್ರಕ್ಷಣೆಯು ತಾನಾಗಿಯೇ ಆಗಲಿದೆ. ಗ್ರಾಮವು ಬ್ರಹ್ಮಭೂಯಿಷ್ಠವಾಗಲಿ–ಎಂದು ಈಗಲೂ ಹರಿಸುವದುಂಟು.

**ಓಂ ||  ವಿಶ್ವಾನಿ ನೋ ದುರ್ಗಹಾ ಜಾತವೇದಃ ಸಿಂಧುಂ ನ ನಾವಾ ದುರಿತಾತಿಪರ್ಷಿ । ಅಗ್ನೇ ಅತ್ರಿವನ್ ಮನಸಾ ಗೃಣಾನೋಽಸ್ಮಾಕಂ ಬೋಧ್ಯವಿತಾ ತನೂನಾಮ್ ||**

ಈ ಮಂತ್ರವೂ ಅಗ್ನಿಯ ಪ್ರಾರ್ಥನಾರೂಪವಾಗಿದೆ. ''ಎಲೈ ಜಾತವೇದನೆ, ನೀನು ದುರ್ಗಹಾ–ಎನಿಸಿರುವೆ. ಏಕೆಂದರೆ ಎಲ್ಲಾ ಸಂಕಟಗಳನ್ನೂ ನಾಶಗೊಳಿಸುವವನಾಗಿರುವೆ. ಆ ನೀನು ಸಮುದ್ರವನ್ನು ಹಡಗಿನಿಂದ ದಾಟುವಂತೆ ನಮ್ಮನ್ನು ದುರಿತಗಳಿಂದ ಪಾರುಮಾಡುತ್ತಿರುವೆ. ಇಲ್ಲಿನ ನಾವಾ–ಎಂಬಲ್ಲಿ ನಕಾರವನ್ನು ಉಪಮಾರ್ಥದಲ್ಲಿ ತೆಗೆದುಕೊಂಡು ನಾವಮಿವ–ಹಡಗಿನಂತೆ ಎಂದರ್ಥ ಮಾಡಬೇಕು. ಇನ್ನು ಎಲೈ ಅಗ್ನಿದೇವನೆ, ನೀನು ಅತ್ರಿಮಹರ್ಷಿಯಂತೆ ಮನಸ್ಸಿನಿಂದ ಯಾವಾಗಲೂ ಪಾಪಿಗಳ ಉದ್ಧಾರವನ್ನು ಚಿಂತಿಸುತ್ತಾ ಹಾಗೂ ಮಾತಿನಿಂದಲೂ ಪ್ರಕಟಗೊಳಿಸುತ್ತಾ ನಮ್ಮೆಲ್ಲರ ಶರೀರಗಳನ್ನೂ ಕಾಪಾಡುವವನಾಗಿ ಎಚ್ಚರವಾಗಿರು'' ಎಂದು ಮಂತ್ರಾರ್ಥವು. ಪೂರ್ವಕಾಲದಲ್ಲಿ ಅತ್ರಿಯೆಂಬ ಮಹರ್ಷಿಯೊಬ್ಬನಿದ್ದನು. ಅವನು ಹೆಸರಿಗೆ ತಕ್ಕಂತೆ ಅ–ತ್ರಿ–ಎಂದರೆ ತ್ರಿಗುಣಗಳ ಕಾಟವಿಲ್ಲದ ತ್ರಿಗುಣಾತೀತನಾಗಿದ್ದನು. ಅವನು ಯಾವಾಗಲೂ ಹೀಗೆ ಧ್ಯಾನಮಾಡುತ್ತಿದ್ದನು: ''ಎಲ್ಲರೂ ಸುಖಿಗಳೂ ರೋಗರಹಿತರೂ ಆಗಿರಲಿ; ಎಲ್ಲರೂ ಮಂಗಳವನ್ನು ಪಡೆಯಲಿ. ಎಲ್ಲರೂ ಎಲ್ಲೆಲ್ಲಿಯೂ ಆನಂದದಿಂದಿರಲಿ'' ಎಂದು ಪ್ರಾರ್ಥಿಸುತ್ತಿದ್ದನು. ಅವನಿಗೆ ಯಾರ ಮೇಲೆಯೂ ದ್ವೇಷವಿರಲಿಲ್ಲ, ಎಲ್ಲರ ಹಿತವನ್ನೇ ಬಯಸುತ್ತಿದ್ದನು. ಆತನ ಪತ್ನಿಯ ಹೆಸರು ಅನಸೂಯಾ–ಎಂದಿತ್ತು. ಹೆಸರಿಗೆ ತಕ್ಕಂತೆಯೇ ಅವಳೂ ಅಸೂಯಾರಹಿತಳಾಗಿದ್ದಳು. ಸಾಮಾನ್ಯವಾಗಿ ಸ್ತ್ರೀಯರಲ್ಲಿ ಅಸೂಯೆಯು ನೆಲೆಸಿರುವದು ಹೆಚ್ಚು. ಈ ಶಬ್ದವೂ ಸ್ತ್ರೀಲಿಂಗವೇ ಆಗಿದೆ. ಆದರೆ ಅನಸೂಯೆಯು ಮಾತ್ರ ಸಾಮಾನ್ಯಸ್ತ್ರೀಯರಿಗಿಂತ ಅತ್ಯಂತ ವಿಲಕ್ಷಣಳಾಗಿದ್ದಳು. ಇಂಥ ಅತ್ರಿ–ಅನಸೂಯಾ ದಂಪತಿಗಳ ಪುತ್ರನಾಗಿ ಭಗವಂತನೇ ದತ್ತಾತ್ರೇಯನೆಂಬ ಹೆಸರಿನಿಂದ ಅವತಾರಮಾಡಿದನು. ಋಗ್ವೇದದಲ್ಲಿಯೂ ಅತ್ರಿಯ ಹೆಸರು

ಗಾನಮಾಡಲ್ಪಟ್ಟಿದೆ. ಹೀಗೆ ತ್ರಿಗುಣಾತೀತರಾದ ಋಷಿಗಳು ಮಾತ್ರವೇ ಲೋಕ ಕಲ್ಯಾಣವನ್ನು ಸದಾ ಬಯಸುವವರಾಗಿರುವರು. ಇಂಥ ಅತ್ರಿಯಂತೆ ಅಗ್ನಿದೇವನೂ ನಮ್ಮೆಲ್ಲರ ಕ್ಷೇಮವನ್ನು ಗಾನಮಾಡುತ್ತಾ ನಮ್ಮನ್ನು ಮರೆಯದೆ ಕಾಪಾಡಲಿ–ಎಂದು ಅಭಿಪ್ರಾಯ.

ಓಂ ॥ ಪೃತನಾಜಿತಗ್ಂ ಸಹಮಾನಮುಗ್ರಮಗ್ನಿಗ್ಂ ಹುವೇಮ ಪರಮಾತ್ ಸಧಸ್ಥಾತ್ । ಸ ನಃ ಪರ್ಷದತಿ ದುರ್ಗಾಣಿ ವಿಶ್ವಾ ಕ್ಷಾಮದ್ದೇವೋ ಅತಿ ದುರಿತಾತ್ಯಗ್ನಿಃ ॥

ಇದು ಕೂಡ ಅಗ್ನಿದೇವನ ಸ್ತುತಿಯಾಗಿದೆ. ಶತ್ರುಸೇನೆಯನ್ನು ಪೃತನಾ ಎನ್ನುವರು. ಅದನ್ನು ಜಯಿಸುವವನು ಪೃತನಾಜಿತನು. ಸಹಮಾನನೆಂದರೆ ಶತ್ರುಗಳನ್ನು ಹಿಮ್ಮೆಟ್ಟಿಸುವವನು–ಎಂದರ್ಥ. ಈ ಎರಡು ಗುಣಗಳುಳ್ಳ ಉಗ್ರನೂ ಆದ ಅಗ್ನಿಯು ಉತ್ಕೃಷ್ಟವಾದ ದೇಶದಲ್ಲಿ ತನ್ನ ಸೇವಕರೊಡಗೂಡಿ ಇದ್ದುಕೊಂಡಿರುವನಷ್ಟೆ! ಅವನನ್ನು ಆಹ್ವಾನಿಸುವೆವು. ಅವನು ನಮ್ಮ ಅತಿ ಕಷ್ಟಕರವಾದ ಸನ್ನಿವೇಶಗಳನ್ನೆಲ್ಲ ನಾಶಗೊಳಿಸುವವನಾಗಲಿ ! ಮತ್ತು ಆ ಅಗ್ನಿದೇವನು ಅಪರಾಧಿಗಳಾದ ನಮ್ಮನ್ನು ಕ್ಷಮಿಸುವವನಾಗಿ ಅತಿ ದುರಿತಗಳನ್ನೆಲ್ಲ–ಎಂದರೆ ಬ್ರಹ್ಮಹತ್ಯೆಯಂಥ ಮಹಾಪಾಪಗಳನ್ನೆಲ್ಲ ನಾವು ಮೀರಿ ಶುದ್ಧರಾಗುವಂತೆ ಮಾಡಲಿ–ಎಂದರ್ಥ. ದೇವತೆಗಳನ್ನು ತಿರಸ್ಕರಿಸುವದೇ ಮಹಾಪಾಪವು. ಏಕೆಂದರೆ ದೇವತೆಗಳು ನಮ್ಮ ಕರ್ಮಗಳನ್ನು ನೋಡುತ್ತಾರೆ. ಅವರು ಎಲ್ಲೆಲ್ಲಿಯೂ ಇರುತ್ತಾರೆ–ಎಂಬ ಭಯವಿದ್ದರೆ ಮನುಷ್ಯನು ಪಾಪಗಳನ್ನು ಹೆಚ್ಚಾಗಿ ಮಾಡಲಾರನು. ದೇವತಾಸ್ಮರಣೆಯೇ ಅವರನ್ನು ಗೌರವಿಸುವಿಕೆಯು. ವಿಸ್ಮೃತಿಯೇ ತಿರಸ್ಕಾರವು. ಆದ್ದರಿಂದ ನಾವು ಪ್ರಮಾದವಿಲ್ಲದೆ ಅಗ್ನಿಯೆಂಬ ದೇವತೆಯನ್ನು ಆಹ್ವಾನಿಸಿ ಅವನನ್ನು ಆಹುತಿಗಳಿಂದ ತೃಪ್ತಿಗೊಳಿಸಿ ನಮ್ಮ ಕರ್ಮಗಳನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳಬೇಕು. ಆಗ ಅಗ್ನಿಯು ತನ್ನವರೊಡನೆ ನಮಗೆ ಒಲಿದು ಪ್ರಸನ್ನನಾಗಿ ನಮ್ಮ ಶತ್ರುಗಳನ್ನೆಲ್ಲ ಹಿಮ್ಮೆಟ್ಟಿಸುವನಲ್ಲದೆ ಕಷ್ಟಗಳನ್ನೂ ಪರಿಹರಿಸುವನು. ಪಾಪಗಳನ್ನೂ ಕಳೆಯುವನು–ಎಂದಭಿಪ್ರಾಯ.

ಓಂ ॥ ಪ್ರತ್ನೋಷಿ ಕಮೀಡ್ಯೋ ಅಧ್ವರೇಷು ಸನಾಚ್ಚ ಹೋತಾ ನವ್ಯಶ್ಚ ಸತ್ಸಿ । ಸ್ವಾಂ ಚಾಗ್ನೇ ತನುವಂ ಪಿಪ್ರಯಸ್ವಾಸ್ಮಭ್ಯಂ ಚ ಸೌಭಗಮಾಯಜಸ್ವ ॥

ಇದು ಕೂಡ ಅಗ್ನಿಯ ಸ್ತುತಿಯಾಗಿದೆ. "ಎಲೌ ಅಗ್ನಿಯೆ, ನೀನು ಯಜ್ಞಗಳಲ್ಲಿ ಸ್ತುತಿಸಲ್ಪಡುವವನಾಗಿರುವೆ. ಮತ್ತು ಸುಖವನ್ನು ಹೆಚ್ಚಾಗಿ ಕೊಡುವವನಾಗಿರುವೆ. ಸನಾತ್–ಎಂದರೆ ಕರ್ಮಫಲವನ್ನು ನೀಡುವವನಾಗಿ ನವ್ಯಃ ಎಂದರೆ ಹೊಗಳಲ್ಪಡುವವನಾಗಿರುವೆ. ಹಾಗೂ ಯಾಗ ಮಾಡುವ ಸ್ಥಳಗಳಲ್ಲಿ ಇದ್ದುಕೊಂಡಿರುವೆ. ಆದ್ದರಿಂದ ನಾವುಗಳು ಅರ್ಪಿಸುವ ಹವಿಸ್ಸುಗಳಿಂದ ನಿನ್ನ ಶರೀರವನ್ನೂ ಸಂತೋಷಗೊಳಿಸುವವನಾಗು. ನಮಗೂ ಶೋಭನವಾದ ಭಾಗ್ಯವನ್ನು ಎಲ್ಲಾ ಕಡೆಯಿಂದಲೂ ಕೊಡುವವನಾಗು" ಎಂದರ್ಥ. ಅಗ್ನಿಯನ್ನು ಯಜ್ಞನಾರಾಯಣನೆಂದೂ ಕರೆಯುವರು. ಎಲ್ಲಾ ಯಜ್ಞಗಳೂ ಅಗ್ನಿಯ ಅಧೀನವಾಗಿರುವವು. ಅಗ್ನಿಯೇ ಎಲ್ಲಾ ದೇವತೆಗಳು–ಎಂದೂ ಯಜುರ್ವೇದದಲ್ಲಿ ಸ್ತುತಿಸಿದೆ. ಈತನ ಅನುಗ್ರಹದಿಂದಲೇ ಯಜ್ಞಫಲವೂ ದೊರಕಬೇಕಾಗಿದೆ. ವಿರಾಡ್‌ರೂಪನಾದ ಈತನು ಸಮಸ್ತಪ್ರಾಣಿಗಳ ಶರೀರದಲ್ಲಿಯೂ ಇರುವನು. ಜಠರಾಗ್ನಿರೂಪದಿಂದಲೂ ದೇಹದ ಶಾಖರೂಪದಿಂದಲೂ ಎಲ್ಲಾ ಪ್ರಾಣಿಗಳಲ್ಲಿಯೂ ವ್ಯಾಪಿಸಿರುವನು. ಇವನಿಗೆ ಹವಿರರ್ಪಣವು ಪ್ರತಿದಿನವೂ ಆಗುತ್ತಿರುವದು. ನಾವು ಊಟಮಾಡುವ ಅನ್ನವೆಲ್ಲ ಇವನಿಗೆ ಅರ್ಪಿಸುವ ಹವಿಸ್ಸೇ ಆಗಿದೆ. ಹೀಗೆ ಎಲ್ಲಾ ನರರಿಂದಲೂ ಆರಾಧಿಸಲ್ಪಡುವ ಈತನು ತನ್ನ ಶರೀರವನ್ನು ತೃಪ್ತಿಗೊಳಿಸಿಕೊಂಡು ನಮಗೆಲ್ಲರಿಗೂ ಸೌಭಾಗ್ಯಪ್ರದನಾಗಲೆಂದು ಇಲ್ಲಿ ಬೇಡಿಕೊಳ್ಳಲಾಗಿದೆ.

**ಓಂ ॥ ಗೋಭಿರ್ಜುಷ್ಟಮಯುಜೋ ನಿಷಿಕ್ತಂ ತವೇಂದ್ರ ವಿಷ್ಣೋರನು ಸಂಚರೇಮ । ನಾಕಸ್ಯ ಪೃಷ್ಠಮಭಿಸಂವಸಾನೋ ವೈಷ್ಣವೀಂ ಲೋಕ ಇಹಮಾದಯಂತಾಮ್ ॥**

ಇದು ಇಂದ್ರನನ್ನು ಕುರಿತ ಸ್ತುತಿಯಾಗಿದೆ. 'ಎಲೈ ಇಂದ್ರನೆ, ನೀನು ಸರ್ವವ್ಯಾಪಕನಾದ್ದರಿಂದ ವಿಷ್ಣುವೆನಿಸಿರುವೆ. ಪಾಪಾದಿಗಳಿಂದ ದೂರನಾಗಿರುವೆಯಾಗಿ ಅಯುಜನೆನಿಸಿರುವೆ. ಇಂಥ ನಿನ್ನನ್ನು ನಾವು ಗೋವುಗಳ ಅಮೃತಧಾರೆಗಳಿಂದ ಕೂಡಿದ ಮಹಾಭಾಗ್ಯದ ಪ್ರಾಪ್ತಿಗಾಗಿ ಸೇವಿಸುವೆವು–ಎಂದರೆ ಪರಿಚರ್ಯೆಮಾಡುವೆವು. ಸ್ವರ್ಗೀಯರಾದ ದೇವತೆಗಳೆಲ್ಲರೂ ನನಗೆ ಇಷ್ಟಾರ್ಥಗಳನ್ನು ಕೊಡುವ ಮೂಲಕ ಸಂತೋಷಗೊಳಿಸಲಿ. ಭೂಲೋಕದಲ್ಲಿಯೂ ಉಳಿದ ಲೋಕಗಳಲ್ಲಿಯೂ ಪಡೆಯಬೇಕಾದ ಭೋಗಸುಖಗಳನ್ನು ವಿಷ್ಣುಭಕ್ತಿಸಂಪನ್ನನಾದ ನನಗೆ ಉಂಟು ಮಾಡಲಿ"– ಎಂದಭಿಪ್ರಾಯ. ಐಶ್ವರ್ಯವೆಂದರೆ ಕೇವಲ ಹಣವಲ್ಲ. ಗೋವುಗಳು, ಅಶ್ವಗಳು, ಧಾನ್ಯಗಳು, ಪರಿವಾರ ಸಂಪತ್ತು, ಗೃಹ, ರಾಜ್ಯ–ಇತ್ಯಾದಿ ರೂಪವಾಗಿದ್ದು

ಮನುಷ್ಯನಿಗೆ ಭೋಗ್ಯವಾಗಿರುವ ಎಲ್ಲಾ ವಸ್ತುಗಳನ್ನೂ ಒಳಗೊಂಡಿರುತ್ತದೆ. ಇಂಥ ಐಶ್ವರ್ಯಭೋಗವು ದೊರಕಬೇಕಾದರೆ ವಿಷ್ಣುಭಕ್ತಿಯು ಇರಬೇಕು. ಅನಂತರವೂ ಇಂದ್ರಾದಿ ದೇವತೆಗಳ ಪ್ರಸಾದಾನುಗ್ರಹಗಳೂ ಬೇಕು. ಆದ್ದರಿಂದ ಆ ದೇವತೆಗಳನ್ನೆಲ್ಲ ಆರಾಧಿಸಬೇಕಾಗುವದು. ಹೀಗೆ ಯಾರು ದೇವತಾಭಕ್ತಿನಿಷ್ಠರೂ ಸೇವಕರೂ ಆಗಿರುವರೋ ಅಂಥವರಿಗೆ ಇಂದ್ರನು ಎಲ್ಲಾ ವಿಧವಾದ ಐಶ್ವರ್ಯಗಳನ್ನೂ ಕೊಡುವನು. ಉಳಿದ ದೇವತೆಗಳೂ ಅವನನ್ನು ವರಪ್ರದಾನಗಳಿಂದ ಸಂತೋಷಗೊಳಿಸುವರು. ಅದಕ್ಕಾಗಿ ಇಲ್ಲಿ ಇಂದ್ರನನ್ನು ಪ್ರಾರ್ಥಿಸಲಾಗಿದೆ. ಇಲ್ಲಿಗೆ ದುರ್ಗಾಸೂಕ್ತವು ಪೂರೈಸಿರುತ್ತದೆ.

ಈಗ ಪಾಪಪರಿಹಾರದ ಮೂಲಕ ಅನ್ನವನ್ನು ಪಡೆದುಕೊಳ್ಳಲು ಇಚ್ಛಿಸುವವನಿಗಾಗಿ ಕೆಲವು ಹೋಮಮಂತ್ರಗಳನ್ನು ತಿಳಿಸುತ್ತಾರೆ. ಭೂಮಿಯನ್ನು ಶುದ್ಧಿಗೊಳಿಸುವದರಿಂದಾರಂಭಿಸಿ ತುಪ್ಪವನ್ನು ಸಂಸ್ಕಾರಮಾಡಿಕೊಳ್ಳುವವರೆಗಿನ ವಿಧಿಗಳನ್ನು ತನ್ನ ಗೃಹ್ಯಕರ್ಮಗಳಿಗಾಗಿ ಗೊತ್ತುಮಾಡಲ್ಪಟ್ಟಿರುವ ನಿಯಮದಂತೆಯೇ ಪೂರೈಸಿಕೊಂಡು ಅನಂತರ ಪ್ರಧಾನಾಹುತಿಗಳನ್ನು ಈ ಮಂತ್ರಗಳಿಂದ ಅರ್ಪಿಸಬೇಕು. ಮಂತ್ರಗಳಲ್ಲಿರುವ ಸೂಚನೆಯಂತೆ ತುಪ್ಪದಿಂದಲಾಗಲಿ, ತುಪ್ಪಮಿಶ್ರಿತವಾದ ಅನ್ನದಿಂದಲಾಗಲಿ ಹೋಮ ಮಾಡಬೇಕು. ಕಡೆಯಲ್ಲಿ ಹೋಮದ ಉತ್ತರಾಂಗವಿಧಿಯನ್ನೂ ತನ್ನ ಗೃಹ್ಯೋಕ್ತರೀತಿಯಿಂದ ಮಾಡಬೇಕು. ಈಗ ಪ್ರಧಾನಾಹುತಿ ಮಂತ್ರಗಳನ್ನು ತಿಳಿಸಲಾಗುವದು.

**ಓಂ ॥ ಭೂರನ್ನಮಗ್ನಯೇ ಪೃಥಿವ್ಯೈ ಸ್ವಾಹಾ ಭುವೋ ತನ್ನಂ**
**ವಾಯವೇ–(ಅ) ನ್ತರಿಕ್ಷಾಯ ಸ್ವಾಹಾ ಸುವರನ್ನಮಾದಿ**
**ತ್ಯಾಯ ದಿವೇ ಸ್ವಾಹಾ ಭೂರ್ಭುವಸ್ಸುವರನ್ನಂ ಚಂದ್ರಮಸೇ**
**ದಿಗ್ಭ್ಯಃ ಸ್ವಾಹಾ ನಮೋ ದೇವೇಭ್ಯಃ ಸ್ವಧಾ ಪಿತೃಭ್ಯೋ**
**ಭೂರ್ಭುವಸ್ಸುವರನ್ನಮೋಮ್ ॥**

ಭೂಃ ಭುವಃ ಸುವಃ–ಎಂಬಿವುಗಳನ್ನು ವ್ಯಾಹೃತಿಗಳೆಂದು ಕರೆಯುವರು. ಭೂಃ ಎಂಬುದು ಪೃಥಿವಿಗೆ ಅಧಿಷ್ಠಾನದೇವತೆಯು. ಹಾಗೆಯೇ ಭುವಃ ಎಂಬುದು ಅಂತರಿಕ್ಷಾಧಿಷ್ಠಾನದೇವತೆಯು. ಸುವಃ ಎಂಬಿದು ದ್ಯುಲೋಕಾಧಿಷ್ಠಾನದೇವತೆಯೆಂದು ತಿಳಿಯಬೇಕು. ಮತ್ತು ಪೃಥಿವಿಯೊಡನೆ ಅಗ್ನಿದೇವತೆಯನ್ನೂ ಅಂತರಿಕ್ಷದೊಡನೆ ವಾಯುವನ್ನೂ ದ್ಯುಲೋಕದೊಡನೆ ಆದಿತ್ಯನನ್ನೂ ಸೇರಿಸಿಕೊಳ್ಳಬೇಕು. ಅನಂತರ ಮೂರು

ಪರ್ಯಾಯಗಳಲ್ಲಿ ಹೋಮಮಾಡಿ ನಾಲ್ಕನೆಯ ಪರ್ಯಾಯಕ್ಕೆ ಈ ಎಲ್ಲಾ ದೇವತೆಗಳೊಡನೆ ಚಂದ್ರ, ದಿಗ್ದೇವತೆಗಳನ್ನೂ ಕೂಡಿಸಿಕೊಳ್ಳಬೇಕು. ಮೊದಲನೆಯ ಪರ್ಯಾಯದ ಮಂತ್ರಾರ್ಥವೂ ಹೀಗಿದೆ:– **ಭೂಃ** ಎಂಬ ಪೃಥಿವಿಯನ್ನಾಶ್ರಯಿಸಿರುವ ದೇವತೆಗೂ ಅಗ್ನಿದೇವನಿಗೂ ಹವಿರರ್ಪಣೆ ಮಾಡುವೆನು. ಆ ದೇವತೆಗಳು ನನಗೆ ಅನ್ನವನ್ನು ಕೊಡಲಿ–ಎಂದು ಕೇಳಲಾಗಿದೆ. ದೇವತೆಗಳು ಕೊಟ್ಟ ಅನ್ನವನ್ನೇ ಮತ್ತೆ ದೇವತೆಗಳಿಗೆ ನಾವು ಅರ್ಪಿಸಬೇಕಾಗಿದೆ. ಅವರು ಕೊಡಲಿಲ್ಲವಾದರೆ ನಾವು ಕರ್ಮಗಳನ್ನು ಮಾಡುವದಾದರೂ ಹೇಗಾದೀತು? ಆದ್ದರಿಂದ ದೇವತೆಗಳನ್ನು ನಾವು ಆರಾಧಿಸಿದರೆ ಅವರು ನಮಗೆ ಬೇಕಾದ ಇಷ್ಟಭೋಗಗಳನ್ನು ದಯಪಾಲಿಸುವರು. ಹೀಗೆ **ಭೂಃ** ಎಂಬ ದೇವತೆಗ ಅರ್ಪಿಸಿದ ಅನಂತರ ಎರಡನೆಯ ಪರ್ಯಾಯದಲ್ಲಿ **ಭುವಃ** ಎಂಬ ಅಂತರಿಕ್ಷದೇವತೆಗೂ ವಾಯುವಿಗೂ ಹವಿರರ್ಪಣೆಮಾಡಿ ಅನ್ನವನ್ನು ಕೊಡುವಂತೆ ಪ್ರಾರ್ಥಿಸಬೇಕು. ಮೂರನೆಯ ಪರ್ಯಾಯದಲ್ಲಿ ಸುವಃ ಎಂಬ ದ್ಯುಲೋಕದೇವತೆಗೂ ಆದಿತ್ಯನಿಗೂ ಹವಿರರ್ಪಣೆ ಮಾಡಬೇಕು. ಒಂದೊಂದು ಪರ್ಯಾಯಕ್ಕೂ ಎರಡೆರಡು ದೇವತೆಗಳನ್ನು ಹೇಳಿದ್ದರೂ ಅಗ್ನಿಯನ್ನಾಶ್ರಯಿಸಿರುವ ಪೃಥ್ವಿಗೂ ಪೃಥಿವಿಯನ್ನಾಶ್ರಯಿಸಿರುವ ಅಗ್ನಿಗೂ ಹವಿರರ್ಪಣೆಯೆಂತ ತಿಳಿಯಬೇಕು. ಉಳಿದ ಪರ್ಯಾಯಗಳಲ್ಲಿಯೂ ಹೀಗೆಯೇ ಅರ್ಥಮಾಡಬೇಕು. ನಾಲ್ಕನೆಯ ಪರ್ಯಾಯದಲ್ಲಿ ಇಲ್ಲಿ ಪ್ರಸ್ತಾಪಿಸಿರುವ ಎಲ್ಲಾ ದೇವತೆಗಳೊಡನೆ ಚಂದ್ರ, ದಿಗ್ದೇವತೆಗಳಿಗೂ ಹವಿರರ್ಪಣೆಯನ್ನು ಮಾಡಿ ಅನ್ನಪ್ರದಾನ ಮಾಡುವಂತೆ ಕೇಳಿಕೊಳ್ಳಬೇಕು. ಕಡೆಯಲ್ಲಿ **ಸ್ವಿಷ್ಟಕೃತ್** ಎಂಬ ಹೋಮವನ್ನು ಪೂರೈಸಿ ಪೂರ್ವಾಭಿಮುಖವಾಗಿ ಕುಳಿತು **'ನಮೋದೇವೇಭ್ಯಃ'** ಎಂಬ ಮಂತ್ರದಿಂದ ದೇವತೆಗಳನ್ನು ನಮಸ್ಕರಿಸಬೇಕು. ಅನಂತರ ದಕ್ಷಿಣಾಭಿಮುಖವಾಗಿ ತಿರುಗಿಕೊಂಡು **'ಸ್ವಧಾ ಪಿತೃಭ್ಯಃ'** ಎಂದು ಪಿತೃಗಳನ್ನು ನಮಸ್ಕರಿಸಬೇಕು. ಮಂತ್ರದಲ್ಲಿ ಕಡೆಯಲ್ಲಿರುವ **'ಓಂ'** ಎಂಬಿದು ಭೂರಾದಿ ದೇವತೆಗಳು ಅನ್ನವನ್ನು ಕೊಡುತ್ತೇವೆಂದು ಒಪ್ಪಿಕೊಳ್ಳುವವರಾಗಲಿ– ಎಂಬರ್ಥದಲ್ಲಿ ಬಂದಿರುತ್ತದೆ. ಹೀಗೆ ಅನ್ನಕಾಮನಾದವನು ಮಾಡಬೇಕಾದ ಹೋಮಗಳನ್ನು ಇಲ್ಲಿ ಪ್ರಸ್ತಾಪಿಸಿದೆ. ಅನ್ನದಿಂದಲೇ ಪ್ರಾಣಧಾರಣೆಯೂ ಅನಂತರವೇ ಮುಕ್ತಿಗಾಗಿ ಮಾಡಬೇಕಾದ ಸಾಧನಗಳೂ ಸಾಧ್ಯವಾಗುವದರಿಂದ ಅನ್ನಪ್ರಾರ್ಥನೆಯು ಯುಕ್ತವಾಗಿಯೇ ಇದೆ.

ಇನ್ನು ಮುಂದೆ ಕೆಲವು ದೂರದವರೆಗೆ ಪಾಪಕ್ಷಯಾರ್ಥವಾದ ಮಂತ್ರಗಳನ್ನೇ ತಿಳಿಸಲಾಗುವದು. ಈ ಮಂತ್ರಗಳನ್ನು 'ಸ್ವಾಹಾ' ಎಂಬ ಶಬ್ದಸಂಯೋಗವಿರುವದರಿಂದ ಹೋಮಕ್ಕಾಗಿಯೂ ಬಳಸಬಹುದು. ಕೇವಲ ತುಪ್ಪದಿಂದಲೇ ಈ ಹೋಮಗಳನ್ನು ಮಾಡಬೇಕೆಂದು ಭಾಷ್ಯಕಾರರು ಸೂಚಿಸಿರುತ್ತಾರೆ.

ಓಂ ॥ ಭೂರಗ್ನಯೇ ಪೃಥಿವ್ಯೈ ಸ್ವಾಹಾ ಭುವೋ ವಾಯವೇಽನ್ತರಿ
ಕ್ಷಾಯ ಸ್ವಾಹಾ ಸುವರಾದಿತ್ಯಾಯ ದಿವೇ ಸ್ವಾಹಾ ಭೂರ್ಭುವ
ಸ್ಸುವಶ್ಚಂದ್ರಮಸೇ ದಿಗ್ಭ್ಯಃ ಸ್ವಾಹಾ ನಮೋ ದೇವೇಭ್ಯಃ ಸ್ವಧಾ
ಪಿತೃಭ್ಯೋ ಭೂರ್ಭುವಸ್ಸುವರಗ್ನ ಓಮ್ ॥

ಈ ಮಂತ್ರಗಳಿಂದ ಆಚರಿಸುವ ಹೋಮಗಳನ್ನು ಮಹಾವ್ಯಾಹೃತಿ ಹೋಮಗಳೆಂದು ಕರೆಯುತ್ತಾರೆ. ನಾರಾಯಣನೆಂಬ ಹೆಸರಿನ ಋಷಿಯು ಈ ಮಂತ್ರಗಳ ದ್ರಷ್ಟಾರನೆಂದೂ ಈ ಭಾಗವನ್ನು ನಾರಾಯಣೀಯವೆಂದೂ ಕರೆಯುವದುಂಟು. ಇವುಗಳಲ್ಲಿ ಪರಬ್ರಹ್ಮದ ವಿಭೂತಿಗಳಾದ ಭೂಮಿ, ಆಕಾಶ, ಅಗ್ನಿ, ವಾಯು, ಸೂರ್ಯ–ಮೊದಲಾದ ದೇವತೆಗಳನ್ನು ಕುರಿತು ಮಾಡುವ ಹೋಮಗಳಿವೆ. ಆರಾಧಕನು ಈ ದೇವತೆಗಳನ್ನು ಕಡೆಯಲ್ಲಿ ಪರಬ್ರಹ್ಮದೊಡನೆ ಒಂದುಗೂಡಿಸಿ ತನ್ನನ್ನೂ ಬ್ರಹ್ಮವಾಗಿಯೇ ಭಾವಿಸಿ ಕೃತಾರ್ಥನಾಗುವನು. ಇಂಥ ಮಂತ್ರಗಳನ್ನು ಚಿತ್ತಶುದ್ಧಿಗಾಗಿ ಜಪಮಾಡುವ ಪದ್ಧತಿಯೂ ಇದೆ. ಪ್ರಕೃತ ಹಿಂದಿನ ಮಂತ್ರದಂತೆಯೇ ಇಲ್ಲಿಯೂ ಅಗ್ನಿ, ಪೃಥಿವಿ, ವಾಯು ಮುಂತಾದ ದೇವತೆಗಳಿಗೆ ಹವಿರರ್ಪಣೆ ಮಾಡುವ ವಿಧಿಯಿದೆ. ದೇವತೆಗಳು, ಪಿತೃಗಳಿಗೆ ನಮಸ್ಕಾರವೂ ಹೇಳಲ್ಪಟ್ಟಿದೆ. ಕಡೆಯಲ್ಲಿ ಅಗ್ನಿದೇವತೆಯು ಈ ನನ್ನ ಪ್ರಾರ್ಥನೆಗೆ ಓಗೊಡಲಿ–ಎಂಬ ಆಹ್ವಾನವಿದೆ. ಇದೇ ರೀತಿಯಾಗಿರುವ ಮುಂದಿನ ಮಂತ್ರವನ್ನು ನೋಡಿರಿ.

ಓಂ ॥ ಭೂರಗ್ನಯೇ ಚ ಪೃಥಿವ್ಯೈ ಚ ಮಹತೇ ಚ ಸ್ವಾಹಾ ಭುವೋ
ವಾಯವೇ ಚಾಽನ್ತರಿಕ್ಷಾಯ ಚ ಮಹತೇ ಚ ಸ್ವಾಹಾ ಸುವ
ರಾದಿತ್ಯಾಯ ಚ ದಿವೇ ಚ ಮಹತೇ ಚ ಸ್ವಾಹಾ ಭೂರ್ಭುವ
ಸ್ಸುವಶ್ಚಂದ್ರಮಸೇ ಚ ನಕ್ಷತ್ರೇಭ್ಯಶ್ಚ ದಿಗ್ಭ್ಯಶ್ಚ ಮಹತೇ ಚ
ಸ್ವಾಹಾ ನಮೋ ದೇವೇಭ್ಯಃ ಸ್ವಧಾ ಪಿತೃಭ್ಯೋಭೂರ್ಭು–
ವಸ್ಸುವರ್ಮಹರೋಮ್ ॥

ಈ ಮಂತ್ರಗಳು ಮಹತ್ತ್ವಕಾಮನಾದವನಿಗೆ ಹೋಮಕ್ಕಾಗಿ ಹೇಳಲ್ಪಟ್ಟಿವೆ. ಲೋಕದಲ್ಲಿ ಬಹಳ ಜನರಿಗೆ ತಾವು ದೊಡ್ಡವರೆನಿಸಿಕೊಳ್ಳಬೇಕೆಂದೂ ಕೀರ್ತಿಶಾಲಿಗಳಾಗಬೇಕೆಂದೂ ಆಸೆಯಿರುತ್ತದೆ. ಆದರೆ ಆ ದೊಡ್ಡತನವೂ ದೇವತೆಗಳು ಅನುಗ್ರಹಿಸಿದರೆ ಮಾತ್ರ ಮಾನವರಿಗೂ ದೊರಕುತ್ತದೆ. ಅದಕ್ಕಾಗಿ ಇಲ್ಲಿಯೂ ಅಗ್ನಿ, ಪೃಥಿವಿ– ಮುಂತಾಗಿ ಕೆಲವು ದೇವತೆಗಳನ್ನು ಹೆಸರಿಸಿ ಅವರುಗಳ ಮಹತ್ತ್ವವನ್ನು

ಕೊಂಡಾಡಿ, ಆ ದೇವತೆಗಳಿಗೆಲ್ಲ ಆಹುತಿಗಳನ್ನು ಸಮರ್ಪಿಸಿ ಪ್ರಾರ್ಥಿಸಲಾಗಿದೆ. ಹಿಂದಿನ ಪರ್ಯಾಯದಲ್ಲಿ ಸ್ತುತಿಸಲ್ಪಟ್ಟಿರುವ ದೇವತೆಗಳ ಜೊತೆಗೆ ನಕ್ಷತ್ರದೇವತೆಗಳನ್ನೂ ಇಲ್ಲಿ ಸೇರಿಸಲಾಗಿದೆ. ಮಾನವನ ದೃಷ್ಟಿಯಿಂದ ನಿಜವಾಗಿಯೂ ಈ ಎಲ್ಲಾ ದೇವತೆಗಳೂ ಹೆಚ್ಚಿನವರೇ ಸರಿ. ಒಂದೊಂದು ದೇವತೆಯೂ ತನ್ನ ಮಹತ್ತ್ವದಿಂದ ಉಳಿದ ದೇವತೆಗಳನ್ನು ಮೀರಿಸುವಂತಿರುವದು. ಕೆಲವು ವೇಳೆ ಪೃಥಿವೀ ದೇವತೆಗಿಂತ ಆದಿತ್ಯ ದೇವತೆಯೇ ಮಿಗಿಲಾದುದೆಂಬಂತೆ ಕಂಡುಬಂದರೂ ಪೃಥಿವಿಯ ಹೆಚ್ಚುಗಾರಿಕೆಯು ಪೃಥಿವಿಗೇ ಮೀಸಲಾಗಿರುವದು. ಹೇಗೆಂದರೆ ಪೃಥಿವಿಯಲ್ಲಿ ಜೀವರುಗಳು ವಾಸ ಮಾಡುವಂತೆ ಆದಿತ್ಯನಲ್ಲಿ ವಾಸಮಾಡಲಾರರು. ಹಾಗೆಯೇ ಆದಿತ್ಯನು ಲೋಕಗಳನ್ನೆಲ್ಲ ಬೆಳಗುವಂತೆ ಪೃಥಿವಿಯು ಬೆಳಗಲಾರದು. ಹೀಗೆ ಆಯಾ ದೇವತೆಯ ಮಹತ್ತ್ವವನ್ನು ಸ್ವತಂತ್ರವಾಗಿಯೇ ಕಂಡುಕೊಂಡು ಒಟ್ಟಿನಲ್ಲಿ ಎಲ್ಲಾ ದೇವತೆಗಳನ್ನೂ ತನಗೆ ಹೆಚ್ಚಿನ ಮಹತ್ತ್ವವನ್ನು ಕೊಡುವಂತೆ ಕೇಳಿಕೊಳ್ಳುವದೇ ಈ ಮಂತ್ರದ ಅಭಿಪ್ರಾಯವಾಗಿದೆ. ಕಡೆಯಲ್ಲಿ ಮಹಃ ಎಂಬ ವ್ಯಾಹೃತಿದೇವತೆಯು ನನ್ನ ಕರೆಗೆ ಓಗೊಡಲಿ–ಎಂದು ಪ್ರಾರ್ಥಿಸಲಾಗಿದೆ.

ಈ ಮಹಾವ್ಯಾಹೃತಿಗಳ ವಿಷಯಕ್ಕೆ ಛಾಂದೋಗ್ಯೋಪನಿಷತ್ತಿನಲ್ಲಿ ಹೀಗಿದೆ. ಪ್ರಜಾಪತಿಯು ಭೂಲೋಕ, ಅಂತರಿಕ್ಷಲೋಕ, ಸ್ವರ್ಗಲೋಕಗಳ ಸಾರವೇನೆಂದು ಕಂಡುಹಿಡಿಯಲು ಅವುಗಳನ್ನು ಕುರಿತು ಚಿಂತಿಸಿದನು. ಆಗ ಅವನಿಗೆ ಋಗ್ಯಜುಸ್ಸಾಮಗಳೆಂಬ ವೇದತ್ರಯಗಳು ಸಾರಭೂತವಾಗಿ ದೊರೆತವು. ಪುನಃ ಆ ವೇದಗಳ ಸಾರವನ್ನು ಕಂಡುಹಿಡಿಯಲು ತಪಸ್ಸುಮಾಡಿದನು. ಆಗ ಭೂಃ, ಭುವಃ ಸುವಃ–ಎಂಬ ವ್ಯಾಹೃತಿಗಳು ದೊರೆತವು. ಮುಂದೆ ಇವುಗಳ ಸಾರವೇನಿರಬಹುದು? ಎಂದು ಧ್ಯಾನಿಸಲಾಗಿ ಓಂಕಾರವು ಸಾರತಮವಾಗಿ ದೊರಕಿತು–ಎಂದು ವರ್ಣಿಸಿರುತ್ತದೆ. ಪ್ರಕೃತ–ವೇದೋಕ್ತಕರ್ಮಗಳನ್ನು ಅನುಷ್ಠಾನ ಮಾಡುವಾಗ ಏನಾದರೂ ನ್ಯೂನಾತಿರೇಕಗಳು ಕಂಡುಬಂದರೆ ಈ ವ್ಯಾಹೃತಿಗಳಿಂದ ತುಂಬಬೇಕು–ಎಂದು ತಿಳಿಸಲಾಗಿದೆ. ಹೇಗೆ ಒಂದು ಪಾತ್ರೆಯು ತೂತುಬಿದ್ದರೆ ಅದನ್ನು ಸೀಸದಿಂದ ಬೆಸೆಯುವರೋ ಹಾಗೆ ಕರ್ಮಚ್ಛಿದ್ರಗಳನ್ನು ಈ ಮಹಾವ್ಯಾಹೃತಿಗಳಿಂದ ಪೂರ್ಣಗೊಳಿಸಬೇಕು–ಎಂದು ಅಭಿಪ್ರಾಯ. ಮತ್ತು ಪಾಪಗಳನ್ನು ತೊಳೆದುಕೊಳ್ಳಲು, ತಪ್ಪುಗಳಿಗೆ ಪ್ರಾಯಶ್ಚಿತ್ತಮಾಡಿಕೊಳ್ಳಲು, ಹಾಗೂ ಅನ್ನ , ಮಹತ್ತ್ವಾದಿಗಳನ್ನು ಪಡೆಯಲು ಸಹ ಈ ವ್ಯಾಹೃತಿಗಳು ವಿನಿಯೋಗವಾಗುವವು–ಎಂದೂ ಶಾಸ್ತ್ರದಲ್ಲಿ ತಿಳಿಸಲಾಗಿದೆ. ಬಹಳ ಮಟ್ಟಿಗೆ ಎಲ್ಲಾ ಹೋಮಗಳ ಸಮಾಪ್ತಿಯ ಮುಂಚೆ ಈ ವ್ಯಾಹೃತಿಗಳಿಂದ ಹೋಮ ಮಾಡುವ ಪದ್ಧತಿಯಿದೆ. ಹೀಗೆ ವ್ಯಾಹೃತಿಗಳು ಹೆಚ್ಚಿನ ಮಹತ್ತ್ವವುಳ್ಳವಾಗಿರುವವು–ಎಂದೂ ತಿಳಿಸಿದಂತಾಗಿದೆ.

ಈಗ ವಿಶೇಷವಾಗಿ ಮುಮುಕ್ಷುವಾದವನು ತನಗೆ ಮುಕ್ತಿಪ್ರಾಪ್ತಿಗೆ ಒದಗಬಹುದಾದ ಪ್ರತಿಬಂಧನಿವಾರಣೆಗಾಗಿ ಹಾಗೂ ಪಾಪಗಳಕ್ಷಯಕ್ಕಾಗಿ ಮಾಡಬೇಕಾದ ಹೋಮಮಂತ್ರಗಳನ್ನು ಹೇಳಲಾಗುತ್ತದೆ.

## ಪಾಪಕ್ಷಯಮಂತ್ರಗಳು

**ಓಂ ॥ ಪಾಹಿ ನೋ ಅಗ್ನ ಏನಸೇ ಸ್ವಾಹಾ । ಪಾಹಿ ನೋ ವಿಶ್ವವೇದಸೇ ಸ್ವಾಹಾ । ಯಜ್ಞಂ ಪಾಹಿ ವಿಭಾವಸೋ ಸ್ವಾಹಾ । ಸರ್ವಂ ಪಾಹಿ ಶತಕ್ರತೋ ಸ್ವಾಹಾ ॥**

"ಎಲೌ ಅಗ್ನಿದೇವನೆ, ಜ್ಞಾನವುಂಟಾಗುವದಕ್ಕೆ ಅಡ್ಡಿಯಾಗುತ್ತಿರುವ ಪಾಪಗಳಿಂದ ನಮ್ಮನ್ನು ಕಾಪಾಡುವವನಾಗು. ಹಾಗೂ ವಿಶ್ವವೇದನಕ್ಕಾಗಿ ಎಂದರೆ ಸಂಪೂರ್ಣವಾದ ತತ್ತ್ವಜ್ಞಾನವು ಸಿದ್ಧಿಯಾಗುವದಕ್ಕಾಗಿ ಅದಕ್ಕೆ ತಕ್ಕ ಸಾಧನಸಂಪತ್ತುಗಳನ್ನು ಒದಗಿಸುವ ಮೂಲಕ ಕಾಪಾಡುವವನಾಗು. ವಿಭಾವಸುವೆನಿಸಿರುವ ನೀನು–ವಿಶೇಷವಾದ ಕಾಂತಿಯನ್ನೇ ವಿಭಾ ಎನ್ನುವರು. ಅದನ್ನೇ ವಸು–ಎಂದರೆ ಐಶ್ವರ್ಯವನ್ನಾಗಿ ಹೊಂದಿರುವವನೇ ವಿಭಾವಸುವು. ಅಂಥ ನೀನು–ನಾವು ತತ್ತ್ವವನ್ನು ತಿಳಿಯುವ ಇಚ್ಛೆಯಿಂದ ಕೈಗೊಂಡಿರುವ ಸಾಧನಗಳೆಂಬ ಯಜ್ಞವನ್ನು ಕಾಪಾಡುವವನಾಗು; ಎಂದರೆ ಸಾಧನಗಳು ಅಡೆತಡೆಗಳಲ್ಲಿದೆ ಸಾಗುವಂತಾಗಿ ಫಲಸಿದ್ಧಿಯಾಗುವಂತೆ ಅನುಗ್ರಹಿಸು ಮತ್ತು ಶತಕ್ರತುವೆ, ಎಂದು ಅಗ್ನಿಯನ್ನೇ ಇಲ್ಲಿ ಸಂಬೋಧಿಸಲಾಗಿದೆ. ನೂರಾರು ಸಂಖ್ಯೆಯ ಯಜ್ಞಗಳು ಕೂಡ ಯಾವ ಅಗ್ನಿದೇವನ ಸಹಾಯದಿಂದ ನೆರವೇರಿಸಲ್ಪಡುವವೋ ಅವನೇ ಶತಕ್ರತುವೆನಿಸುವನು. ಇಂಥ ಶತಕ್ರತುವಾದವನೆ, ನೀನು ಜ್ಞಾನಸಾಧನಗಳಾದ ಶಾಸ್ತ್ರಗಳು, ಗುರು–ಮುಂತಾದದ್ದೆಲ್ಲವನ್ನೂ ಕಾಪಾಡುವವನಾಗು" ಎಂದರ್ಥ. ಇದು ಕರ್ಮವೇ ಆಗಿದ್ದರೂ ಜ್ಞಾನಕ್ಕೆ ಉಪಕಾರವಾಗುವಂತೆ ಅನುಷ್ಠಾನಮಾಡತಕ್ಕದ್ದಾದ್ದರಿಂದ ಜ್ಞಾನಕಾಂಡದಲ್ಲಿಯೇ ಸೇರಿಸಲಾಗಿದೆ. ಪುರುಷಸಂಸ್ಕಾರಕರ್ಮಗಳು ಎಂದರೆ ಮನುಷ್ಯನ ಪಾಪಗಳನ್ನು ಹೋಗಲಾಡಿಸಿ ಚಿತ್ತಶುದ್ಧಿಯನ್ನೂ ಜ್ಞಾನನಿಷ್ಠೆಗೆ ತಕ್ಕ ಅರ್ಹತೆಯನ್ನೂ ಕೊಡುವಂಥ ಕರ್ಮಗಳು ಹೀಗೆ ಉಪನಿಷದ್ಭಾಗಗಳಲ್ಲಿ ಅಡಕವಾಗಿರುವದುಂಟು. ಕರ್ಮಿಗಳಲ್ಲಿ ಆತ್ಮಯಾಜೀ, ದೇವಯಾಜೀ–ಎಂದು ಎರಡು ಪಂಗಡದವರಿರುತ್ತಾರೆ. ಆತ್ಮಯಾಜಿಯೆಂದರೆ ಕರ್ಮಗಳನ್ನು ತನ್ನ ಚಿತ್ತಶುದ್ಧಿಗಾಗಿ ಮಾಡುವವನು. ದೇವಯಾಜಿಯೆಂದರೆ ದೇವತೆಗಳನ್ನು ಸಂತೋಷಗೊಳಿಸಲು ಕರ್ಮಗಳನ್ನು

ಮಾಡುವವನು. ಇವರಲ್ಲಿ ದೇವಯಾಜಿಗಿಂತಲೂ ಆತ್ಮಯಾಜಿಯೇ ಶ್ರೇಷ್ಠನೆಂದು ಸ್ಮೃತಿಗಳಲ್ಲಿ ಹೊಗಳಿದೆ. ಮೊದಲು ನಾವು ದೇವಯಾಜಿಗಳಾಗಿಯೇ ಶಾಸ್ತ್ರೀಯ ಕರ್ಮಗಳನ್ನು ಆರಂಭಿಸುವೆವಾದರೂ ಅನಂತರ ಆತ್ಮಯಾಜಿಗಳಾಗಬೇಕಾದದ್ದೇ ನ್ಯಾಯವಾಗಿದೆ.

ಈಗ ಹಿಂದಿನ ಮಂತ್ರದಲ್ಲಿ ತಿಳಿಸಿರುವ ಪಾಪಕ್ಷಯಾರ್ಥವಾದ ಹೋಮವನ್ನು ಈ ಮುಂದಿನ ಮಂತ್ರಗಳಿಂದಲೂ ಮುಂದುವರೆಸಲು ತಿಳಿಸುತ್ತಿದಾರೆ:–

**ಓಂ ॥ ಪಾಹಿ ನೋ ಅಗ್ನ ಏಕಯಾ । ಪಾಹ್ಯುತ ದ್ವಿತೀಯಯಾ । ಪಾಹ್ಯೂರ್ಜಂ ತೃತೀಯಯಾ । ಪಾಹಿ ಗೀರ್ಭಿಶ್ಚತಸೃಭಿ– ರ್ವಸೋ ಸ್ವಾಹಾ ॥**

''ಎಲೈ ಅಗ್ನಿಯೆ, ವಸುವೆ, ನೀನು ಮೊದಲನೆಯದಾದ ಋಗ್ವೇದರೂಪವಾದ ಸ್ತುತಿಯಿಂದ ಸಂತುಷ್ಟನಾದವನಾಗಿ ನಮ್ಮನ್ನು (ಪಾಪಗಳಿಂದ ಉದ್ಧರಿಸಿ) ಕಾಪಾಡು. ಹಾಗೆಯೇ ಎರಡನೆಯದಾಗಿ ಯಜುರ್ವೇದಮಂತ್ರಗಳಿಂದ ಸ್ತುತಿಸಲ್ಪಟ್ಟವನಾಗಿ ನಮ್ಮನ್ನು ರಕ್ಷಿಸು. ಮತ್ತು ಮೂರನೆಯದಾದ ಸಾಮವೇದರೂಪವಾದ ಸ್ತೋತ್ರಗಳಿಂದ ಹೊಗಳಲ್ಪಟ್ಟವನಾಗಿ ನಮ್ಮ ಸಂಬಂಧವಾದ ಊರ್ಜವನ್ನು–ಎಂದರೆ ಅನ್ನರಸವನ್ನು ಕಾಪಾಡು. ನಾವು ಬೆಳೆಯುವ ಪೈರುಗಳು ಹಾಗೂ ನಮ್ಮ ಗೋವುಗಳಿಂದ ದೊರಕುವ ಹಾಲು, ತುಪ್ಪ–ಎಲ್ಲವನ್ನೂ ರಸವತ್ತಾಗಿಯೂ ಫಲವತ್ತಾಗಿಯೂ ಮಾಡಿ ನಮ್ಮನ್ನು ಪಾಲಿಸುವವನಾಗು. ಹಾಗೆಯೇ ಋಗ್ಯಜುಃ ಸಾಮಾಥರ್ವಣಗಳೆಂಬ ನಾಲ್ಕೂ ವಿಧವಾದ ವಾಕ್ಕುಗಳಿಂದ ಹೊಗಳಲ್ಪಟ್ಟವನಾಗಿ ಪಾಲಿಸು. ಇದೊ, ನಿನಗೆ ಸ್ವಾಹಾಕಾರದಿಂದ ಹವಿರರ್ಪಣೆಯನ್ನು ಮಾಡುವೆವು'' ಎಂದರ್ಥ. ಅಗ್ನಿಯು ನಾಲ್ಕವೇದಗಳಲ್ಲಿಯೂ ಸ್ತುತಿಸಲ್ಪಟ್ಟಿರುವನು. ನಾಲ್ಕೂ ವೇದಗಳಿಂದಲೂ ನಿರ್ವರ್ತ್ಯವಾದ ಯಜ್ಞಗಳಲ್ಲಿ ಆರಾಧಿ ಸಲ್ಪಡುವನು. ಈತನು ಸದಾ ಪರಿಶುದ್ಧನು. ವಸ್ತುಗಳ ಪರಿಶುದ್ಧಿಯನ್ನು ಅಗ್ನಿಯಲ್ಲಿಯೇ ಮಾಡಲಾಗುವದು. ಲೋಹಗಳನ್ನೆಲ್ಲ ಅಗ್ನಿಯ ಸಹಾಯದಿಂದಲೇ ಪರಿಶುದ್ಧಿಗೊಳಿಸು ವರು. ಪಾತಿವ್ರತ್ಯವನ್ನು ಸೀತೆಯು ಅಗ್ನಿಪ್ರವೇಶದಿಂದಲೇ ಲೋಕಪ್ರಸಿದ್ಧಿಗೊಳಿಸಿದಳು. ಹೀಗೆ ಅಗ್ನಿಯು ಪರಿಶುದ್ಧಿಗೆ ಮೂಲನಾಗಿರುವದರಿಂದ ಈ ಹೋಮಗಳ ಮೂಲಕ ಪಾಪಗಳಿಂದ ಪರಿಶುದ್ಧಿಗೊಳಿಸಿ ನಮ್ಮನ್ನು ಕಾಪಾಡುವಂತೆ ಪ್ರಾರ್ಥಿಸಿದೆ.

ಈಗ ಉಪನಿಷದ್ವಿದ್ಯೆಯನ್ನು ಪಡೆದುಕೊಳ್ಳಲಿಚ್ಛಿಸುವವನು ಜಪಿಸಬೇಕಾದ ಮಂತ್ರವನ್ನು ತಿಳಿಸಲಾಗುವದು:

ಓಂ ॥ ಯಶ್ಛಂದಸಾಮೃಷಭೋ ವಿಶ್ವರೂಪಃ ಛಂದೋಭ್ಯಃ ಛಂದಾಂ
ಸ್ಯಾವಿವೇಶ । ಸಚಾಂ ಶಿಕ್ಯಃ ಪುರೋವಾಚೋಪನಿಷದಿಂದ್ರೋ
ಜ್ಯೇಷ್ಠ ಇಂದ್ರಿಯಾಯ ಋಷಿಭ್ಯೋ ನಮೋ ದೇವೇಭ್ಯಃ
ಸ್ವದಾ ಪಿತೃಭ್ಯೋ ಭೂರ್ಭುವಸ್ಸುವಶ್ಛಂದ ಓಮ್ ॥

ಯಾವ ಓಂಕಾರವು ವೇದಗಳಲ್ಲೆಲ್ಲ ಶ್ರೇಷ್ಠವೆನಿಸಿತೋ ಸಕಲಜಗದಾತ್ಮಕವೂ ಆಗಿರುವದೋ ಅಂಥ ಪ್ರಣವವು ವೇದಗಳಿಂದಲೇ ಹೊರಬಂದಿತು. ವೇದಗಳ ಸಾರವೆನಿಸಿ ಪ್ರಜಾಪತಿಯ ಮನಸ್ಸಿನಲ್ಲಿ ಹೊಳೆಯಿತು. ಮತ್ತೆ ಅದು ವೇದಗಳನ್ನೆಲ್ಲ ಒಳಹೊಕ್ಕಿತು. ಛಂದೋಬದ್ಧವಾದ ಮಂತ್ರಗಳನ್ನು ಪಠಿಸುವಾಗ ಮೊದಲು ಓಂಕಾರವನ್ನು ಪಠಿಸಬೇಕು–ಎಂದಭಿಪ್ರಾಯ. ಈ ಪ್ರಣವಮಂತ್ರ ಪ್ರತಿಪಾದ್ಯನಾದ ಇಂದ್ರನು–ಎಂದರೆ ಪರಮೈಶ್ವರ್ಯಯುಕ್ತನಾದ ಪರಮಾತ್ಮನು ಉಪನಿಷದ್ವಿದ್ಯೆಯನ್ನು ಋಷಿಗಳಿಗೆ ಹೇಳಿದನು. ಅವನು ಶಿಕ್ಯನೆನಿಸಿರುವನು–ಎಂದರೆ ಸಜ್ಜನರಾದ ಕರ್ಮೋಪಾಸನಾಜ್ಞಾನಸಾಧನತತ್ಪರರಾದ ಸಾಧಕರಿಗೆ ಪಡೆಯಲು ಶಕ್ಯನಾಗಿರುವನು. ಹಾಗೂ ಎಲ್ಲರಿಗೂ ಕಾರಣನಾಗಿರುವದರಿಂದ ಜ್ಯೇಷ್ಠನೆನಿಸಿರುವನು. ಈತನು ಅಂತರ್ಮುಖನಾಗಿ ತಪಸ್ಸುಮಾಡುತ್ತಾ ಕುಳಿತಿದ್ದ ಜಿಜ್ಞಾಸುಗಳಾದ ಋಷಿಗಳಿಗೆ ಅವರ (ಇಂದ್ರಿಯಾಯ) ಜ್ಞಾನಸಾಮರ್ಥ್ಯಕ್ಕಾಗಿ ಬ್ರಹ್ಮವಿದ್ಯೆಯನ್ನು ಉಪದೇಶಿಸಿದನು. ಆದ್ದರಿಂದ ನಾನು ಬ್ರಹ್ಮವಿದ್ಯೆಗೆ ಬರಬಹುದಾದ ಅಡ್ಡಿಗಳನ್ನೆಲ್ಲ ಪರಿಹರಿಸಿಕೊಳ್ಳುವ ಸಲುವಾಗಿ ಮೊದಲು ದೇವತೆಗಳನ್ನೂ ಅನಂತರ ಪಿತೃಗಳನ್ನೂ ನಮಸ್ಕರಿಸುವೆನು. ಭೂರಾದಿಲೋಕಗಳನ್ನೆಲ್ಲವ್ಯಾಪಿಸಿರುವ ಮಂತ್ರ ಬ್ರಾಹ್ಮಣಾತ್ಮಕನಾದ ವೇದಪುರುಷನನ್ನೂ ಪ್ರಣವವನ್ನೂ ನಮಸ್ಕರಿಸುವೆನು–ಎಂದಭಿಪ್ರಾಯ.

## ಧಾರಣಾಸಿದ್ಧಿಗಾಗಿ ಜಪಮಂತ್ರ

ಈಗ ಗುರುಮುಖದಿಂದ ಪಡೆದುಕೊಂಡಿರುವ ವೇದಗಳನ್ನು ಮರೆಯದಂತೆ ಮನಸ್ಸಿನಲ್ಲಿ ಧಾರಣೆಮಾಡಿಕೊಳ್ಳುವ ಸಲುವಾಗಿ ಜಪಿಸಬೇಕಾದ ಮಂತ್ರವನ್ನು ತಿಳಿಸುತ್ತಾರೆ.

ಓಂ ॥ ನಮೋ ಬ್ರಹ್ಮಣೇ ಧಾರಣಂ ಮೇ ಅಸ್ತ್ವನಿರಾಕರಣಂ
ಧಾರಯಿತಾ ಭೂಯಾಸಂ ಕರ್ಣಯೋಃ ಶ್ರುತಂ ಮಾ
ಚ್ಯೋಢ್ವಂ ಮಮಾಮುಷ್ಯ ಓಮ್ ॥

ಜಗತ್ಕಾರಣನಾದ ಬ್ರಹ್ಮನಿಗೆ ನಮಸ್ಕಾರಗಳು. ಆ ಬ್ರಹ್ಮನ ಪ್ರಸಾದದಿಂದ ನನ್ನ ಚಿತ್ತದಲ್ಲಿ ಗ್ರಂಥ ಹಾಗೂ ಅದರ ಅರ್ಥಗಳ ಧಾರಣೆಯು ಸಿದ್ಧಿಸಲಿ. ವೇದವೇ ಮುಂತಾದ ಅಧ್ಯಯನ ಮಾಡಿರುವ ಮೂಲಗ್ರಂಥವು ಆನುಪೂರ್ವಿ ವಿಶಿಷ್ಟವಾಗಿ ಯಥಾವತ್ತಾಗಿಯೇ ಮನಸ್ಸಿನಲ್ಲಿ ದೃಢವಾಗಿ ನಿಲ್ಲಲಿ. ಅವುಗಳ ಅಭಿಪ್ರಾಯವೂ ಉಳಿದುಕೊಳ್ಳಲಿ. ನಾನು ಆ ವಿದ್ಯೆಗಳನ್ನು ಮರೆಯದಂತೆ (ನಿರಾಕರಿಸದಂತೆ) ಬುದ್ಧಿಯಲ್ಲಿ ಕಾಪಾಡಿಟ್ಟುಕೊಳ್ಳು ವಂತಾಗಲಿ. ಹೀಗೆ ಪ್ರಾರ್ಥಿಸುತ್ತಿರುವ ನನಗೆ ಎರಡು ಕಿವಿಗಳಿಂದಲೂ ಕೇಳಲ್ಪಟ್ಟ ವೇದಶಾಸ್ತ್ರಾದಿಗಳೆಲ್ಲವೂ ಎಂದರೆ ಯಾವಾಗ ಎಲ್ಲಿ ಕೇಳಿದ್ದರೂ ಅವುಗಳು ಯಾವವನ್ನೂ ಎಲೈ ದೇವನೆ, ನಾಶಗೊಳಿಸಬೇಡ. ಅನಂತರ ನಾನು ಅವುಗಳನ್ನು ಅಭ್ಯಾಸದಿಂದ ಸ್ಥಿರವಾಗಿಟ್ಟುಕೊಳ್ಳುವೆನು. ದೇವತೆಗಳು ಇದನ್ನು ಅನುಮೋದಿಸಲಿ—ಎಂದರ್ಥ. ಕೆಲವರಿಗೆ ಹೇಳಿದ್ದು ತಿಳಿಯುತ್ತದೆಯಾದರೂ ಬೇಗನೆ ಮರೆತುಹೋಗುವದು. ಹಾಗೆಯೇ ಉಪಯೋಗಿಸುವಾಗ ನೆನಪಾಗದೆ ಉಳಿದುಬಿಡುವದು. ಇಂಥ ದೋಷಗಳು ಪರಿಹಾರವಾಗಿ ಸಮಯಸ್ಫೂರ್ತಿಯೂ ವಿದ್ಯಾಧಾರಣೆಯೂ ಲಭಿಸುವದಕ್ಕಾಗಿ ಈ ಮಂತ್ರಗಳನ್ನು ಜಪಮಾಡಲು ತಿಳಿಸಿದೆ.

ಈಗ ತಪಸ್ಸನ್ನು ಅನುಷ್ಠಾನಮಾಡಬೇಕೆಂದು ತಿಳಿಸುವದಕ್ಕಾಗಿ ಅದನ್ನು ಪ್ರಶಂಸೆಮಾಡಲಾಗುತ್ತದೆ. ತಪಸ್ಸೆಂದರೆ ಇಂದ್ರಿಯಗಳನ್ನೂ ಮನಸ್ಸನ್ನೂ ಏಕಾಗ್ರಗೊಳಿಸತಕ್ಕದ್ದೇ ಆಗಿದೆ. ಇದರೊಡನೆ ಶ್ರೌತಸ್ಮಾರ್ತರೂಪವಾದ ಕರ್ಮಗಳನ್ನು ಅನುಷ್ಠಾನಮಾಡುವದೂ ತಪಸ್ಸೆನಿಸುವದು. ಅಂತೂ ಯಾವದೇ ರೀತಿಯ ತಪಸ್ಸಾಗಲಿ, ಅದು ಸಿದ್ಧಿಸುವದಕ್ಕಾಗಿ ಈ ಮಂತ್ರವನ್ನು ಜಪಮಾಡಬೇಕು—ಎಂದು ಭಾಷ್ಯಕಾರರು ತಿಳಿಸಿದ್ದಾರೆ.

ಓಂ ॥ ಋತಂ ತಪಸ್ಸತ್ಯಂ ತಪಃ ಶ್ರುತಂ ತಪಃ ಶಾಂತಂ ತಪೋ ದಮ
ಸ್ತಪಃ ಶಮಸ್ತಪೋ ದಾನಂ ತಪೋ ಯಜ್ಞಂ ತಪೋ
ಭೂರ್ಭುವಸ್ಸುವರ್ಬ್ರಹ್ಮೈತದುಪಾಸ್ಯೈತತ್ತಪಃ ॥

ಋತವೆಂದರೆ ಸತ್ಯವಾದ ವಸ್ತುವನ್ನೇ ಮನಸ್ಸಿನಿಂದ ಚಿಂತಿಸುವದು. ಸತ್ಯವೆಂದರೆ ಮಾತಿನಿಂದ ನಿಜವನ್ನೇ ನುಡಿಯುವದು. ಶ್ರುತವೆಂದರೆ ವೇದದ ಕರ್ಮಕಾಂಡಜ್ಞಾನ ಕಾಂಡಗಳ ರಹಸ್ಯವನ್ನು ಕೇಳುವದು. ಹೊರಗಿನ ಮತ್ತು ಒಳಗಿನ– ಕರ್ಮೇಂದ್ರಿಯ ಜ್ಞಾನೇಂದ್ರಿಯಗಳ ಸಮಾಧಾನವೇ ಶಾಂತಿಯು. ಉಪಾವಾಸಾದಿಗಳಿಂದ ಶರೀರವನ್ನು ದಂಡಿಸಿ ಸ್ವಾಧೀನದಲ್ಲಿಟ್ಟುಕೊಳ್ಳುವದು ದಮವು. ಶತ್ರುಗಳಲ್ಲಿ ಕೂಡ ಕೋಪಗೊಳ್ಳದೆ ಇರುವದು ಶಮವು. ತನ್ನದಾಗಿದ್ದ ವಸ್ತುವನ್ನು ಬೇರೊಬ್ಬರಿಗೆ ಒಪ್ಪಿಸಿ ಅದರ

ಅಭಿಮಾನದಿಂದ ಬಿಡುಗಡೆಯಾಗುವದು ದಾನವು. ಅಗ್ನಿಹೋತ್ರಾದಿಕರ್ಮಗಳೇ ಯಜ್ಞವು. ಈ ಎಂಟೂ ಹೊರಗಿನ ತಪಸ್ಸುಗಳು–ಎಂದರೆ ಬಹಿರಂಗಸಾಧನಗಳು–ಎಂದರ್ಥ. ಇವು ಒಂದೊಂದೂ ಬ್ರಹ್ಮವಿದ್ಯೆಗೆ ಸಾಧನಗಳೇ ಆಗಿವೆ. ಆದರೆ "ಎಲೈ ಮುಮುಕ್ಷುವಾದ ಸಾಧಕನೆ, ಭೂರಾದಿಲೋಕತ್ರಯಗಳನ್ನೂ ವ್ಯಾಪಿಸಿರುವ ವಿರಾಡ್ ದೇಹಧಾರಿಯಾದ ಯಾವ ಬ್ರಹ್ಮವಿದೆಯೋ ಅದನ್ನು ಸದಾ ಚಿಂತಿಸುವದೇ ನಿಜವಾದ ತಪಸ್ಸೆನಿಸುವದು. ಅಂಥ ಚಿಂತನೆಯು ಯಾವಾಗಲೂ ಒಂದೇ ಸಮನಾಗಿ ಎಣ್ಣೆಯ ಧಾರೆಯಂತೆ ಅಂತಃಕರಣದಲ್ಲಿ ಮೂಡಿರಬೇಕು. ಬ್ರಹ್ಮಚಿಂತನೆಯ ನಡುವೆ ಯಾವ ಅನಾತ್ಮಚಿಂತನೆಯೂ ತೋರಿಕೊಳ್ಳಬಾರದು. ಇಂಥ ಧ್ಯಾನವು ಅಥವಾ ಉಪಾಸನೆಯು ದೊಡ್ಡ ತಪಸ್ಸೆನಿಸುವದು. ಅದನ್ನು ಕೈಗೊಳ್ಳುವವನಾಗು'' ಎಂದು ವೇದಮಾತೆಯು ತಿಳಿಸಿರುತ್ತಾಳೆ:

ಈಗ ಜ್ಞಾನಸಾಧನವಾಗಿರುವ ಪುಣ್ಯವನ್ನು ಹೊಗಳಿ ಜ್ಞಾನ ಪ್ರತಿಬಂಧಕವಾದ ನಿಷಿದ್ಧಾಚರಣರೂಪವಾದ ಪಾಪದಿಂದ ಹಿಮ್ಮೆಟ್ಟಬೇಕೆಂದು ಉಪದೇಶಿಸಲಾಗುತ್ತದೆ:–

**ಓಂ ॥ ಯಥಾ ವೃಕ್ಷಸ್ಯ ಸಂಪುಷ್ಪಿತಸ್ಯ ದೂರಾದ್ ಗಂಧೋ**
**ವಾತ್ಯೇವಂ ಪುಣ್ಯಸ್ಯ ಕರ್ಮಣೋ ದೂರಾದ್ ಗಂಧೋ ವಾತಿ**
**ಯಥಾಸಿ ಧಾರಾಂ ಕರ್ತೇಽವಹಿತಾಮವಕ್ರಾಮೇ ಯದ್ಯುವೇ**
**ಯುವೇಹವಾ ವಿಹ್ವಯಿಷ್ಯಾಮಿ ಕರ್ತಂ ಪತಿಷ್ಯಾಮೀತ್ಯೇವಮನೃತಾ**
**ದಾತ್ಮಾನಂ ಜುಗುಪ್ಸೇತ್ ॥**

ಲೋಕದಲ್ಲಿರುವ ಒಂದು ಸಂಪಿಗೆ ಮರವನ್ನು ನೋಡೋಣ. ಅದು ಎತ್ತರವಾಗಿ ಬೆಳೆದಿದ್ದು ಹೂಗಳು ಅರಳಿದ ಸಮಯದಲ್ಲಿ ಗಾಳಿಯು ಬೀಸಿದೊಡನೆ ದೂರದಲ್ಲಿರುವ ಜನರಿಗೂ ಸುವಾಸನೆಯು ಕಾಣಿಸಿಕೊಂಡು–ಸಂಪಿಗೆಮರವನ್ನು ಕಾಣದಿದ್ದರೂ ಅದರ ವಾಸನೆಯನ್ನು ಅನುಭವಿಸಿ–ಆನಂದಪಡುವರಷ್ಟೆ. ಹಾಗೆಯೇ ಪ್ರಾಜ್ಞನಾದವನು ಮಾಡುವ ಲೋಕೋಪಕಾರಕವಾದ ಪುಣ್ಯಕರ್ಮವೂ ಲೋಕದಲ್ಲೆಲ್ಲ ಸುಗಂಧದಂತೆ ಹರಡಿಕೊಳ್ಳುವದು. ಎಲ್ಲರಿಗೂ ಸುಖಕರವಾಗುವದು. **'ಸಜ್ಜನರು ಸಂಪಿಗೆ ಹೂವಿನಂತೆ'**–ಎಂಬ ನಾಣ್ನುಡಿಯೂ ಪ್ರಸಿದ್ಧವಾಗಿರುವದು. ಪುಣ್ಯವಂತನು ದೇಹತ್ಯಾಗಮಾಡಿದ ಅನಂತರ 'ಸತ್ತು ಸಂಪಿಗೆಯಾಗಿದ್ದಾನೆ'' ಎಂದು ಜನರು ಆಡಿಕೊಳ್ಳುವರು. ಹೀಗೆ ಪುಣ್ಯದಿಂದ ಲಭಿಸುವ ಕೀರ್ತಿಯು ಭೂಲೋಕದಲ್ಲಿ ಮಾತ್ರವಲ್ಲದೆ ಸ್ವರ್ಗಲೋಕದಲ್ಲಿಯೂ ಪ್ರಸರಿಸಿರುವದು. ಆದ್ದರಿಂದ ಮನುಷ್ಯನು

ಬದುಕಿರುವಷ್ಟು ಕಾಲವು ಪುಣ್ಯವನ್ನೇ ಆಚರಿಸಬೇಕು—ಎಂದರ್ಥ. ಯಾವನಾದರೊಬ್ಬ ಮಾನವನು ಎಷ್ಟು ದೀರ್ಘಕಾಲ ಬದುಕಿದ್ದನು? ಎಂಬುದು ಹೆಚ್ಚುಗಾರಿಕೆಯಲ್ಲ. ಬದುಕಿದ್ದಾಗ ಏನೇನು ಪುಣ್ಯಕರ್ಮಗಳನ್ನು ಅನುಷ್ಠಾನಮಾಡಿದನು? ಎಂಬಿದೇ ಹೆಚ್ಚುಗಾರಿಕೆಯಾಗಿರುವದು. ಬಹಳಮಟ್ಟಿಗೆ ಪುಣ್ಯವಂತರು ದೀರ್ಘಾಯುಷಿಗಳಾಗಿರುವದಿಲ್ಲ. ಅಲ್ಪಾಯುಷ್ಯದಲ್ಲಿಯೇ ನೂರಾರುವರ್ಷಗಳಷ್ಟು ಕಾಲದಲ್ಲಿ ಮಾಡಬಹುದಾದದ್ದನ್ನೆಲ್ಲ ಸಾಧಿಸಿರುತ್ತಾರೆ. ಶ್ರೀಶಂಕರಾಚಾರ್ಯರು, ಶ್ರೀವಿವೇಕಾನಂದರು—ಮೊದಲಾದವರೇ ಇದಕ್ಕೆ ಉದಾಹರಣೆಯಾಗಿದ್ದಾರೆ.

ಇನ್ನು ಪುಣ್ಯವನ್ನು ಮಾಡಬೇಕಾದರೆ ಪಾಪದಿಂದ ಹಿಂತಿರುಗಬೇಕಷ್ಟೆ? ಅದನ್ನೂ ಹೀಗೆ ಪ್ರಸ್ತಾಪಿಸಲಾಗಿದೆ. ಒಂದು ದೊಡ್ಡ ಹಳ್ಳವನ್ನು ದಾಟಬೇಕಾಗಿದೆ— ಎಂದು ಕೊಳ್ಳೋಣ. ಅಲ್ಲಿ ದಾಟುವದಕ್ಕೆ ಸಾಧನವಾಗಿ ಎರಡೂ ದಡಗಳಿಗೆ ಕೂಡಿಸಿ ಒಂದು ಹರಿತವಾದ ಕತ್ತಿಯನ್ನು ಚಾಚಿರುತ್ತಾರೆ—ಎಂದುಕೊಳ್ಳೋಣ. ಯಾವನಾದರೊಬ್ಬನು ಅವಸರದಲ್ಲಿ ಹಳ್ಳವನ್ನು ದಾಟಗಬೇಕೆಂದು ಹೆಜ್ಜೆಗಳನ್ನು ಎತ್ತಿಎತ್ತಿ—ಹಗುರವಾಗಿಯೇ ಆಗಲಿ—ಕತ್ತಿಮೇಲೆ ಮುಂದೆ ಮುಂದೆ ಇಡುತ್ತಾಹೋದರೆ ಕಾಲು ಗಾಯವಾಗದೆ ಇದ್ದೀತೆ? ಶರೀರದ ಭಾರಕ್ಕೆ ತಕ್ಕಷ್ಟು ಕಾಲನ್ನು ಊರದೆ ಇದ್ದರೆ ಹಳ್ಳಕ್ಕೆ ಬೀಳದೆ ಇರಲು ಸಾಧ್ಯವೆ? ಅಥವಾ ಗಟ್ಟಿಯಾಗಿಯೇ ಪಾದವನ್ನಿಟ್ಟರೆ ಅದು ಸೀಳಿ ಹಾಗೂ ಗುಂಡಿಗೆ ಬೀಳುವನಲ್ಲವೆ? ಆದ್ದರಿಂದ ಏನೇ ಆಗಲಿ, ಕತ್ತಿಯ ಅಲುಗಿನ ಸಹಾಯದಿಂದ ಗುಂಡಿಯನ್ನು ದಾಟಹೋಗಲೇಬಾರದು. ಅದು ಎರಡು ರೀತಿಯಿಂದಲೂ ಅಪಾಯಕರವು. ಹಾಗೆಯೇ ಜೀವನವನ್ನು ಪಾಪಕರ್ಮಗಳಿಂದಲೇ ಸವೆಯಿಸಬಾರದು. ಅದು ಇಹಪರಗಳೆರಡರಲ್ಲಿಯೂ ಸಂತಾಪವನ್ನೇ ಉಂಟುಮಾಡುತ್ತದೆ. ಈ ರೀತಿಯಾದ ವಿಚಾರದಿಂದ ಮನಸ್ಸನ್ನು ಅನೃತದಿಂದ—ಎಂದರೆ ಕೆಟ್ಟಕರ್ಮಗಳಿಂದ ಹಿಮ್ಮೆಟ್ಟಿಸಬೇಕು. ಪಾಪಗಳನ್ನು ಮಾಡಲು ನಾಚಿಕೊಳ್ಳಬೇಕು—ಎಂದು ತಿಳಿಸಿದ್ದಾಗಿದೆ.

## ತತ್ತ್ವೋಪದೇಶ

ಈಗ ಶುದ್ಧಾಂತಃಕರಣನಾದ ಮುಮುಕ್ಷುವಿಗೆ ತತ್ತ್ವೋಪದೇಶವನ್ನು ಕ್ರಮವಾಗಿ ಮಾಡಲಾಗುವದು.

ಓಂ ॥ ಅಣೋರಣೀಯಾನ್ ಮಹತೋ ಮಹೀಯಾನಾತ್ಮಾ
ಗುಹಾಯಾಂ ನಿಹಿತೋಽಸ್ಯ ಜಂತೋಃ । ತಮಕ್ರತುಂ ಪಶ್ಯತಿ
ವೀತಶೋಕೋ ಧಾತುಃ ಪ್ರಸಾದಾನ್ಮಹಿಮಾನಮೀಶಮ್ ॥

ಈ ಮಂತ್ರವು ಕಠೋಪನಿಷತ್ತಿನಲ್ಲಿಯೂ ಪಠಿತವಾಗಿದೆ. ಸರ್ವಜ್ಞನೂ ತಿರುಳಾದ ಸಚ್ಚಿದಾನಂದರಸನಾದ ಎಲ್ಲಕ್ಕೂ ಆಧಾರನಾದ ಪರಮೇಶ್ವರನನ್ನು ಇಲ್ಲಿ ಆತ್ಮಶಬ್ದದಿಂದ ಕರೆಯಲಾಗಿದೆ. ಇವನು ಸೂಕ್ಷ್ಮವಾಗಿರುವದೆಲ್ಲಕ್ಕಿಂತಲೂ ಸೂಕ್ಷ್ಮನು. ಲೋಕದಲ್ಲಿ ಅತಿಸೂಕ್ಷ್ಮವಾಗಿದ್ದು ಸಾಮಾನ್ಯವಾದ ಕಣ್ಣಿಗೆ ಕಾಣದಿರುವದನ್ನು ಅಣುವೆನ್ನುವರು. ವೈಶೇಷಿಕದರ್ಶನಕಾರರು ಪರಮಾಣುಗಳನ್ನು ಜಗತ್ಕಾರಣವೆನ್ನುವರು. ಆತ್ಮನಾದರೊ, ಇಂಥ ಪರಮಾಣುಗಳಿಗಿಂತಲೂ ಸೂಕ್ಷ್ಮನು–ಎಂದರ್ಥ. ಅಷ್ಟೇ ಅಲ್ಲ **ಮಹತೋ ಮಹೀಯಾನ**ನೂ ಆಗಿರುವನು. ನಮಗೆ ತಿಳಿದಿರುವಂತೆ ಆಕಾಶವು ಎಲ್ಲಕ್ಕಿಂತಲೂ ದೊಡ್ಡದಾಗಿರುವದು. ಆತ್ಮನಾದರೋ ಆಕಾಶಕ್ಕಿಂತ ವ್ಯಾಪಕನೂ ಸರ್ವಗತನೂ ಮಹಾನ್ ಪರಿಮಾಣನೂ ಆಗಿರುವನು. ಒಂದೇ ವಸ್ತುವಿನಲ್ಲಿ ಅಣು–ಮಹತ್ ಎರಡೂ ಧರ್ಮಗಳೂ ಹೊಂದುವದಿಲ್ಲವಲ್ಲವೆ? ಇದು ಹೇಗೆ ಸರಿ? ಎಂದರೆ ಜಗತ್ತಿನಲ್ಲಿರುವ ಅತ್ಯಂತ ಚಿಕ್ಕವಸ್ತುಗಳಿಂದಾರಂಬಿಸಿ ಅತ್ಯಂತ ದೊಡ್ಡವಸ್ತುಗಳವರೆಗೂ ಕಂಡು ಬರುವ ಎಲ್ಲವೂ **ಆತ್ಮ**ನೇ–ಎಂದರ್ಥ. ಈತನು ಈ ಜನನಮರಣಧರ್ಮಗಳುಳ್ಳ ಪ್ರಾಣಿಯ ಹೃದಯಾಕಾಶದಲ್ಲಿಯೇ ಇದ್ದುಕೊಂಡಿರುವನು. ಇದನ್ನೇ ಗುಹೆಯೆಂದು ಇಲ್ಲಿ ಕರೆದಿದೆ. ಗುಹಾನಿವಾಸಿಯಾದ ಮತ್ತು ಅಕ್ರತುವಾದ ಎಂದರೆ ಮನಆದ್ಯುಪಾಧಿ ಗಳಿಲ್ಲದವನಾದ್ದರಿಂದ ಸಂಕಲ್ಪರಹಿತನಾದ ಈ ಆತ್ಮನನ್ನು ಧಾತುಪ್ರಸಾದದಿಂದ ಸಾಧಕನು ಕಂಡುಕೊಳ್ಳುವನು. ಧಾತುಗಳೆಂದರೆ ಇಂದ್ರಿಯಗಳು. ಅವು ಚಾಂಚಲ್ಯವನ್ನು ಬಿಟ್ಟು ಏಕಾಗ್ರತೆಯನ್ನು ಪಡೆದವಾದರೆ ಆತ್ಮನನ್ನು ಅರಿಯಲು ಸಮರ್ಥವಾಗುವವು. ಅಥವಾ ಧಾತೃವೆಂದರೆ ಜಗತ್ಕಾರಣನಾದ ಈಶ್ವರನು. ಅವನ ಪ್ರಸಾದ–ಎಂದರೆ ಅನುಗ್ರಹ ದಿಂದಲೇ ಅವನನ್ನು ಅರಿತುಕೊಂಡು ಶೋಕಗಳಿಂದ ವಿಮುಕ್ತನಾಗಿ ಸಾಧಕನು ಕೃತಕೃತ್ಯನಾಗುವನು.

**ಓಂ ॥ ಸಪ್ತಪ್ರಾಣಾಃ ಪ್ರಭವನ್ತಿ ತಸ್ಮಾತ್ ಸಪ್ತಾರ್ಚಿಷಃ ಸಮಿಧಃ ಸಪ್ತ ಜಿಹ್ವಾಃ । ಸಪ್ತ ಇಮೇ ಲೋಕಾ ಯೇಷು ಚರಂತಿ ಪ್ರಾಣಾ ಗುಹಾಶಯಾನ್ನಿಹಿತಾಃ ಸಪ್ತ ಸಪ್ತ ॥**

ಈ ಮಂತ್ರವೂ ಮುಂದಿನ ಮಂತ್ರವೂ ಅಲ್ಪಪಾಠಭೇದದೊಡನೆ ಮುಂಡಕೋಪನಿಷತ್ತಿನಲ್ಲಿಯೂ ಇವೆ. ಈ ಮಂತ್ರದ ಅರ್ಥವೇನೆಂದರೆ: ಆ ಪರಮಾತ್ಮನಿಂದಲೇ ತಲೆಯಲ್ಲಿ ಇದ್ದುಕೊಂಡಿರುವ ಏಳು ಪ್ರಾಣಗಳು ಹೊರಬಂದಿರುವವು. ಎರಡೆರಡು ಕಣ್ಣು–ಕಿವಿ–ಮೂಗುಗಳು ಮತ್ತು ಬಾಯಿಯಲ್ಲಿ ಸಂಚರಿಸುವ ವಾಯುವೇ ಪ್ರಾಣವು. ಇದು ಆಯಾ ಉಪಾಧಿಗಳಿಂದ ಕೂಡಿದ್ದಾಗಿ ಒಟ್ಟು

ಏಳಾಗುವದು. ಇದೆಲ್ಲವೂ ಆ ಪರಮಾತ್ಮನಿಂದ ಉಂಟಾಗಿರುವವು. ಹಾಗೆಯೇ ಏಳು **ಅರ್ಚಿ**ಗಳು ಎಂದರೆ ಇಂದ್ರಿಯಗಳ ಶಕ್ತಿಯಿಂದ ಗ್ರಹಿಸಲ್ಪಡುವ ವಿಷಯಗಳು–ಎಂದರ್ಥ. ಶಬ್ದವು ಕಿವಿಗಳಿಗೂ, ಗಂಧವು ಮೂಗುಗಳಿಗೂ, ರೂಪವು ಕಣ್ಣುಗಳಿಗೂ ವಿಷಯಗಳಾಗಿವೆ. ಆಯಾ ಇಂದ್ರಿಯಗಳ ಎಡಬಲಪಾರ್ಶ್ವಗಳಿಂದ ಗೃಹೀತವಾಗುವ ಈ ವಿಷಯಗಳನ್ನೂ ಏಳು ಸಂಖ್ಯೆಯವು ಎಂದಿದೆ. ಇವುಗಳನ್ನು **ಸಮಿತ್ತು**ಗಳೆಂದೂ ಹೆಸರಿಸಲಾಗಿದೆ. ಏಕೆಂದರೆ ಸಮಿತ್ತುಗಳಿಂದ ಅಗ್ನಿಯು ಪ್ರಜ್ವಲಿಸುವಂತೆ ವಿಷಯಗಳ ಸಂಪರ್ಕದಿಂದ ಇಂದ್ರಿಯಗಳು ಉದ್ದೀಪನಗೊಳ್ಳುವವು. ಇಂಥ ವಿಷಯಗಳೂ ಪರಮಾತ್ಮನಿಂದ ಹೊರ ಬಂದಿವೆ. ಹಾಗೆಯೇ ಅಗ್ನಿದೇವನ **ಕಾಲೀ, ಕರಾಲೀ, ಮನೋಜವಾ, ಸುಲೋಹಿತಾ, ಸುಧೂಮ್ರವರ್ಣಾ, ಸುಲಿಂಗಿನೀ, ವಿಶ್ವರುಚೀ**–ಎಂಬೀ ಏಳು ಜ್ವಾಲಾರೂಪವಾದ ನಾಲಗೆಗಳೂ ಪರಮೇಶ್ವರನಿಂದಲೇ ಆವಿರ್ಭವಿಸಿರುವವು. ಹಾಗೆಯೇ ಭೂಮಿಯೇ ಮೊದಲಾದ ಏಳು ಲೋಕಗಳೂ ಅವುಗಳಲ್ಲಿ ವಾಸವಾಗಿರುವ ಜೀವಿಗಳ ಶರೀರಗಳಲ್ಲಿ ಸಂಚರಿಸುವ ಪ್ರಾಣಗಳೂ ಅವನಿಂದಲೇ ಹೊರಬಂದಿರುವವು. ಇನ್ನು ಗುಹಾಶಯನಾದ ಆ ಭಗವಂತನಲ್ಲಿಯೇ ಅಡಕರಾಗಿದ್ದು ಸೃಷ್ಟಿಕಾಲಕ್ಕೆ ಹೊರಬಂದಿರುವ ಏಳೇಳು ಸಂಖ್ಯೆಗಳ ಋಷಿಗಳು, ಸಮುದ್ರಗಳು, ಪರ್ವತಗಳು–ಎಲ್ಲವೂ ಆ ಪರಮೇಶ್ವರನಿಂದಲೇ ಸೃಷ್ಟವಾಗಿವೆ–ಎಂದರ್ಥ.

**ಓಂ ॥ ಅತಃ ಸಮುದ್ರಾ ಗಿರಯಶ್ಚ ಸರ್ವೇಽಸ್ಮಾತ್ ಸ್ಯಂದಂತೇ ಸಿಂಧವಃ ಸರ್ವರೂಪಾಃ । ಅತಶ್ಚ ವಿಶ್ವಾ ಓಷಧಯೋ ರಸಾಚ್ಚ ಯೇನೈಷ ಭೂತಸ್ತಿಷ್ಠತ್ಯಂತರಾತ್ಮಾ ॥**

ಲವಣಸಮುದ್ರದಿಂದಾರಂಭಿಸಿ ಶುದ್ಧೋದಕಸಮುದ್ರದವರೆಗಿನ ಎಲ್ಲಾ ಸಮುದ್ರಗಳೂ, ಮೇರುವೇ ಮುಂತಾದ ಏಳು ಕುಲಪರ್ವತಗಳೂ, ಬೇರೆಬೇರೆಯ ದಿಕ್ಕುಗಳಿಗೆ ಅಭಿಮುಖವಾಗಿ ಹರಿಯುವ ನದಿಗಳೂ, ಬತ್ತ, ಗೋಧಿ–ಮುಂತಾದ ಎಲ್ಲಾ ಸಸ್ಯಗಳೂ, ಹೀಗೆ ಸ್ಥಾವರಜಂಗಮರೂಪವಾದ ಎಲ್ಲಾ ಭೂತಗಳೂ–ರಸರೂಪನಾದ ಆ ಪರಮಾತ್ಮನಿಂದಲೇ ಹುಟ್ಟಿ ಹೊರಬಂದಿರುವವು. ಇಂಥ ಪರಮಾತ್ಮನು ಸಕಲರಲ್ಲಿಯೂ 'ನಾನು' ಎಂಬ ತಿಳಿವಳಿಕೆಗೆ ಆಧಾರನಾಗಿ ಇದ್ದುಕೊಂಡಿರುವನು. ಮತ್ತು ಜೀವಾತ್ಮನಿಗೆ ಆಶ್ರಯನಾಗಿರುವನು. ಜೀವಾತ್ಮನೆಂದರೆ ಅನ್ನರಸದಿಂದ ಬೆಳೆದು ಪಂಚಭೂತಮಯವಾಗಿದ್ದುಕೊಂಡಿರುವ ಸ್ಥೂಲದೇಹದಲ್ಲಿ ತಾನೆಂಬ ಅಭಿಮಾನವನ್ನು ಹೊಂದಿದವನಾಗಿ ಸುಖದುಃಖಗಳನ್ನೂ ಅನುಭವಿಸುತ್ತಾ

ಸಂಸಾರಿಯಾಗಿದ್ದು ಕೊಂಡಿರುವವನು. ಇವನಿಗೂ ಪ್ರತ್ಯಗಾತ್ಮನಾಗಿರುವವನೇ ಪರಮಾತ್ಮನು. ಅವನಿಂದಲೇ ಸಮಸ್ತವೂ ಹುಟ್ಟಿರುವದು–ಎಂದಭಿಪ್ರಾಯ.

ಓಂ ॥ ಬ್ರಹ್ಮಾ ದೇವಾನಾಂ ಪದವೀಃ ಕವೀನಾಮೃಷಿರ್ವಿಪ್ರಾಣಾಂ
ಮಹಿಷೋ ಮೃಗಾಣಾಮ್ । ಶ್ಯೇನೋ ಗೃಧ್ರಾಣಾಗ್ಂ
ಸ್ವಧಿತಿ ರ್ವನಾನಾಗ್ಂ ಸೋಮಃ ಪವಿತ್ರಮತ್ಯೇತಿ ರೇಭನ್ ॥

ಹಿಂದಿನ ಮಂತ್ರದಲ್ಲಿ ಅಧ್ಯಾತ್ಮವಾದ ಪ್ರಾಣ, ಅಧಿಭೂತವಾಗಿರುವ ಸಮುದ್ರಾದಿಗಳು– ಎಲ್ಲವೂ ಆ ಭಗವಂತನಿಂದಲೇ ಸೃಷ್ಟವಾಗಿವೆಯೆಂದು ತಿಳಿಸಿದ ಅನಂತರ ಚೇತನವಸ್ತುಗಳಲ್ಲಿ ಉತ್ಕೃಷ್ಟವಾದವುಗಳನ್ನು ಅದೇ ಭಗವಂತನ ವಿಭೂತಿಗಳಾಗಿ ತಿಳಿಸಲು ಈ ಮಂತ್ರವು ಹೊರಟಿರುತ್ತದೆ. ಈ ಮೂಲಕ ಭಗವಂತನು ಜಗತ್ತಿನಲ್ಲಿ ತೋರಿಕೊಂಡು ತನ್ನ ಬಲಶಕ್ತಿವೀರ್ಯಾದಿಗಳನ್ನು ಪ್ರಕಟಿಸಿರುತ್ತಾನೆ–ಎಂದರ್ಥ. ಅಗ್ನಿಯೇ ಮುಂತಾದ ದೇವತೆಗಳಲ್ಲಿ ಆತನು ಚತುರ್ಮುಖಬ್ರಹ್ಮನೆನಿಸಿರುವನು. ಈ ಬ್ರಹ್ಮನ ಮಹಿಮೆಯನ್ನು ವಿಸ್ತಾರವಾಗಿ ಬ್ರಹ್ಮಸೂಕ್ತದಲ್ಲಿ ವಿವರಿಸಿದೆ. ಇವನಲ್ಲಿಯೇ ಎಲ್ಲಾ ಲೋಕಗಳೂ ಅಡಗಿರುವವೆಂದೂ ಅಲ್ಲಿ ತಿಳಿಸಿದೆ. ಅನಂತರ ಈತನು ಕವಿಗಳಲ್ಲಿ ಪದವಿಯಾಗಿರುವನು. ಪದವಿಯೆಂದರೆ ವ್ಯಾಕರಣಸಿದ್ಧವಾದ ಸುಬಂತ ಅಥವಾ ತಿಙಂತವಾದ ಪದಗಳು, ಅವುಗಳನ್ನು ಹೊಕ್ಕಿರುವವನು–ಎಂದರ್ಥ. ಕವಿಗಳಿಗೆಲ್ಲ ಸಾಹಿತ್ಯರಚನೆಯೇ ಜೀವಾಳವು. ಅಂತ ಸಾಹಿತ್ಯವು ಪದಗಳ ಸಮೂಹವಾಗಿದೆ. ಪದಗಳನ್ನು ವ್ಯಾಪಿಸಿಕೊಂಡು ಅರ್ಥತಾತ್ಪರ್ಯರೂಪವಾಗಿ ಅವುಗಳನ್ನಾಶ್ರಯಿಸಿದವನಾಗಿ ವ್ಯಾಸ–ವಾಲ್ಮೀಕಿಗಳೇ ಮುಂತಾದ ಕವಿಗಳ ಮೂಲಕ ಹೊರತೋರಿಕೊಂಡಿರುವ ಸಾಹಿತ್ಯರೂಪನಾಗಿ ಭಗವಂತನು ಲೋಕಾನುಗ್ರಹವನ್ನು ಮಾಡುತ್ತಿರುವನು–ಎಂದರ್ಥ. ಹಾಗೆಯೇ ವೈದಿಕಮಾರ್ಗಾನುವರ್ತಿಗಳಾದ ವಿಪ್ರರಲ್ಲಿ ಗೋತ್ರಪ್ರವರ್ತಕರಾದ ವಸಿಷ್ಠಾದಿಋಷಿಗಳ ರೂಪದಲ್ಲಿದ್ದುಕೊಂಡಿರುವನು. ನಾಲ್ಕು ಕಾಲಿನ ಮೃಗಸಮೂಹದಲ್ಲಿ ಹೆಚ್ಚಿನ ಶಕ್ತಿಯಿಂದ ಕೂಡಿರುವ ಮಹಿಷನಾಗಿರುವನು. ಬಲವೇ ಬಂಡವಾಳವಾಗಿ ಉಳ್ಳ ರಾಕ್ಷಸರಲ್ಲೊಬ್ಬನು ಅತಿಬಲಿಷ್ಠವಾದ ಮಹಿಷರೂಪದಿಂದ ಕಾಣಿಸಿಕೊಂಡು ದೇವಿಯೊಡನೆ ಯುದ್ಧ ಮಾಡಿದನೆಂದು ಪುರಾಣದಲ್ಲಿದೆ. ಆದ್ದರಿಂದ ಬಲಕ್ಕೆ ಪ್ರತಿನಿಧಿಯಾಗಿಯೂ ನಾಲ್ಕು ಪಾದಗಳುಳ್ಳ ಪ್ರಾಣಿಗಳಿಗೆ ಉಪಲಕ್ಷಣವಾಗಿಯೂ ಮಹಿಷನನ್ನು ಇಲ್ಲಿ ಹೇಳಿದೆ. ಇಂಥ ಮಹಿಷನಾಗಿರುವವನೂ ಆ ಭಗವಂತನೇ–ಎಂದರ್ಥ. ಇನ್ನು ಹಾರತಕ್ಕ ಪಕ್ಷಿಗಳಲ್ಲಿ ಅತ್ಯಂತ ಎತ್ತರಕ್ಕೆ ಹಾರುವ ಗೃಧ್ರಜಾತಿಯ ಹಕ್ಕಿಗಳಿವೆಯಷ್ಟೆ. ಅವುಗಳಲ್ಲಿ ಶ್ಯೇನನೆನಿಸಿರುವನು ಮತ್ತು ವನಗಳಿಗೆಲ್ಲ

ಸ್ವಧಿತಿಯಾಗಿರುವನು. ಸ್ವಧಿತಿ ಎಂದರೆ ಕೊಡಲಿ–ಎಂಬ ಆಯುಧವು. ಅದು ಮರಗಳನ್ನೇ ಕಡಿದು ನಾಶಗೊಳಿಸುವದರಿಂದ ಪ್ರಬಲವು. ಹಾಗೆ ಪರಮಾತ್ಮನು ಎಲ್ಲಕ್ಕಿಂತಲೂ ಪ್ರಬಲನಾಗಿದ್ದುಕೊಂಡಿರುವನು. ಮತ್ತು ಯಾಗಕ್ಕೆ ಮೂಲಭೂತವಸ್ತುವಾದ ಸೋಮವೆಂಬ ಬಳ್ಳಿಯ ರೂಪನಾಗಿದ್ದುಕೊಂಡು ರೇಭನ್–ಎಂದರೆ ಮಂತ್ರಶಬ್ದಗಳಿಂದ ಕೂಡಿದವನಾಗಿ ಶುದ್ಧಿಕಾರಣನೂ ಪವಿತ್ರವೂ ಆಗಿರುವ ಗಂಗೆ, ತುಳಸಿ–ಮುಂತಾದ ವಸ್ತುಗಳಿಗಿಂತಲೂ ಪರಮಪವಿತ್ರನಾಗಿ ವಿರಾಜಮಾನನಾಗಿರುವನು–ಎಂದಭಿಪ್ರಾಯ.

ಓಂ ॥ ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಂ ಬಹ್ವೀಂ ಪ್ರಜಾಂಜನ
ಯಂತೀಂ ಸರೂಪಾಮ್ । ಅಜೋ ಹ್ಯೇಕೋ ಜಷಮಾ
ಣೋಽನುಶೇತೇ ಜಹಾತ್ಯೇನಾಂ ಭುಕ್ತಭೋಗಾಮಜೋಽನ್ಯಃ ॥

ಈ ಮಂತ್ರದಲ್ಲಿ ಪರಮಾತ್ಮನ ಮಾಯಾಶಕ್ತಿಯೆನಿಸಿದ ಪ್ರಕೃತಿಯ ಮೂಲಕ ಜೀವಾತ್ಮನಿಗೆ ಸಂಭವಿಸುವ ಬಂಧಮೋಕ್ಷಗಳನ್ನು ವರ್ಣಿಸಿದೆ. ಪ್ರಕೃತಿಯೂ ಪುರುಷನೂ ಜನ್ಮವಿಲ್ಲದವರು. ಆದ್ದರಿಂದ ಅಜಾ–ಎಂದೂ ಅಜನೆಂದೂ ಕರೆಯಲಾಗಿದೆ. ಮೂಲಪ್ರಕೃತಿಯು ತಾನೊಂದೇ ಆಗಿರುವದು. ಪುರುಷನೂ ಏಕನೇ, ಪುರುಷನೂ ಪ್ರಕೃತಿಯೂ ಅನಾದಿಯಾಗಿರುವರು. ಹೀಗಿರುವಲ್ಲಿ ಕೆಂಪು, ಬಿಳುಪು, ಕಪ್ಪು–ಎಂಬೀ ವರ್ಣಗಳಿಂದ ಗುರುತಿಸಲ್ಪಟ್ಟು ರಜಸ್ಸು, ಸತ್ತ್ವ, ತಪಸ್ಸು, ಎಂಬ ಗುಣತ್ರಯಾತ್ಮಕಳಾದ ಪ್ರಕೃತಿಯು ದೇವತಿರ್ಯಜ್ ಮನುಷ್ಯಾದಿರೂಪವಾದ ಬಹುಸಂಖ್ಯೆಯ ಪ್ರಜೆಗಳನ್ನು ತನ್ನ ತ್ರಿಗುಣಗಳಿಗೆ ತಕ್ಕಂತೆಯೇ ಸಮಾನವಾದ ಸ್ವಭಾವವುಳ್ಳವುಗಳಾಗಿರುವಂತೆ ಸೃಷ್ಟಿಸಿರುವಳು. ಈ ಜಗತ್ತಿನ ಸೃಷ್ಟಿಯೆಲ್ಲವೂ ತ್ರಿಗುಣಾತ್ಮಕವಾಗಿರುವದು ಪ್ರಸಿದ್ಧವಾಗಿದೆ. ಇಂಥ ಜಗದ್ರೂಪವಾದ ಪ್ರಕೃತಿಯನ್ನು ಒಳಹೊಕ್ಕು ಅದನ್ನೇ ಅನುಸರಿಸುವ ಜೀವನೇ ಸಂಸಾರಿಯು. ಇವನು ಪ್ರಕೃತಿಯ ಸಂಗವುಳ್ಳವನಾಗಿ ಅದರಲ್ಲಿ ಪ್ರೀತಿಯುಳ್ಳವನಾಗಿದ್ದು ಸೇವಿಸುತ್ತಿರುವನು. ಆದರೆ ಯಾವಾಗ ಪ್ರಕೃತಿಸಂಗವು ತನಗೆ ಬಂಧಕವೆಂದು ತಿಳಿದವನಾಗಿ ಈವರೆಗೆ ಭೋಗಮಾಡಲ್ಪಟ್ಟ ಪ್ರಕೃತಿಯನ್ನು ಕೈಬಿಡುವನೋ ಅವನು ಮುಕ್ತನೆನಿಸುವನು. ಅಂಥ ಜೀವನು ತನ್ನ ನಿಜಸ್ವರೂಪಜ್ಞಾನದಿಂದ ಪ್ರಕೃತಿಸಂಗ ರಹಿತವಾದ ನಿತ್ಯವೂ ಪರಿಶುದ್ಧವೂ ಆದ ಮೋಕ್ಷಪದವಿಯನ್ನು ಹೊಂದುವನು–ಎಂದಭಿಪ್ರಾಯ. ಈ ಮಂತ್ರವು ಶ್ವೇತಾಶ್ವತರೋಪನಿಷತ್ತಿನಲ್ಲಿಯೂ ಇದೆ. ಪ್ರಕೃತಿಯಿಂದ ಸೃಷ್ಟವಾದ ಬೇರೆಬೇರೆಯ ದೇಹಗಳಲ್ಲಿ ತಾನು ಎಂದು ಅಂಟಿಕೊಳ್ಳುವದೇ ಜೀವತ್ವವು. ಇದರಿಂದ ಅಜನಾಗಿರುವ ಆತ್ಮನೂ ಜನ್ಮಾದಿಗಳುಳ್ಳವನೆಂದೂ ಜೀವನೆಂದೂ ವ್ಯವಹರಿಸಲ್ಪಡುವನು. ಆಯಾ ಪ್ರಕೃತ್ಯುಪಾಧಿಗೆ ತಕ್ಕಂತೆ ನಾನಾಜೀವರಾಗಿಯೂ

ಸೃಷ್ಟಿಯಲ್ಲಿ ಕಂಡುಬರುವನು. ಆದರೆ ತಾನು ಅಜನಾದ ಬ್ರಹ್ಮವೇ ಎಂದೂ ಪ್ರಕೃತಿಯು ತನ್ನ ಮಾಯಾಶಕ್ತಿಯೇ–ತನಗಿಂತ ಬೇರೆಯಲ್ಲವೆಂದೂ ಶಾಸ್ತ್ರಾಚಾರ್ಯೋಪದೇಶ ಗಳಿಂದ ತಿಳಿದನಾದರೆ ಜೀವತ್ವದಿಂದ ನಿರ್ಮುಕ್ತನಾಗಿ ಸ್ವಯಂ ಪರಮೇಶ್ವರನಾಗಿ ವಿರಾಜಿಸುವನು–ಎಂದಭಿಪ್ರಾಯ.

**ಓಂ ॥ ಹಂಸಃ ಶುಚಿಷದ್ ವಸುರನ್ತರಿಕ್ಷಸದ್ ಹೋತಾ ವೇದಿಷದತಿಥಿಃ ದುರೋಣಸತ್। ನೃಷದ್ವರಸದೃತಸದ್ವ್ಯೋಮಸದಬ್ಜಾ ಗೋಜಾ ಋತಜಾ ಅದ್ರಿಜಾ ಋತಂ ಬೃಹತ್ ॥**

ಈ ಮಂತ್ರದಲ್ಲಿ ಪ್ರಕೃತಿಯಿಂದ ಬಿಡುಗಡೆಯನ್ನು ಹೊಂದಿದವನು ಎಲ್ಲೆಲ್ಲಿಯೂ ಎಲ್ಲಾ ರೂಪದಲ್ಲಿಯೂ ಇರುವ ಭಗವಂತನನ್ನೇ ಕಾಣುತ್ತಾನೆ; ಆ ಭಗವಂತನು ತಾನೇ ಜಗತ್ತೆಲ್ಲವೂ ಆಗಿ ತೋರಿಕೊಂಡಿರುವನು–ಎಂದು ತಿಳಿಸಲಾಗುವದು. ಪರಮಾತ್ಮನಿಗೆ ಹಂಸನೆಂದು ಹೆಸರಿರುವದು. **ಹಂತಿ ಗಚ್ಛತೀತಿ ಹಂಸಃ**–ಎಂಬ ವ್ಯುತ್ಪತ್ತಿಯಂತೆ ಸದಾ ಸಂಚಾರಮಾಡುತ್ತಾ ಇರುವವನು ಎಂದರೆ ಸೂರ್ಯನ ರೂಪದಲ್ಲಿರುವವನು– ಎಂಬರ್ಥ. ಶುದ್ಧವಾದ ಜ್ಯೋತಿರ್ಮಯವಾದ ಮಂಡಲದಲ್ಲಿ ಇದ್ದುಕೊಂಡಿರುವದರಿಂದ **ಶುಚಿಷದನೆನಿಸಿರುವನು**. ಎಲ್ಲಾ ಪ್ರಾಣಿಗಳನ್ನೂ ನಿಯಮನಮಾಡುವ ವಾಯುವೆಂಬ ಸೂತ್ರಾತ್ಮನಾಗಿದ್ದು ಎಲ್ಲೆಲ್ಲೂ ವಾಸಮಾಡುವದರಿಂದ **ವಸುವೆನಿಸಿರುವನು**. ಅಂತರಿಕ್ಷವನ್ನೂ ವ್ಯಾಪಿಸಿದವನಾಗಿ ಅಲ್ಲಿ ಸಂಚರಿಸುವ ಪ್ರಾಣಿಗಳಲ್ಲಿಯೂ ಇದ್ದುಕೊಂಡಿರುವನಾದ್ದರಿಂದ **ಅಂತರಿಕ್ಷಸದನೆನಿಸಿರುವನು**. ಗಾರ್ಹಪತ್ಯವೇ ಮುಂತಾದ ಅಗ್ನಿ ರೂಪದಿಂದ ಇರುವವನಾದ್ದರಿಂದ **ಹೋತೃವೆನಿಸಿರುವನು**. ಸೋಮಯಾಗಾದಿ ಗಳಲ್ಲಿ ಪ್ರಧಾನವಾದ ವೇದಿಕೆಗಳಲ್ಲಿ ಕುಳಿತಿರುವನಾದ್ದರಿಂದ **ವೇದಿಷದನೆನಿಸುವನು**. ಇನ್ನು ಅಪರಿಚಿತನಾಗಿ ಮಧ್ಯಾಹ್ನ ಕಾಲಕ್ಕೆ ಮನೆಯ ಬಾಗಿಲಿಗೆ ಬಂದು ಆತಿಥ್ಯವನ್ನು ಸ್ವೀಕರಿಸಿ (**ತಿಥಿರಪಿ ನ ತಿಷ್ಠತಿ**) ಒಂದು ಹಗಲು ಕೂಡ ನಿಲ್ಲದೆ ಹೊರಟುಹೋಗು ವವನನ್ನು ಅತಿಥಿಯೆನ್ನುವರು. ಆ ರೂಪದಲ್ಲಿರುವವನೂ ಪರಮಾತ್ಮನೇ ಎಂದರ್ಥ. ಮತ್ತು ದುರೋಣವೆಂದರೆ ಕಲಶವು. ಅದರಲ್ಲಿರುವನಾದ್ದರಿಂದ **ದುರೋಣಸದನು**. ಯಾವದಾದರೂ ದೇವತಾವ್ರತಪೂಜಾದಿಗಳನ್ನು ಮಾಡುವಾಗ ಮೊದಲು ಕಲಶವನ್ನು ಸ್ಥಾಪಿಸುವರು. ಕಲಶಗಳಲ್ಲಿಯೇ ದೇವತೆಗಳನ್ನು ಆವಾಹಿಸುವರು. ಅಂಥ ಕಲಶಾಭಿಮಾನಿ ಯಾಗಿರುವವನೇ **ದುರೋಣಸದನು**–ಎಂದರ್ಥ. ಇನ್ನು ಮನುಷ್ಯರಲ್ಲೆಲ್ಲ ಇರುವವನಾದ್ದರಿಂದ **ನೃಷದನೆನಿಸುವನು**. ವರ ಎಂದರೆ ಶ್ರೇಷ್ಠವಾದ ಕಾಶೀ ಮುಂತಾದ ಕ್ಷೇತ್ರಗಳಲ್ಲಿದ್ದು ಪೂಜಿಸಲ್ಪಡುವವನಾದ್ದರಿಂದ **ವರಸದನೆನಿಸುವನು**. ಋತವೆಂದರೆ

ಕರ್ಮಗಳ ಫಲವು. ವೈದಿಕಕರ್ಮಗಳ ಫಲರೂಪನಾಗಿದ್ದುಕೊಂಡು **ಋತಸದನ**ನೆನಿಸಿರುವನು. ಇನ್ನು ಆಕಾಶದಲ್ಲಿ ನಕ್ಷತ್ರ–ಗ್ರಹಾದಿರೂಪದಿಂದಿರುವನಾದ್ದರಿಂದ **ವ್ಯೋಮಸದನ**ನೆನಿಸಿರುವನು. ನೀರಿನಲ್ಲಿ ಹುಟ್ಟಿರುವ ಮೀನು–ಶಂಖ ಮುಂತಾದ ರೂಪಗಳಲ್ಲಿರುವನಾದ್ದರಿಂದ **ಅಬ್ಜ**ನೆನಿಸಿರುವನು. ಗೋವುಗಳಲ್ಲಿ ಹಾಲು, ಬೆಣ್ಣೆ–ಮುಂತಾದ ರೂಪದಿಂದ ಇದ್ದುಕೊಂಡಿರುವದರಿಂದ **ಗೋಜ**ನೆನಿಸಿರುವನು. ಸತ್ಯವಚನವನ್ನು ಆಡುವದರಿಂದ ಉಂಟಾಗುವ ಕೀರ್ತಿರೂಪದಿಂದ ಇರುವನಾದ್ದರಿಂದ **ಋತಜನು**. ಬೆಟ್ಟಗಳಲ್ಲಿ ಹುಟ್ಟಿರುವ ಮರಗಳ ರೂಪದಿಂದಿರುವವನು **ಅದ್ರಿಜನು**. ಜಗತ್ತಿಗೇ ಆಶ್ರಯನಾದ ಆದಿತ್ಯನೇ **ಋತವು**. ಪರಬ್ರಹ್ಮವೇ **ಬೃಹತ್**–ಎಂದರ್ಥ. ಹೀಗೆ ಸಮಸ್ತವೂ ಆಗಿರುವ ಪರಬ್ರಹ್ಮವನ್ನು ಈ ಮಂತ್ರದಲ್ಲಿ ಸ್ತುತಿಸಲಾಗಿದೆ.

**ಓಂ ॥ ಘೃತಂ ಮಿಮಿಕ್ಷಿರೇ ಘೃತಮಸ್ಯ ಯೋನಿಃ ಘೃತೇ ಶ್ರಿತೋ ಘೃತಮುವಸ್ಯ ಧಾಮ । ಅನುಷ್ವಧಮಾವಹ ಮಾದಯಸ್ವ ಸ್ವಾಹಾಕೃತಂ ವೃಷಭ ವಕ್ಷಿ ಹವ್ಯಮ್ ॥**

ಈ ಮಂತ್ರವು ಅಗ್ನಿಯ ಪ್ರಾರ್ಥನಾರೂಪವಾಗಿದೆ. ಅಗ್ನಿಗೆ ತುಪ್ಪದ ಆಹುತಿಗಳು ಬಹಳ ಇಷ್ಟವಾದವುಗಳಾಗಿವೆ. ಆದ್ದರಿಂದ ಆಜ್ಯಾಹುತಿಗಳನ್ನು ನೀಡಿ ನಮ್ಮ ದೇಹವೂ ಪರಬ್ರಹ್ಮವಿಜ್ಞಾನಕ್ಕೆ ತಕ್ಕದ್ದಾಗುವಂತೆ ಮಾಡಬೇಕೆಂದು ಅಗ್ನಿಯನ್ನು ಕೇಳಲಾಗಿದೆ. ಹಿಂದಿನ ಕಾಲಕ್ಕೆ ಯಾಗಮಾಡಿದವರೆಲ್ಲರೂ ತುಪ್ಪವನ್ನು ಅಗ್ನಿಯಲ್ಲಿ ಚೆನ್ನಾಗಿ ಅರ್ಪಿಸಿದರು. **ಮಿಮಿಕ್ಷಿರೇ** ಎಂದರೆ ತೋಯಿಸಿದರು–ಎಂದರ್ಥ. ಹೇಗೆ ಕೃಷಿಭೂಮಿಯನ್ನು ನೀರಿನಿಂದ ತೋಯಿಸುವರೋ ಹಾಗೆ ಅಗ್ನಿಯನ್ನು ತುಪ್ಪದಿಂದ ಸೇಚನ ಮಾಡಿದರು. ಈ ತುಪ್ಪವೇ ಅಗ್ನಿಯು ಚೆನ್ನಾಗಿ ಎದ್ದು ಉರಿಯಲು ನಿಮಿತ್ತವಾಗಿರುವದು. ಅಗ್ನಿದೇವನು ತುಪ್ಪವನ್ನೇ ಆಶ್ರಯಿಸಿಕೊಂಡಿರುವನು. ಆದ್ದರಿಂದ ಅವನಿಗೆ ಅದು ಸ್ಥಾನ (ಮನೆ)ಯೆನಿಸಿರುವದು–ಎಂದರೆ ಅವನ ತೇಜಸ್ಸಿಗೆ ಕಾರಣವಾಗಿರುವದು. ಆದ್ದರಿಂದ 'ಎಲೈ ಅಗ್ನಿಯೆ, ನಾವು ಸಮರ್ಪಿಸುವ ಸ್ವಧೇ (ಆಹುತಿ) ಗೆ ಅನುಗುಣವಾಗಿ (ಅನುಷ್ವಧಂ) ಆವಹ–ದೇವತೆಗಳನ್ನು ಕರೆತರುವವನಾಗು. ಕರೆತಂದು ಅನಂತರ **ಮಾದಯಸ್ವ**–ಹೆಚ್ಚಿನ ಸಂತೋಷವುಳ್ಳವರಾಗುವಂತೆ ಮಾಡು. ಎಲೈ ಶ್ರೇಷ್ಠನೆ, ನಾವು ಸ್ವಾಹಾಕಾರಗಳಿಂದ ಕೊಟ್ಟಿರುವ ಹವ್ಯವನ್ನು ವಕ್ಷಿ–ಎಂದರೆ ದೇವತೆಗಳಿಗೆ ತಲುಪಿಸುವವನಾಗು–ಎಂದರ್ಥ. ಯಾವ ದೇವತೆಗಳಿಗೆ ನಾವು ಹವಿರರ್ಪಣೆಯನ್ನು ಮಾಡಬೇಕಾದರೂ ಅಗ್ನಿಯ ಮೂಲಕವೇ ಸಮರ್ಪಿಸಬೇಕು. ದೇವತೆಗಳಿಗೆಲ್ಲ ಸರ್ವಸಾಮಾನ್ಯವಾಗಿ ಆಜ್ಯವೇ ಆಹಾರವು. ಕೆಲವು ಸಂದರ್ಭಗಳಲ್ಲಿ ಚರುಪುರೋಡಾಶಾದಿ

ದ್ರವ್ಯಗಳಿದ್ದರೂ ಆಜ್ಯವಿದ್ದೇ ಇರುವದು. ಆದ್ದರಿಂದ ದೇವತೆಗಳ ಪರವಾಗಿ ಅಗ್ನಿಯು ಆಜ್ಯಾಹುತಿಗಳನ್ನು ಸ್ವೀಕರಿಸಿ ಅವರಿಗೆ ತಲುಪಿಸಿ ನಾವುಗಳು ದೇವತಾನುಗ್ರಹಕ್ಕೆ ಪಾತ್ರರಾಗುವಂತೆ ಮಾಡಬೇಕೆಂದು ಇಲ್ಲಿ ಕೇಳಿಕೊಂಡಿದೆ.

ಓಂ ॥ ಸಮುದ್ರಾದೂರ್ಮಿರ್ಮಧುಮಾಗ್ಂ ಉದಾರದುಪಾಗ್ಂಶುನಾ ಸಮಮೃತತ್ವಮಾನಟ್ । ಘೃತಸ್ಯ ನಾಮ ಗುಹ್ಯಂ ಯದಸ್ತಿ ಜಿಹ್ವಾ ದೇವಾನಾಮಮೃತಸ್ಯ ನಾಭಿಃ ॥

ಈ ಮಂತ್ರವು ಓಂಕಾರವು ಮೋಕ್ಷಸಾಧನವೆಂದು ತಿಳಿಸಲು ಹೊರಟಿದೆ. ಸಮುದ್ರದಿಂದ ಅಲೆಗಳು ಏಳುವಂತೆ ಚಿದಾನಂದಸಮುದ್ರನಾದ ಪರಮಾತ್ಮನಿಂದ ಅಲೆಯಂತಿರುವ ಈ ವ್ಯಾಕೃತಪ್ರಪಂಚವು ಹೊರತೋರಿಕೊಂಡಿರುವದು. ಹಾಗೆಯೇ ಘೃತನಾಮಕಪರಬ್ರಹ್ಮಕ್ಕೆ ರಹಸ್ಯವಾದ ಪ್ರಣವವೆಂಬ ಹೆಸರಿದೆಯಷ್ಟೆ. ಅದು ಸರ್ವವೇದಗಳಲ್ಲಿಯೂ ಪ್ರಸಿದ್ಧವಾಗಿರುವದು. ಘೃತವೆಂಬ ಹೆಸರು ಪರಮಾತ್ಮನಿಗೆ ಹೇಗೆ ಹೊಂದುತ್ತದೆ? ಎಂದರೆ ಘೃ ಎಂಬ ಧಾತುವಿಗೆ ದೀಪ್ತಿಎಂಬರ್ಥವಿದೆ. ಬ್ರಹ್ಮವು ಸ್ವಯಂಪ್ರಕಾಶವಾಗಿದ್ದು ಹೊಳೆಯುತ್ತಿರುವದರಿಂದ ಘೃತವೆಂದು ಕರೆಯಲಾಗಿದೆ. ಇಂಥ ಘೃತವೆನಿಸಿರುವ ಬ್ರಹ್ಮದ ಗುಹ್ಯನಾಮವೆಂದರೆ ಓಂಕಾರವು. ಓಂ ಎಂಬುದು ಪರಮಾತ್ಮನ ಪ್ರಿಯನಾಮವೆಂದು ಛಾಂದೋಗ್ಯೋಪನಿಷತ್ತಿನಲ್ಲಿದೆ. ಈ ನಾಮವನ್ನು ಉಪಾಂಶುವಾಗಿ ಎಂದರೆ ಪಿಸುಧ್ವನಿಯಿಂದ ಮೆಲ್ಲನೆ ಉಚ್ಚರಿಸುತ್ತಾ ಜಪಮಾಡುತ್ತಿದ್ದರೆ ಅಮೃತತ್ವವನ್ನು ಎಂದರೆ ಉತ್ಪತ್ತಿವಿನಾಶಗಳಿಲ್ಲದ ಪದವಿಯನ್ನು ಸಾಧಕನು ಹೊಂದುವನು. ಮತ್ತು ಪ್ರಣವವೆಂಬ ಹೆಸರಿನ ಈ ಮಂತ್ರವು ಧ್ಯಾನನಿಷ್ಠರಾದ ದೇವತೆಗಳಿಂದಲೂ ನಿರಂತರವಾಗಿ ಜಪಿಸಲ್ಪಟ್ಟು ನಾಲಗೆಯ ಮೇಲೆಯೇ ಧರಿಸಲ್ಪಟ್ಟಿರುವದು. ಮತ್ತು ಇದು ನಾಶರಹಿತವಾದ ಮೋಕ್ಷದ ನಾಭಿ ಎಂದರೆ ಮಧ್ಯಭಾಗದಂತೆ ಇರುವದು. ಹೇಗೆ ರಥಚಕ್ರದ ನಾಭಿಯು ಮಧ್ಯದಲ್ಲಿದ್ದು ಹಾರೆಕೋಲುಗಳಿಗೆ ಆಶ್ರಯಭೂತವಾಗಿದೆಯೋ ಹಾಗೆ ಓಂಕಾರವು ಸಾಧಕರಿಗೆ ಮನದಲ್ಲಿಯೂ ವಾಕ್ಕಿನಲ್ಲಿಯೂ ನೆಲೆಸಿದ್ದು ಅವರು ಬಯಸುವ ಎಲ್ಲಾ ಪುರುಷಾರ್ಥಗಳಿಗೂ ಕಾರಣವಾಗಿರುವದು– ಎಂದರ್ಥ.

ಓಂ ॥ ವಯಂ ನಾಮ ಪ್ರಬ್ರವಾಮಾ ಘೃತೇನಾಸ್ಮಿನ್ ಯಜ್ಞೇ ಧಾರಯಾಮಾ ನಮೋಭಿಃ । ಉಪ ಬ್ರಹ್ಮಾ ಶೃಣವಚ್ಛಸ್ಯಮಾನಂ ಚತುಃಶೃಂಗೋಽವಮೀದ್ಗೌರ ಏತತ್ ॥

ಈ ಮಂತ್ರವೂ ಪ್ರಣವದ ಸ್ತುತಿಯಾಗಿದೆ. ಸ್ವಯಂ ಪ್ರಕಾಶಮಾನವಾಗಿ ಘೃತವೆಂಬ ಹೆಸರಿನಿಂದ ವಿರಾಜಿಸುತ್ತಿರುವ ಬ್ರಹ್ಮದ ನಾಮವಾದ ಓಂಕಾರವನ್ನು ಈ ಜ್ಞಾನಯಜ್ಞದಲ್ಲಿ ನಾವು ಸದಾ ಉಚ್ಚರಿಸುತ್ತಿರುವೆವು. ಮತ್ತು ನಮಸ್ಕಾರವೆಂಬ ಮಾತಿನೊಡನೆ ಕೂಡಿ ಮನಸ್ಸಿನಲ್ಲಿಯೂ ನಿರಂತರವಾಗಿ ಧರಿಸಿರುವೆವು. ಹೀಗೆ ನಾವು ಸ್ತುತಿಸುತ್ತಿರುವ ಮತ್ತು ಅಕ್ಕಪಕ್ಕಗಳಲ್ಲಿರುವ ತತ್ತ್ವವಿದರಿಂದಲೂ ಶ್ರವಣ ಮಾಡಲ್ಪಡುತ್ತಿರುವ ಈ ಬ್ರಹ್ಮವು ನಾಲ್ಕು ಕೋಡುಗಳುಳ್ಳ ಬಿಳುಪಾದ ವರ್ಣದ ಪ್ರಣವವೆಂಬ ವೃಷಭದ ಮೂಲಕ ಗುರುತಿಸಲ್ಪಟ್ಟಿರುವದು. ಅಕಾರ–ಉಕಾರ–ಮಕಾರ–ನಾದಗಳೆಂಬಿವೇ ಓಂಕಾರವೆಂಬ ವೃಷಭದ ನಾಲ್ಕು ಕೋಡುಗಳಾಗಿವೆ. ಅವುಗಳನ್ನು ನೆಪಮಾಡಿಕೊಂಡು ಪರಬ್ರಹ್ಮವನ್ನು ಸಾಧಕರು ಗೊತ್ತುಮಾಡುವರು; ಕಂಡುಕೊಳ್ಳುವರು. ಪ್ರಣವವು ಬ್ರಹ್ಮವನ್ನು ಪ್ರತಿಪಾದಿಸುವದು–ಎಂದರ್ಥ. ಶಿವದೇವಾಲಯಗಳಲ್ಲಿ ಸಾಮಾನ್ಯವಾಗಿ ಈಶ್ವರನ ಮುಂಭಾಗದಲ್ಲಿ ಬಸವಣ್ಣನನ್ನು ಸ್ಥಾಪಿಸಿರುತ್ತಾರೆ. ಈತನನ್ನೇ ನಂದಿಯೆನ್ನುವರು. ಆಧ್ಯಾತ್ಮಿಕವಾಗಿ ನೋಡಿದರೆ ಇವನೇ ಓಂಕಾರವು. ವೃಷಭದ ಮೂಲಕ ಶಿವದರ್ಶನವನ್ನು ಮಾಡುವಂತೆ ಓಂಕಾರದ ಮೂಲಕ ಬ್ರಹ್ಮವನ್ನು ಕಂಡುಕೊಳ್ಳಬೇಕು–ಎಂದಭಿಪ್ರಾಯ.

**ಓಂ ॥ ಚತ್ವಾರಿ ಶೃಂಗಾ ತ್ರಯೋ ಅಸ್ಯ ಪಾದಾ ದ್ವೇ ಶೀರ್ಷೇ ಸಪ್ತ ಹಸ್ತಾಸೋ ಅಸ್ಯ । ತ್ರಿಧಾ ಬದ್ಧೋ ವೃಷಭೋ ರೋರವೀತಿ ಮಹೋ ದೇವೋ ಮರ್ತ್ಯಾಗ್ಂ ಆವಿವೇಶ ॥**

ಈ ಮಂತ್ರವು ಪರಮಾತ್ಮನ ಸ್ತುತಿಪರವಾಗಿದೆ. ಓಂಕಾರದ ನಾಲ್ಕು ಕೋಡುಗಳನ್ನೇ ಇಲ್ಲಿಯೂ ತೆಗೆದುಕೊಳ್ಳಬೇಕು. ಏಕೆಂದರೆ ಪ್ರಣವರೂಪದಿಂದಿರುವವನು ಪರಮಾತ್ಮನೇ–ಎಂದರ್ಥ. ಅನಂತರ ಅಧ್ಯಾತ್ಮವಾಗಿ ವಿಶ್ವ–ತೈಜಸ–ಪ್ರಾಜ್ಞರೆಂಬ ಆತ್ಮರುಗಳು ಅಥವಾ ಅಧಿದೈವವಾಗಿ ವಿರಾಡ್–ಹಿರಣ್ಯಗರ್ಭ–ಅವ್ಯಾಕೃತಗಳೇ ಈ ಬ್ರಹ್ಮದ ಮೂರು ಪಾದಗಳು. ಪರಾಪರಪ್ರಕೃತಿಗಳೆಂಬ ಚಿದಚಿತ್ ಶಕ್ತಿಗಳೇ ಎರಡು ತಲೆಗಳು. ಭೂರಾದಿಸಪ್ತಲೋಕಗಳೇ ಏಳು ಹಸ್ತಗಳು. ಇಂಥ ಪ್ರಣವರೂಪನಾದ ಭಗವಂತನು ಮಾತ್ರೆಗಳು–(ಅಕಾರುಕಾರಮಕಾರಗಳು) ಅವಸ್ಥಾಭಿಮಾನಿಗಳಾದ ಆತ್ಮರು (ವಿಶ್ವ–ತೈಜಸ–ಪ್ರಾಜ್ಞರು) ಸಮಷ್ಟಿತತ್ತ್ವಾಭಿಮಾನಿಗಳಾದ ದೇವತೆಗಳು (ವಿರಾಡ್–ಹಿರಣ್ಯಗರ್ಭ–ಅವ್ಯಾಕೃತಗಳು) ಹೀಗೆ ಮೂರು ವಿಧವಾದ ಉಪಾಧಿಗಳಿಂದ ಕಟ್ಟುವಡೆದವನಾಗಿ–ಎಂದರೆ ಸಂಬದ್ಧನಾಗಿ ರೋರವೀತಿ ಎಂದರೆ ಶಬ್ದಮಾಡುತ್ತಿರುವನು. ಓಂಕಾರದಿಂದ ಪ್ರತಿಪಾದ್ಯನಾಗಿರುವನು–ಎಂದರ್ಥ.

ಹೇಗೆ ಶಬ್ದಮಾಡುತ್ತಿರುವನು? ಎಂದರೆ ಈ ದೇವನು ಮನುಷ್ಯದೇಹಗಳನ್ನು ಪ್ರವೇಶಿಸಿ ಎಲ್ಲೆಲ್ಲಿಯೂ ಧ್ವನಿಗೈಯುತ್ತಿರುವನು–ಎಂದಭಿಪ್ರಾಯ. ಇದೇ ಮಂತ್ರವನ್ನು ಅಗ್ನಿದೇವತೆಯ ಪ್ರಾರ್ಥನೆಯಾಗಿ ವೈದಿಕರು ಬಳಸುವದರಿಂದ ಅಗ್ನಿಪರವಾಗಿಯೂ ಮತ್ತೊಂದು ಭಾಷ್ಯದಲ್ಲಿ ಅರ್ಥಮಾಡಲಾಗಿದೆ. ಯಜ್ಞಮಾಡುವ ಕಾಲಕ್ಕೆ **ಹೋತೃ, ಅಧ್ವರ್ಯು, ಉದ್ಗಾತೃ, ಬ್ರಹ್ಮ**–ಎಂಬ ನಾಲ್ವರು ಋತ್ವಿಜರಿರುವರು. ಇವರೇ ಅಗ್ನಿದೇವನ ನಾಲ್ಕು ಕೋಡುಗಳನ್ನು ಪ್ರತಿನಿಧಿಸುವರು. **ಆಹವನೀಯ, ಗಾರ್ಹಪತ್ಯ, ಅನ್ವಾಹಾರ್ಯಪಚನ**–ಎಂಬೀ ಅಗ್ನಿತ್ರಯರೇ ಯಜ್ಞಪುರುಷನ ಮೂರು ಪಾದಗಳು. **ಯಜಮಾನ–ಪತ್ನಿ**–ಇವರುಗಳೇ ಎರಡು ತಲೆಗಳು. ಅಥವಾ **ಪ್ರಾಯಣೀಯ–ಉದಯನೀಯ**ಗಳೆಂಬಿವೇ ತಲೆಗಳು ಎನ್ನಬಹುದು. **ಗಾಯತ್ರಿಯೇ** ಮೊದಲಾದ ಏಳು ಛಂದಸ್ಸುಗಳೇ ಏಳು ಹಸ್ತಗಳು. **ಪ್ರಾತಃಸವನ, ಮಾಧ್ಯಂದಿನಸವನ, ಸಾಯಂಸವನ**ಗಳೆಂಬ ಮೂರು ಸವನಗಳೇ ಮೂರು ಬಂಧನವು. ಯಜ್ಞವು ಯಜಮಾನನಿಗೆ ಇಷ್ಟಾರ್ಥಗಳನ್ನೀಯುವದರಿಂದ ಅದೇ ವೃಷಭವು. ಯಜ್ಞದಲ್ಲಿ ಮೂರು ವೇದಗಳನ್ನೂ ಗಾನಮಾಡುವದರಿಂದ ಆಗುವ ಶಬ್ದವೇ ವೃಷಭದ ಕೂಗುವಿಕೆಯು. ಹೀಗೆ ಅಗ್ನಿದೇವನೇ ತನ್ನ ಅಂಶದಿಂದ ಮನುಷ್ಯರುಗಳಲ್ಲಿಯೂ ಪ್ರವೇಶಿಸಿ ಅವರು ಮಾಡುವ ಯಜ್ಞಗಳ ರೂಪದ ಪೂಜೆಯನ್ನು ಸ್ವೀಕರಿಸುವನು–ಎಂದಭಿಪ್ರಾಯ.

**ಓಂ ॥ ತ್ರಿಧಾ ಹಿತಂ ಪಣಿಭಿರ್ಗುಹ್ಯಮಾನಂ ಗವಿ ದೇವಾಸೋ ಘೃತಮನ್ವವಿಂದನ್ । ಇಂದ್ರ ಏಕಗ್‌ಂ ಸೂರ್ಯ ಏಕಂ ಜಜಾನ ವೇನಾದೇಕಗ್‌ಂ ಸ್ವಧಯಾ ನಿಷ್ಟತಕ್ಷುಃ ॥**

ಈ ಮಂತ್ರವು ಪರಮಾರ್ಥವಸ್ತುಪ್ರಕಾಶಕವಾಗಿದೆ. ಸ್ವಯಂ ಪ್ರಕಾಶನಾದ ಘೃತನಾಮಕಭಗವಂತನು ಬ್ರಹ್ಮಾಂಡದಲ್ಲಿ ವಿರಾಡಾದಿ ಮೂರು ರೂಪಗಳಿಂದಲೂ ಶರೀರದಲ್ಲಿ ವಿಶ್ವತೈಜಸಪ್ರಾಜ್ಞರೂಪದಿಂದಲೂ ಇದ್ದುಕೊಂಡಿರುವನು. ಇವನು ಪಣಿಗಳಿಂದ ಎಂದರೆ ಸ್ತೋತ್ರಮಾಡುವವರಿಂದ (ಆಚಾರ್ಯರುಗಳಿಂದ) ಪರಮರಹಸ್ಯನೆಂದು ತಿಳಿಯಲ್ಪಟ್ಟವನಾಗಿರುವನು. ದೇವತೆಗಳಂತೆ ಸಾತ್ವಿಕರೂ ಅಂತರ್ಮುಖರೂ ಆದವರು **ಗವಿ**–ಎಂದರೆ **ತತ್ತ್ವಮಸಿ**–ಮುಂತಾದ ವೇದವಾಕ್ಯಗಳಲ್ಲಿ ಕ್ರಮವಾಗಿ ಇವನನ್ನು ಕಂಡುಕೊಂಡಿರುವರು. ಇನ್ನು ಇಂದ್ರನು ಎಂದರೆ ಪರಮೈಶ್ವರ್ಯಸಂಪನ್ನನಾದ ವಿರಾಟ್ ಪುರುಷನು. ಏಕಂ–ಎಂದರೆ ಅವಸ್ಥಾತ್ರಯಗಳಲ್ಲಿ ಒಂದಾದ ಎಚ್ಚರವನ್ನು ಉಂಟುಮಾಡಿದನು. ಹಾಗೆಯೇ ಸೂರ್ಯನು–ಎಂದರೆ ತೇಜೋಮಯನಾದ ಹಿರಣ್ಯಗರ್ಭನು ಸ್ವಪ್ನವನ್ನು ಉಂಟುಮಾಡಿದನು. ಪರಮಾತ್ಮನೊಬ್ಬನೇ ವಿರಾಡ್–

ಹಿರಣ್ಯಗರ್ಭರ ರೂಪದಿಂದಲೂ ತೋರಿಕೊಂಡು ಎಚ್ಚರಕನಸುಗಳಲ್ಲಿ ಆಯಾ ಅವಸ್ಥೆಯ ಭೋಕ್ತೃಗಳಾಗಿ ಕಾಣುತ್ತಿರುವನು–ಎಂದರ್ಥ. ಇನ್ನು ವೇನನಿಂದ ಎಂದರೆ ಸರ್ವದುಃಖ ರಹಿತನಾದ ಪ್ರಕಾಶಮಾನನಾದ ಅವ್ಯಾಕೃತನಿಂದ ಸುಷುಪ್ತಿ ಎಂಬ ಅವಸ್ಥೆಯು ಉಂಟಾಯಿತು. ಅನಂತರ ಸ್ವಧೆಯೆನಿಸಿದ ಚಿದ್ರೂಪನಾದ ತುರೀಯಾತ್ಮನು ಈ ಮೂವರಿಗೂ ಆಧಾರನಾಗಿ ಕಂಡುಬಂದನು. ಇವರೆಲ್ಲರೂ ಆ ವೇನನಿಂದಲೇ ಅವನ ಸ್ವಯಂಜ್ಯೋತಿಃಸ್ವಭಾವದಿಂದಲೇ ತೋರಿಕೊಂಡಿರುವರು–ಎಂದರ್ಥ. ಇಲ್ಲಿ ವೇನನೆಂದರೆ ವನನೀಯನು–ಸಂಭಜನೀಯನು–ಎಂದೂ ಸ್ವಧಯಾ ಎಂದರೆ **ಸ್ವಸ್ಮಿನ್ನೇವ ಧೀಯತೇ ಇತಿ ಸ್ವಧಾ**–ಎಂಬ ವ್ಯುತ್ಪತ್ತಿಯಂತೆ ತನ್ನ ಆಧಾರದಲ್ಲಿಯೇ ತಾನೇ ನಿಂತಿರುವ ಸ್ವಮಹಿಮಾ ಪ್ರತಿಷ್ಠನಾದ ಭಗವಂತನೆಂದೂ ಅರ್ಥಮಾಡಲಾಗಿದೆ. ಆದ್ದರಿಂದ ಅವಸ್ಥಾತ್ರಯಭೋಕ್ತೃಗಳಾದ ವಿಶ್ವಾದ್ಯಾತ್ಮರುಗಳಿಗೂ ಆಧಿದೈವಿಕವಾಗಿ ಹೊರಹೊಮ್ಮಿರುವ ವಿರಾಡಾದ್ಯಾತ್ಮರುಗಳಿಗೂ ಈ ಪರಮಾತ್ಮನೇ ಮೂಲನೆಂದು ಅಭಿಪ್ರಾಯ.

**ಓಂ ॥ ಯೋ ದೇವಾನಾಂ ಪ್ರಥಮಂ ಪುರಸ್ತಾದ್ ವಿಶ್ವಾಧಿಯೋ ರುದ್ರೋ ಮಹರ್ಷಿಃ। ಹಿರಣ್ಯಗರ್ಭಂಪಶ್ಯತ ಜಾಯಮಾನಗ್ಂ ಸ ನೋ ದೇವಃ ಶುಭಯಾ ಸ್ಮೃತ್ಯಾ ಸಂಯುನಕ್ತು ॥**

ಈ ಮಂತ್ರವು ಬ್ರಹ್ಮವಿದ್ಯಾಲಾಭಕ್ಕಾಗಿ ಜಪಿಸತಕ್ಕದ್ದಾಗಿದೆ. ಇದರಲ್ಲಿ ಹಿರಣ್ಯ ಗರ್ಭಬ್ರಹ್ಮನಿಗೂ ಜನಕನೆಂದು ಭಗವಂತನನ್ನು ಸ್ತುತಿಸಲಾಗಿದೆ. ದೇವತೆಗಳಲ್ಲಿ ಪ್ರಥಮನೂ ಅಗ್ನಿ, ಇಂದ್ರ–ಮೊದಲಾದವರು ಹುಟ್ಟುವ ಮುಂಚೆಯೇ ಜನಿಸಿದವನೂ ಜಗತ್ತಿಗೆಲ್ಲ ಕಾರಣನೆನಿಸಿರುವದರಿಂದ ಜಗತ್ತಿಗಿಂತ ಅಧಿಕನಾದವನೂ ರುದ್ರನೆಂಬ ಹೆಸರಿನಿಂದ ವೇದಪ್ರತಿಪಾದ್ಯನೂ ಅತೀಂದ್ರಿಯವಸ್ತುಗಳನ್ನು ಕಾಣುವವರಲ್ಲಿ ಮಹತ್ತರನೆನಿಸಿದ ಮಹರ್ಷಿಯೂ ಆದ ಹಿರಣ್ಯಗರ್ಭನನ್ನು ಯಾವನು ಕಂಡಿರುವನೋ ಆ ದೇವನು ನಮ್ಮನ್ನು ಮಂಗಳಕರವಾದ ಸ್ಮೃತಿಗಳಿಂದ ಕೂಡಿದವರನ್ನಾಗಿ ಮಾಡಲಿ–ಎಂದರ್ಥ. **ವಿಶ್ವಾಧಿಯಃ** ಎಂಬಲ್ಲಿರುವ ಯಕಾರವನ್ನು ಕಕಾರವಾಗಿ ಪರಿವರ್ತಿಸಿಕೊಂಡು **ವಿಶ್ವಾಧಿಕ**ನೆಂದು ಅರ್ಥಮಾಡಬೇಕು. ಹಿರಣ್ಯಗರ್ಭನೇ ಅತಿ ಹೆಚ್ಚಿನ ಮಹಿಮಾನ್ವಿತ ನಾಗಿರುವನೆಂದು ಇಲ್ಲಿ ತಿಳಿಸಿ ಇಂಥ ಹಿರಣ್ಯಗರ್ಭನನ್ನೂ ಅವನ ಉತ್ಪತ್ತ್ಯಾದಿಗಳನ್ನೂ ಬಲ್ಲವನು ಪರಮಾತ್ಮನು–ಎಂದದ್ದರಿಂದ ಭಗವಂತನನ್ನು ಸ್ತುತಿಸಿದಂತಾಗಿದೆ. ಆತನ ದಯೆಯಿಂದಲೆ ನಮಗೆ ಸದ್ಬುದ್ಧಿಯುಂಟಾಗಬೇಕಾಗಿದೆ.

**ಓಂ ॥ ಯಸ್ಮಾತ್ ಪರಂ ನಾಪರಮಸ್ತಿ ಕಿಂಚಿದ್ ಯಸ್ಮಾನ್ನಾಣೀಯೋ ನ ಜ್ಯಾಯೋಽಸ್ತಿ ಕಶ್ಚಿತ್ । ವೃಕ್ಷ ಇವ ಸ್ತಬ್ಧೋ ದಿವಿ ತಿಷ್ಠತ್ಯೇಕಸ್ತೇನೇದಂ ಪೂರ್ಣಂ ಪುರುಷೇಣ ಸರ್ವಮ್ ॥**

ಈ ಮಂತ್ರವೂ ಪರಬ್ರಹ್ಮಪ್ರತಿಪಾದನಪರವಾಗಿದೆ. ಯಾವ ಈ ಬ್ರಹ್ಮತತ್ತ್ವಕ್ಕಿಂತ ಹೆಚ್ಚಿನದಾಗಲಿ, ಕೀಳಾದದ್ದಾಗಲಿ–ಏನೊಂದೂ ಇಲ್ಲವೋ ಹಾಗೆಯೇ ಇದಕ್ಕಿಂತ ಅಲ್ಪವಾದದ್ದಾಗಲಿ, ಹೆಚ್ಚಿನದಾಗಲಿ–ಇಲ್ಲವೋ ಮತ್ತು ಯಾವದು ಓಡಾಟವಿಲ್ಲದೆ ಇದ್ದಲ್ಲೇ ಇರುವ ಮಹಾವೃಕ್ಷದಂತೆ ತನ್ನ ಸ್ವಪ್ರಕಾಶ ಸ್ವರೂಪದಲ್ಲಿ ನಿರ್ವಿಕಾರವಾಗಿ ಇದ್ದುಕೊಂಡಿರುವದೋ ಅಂಥ ಪುರುಷನಾದ ಚಿದೇಕರಸನಾದ ಪರಮಾತ್ಮನಿಂದ ಈ ಜಗತ್ತೆಲ್ಲವೂ ತುಂಬಿದೆಯೋ ಅವನನ್ನು ಧ್ಯಾನಿಸುವೆನು–ಎಂದರ್ಥ. ಉತ್ಕೃಷ್ಟನಿಕೃಷ್ಟಗಳೆಂಬ ಯಾವ ವಸ್ತುವೂ ಪರಬ್ರಹ್ಮಕ್ಕಿಂತ ಬೇರೆಯಾಗಿಲ್ಲವೆಂದು ಹೇಳಿದ್ದರಿಂದ ಅದು ಅದ್ವಿತೀಯವೆಂದು ಸಿದ್ಧವಾಯಿತು. ಅದರಿಂದಲೇ ಚರಾಚರಜಗತ್ತೆಲ್ಲವೂ ತುಂಬಿಹೋಗಿದೆಯೆಂದದ್ದರಿಂದ ಜಗತ್ತು ಇಲ್ಲವೇ ಇಲ್ಲ, ಪರಮಾತ್ಮನೊಬ್ಬನೇ ಇರುವವನು–ಎಂದೂ ಸಿದ್ಧವಾಗುತ್ತದೆ.

**ಓಂ ॥ ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವಮಾನಶುಃ । ಪರೇಣ ನಾಕಂ ನಿಹಿತಂ ಗುಹಾಯಾಂ ವಿಭ್ರಾಜದೇತತ್ ಯತಯೋ ವಿಶಂತಿ ॥**

ಈಗ ಪರಬ್ರಹ್ಮಪ್ರಾಪ್ತಿಗೆ ಅಂತರಂಗಸಾಧನವಾದ ತ್ಯಾಗವನ್ನು ಹೇಳಲಾಗುತ್ತದೆ. ಅಗ್ನಿಹೋತ್ರದಿಂದಾರಂಭಿಸಿ ಒಂದು ಸಾವಿರ ವರ್ಷಗಳ ಕಾಲ ಅನುಷ್ಠಾನ ಮಾಡುವಂಥ ಯಾಗದವರೆಗಿನ ವೈದಿಕಕರ್ಮಗಳೇನಿವೆಯೋ ಅವುಗಳಾವವುಗಳಿಂದಲೂ ಅಮೃತತ್ವವು ಸಿಗುವದಿಲ್ಲ, ಹಾಗೆಯೇ ಪಿತೃಋಣವನ್ನು ತೀರಿಸಲು ಪಡೆಯಲೇಬೇಕಾಗಿರುವ ಪ್ರಜಾಸಂತತಿಯೇನಿದೆಯೋ ಅದರಿಂದಲೂ ಅಮೃತತ್ವವು ಸಿಗುವದಿಲ್ಲ. ಮತ್ತು 'ದಾನಕ್ಕಿಂತ ಹೆಚ್ಚಿನದಿಲ್ಲ' ಎಂದು ವೇದದಲ್ಲಿಯೇ ಹೊಗಳಿರುವ ಬಹುವಿಧವಾದ ಫಲಗಳಿಗೆ ಸಾಧನವಾಗಿರುವ ಧನದಾನವೆಂಬ ಕರ್ಮದಿಂದಲೂ ಅಮೃತತ್ವವು ಸಿಗುವದಿಲ್ಲ. ಹಾಗಾದರೆ ಅದು ಏತರಿಂದ ದೊರೆಯಬಹುದು? ಎಂದರೆ ಎಲ್ಲಿಯೋ ಕೆಲವರು ಮಾತ್ರವೇ ಆ ಅಮೃತತ್ವವನ್ನು ತ್ಯಾಗದಿಂದ ಪಡೆದುಕೊಂಡಿರುವರು. ಅದನ್ನು ಇಂದ್ರಿಯನಿಗ್ರಹಸಂಪನ್ನರಾದ ಯತಿಗಳು ಪಡೆದುಕೊಳ್ಳುವವರಲ್ಲವೆ? ಅದು ಸ್ವರ್ಗಕ್ಕಿಂತಲೂ ಹೆಚ್ಚಿನದಾಗಿರುವದು. ಮತ್ತು ಆಯಾ

ಸಾಧಕನ ಏಕಾಗ್ರಬುದ್ಧಿಯ ಸಾಧನದಿಂದ ಕಂಡುಕೊಳ್ಳಬೇಕಾಗಿದ್ದ ಅವನವನ ಹೃದಯ ಗುಹೆಯಲ್ಲೇ ಇದ್ದುಕೊಂಡಿರುವದು. ಅಂತರ್ಮುಖರಾದ ಸಾಧಕರಿಗೆ ಚೆನ್ನಾಗಿ ಅನುಭವಕ್ಕೂ ಬರುತ್ತಿರುವದು.

**ಓಂ ॥ ವೇದಾಂತವಿಜ್ಞಾನಸುನಿಶ್ಚಿತಾರ್ಥಾಸ್ಸಂನ್ಯಾಸಯೋಗಾದ್ ಯತಯಃ ಶುದ್ಧಸತ್ತ್ವಾಃ । ತೇ ಬ್ರಹ್ಮಲೋಕೇ ತು ಪರಾಂತ ಕಾಲೇ ಪರಾಮೃತಾತ್ ಪರಿಮುಚ್ಯಂತಿ ಸರ್ವೇ ॥**

ಹಿಂದಿನ ಮಂತ್ರದಲ್ಲಿ ತ್ಯಾಗವೇ ಅಮೃತತತ್ವಸಾಧನವೆಂದು ಹೇಳಿತ್ತು. ಆದರೆ ಕೆಲವು ಉಪನಿಷತ್ತುಗಳಲ್ಲಿ ಜ್ಞಾನದಿಂದಲೇ ಮೋಕ್ಷವು–ಎಂದು ಒತ್ತಿ ಹೇಳಲಾಗಿದೆ. ಆದ್ದರಿಂದ ತ್ಯಾಗಕ್ಕೂ ಜ್ಞಾನಕ್ಕೂ ಬೇರೆಬೇರೆಯಾಗಿ ಮೋಕ್ಷಸಾಧನತ್ವವನ್ನು ಹೇಳುವ ಮೂಲಕ ವಿರೋಧವನ್ನು ಪರಿಹರಿಸಲಾಗುವದು. ಇವೆರಡೂ ಮೋಕ್ಷಪ್ರಾಪ್ತಿಗೆ ಉಪಾಯಗಳೇ ಎಂಬಿದರಲ್ಲಿ ಸಂಶಯವಿಲ್ಲ. ಇವುಗಳ ಸಮನ್ವಯವು ಹೇಗೆಂದರೆಃ ಜ್ಞಾನವು ವೇದಾಂತವಾಕ್ಯಗಳ ವಿಚಾರದಿಂದ ಉಂಟಾಗುತ್ತದೆ. ವೇದಾಂತಗಳಲ್ಲಿ ಬೋಧಿಸಿರುವ 'ತತ್ತ್ವಮಸಿ' 'ಅಹಂ ಬ್ರಹ್ಮಾಸ್ಮಿ'–ಮುಂತಾದ ಮಹಾವಾಕ್ಯಗಳನ್ನು ಚೆನ್ನಾಗಿ ವಿಚಾರಮಾಡಿ ಮನನಮಾಡಿಕೊಂಡು ತಾತ್ಪರ್ಯವನ್ನು ಗ್ರಹಿಸಿದಾಗ ಉಂಟಾಗುವ ತಿಳಿವಳಿಕೆಯಿಂದ ಸಂಸಾರನಿವರ್ತಕವಾದ ವಿಶೇಷಜ್ಞಾನವು ಉಂಟಾಗುತ್ತದೆ. ಇದು ಜೀವ–ಬ್ರಹ್ಮರ ಐಕ್ಯರೂಪವಾಗಿರುತ್ತದೆ. ಇಂಥ ವಿಜ್ಞಾನವುಳ್ಳವರೇ **ವೇದಾಂತವಿಜ್ಞಾನ ಸುನಿಶ್ಚಿತಾರ್ಥರು.** ಪ್ರಜೆ–ಧನ–ಕರ್ಮಗಳನ್ನು ಬಿಡುವ ತ್ಯಾಗವಾದರೊ, ಯೋಗದಿಂದೊಡಗೂಡಿ ಸಂನ್ಯಾಸವೆನಿಸುವದು. ಯೋಗವೆಂದರೆ ನಿದ್ರೆ, ವಿಸ್ಮೃತಿ, ತಪ್ಪು ತಿಳಿವಳಿಕೆ, ಸಂಶಯ–ಮುಂತಾದ ರೂಪವಾದ ಚಿತ್ತವೃತ್ತಿಗಳನ್ನು ತಡೆಗಟ್ಟುವಿಕೆ. ಪಂತಜಲಿಮಹರ್ಷಿಗಳೂ ಚಿತ್ತವೃತ್ತಿ ನಿರೋಧವನ್ನೇ ಯೋಗವೆಂದು ಕರೆದಿದ್ದಾರೆ. ಸಾಧಕಾವಸ್ಥೆಯಲ್ಲಿ ಈ ಯೋಗವು ಮುಮುಕ್ಷುಗಳಿಗೆ ಬೇಕಾದದ್ದಾಗಿರುತ್ತದೆ. ಆದ್ದರಿಂದಲೇ ಸಂನ್ಯಾಸಿಗಳಾದ ಮುಮುಕ್ಷುಗಳನ್ನು 'ಯತಿ' (ಪ್ರಯತ್ನಶೀಲರು) ಗಳೆಂದು ಕರೆಯುತ್ತಾರೆ. ಇಂಥ ಯತಿಗಳು ಯೋಗಸಾಧನಗಳಿಂದ ಚಿತ್ತಶುದ್ಧಿಯನ್ನು ಹೊಂದುವರು. ಹೀಗೆ ತ್ಯಾಗ ಅಥವಾ ಸಂನ್ಯಾಸವು, ವಿಷಯೋಪಭೋಗಗಳಿಂದ ಸಾಧಕನನ್ನು ಹಿಂದಿರುಗಿಸುವ ಮೂಲಕವೂ ಜ್ಞಾನವು ತತ್ತ್ವವನ್ನು ಪ್ರಕಾಶಗೊಳಿಸುವ ಮೂಲಕವೂ ಮೋಕ್ಷಸಾಧನಗಳಾಗಿರುವವು. ಸಂನ್ಯಾಸ–ಜ್ಞಾನನಿಷ್ಠೆಗಳ ಪ್ರಾಪ್ತಿಯಿಂದ ಯಾರು ಯತಿಗಳಾಗುವರೋ ಅಂಥವರು ಬ್ರಹ್ಮಲೋಕವನ್ನು ಎಂದರೆ ಪರಬ್ರಹ್ಮದ ಪರಮಾನುಭವವನ್ನ ಹೊಂದಿದವರಾಗಿ ಸಂಸಾರವನ್ನು ದಾಟಿಬಿಡುವರು. ಹೀಗೆ ಬದುಕಿರುವಾಗಲೇ

ಮುಕ್ತಿಯನ್ನು ಹೊಂದಿದವರು ಪರಾಂತಕಾಲದಲ್ಲಿ ವಿದೇಹರಾಗಿ ಸಂಪೂರ್ಣವಾದ ಸ್ವಾತಂತ್ರ್ಯಸ್ವಾರಾಜ್ಯವನ್ನು ಪಡೆಯುವರು. ಜ್ಞಾನಿಗಳಾದ ಅನಂತರ ಅಂಥ ವ್ಯಕ್ತಿಗಳು ದೇವ–ಮನುಷ್ಯ–ಅಸುರ–ಮುಂತಾದ ಉತ್ತಮ ಮಧ್ಯಮಾಧಮಭಾವಗಳನ್ನೆಲ್ಲ ಮೀರಿಬಿಟ್ಟಿರುವವರಾದ್ದರಿಂದ ಅವರಿಗೆ ಯಾವ ಶರೀರಬಂಧವೂ ಇರುವದಿಲ್ಲ. ಇನ್ನು ಪರಾಂತಕಾಲವೆಂದರೆ ಹೀಗೆ ತಿಳಿಯಬೇಕು. ಅಜ್ಞಾನಿಯಾಗಿರುವಾಗಲೇ ಯಾವನು ದೇಹತ್ಯಾಗಮಾಡುವನೋ ಅವನಿಗೆ ಆ ಕಾಲವು ಅಪರಾಂತಕಾಲವೆನಿಸುವದು. ಏಕೆಂದರೆ ಅಂಥವನು ಮತ್ತೆ ಶರೀರಗ್ರಹಣವನ್ನು ಮಾಡಬೇಕಾಗುವದು. ಅಜ್ಞಾನವನ್ನು ಕಳೆದುಕೊಂಡವನಿಗೆ ವರ್ತಮಾನ ದೇಹಪಾತಾನಂತರ ಮತ್ತೆ ಶರೀರಗ್ರಹಣವಿಲ್ಲವಾದ್ದರಿಂದ ಆ ಕಾಲವನ್ನು ಪರಾಂತಕಾಲವೆನ್ನುವರು. ಹೀಗೆ ಸಂನ್ಯಾಸಸಹಿತವಾದ ಜ್ಞಾನವನ್ನು ಸಂಪಾದಿಸಿಕೊಂಡವರು ತಮ್ಮ ಪರಾಂತಕಾಲದಲ್ಲಿ ಸಂಸಾರದಿಂದ ಸಂಪೂರ್ಣವಾಗಿ ಮುಕ್ತರಾದವರಾಗಿ ಬ್ರಹ್ಮವನ್ನೇ ಪಡೆದು ಬ್ರಹ್ಮದಲ್ಲಿ ಒಂದಾಗಿಬಿಡುವರು. ಕೆಲವರು ಪರಾಂತಕಾಲವೆಂದರೆ ಪ್ರಲಯಕಾಲವೆಂದು ಅರ್ಥಮಾಡಿ ಜ್ಞಾನಿಯು ಪ್ರಲಯದಲ್ಲಿ ಕಾರಣಶರೀರವನ್ನೂ ಕಳೆದುಕೊಂಡು ಮುಕ್ತನಾಗುವನು–ಎಂದು ಅಭಿಪ್ರಾಯ ಪಡುತ್ತಾರೆ. ಆದರೆ ಜ್ಞಾನವಾದ ಮೇಲೂ ಮುಕ್ತಿಗಾಗಿ ಪ್ರಲಯದವರೆಗೂ ನಿರೀಕ್ಷಿಸಬೇಕೆಂಬ ಅರ್ಥವು ವೇದಾಂತಸಿದ್ಧಾಂತಕ್ಕೆ ಹೊಂದುಗೆಯಾಗಿರುವದಿಲ್ಲ. ಏಕೆಂದರೆ ಜ್ಞಾನ ಸಮಕಾಲದಲ್ಲಿಯೇ ಮೋಕ್ಷವನ್ನು ವೇದಾಂತಗಳು ಪ್ರತಿಪಾದಿಸುತ್ತಿವೆ. ಆದ್ದರಿಂದ ಪರಾಂತಕಾಲವೆಂದರೆ ಜ್ಞಾನಿಗೆ ಜ್ಞಾನವುಂಟಾದ ಮೇಲೂ ಪ್ರಾರಬ್ಧವಶದಿಂದ ಬಾಧಿತಾನುವೃತ್ತಿಯಿಂದ ಮುಂದುವರೆದು ದೇಹವು ತಾನಾಗಿ ಬಿದ್ದು ಹೋಗುವ ಕಾಲವೆಂದು ತಿಳಿಯಬೇಕು. ನಿಜವಾಗಿ ಜ್ಞಾನಿಯು ದೇಹಪಾತವನ್ನು ಕೂಡ ನಿರೀಕ್ಷಿಸುತ್ತಿರುವದಿಲ್ಲ. ಏಕೆಂದರೆ ಜ್ಞಾನವುಂಟಾದಾಗಲೇ ತಾನು ಅಶರೀರನೆಂಬ ಅರಿವು ಅವನಿಗೆ ಇದ್ದುಕೊಂಡಿರುತ್ತದೆ. ಆದರೂ ಜ್ಞಾನಿಗೆ ದೇಹಪಾತವನ್ನು ವ್ಯವಹಾರ ದೃಷ್ಟಿಯಿಂದ ಕಲ್ಪಿಸಿ ಆ ಸಮಯವನ್ನು ಪರಾಂತಕಾಲವೆಂದು ಶ್ರುತಿಯಲ್ಲಿ ಕರೆದಿದೆ.

**ಓಂ ॥ ದಹ್ರಂ ವಿಪಾಪಂ ಪರಮೇಶ್ಮಭೂತಂ ಯತ್ಪುಂಡರೀಕಂ ಪುರಮಧ್ಯಸಗ್ಂಸ್ಥಮ್। ತತ್ರಾಪಿ ದಹ್ರಂ ಗಗನಂ ವಿಶೋಕಸ್ತಸ್ಮಿನ್ ಯದಂತಸ್ತದುಪಾಸಿತವ್ಯಮ್ ॥**

ಜ್ಞಾನ–ಸಂನ್ಯಾಸಲಭ್ಯವಾದ ಪರಮಾರ್ಥತತ್ತ್ವವನ್ನು ಯಾರು ಪಡೆದುಕೊಳ್ಳಲು ಸಮರ್ಥರಲ್ಲವೋ ಅಂಥವರಿಗಾಗಿ ಅದೇ ಬ್ರಹ್ಮದ ಉಪಾಸನೆಯನ್ನು ಹೇಳಲಾಗುವದು. ಉಪಾಸನೆಯಲ್ಲಿ ಸ್ಥಾನ, ಗುಣಗಳೇ–ಮುಂತಾದ ವಿಶೇಷಗಳನ್ನು ಅಧ್ಯಾರೋಪಿಸಿ

ಹೇಳಿರುವದರಿಂದ ಸೌಕರ್ಯವಿದೆ. ಪ್ರಕೃತ–ಬ್ರಹ್ಮವು ಸರ್ವಗತವಾದರೂ ಅದನ್ನು ಮಾನವನ ಹೃದಯದಲ್ಲಿ ಚಿಂತಿಸಬಹುದೆಂತ ಇಲ್ಲಿ ತಿಳಿಸಿದೆ. ಹೃದಯವನ್ನು ಕಮಲವೆಂದು ವರ್ಣಿಸುವದು ಶಾಸ್ತ್ರಗಳ ಪದ್ಧತಿ. ಆ ಹೃದಯಾಂತರ್ಗತವಾಗಿ ಅಲ್ಪವಾದ ಆಕಾಶವಿರುವದು. ಇದನ್ನೇ ದಹರಾಕಾಶವೆನ್ನುವರು. ಆಕಾಶಶಬ್ದವು ಉಪನಿಷತ್ತುಗಳಲ್ಲಿ ಬ್ರಹ್ಮವಾಚಕವಾಗಿಯೂ ಬಳಸಲ್ಪಟ್ಟಿದೆ. ಆದ್ದರಿಂದ ದಹರಾಕಾಶವು ಬ್ರಹ್ಮವೇ ಎಂದು ಸಾಧಕನು ಚಿಂತಿಸಬೇಕು. ಈ ಮಂತ್ರದಲ್ಲಿ 'ಮೇಶ್ಮಭೂತಂ' ಎಂದಿರುವಲ್ಲಿ 'ವೇಶ್ಮಭೂತಂ' ಎಂದರ್ಥಮಾಡಿಕೊಳ್ಳಬೇಕು. ವೈದಿಕಪ್ರಯೋಗದಂತೆ ವಕಾರಕ್ಕೆ ಬದಲಾಗಿ ಮಕಾರವು ಬಂದಿರುತ್ತದೆ. ಈ ದಹರಾಕಾಶವು ಶರೀರವೆಂಬ ಪುರದ ಮಧ್ಯಮದಲ್ಲಿದೆ. ರಾಜಧಾನಿಯ ಮಧ್ಯದಲ್ಲಿರುವ ರಾಜನ ಅರಮನೆಯಂತೆ ಪರಬ್ರಹ್ಮದ ವಾಸಸ್ಥಾನವಾಗಿ ಈ ಹೃಯಪುಂಡರೀಕವಿದೆ. ಇದರಲ್ಲಿಯೂ ಇರುವ ಸೂಕ್ಷ್ಮವಾದ ಆಕಾಶವು ವಿಶೋಕವಾದ ಪರಬ್ರಹ್ಮವೆನಿಸಿದೆ. ಹೀಗೆ ಗಗನಶಬ್ದವಾಚ್ಯವಾದ ಬ್ರಹ್ಮವು ಸಾಧಕರಿಗೆ ಉಪಾಸ್ಯವಾಗಿದೆ–ಎಂದರೆ ಈ ಬ್ರಹ್ಮವನ್ನು ದಹರಾಕಾಶವೆಂದು ಚಿಂತಿಸಬೇಕು–ಎಂದರ್ಥ.

**ಓಂ ॥ ಯೋ ವೇದಾದೌ ಸ್ವರಃ ಪ್ರೋಕ್ತೋ ವೇದಾಂತೇ ಚ ಪ್ರತಿಷ್ಠಿತಃ।**
**ತಸ್ಯ ಪ್ರಕೃತಿಲೀನಸ್ಯ ಯಃ ಪರಃ ಸ ಮಹೇಶ್ವರಃ ॥**

ಈ ಮಂತ್ರವನ್ನು ವೈದಿಕರು ಮಂತ್ರಪುಷ್ಪಕಾಲಕ್ಕೆ ಪ್ರಚುರವಾಗಿ ಬಳಸುತ್ತಾರೆ. ಇದರ ಅಭಿಪ್ರಾಯವನ್ನು ನೋಡೋಣ. ಸ್ವರ–ಎಂದರೆ ಓಂಕಾರವು. ಪ್ರಣವವೆಂದೂ ಇದನ್ನು ಕರೆಯುವರು. ವೇದಾಧ್ಯಯನವನ್ನಾರಂಭಿಸುವಾಗ ಓಂಕಾರವನ್ನು ಮೊದಲು ಉಚ್ಚಾರಣೆ ಮಾಡಬೇಕು. ಆದ್ದರಿಂದ ಇದನ್ನು ವೇದಾದಿಯೆನ್ನುವರು. ಸೃಷ್ಟಿಕಾಲದಲ್ಲಿ ಪ್ರಪ್ರಥಮವಾಗಿ ಚತುರ್ಮುಖನು ಮಾತನಾಡಲು ಬಾಯಿತೆರೆದಾಗ ಮೊದಲು 'ಓಂ' ಎಂಬ ಅಕ್ಷರವು ಹೊರಬಂದಿತಂತೆ. ಹಾಗೆಯೇ ಅನಂತರ "ಅಥ" ಎಂಬ ಶಬ್ದವು ಉಚ್ಚರಿಸಲ್ಪಟ್ಟಿತಂತೆ. ಹೀಗೆ ಬ್ರಹ್ಮನ ಕಂಠದಿಂದ ಮೊದಲ ಬಾರಿಗೆ ಹೊರಬಿದ್ದ ಈ ಎರಡು ಶಬ್ದಗಳೂ ಮಂಗಳಸ್ವರೂಪಗಳೆಂದು ಸ್ಮೃತಿಯಲ್ಲಿ ತಿಳಿಸಿದ್ದಾರೆ. ಆದ್ದರಿಂದ ಗ್ರಂಥಾರಂಭ ಮಾಡುವವರೆಲ್ಲರೂ ಓಂ, ಅಥ–ಎಂಬೀ ಶಬ್ದಗಳಿಂದಲೇ ಆರಂಭಿಸುತ್ತಾರೆ. ಇದೇ ಮಂಗಳಾಚರಣೆಯು ವೇದದ ಆದಿಯಲ್ಲಿ ಉಚ್ಚರಿಸಲ್ಪಟ್ಟ ಈ ಓಂಕಾರವು ವೇದಾಂತ (ವೇದಗಳ ನಿಲುಗಡೆ)ದಲ್ಲಿಯೂ ಉಚ್ಚರಿಸಲ್ಪಡುತ್ತದೆ. ಅಧ್ಯಯನವನ್ನು ಪ್ರಾರಂಭಿಸುವಾಗ ಓಂ ಎಂದಂತೆಯೇ ಕಡೆಯಲ್ಲಿಯೂ ಓಂಕಾರದಿಂದಲೇ ಅದನ್ನು ಸಮಾಪ್ತಿಗೊಳಿಸಬೇಕು. ಹೀಗೆ ಯಾವ ಸ್ವರವು ವೇದಗಳ

ಆದ್ಯಂತಗಳಲ್ಲಿ ಪ್ರತಿಷ್ಠಿತವಾಗಿದೆಯೋ ಅದು ಬ್ರಹ್ಮವೇ. ಅದನ್ನು ಧ್ಯಾನಕಾಲದಲ್ಲಿ ಪ್ರಕೃತಿಯಲ್ಲಿ ಲಯಮಾಡಿಕೊಳ್ಳಬೇಕು–ಎಂದು ಓಂಕಾರದ ಮೂರು ಮಾತ್ರೆಗಳನ್ನು ಅ–ಉ–ಮ–ಗಳನ್ನು ಕ್ರಮವಾಗಿ ಆಕಾರವನ್ನು ಉಕಾರದಲ್ಲಿಯೂ, ಉಕಾರವನ್ನು ಮಕಾರದಲ್ಲಿಯೂ ಒಂದುಗೂಡಿಸಿಕೊಳ್ಳಬೇಕು. ಇದೇ ಪ್ರಕೃತಿಲೀನತ್ವವು. ಆದರೆ ಪರಬ್ರಹ್ಮವು ಪ್ರಕೃತಿಯನ್ನೂ ಮೀರಿ ಅದಕ್ಕಿಂತ ವಿಲಕ್ಷಣವೂ ಮಾತ್ರಾರಹಿತವೂ ನಿರ್ವಿಶೇಷವೂ ಅವ್ಯವಹಾರ್ಯವೂ ಆಗಿರುವದರಿಂದ ಪ್ರಕೃತಿಯಿಂದಾಚೆಗೆ ಅದು ಸಾಕ್ಷಿಯಾಗಿದ್ದು ಮಾತ್ರೆಗಳ ಉತ್ಪತ್ತಿಲಯಗಳನ್ನೆಲ್ಲ ಬೆಳಗುತ್ತಿದೆ–ಎಂದು ತಿಳಿಯಬೇಕು. ಅಮಾತ್ರವೂ ಅಪಾದವೂ ಪ್ರಪಂಚೋಪಶಮವೂ ಪ್ರಕೃತಿಗಿಂತ ಪರವೂ ಆದುದೇ ಮಹೇಶ್ವರನು. ಸಾಧಕನಾದವನು ಓಂಕಾರದ್ವಾರದಿಂದ ಆ ಮಹೇಶ್ವರತತ್ತ್ವವನ್ನು ಪ್ರಾಪ್ತಿಮಾಡಿಕೊಳ್ಳಬೇಕು–ಎಂಬಿದು ಈ ಮಂತ್ರದ ಅಭಿಪ್ರಾಯವಾಗಿದೆ.

ಇನ್ನು ಮುಂದೆ ನಾರಾಯಣಸೂಕ್ತವೆಂಬ ಭಾಗವು ಪ್ರಾರಂಭವಾಗಲಿದೆ. ಇದಕ್ಕೆ ಪ್ರತ್ಯೇಕವಾಗಿಯೇ ವಿವರಣೆಯನ್ನು ಬರೆದು ಪ್ರಕಟಿಸಿರುವದರಿಂದ* ಈ ಭಾಗವನ್ನು ಗ್ರಂಥಪೂರ್ಣತೆಗಾಗಿ ಸಂಕ್ಷಿಪ್ತವಾಗಿ ವ್ಯಾಖ್ಯಾನ ಮಾಡಲಾಗುವದು.

## ನಾರಾಯಣಸೂಕ್ತ

**ಓಂ ॥ ಸಹಸ್ರಶೀರ್ಷಂ ದೇವಂ ವಿಶ್ವಾಕ್ಷಂ ವಿಶ್ವಶಂಭುವಮ್ ।**
**ವಿಶ್ವಂ ನಾರಾಯಣಂ ದೇವಮಕ್ಷರಂ ಪರಮಂ ಪದಮ್ ॥**

ಹಿಂದಿನ ಮಂತ್ರದಲ್ಲಿ ಮಹೇಶ್ವರನೆಂದು ತಿಳಿಸಿದ್ದ ಭಗವಂತನನ್ನೇ ಈಗ ನಾರಾಯಣನೆಂದು ವರ್ಣಿಸಲಾಗುವದು. ವೇದದಲ್ಲಿ ಶಿವ–ವಿಷ್ಣುಶಬ್ದಗಳನ್ನು ಪುರಾಣಗಳಂತೆ ಭಿನ್ನಭಿನ್ನದೇವತಾವಾಚಕವಾಗಿ ಉಪಯೋಗಿಸಿರುವದಿಲ್ಲ . ವಿಷ್ಣು ವೆಂದರೆ ವ್ಯಾಪಕನೆಂದೂ ಶಿವನೆಂದರೆ ಮಂಗಳಸ್ವರೂಪನೆಂದೂ ಅರ್ಥ. ಅನಂತ ಶಿರಸ್ಸುಗಳುಳ್ಳವನೂ ಎಲ್ಲೆಲ್ಲಿಯೂ ಕಣ್ಣುಗಳುಳ್ಳವನೂ ಜಗತ್ತಿಗೆಲ್ಲ ಸುಖವನ್ನುಂಟು ಮಾಡುವವನೂ ದ್ಯೋತನ (ಪ್ರಕಾಶ) ಸ್ವಭಾವನೂ ಪರಮನೂ ವಿಶ್ವವೂ ಆಗಿರುವವನೂ ಅಕ್ಷರನೂ ಜ್ಞಾನಿಗಳಿಂದ ಅರಿಯಲ್ಪಡುವವನೂ ಆದ ನಾರಾಯಣನನ್ನು ನಾವೆಲ್ಲರೂ ನಮಸ್ಕರಿಸೋಣ.

---

*ಕಾರ್ಯಾಲಯದಲ್ಲಿ ದೊರೆಯುವ 'ವಿಷ್ಣುಸೂಕ್ತಭಾಷ್ಯ' ಎಂಬ ಗ್ರಂಥದಲ್ಲಿ ನಾರಾಯಣಸೂಕ್ತಭಾಷ್ಯವೂ ಅಡಕವಾಗಿದೆ. ಬೇಕಾದವರು ತರಿಸಿ ಓದಿಕೊಳ್ಳಬಹುದು.

ಓಂ ॥ ವಿಶ್ವತಃ ಪರಮಾನ್ನಿತ್ಯಂ ವಿಶ್ವಂ ನಾರಾಯಣಗ್ಂ ಹರಿಮ್ ।
ವಿಶ್ವಮೇವೇದಂ ಪುರುಷಸ್ತದ್ವಿಶ್ವಮುಪಜೀವತಿ ॥

ಸ್ಥಾವರಜಂಗಮಾತ್ಮಕವಾದ ಜಗತ್ತಿಗಿಂತಲು ಹೆಚ್ಚಿನವನಾದ, ಪಾಪಹರ್ತನೂ ನಾರಾಯಣನೂ ಆದ ಪುರುಷನೇ ಈ ಜಗತ್ತೆಲ್ಲವೂ ಆಗಿರುವನು. ಆತನು ಈ ಬ್ರಹ್ಮಾಂಡವನ್ನು ಹೊಕ್ಕು ವ್ಯವಹಾರನಿರ್ವಹಣೆಗಾಗಿ ನಾಮರೂಪಗಳನ್ನಾಶ್ರಯಿಸಿರುವನು. ಆದ್ದರಿಂದ ನಾಮರೂಪಾತ್ಮಕಜಗತ್ತೆಲ್ಲವೂ ನಾರಾಯಣನೇ–ಎಂದರ್ಥ.

ಓಂ ॥ ಪತಿಂ ವಿಶ್ವಸ್ಯಾತ್ಮೇಶ್ವರಗ್ಂ ಶಾಶ್ವತಗ್ಂ ಶಿವಮಚ್ಯುತಮ್ ।
ನಾರಾಯಣಂ ಮಹಾಜ್ಞೇಯಂ ವಿಶ್ವಾತ್ಮಾನಂ ಪರಾಯಣಮ್ ॥

ಜಗತ್ತಿಗೆಲ್ಲ ಪತಿಯಾದ ಆತ್ಮನೂ ಈಶ್ವರನೂ ಶಾಶ್ವತನೂ ಶಿವನೂ ಅಚ್ಯುತನೂ ವಿಶ್ವಾತ್ಮನೂ ಪರಾಯಣನೂ ಆದ ನಾರಾಯಣನು ಮಹಾಜ್ಞೇಯನಾಗಿದ್ದುಕೊಂಡಿರುವನು.

ಓಂ ॥ ನಾರಾಯಣಪರೋ ಜ್ಯೋತಿರಾತ್ಮಾ ನಾರಾಯಣಃ ಪರಃ ।
ನಾರಾಯಣಪರಂ ಬ್ರಹ್ಮತತ್ತ್ವಂ ನಾರಾಯಣಃ ಪರಃ ॥
ನಾರಾಯಣಪರೋ ಧ್ಯಾತಾ ಧ್ಯಾನಂ ನಾರಾಯಣಃ ಪರಃ ॥

ನಾರಾಯಣನೇ ಹೆಚ್ಚಿನ ಜ್ಯೋತಿಯು. ಎಲ್ಲ ಪ್ರಾಣಿಗಳ ಅಂತರಾತ್ಮನು. ಪರಬ್ರಹ್ಮವೆಂದರೂ ಅವನೇ ತತ್ತ್ವವೂ ಅವನೇ. ಧ್ಯಾತೃ, ಧ್ಯಾನ–ಗಳೆಂಬಿವೂ ಅವನೇ. ಸರ್ವವೂ ಅವನಲ್ಲಿಯೇ ಕಲ್ಪಿತವಾಗಿದೆ–ಎಂದಭಿಪ್ರಾಯ.

ಓಂ ॥ ಯಚ್ಚ ಕಿಂಚಿಜ್ಜಗತ್ಸರ್ವಂ ದೃಶ್ಯತೇ ಶ್ರೂಯತೇಽಪಿ ವಾ ।
ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ॥

ಈ ಬ್ರಹ್ಮಾಂಡದಲ್ಲಿ ಯಾವ ಪದಾರ್ಥವೇ ಆಗಲಿ–ಕಂಡುಬರುತ್ತಿರುವದೋ ಅಥವಾ ಪರೋಕ್ಷವಾಗಿ ಕೇಳಬರುತ್ತಿರವದೋ ಅದೆಲ್ಲವನ್ನೂ ಒಳಗೂ ಹೊರಗೂ ವ್ಯಾಪಿಸಿಕೊಂಡವನಾಗಿ ನಾರಾಯಣನೇ ಇದ್ದುಕೊಂಡಿರುವನು.

ಓಂ ॥ ಅನಂತಮವ್ಯಯಂ ಕವಿಗ್ಂ ಸಮುದ್ರೇಽನ್ತಂ ವಿಶ್ವಶಂಭುವಮ್
ಪದ್ಮಕೋಶಪ್ರತೀಕಾಶಂ ಹೃದಯಂ ಚಾಪ್ಯಧೋಮುಖಮ್ ॥

ಅನಂತನೂ ಅವ್ಯಯನೂ ಕವಿಯೂ ಸಂಸಾರಸಮುದ್ರದ ದಡದಂತೆ ಇರುವವನೂ ವಿಶ್ವಕ್ಕೆಲ್ಲ ಸುಖವನ್ನುಂಟುಮಾಡುವವನೂ ಆದ ನಾರಾಯಣನನ್ನು

ಪದ್ಮಪುಷ್ಪದ ನಡುವಿನ ಆಕಾಶದಂತಿರುವ ಹೃದಯಮಧ್ಯಾಕಾಶದಲ್ಲಿ ಚಿಂತಿಸಬೇಕು. ಹೃದಯಾಕಾಶವಾದರೊ, ಅಧೋಮುಖ (ಕೆಳಭಾಗಕ್ಕೆ ಮುಖ) ವುಳ್ಳದ್ದಾಗಿರುವದು.

ಓಂ ॥ ಅಧೋ ನಿಷ್ಟ್ಯಾ ವಿತಸ್ತ್ಯಾಂತೇ ನಾಭ್ಯಾಮುಪರಿ ತಿಷ್ಠತಿ ।
ಜ್ವಾಲಮಾಲಾಕುಲಂ ಭಾತಿ ವಿಶ್ವಸ್ಯಾಯತನಂ ಮಹತ್ ॥

ಕುತ್ತಿಗೆಯ ಕೆಳಭಾಗದಿಂದಾರಂಭಿಸಿ ಹೊಕ್ಕುಳಿನ ಮೇಲ್ಭಾಗದವರೆಗಿನ ಮಧ್ಯಪ್ರದೇಶದಲ್ಲಿ ಹರಡಿರುವ ಹನ್ನೆರಡು ಅಂಗುಲಪ್ರಮಾಣವುಳ್ಳ ವಿತಸ್ತಿಯಲ್ಲಿ ಹೃದಯಪುಂಡರೀಕವಿದೆ. ಪರಬ್ರಹ್ಮವು ಅಲ್ಲಿ ಜ್ವಾಲಮಾಲೆಗಳಿಂದ ಎಂದರೆ ಪ್ರಕಾಶಮಯವಾದ ಶಿಖೆಗಳಿಂದ ಹೊಳೆಯುತ್ತಾ ಸನ್ನಿಹಿತವಾಗಿದೆ.

ಓಂ ॥ ಸಂತತಗ್ಂ ಶಿಲಾಭಿಸ್ತು ಲಂಬತ್ಯಾಕೋಶಸನ್ನಿಭಮ್ ।
ತಸ್ಯಾಂತೇ ಸುಷಿರಗ್ಂ ಸೂಕ್ಷ್ಮಂ ತಸ್ಮಿನ್ ಸರ್ವಂ ಪ್ರತಿಷ್ಠಿತಮ್॥

ಪದ್ಮದ ಮೊಗ್ಗಿಗೆ ಸಮಾನವಾದ ಹೃದಯಕಮಲವು ಶರೀರಮಧ್ಯದಲ್ಲಿ ಕೆಳಮುಖವಾಗಿ ಇಳಿಯಬಿದ್ದಿರುವದು. ಅದು ನೂರಾರು ನಾಡಿಗಳಿಂದ ವ್ಯಾಪ್ತವಾಗಿರುವದು. ಅದರ ನಡುವೆ ಸೂಕ್ಷ್ಮವಾದ ಸುಷುಮ್ನಾನಾಡಿಯ ನಾಲವೆಂಬ ಛಿದ್ರವಿರುವದು. ಆ ಗುಹೆಯಲ್ಲಿ ಸರ್ವಜಗತ್ತೂ ಅಡಗಿಕೊಂಡಿರುವದು.

ಓಂ ॥ ತಸ್ಯ ಮಧ್ಯೇ ಮಹಾನಗ್ನಿರ್ವಿಶ್ವಾರ್ಚಿರ್ವಿಶ್ವತೋ ಮುಖಃ ।
ಸೋಽಗ್ರಭುಗ್ವಿಭಜನ್ ತಿಷ್ಠನ್ ಆಹಾರಮಜರಃ ಕವಿಃ ॥
ತಿರ್ಯಗೂರ್ಧ್ವಮಧಃಶಾಯೀ ರಶ್ಮಯಸ್ತಸ್ಯ ಸಂತತಾ ॥

ಆ ಸುಷುಮ್ನಾನಾಡಿಯ ನಡುವೆ ಮಹತ್ತಾದ ಅಗ್ನಿಯಿರುವದು. ಅದು ಎಲ್ಲಕಡೆಗೂ ಜ್ವಾಲೆಗಳುಳ್ಳದ್ದಾಗಿಯೂ ಸರ್ವತೋಮುಖವಾಗಿಯೂ ಹರಡಿಕೊಂಡಿರುವದು. ಅದು ತನಗೆ ಪ್ರಾಪ್ತವಾದ ಆಹಾರವನ್ನು ಭಕ್ಷಿಸಿ ಶರೀರಾವಯವಗಳಿಗೂ ಪ್ರಸಾರಮಾಡುವದು. ತಾನು ಜೀರ್ಣವಾಗದೆ ಅನ್ನಾದಿಗಳನ್ನೇ ಜೀರ್ಣಮಾಡುವದರಿಂದ ಅಜರವೆನಿಸಿರುವದು. ಮೇಲಕ್ಕೂ ಕೆಳಕ್ಕೂ ಅಡ್ಡಡ್ಡಲಾಗಿಯೂ ಅದರ ಕಿರಣಗಳು ಹರಡಿರುವವು.

ಓಂ ॥ ಸಂತಾಪಯತಿ ಸ್ವಂ ದೇಹಮಾಪಾದತಲಮಸ್ತಕಃ ।
ತಸ್ಯ ಮಧ್ಯೇ ವಹ್ನಿಶಿಖಾ ಅಣೀಯೋರ್ಧ್ವಾ ವ್ಯವಸ್ಥಿತಃ ॥

ಆ ಅಗ್ನಿಯು ತನ್ನ ದೇಹವನ್ನೆಲ್ಲ ಪಾದಗಳಿಂದಾರಂಭಿಸಿ ತಲೆಯವರೆಗೂ ಯಾವಾಗಲೂ ಬಿಸಿಯಾಗಿಟ್ಟಿರುವದು. ಇಡಿಯ ದೇಹವನ್ನೆಲ್ಲವ್ಯಾಪಿಸಿರುವ ಆ ಅಗ್ನಿಯ

ಮಧ್ಯದಲ್ಲಿ ಅತ್ಯಂತ ಸಣ್ಣದಾದ ಊರ್ಧ್ವಮುಖವಾದ ಒಂದು ಅಗ್ನಿಯ ಶಿಖೆ(ಜ್ವಾಲೆ) ಯಿರುವದು.

ಓಂ ॥ ನೀಲತೋಯದಮಧ್ಯಸ್ಥಾದ್ವಿದ್ಯುಲ್ಲೇಖೇವ ಭಾಸ್ವರಾ ।
ನೀವಾರಶೂಕವತ್ತನ್ವೀ ಪೀತಾ ಭಾಸ್ವತ್ಯಣೂಪಮಾ ॥

ಈ ಜ್ವಾಲೆಯು ಕಪ್ಪಾದ ಮೋಡದ ಮಧ್ಯದಲ್ಲಿ ಹೊಳೆಯುವ ಮಿಂಚಿನ ಬಳ್ಳಿಯಂತೆ ಪ್ರಕಾಶಮಾನವಾಗಿರುವದು. ಮತ್ತು ನವಣೆಯ ಧಾನ್ಯದ ತುದಿಯಂತೆ ಚೂಪಾಗಿ ತೆಳುವಾಗಿ ಹಳದಿಬಣ್ಣದ್ದಾಗಿ ಸೂಕ್ಷ್ಮವಾಗಿ ಉಪಮಾನರಹಿತವಾಗಿರುವದು.

ಓಂ ॥ ತಸ್ಯಾಃ ಶಿಖಾಯಾ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ ।
ಸ ಬ್ರಹ್ಮ ಸ ಶಿವಸ್ಸಹರಿಸ್ಸೇಂದ್ರಃ ಸೋಽಕ್ಷರಃ ಪರಮಃ ಸ್ವರಾಟ್॥

ಆ ಶಿಖೆಯ ಮಧ್ಯದಲ್ಲಿಯೇ ಪರಮಾತ್ಮನಿದ್ದುಕೊಂಡಿರುವನು. ಅವನೇ ಬ್ರಹ್ಮನು, ಶಿವನು, ಹರಿಯು, ಇಂದ್ರನು, ಅಕ್ಷರನು, ಪರಮನು, ಸ್ವರಾಜನೂ ಆಗಿರುವನು. ಆದ್ದರಿಂದ ಸಹಸ್ರಶೀರ್ಷನೇ ಮುಂತಾದ ಮಂತ್ರಗಳಿಂದ ಸ್ತುತಿಸಲ್ಪಟ್ಟಿರುವ ನಾರಾಯಣನನ್ನು ಪದ್ಮಕೋಶಪ್ರತೀಕಾಶಂ ಮುಂತಾದ ಮಂತ್ರಗಳಲ್ಲಿ ವಿವರಿಸಿ ಹೇಳಿರುವ ಕ್ರಮದಿಂದ ಯೋಗಿಯಾದವನು ಧ್ಯಾನಮಾಡಬೇಕು ಎಂದಭಿಪ್ರಾಯ.

## ಆದಿತ್ಯಮಂಡಲದಲ್ಲಿ ಬ್ರಹ್ಮೋಪಾಸನೆ

ಓಂ ॥ ಆದಿತ್ಯೋ ವಾ ಏಷ ಏತನ್ಮಂಡಲಂ ತಪತಿ ತತ್ರ ತಾ ಋಚ–
ಸ್ತದೃಚಾ ಮಂಡಲಗ್ಂ ಸ ಋಚಾಂ ಲೋಕೋಽಥ ಯ ಏಷ
ಏತಸ್ಮಿನ್ ಮಂಡಲೇಽರ್ಚಿರ್ದೀಪ್ಯತೇ ತಾನಿ ಸಾಮಾನಿ ಸ
ಸಾಮ್ನಾಂ ಲೋಕೋಽಥ ಯ ಏಷ ಏತಸ್ಮಿನ್ ಮಂಡಲೇಽರ್ಚಿಷಿ
ಪುರುಷಸ್ತಾನಿ ಯಜೂಗ್ಂಷಿ ಸ ಯಜುಷಾ ಮಂಡಲಗ್ಂ
ಸ ಯಜುಷಾಂ ಲೋಕಸ್ಸೈಷಾ ತ್ರಯ್ಯೇವ ವಿದ್ಯಾ ತಪತಿ ಯ
ಏಷೋಽನ್ತರಾದಿತ್ಯೇ ಹಿರಣ್ಮಯಃ ಪುರುಷಃ ॥

ಈಗ ಎರಡು ಮಂತ್ರಗಳಿಂದ ಆದಿತ್ಯೋಪಾಸನೆಯನ್ನು ವಿವರಿಸಲಾಗುವದು. ಹಿಂದಿನ ಮಂತ್ರಗಳಲ್ಲಿ ಪರಮಾತ್ಮನನ್ನು ನಾರಾಯಣನೆಂದು ಅನೇಕ ಬಾರಿ ಸ್ತುತಿಸಲಾಗಿದೆ.

ಆ ಪರಮಾತ್ಮನನ್ನೇ ಇಲ್ಲಿ ಆದಿತ್ಯನೆಂದು ಹೊಗಳಿದೆ. ದೇವರೆಲ್ಲಿದ್ದಾನೆ? ಇದ್ದರೆ ಕಾಣಿಸಿಕೊಳ್ಳಬೇಡವೆ? ಎಂದು ಕೆಲವರು ಆಕ್ಷೆಪಿಸುತ್ತಾರೆ. ಅಂಥವರಿಗೆ ಉತ್ತರವಾಗಿ ಉಪನಿಷತ್ತು ''ಇದೋ, ಆದಿತ್ಯಮಂಡಲದಲ್ಲಿ ಪ್ರಕಾಶಿಸುತ್ತಿರುವವನೇ ದೇವರು'' ಎಂದಿರುತ್ತದೆ. ಸೂರ್ಯನನ್ನು ಕಾಣದವರು ಯಾರೂ ಇಲ್ಲ . ಕುರುಡರಿಗೆ ಸೂರ್ಯದರ್ಶನವು ಲಭ್ಯವಿಲ್ಲವೇ ಹೊರತು ಅವನ ಶಾಖ, ಅವನ ಸಂಚಾರದಿಂದಾಗುವ ಹಗಲುರಾತ್ರಿಗಳ ಅರಿವು ಇದ್ದೇ ಇದೆ. ರುದ್ರಾಧ್ಯಾಯದಲ್ಲಿ ''ಈ ಆದಿತ್ಯನನ್ನು ದನಕಾಯುವ ಹುಡುಗರೂ ಮನೆಗೆಲಸಮಾಡುವ, ನೀರುತರುವ ಹೆಣ್ಣಾಳುಗಳೂ ಬಲ್ಲರು'' ಎಂದು ಸೂರ್ಯನ ಸುಪ್ರಸಿದ್ಧಿಯನ್ನು ಪ್ರಸ್ತಾಪಿಸಿದೆ. ಇಂಥ ಸೂರ್ಯನು ಯಾರು? ಎಂದರೆ ಭಗವಂತನೇ. ಅವನು ನಮಗೆಲ್ಲ ಗೋಚರವಾಗಿರುವ ಸೂರ್ಯ ಮಂಡಲದಲ್ಲಿದ್ದುಕೊಂಡಿರುವನು. ಅವನ ಶಾಖದಿಂದಲೇ ಆದಿತ್ಯನು ಬೆಳಗುತ್ತಿರುವನು. ''ಸೂರ್ಯ ಚಂದ್ರಾಗ್ನಿಗಳಲ್ಲಿರುವ ತೇಜಸ್ಸೆಲ್ಲವೂ ನನ್ನದೆಂದೇ ತಿಳಿ'' ಎಂದು ಭಗವಂತನು ಗೀತೆಯಲ್ಲಿಯೂ ತಿಳಿಸಿರುತ್ತಾನೆ. ಹೀಗೆ ಮಂಡಲಾಂತರ್ಗತನಾಗಿರುವ ಪರಮಾತ್ಮನನ್ನು ವಿಷ್ಣುವೆಂದೂ ರುದ್ರನೆಂದೂ ಬೇರೆಬೇರೆಯ ಹೆಸರುಗಳಿಂದಲೂ ಕರೆಯುವರು. ಪ್ರತಿಯೊಬ್ಬ ಸಾಧಕರೂ ತಮ್ಮ ಇಷ್ಟದೇವತೆಯನ್ನು ಆದಿತ್ಯಮಂಡಲದಲ್ಲಿ ಆರಾಧಿಸಬಹುದಾಗಿದೆ. ಆದ್ದರಿಂದಲೇ ಎಲ್ಲಾದೇವರಿಗೂ ''ಪ್ರಭಾವಳಿ'' ಎಂಬ ಆಭರಣವನ್ನು ಜೋಡಿಸಿರುತ್ತಾರೆ. ಅದರ ಆಧ್ಯಾತ್ಮಿಕಾರ್ಥವೇನೆಂದರೆ ತೇಜಸ್ಸನ್ನು ನಮ್ಮ ಇಚ್ಛಾನುಸಾರ ಯಾವ ದೇವತೆಯಾಗಿ ಬೇಕಾದರೂ ಚಿಂತಿಸಬಹುದು. ಅಥವಾ ರೂಪಾಕಾರಗಳು ನಮಗೆ ಹಿಡಿಸದೆ ಹೋದರೆ ಕೇವಲ ಬೆಳಕಾಗಿಯೇ ಚಿಂತಿಸಬಹುದು. ಇಂಥ ಉಪಾಸನೆಗೆ ಪ್ರತ್ಯಕ್ಷದೇವತೆಯಾದ ಆದಿತ್ಯನೇ ಪ್ರೇರಕನು. ಆದಿತ್ಯನೆಂದರೆ ಭಗವಂತನೆಂದೇ ಅರ್ಥ. ಅವನೇ ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಣೆಮಾಡುವವನು. ಆದ್ದರಿಂದ ಆದಿತ್ಯೋಪಾಸನೆಯು ಉಳಿದ ನಾಮರೂಪವಿಶಿಷ್ಟವಾದ ಭಗವಂತನ ಉಪಾಸನೆಗಳಿಗೆಲ್ಲ ಮಾತೃಸ್ಥಾನದಲ್ಲಿದೆ. ಬಲ್ಲವರು ಕೇವಲಾದಿತ್ಯನನ್ನೇ ಹೇಗೆ ಉಪಾಸನೆಮಾಡುವರೆಂಬುದನ್ನು ವೈದಿಕಕ್ರಮದಂತೆ ಈಗ ವಿವರಿಸಲಾಗುವದು.

ಆದಿತ್ಯ ಮಂಡಲವು ಋಕ್–ಯಜುಸ್ಸು–ಸಾಮಗಳೆಂಬ ವೇದಮಂತ್ರಮಯವಾಗಿರುವದು. ವೇದಗಳಲ್ಲಿ ಋಗ್ವೇದವು ಪ್ರಪ್ರಥವು. ಆ ಋಗ್ವೇದವನ್ನು ವಿಭಾಗಮಾಡಿರುವ ಋಷಿಗಳು ಒಂದೊಂದು ಭಾಗವನ್ನೂ ''ಮಂಡಲ'' ವೆಂದೇ ಹೆಸರಿಸಿರುತ್ತಾರೆ. ವೇದಮೂರ್ತಿಗಳಿಗೆ ಈ ವಿಷಯವು ತಿಳಿದೇ ಇದೆ. ಹೀಗೆ ಋಕ್‌ಗಳಿಂದ ಪ್ರತಿಪಾದ್ಯರಾದ ದೇವತೆಗಳೆಲ್ಲರೂ ಆದಿತ್ಯಮಂಡಲದಲ್ಲೇ ವಾಸವಾಗಿರುತ್ತಾರೆ. ಸಾಧಕನಾದವನು ಮೊದಲು ಹೀಗೆ ಚಿಂತಿಸಬೇಕು. ಅನಂತರ

ಆದಿತ್ಯಮಂಡಲದ ಸರ್ವತೋಮುಖವಾದ ಕಿರಣಗಳು ಸಾಮದೇವತೆಗಳನ್ನು ಪ್ರತಿನಿಧಿಸುವವು. ಬೃಹತ್, ರಥಂತರ, ವಾಮದೇವ್ಯ–ಮುಂತಾದ ಸಾಮಗಳೂ ಅವುಗಳ ಅಭಿಮಾನಿದೇವತೆಗಳೂ ಆದಿತ್ಯಮಂಡಲದ ಮತ್ತೊಂದು ವಿಭಾಗದಲ್ಲಿ ವಾಸವಾಗಿರುವವು. ಹೀಗೆ ಆದಿತ್ಯನು ಋಗಾತ್ಮಕನೂ ಸಾಮಾತ್ಮಕನೂ ಆಗಿರುವನೆಂದು ಧ್ಯಾನಿಸಬೇಕು. ಅನಂತರ ಅದೇ ಮಂಡಲಾಂತರ್ಗತನಾಗಿ ಮಧ್ಯದಲ್ಲಿ ಒಬ್ಬ ಪುರುಷನಿರುವನು. ಅವನು ಚಿನ್ನದ ಶರೀರವುಳ್ಳವನು–ಎಂದರೆ ಹೊಂಬಣ್ಣದ ಶರೀರವೂ ಗಡ್ಡಮೀಸೆಗಳೂ ಅರಳಿದ ತಾವರೆಯ ಎಸುಳಿನಂತೆ ಕಣ್ಣುಗಳುಳ್ಳವನೂ ಆಗಿರುವನು. ಅವನನ್ನು ಯಜುರ್ವೇದಮಯನೆಂದು ಚಿಂತಿಸಬೇಕು. ಯಜುರ್ದೇವತೆಗಳೆಲ್ಲರೂ ಆ ಪುರುಷನಲ್ಲಿ ಅಂತರ್ಗತರಾಗಿರುವರು. ಒಟ್ಟಿನಲ್ಲಿ ಋಗ್ಯಜುಃ ಸಾಮವೇದಗಳಲ್ಲಿ ಯಾವಯಾವ ದೇವತೆಗಳನ್ನು ತಿಳಿಸಲಾಗಿದೆಯೋ ಅವರೆಲ್ಲರೂ ಆದಿತ್ಯಮಂಡಲದಲ್ಲಿಯೇ ಸನ್ನಿಹಿತರಾಗಿರುವರು. ಈ ಅಭಿಪ್ರಾಯದಂತೆ ಆದಿತ್ಯನು ಸರ್ವದೇವಾತ್ಮಕನು. ಆದಿತ್ಯಹೃದಯಸ್ತೋತ್ರದಲ್ಲಿ ಹೇಳಿರುವಂತೆ ಇವನೇ ಬ್ರಹ್ಮಾ, ವಿಷ್ಣು, ಶಿವ, ಸ್ಕಂದ, ಪ್ರಜಾಪತಿ, ಮಹೇಂದ್ರ, ಕುಬೇರ–ಮುಂತಾಗಿ ಎಲ್ಲಾ ದೇವತೆಗಳೂ ಆಗಿರುವನು. ಹೀಗೆಂದು ವೇದವೂ ಈಗ ಸ್ತುತಿಮಾಡುತ್ತಿದೆ. ಆದಿತ್ಯನೆಂದರೆ ತ್ರಯೀವಿದ್ಯೆಯ ಪ್ರತ್ಯಕ್ಷಮೂರ್ತಿಯು, ಅವನ ಅನುಗ್ರಹವಿಲ್ಲದೆ ವೇದಗಳ ಪ್ರಾಪ್ತಿಯಿಲ್ಲ. ವೇದರೂಪವಾದ ಜ್ಞಾನವಿಲ್ಲದೆ ಮೋಕ್ಷವಿಲ್ಲ. ಆದ್ದರಿಂದ ಪ್ರತಿಯೊಬ್ಬ ಮುಮುಕ್ಷುವೂ ಆದಿತ್ಯನ ಆರಾಧನೆಯನ್ನು ಕಡ್ಡಾಯವಾಗಿ ಕೈಗೊಳ್ಳಬೇಕು. ಗಾಯತ್ರೀಮಂತ್ರಜಪ, ಸೂರ್ಯನಮಸ್ಕಾರ, ವೇದಪಾರಾಯಣ, ವೇದಾಧ್ಯಾಪನ–ಮುಂತಾದ ರೂಪವಾದ ಬಹಿರ್ಯಜ್ಞಗಳಿಂದಲೂ ಅಂತರಂಗದಲ್ಲಿ ಹಿರಣ್ಮಯಪುರುಷನ ಧ್ಯಾನ, ಆ ಮಹಾಮಹಿಮನ ಉಪಾಸನೆ, ಚಿಂತನಾದಿಗಳಿಂದಲೂ ಆದಿತ್ಯಭಗವಂತನ ಕೃಪೆಯನ್ನು ಸಂಪಾದಿಸಿಕೊಳ್ಳಬೇಕು.

ಓಂ ॥ ಆದಿತ್ಯೋ ವೈ ತೇಜ ಓಜೋ ಬಲಂ ಯಶಶ್ಚಕ್ಷುಃ ಶ್ರೋತ್ರ
ಮಾತ್ಮಾ ಮನೋ ಮನ್ಯುರ್ಮನುರ್ಮೃತ್ಯುಃ ಸತ್ಯೋ ಮಿತ್ರೋ
ವಾಯುರಾಕಾಶಃ ಪ್ರಾಣೋ ಲೋಕಪಾಲಃ ಕಃ ಕಿಂ ಕಂ ತತ್
ಸತ್ಯ ಮನ್ನಮಮೃತೋ ಜೀವೋ ವಿಶ್ವಃ ಕತಮಃ ಸ್ವಯಂಭು
ಬ್ರಹ್ಮೈ ತದಮೃತ ಏಷ ಪುರುಷ ಏಷ ಭೂತಾನಾಮಧಿಪತಿಃ
ಬ್ರಹ್ಮಣಃ ಸಾಯುಜ್ಯಂ ಸಲೋಕತಾಮಾಪ್ನೋತ್ಯೇತಾಸಾಮೇವ

**ದೇವತಾನಾಂ ಸಾಯುಜ್ಯಗ್‌ಂ ಸಾರ್ಷ್ಟಿತಾಗ್‌ಂ ಸಮಾನಲೋಕಾ–**
**ತಾಮಾಪ್ನೋತಿ ಯ ಏವಂ ವೇದೇತ್ಯುಪನಿಷತ್ ॥**

ಈ ಮಂತ್ರದಲ್ಲಿ ಉಪಾಸ್ಯದೇವತೆಯಾದ ಆದಿತ್ಯನ ವಿಭೂತಿಗಳನ್ನು ಪ್ರಸ್ತಾಪಿಸಿರುತ್ತಾರೆ. ಇವು ಆಧ್ಯಾತ್ಮಿಕಾಧಿಭೌತಿಕಾಧಿದೈವಿಕವಾಗಿ ವಿಂಗಡವಾಗಿರುವ ಪ್ರಪಂಚದಲ್ಲಿ ಎಲ್ಲೆಲ್ಲಿಯೂ ತೋರಿಕೊಂಡಿವೆ. ಹೇಗೆಂದರೆ ಆದಿತ್ಯನೇ ತೇಜಸ್ಸು–ಎಂದರೆ ಬೆಳಕು ಹಾಗೂ ಕಾಂತಿರೂಪನಾಗಿರುವನು. ಓಜಸ್ಸೆಂಬ ಬಲಕಾರಣವಾದ ಧಾತುವಾಗಿರುವನು. ಇನ್ನು ಬಲವೆಂದರೆ ಶರೀರದಾರ್ಢ್ಯವು. **ಯಶಸ್ಸೆಂದರೆ** ಕೀರ್ತಿಯು; ಚಕ್ಷುಸ್ಸೆಂದರೆ ಮಾನವನಿಗೆ ರೂಪವನ್ನು ನೋಡಲು ಕರಣಗಳಾಗಿರುವ ಎರಡು ಕಣ್ಣುಗಳು; **ಶ್ರೋತ್ರವೆಂದರೆ** ಶಬ್ದಗಳನ್ನು ಕೇಳಲು ಬಳಸುವ ಇಂದ್ರಿಯವು; **ಆತ್ಮಾ** ಎಂದರೆ ದೇಹವು, **ಮನಸ್ಸು**–ಎಂದರೆ ಅಂತಃಕರಣವು. **ಮನ್ಯುವೆಂದರೆ** ಕೋಪವು. **ಮನು**–ಎಂದರೆ ವೈವಸ್ವತನೆಂಬವನು ಹಾಗೂ ಅವನ ವಂಶದವರು. **ಮೃತ್ಯುವೆಂದರೆ** ಯಮನು. **ಸತ್ಯ–ಮಿತ್ರ** ಎಂಬಿಬ್ಬರೂ ದೇವತೆಗಳು. ಇವರುಗಳೂ ಆದಿತ್ಯನೇ ಆಗಿರುವರು. ಇನ್ನು **ವಾಯುವೆಂದರೆ** ಗಾಳಿಯು; **ಆಕಾಶವೆಂದರೆ** ಅವಕಾಶವು. **ಪ್ರಾಣವೆಂದರೆ** ಆಧ್ಯಾತ್ಮಿಕವಾಯುವು. **ಲೋಕಪಾಲನೆಂದರೆ** ಇಂದ್ರಾದಿಗಳು. **ಕಃ**–ಎಂದರೆ ಪ್ರಜಾಪತಿಯು. **ಕಿಂ**–ಎಂದರೆ ಹೀಗೆಂದು ಹೇಳಲು ಬಾರದ ಅನಿರ್ವಚನೀಯ ವಸ್ತುವೂ. **ಕಂ**–ಎಂದರೆ ಸುಖವು. **ತತ್**–ಎಂದರೆ ಪರೋಕ್ಷವಾದ ವಸ್ತುವು. ಸತ್ಯವೆಂದರೆ ಇದ್ದದ್ದನ್ನು ಇದ್ದಂತೆ ನುಡಿಯುವದು. **ಅನ್ನವೆಂದರೆ** ಪ್ರಾಣಿಗಳಿಗೆ ಜೀವನಾಧಾರರಾದ ಆಹಾರವು. **ಅಮೃತವೆಂದರೆ** ಮೋಕ್ಷವು. **ಜೀವನೆಂದರೆ** ವಿಶ್ವದಲ್ಲಿರುವ ಎಲ್ಲಾ ಚೇತನಪ್ರಾಣಿಗಳು. **ಕತಮ**–ವೆಂದರೆ ಅತಿ ಹೆಚ್ಚಿನ ಸುಖವು. **ಸ್ವಯಂಭು** ಎಂದರೆ ಉತ್ಪತ್ತ್ಯಾದಿಗಳಿಲ್ಲದ ಬ್ರಹ್ಮವು–ಹೀಗೆ ಹೆಸರಿಸಿದ ಎಲ್ಲಾ ವಸ್ತುಗಳೂ ದೇವತೆಗಳೂ ಇಂದ್ರಿಯಪ್ರಾಣಾದಿಗಳೂ ಆಕಾಶಾದಿಭೂತಗಳೂ ಸರ್ವವೂ ಆದಿತ್ಯನೇ–ಎಂದೂ ಸ್ತೋತ್ರಮಾಡಲಾಗಿದೆ. ಇವನನ್ನು ಉಪಾಸನೆಮಾಡಿದರೆ ಎಲ್ಲಾ ದೇವತೆಗಳನ್ನೂ ಆರಾಧಿಸಿದಂತೆಯೇ–ಎಂದರ್ಥ. ಹೇಗೆ ಮಹಾನದಿಗೆ ಹೋದರೆ ಸ್ನಾನ–ಆಹ್ನಿಕ–ತರ್ಪಣ–ವಸ್ತ್ರಕ್ಷಾಲನಾದಿ ಎಲ್ಲಾ ಕೆಲಸಗಳೂ ಆಗುವವೋ ಅದನ್ನು **"ಸರ್ವತಃ ಸಂಪ್ಲುತೋದಕ"** ವೆಂದು ಗೀತೆಯಲ್ಲಿ ಹೊಗಳಿದೆಯೋ ಹಾಗೆ ಆದಿತ್ಯನ ಆರಾಧನೆಯು ಸಕಲಪುರುಷಾರ್ಥಪ್ರದವೂ ಪೂರ್ಣವೂ ಆಗಿರುವದು–ಎಂದಭಿಪ್ರಾಯ. ಇಷ್ಟೇ ಅಲ್ಲ. ಈತನೇ **ಅಮೃತನೂ ಪುರುಷನೂ, ಭೂತಗಳೊಡೆಯನೂ** ಆಗಿರುವನು.

ಈಗ ಈ ಆದಿತ್ಯೋಪಾಸನೆಗೆ ಫಲವನ್ನು ತಿಳಿಸಲಾಗುವದು. ಯಾವನು ಆದಿತ್ಯನನ್ನು ಮೇಲೆ ತಿಳಿಸಿದಂತೆ ಸರ್ವದೇವಾತ್ಮಕನೆಂದು ಚಿಂತಿಸುವನೋ ಅಂಥವನಿಗೆ ಮರಣಾನಂತರದಲ್ಲಿಸೂರ್ಯಲೋಕಪ್ರಾಪ್ತಿಯಾಗಿ ಆ ದೇವತೆಯೊಡನೆಯೇ ಐಕ್ಯವನ್ನು ಹೊಂದುವನು. ಆದರೆ ಉಪಾಸನೆಯು ಶಿಥಿಲವಾಗಿದ್ದರೆ ದೇವತೆಯ ಲೋಕವನ್ನು ಮಾತ್ರ ಪಡೆಯುವನು. ಮತ್ತುಸಮಾನವಾದ ಐಶ್ವರ್ಯವನ್ನೂ ಹೊಂದುವನು. ಹಿರಣ್ಯಗರ್ಭನು ಸರ್ವದೇವಾತ್ಮಕನಾದ್ದರಿಂದ ಆದಿತ್ಯಮಂಡಲದಲ್ಲಿ ಹಿರಣ್ಯಗರ್ಭೋಪಾಸನೆಯನ್ನು ಮಾಡುವವನು ಆ ದೇವತೆಗಳು ಹಿರಣ್ಯಗರ್ಭನ ಅವಯವಗಳಾದ್ದರಿಂದ ಪೂರ್ಣಫಲವನ್ನು ಹೊಂದದೆ ಆ ಲೋಕವನ್ನು ಮಾತ್ರ ಹೊಂದುವನೆಂದೂ ಅಭಿಪ್ರಾಯ. ಹೀಗೆ ಆದಿತ್ಯೋಪಾಸನೆಯು ಪೂರೈಸಿರುತ್ತದೆ.

## ಶಿವೋಪಾಸನಮಂತ್ರಗಳು

ಇನ್ನು ಮುಂದೆ ಈ ಉಪನಿಷತ್ತಿನಲ್ಲಿ ಶಿವನನ್ನು ಸ್ತುತಿಸುವ ಹಾಗೂ ಅತನ ಪ್ರಸಾದಸಿದ್ಧಿಗಾಗಿ ಜಪಮಾಡಬೇಕಾದ ಮಂತ್ರಗಳನ್ನು ಪ್ರಸ್ತಾಪಿಸಲಾಗುವದು. ಹೊಸದಾಗಿ ದೇವಾಲಯವನ್ನು ನಿರ್ಮಿಸಿ ಶಿವಲಿಂಗವನ್ನು ಸ್ಥಾಪಿಸುವಾಗ ಈ ಮಂತ್ರಗಳನ್ನು ಪಠನಮಾಡಬೇಕು. ಹಾಗೂ ಪಾರ್ಥಿವ ಲಿಂಗವನ್ನು ಪ್ರತಿದಿನವೂ ಪೂಜಿಸುವವನು ಸಹ ಈ ಮಂತ್ರಗಳನ್ನು ಜಪಿಸಬೇಕು. ಇವು ಪಾಪಪರಿಹಾರಕ ಗಳಾಗಿವೆ–ಎಂದು ತಿಳಿದು ಬರುತ್ತದೆ. ಮುಂದೆ ಮಂತ್ರದಲ್ಲಿ ''ಸರ್ವಲಿಂಗಂ ಸ್ಥಾಪಯತಿ'' ಎಂದೂ ''ಪವಿತ್ರಂ'' ಎಂದೂ ಪಠಿಸಿರುವದರಿಂದ ಹೀಗೆ ಅರ್ಥಮಾಡಲಾಗಿದೆ. ಮಂತ್ರಭಾಗವು ಹೀಗಿದೆ:–

**ಓಂ ॥ ನಿಧನಪತಯೇ ನಮಃ । ನಿಧನಪತಾಂತಿಕಾಯ ನಮಃ। ಊರ್ಧ್ವಾಯ ನಮಃ । ಊರ್ಧ್ವಲಿಂಗಾಯ ನಮಃ । ಹಿರಣ್ಯಾಯ ನಮಃ। ಹಿರಣ್ಯಲಿಂಗಾಯ ನಮಃ। ಸುವರ್ಣಾಯ ನಮಃ। ಸುವರ್ಣಲಿಂಗಾಯ ನಮಃ। ದಿವ್ಯಾಯ ನಮಃ। ದಿವ್ಯಲಿಂಗಾಯ ನಮಃ। ಭವಾಯ ನಮಃ। ಭವಲಿಂಗಾಯ ನಮಃ । ಶರ್ವಾಯ ನಮಃ । ಶರ್ವಲಿಂಗಾಯ ನಮಃ । ಶಿವಾಯ ನಮಃ । ಶಿವಲಿಂಗಾಯ ನಮಃ। ಜ್ವಲಾಯ ನಮಃ । ಜ್ವಲಲಿಂಗಾಯ ನಮಃ। ಆತ್ಮಾಯ ನಮಃ । ಆತ್ಮಲಿಂಗಾಯ ನಮಃ । ಪರಮಾಯ ನಮಃ । ಪರಮಲಿಂಗಾಯ ನಮಃ । ಏತತ್ಸೋಮಸ್ಯ ಸೂರ್ಯಸ್ಯ ಸರ್ವಲಿಂಗಗ್ಂ ಸ್ಥಾಪಯತಿ ಪಾಣಿ ಮಂತ್ರಂ ಪವಿತ್ರಮ್ ॥**

ನಿಧನಪತಿಯೆಂದರೆ ಕುಬೇರನೆಂದರ್ಥ. ''ನಿತರಾಂ ಧನಮ್–ನಿಧನಮ್'' ಎಂಬ ವ್ಯುತ್ಪತ್ತಿಯಂತೆ ನಿರತಿಶಯವಾದ ಅರಪರಿಮಿತವಾದ ಧನವುಳ್ಳವನು ನಿಧನಪತಿಯು. ಅವನನ್ನು ಅಷ್ಟದಿಕ್ಪಾಲಕರಲ್ಲಿ ಒಬ್ಬನೆಂದೂ ಪರಿಗಣಿಸಿದೆ. ಇಂಥ ಕುಬೇರನ ರೂಪದಲ್ಲಿರುವವನೂ ಪರಮೇಶ್ವರನೇ. ಆದ್ದರಿಂದ ಅದೇ ಹೆಸರಿನಿಂದ ನಮಸ್ಕರಿಸಲಾಗಿದೆ. ಅನಂತರ ನಿಧನಪತಾಂತಿಕನೆಂದೂ ಹೊಗಳಿದೆ. ಇಲ್ಲಿ ನಿಧನಪ–ಎಂದರೆ ಕುಬೇರನೆಂದು ಅರ್ಥಮಾಡಿ 'ತ' ಎಂದರೆ ತನೋತಿ–ಭಕ್ತರಿಗೆ ಧನವನ್ನು ದಯಪಾಲಿಸುವವನೂ ಅಂತಿಕ–ಎಂದರೆ ಅತಿ ಸಮೀಪದಲ್ಲಿರುವವನೂ ಆಗಿರುವ ಪರಮೇಶ್ವರನೆಂದೂ ಅವನಿಗೆ ನಮಸ್ಕಾರವೆಂದೂ ತಿಳಿಸಿದೆ. ಕುಬೇರನು ಧನವನ್ನು ಕೊಡುವಾಗಲೂ ಪರಮೇಶ್ವರನು ಯಾರಿಗೆ ಅನುಗ್ರಹಮಾಡುವನೋ ಅಂಥವರಿಗೇ ಕೊಡುತ್ತಾನೆ. ಹೀಗೆ ಭಕ್ತರ ಹೃದಯದಲ್ಲಿಯೇ ಇದ್ದುಕೊಂಡು ಅವರು ಬಯಸಿದಾಗ ಧನಾದಿಗಳನ್ನು ಕುಬೇರನ ರೂಪದಿಂದ ನೀಡಿ ಕಾಪಾಡುವ ಶಿವನನ್ನು ''ನಿಧನಪತಾಂತಿಕಾಯ ನಮಃ'' ಎಂದು ನಮಸ್ಕರಿಸಿದೆ. ಇನ್ನು ಭೂಮಿಗಿಂತ ಮೇಲಿನ ಸ್ವರ್ಗಾದಿಲೋಕಗಳಲ್ಲಿ ಆಯಾ ದೇವತಾರೂಪದಿಂದ ಇದ್ದುಕೊಂಡಿರುವ ಭಗವಂತನೇ **ಊರ್ಧ್ವನು**. ಮತ್ತು ಆ ಲೋಕಗಳಲ್ಲಿ ಕೂಡ ದೇವತೆಗಳಿಂದ ಲಿಂಗರೂಪದಲ್ಲಿ ಪೂಜಿಸಲ್ಪಡುವವನಾದ್ದರಿಂದ **ಊರ್ಧ್ವಲಿಂಗ**ನೆನಿಸಿರುವನು. ಅಂಥವನಿಗೆ ನಮಸ್ಕಾರ–ಎಂದರ್ಥ. ಲೋಹಗಳಲ್ಲಿ ಬೆಲೆಬಾಳುವ ಶ್ರೇಷ್ಠವಾದ ಚಿನ್ನವು ಪರಮಾತ್ಮನ ವಿಭೂತಿಯು. ಸರ್ವಾಂತರ್ಯಾಮಿಯಾದ ಆತನು ಹಿರಣ್ಯದಲ್ಲಿಯೂ ಇದ್ದುಕೊಂಡೇ ಇರುವನು. ಆದ್ದರಿಂದ ಹಿರಣ್ಯನೆನಿಸುವನು. ಮತ್ತು ಚಿನ್ನದಿಂದ ಮಾಡಿದ ಲಿಂಗದಲ್ಲಿಯೂ ಸನ್ನಿಹಿತನಾಗಿದ್ದು ಲಿಂಗಪೂಜೆಯನ್ನು ಮಾಡುವವರಿಗೆ ಇಷ್ಟಾರ್ಥಪ್ರದನೂ ಆಗಿರುವನು. ಆದ್ದರಿಂದ **ಹಿರಣ್ಯಲಿಂಗ**ನೆನಿಸಿರುವನು; ಇಂತವನಿಗೆ ನಮಸ್ಕಾರ ಎಂದರ್ಥ. **ಲಿಂಗ**ವೆಂದರೆ ಗುರುತು–ಚಿಹ್ನೆ–ಎಂದರ್ಥ. ಲೋಕದಲ್ಲಿರುವ ಉತ್ಕೃಷ್ಟವಸ್ತುಗಳೆಲ್ಲವೂ ಪರಮೇಶ್ವರನನ್ನು ಗುರುತಿಸಲು ದ್ವಾರಗಳಾಗಿವೆ. ಆದ್ದರಿಂದ ಸುವರ್ಣಲಿಂಗವನ್ನು ಪ್ರತೀಕವಾಗಿ ಮಾಡಿಕೊಂಡು ಶಿವಪೂಜೆಯನ್ನು ಮಾಡುವದು ಶ್ರೇಯಸ್ಕರವೇ ಆಗಿದೆ. ಅಶಕ್ತರಾದವರು ಶಿಲಾಲಿಂಗವನ್ನು ಪೂಜಿಸಬಹುದು. ಪರಮೇಶ್ವರನಿಗೆ ನಾವು ಏನನ್ನು ಎಷ್ಟೇ ಸಮರ್ಪಿಸಿದರೂ ಅಲ್ಪವೇ. ಏಕೆಂದರೆ ಸೃಷ್ಟಿಯೆಲ್ಲವೂ ಅವನದೇ ಆಗಿದೆ. ಈ ಅಭಿಪ್ರಾಯದಂತೆ ದೇವರಿಗೆ ಚಿನ್ನದ ರಥವನ್ನರ್ಪಿಸಿದರೂ ಪ್ರಶಂಸನೀಯವೇ ಆಗಿದೆ. ಹೀಗೆ **ಹಿರಣ್ಯಲಿಂಗ**ನಾಗಿ ವಿರಾಜಿಸುವ ಭಗವಂತನಿಗೆ ನಮಸ್ಕಾರಗಳು–ಎಂದರ್ಥ. ಹಿರಣ್ಯಶಬ್ದದಿಂದ ಚಿನ್ನವನ್ನು ಹೇಳಿ ಆಗಿದೆಯಾದ್ದರಿಂದ ಮಂತ್ರದಲ್ಲಿ ಮುಂದಿರುವ

ಸುವರ್ಣಶಬ್ದಕ್ಕೆ ರೂಢ್ಯರ್ಥವನ್ನು ಕೈಬಿಟ್ಟು ಯೌಗಿಕಾರ್ಥದಂತೆ **ಬೆಳ್ಳಿ** ಎಂದು ಅರ್ಥ ಮಾಡಿದೆ. ಬೆಳ್ಳಿಯಂತೆ ಶುಭ್ರನೂ ಬಿಳುಪಾದ ವರ್ಣವುಳ್ಳವನೂ ಆದ ಭಗವಂತನು **ಸುವರ್ಣನು** ಬೆಳ್ಳಿಯ ಲಿಂಗರೂಪನೂ ಆಗಿದ್ದು **ಸುವರ್ಣಲಿಂಗನೆ**ನಿಸಿರುವನು.

ಈಗ ದ್ಯುಲೋಕನಿವಾಸಿಯಾಗಿ ಪರಮೇಶ್ವರನು ತೋರಿಕೊಂಡಿರುವದರಿಂದ ದಿವ್ಯನೆಂದೂ ಇಂದ್ರಾದಿದೇವತೆಗಳಿಂದ ಸ್ವರ್ಗಲೋಕಾದಿಗಳಲ್ಲಿಯೂ ಲಿಂಗಸ್ವರೂಪ ದಿಂದಲೇ ಪೂಜಿಸಲ್ಪಡುವವನಾದ್ದರಿಂದಲೂ ದಿವ್ಯನೆಂದೂ **ದಿವ್ಯಲಿಂಗನೆಂದೂ** ಸ್ತುತಿಸಿ ನಮಸ್ಕರಿಸಲ್ಪಟ್ಟಿರುವನು. ಇನ್ನು ಭವನೆಂದರೆ ಜಗತ್ತಿನ ಉತ್ಪತ್ತಿಕಾರಣನು. ಪರಮೇಶ್ವರನಿಂದಲೇ ಜಗತ್ತೆಲ್ಲವೂ ಹುಟ್ಟಿ ಬಂದಿದೆ. ಆದ್ದರಿಂದ ಜಗತ್ತೆಂಬುದೇ ಪರಮೇಶ್ವರನಾಗಿದ್ದು ಭವನೆಂದು ಆ ಜಗತ್ತಿನಲ್ಲಿರುವ ಸಂಸಾರಿಜೀವರುಗಳು ಶಿಲಾಕಾರವಾದ ಲಿಂಗರೂಪದಿಂದ ಪರಮೇಶ್ವರನನ್ನು ಪೂಜಿಸುವದರಿಂದ **ಭವಲಿಂಗನೆಂದೂ** ಕರೆಯಲ್ಪಡುವನು. ಇನ್ನು ಶರ್ವನೆಂದರೆ ಹಿಂಸಿಸುವವನು ಎಂದರ್ಥ. ಪ್ರಲಯಕಾಲದಲ್ಲಿ ಪ್ರಪಂಚವನ್ನೆಲ್ಲ ಲಯಮಾಡಿ ತನ್ನೊಳಗೆ ಅಡಗಿಸಿಕೊಳ್ಳುವವನಾಗಿದ್ದು ಶರ್ವನೆನಿಸಿರುವನು. **ಶರ್ವಲಿಂಗನೆಂದರೆ ಶಂ**–ಸುಖವನ್ನು **ವಾತಿ**– ಹೊಂದಿರು ವವನು–ಶರ್ವನು. ಇಂಥ ಸುಖಸ್ವರೂಪವನ್ನು ಲಿಂಗದಲ್ಲಿ ಪೂಜೆಮಾಡುವವನು ಕೂಡ ಸುಖವನ್ನೇ ಹೊಂದುವನು. ಹೀಗೆ ಪರಮೇಶ್ವರನು ಶರ್ವಲಿಂಗನೆನಿಸಿರುವನು. ಇಂಥವನಿಗೆ ನಮಸ್ಕಾರ–ಎಂದರ್ಥ. ಇನ್ನು ಪರಮೇಶ್ವರನು **ಶಿವನೆಂಬುದು** ಪ್ರಸಿದ್ಧವೇ ಆಗಿದೆ. ಮಂಗಳ ಸ್ವರೂಪನಾದ ಪರಮೇಶ್ವರನು ತನ್ನ ಸಾನ್ನಿಧ್ಯದಿಂದಲೂ ನಾಮದಿಂದಲೂ ಮಂಗಳಕರವಾದದ್ದನ್ನೇ ಸ್ಮರಣೆಗೆ ತರುವನು. ಆದ್ದರಿಂದ **ಶಿವಲಿಂಗನೆ**ನಿಸಿರುವನು. ಇನ್ನು ಜ್ಯೋತಿರ್ಮಯನಾಗಿ ಸದಾ ದೇದೀಪ್ಯಮಾನ ನಾಗಿರುವದರಿಂದ ಜ್ವಲನೆಂದೂ ಭೂಲೋಕದಲ್ಲಿ ಹನ್ನೆರಡು ಜ್ಯೋತಿರ್ಲಿಂಗಗಳ ರೂಪದಿಂದ ಆವಿರ್ಭೂತನಾಗಿರುವದರಿಂದ ಜ್ವಲಲಿಂಗನೆಂದೂ ಸ್ತೋತ್ರಮಾಡಿ ನಮಸ್ಕರಿಸಿದೆ. ಇನ್ನು ಸರ್ವಪ್ರಾಣಿಗಳಿಗೂ ಆತ್ಮನೆಂದರೆ ಸ್ವರೂಪನೇ ಆದ್ದರಿಂದ **ಆತ್ಮನೆಂದೂ** ಅವನೇ ಸೂಕ್ಷ್ಮಶರೀರರೂಪನಾಗಿಯೂ ಇದ್ದುಕೊಂಡಿರುವದರಿಂದ **ಆತ್ಮಲಿಂಗನೆಂದೂ** ಸ್ತೋತ್ರಮಾಡಿದೆ. ಹಾಗೆಯೇ ಎಲ್ಲಕ್ಕಿಂತ ಮಿಗಿಲಾದವನಾದ್ದರಿಂದ **ಪರಮನೆಂದು** ಅವನೇ ಲಿಂಗರೂಪನಾಗಿ ತೋರಿಕೊಂಡದ್ದರಿಂದ **ಪರಮಲಿಂಗನೆಂದೂ** ಹೊಗಳಿದೆ.

ಈ ಮಂತ್ರಗಳಿಂದ ಸೋಮಾತ್ಮಕನೂ ಸೂರ್ಯಾತ್ಮಕನೂ ಆಗಿರುವ–ಎಂದರೆ ಸೋಮಸೂರ್ಯರುಗಳನ್ನು ಉಪಲಕ್ಷಣವಾಗಿಟ್ಟುಕೊಂಡಲ್ಲಿ ಸರ್ವದೇವತೆಗಳ

ಸ್ವರೂಪನೂ ಆಗಿರುವ ಪರಮೇಶ್ವರನ ಚಿಹ್ನೆಯಾದ–ಎಂದರೆ ಪರಮಶಿವನನ್ನು ನೆನಪುಮಾಡಿಕೊಡುವಂಥ ಚಿನ್ನ, ಬೆಳ್ಳಿ, ಶಿಲೆ–ಮುಂತಾದ ಯಾವದೇ ಪದಾರ್ಥದಿಂದ ನಿರ್ಮಿಸಿದ ಲಿಂಗವನ್ನು ತ್ರೈವರ್ಣಿಕರಲ್ಲಿ ಯಾವ ಭಕ್ತನಾದರೂ ಸರಿ–ಆತನು ಭಕ್ತಿಶ್ರದ್ಧೆಗಳಿಂದ ಸ್ಥಾಪಿಸುವನೋ ಅವನು ಶಿವನ ಕೃಪೆಗೆ ಪಾತ್ರನಾಗುವನು. ಏಕೆಂದರೆ ಶಿವಲಿಂಗವು ಪಾಣಿಮಂತ್ರವು–ಎಂದರೆ ನಮ್ಮ ಶರೀರಾವಯವಗಳನ್ನು ಪ್ರತಿನಿಧಿಸುವ ಕೈಯಂತೆ ಸಮಸ್ತವೇದಗಳನ್ನೂ ಅವಯವಗಳಾಗಿ ಹೊಂದಿರುವ ಪರಶಿವನ ಪ್ರತಿನಿಧಿ ಯಾಗಿರುವದು. ಹೀಗೆ ಲಿಂಗವು ವೇದಮಯವಾಗಿರುವದರಿಂದಲೇ ಸ್ಮರಣಮಾತ್ರದಿಂದ ಪಾವಿತ್ರ್ಯತೆಯನ್ನುಂಟುಮಾಡುವದು. ಶಿವಲಿಂಗವನ್ನು ಸ್ಥಾಪಿಸಿದವನು ಮಹಾಪುಣ್ಯ ಶಾಲಿಯೂ ಸ್ವರ್ಗಾದಿಪುಣ್ಯಲೋಕಗಳನ್ನು ಹೊಂದುವವನೂ ಆಗುತ್ತಾನೆ. ತ್ರೇತಾಯುಗದಲ್ಲಿ ಶ್ರೀರಾಮಚಂದ್ರನು ರಾಮೇಶ್ವರಲಿಂಗವನ್ನು ಸ್ಥಾಪಿಸಿದನೆಂದು ಪುರಾಣಗಳಲ್ಲಿದೆ. ಹನುಮದಾದಿ–ವಾನರರಲ್ಲಿ ಕೆಲವರು ಲಿಂಗಸ್ಥಾಪನೆ ಮಾಡಿದ್ದಾರೆಂದೂ ಕಂಡು ಬರುತ್ತದೆ. ಸ್ಕಾಂದಪುರಾಣದ ಕಾಶೀಖಂಡದಲ್ಲಿ ತಿಳಿಸುವಂತೆ ಈಗ ಇಂದ್ರ, ಅಗ್ನಿ, ಆದಿತ್ಯ, ಯಮ, ಕುಬೇರ–ಮುಂತಾದ ದೇವತೆಗಳಾಗಿ ವಿರಾಜಿಸುತ್ತಿರುವವರೆಲ್ಲರೂ ತಮ್ಮ ಹಿಂದಿನ ಜನ್ಮಗಳಲ್ಲಿ ಅವಿಮುಕ್ತಕ್ಷೇತ್ರದಲ್ಲಿ ತಪಸ್ಸು ಮಾಡಿ ಶಿವಲಿಂಗಗಳನ್ನು ಸ್ಥಾಪಿಸಿದ್ದರಿಂದಲೇ ಆ ಪುಣ್ಯಫಲದಿಂದ ದೇವತಾಜನ್ಮವನ್ನು ಹೊಂದಿ ಅಧಿಕಾರಾರೂಢರಾಗಿದ್ದಾರೆಂದು ಗೊತ್ತಾಗುತ್ತದೆ. ಈ ರೀತಿಯಾಗಿ ಶಿವಲಿಂಗಸ್ಥಾಪನೆಯು ಮಹಾಪುಣ್ಯಪ್ರದವೂ ಪವಿತ್ರವೂ ಆಗಿರುತ್ತದೆ–ಎಂದು ಇಲ್ಲಿ ತಿಳಿಸಿರುತ್ತದೆ.

ಈಗ ಅಧಿಕಾರಿಯಾದ ಪುರುಷನಿಗೆ ಜ್ಞಾನೋತ್ಪತ್ತಿಯಾಗುವದಕ್ಕಾಗಿ ಜಪಿಸಬೇಕಾದ ಮಂತ್ರಗಳನ್ನು ತಿಳಿಸಲಾಗುವದು. ಇವುಗಳಲ್ಲಿ ಸದಾಶಿವನ ಐದು ಮುಖಗಳನ್ನು ಸ್ತುತಿಸಿದೆ. ಸದಾಶಿವನೇ ಜ್ಞಾನಪ್ರದನು. ''ಜ್ಞಾನವನ್ನು ಮಹೇಶ್ವರನಿಂದ ಪಡೆದುಕೊಳ್ಳಬೇಕು. ಮೋಕ್ಷವನ್ನು ಜನಾರ್ದನನಿಂದ ಪಡೆದುಕೊಳ್ಳಬೇಕು'' ಎಂದು ಸಾಂಪ್ರದಾಯಿಕರ ವಾಕ್ಯವೂ ಇದೆ. ಆದ್ದರಿಂದ ಜ್ಞಾನಪ್ರಾಪ್ತಿಗಾಗಿ ಸದಾಶಿವನ ಒಂದೊಂದು ಮುಖವನ್ನೂ ಈಗ ಅನುಸಂಧಾನ ಮಾಡಿ ನಮಸ್ಕರಿಸೋಣ.

**ಓಂ॥ ಸದ್ಯೋಜಾತಂ ಪ್ರಪದ್ಯಾಮಿ ಸದ್ಯೋಜಾತಾಯ ವೈ ನಮೋ ನಮಃ।**
**ಭವೇ ಭವೇ ನಾತಿಭವೇ ಭವಸ್ವ ಮಾಂ ಭವೋದ್ಭವಾಯ ನಮಃ॥**

ಇದು ಪರಮೇಶ್ವರನ ಪಶ್ಚಿಮಮುಖದಿಂದ ಸ್ತುತಿಯಾಗಿದೆ. ಭಕ್ತನು ಪೂರ್ವಾಭಿಮುಖವಾಗಿ ಈಶ್ವರನ ಪೂಜೆಗೆ ಅಥವಾ ಚಿಂತನೆಗೆ ಕುಳಿತಾಗ ಎದುರಾಗಿ

ಕಾಣುವದು ಮಹಾದೇವನ ಪಶ್ಚಿಮಮುಖವೇ ಆಗಿರುತ್ತದೆ. ಆದ್ದರಿಂದ ಅದನ್ನೇ ಮೊದಲು ಸ್ತುತಿಸಿರುತ್ತದೆ–ಎಂದು ಭಾವಿಸಬಹುದು. ಅದರ ಹೆಸರು 'ಸದ್ಯೋಜಾತ' ನೆಂದಿರುತ್ತದೆ. ಈ ಹೆಸರು ಬಹಳ ಅರ್ಥಗರ್ಭಿತವಾಗಿದೆ. ಏಕೆಂದರೆ ಸದ್ಯಃ ಎಂದರೆ ಆಗ ತಾನೆ ಜಾತಃ ಹುಟ್ಟಿರುವದು, ಹೊಚ್ಚ ಹೊಸದು–ಎಂದರ್ಥ. ಮನುಷ್ಯನಿಗೆ ಯಾವಾಗಲೂ ಹೊಸಹೊಸ ಪದಾರ್ಥಗಳಲ್ಲಿಯೇ ಪ್ರೀತಿಯುಂಟಾಗುವದು. ಆದ್ದರಿಂದಲೇ ವಸ್ತುಗಳನ್ನು ಉತ್ಪಾದಿಸುವವರು ಹೊಸಹೊಸ ಬಗೆಯ ಮಾದರಿಯ ಪದಾರ್ಥಗಳನ್ನು ಸಿದ್ಧಗೊಳಿಸಿ ಮಾರುಕಟ್ಟೆಗೆ ತರುವರಲ್ಲವೆ ? ಒಬ್ಬ ತಾಯಿಗೆ ಎರಡನೆಯ ಮಗು ಹುಟ್ಟಿದಾಗ ಹಿರಿಯ ಮಗುವಿಗಿಂತ ಕಿರಿಯದರಲ್ಲಿ ಪ್ರೀತಿಯು ಹೆಚ್ಚುವದು. ಏಕೆಂದರೆ ಅದು ನವಶಿಶುವಾಗಿರುತ್ತದೆ. ಹೀಗೆ ಹೊಸತನವು ಉತ್ಸಾಹ–ಪ್ರೀತಿ–ಆಸೆ–ಆಕಾಂಕ್ಷೆಗಳನ್ನುಂಟುಮಾಡುತ್ತದೆ. ಆದರೆ ಆ ಹೊಸತನದ ಮೂಲವೇ ಪರಮೇಶ್ವರನು. ಅವನು ಕಾಲವನ್ನು ಮೀರಿದವನಾದ್ದರಿಂದ ಹಳಬನಾಗುವ ಸಂಭವವಿಲ್ಲ . ಅವನು ಯಾವಾಗಲೂ ನಿತ್ಯವರ್ತಮಾನಸ್ವರೂಪನಾಗಿರುತ್ತಾನೆ. ಇದೇ ಪರಮೇಶ್ವರನ ಸದ್ಯೋಜಾತತ್ವವು. ಇಂಥವನನ್ನು ನಾನು ಶರಣುಹೊಕ್ಕಿರುವೆನು. ಇವನಿಗೆ ನಮಸ್ಕಾರ–ಎಂದು ಮಂತ್ರದ ಪೂರ್ವಾರ್ಧದ ಅಭಿಪ್ರಾಯವು. ಮುಂದುವರೆದು ಭಕ್ತನು ಕೇಳುವದೇನೆಂದರೆ: 'ಎಲೈ ಭಗವಂತನೆ, ಭವೇ–ಭವೇ ಆಯಾ ಜನ್ಮಗಳನ್ನು ನಾನು ಎತ್ತುತ್ತಿರುವೆನಲ್ಲ , ಇನ್ನು ಮುಂದೆ ಮತ್ತೆ ಜನ್ಮವುಂಟಾಗುವಂಥ ಕರ್ಮಗಳಲ್ಲಿ ನನ್ನನ್ನು ಪ್ರೇರಿಸಬೇಡ. ಏಕೆಂದರೆ ನಾನು ಹುಟ್ಟಿಹುಟ್ಟಿ ಬೇಸರಗೊಂಡಿರುತ್ತೇನೆ. ಆದ್ದರಿಂದ **'ಅತಿಭವೇ'**–ಜನ್ಮವನ್ನು ದಾಟಿ ಮುಕ್ತನಾಗುವ ಸಲುವಾಗಿ ನನಗೆ 'ಭವಸ್ವ' ತತ್ತ್ವಜ್ಞಾನಕ್ಕೆ ಪ್ರೇರಿಸುವವನಾಗು. ನೀನು ಭವೋದ್ಭವನು–ಎಂದರೆ ಜೀವರುಗಳನ್ನು ಸಂಸಾರದಿಂದ ಮೇಲಕ್ಕೆತ್ತಿ ಉದ್ಧರಿಸುವವನು. ಇಂಥ ನಿನಗೆ ನಮಸ್ಕಾರವು–ಎಂದಭಿಪ್ರಾಯ. ಹೀಗೆ ಪರಮೇಶ್ವರನನ್ನು ಸದ್ಯೋಜಾತನೆಂದು ಸ್ತುತಿಸಿದೆಯಾದರೂ ಆತನ ಪಶ್ಚಿಮಮುಖವು ಹೇಗಿರಬಹುದೆಂಬ ಬಗ್ಗೆ ವೇದದಲ್ಲಿ ವಿವರಗಳಿಲ್ಲ. ಭಕ್ತರ ಅಭಿರುಚಿಗೆ ತಕ್ಕಂತೆ ಅದನ್ನು ಬಲ್ಲವರು ಹೀಗೆ ವರ್ಣಿಸುತ್ತಾರೆ'.

**ಪ್ರಾಲೇಯಾಚಲಚಂದ್ರಕುಂದಧವಳಂ ಗೋಕ್ಷೀರಫೇನಪ್ರಭಂ**
**ಭಸ್ಮಾಭ್ಯಕ್ತಮನಂಗದೇಹದಹನಜ್ವಾಲಾವಳೀಲೋಚನಮ್ ।**
**ಬ್ರಹ್ಮೇಂದ್ರಾದಿಮರುದ್ಗಣೈಃ ಸ್ತುತಿಪರೈರಭ್ಯರ್ಚಿತಂ ಯೋಗಿಭಿ ಃ**
**ವಂದೇಽಹಂ ಸಕಲಂ ಕಲಂಕರಹಿತಂ ಸ್ಥಾಣೋರ್ಮುಖಂ ಪಶ್ಚಿಮಮ್ ॥**

'ಮಹಾನ್ಯಾಸ'ವೆಂಬ ಪೂಜಾಕಲ್ಪದಲ್ಲಿ ಈ ಧ್ಯಾನಶ್ಲೋಕವನ್ನು ಹಿರಿಯರು ಪಠಿಸುತ್ತಾರೆ. ಇದು ಯಾವದಾದರೂ ಪುರಾಣದಲ್ಲಿದೆಯೋ ಅಥವಾ ಶಿವಭಕ್ತರು ಯಾರಾದರೂ ರಚಿಸಬಹುದಾದದ್ದೋ ತಿಳಿಯದು. ಇದೇ ರೀತಿಯಾಗಿ ಉಳಿದ ನಾಲ್ಕು ಮುಖಗಳಿಗೂ ಪ್ರತ್ಯೇಕವಾದ ಧ್ಯಾನಶ್ಲೋಕಗಳಿವೆ. ಅವುಗಳನ್ನೂ ಮುಂದೆ ಕೊಡಲಾಗುವದು. ಪ್ರಕೃತ ಈ ಶ್ಲೋಕದ ಅಭಿಪ್ರಾಯವನ್ನು ಮನನಮಾಡೋಣ. ''ಹಿಮವತ್ಪರ್ವತ, ಚಂದ್ರ, ಕುಂದಪುಷ್ಪಗಳಂತೆ ಬಿಳುಪಾಗಿಯೂ ಹಸುವಿನ ಹಾಲಿನ ನೊರೆಯಂತೆ ಕಾಂತಿಯುಕ್ತವಾಗಿಯೂ ಭಸ್ಮದಿಂದ ಅಲಂಕೃತವಾಗಿಯೂ ಮನ್ಮಥನ ಶರೀರವನ್ನು ಸುಟ್ಟ ಜ್ವಾಲೆಗಳ ಸಮೂಹದ ಕಣ್ಣುಗಳುಳ್ಳದ್ದಾಗಿಯೂ ಸ್ತುತಿಮಾಡುತ್ತಿರುವ ಬ್ರಹ್ಮ ಇಂದ್ರನೇ-ಮುಂತಾದ ದೇವತೆಗಳಿಂದಲೂ ಯೋಗಿಗಳಿಂದಲೂ ಪೂಜಿಸಲ್ಪಡುತ್ತಿರುವ ಕಲಾಪೂರ್ಣವೂ ದೋಷರಹಿತವೂ ಆದ ಪರಮೇಶ್ವರನ ಪಶ್ಚಿಮಮುಖವನ್ನು ನಾನು ನಮಸ್ಕರಿಸುವೆನು'' ಎಂದಭಿಪ್ರಾಯ. ಸದ್ಯೋಜಾತಮುಖವು ಈ ರೀತಿಯಾದ ವರ್ಣನೆಯಿಂದ ಕೂಡಿದ್ದಾಗಿದೆ-ಎಂಬಿದು ಅದನ್ನು ಧ್ಯಾನಿಸುವವರಿಗೆ ಸೌಕರ್ಯಕರವಾಗಿರುವದು. ಇದರಲ್ಲಿ ಶುಭ್ರವರ್ಣದ ಪ್ರಸ್ತಾಪವಿರುವದು ಜ್ಞಾನಪ್ರದವೆಂಬುದಕ್ಕೆ ಸೂಚಕವಾಗಿದೆ.

ಈಗ ಉತ್ತರಮುಖಪ್ರತಿಪಾದಕವಾದ ಮಂತ್ರವನ್ನು ವಿಚಾರಮಾಡೋಣ.

**ಓಂ॥ ವಾಮದೇವಾಯ ನಮೋ ಜ್ಯೇಷ್ಠಾಯ ನಮಃ ಶ್ರೇಷ್ಠಾಯ ನಮೋ ರುದ್ರಾಯ ನಮಃ ಕಾಲಾಯ ನಮಃ ಕಲವಿಕರಣಾಯ ನಮೋ ಬಲವಿಕರಣಾಯ ನಮೋ ಬಲಾಯ ನಮೋ ಬಲಪ್ರಮಥನಾಯ ನಮಃ ಸರ್ವಭೂತದಮನಾಯ ನಮೋ ಮನೋನ್ಮನಾಯ ನಮಃ ॥**

ಈ ಮಂತ್ರದಲ್ಲಿ ಹನ್ನೊಂದು ನಾಮಗಳಿಂದ ಭಗವಂತನನ್ನು ನಮಸ್ಕರಿಸಲಾಗಿದೆ. ಏಕಾದಶ-ಎಂಬ ಸಂಖ್ಯೆಯು ರುದ್ರಭಕ್ತರಿಗೆ ಪ್ರಿಯವಾದುದು. ಶಿವೋಪಾಸನೆ-ಅನುಷ್ಠಾನಗಳಲ್ಲಿ ಏಕಾದಶಸಂಖ್ಯೆಯನ್ನು ಹೆಚ್ಚಾಗಿ ಬಳಸುತ್ತಾರೆ. ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು, ಮನಸ್ಸು-ಸೇರಿ ಹನ್ನೊಂದಾಗುವದು. ಇವುಗಳನ್ನೆಲ್ಲ ಒಮ್ಮೆಗೇ ಭಗವದರ್ಚನೆಯಲ್ಲಿ ತೊಡಗಿಸಿದರೆ ಏಕಾದಶರುದ್ರರನ್ನು ಅಂತರಂಗದಿಂದಲೂ ಆರಾಧಿಸಿದಂತಾಗುವದು. ಇರಲಿ. ಈಗ ನಾಮಗಳ ಅಭಿಪ್ರಾಯವನ್ನು ಚಿಂತಿಸೋಣ. ವಾಮದೇವನೆಂದರೆ ಸುಂದರವಾದ ಹೊಳೆಯುವ ದಿವ್ಯದೇಹವುಳ್ಳವನೆಂದರ್ಥ. ಮಹಾದೇವನನ್ನು ಸುಂದರೇಶ್ವರನೆಂದೂ

ಸುಂದರೇಶನೆಂದೂ ಕರೆಯುತ್ತಾರೆ. ಹಾಗೆಯೇ ಅವನು ಜ್ಯೇಷ್ಠನೂ ಆಗಿರುವನು. ಉತ್ಪತ್ತಿರಹಿತನಾದ ಅವನು ಯಾವಾಗಲೂ ಇದ್ದುಕೊಂಡೇ ಇರುವದರಿಂದ ಜಗತ್ತಿನಲ್ಲಿ ಸೃಷ್ಟಿಕಾಲಕ್ಕೆ ಹೊರತೋರಿಕೊಂಡ ಪ್ರಪ್ರಥಮ ಪ್ರಜೆಗಿಂತಲೂ ಅವನು ಜ್ಯೇಷ್ಠನೆನಿಸಿರುವನು. ಕೆಲವರು ಕುಟುಂಬದಲ್ಲಿಯೂ, ಊರಿನಲ್ಲಿಯೂ– ಜ್ಯೇಷ್ಠರೆನಿಸಿ ಕೊಳ್ಳುವರಾದರೂ ಶ್ರೇಷ್ಠರಾಗಿರುವದಿಲ್ಲ. ಪರಮೇಶ್ವರನು ಹಾಗಲ್ಲ. ಅವನು ಶ್ರೇಷ್ಠನೂ ಆಗಿರುವನು. ಏಕೆಂದರೆ ಜ್ಞಾನಶಕ್ತಿಬಲೈಶ್ವರ್ಯ ವೀರ್ಯತೇಜಸ್ಸುಗಳೆಂಬ ಷಡ್ಗುಣೈಶ್ವರ್ಯಸಂಪನ್ನನಾಗಿರುವನು. ಭೀಷ್ಮಾಚಾರ್ಯರ ಅಭಿಪ್ರಾಯದಂತೆ ರಾಜಸೂಯಯಾಗದಲ್ಲಿ ನೆರೆದಿದ್ದವರಲ್ಲೆಲ್ಲ ಶ್ರೀಕೃಷ್ಣನು ಹೇಗೆ ಶೇಷ್ಠನೂ ಅಗ್ರಪೂಜಾರ್ಹನೂ ಎನಿಸಿದ್ದನೋ ಹಾಗೆ ಮಹಾದೇವನು ಬ್ರಹ್ಮಾಂಡದಲ್ಲೆಲ್ಲ ಶ್ರೇಷ್ಠನೆನಿಸಿರುವನು. ಇನ್ನು ಆ ಭಗವಂತನು ರುದ್ರನೆನಿಸಿರುವನು. ರೋದನವನ್ನು ಕಳೆದು ಆನಂದಪ್ರದನಾದ್ದರಿಂದ ರುದ್ರನೆನಿಸಿರುವನು. ಮತ್ತು ಕಾಲನೆನಿಸಿರುವನು. ಎಲ್ಲಾ ಪ್ರಾಣಿಗಳೂ ಕಾಲದಲ್ಲಿಯೇ ಹುಟ್ಟಿ ಕಾಲದಲ್ಲಿಯೇ ಲಯವಾಗುವವು. ಅಂಥ ಕಾಲನು ರುದ್ರನೇ. ಕಲವಿಕರಣನೆಂದರೆ ಕಂ–ಸುಖವನ್ನು ಲಾತಿ–ದಯಪಾಲಿಸುವವನು. ವಿ–ಎಂದರೆ ವಿವಿಧವಾಗಿ ಜಗತ್ತನ್ನು ಕರಣ–ಎಂದರೆ ಉಂಟುಮಾಡುವವನು. ಕಲನೂ ವಿಕರಣನೂ ಆಗಿರುವವನೇ ಕಲವಿಕರಣನು. ಬ್ರಹ್ಮಾಂಡವನ್ನೆಲ್ಲ ಚಿತ್ರವಿಚಿತ್ರವಾಗಿ ಸೃಷ್ಟಿಸಿ ಸಮಸ್ತರಿಗೂ ಸುಖವನ್ನು ಕೊಟ್ಟಿರುವ ಭಗವಂತನು ಕಲವಿಕರಣನೆನಿಸಿರುವನು. ಬಲವಿರಕಣನೆಂದರೆ ರಾಕ್ಷಸರ ಬಲವನ್ನೆಲ್ಲ ಹಿಮ್ಮೆಟ್ಟಿಸಿ ಚದುರಿಸಿಬಿಡುವವನು– ಎಂದರ್ಥ. ಇನ್ನು ಪರಮೇಶ್ವರನು ಬಲರೂಪನಾಗಿಯೂ ಪ್ರಾಣಿಗಳಲ್ಲಿಯೂ, ಮನುಷ್ಯರಲ್ಲಿಯೂ, ದೇವತೆಗಳಲ್ಲಿಯೂ ಕಾಣಿಸಿಕೊಂಡಿರುತ್ತಾನೆ. ಆದರೆ ಆಸುರೀಸಂಪತ್ತಿನ ಬಲಗಳನ್ನೆಲ್ಲ ಭಗವಂತನು ನಾಶಗೊಳಿಸುವವನಾದ್ದರಿಂದ ಬಲಪ್ರಮಥನನೆಂದೂ ಪ್ರಸಿದ್ಧನಾಗಿರುತ್ತಾನೆ. ಹಾಗೆಯೇ ಎಲ್ಲಾ ಭೂತಗಳನ್ನೂ ಹಿಮ್ಮೆಟ್ಟಿಸುವವನಾದ್ದರಿಂದ ಸರ್ವಭೂತದಮನನೆನಿಸಿರುತ್ತಾನೆ. ಪರಮೇಶ್ವರನ ಪರಾಕ್ರಮವು ಅಪ್ರತಿಹತವಾದದ್ದು . ಅವನನ್ನು ಎದುರಿಸಿಹೋದ ಮನ್ಮಥನೇ ಸುಟ್ಟುಬೂದಿಯಾದನು. ಜಗತ್ತಿನಲ್ಲಿ ಕಾಮಕ್ಕೆ ವಶರಾಗದವರೇ ಇಲ್ಲ. ಆದರೆ ಅದೇ ಕಾಮನು ಮಹಾದೇವನನ್ನು ಎದುರಿಸಿ ಪರಾಜಿತನಾದನು. ಆದ್ದರಿಂದ ಪರಮೇಶ್ವರನನ್ನು ಸರ್ವಭೂತದಮನನೆಂದು ಸ್ತುತಿಸಿದೆ. ಇನ್ನು ಮನೋನ್ಮನನೆಂದರೇನು? ವಿಚಾರಿಸೋಣ. ಮನ–ಎಂದರೆ ಎಲ್ಲವನ್ನೂ ಮನನ ಮಾಡುವ ಅಥವಾ ಅರಿತುಕೊಳ್ಳುವ ಸ್ವಭಾವದವನು. ಉನ್ಮನನೆಂದರೆ ಉತ್ಕೃಷ್ಟವಾಗಿರುವ ಮನನವುಳ್ಳವನೆಂದರ್ಥ.

ಎಲ್ಲವನ್ನೂ ಅರಿತಿರುವವನನ್ನು ಸರ್ವಜ್ಞನೆನ್ನುವರು. ಪ್ರತಿಯೊಂದನ್ನೂ ವಿಶೇಷವಾಗಿ ಅಸಾಧಾರಣವಾಗಿ ಬಲ್ಲವನನ್ನು ಸರ್ವವಿತ್–ಎನ್ನುವರು. ಜಗತ್ತಿನಲ್ಲಿರುವವರು ಯಾರೂ ಸರ್ವಜ್ಞರಲ್ಲ . ಸರ್ವವಿದರೂ ಅಲ್ಲ . ಆದರೆ ಪರಮೇಶ್ವರನು ಸರ್ವಜ್ಞನೂ ಸರ್ವವಿದನೂ ಆಗಿದ್ದು ಮನೋನ್ಮನನೆನಿಸಿರುವನು. ಇಂಥ ವಾಮದೇವನು ಉತ್ತರಮುಖನಾಗಿರುವನು. ಉತ್ತರಮುಖವನ್ನು ಕುರಿತ ಪೌರಾಣಿಕ ಸ್ತುತಿಯು ಹೀಗಿದೆ:

**ಗೌರಂ ಕುಂಕುಮಪಂಕಿಲಂ ಸುತಿಲಕಂ ವ್ಯಾಪಾಂಡು ಗಂಡಸ್ಥಲಂ**
**ಭ್ರೂವಿಕ್ಷೇಪಕಟಾಕ್ಷವೀಕ್ಷಣಲಸತ್ ಸಂಸಕ್ತಕರ್ಣೋತ್ಪಲಮ್ ।**
**ಸ್ನಿಗ್ಧಂ ಬಿಂಬಿಫಲಾಧರಪ್ರಹಸಿತಂ ನೀಲಾಲಕಾಲಂಕೃತಂ ವಂದೇ**
**ಪೂರ್ಣಶಶಾಂಕಮಂಡಲನಿಭಂ ವಕ್ತ್ರಂ ಹರಸ್ಯೋತ್ತರಮ್ ॥**

ಪರಮೇಶ್ವರನ ಉತ್ತರಮುಖವು ಹಳದಿಮಿಶ್ರಿತವಾದ ಬಿಳುಪು ವರ್ಣದಿಂದ ಕೂಡಿದೆ. ಕುಂಕುಮದಿಂದ ಅಲಂಕೃತವಾಗಿದೆ (ಸವರಲ್ಪಟ್ಟಿದೆ). ಕಪೋಲಗಳು ಮಾತ್ರ ಬಿಳುಪಾಗಿವೆ. ಹುಬ್ಬುಗಳನ್ನು ಅಳ್ಳಾಡಿಸುತ್ತಾ ನೋಡುತ್ತಿರುವದರಿಂದ ಕಿವಿಯ ಮೇಲೆ ಧರಿಸಿರುವ ನೈದಿಲೆಯು ಹೊಳೆಯುತ್ತಿದೆ. ಸ್ನೇಹಪೂರ್ಣವಾದ ಮುಖಭಾಗವೂ ತೊಂಡೆಯಹಣ್ಣಿನಂತಿರುವ ತುಟಿಗಳನ್ನು ಅಳ್ಳಾಡಿಸುತ್ತಾ ಸೂಚಿಸುವ ನಗೆಯೂ ಕಪ್ಪಾದ ಮುಂಗುರುಳುಗಳೂ ಮುಖಕ್ಕೆ ಶೋಭೆಯನ್ನುಂಟು ಮಾಡುತ್ತಿವೆ. ಇಂಥ ಪೂರ್ಣಚಂದ್ರ ಮಂಡಲದಂತೆ ಕಾಂತಿಯುಕ್ತವಾದ ಹರನ ಉತ್ತರಮುಖವನ್ನು ನಮಸ್ಕರಿಸುವೆನು–ಎಂದಭಿಪ್ರಾಯ.

ಈಗ ದಕ್ಷಿಣಮುಖಪ್ರತಿಪಾದಕವಾದ ಮಂತ್ರವನ್ನು ವಿಚಾರಮಾಡೋಣ.

**ಓಂ ॥ ಅಘೋರೇಭ್ಯೋಽಥ ಘೋರೇಭ್ಯೋ ಘೋರಘೋರತರೇಭ್ಯಃ ।**
**ಸರ್ವೇಭ್ಯಃ ಸರ್ವ ಶರ್ವೇಭ್ಯೋ ನಮಸ್ತೇ ಅಸ್ತು ರುದ್ರರೂಪೇಭ್ಯಃ ॥**

ಪರಮೇಶ್ವರನಿಗೆ ಘೋರ ಮತ್ತು ಅಘೋರ–ಎಂಬ ಎರಡು ರೂಪಗಳಿವೆ. ಘೋರದಲ್ಲಿಯೇ ಘೋರತರವಾದದ್ದೂ ಸೇರಿದೆ. ಜಗತ್ತಿನಲ್ಲಿರುವ ತಾಮಸವೃತ್ತಿಯ ದುಷ್ಟರನ್ನು ದಮನಮಾಡುವದಕ್ಕಾಗಿ ಪರಮೇಶ್ವರನು ಕೆಲವು ವೇಳೆ ಘೋರ ರೂಪಗಳನ್ನು ಸ್ವೀಕರಿಸುವನು. ಇವು ಕೂಡ ಸ್ತುತ್ಯವಾಗಿರುತ್ತವೆ. ಆದರೆ ಸಾತ್ವಿಕರಿಗೆ ಇಂಥ ಘೋರರೂಪಗಳು ರುಚಿಸಲಾರವಾದರೂ ರಾಜಸ–ತಾಮಸ ಮನೋಭಾವದವರಿಗೆ ಇವು ಕೂಡ ಪ್ರಿಯವಾಗಿದ್ದು ಪೂಜ್ಯವಾಗಿರುತ್ತವೆ. ಜ್ಞಾನಿಗಳ

ದೃಷ್ಟಿಯಿಂದ ಎಲ್ಲಾ ರೂಪಗಳೂ ಆಕಾರಗಳೂ ಪರಮೇಶ್ವರನೇ ಆಗಿದ್ದು ವೇದಮಾತೆಯು ಇಲ್ಲಿ ಎಲ್ಲಾ ರೀತಿಯ ರೂಪಗಳಿಗೂ ನಮಸ್ಕಾರವೆಂದು ಸ್ತುತಿಸಿರುತ್ತಾಳೆ. ಆದರೆ ಮಂದ–ಮಧ್ಯಮಾಧಿಕಾರಿಗಳಾದವರು ತಾಮಸ–ರಾಜಸರೂಪಗಳಿಂದ ಕ್ರಮವಾಗಿ ಸಾತ್ತ್ವಿಕರೂಪೋಪಾಸನೆ ಯನ್ನವಲಂಬಿಸಿ ಕಡೆಯಲ್ಲಿ ಸರ್ವಾತ್ಮಕನಾದ ರುದ್ರನನ್ನು ಚಿಂತಿಸಬೇಕು. ಹೀಗೆ ಸರ್ವರೀತಿಯಾದ ಭಗವಂತನ ರೂಪಗಳಿಗೂ ವಂದನೆಗಳನ್ನು ಅರ್ಪಿಸಲಾಗಿದೆ. ಶರ್ವೇಭ್ಯಃ ಎಂದರೆ ಪಾಪಿಗಳನ್ನು ಹಿಂಸಿಸುವ ಹಾಗೂ ಪ್ರಲಯಕಾಲದಲ್ಲಿ ಜಗತ್ತನ್ನೇ ನುಂಗುವ ಪರಮೇಶ್ವರ ರೌದ್ರರೂಪಗಳು–ಎಂದರ್ಥ. ಇವೆಲ್ಲಕ್ಕೂ ನಮಸ್ಕಾರಗಳು– ಎಂದಭಿಪ್ರಾಯ. ದಕ್ಷಿಣಮುಖವನ್ನು ಕುರಿತ ಸ್ತುತಿಯು ಹೀಗಿದೆ:

ಕಾ ಲಾಭ್ರಭ್ರಮರಾಂಜನದ್ಯುತಿನಿಭಂ ವ್ಯಾವೃತ್ತಪಿಂಗೇಕ್ಷಣಂ
ಕರ್ಣೋದ್ಭಾಸಿತಭೋಗಿಮಸ್ತಕಮಣಿಪ್ರೋದ್ಭಿನ್ನದಂಷ್ಟ್ರಾಂಕುರಮ್।
ಸರ್ಪಪ್ರೋತಕಪಾಲಶುಕ್ತಿಶಕಲವ್ಯಾಕೀರ್ಣಸಂಚಾರಗಂ ವಂದೇ
ದಕ್ಷಿಣಮೀಶ್ವರಸ್ಯ ಕುಟಿಲಭ್ರೂಭಂಗರೌದ್ರಂ ಮುಖಮ್ ॥

''ಪರಮೇಶ್ವರನ ದಕ್ಷಿಣಮುಖವು ರೌದ್ರವಾಗಿರುವದು. ಆತನ ಹುಬ್ಬುಗಳ ಕೋಪದಿಂದ ವಕ್ರವಾಗಿರುವವು. ಮುಖದ ಕಾಂತಿಯು ಅಂಜನಪರ್ವದಂತೆ ಕಪ್ಪಾದ, ಪ್ರಲಯಕಾಲದಲ್ಲಿ ತೋರಿಕೊಳ್ಳುವ ಮೋಡಗಳಿಗೆ ಸಮಾನವಾಗಿರುವದು. ಕಣ್ಣುಗಳೆರಡೂ ತೆರೆದುಕೊಂಡು ಕೆಂಪಾಗಿರುವವು. ಕಿವಿಯಲ್ಲಿ ಧರಿಸಿರುವ ನಾಗಕುಂಡಲಗಳಲ್ಲಿ ಹೊಳೆಯುತ್ತಿರುವ ಶಿರೋಮಣಿಗಳ ಕಾಂತಿಯಿಂದ ದವಡೆಯ ಹಲ್ಲುಗಳು ಕೆಂಪಾಗಿದ್ದು ಚಿಗುರಿನಂತೆ ಹೊರಕ್ಕೆ ಚಾಚಲ್ಪಟ್ಟಿರುವವು. ಕಪೋಲ ಸ್ಥಲವು– ಅದರ ಮೇಲೆ ಹಾವು ಹರಿದಾಡುತ್ತಿದ್ದು ಅಲ್ಲಲ್ಲಿ ಮಾತ್ರ ಚದುರಿದಂತೆ ಕಪ್ಪೆಯಚಿಪ್ಪಿನ ತುಂಡಿನಂತೆ ಬಿಳುಪಾಗಿದ್ದುಕೊಂಡಿರುವದು. ಇಂಥ ದಕ್ಷಿಣ ಮುಖವನ್ನು ನಾನು ನಮಸ್ಕರಿಸುವೆನು'' ಎಂದಭಿಪ್ರಾಯ.

ಈಗ ಪೂರ್ವಮುಖಪ್ರತಿಪಾದಕವಾದ ಮಂತ್ರವನ್ನು ವಿಚಾರಮಾಡೋಣ.

ಓಂ ॥ ತತ್ಪುರುಷಾಯ ವಿದ್ಮಹೇ ಮಹಾದೇವಾಯ ಧೀಮಹಿ ।
ತನ್ನೋ ರುದ್ರಃ ಪ್ರಚೋದಯಾತ್ ॥

ಈ ಮಂತ್ರವನ್ನು ರುದ್ರಗಾಯತ್ರೀ–ಎಂದು ಕರೆಯುತ್ತಾರೆ. ಗಾಯತ್ರೀ ಮಂತ್ರಗಳಲ್ಲೆಲ್ಲ 'ಪ್ರಚೋದಯಾತ್' ಎಂಬ ಕ್ರಿಯಾಪದವಿರುತ್ತದೆ. ಪರಮೇಶ್ವರನಾದ

ರುದ್ರನು ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಿಸಲಿ–ಎಂದು ಇಲ್ಲಿ ಪ್ರಾರ್ಥಿಸಿದೆ. ಮನುಷ್ಯನಿಗೆ ಬುದ್ಧಿಯೇ ಬಂಡವಾಳವು. ಅದೊಂದಿದ್ದರೆ ಹಾಗೂ ಅದು ಸಮಯಕ್ಕೆ ತಕ್ಕಂತೆ ಸನ್ನಿವೇಶಾನುಗುಣವಾಗಿ ಓಡುತ್ತಿದ್ದರೆ ಎಂಥ ಕಾರ್ಯಸಾಧನೆಯನ್ನಾದರೂ ಮಾಡಬಹುದು. ಅದನ್ನು ಪ್ರೇರಿಸುವವನೇ ಪರಮೇಶ್ವರನು. ಆದರೂ ಕೆಲವು ಜನರು ಪರಮೇಶ್ವರನನ್ನೇ ಮರೆತು ತಮ್ಮ ಸ್ವಬುದ್ಧಿಯಿಂದ ಎಲ್ಲವನ್ನೂ ಸಾಧಿಸುತ್ತೇವೆಂದೇ ಹೊರಡುವರು. ಇದರಿಂದ ಅಹಂಕಾರಾವಿಷ್ಟರಾಗಿ ಆಸುರೀಸಂಪತ್ತಿಗೆ ವಶರಾಗಿಬಿಡುವರು. ಆಗಲೂ ಅವರಿಗೂ ಈಶ್ವರಾನುಗ್ರಹವು ಸಿದ್ಧವಾಗಿರುವದಾದರೂ ಅದರ ಅರಿವಿಲ್ಲದೆ ತೊಳಲುತ್ತಾ ದುಃಖಿಗಳಾಗಿ ಬಾಳುವರು. ಹಾಗಾಗದಂತೆ ನಾವು ನಡೆಯಬೇಕಾದರೆ ಈ **ಧೀಪ್ರಚೋದನಮಂತ್ರ**ದಿಂದ ಪರಮೇಶ್ವರನನ್ನು ನಿತ್ಯವೂ ಆರಾಧಿಸಬೇಕು. ಸದ್ಬುದ್ಧಿಯನ್ನು ಕೊಡುವಂತೆ ಬೇಡಿಕೊಳ್ಳಬೇಕು. ಈ ಮಂತ್ರದಲ್ಲಿ 'ನಮ್ಮೆಲ್ಲರಿಗೂ ರುದ್ರನು ಸದ್ಬುದ್ಧಿಯನ್ನು ನೀಡಲಿ'–ಎಂದೇ ಬಹುವಚನ ಪ್ರಯೋಗ ಮಾಡಿದೆ. ಆದ್ದರಿಂದ ಯಾರು ಈ ಮಂತ್ರವನ್ನು ತಮ್ಮ ಅನುಷ್ಠಾನಕಾಲಕ್ಕೆ ಬಳಸುವರೋ ಅವರು ಲೋಕಕಲ್ಯಾಣವನ್ನೇ ಕೋರಿದವರಾಗುತ್ತಾರೆ. ಈ ಔದಾರ್ಯವು ಹೆಚ್ಚಿನದೇ ಸರಿ. ಋಷಿಗಳು ಇಂಥ ಉಚ್ಚಮಾನವರಾಗಿ ಬಾಳಿದರು. ಅವರ ಆದರ್ಶವನ್ನು ನಾವೂ ಅನುಸರಿಸಬೇಕು. ಪ್ರಕೃತ–ಪರಮೇಶ್ವರನನ್ನು ಈ ಮಂತ್ರದಲ್ಲಿ **ತತ್ಪುರುಷ**ನೆಂದು ಕರೆಯಲಾಗಿದೆ. **ತತ್** ಎಂಬಿದು ಸರ್ವನಾಮವು. ಸರ್ವವೂ ಬ್ರಹ್ಮವೇ. ಆದ್ದರಿಂದ ಎಲ್ಲವೂ ಪರಮೇಶ್ವರನೇ–ಎಂಬರ್ಥವು ಹೊರಡುತ್ತದೆ. ಇನ್ನು ಪುರುಷನೆಂದರೆ ಪುರಗಳಲ್ಲೆಲ್ಲ–ಶರೀರಗಳಲ್ಲೆಲ್ಲ ತುಂಬಿರುವವನು–**ಪೂರ್ಣನು** ಎಂದರ್ಥ. ಎಂದೆಂದೂ ಇದ್ದುಕೊಂಡಿರುವವನೂ ಪರಿಪೂರ್ಣನೂ ಮಹಾದೇವನೂ ಆದ ಭಗವಂತನನ್ನು ನಾವು **'ವಿದ್ಮಹೇ'** ಎಂದರೆ ಬಲ್ಲವರಾಗಿದ್ದೇವೆ–ಎಂದರ್ಥ. ನಾವು ನಾವೇ ಇಂಥ ಪುರುಷನನ್ನು ತಿಳಿಯಲು ಸಾಧ್ಯವಿಲ್ಲವಾದ್ದರಿಂದ ಶಾಸ್ತ್ರ– ಆಚಾರ್ಯೋಪದೇಶ ಗಳಿಂದ ಬಲ್ಲವರಾಗಿರುವೆವು–ಎಂದು ಅರ್ಥಮಾಡಿಕೊಳ್ಳಬೇಕು. ಅನಂತರ ಪರಮೇಶ್ವರನ ವಿಚಾರವನ್ನು ಕೇವಲ ತಿಳಿದರೆ ಸಾಲದು. **'ಧೀಮಹಿ'** ಧ್ಯಾನ ಮಾಡುವೆವು–ಎಂದು ತಿಳಿಸಿರುವಂತೆ ಎಡಬಿಡದೆ ಚಿಂತಿಸಲೂ ಬೇಕು. ಇದು ಉಪಾಸನೆಯೆನಿಸುವದು. ಆಗ ಭಗವಂತನು ನಮ್ಮ ಬುದ್ಧಿವೃತ್ತಿಗಳನ್ನು ಸರಿಯಾದ ಶ್ರೇಯೋಮಾರ್ಗದಲ್ಲಿ ಪ್ರೇರಿಸುವ ಮೂಲಕ ನಮಗೆ ಇಹಪರಸೌಖ್ಯಗಳನ್ನು ನೀಡುವನು. ಇಂಥ ತತ್ಪುರುಷನಾದ ಮಹಾದೇವನ ಪೂರ್ವಮುಖವನ್ನು ಪುರಾಣಗಳಲ್ಲಿ ವರ್ಣಿಸಿರುವದನ್ನು ಕೇಳಿರಿ:

ಸಂವರ್ತಾಗ್ನಿ ತಟಿತ್ಪ್ರದೀಪ್ತ ಕನಕಪ್ರಸ್ಪರ್ಧಿ ತೇಜೋಮಯಂ
ಗಂಭೀರಧ್ವನಿಮಿಶ್ರಿತೋಗ್ರದಹನಪ್ರೋದ್ಭಾಸಿ ತಾಮ್ರಾಧರಮ್ ।
ಅರ್ಧೇಂದುದ್ಯುತಿಲೋಲ ಪಿಂಗಳಜಟಾಭಾರಪ್ರಬದ್ಧೋರಗಂ
ವಂದೇ ಸಿದ್ಧಸುರಾಸುರೇಂದ್ರನಮಿತಂ ಪೂರ್ವಂ ಮುಖಂಶೂಲಿನಃ ॥

'ಸಂವರ್ತವೆಂಬ ಪ್ರಲಯಕಾಲಗ್ನಿಯ ಹೊಳಪನ್ನು ಪಡೆದ, ಪುಟಕ್ಕೆ ಇಟ್ಟಿರುವ ಚೊಕ್ಕ ಚಿನ್ನದ ಕಾಂತಿಯನ್ನು ಮೀರಿದಂಥ ತೇಜೋಮಯವಾದ, ಗಂಭೀರವಾದ ಕಂಠಧ್ವನಿಯೊಡಗೂಡಿದ ಹಾಗೂ ಹೊಳೆಯುತ್ತಿರುವ ತೀವ್ರವಾದ ಬೆಂಕಿಯಂತೆ ಕೆಂಪಾದ ತುಟಿಗಳುಳ್ಳ, ಮತ್ತು ಅರ್ಧಚಂದ್ರನ ಕಾಂತಿಯಿಂದ ಕೂಡಿದ್ದು ಹಳದಿಯಾದ, ಹಾವುಗಳಿಂದ ಕಟ್ಟಲ್ಪಟ್ಟ ಜಟಾಜೂಟವುಳ್ಳದ್ದಾದ, ಸಿದ್ಧರಿಂದಲೂ ದೇವದಾನವರಿಂದಲೂ ನಮಸ್ಕರಿಸಲ್ಪಡುತ್ತಿರುವ ಪರಮೇಶ್ವರನ ಪೂರ್ವಮುಖವನ್ನು ವಂದಿಸುವೆನು'–ಎಂದರ್ಥ.

ಈಗ ಊರ್ಧ್ವಮುಖದ ಸ್ತುತಿಯನ್ನು ವಿಚಾರಮಾಡೋಣಃ

ಓಂ ॥ ಈಶಾನಃ ಸರ್ವವಿದ್ಯಾನಾಮೀಶ್ವರಃ ಸರ್ವಭೂತಾನಾಂ
ಬ್ರಹ್ಮಾಧಿಪತಿರ್ಬ್ರಹ್ಮಣೋಽಧಿಪತಿರ್ಬ್ರಹ್ಮಾ ಶಿವೋ ಮೇ
ಅಸ್ತು ಸದಾ ಶಿವೋಮ್ ॥

ಪರಮೇಶ್ವರನು ಸಕಲ ವಿದ್ಯೆಗಳಿಗೂ ಒಡೆಯನು. ಅವನು ಸರ್ವಜ್ಞನು. ವೇದಗಳೆಲ್ಲವೂ ಸೃಷ್ಟಿಕಾಲದಲ್ಲಿ ಆತನ ಉಸಿರಾಟದಂತೆ ನಿರರ್ಗಲವಾಗಿ ಹೊರ ಬಂದಿರುವವು. ವೇದಗಳಲ್ಲಿ ಜಗತ್ತಿನ ಎಲ್ಲಾ ವೈದಿಕಲೌಕಿಕವಿದ್ಯೆಗಳೂ ಅಡಕವಾಗಿವೆ. ವೇದಗಳನ್ನು ಉಪಲಕ್ಷಣವಾಗಿ ಭಾವಿಸಿದರೆ ಉಳಿದ ಸ್ಮೃತೀತಿಹಾಸ ಪುರಾಣಾದಿ ಸಕಲ ವಾಙ್ಮಯವೂ ಭೌತಿಕವಿಜ್ಞಾನ–ಗಣಿತ–ಖಗೋಲಾದಿ ಸಕಲ ಶಾಸ್ತ್ರಗಳು ಸೇರಿದಂತೆ ಎಲ್ಲಾ ವಾಙ್ಮಯವೂ ಪರಮೇಶ್ವರನಿಂದಲೇ ಹೊರ ಬಂದಿರುವಲ್ಲಿ ಅವನ ಸರ್ವಜ್ಞತ್ವವನ್ನು ವರ್ಣಿಸುವದಾದರೂ ಹೇಗೆ? ಇಂಥ ಸರ್ವವಿದ್ಯಾಧಿಪತಿಯಾದ ಭಗವಂತನು ಈಶಾನನೆನಿಸಿರುವನು. ಹಾಗೆಯೇ ಎಲ್ಲಾ ಪ್ರಾಣಿಗಳಿಗೂ ಒಡೆಯನೂ ಆಗಿರುವನು. ಆದ್ದರಿಂದ ಈಶ್ವರನೆನಿಸಿರುವನು. ನಶ್ವರವಾದ ಪ್ರಪಂಚದಲ್ಲಿ ಈಶ್ವರನೊಬ್ಬನೇ ಶಾಶ್ವತನು. ಅವ್ಯಯನು. ಆತನು ಪ್ರಲಯಕ್ಕೂ ಸಾಕ್ಷಿಯಾಗಿದ್ದು ಕೊಂಡಿರುವದರಿಂದ ಅವಿನಾಶಿಯು. ಉಳಿದ ಭೂತಗಳೆಲ್ಲವೂ ವಿನಾಶವುಳ್ಳವುಗಳು.

ಹೀಗೆ ಸರ್ವಭೂತಪಾಲಕನಾಗಿರುವ ಆತನು ಬ್ರಹ್ಮಾಧಿಪತಿಯು. ಇಲ್ಲಿ ಬ್ರಹ್ಮವೆಂದರೆ ವೇದವೆಂದರ್ಥ. ವೇದಗಳೊಡೆಯನೆನಿಸಿದ ಆತನು ಹಿರಣ್ಯಗರ್ಭಬ್ರಹ್ಮನಿಗೂ ಅಧಿಪತಿಯಾಗಿರುವನು. ಇವನನ್ನು ಬ್ರಹ್ಮವೆನ್ನುವರು. ಇಂಥ ಪರಮಾತ್ಮನು ಸದಾಕಾಲವು ನನಗೆ ಶಿವನಾಗಲಿ–ಎಂದರೆ ಮಂಗಳಕರನಾಗಲಿ–ಎಂದರ್ಥ. ಇಂಥ ಸದಾಶಿವನೇ ನಾನಾಗಿರುವೆನು ಎಂದು ಓಂ ಎಂಬ ಮಾತಿನಿಂದ ತಿಳಿಸಿದೆ. ಈಶಾನನಾಮಕವಾದ ಪರಮೇಶ್ವರನ ಊರ್ಧ್ವಮುಖವನ್ನು ಹೀಗೆ ವರ್ಣಿಸಲಾಗಿದೆ.

**ವ್ಯಕ್ತಾ ವ್ಯಕ್ತ ಗುಣೇತರಂ ಸುವಿಮಲಂ ಷಟ್‌ತ್ರಿಂಶತತ್ತ್ವಾತ್ಮಕಂ**
**ತಸ್ಮಾದುತ್ತರತತ್ತ್ವಮಕ್ಷರಮಿತಿ ಧ್ಯೇಯಂ ಸದಾ ಯೋಗಿಭಿಃ ।**
**ವಂದೇ ತಾಮಸವರ್ಜಿತಂ ತ್ರಿನಯನಂ ಸೂಕ್ಷ್ಮಾತಿಸೂಕ್ಷ್ಮಾತ್ ಪರಂ ಶಾಂತಂ**
**ಪಂಚಮಮೀಶ್ವರಸ್ಯ ವದನಂ ಖವ್ಯಾಪಿ ತೇಜೋಮಯಮ್ ॥**

''ವ್ಯಕ್ತನೂ ಅವ್ಯಕ್ತನೂ ಅಲ್ಲದ ಗುಣಾತೀತನಾದ, ನಿರ್ಮಲನಾದ, ಮೂವತ್ತಾರು ತತ್ತ್ವಗಳ ರೂಪನಾದ, ಆದರೆ ಆ ಸಂಖ್ಯೆಯನ್ನೂ ದಾಟಿದ, ಉತ್ತರವೂ ಅಕ್ಷರವೂ ಆದ ತತ್ತ್ವವೆಂದು ಯೋಗಿಗಳು ಧ್ಯಾನಿಸುತ್ತಿರುವ, ತಮೋಗುಣರಹಿತನೂ, ಮುಕ್ಕಣ್ಣನೂ ಸೂಕ್ಷ್ಮಾತಿಸೂಕ್ಷ್ಮನೂ ಪರಮನೂ ಶಾಂತನೂ ಆದ ಪರಮೇಶ್ವರನ ಐದನೆಯ ಮುಖವನ್ನು ನಾನು ನಮಸ್ಕರಿಸುವೆನು''–ಎಂದಭಿಪ್ರಾಯ.

ಈಗ ಪರಮೇಶ್ವರನ ಸ್ತುತಿರೂಪವಾದ ಮಂತ್ರವನ್ನು ವಿವರಿಸಲಾಗುವದು.

**ಓಂ ॥ ನಮೋ ಹಿರಣ್ಯಬಾಹವೇ ಹಿರಣ್ಯವರ್ಣಾಯ ಹಿರಣ್ಯರೂಪಾಯ**
**ಹಿರಣ್ಯಪತಯೇಽಂಬಿಕಾಪತಯ ಉಮಾಪತಯೇ**
**ಪಶುಪತಯೇ ನಮೋ ನಮಃ ॥**

ಇಲ್ಲಿ ಭಗವಂತನನ್ನು ಹಿರಣ್ಯಬಾಹುವೆಂದೂ ಹಿರಣ್ಯವರ್ಣನೆಂದೂ ಹಿರಣ್ಯರೂಪನೆಂದೂ ಕರೆಯಲಾಗಿದೆ. ಹಿರಣ್ಯನೆಂದರೆ ಚಿನ್ನವು. ಚಿನ್ನದಂತೆ ಹೊಂಬಣ್ಣವುಳ್ಳವನೂ ರೂಪವುಳ್ಳವನೂ ಆದ ಶಿವನು–ಎಂದರ್ಥ. ಹಾಗೆಯೇ ಹಿರಣ್ಯಕ್ಕೆ ಒಡೆಯನೂ ಅವನೇ. ಏಕೆಂದರೆ ಆ ಪರಮೇಶ್ವರನ ವೀರ್ಯದಿಂದಲೇ ಚಿನ್ನವು ಉತ್ಪತ್ತಿಯಾಗಿರುತ್ತದೆ. ಭಗವಂತನ ದಯೆಯಿದ್ದರೆ ಮಾತ್ರ ನಾವು ಚಿನ್ನವನ್ನು ಸಂಪಾದಿಸಿ ಧರಿಸಬಲ್ಲೆವು. ಚಿನ್ನವು ಬಹು ಬೆಲೆಬಾಳುವ ಲೋಹವೆಂದೂ ಮಂಗಳಸ್ವರೂಪವೆಂದೂ ಎಲ್ಲರಿಗೂ ತಿಳಿದಿದೆ. ಆದ್ದರಿಂದಲೇ ಸ್ತ್ರೀಯರ ಮಾಂಗಲ್ಯ

ಸೂತ್ರವನ್ನು ಚಿನ್ನದಿಂದ ಮಾಡುವರು. ಸ್ತ್ರೀದೇವತೆಗಳಿಗೂ ಸ್ತ್ರೀಯರಿಗೂ ಚಿನ್ನದ ಭೂಷಣಗಳು ಹೆಚ್ಚು ಇಷ್ಟವಾಗಿರುತ್ತವೆ. ಮತ್ತು ಲೋಹಗಳಲ್ಲೆಲ್ಲ ಚಿನ್ನಕ್ಕೆ ಹೆಚ್ಚಿನ ಗೌರವಸ್ಥಾನವಿದೆ. ದಕ್ಷಿಣೆಯನ್ನು ಕೊಡುವಾಗ ಚಿನ್ನದ ನಾಣ್ಯಗಳನ್ನೇ ಕೊಡಬೇಕೆಂತ ಶಾಸ್ತ್ರವು ತಿಳಿಸುತ್ತದೆ. ಆದ್ದರಿಂದ ಪರಮೇಶ್ವರನ ವಿಭೂತಿರೂಪವಾದ ಚಿನ್ನವು ಮಹಾದೇವನ ಪೂಜೆಗೆ ಯೋಗ್ಯವಸ್ತುವಾಗಿದೆ. ಚಿನ್ನದ ಲಿಂಗವನ್ನೇ ಸಿದ್ಧಗೊಳಿಸಿ ಪೂಜಿಸಿದರಂತೂ ಅತ್ಯಂತ ಶ್ರೇಷ್ಠವೇ ಆದೀತು. ಹೀಗೆ ಮಹಾದೇವನು ಚಿನ್ನದಂತೆ ಹೊಳೆಯುವ ತೋಳುಗಳುಳ್ಳವನೂ, ಕಾಂತಿಯುಳ್ಳವನೂ, ಆಕಾರವುಳ್ಳವನೂ ಚಿನ್ನಕ್ಕೆ ಒಡೆಯನೂ ಆಗಿದ್ದು ಅಂಬಿಕಾಪತಿಯೂ ಉಮಾಪತಿಯೂ ಆಗಿರುತ್ತಾನೆ. ಅಂಬಿಕೆ–ಎಂದರೆ ಪಾರ್ವತಿಯು. ಉಮಾ ಎಂದರೆ ಆಕೆಯೇ, ಅವಳ ಪತಿಯು ಪರಮೇಶ್ವರನು–ಎಂದಭಿಪ್ರಾಯ. ಇನ್ನು ಪಶುಪತಿಯೆಂದರೆ: ಬ್ರಹ್ಮನಿಂದ ಹಿಡಿದು ಒಂದು ಹುಳುವಿನ ವರೆಗಿನ ಜೀವರೆಲ್ಲರೂ ಪಶುಗಳೇ. ಅವರುಗಳಿಗೆಲ್ಲ ಒಡೆಯನಾದವನೇ ಪಶುಪತಿಯು–ಎಂದರ್ಥ. ಹಿರಣ್ಯವರ್ಣಾಯ–ಎಂಬುದಕ್ಕೆ ಭಾಷ್ಯಕಾರರು ಹೀಗೂ ಅರ್ಥಮಾಡಿದ್ದಾರೆ. ಹೇಗೆ ದರಿದ್ರರಿಗೆ ಚಿನ್ನವು ದುರ್ಲಭವೋ ಹಾಗೆ ಮನುಷ್ಯರಿಗೆ ಗುರುಕುಲ ವಾಸದಲ್ಲಿದ್ದು ಗುರುಮುಖದಿಂದ ವೇದಾಕ್ಷರ(ವರ್ಣ) ಗಳನ್ನು ಕಲಿಯುವದು ದುರ್ಲಭವು. **ವೇದವೇ ಶಿವನು, ಶಿವನೇ ವೇದವು.** ಆದ್ದರಿಂದ ಹಿರಣ್ಯವರ್ಣನೆಂದು ಭಗವಂತನನ್ನು ಸ್ತುತಿಸಲಾಗಿದೆ–ಎಂದು ವಿವರಿಸಿದ್ದಾರೆ. ಇಂಥ ಭಗವಂತನಿಗೆ ಮತ್ತೆ ಮತ್ತೆ ನಮಸ್ಕಾರಗಳು–ಎಂದಭಿಪ್ರಾಯ.

**ಓಂ । ಋತಗ್ಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣಪಿಂಗಲಮ್।
ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈ
ನಮೋ ನಮಃ ॥**

ಈ ಮಂತ್ರದಲ್ಲಿ ಪರಮೇಶ್ವರನನ್ನು ಪರಬ್ರಹ್ಮನೆಂದೇ ಸ್ತುತಿಸಲಾಗಿದೆ. ಆ ದೇವನು **ಋತವಾದ ಸತ್ಯನು**–ಎಂದರೆ ಪಾರಮಾರ್ಥಿಕಸತ್ಯನೆಂದರ್ಥ. ಸತ್ಯದಲ್ಲಿ ವ್ಯಾವಹಾರಿಕಸತ್ಯ, ಪಾರಮಾರ್ಥಿಕಸತ್ಯ–ಎಂದು ವಿಭಾಗವುಂಟು. ಭೂಮಿ ಮುಂತಾದವು ವ್ಯಾವಹಾರಿಕಸತ್ಯವಸ್ತುಗಳು. ಏಕೆಂದರೆ ಭೂಮಿಯನ್ನು ಎಲ್ಲರೂ ಭೂಮಿಯೆಂದೇ ಕರೆಯುತ್ತಾರೆ. ಆದರೆ ಪ್ರಲಯಕಾಲದಲ್ಲಿ ನೀರಿನಲ್ಲಿ ಲಯವಾಗಿ ಬಿಡುವದರಿಂದ ಪರಮಸತ್ಯವಲ್ಲ. ಪರಮೇಶ್ವರನಾದರೊ, ನಿತ್ಯಸತ್ಯನು. ಆದ್ದರಿಂದ ಋತಸತ್ಯನೆಂದಿದೆ. ಈ ಪರಬ್ರಹ್ಮವೇ ಭಕ್ತಾನುಗ್ರಹಾರ್ಥವಾಗಿ ಪುರುಷರೂಪದಿಂದ ತೋರಿಕೊಂಡಿದೆ. ಮತ್ತು

ಕೃಷ್ಣಪಿಂಗಳನೆಂದರೆ: ಅರ್ಧನಾರೀಶ್ವರಮೂರ್ತಿಯಾದ ದೇವನು ಬಲಭಾಗದಲ್ಲಿ ಕೃಷ್ಣವರ್ಣನಾಗಿಯೂ ವಾಮಭಾಗದಲ್ಲಿ ಪಿಂಗಳ (ಹಳದಿ) ವರ್ಣನಾಗಿಯೂ ತೋರಿಕೊಂಡದ್ದರಿಂದ ಕೃಷ್ಣಪಿಂಗಳನೆಂದು ಕರೆಯಲಾಯಿತು. ಇನ್ನು ಈ ಮಹಾ ಮಹಿಮನು ತನ್ನ ಯೋಗಬಲದಿಂದ ತನ್ನ ರೇತಸ್ಸನ್ನು ಬ್ರಹ್ಮರಂಧ್ರದಲ್ಲಿ ಊರ್ಧ್ವಮುಖ ವಾಗಿ ಧರಿಸಿ ಊರ್ಧ್ವರೇತನೆಂದೂ ಪ್ರಸಿದ್ಧನಾದನು. ಹಾಗೆಯೇ ಮೂರು ಕಣ್ಣುಗಳುಳ್ಳವನಾದ್ದರಿಂದ ವಿರೂಪಾಕ್ಷನೆನಿಸಿದನು. ಇಂಥ ಭಗವಂತನು ವಿಶ್ವರೂಪನೂ ಆಗಿರುವನು. ಜಗತ್ಕಾರಣನಾಗಿರುವ ಮೂಲಕ ತಾನೇ ಜಗತ್ತೆಲ್ಲವೂ ಆಗಿದ್ದುಕೊಂಡು ಸರ್ವವೂ ಆಗಿ ವಿರಾಜಿಸುತ್ತಿರುವನು. ಇಂಥ ಮಹಾದೇವನಿಗೆ ನಮಸ್ಕಾರಗಳು– ಎಂದಭಿಪ್ರಾಯ.

ಓಂ ॥ ಸರ್ವೋ ವೈ ರುದ್ರಸ್ತಸ್ಮೈ ರುದ್ರಾಯ ನಮೋ ಅಸ್ತು ।
ಪುರುಷೋ ವೈ ರುದ್ರ ಸನ್ ಮಹೋ ನಮೋ ನಮಃ ॥
ವಿಶ್ವಂ ಭೂತಂ ಭುವನಂ ಚಿತ್ರಂ ಬಹುಧಾ ಜಾತಂ ಜಾಯ
ಮಾನಂ ಚ ಯತ್ । ಸರ್ವೋ ಹ್ಯೇಷ ರುದ್ರಸ್ತಸ್ಮೈ
ರುದ್ರಾಯ ನಮೋ ಅಸ್ತು ॥

ಈ ಮಂತ್ರದಲ್ಲಿಯೂ ಸರ್ವಾತ್ಮಕನಾದ ರುದ್ರನನ್ನು ನಮಸ್ಕರಿಸಲಾಗಿದೆ. ಪಾರ್ವತೀಪತಿಯೆಂದು ಹಿಂದಿನ ಮಂತ್ರಗಳಲ್ಲಿ ರುದ್ರನನ್ನು ಸ್ತುತಿಸಲಾಗಿದೆಯಷ್ಟೆ ! ಪುರಾಣಪ್ರಸಿದ್ಧನಾದ ಆ ಪಾರ್ವತೀಶನು ಎಲ್ಲಾ ಜೀವರುಗಳ ರೂಪದಿಂದಲೂ ತಾನೇ ಇದ್ದುಕೊಂಡಿರುವನು. ಏಕೆಂದರೆ ಅವನೇ ಎಲ್ಲಾ ಶರೀರಗಳನ್ನೂ ಆತ್ಮರೂಪದಿಂದ ಒಳ ಹೊಕ್ಕಿರುವ ಪುರುಷನಾಗಿರುವನು. ಇಂಥ ಸರ್ವಾತ್ಮಕನಾದ ರುದ್ರನಿಗೆ ನಮಸ್ಕಾರವು– ಎಂದರ್ಥ. ಮತ್ತು ಪ್ರಕೃತಿ–ಪುರುಷರೆಂಬ ರೂಪದಿಂದ ಒಬ್ಬನೇ ಎರಡಾಗಿದ್ದರೂ ದ್ವೈತಸ್ಥಿತಿಯಲ್ಲಿ ಜಡರೂಪವಾಗಿರುವ ಪ್ರಕೃತಿಯನ್ನು ಸದ್ರೂಪನಾದ ಪುರುಷನು ಪ್ರವರ್ತಿಸುವಂತೆ ಮಾಡುವನು. ಆದ್ದರಿಂದ ಪುರುಷನು ಸನ್ಮಾತ್ರನು. 'ಸತ್ತೊಂದೇ ಸೃಷ್ಟಿಯ ಆದಿಯಲ್ಲಿತ್ತು'–ಎಂದು ಛಾಂದೋಗ್ಯಶ್ರುತಿಯಲ್ಲಿ ತಿಳಿಸಿದೆ. ಇಂಥ ಸನ್ಮಾತ್ರನಾದ ಮತ್ತು ಮಹಃ ಎಂದರೆ ತೇಜೋರೂಪನಾದ ಯಾವ ರುದ್ರನಿರುವನೋ ಅವನಿಗೆ ಮತ್ತೆ ಮತ್ತೆ ವಂದನೆಗಳು–ಎಂದಭಿಪ್ರಾಯ. ಇನ್ನು ಅಚೇತನವಾದ ಯಾವ ವಿಶ್ವವಿದೆಯೊ ಅದು ಪ್ರಕೃತಿಯಿಂದ ಹೊರಬಂದ ವಿಕೃತಿಯಾಗಿದೆಯೋ ಮತ್ತು ಈ ವಿಶ್ವವು ಹಿಂದೆಯೇ ಏನು ಸೃಷ್ಟಿಸಲ್ಪಟ್ಟಿದೆಯೋ ಈಗಲೂ ನಾನಾಪ್ರಕಾರವಾಗಿ ಚೇತನಾಚೇತನರೂಪನಾಗಿ

ಬಹಳವಾಗಿ ಹುಟ್ಟುತ್ತಲೇ ಇದೆಯೋ, ಮುಂದೆಯೂ ಹುಟ್ಟಬಹುದಾಗಿರುವದೋ ಇದೆಲ್ಲವೂ ರುದ್ರನೇ. ಏಕೆಂದರೆ ರುದ್ರನ ಇರುವಿಕೆಯೇ ಇದರ ಇರವೂ ಆಗಿದೆ. ರುದ್ರನನ್ನು ಹೊರತುಪಡಿಸಿ ಇದನ್ನು ನಿರೂಪಣೆ ಮಾಡುವದಕ್ಕೇ ಬರಲಾರದು. ಇಂಥ ಸಕಲಜಗದಾತ್ಮಕನೂ, ಚೇತನನೂ, ವ್ಯಾಪಕನೂ, ಪರಮಾರ್ಥಸತ್ಯನೂ ಆಗಿರುವ ರುದ್ರನು ಬ್ರಹ್ಮವೇ. ಅವನಿಗೆ ನಮಸ್ಕಾರಗಳು.

**ಓಂ ॥ ಕದ್ರುದ್ರಾಯ ಪ್ರಚೇತಸೇ ಮೀಢುಷ್ಟಮಾಯ ತವ್ಯಸೇ । ವೋಚೇಮ ಶಂತಮಗ್ಂ ಹೃದೇ । ಸರ್ವೋ ಹ್ಯೇಷ ರುದ್ರಃ ತಸ್ಮೈ ರುದ್ರಾಯ ನಮೋ ಅಸ್ತು ॥**

ಈ ಮಂತ್ರವೂ ರುದ್ರನ ಸ್ತುತಿರೂಪವಾಗಿದೆ. 'ಕತ್ಥ ಪ್ರಶಂಸಾಯಾಮ್' ಎಂಬ ಧಾತುವಿನಿಂದ ಹುಟ್ಟಿರುವ ಕತ್ ಶಬ್ದವು ಪ್ರಶಂಸಾರ್ಥಕವಾಗಿದೆ. ಆದ್ದರಿಂದ ಕದ್ರುದ್ರನೆಂದರೆ ಪ್ರಶಸ್ತನಾದ ರುದ್ರನು–ಎಂದರ್ಥ. ಮತ್ತು ಪ್ರಚೇತಸೇ ಎಂದರೆ ಪ್ರಕೃಷ್ಟಜ್ಞಾನಸ್ವರೂಪನು–ಎಂದರ್ಥ. ಮೀಢುಷ್ಟಮನೆಂದರೆ ಭಕ್ತರಿಗೆ ಬೇಕಾದ ಇಷ್ಟಾರ್ಥಗಳನ್ನು ಅತಿಶಯವಾಗಿ ಸುರಿಸುವವನು–ಎಂದರ್ಥ. ತವ್ಯಸೇ–ಎಂಬಲ್ಲಿ ಮೊದಲಿನ ಸಕಾರವು ಲೋಪವಾಗಿರುವದರಿಂದ ಅದನ್ನು ಸೇರಿಸಿದರೆ ಸ್ತವ್ಯಸೇ–ಎಂದಾಗುವದನು. ಆಗ ಸ್ತೋತ್ರಮಾಡಲು ಯೋಗ್ಯನಾದವನೆಂದು ಅಭಿಪ್ರಾಯವಾಗುವದು. ಇನ್ನು ಹೃದೇ–ಎಂದರೆ ಹೃದಯದೇಶದಲ್ಲಿದ್ದುಕೊಂಡಿರುವವನಾದ, ಶಂತಮನಾದ ಎಂದರೆ ಅತಿಶಯಸುಖಕರವಾದ ರುದ್ರನನ್ನು ನಾವು ಸ್ತುತಿರೂಪವಾದ ವಾಕ್ಕುಗಳಿಂದ ವೋಚೇಮ–ಕಥನ ಮಾಡುವೆವು–ಕೊಂಡಾಡುವೆವು–ಎಂದರ್ಥ. ಇಂಥ ರುದ್ರನು ಹಿಂದೆ ಹೇಳಿರುವಂತೆ ಸರ್ವವೂ ಆಗಿರುವನು. ಅವನಿಗೆ ನಮಸ್ಕಾರಗಳು–ಎಂದು ಭಕ್ತನು ಸ್ತುತಿಸಿದ್ದಾನೆ.

## ಅಗ್ನಿಹೋತ್ರಹವಣಿಯ ಮಹಿಮೆ

**ಓಂ ॥ ಯಸ್ಯ ವೈಕಂಕತ್ಯಗ್ನಿಹೋತ್ರಹವಣೀ ಭವತಿ ಪ್ರತ್ಯೇವಾಸ್ಯಾ (ಆ) ಹುತಯಸ್ತಿಷ್ಠನ್ತ್ಯಥೋ ಪ್ರತಿಷ್ಠಿತ್ಯೈ ॥**

ಈಗ ಪ್ರಾಸಂಗಿಕವಾಗಿ ಅಗ್ನಿಹೋತ್ರವೆಂಬ ಶ್ರೌತಕರ್ಮದಲ್ಲಿ ಬಳಸುವ ಒಂದು ವಸ್ತುವನ್ನು ಕುರಿತು ತಿಳಿಸುತ್ತಾರೆ. ಯಾವದೇ ಕರ್ಮವಾಗಲಿ ಚಿತ್ತಶುದ್ಧಿಯ

ಮೂಲಕ ಮುಮುಕ್ಷುವಿಗೆ ಉಪಕಾರಕವಾಗಬೇಕಾದರೆ ಅದು ಶಾಸ್ತ್ರೀಯವಾಗಿಯೂ ಅದಕ್ಕೆ ವಿಹಿತವಾದ ಉಪಕರಣಸಾಮಗ್ರಿಗಳಿಂದ ಸಂಪನ್ನವಾಗಿಯೂ ಇರಬೇಕು. ಮಾಡುವವನೂ ಭಕ್ತಿಶ್ರದ್ಧೆಗಳಿಂದ ಸಂಗಫಲತ್ಯಾಗಪೂರ್ವಕವಾಗಿ ಮಾಡಬೇಕು. ಹೇಗೂ ಫಲವನ್ನು ಬಯಸುವದಿಲ್ಲವಾದ್ದರಿಂದ ಕರ್ಮವನ್ನು ಹೇಗೆ ಮಾಡಿದರೇನು? ಎಂದು ಉದಾಸೀನಮಾಡಬಾರದು. ಫಲವು ಉಂಟಾಗಲೇಬೇಕೆಂಬ ಉತ್ಕಟೇಚ್ಛೆಯಿಂದ ಲೋಪದೋಷಗಳಿಗೆ ಅವಕಾಶವಿಲ್ಲದಂತೆ ಹೇಗೆ ಕಾಮಿಗಳು ಎಚ್ಚರಿಕೆಯಿಂದ ಕರ್ಮವನ್ನು ಮಾಡುವರೋ ಹಾಗೆಯೇ ಅಷ್ಟೇ ಆಸಕ್ತಿಯಿಂದ ಮುಮುಕ್ಷುವೂ ಕರ್ಮಗಳನ್ನು ಮಾಡಿ ಪರಮೇಶ್ವರನಿಗೆ ಅರ್ಪಿಸಬೇಕು. ಆದ್ದರಿಂದ ಕರ್ಮಾಂಗವಾದ ವಸ್ತುಗಳಲ್ಲಿ ಅಗ್ನಿಹೋತ್ರಕ್ಕೆ ಅವಶ್ಯವಾದ **'ಅಗ್ನಿ ಹೋತ್ರಹವಣೀ'** ಎಂಬ ಪದಾರ್ಥವನ್ನು ಕುರಿತು ಈಗ ಪ್ರಸ್ತಾಪಿಸುತ್ತಾರೆ. ಹವಣೀ ಎಂದರೆ **ಅಗ್ನಿಹೋತ್ರ** ಕಾಲಕ್ಕೆ ಯಾವ ಸೌಟಿನಿಂದ ದ್ರವ್ಯವನ್ನು ಅಗ್ನಿಗೆ ಸಮರ್ಪಿಸುವರೋ ಅದಕ್ಕೆ ಹೆಸರು. ಸಾಮಾನ್ಯವಾಗಿ ಹೋಮಗಳಲ್ಲಿ **ಸ್ರುಕ್ಕು, ಸ್ರುವ**–ಎಂಬ ಎರಡು ಬಗೆಯ ಸೌಟುಗಳಿರುವವು. ಇವುಗಳಲ್ಲಿ ಪ್ರಧಾನಾಹುತಿಗಳನ್ನೆಲ್ಲ **ಸ್ರುಕ್ಕಿನಲ್ಲಿ** ಹೋಮಮಾಡುವರು. **ಸ್ರುವ** ಎಂಬಿದು ಸಹಾಯಕಸೌಟು ಆಗಿದ್ದು ಇತರ ಆಹುತಿಗಳನ್ನು ಅರ್ಪಿಸಲು ಉಪಯೋಗಿಸಲ್ಪಡುತ್ತದೆ. ಈಗ ತಿಳಿಸುವದೇನೆಂದರೆ: ಯಾವ ಅಗ್ನಿಹೋತ್ರಿಯು **'ವಿಕಂಕತ'** (ಇದಕ್ಕೆ ಕನ್ನಡದಲ್ಲಿ ಮುಳ್ಳುಬೇಲ ಅಥವಾ ಹುಳಿಬ್ಯಾಲ–ಎಂದು ಕೋಶದಲ್ಲಿದೆ) ಎಂಬ ವನಸ್ಪತಿಯ ಮರದಿಂದ ಸಿದ್ಧಗೊಳಿಸಿದ **ಸ್ರುಕ್**ನಿಂದ ಆಹುತಿಗಳನ್ನು ನೀಡುವನೋ ಅವು ಫಲಪ್ರದವಾಗುವವು. **ಸ್ರುಕ್ಸ್ರುವ**ಗಳನ್ನು ವಿಕಂಕತಮರದಿಂದಲೇ ತಯಾರಿಸಿರಬೇಕೆಂತ ನಿಯಮವಿದೆ. ಈಗಿನ ಕಾಲಕ್ಕೆ ಸ್ರುಕ್ ಸ್ರುವಗಳಿಲ್ಲದಾಗ ಸ್ಮಾರ್ತಕರ್ಮಗಳಲ್ಲೆಲ್ಲ ದುಂಡನೆಯ ಮುತ್ತುಗದ ಎಲೆಗಳನ್ನೇ ಬಳಸುತ್ತಾರೆ. ಇದು ಕೂಡ ಶಾಸ್ತ್ರವಿಹಿತವಾಗಿದೆ. ''ಮಧ್ಯಮೇನ ಪರ್ಣೇನ ಜುಹೋತಿ। ಸ್ರುಕ್ ಹಿ ಏಷಾ'' ಎಂದ ವೇದವಚನವೂ ಇದೆ. ಅಂತೂ ಸ್ರುಕ್‌ನ್ನು ಉಪಲಕ್ಷಣವೆಂದಿಟ್ಟುಕೊಂಡು ಯಜ್ಞಕ್ಕಾಗಿ ಬಳಸುವ ಎಲ್ಲಾ ವಸ್ತುಗಳನ್ನೂ ಅದದೇ ಪದಾರ್ಥಗಳನ್ನೇ ಮೃತ್ತಿನಿಂದ ಹಿಡಿದು ಸುವರ್ಣದವರೆಗೂ ಸಂಗ್ರಹಿಸಿ ಯಜ್ಞಾದಿಗಳನ್ನು ಮಾಡಬೇಕು–ಎಂದಭಿಪ್ರಾಯ. ಇದು ವ್ರತಕಥಾದಿಗಳಿಗೂ ಅನ್ವಯಿಸುತ್ತದೆ. ಹೇಗೆಂದರೆ ವ್ರತಾದಿಗಳನ್ನು ಮಾಡುವಾಗ ಆಯಾ ದೇವತೆಗೆ ಹೇಳಿರುವಂಥ **ಪತ್ರ–ಪುಷ್ಪ–ಫಲ**ಗಳನ್ನೇ ತಂದೊಪ್ಪಿಸಿದರೆ ಕಾರ್ಯವು ಫಲಪ್ರದವಾಗುವದು. ಇಲ್ಲವಾದರೆ ಸಿದ್ಧಿಸುವದಿಲ್ಲ . ನಾವುಗಳೆಲ್ಲ ಮಾಡುವ ವ್ರತಾದಿಗಳು ಸಿದ್ಧಿಸದೆ ಇರುವದಕ್ಕೆ ಈ ಲೋಪದೋಷಗಳೇ ಕಾರಣವೆಂದು ತಿಳಿಯಬೇಕು. ಏಕೆಂದರೆ ದೇವರ ಮುಂದೆ ಕುಳಿತು **'ಚಂಪಕಾಪತ್ರಂ ಸಮರ್ಪಯಾಮಿ'**

ಎಂದು ಹೇಳುತ್ತಾ ಕೇವಲ ಮಂತ್ರಾಕ್ಷತೆಯನ್ನು ಪೂಜಿಸಿದರೆ ದೇವರ ಎದುರಿಗೇ ಸುಳ್ಳು ಹೇಳಿದಂತಾಗುವದಿಲ್ಲವೆ? ಇನ್ನು ಫಲವು ಹೇಗಾದೀತು? ಆದ್ದರಿಂದ ಕರ್ಮಗಳನ್ನು ಮಾಡುವಾಗ ಕಡ್ಡಾಯವಾಗಿ ಸಾಧ್ಯವಾದಷ್ಟುಮಟ್ಟಿಗೂ ಆಯಾ ಸಾಮಗ್ರಿಗಳನ್ನೇ ಒದಗಿಸಿಕೊಳ್ಳಬೇಕು. ಪ್ರಕೃತ–ವಿಕಂಕತ ಮರದ ಅಗ್ನಿಹೋತ್ರಹವಣಿಯಿಂದ ಆಹುತಿಗಳನ್ನು ಅರ್ಪಿಸಿದ ಯಜಮಾನನಿಗೆ ಅದು ಫಲಪ್ರದವಾಗಿ ಚಿತ್ತಶುದ್ಧಿಯನ್ನುಂಟು ಮಾಡುವದು–ಎಂದಭಿಪ್ರಾಯ.

## ರಾಕ್ಷೋಘ್ನಮಂತ್ರಗಳು

ಈವರೆಗೆ ಚಿತ್ತಶುದ್ಧಿಕಾರಕವಾದ ಕರ್ಮಗಳಿಗೆ ಬಳಸುವಂಥ ಕೆಲವು ಮಂತ್ರಗಳನ್ನು ತಿಳಿಸಿದ್ದಾಗಿದೆ. ಈಗ ಕೆಲವು ಪ್ರತಿಬಂಧಕನಿವಾರಣಮಂತ್ರಗಳನ್ನು ತಿಳಿಸಲಾಗುವದು. 'ಶ್ರೇಯಾಂಸಿ ಬಹುವಿಘ್ನಾನಿ' ಎಂದಂತೆ ಮೋಕ್ಷಕ್ಕೆ ಅನೇಕ ವಿಘ್ನಗಳು ಅಡ್ಡಿಯಾಗಿರುವವು. ಹಾಗೆಯೇ ಮೋಕ್ಷಾರ್ಥವಾಗಿ ಕೈಗೊಳ್ಳುವ ಪ್ರಯತ್ನಗಳಿಗೂ ಪ್ರತಿಬಂಧಕಗಳಿರುತ್ತವೆ. ಇಂಥ ಪ್ರತಿಬಂಧಕಗಳ ನಿವಾರಣೆಗಾಗಿ ಜಪಿಸಲೇಬೇಕಾದ ಕೇವಲ ಐದು ಮಂತ್ರಗಳನ್ನು ಈಗ ಪ್ರಸ್ತಾಪಿಸಲಾಗುವದು. ಇಲ್ಲಿ ಉಪನಿಷತ್ತಿನಲ್ಲಿ ಐದು ಮಂತ್ರಗಳನ್ನೂ ಪೂರ್ತಿಯಾಗಿ ಕೊಟ್ಟಿಲ್ಲ. ಆದರೆ "ಕೃಣುಷ್ವಪಾಜ ಇತಿ ಪಂಚ" ಎಂದು ಪ್ರತೀಕಗ್ರಹಣದಿಂದ ಐದು ಮಂತ್ರಗಳೆಂದು ಸೂಚಿಸಿದೆ. ಆದ್ದರಿಂದ ಈ ಐದು ಮಂತ್ರಗಳನ್ನು ಕೃಷ್ಣಯಜುರ್ವೇದ ತೈತ್ತಿರೀಯಸಂಹಿತೆಯಿಂದ ಆರಿಸಿಕೊಂಡು ವ್ಯಾಖ್ಯಾನಮಾಡಲಾಗುವದು.

**ಓಂ ॥ ಕೃಣುಷ್ವ ಪಾಜಃ ಪ್ರಸಿತಿಂ ನ ಪೃಥ್ವೀಂ ಯಾಹಿ ರಾಜೇವಾಮವಾಗ್ಂ ಇಭೇನ । ತೃಷ್ವೀಮನು ಪ್ರಸಿತಿಂ ದ್ರೂಣಾನೋಽಸ್ತಾಸಿ ವಿಧ್ಯ ರಕ್ಷಸಸ್ತಪಿಷ್ಠೈಃ ॥**

ಅಗ್ನಿಯನ್ನು ಪ್ರಾರ್ಥಿಸುವ ಮಂತ್ರಗಳಿವು. "ಎಲೈ ಅಗ್ನಿದೇವನೆ, ನೀನು ನಮ್ಮೊಳಗಿನ ಶತ್ರುಗಳಾದ ಕಾಮಕ್ರೋಧಾದಿ ರಾಕ್ಷಸರನ್ನು ಸಂಹರಿಸಲು ನಮಗೆ ಪಾಜಃ–ಎಂದರೆ ಬಲವನ್ನು ಕೃಣುಷ್ವ–ಉಂಟುಮಾಡುವವನಾಗು. ಹೇಗೆಂದರೆ ಹಕ್ಕಿಗಳನ್ನು ಬೇಟೆಯಾಡುವವರು ಭೂಮಿಯನ್ನು ತಮ್ಮ ಬಲೆಗಳಿಂದ ಆವರಿಸಿ ಅವುಗಳನ್ನು ಹಿಡಿಯುವರೋ, ಆಕಾಲಕ್ಕೆ ಬಲೆಗಳನ್ನು ಹರಡುವರೋ ಹಾಗೆ ನಮಗೆ ಬಲವನ್ನು ಅನುಗ್ರಹಿಸಿ ಎಲ್ಲೆಲ್ಲಿಯೂ ಪ್ರಸಾರಮಾಡುವವನಾಗು. ಅನಂತರ

ಚತುರಂಗಬಲಯುಕ್ತನಾದ ರಾಜನಂತೆ ನೀನು ಶತ್ರುಗಳನ್ನು ಎದುರಿಸುವವನಾಗಿ ಮುನ್ನುಗ್ಗುವವನಾಗು. ಮತ್ತು ಶೀಘ್ರವಾಗಿ 'ಪ್ರಸಿತಿ' ಎಂಬ ಶತ್ರುಸಂಹಾರಸಾಧನವಾದ ಆಯುಧದಿಂದ ಕೂಡಿದವನಾಗಿ ಹೆದರಿ ಓಡುತ್ತಿರುವ ಶತ್ರುಗಳನ್ನು ಬೆನ್ನಟ್ಟಿ 'ದ್ರೂಣಾನಃ' ಹಿಂಸಿಸುವವನಾಗಿ ಬಾಣಗಳನ್ನೂ ಎಸೆಯುವವನಾಗು. ರಾಕ್ಷಸರನ್ನು 'ತಪಿಷ್ಠ' ವಾದ– ಎಂದರೆ ತಾಪಕಾರಕವಾದ ಆಯುಧಗಳಿಂದ ಹೊಡೆದು ನಾಶಗೊಳಿಸುವವನಾಗು''– ಹೀಗೆಂದು ಪ್ರಾರ್ಥಿಸಿದೆ. ಇದು ಹೊರಗಿನ ಶತ್ರುಗಳ ಭಯವನ್ನು ನಿವಾರಣೆಗೊಳಿಸಿ ಕೊಳ್ಳುವದಕ್ಕೂ ಉಪಯೋಗವಾಗುತ್ತದೆ.

**ಓಂ ॥ ತವ ಭ್ರಮಾಸ ಆಶುಯಾ ಪತಂತ್ಯನುಸ್ಪೃಶ ಧೃಷತಾ ಶೋಶುಚಾನಃ । ತಪೂಗ್ಂಷ್ಯಗ್ನೇ ಜುಹ್ವಾ ಪತಂಗಾ ನ ಸಂದಿತೋ ವಿಸೃಜ ವಿಷ್ವಗುಲ್ಕಾಃ ॥**

''ಎಲೈ ಅಗ್ನಿಯೆ, ಪ್ರಪಂಚದಲ್ಲಿರುವ ಪ್ರಾಣಿಗಳನ್ನು ಪೀಡಿಸಲು ಹಗಲೂ ರಾತ್ರಿಯೂ ಅತ್ತಿತ್ತ ಸುತ್ತುತ್ತಾ ಇರುವ ಯಾವ ಪಿಶಾಚಿಗಳೆಂಬ ಶತ್ರುಗಳಿರುವರೋ– ಪತಂಗದ ಹುಳುಗಳಂತೆ ಹಾರಾಡುತ್ತಿರುವ– ಅವರನ್ನೆಲ್ಲ ನಿನ್ನ ಅತಿ ಹೆಚ್ಚಿನ (ಪ್ರಗಲ್ಭವಾದ) ತೇಜಸ್ಸಿನಿಂದ ಮುಟ್ಟುವವನಾಗು–ಎಂದರೆ ದಹಿಸುವವನಾಗು. ಹಾಗೂ ಒಳಗೂ ಹೊರಗೂ ಹರಡಿರುವ ಈ ಎಲ್ಲಾ ತಾಪಕಾರಕರನ್ನೂ ನೀನು ಸುಡುವವನಾಗು. ನಿನ್ನನ್ನು ನಾವು **ಚರುಪುರೋಡಾಶ–ಆಜ್ಯಾ**ದಿಗಳಿಂದ ಜ್ವಲಿಸುವೆವು. ಇಂಥ **ಶೋಶುಚಾನಃ**– ದೇದಿಪ್ಯಮಾನನಾದ ನೀನು ರಾಕ್ಷಸರಿಂದ ಹಿಮ್ಮೆಟ್ಟಿಸಲು ಅಸಾಧ್ಯನಾಗಿ ಮೇಲೆ ಕೆಳಗೆ ಹಾಗೂ ಅಡ್ಡಡ್ಡಲಾಗಿಯೂ ನಿನ್ನ ಜ್ವಾಲೆಗಳನ್ನು (ಉಲ್ಕ) ಪ್ರಸಾರಮಾಡುವವನಾಗು''– ಎಂದು ಕೇಳಿಕೊಳ್ಳಲಾಗಿದೆ. ಮಾನವನಿಗೆ **ಆಧಿ**–ಎಂಬ ಹೆಸರಿನ ಮನಶ್ಚಿಂತೆಗಳು ಕಾಡುತ್ತಿರುವವು. ಇವುಗಳಿಗೆ ಔಷಧಗಳೂ ಇಲ್ಲ. ಇವು ಒಮ್ಮೆ ತಲೆಯನ್ನು ಹೊಕ್ಕರೆ ಇವುಗಳಿಂದ ಬಿಡುಗಡೆಯಾಗುವದು ಕಷ್ಟ. ''ಚಿಂತೆಯು ಬದುಕಿರುವವನನ್ನೇ ಸುಡುತ್ತದೆ. ಚಿತೆಯಾದರೋ ಸತ್ತವನನ್ನು ಸುಡುತ್ತದೆ'' – ಸುಭಾಷಿತವುಂಟು. ಆದ್ದರಿಂದ ಚಿಂತೆ, ಕ್ರೋಧ, ಭಯ, ಅಸೂಯೆ–ಮುಂತಾದ ಆಂತರಿಕ ಶತ್ರುಗಳನ್ನು ಗೆಲ್ಲಲು ಇಲ್ಲಿ ಅಗ್ನಿದೇವನ ಅನುಗ್ರಹವನ್ನು ಬೇಡಿಕೊಳ್ಳಲಾಗಿದೆ ಎಂದು ತಿಳಿಯಬೇಕು.

**ಓಂ ॥ ಪ್ರತಿ ಸ್ಪಶೋ ವಿಸೃಜ ತೂರ್ಣಿತಮೋ ಭವಾ ಪಾಯುರ್ವಿಶೋ ಅಸ್ಯಾ ಅದಬ್ಧಃ । ಯೋ ನೋ ದೂರೇ ಅಘಶಗ್ಂಸೋ ಯೋ ಅನ್ತ್ಯಗ್ನೇ ಮಾ ಕಿಷ್ಟೇ ವ್ಯಥಿರಾದಧರ್ಷೀತ್ ॥**

‘‘ಎಲೈ ಅಗ್ನಿಯೆ, ಅತಿವೇಗಶಾಲಿಯಾದ ನೀನು ನಮ್ಮನ್ನು ಹಿಂಸಿಸುವ ಶತ್ರುಗಳನ್ನು ಪಾಶಗಳಿಂದ ಕಟ್ಟಿ ನಮ್ಮ ಬಳಿಗೆ ತರುವವನಾಗು. ಮತ್ತು ನಮ್ಮ **ವಿಶಃ**— ಪ್ರಜೆಗಳನ್ನು (ಮಕ್ಕಳು—ಮುಂತಾದವರನ್ನು) ಕಾಪಾಡುವವನಾಗು. ಹಾಗೂ ದೂರದಲ್ಲಾಗಲಿ ಹತ್ತಿರದಲ್ಲಾಗಲಿ ಇದ್ದುಕೊಂಡು ಯಾವನು ನಮಗೆ **ಅಘಶಂಸನಾಗಿರು ವನೋ**—ಎಂದರೆ ಪಾಪಫಲವಾದ ದುಃಖವನ್ನು ಬಯಸುವವನಾಗಿರುವನೋ ಅಂಥವನನ್ನು ಹಿಮ್ಮೆಟ್ಟಿಸುವವನಾಗು. ನಾನು ಕೂಡ ಶತ್ರುಗಳಿಂದ ಹಿಂಸಿತನಾಗದಿರುವಂತೆ ಕಾಪಾಡುವವನಾಗು. ಮತ್ತು ವ್ಯಥೆಯನ್ನುಂಟುಮಾಡುವ ರಾಕ್ಷಸನು ನಿನ್ನೆದುರಿಗೆ ತನ್ನ ಪ್ರತಾಪವನ್ನು ತೋರಿಸದೆ ಇರಲಿ’’ ಎಂದು ಪ್ರಾರ್ಥಿಸಲಾಗಿದೆ. ಅಗ್ನಿದರ್ಶನದಿಂದ ಪಿಶಾಚರಾಕ್ಷಸಾದಿಗಳು ಪಲಾಯನ ಮಾಡುತ್ತಾರೆಂಬುದು ಪ್ರಸಿದ್ಧವು. ಹಗಲಿನಲ್ಲಿ ಸೂರ್ಯನ ಬೆಳಕಿರುವದರಿಂದಲೂ ರಾತ್ರಿಯಲ್ಲಿ ಅಗ್ನಿಯ ಬೆಳಕಿನಿಂದಲೂ ರಾಕ್ಷಸಾದಿಗಳು ಓಡಿಹೋಗುತ್ತಾರಾದ್ದರಿಂದ ಕಾಡಿನಲ್ಲಾಗಲಿ, ಹಾದಿನಡೆಯುವಾಗಲಾಗಲಿ, ಮನೆಯಲ್ಲಾಗಲಿ ಅಗ್ನಿಯನ್ನು ಎಂದರೆ ಬೆಳಕನ್ನು ರಾತ್ರೆಯಲ್ಲಿ ಸ್ಥಾಪಿಸಿರಬೇಕು—ಎಂದು ನೀತಿ ಶಾಸ್ತ್ರವೂ ತಿಳಿಸುತ್ತದೆ. ಹೀಗೆ ಅಗ್ನಿಯು ರಾಕ್ಷಸವಿನಾಶಕನೆಂದು ಪ್ರಸಿದ್ಧನಾಗಿದ್ದಾನೆ.

**ಓಂ ॥ ಉದಗ್ನೇ ತಿಷ್ಠ ಪ್ರತ್ಯಾತನುಷ್ವ ನ್ಯಮಿತ್ರಾಗ್ಂ ಓಷತಾತ್**
**ತಿಗ್ಮಹೇತೇ । ಯೋ ನೋ ಅರಾತಿಗ್ಂ ಸಮಿಧಾನ ಚಕ್ರೇ**
**ನೀಚಾ ತಂ ಧಕ್ಷ್ಯತಸಂ ನ ಶುಷ್ಕಮ್ ॥**

‘‘ಎಲೈ ಅಗ್ನಿಯೆ, ನಮ್ಮನ್ನು ಅನುಗ್ರಹಿಸುವದಕ್ಕಾಗಿ ಎದ್ದೇಳುವವನಾಗು. ನಮ್ಮ ಮೇಲೆ ದಯೆಯನ್ನು ತೋರುವವನಾಗು. ಅಮಿತ್ರರಾದ ಕಾಮಾದಿಗಳನ್ನು **ಓಷತ್**— ಎಂದರೆ ಸುಟ್ಟು ಬೂದಿಮಾಡುವವನಾಗು. ಎಲೈ ತೀಕ್ಷ್ಣವಾದ ಆಯುಧವುಳ್ಳವನೆ, ನಮ್ಮ ವಿಷಯಕ್ಕೆ ಯಾವನೇ ಆಗಲಿ, ಶತ್ರುಭಾವವನ್ನು ಹೊಂದುವನೋ ಅಂಥ ದ್ರೋಹಿಯನ್ನು—ಪೊದೆಗಳನ್ನೂ ಒಣಗಿದ ಮರಗಳನ್ನೂ ಸುಡುವಂತೆ ಸುಡಬೇಡ; ಆದರೆ ಅಂಥವನನ್ನು ನೀಚವಾದ ಹಾಗೂ ದುಃಖಬಾಹುಳ್ಯದಿಂದ ಕೂಡಿದ ನರಕಮಾರ್ಗಕ್ಕೆ ತಳ್ಳುವವನಾಗು. ನೀನು ಸಮಿಧಾನನು ಎಂದರೆ ದೇದೀಪ್ಯಮಾನವಾದ ತೇಜಸ್ಸುಳ್ಳವನು. ನಿನ್ನನ್ನು ಆರಾಧಿಸಿದವನಿಗೆ ಕಾರ್ಯಸಿದ್ಧಿಯನ್ನೂ ತಿರಸ್ಕರಿಸಿದವನಿಗೆ ಅಧೋಗತಿಯನ್ನು ಉಂಟುಮಾಡುವೆಯಲ್ಲವೆ? ಎಂದಭಿಪ್ರಾಯ.

**ಓಂ ॥ ಊರ್ಧ್ವೋ ಭವ ಪ್ರತಿವಿಧ್ಯಾಧ್ಯಸ್ಮದಾವಿಷ್ಕೃಣುಷ್ವ**
**ದೈವ್ಯಾನ್ಯಗ್ನೇ । ಅವ ಸ್ಥಿರಾ ತನುಹಿ ಯಾತುಜೂನಾಂ**
**ಜಾಮಿಮಜಾಮಿಂ ಪ್ರಮೃಣೀಹಿ ಶತ್ರೂನ್ ॥**

"ಎಲೈ ಅಗ್ನಿಯೆ, ನಮ್ಮ ಕಾಮಾದಿದೋಷಗಳೆಂಬ ಶತ್ರುಗಳನ್ನು ಹೊಡೆದೋಡಿಸು. ಹಾಗೂ ದೇವತಾಸಂಬಂಧಿಯಾದ ಸತ್ಕರ್ಮಗಳನ್ನೂ ಸಚ್ಚಿಂತನೆಗಳನ್ನೂ ಅಂತಃಕರಣದಲ್ಲಿ ಉಂಟುಮಾಡುವವನಾಗು. ಆ ಮೂಲಕ 'ಊರ್ಧ್ವೋ ಭವ' ಎಂದರೆ ಸತ್ಯಲೋಕದವರೆಗೂ ಇರುವ ಮೇಲಿನ ಲೋಕಗಳನ್ನು ಕೊಡುವವನಾಗು. ಮತ್ತು ರಾಕ್ಷಸರ ಬಿಲ್ಲುಗಳನ್ನೆಲ್ಲ ಕೆಳಮುಖವಾಗಿ ಮಾಡು– ಎಂದರೆ ಅವರ ಧನುಸ್ಸುಗಳ ಹಗ್ಗಗಳು ಸಡಲಿ ಹೆದೆಯೇರದಂತೆ ಮಾಡುವವನಾಗು. ಇನ್ನು ನೀನು ಜಾಮಿಯನ್ನು ಎಂದರೆ ಆಲಸ್ಯವನ್ನು ಬಿಟ್ಟು ಶತ್ರುನಾಶವನ್ನು ಕೈಗೊಳ್ಳುವವನಾಗು. ಮತ್ತು ಅಜಾಮಿ– ಎಂದರೆ ಅನಾಲಸ್ಯವು ಹೇಗಾದರೆ ನಿನಗೆ ಉಂಟಾಗಬಹುದೋ ಹಾಗೆ ಯಾವ ಬೇಸರವೂ ಇಲ್ಲದೆ ಕಾರ್ಯದಕ್ಷನಾಗಿ ಲೋಕಕಂಟಕರಾದ ಶತ್ರುಗಳನ್ನು ಸಂಹರಿಸುವವನಾಗು"– ಎಂದಭಿಪ್ರಾಯ. ಒಟ್ಟಿನಲ್ಲಿ ಈ ಐದು ಋಕ್ಕುಗಳ ತಾತ್ಪರ್ಯವೇನೆಂದರೆ: ಅಗ್ನಿದೇವನು ಮೂರು ಲೋಕಗಳಲ್ಲಿಯೂ ಇರಬಹುದಾದ ಬಹಳ ದಕ್ಷರೂ ಪ್ರಭಾವಶಾಲಿಗಳೂ ಆದ ನಮ್ಮ ಶತ್ರುಗಳನ್ನು ನಿರ್ಮೂಲನಗೊಳಿಸಿ, ಆಧ್ಯಾತ್ಮಿಕವಾಗಿಯೂ ನಮ್ಮ ಮನಸ್ಸಿನಲ್ಲಿ ಬೇರೂರಿರುವ ಭಯ, ಸಂಶಯ, ಕಾಮ, ಕ್ರೋಧಾದಿಭೂತದಾಹೀಯವಾದ ದೋಷಗಳನ್ನೂ ನಿವಾರಣೆಮಾಡಿ ಅದು ಒಳ್ಳೆಯಕಾರ್ಯಗಳಲ್ಲಿ ತೊಡಗುವಂತೆ ಮಾಡಿ ಐಹಿಕವಾದ ಭೋಗ್ಯಭಾಗ್ಯ ಆಯುರಾರೋಗ್ಯಾದಿಗಳನ್ನೂ ದೇಹತ್ಯಾಗಾನಂತರ ಮುಕ್ತಿಯನ್ನೂ ಕರುಣಿಸಲಿ; ಮತ್ತು ಆ ತೇಜೋಮಯನಾದ ದೇವನು ನೂರು ವರ್ಷಗಳ ಕಾಲವೂ ನಮ್ಮಿಂದ ಸೇವೆಯನ್ನು ಸ್ವೀಕರಿಸಿ ಅನಂತರ ಸದ್ಗತಿಯನ್ನು ದಯಪಾಲಿಸಲಿ– ಎಂದು ಕೇಳಿಕೊಳ್ಳಲಾಗಿದೆ.

## ಪೃಥಿವೀದೇವತಾಪ್ರಾರ್ಥನೆ

**ಓಂ ॥ ಅದಿತಿರ್ದೇವಾ ಗಂಧರ್ವಾ ಮನುಷ್ಯಾಃ ಪಿತರೋಽಸುರಾ–**
**ಸ್ತೇಷಾಗ್ಂ ಸರ್ವಭೂತಾನಾಂ ಮಾತಾ ಮೇದಿನೀ ಮಹತಾ**
**ಮಹೀ ಸಾವಿತ್ರೀ ಗಾಯತ್ರೀ ಜಗತ್ಯುರ್ವೀ ಪೃಥ್ವೀ**
**ಬಹುಲಾ ವಿಶ್ವಾ ಭೂತಾ ಕತಮಾ ಕಾಯಾ ಸಾ ಸತ್ಯೇತ್ಯ–**
**ಮೃತೇತಿ ವಸಿಷ್ಠಃ ॥**

ಈ ಮಂತ್ರದ್ರಷ್ಟಾರನಾದ ಋಷಿಯು ವಸಿಷ್ಠನು. ಈತನ ಹೆಸರು ಮಂತ್ರದ ಕೊನೆಯಲ್ಲಿದೆ. ಈ ಮಹರ್ಷಿಯು ಭೂದೇವಿಯನ್ನು ಇಲ್ಲಿ ಕೊಂಡಾಡಿರುತ್ತಾನೆ.

**ಅದಿತಿ**– ಎಂದರೆ ಪೃಥಿವಿಯೆಂದು ಭಾಷ್ಯಕಾರರು ವ್ಯಾಖ್ಯಾನಮಾಡಿದ್ದಾರೆ. **ಅಖಂಡಿತಳು** ಎಂಬರ್ಥದಲ್ಲಿ ಅದಿತಿ ಎಂದಿದೆ. ಭೂಮಿಯನ್ನು ಯಾರೇ ಆಗಲಿ–ತಮ್ಮತಮ್ಮ ಭಾಗವೆಂದು ಕರೆದುಕೊಂಡರೂ ಹಂಚಿಕೊಂಡರೂ ಭೂಮಿಯೇನೂ ತುಂಡಾಗುವದಿಲ್ಲ. ಅದು ಅಖಂಡವಾಗಿ ಹಾಗೆಯೇ ಇದ್ದುಕೊಂಡಿದೆ. ಜನರು ತಮ್ಮ ವ್ಯವಹಾರಸಿದ್ಧಿಗಾಗಿ ಗಡಿರೇಖೆಗಳನ್ನು ಗುರುತುಮಾಡಿರುತ್ತಾರೆ. ಆದ್ದರಿಂದ ಭೂದೇವಿಯು ಅದಿತಿಯೆನಿಸಿರುತ್ತಾಳೆ. ನಿರುಕ್ತಗ್ರಂಥದಲ್ಲಿಯೂ ಪೃಥಿವಿಯ ಹೆಸರುಗಳನ್ನು ಪಟ್ಟಿಮಾಡುವಾಗ **ಅದಿತಿ**ಶಬ್ದವನ್ನು ಸೇರಿಸಲಾಗಿದೆ. ಇನ್ನು ದೇವತೆಗಳು, ಗಂಧರ್ವರು, ಮನುಷ್ಯರು, ಪಿತೃಗಳು, ಅಸುರರು– ಈ ಐದು ಬಗೆಯ ಜೀವರುಗಳೂ **ಅದಿತಿರೂಪರೇ** ಆಗಿರುತ್ತಾರೆ. ಇವರೆಲ್ಲರಿಗೂ ಹಾಗೂ ಸಮಸ್ತಭೂತಗಳಿಗೂ ಅದಿತಿಯು ತಾಯಿಯೆನಿಸಿರುವಳು. ಈಕೆಯು ಮಧುಕೈಟಭರೆಂಬ ರಾಕ್ಷಸರ ಮೇದಸ್ಸಿನಿಂದ ಹುಟ್ಟಿದವಳಾದ್ದರಿಂದ ಮೇದಿನಿಯೆನಿಸಿರುವಳು. ಗುಣಾಧಿಕಳಾಗಿರುವದರಿಂದ **ಮಹತೀ** ಎನಿಸಿರುವಳು (ಮೂಲದಲ್ಲಿರುವ ಮಹತಾ– ಎಂಬ ಶಬ್ದವನ್ನು ಹೀಗೆ ಪರಿವರ್ತಿಸಿಕೊಳ್ಳಬೇಕು). ಇನ್ನು **ಮಹೀ**– ಎಂದರೆ ಪೂಜ್ಯಳು ಎಂದರ್ಥ. ತನ್ನನ್ನು ಗಾನಮಾಡುವವರನ್ನು ಕಾಪಾಡುವವಳಾದ್ದರಿಂದ **ಗಾಯತ್ರೀ**– ಎನಿಸಿರುವಳು. ಅಂತರ್ಯಾಮಿಯಾದ ಸವಿತೃದೇವನ ಸಂಬಂಧಿನಿಯಾದ್ದರಿಂದ **ಸಾವಿತ್ರೀ**– ಎಂದೂ ಕರೆಯಲ್ಪಡುವಳು. ಜಗತ್ತಿಗೆಲ್ಲ ಆಶ್ರಯಳಾದ್ದರಿಂದ **ಜಗತೀ** ಎನಿಸಿರುವಳು. ಅನೇಕ ಸಸ್ಯಗಳಿಂದ ಭರಿತಳಾಗಿದ್ದು **ಉರ್ವೀ**– ಎನಿಸಿರುವಳು. ಬಹಳವಾಗಿ ಹರಡಿಕೊಂಡಿರುವದರಿಂದಲೂ ಪೃಥು ಎಂಬ ವಿಷ್ಣುವಿನ ಅಂಶಭೂತನಾದ ರಾಜನ ಪುತ್ರಿ– ಎಂದು ಪುರಾಣಗಳಲ್ಲಿ ಕರೆದಿರುವದರಿಂದಲೂ **ಪೃಥ್ವೀ**– ಎನಿಸಿರುವಳು. ನಿಬಿಡವಾದ ಅವಯವಗಳುಳ್ಳವಳಾದ್ದರಿಂದಲೂ **ಬಹುಲಾ**– ಎನಿಸಿರುವಳು. ಸರ್ವಾತ್ಮಕಳಾದ್ದರಿಂದ **ವಿಶ್ವಳು**. ಪ್ರಾಣಿಗಳ ದೇಹೋತ್ಪತ್ತಿಗೆ ಕಾರಣಳಾದ್ದರಿಂದ **ಭೂತಾ**– ಎನಿಸಿರುವಳು. ಅತಿಶಯಸುಖರೂಪಳಾದ್ದರಿಂದ **ಕ–ತಮಾ**– ಎನಿಸಿರುವಳು. ಕ ಎಂದರೆ ಸುಖವೆಂದರ್ಥ. ಇನ್ನು **ಕಾಯಾ**– ಎಲ್ಲಾ ಪ್ರಾಣಿಗಳ ದೇಹರೂಪದಲ್ಲಿ ಪರಿಣಮಿಸಿರುವವಳು. ಇಂಥ ಆಕೆಯು **ಸತ್ಯಳು**– ಎಂದರೆ ವ್ಯವಹಾರದೆಶೆಯಲ್ಲಿಎಂದಿಗೂ ಬಾಧಿತಳಾಗದೆ ಇರುವವಳು. ಹಾಗೆಯೇ ನಾಲ್ಕು ಯುಗಗಳು ಒಂದಾಗುತ್ತಲೊಂದು ತಿರುಗುವಾಗಲೂ ಅಷ್ಟುಕಾಲವೂ ಇದ್ದುಕೊಂಡೇ ಇರುವಳಾದ್ದರಿಂದ **ಅಮೃತಳೆ**ನಿಸಿರುವಳು– ಎಂದು ವಸಿಷ್ಠರೆಂಬ ಋಷಿಗಳು ತಿಳಿಸಿದ್ದಾರೆ.

ಪೃಥಿವಿದೇವತೆಯನ್ನು ಕುರಿತ ಈ ಸ್ತುತಿಯು ಬಹಳ ಮಹತ್ತ್ವವುಳ್ಳದ್ದಾಗಿದೆ. ನಾವೆಲ್ಲರೂ ಪೃಥಿವಿಯ ಮೇಲೆಯೇ ಇದ್ದುಕೊಂಡಿರುವೆವಾದರೂ ಆ ದೇವತೆಯ ಸಾಕ್ಷಾತ್ಕಾರವೇನೂ ನಮಗೆ ಆಗಿರುವದಿಲ್ಲ. ಆದಾಗ ಈ ಮಹಿಮೆಗಳನ್ನೆಲ್ಲ ಅರಿತುಕೊಳ್ಳ ಬಹುದು. ಸಾಮಾನ್ಯಸ್ಥಿತಿಯಲ್ಲಿಯೂ ಭೂಮಿಯ ಮೇಲಿನ ವ್ಯಾಮೋಹವೇನೋ ಮಾನವನಿಗೆ ಪ್ರಬಲವಾಗಿಯೇ ಇದೆ. ಭೂಮಿಯ ನಿಮಿತ್ತವಾಗಿ ಪ್ರಾಚೀನಕಾಲದಿಂದಲೂ ಮಾನವರಲ್ಲಿ ಕಲಹ–ಯುದ್ಧಗಳು ನಡೆದೇ ಬಂದಿವೆ. ಆದರೇನು? ಭೂದೇವಿಯನ್ನು ಆರಾಧಿಸಿ ಆಕೆಯ ಕೃಪಾಪಾತ್ರರಾಗುವವರ ಸಂಖ್ಯೆ ತೀರ ಕಡಿಮೆಯೇ ಎನ್ನಬಹುದು. ಆದ್ದರಿಂದ ನಾವು ಭೂಮಾತೆಯನ್ನು ಮೊದಲು ಅರಿತುಕೊಂಡು ಅನಂತರ ಗೌರವಿಸಿ ಜನ್ಮವನ್ನು ಸಾರ್ಥಕ್ಯಪಡಿಸಿಕೊಳ್ಳಬೇಕು.

## ಜಲದೇವತಾಪ್ರಾರ್ಥನಾಮಂತ್ರ

**ಓಂ ॥ ಆಪೋ ವಾ ಇದಗ್ಂ ಸರ್ವಂ ವಿಶ್ವಾ ಭೂತಾನ್ಯಾಪಃ ಪ್ರಾಣಾ ವಾ ಆಪಃ ಪಶವ ಆಪೋಽನ್ನಮಾಪೋಽಮೃತಮಾಪಃ ಸಂರಾಡಾಪೋ ವಿರಾಡಾಪಃ ಸ್ವರಾಡಾಪಃ ಛಂದಾಗ್ಂಸ್ಯಾಪೋ ಜ್ಯೋತೀಗ್ಂಷ್ಯಾಪೋ ಯಜೂಗ್ಂಷ್ಯಾಪಃ ಸತ್ಯಮಾಪಃ ಸರ್ವಾ ದೇವತಾ ಆಪೋ ಭೂರ್ಭುವಃಸುವರಾಪ ಓಮ್ ॥**

ಪೃಥಿವೀದೇವತೆಯ ಪ್ರಾರ್ಥನಾನಂತರ ಜಲದೇವತೆಯನ್ನು ಕುರಿತು ಇಲ್ಲಿ ಸ್ತುತಿಸಲಾಗಿದೆ. **ಆಪಃ** ಎಂದರೆ ನೀರು ಎಂದರ್ಥ. ಈ ಶಬ್ದವು ಸಂಸ್ಕೃತ ವ್ಯಾಕರಣದಂತೆ ಸ್ತ್ರೀಲಿಂಗವೂ ನಿತ್ಯಬಹುವಚನಾಂತವೂ ಆಗಿದೆ. ಜಗತ್ತಿನಲ್ಲಿರುವದೆಲ್ಲ ಜಲವೇ–ಎಂದು ಉಪಕ್ರಮ ಮಾಡಿದೆ. ಇದು ಹೇಗೆಂದರೆ: ಎಲ್ಲಾ ಪ್ರಾಣಿಗಳೂ ಸ್ಥಾವರಗಳೂ ಜಲವೇ. ಪ್ರಾಣಿಗಳೆಲ್ಲವೂ ವೀರ್ಯದಿಂದಲೇ ಉತ್ಪನ್ನವಾಗುತ್ತವೆ. ವೀರ್ಯವು ದ್ರವರೂಪ ವಾಗಿದೆ. ಹಾಗೆಯೇ ಶರೀರಾಂತರ್ಗತವಾದ ಪ್ರಾಣಗಳೂ ಜಲವೇ. ಏಕೆಂದರೆ ಜಲದ ಸಂಪರ್ಕವಿಲ್ಲವಾದರೆ ಪ್ರಾಣಗಳು ನಿಲ್ಲಲಾರವು. ಆದ್ದರಿಂದಲೇ ಉಪವಾಸಸತ್ಯಾಗ್ರಹ ವನ್ನು ಆಚರಿಸುವವರು ಕೂಡ ಆಹಾರವನ್ನು ತ್ಯಜಿಸಿರುತ್ತಾರೆಯೇ ಹೊರತು ನೀರನ್ನು ತ್ಯಜಿಸಿರುವದಿಲ್ಲ. ನೀರಿಲ್ಲದೆ ಪ್ರಾಣಗಳು ಇರಲಾರವು. ಇನ್ನು ಪಶುಗಳೂ ಆಪಗಳೇ; ಅವುಗಳಿಂದ ಉತ್ಪತ್ತಿಯಾಗುವ ಹಾಲು ನೀರಿನ ರೂಪದಲ್ಲಿರುತ್ತದೆ. ಅನ್ನವೂ ಜಲವೇ. ನೀರಿಲ್ಲದೇ ಯಾವ ಪೈರೂ ಬೆಳೆಯಲಾರದು. ಆದ್ದರಿಂದ ಎಲ್ಲರಿಗೂ

ಜೀವನಾಧಾರವಾಗಿರುವ ಜಲವನ್ನು ಅಮೃತವೆಂದು ಹೊಗಳಿದೆ. ಇನ್ನು ಚೆನ್ನಾಗಿ ಬೆಳಗುತ್ತಾ ಸಾಮ್ರಾಟ್ ಎನಿಸಿಕೊಂಡಿರುವ ಹಿರಣ್ಯಗರ್ಭನೂ ಜಲವೇ. ಜಲದ ಸೃಷ್ಟಿಯಾಗಿ ಭಗವಂತನು ಅದರಲ್ಲಿ ಮಲಗಿದ್ದಾಗ ಅವನ ನಾಭಿಕಮಲದಲ್ಲಿ ಬ್ರಹ್ಮನು ಹುಟ್ಟಿದನೆಂದು ಪುರಾಣಗಳಲ್ಲಿ ತಿಳಿಸಿದೆ. ಹಾಗೆಯೇ ವಿರಾಟ್‌ಶರೀರಿಯಾದ ಸ್ಥೂಲಸಮಷ್ಟ್ಯಭಿಮಾನಿಯಾದ ಆತ್ಮನೂ ಜಲಸ್ವರೂಪನೇ–ಎಂದು ತಿಳಿಯಬೇಕು. ಸ್ವರಾಟ್ ಎಂದರೆ ಇಂದ್ರಿಯಗಳ ಹಂಗಿಲ್ಲದೆ ತಾನೇ ಹೊಳೆಯುವ ಅವ್ಯಾಕೃತಾತ್ಮನು. ಅವನೂ ಜಲಸ್ವರೂಪನೇ–ಎಂದರ್ಥ. ಇನ್ನು ಗಾಯತ್ರ್ಯಾದಿಛಂದಸ್ಸುಗಳೂ ಜಲವೇ. ಸೂರ್ಯನೇ ಮೊದಲಾದ ತೇಜಸ್ಸುಗಳೂ ಎಂದರೆ ಜ್ಯೋತಿಗಳೂ ಜಲವೇ. ಗದ್ಯರೂಪವಾದ ಯಜುಸ್ಸುಗಳೂ ಜಲವೇ. ಸತ್ಯವನ್ನು ನುಡಿಯುವದೆಂಬುದು ಅಪಗಳೇ. ಹೀಗೆ ಸರ್ವದೇವತೆಗಳೂ ಜಲವನ್ನೇ ಆಶ್ರಯಿಸಿರುತ್ತಾರೆ. ಭೂರ್ರಾದಿಲೋಕತ್ರಯಗಳೂ ಜಲವೇ–ಎಂದು ಸ್ತುತಿಸಲಾಗಿದೆ. ಯಾವದೇ ದೇವತೆಯನ್ನು ನಾವು ಪೂಜಿಸಬೇಕಾದರೂ ಜಲವನ್ನೇ ಪ್ರತಿನಿಧಿಯಾಗಿಟ್ಟುಕೊಳ್ಳುತ್ತೇವೆ. ಹೇಗೆಂದರೆ ಕಲಶವನ್ನು ಸ್ಥಾಪಿಸಿ ಅದರಲ್ಲಿ ಜಲವನ್ನು ತುಂಬಿ ಅನಂತರ ಆಯಾ ದೇವತಾಮಂತ್ರಗಳಿಂದ ಅದರಲ್ಲಿ ದೇವತೆಯನ್ನು ಕರೆಯುತ್ತೇವೆ. ಕಲಶಪೂಜೆ, ನದಿಯಿಂದ ಅಗ್ರೋದಕ, ಪೂರ್ಣಕುಂಭಗಳನ್ನು ತರದೆ ಯಾವ ದೇವತಾಕಾರ್ಯವೂ ಆರಂಭವಾಗುವದಿಲ್ಲ. ಕರ್ಮಮಾಡುವವನು ಕೂಡ ಮೊದಲು ಸ್ನಾನಮಾಡಲು, ಅನಂತರ ಆಚಮನಾಹ್ನಿಕಗಳನ್ನು ಮಾಡಲು ಜಲವು ಬೇಕು. ಹೀಗೆ ದೇವತೆಗಳನ್ನೆಲ್ಲ ನಾವು ಜಲವೆಂಬ ಉಪಾಧಿಯಲ್ಲಿಯೇ ಪೂಜಿಸಬೇಕಾಗಿದೆ. ಹಾಗೆ ಪೂಜಿಸುವಾಗಲೂ ಅರ್ಘ್ಯ, ಪಾದ್ಯ, ಆಚಮನೀಯಾದ್ಯುಪಚಾರಗಳನ್ನು ಸಮರ್ಪಿಸಲು ಜಲವು ಬೇಕು. ಯಾವ ಉಪಚಾರವನ್ನಾದರೂ ಹೊರಗಿನ ವಸ್ತು ಕೊರತೆಯಾಗಿದ್ದಲ್ಲಿ ಜಲದಿಂದ ಅರ್ಪಿಸಬಹುದು. ಉದಾಹರಣೆಗೆ ಧೂಪ, ದೀಪ, ನೈವೇದ್ಯ ನೀರಾಜನಾದಿಗಳನ್ನು ಒದಗಿಸಿಕೊಳ್ಳಲಾಗದಿದ್ದಾಗ ಜಲಧಾರೆಯಿಂದಲೇ ಅವುಗಳನ್ನು ಪೂರೈಸಬಹುದು. ಹೀಗೆ ಸಕಲವಿಧವಾದ ದೇವತಾಕಾರ್ಯಗಳಲ್ಲಿಯೂ ಜಲವೇ ಪ್ರಧಾನವಾಗಿದೆ. ಆದ್ದರಿಂದ ಜಲವನ್ನು ಸರ್ವದೇವತಾಸ್ವರೂಪವೆಂದು ಇಲ್ಲಿ ಹೊಗಳಿದೆ. ಈ ಮಂತ್ರವನ್ನು ಪುರಶ್ಚರಣಮಾಡಿ ಬರಗಾಲವನ್ನು ಎಂದರೆ ಕ್ಷಾಮಾದಿಗಳನ್ನು ಅಬ್ದೇವತೆಯ ಅನುಗ್ರಹದಿಂದ ಪರಿಹರಿಸಿಕೊಳ್ಳಬಹುದೆಂದೂ ಭಾಷ್ಯಕಾರರು ಸೂಚಿಸಿದ್ದಾರೆ.

## ಸಂಧ್ಯಾವಂದನಮಂತ್ರಗಳು

ಓಂ ॥ ಆಪಃ ಪುನಂತು ಪೃಥಿವೀಂ ಪೃಥಿವೀ ಪೂತಾ ಪುನಾತು ಮಾಮ್।
ಪುನಂತು ಬ್ರಹ್ಮಣಸ್ಪತಿರ್ಬ್ರಹ್ಮ ಪೂತಾ ಪುನಾತು ಮಾಮ್ ।
ಯದುಚ್ಛಿಷ್ಟಮಭೋಜ್ಯಂ ಯದ್ವಾ ದುಶ್ಚರಿತಂ ಮಮ ।ಸರ್ವಗ್ಂ
ಪುನಂತು ಮಾಮಾಪೋಽಸತಾಂ ಚ ಪ್ರತಿಗ್ರಹಗ್ಂ ಸ್ವಾಹಾ ॥

ಈ ಮಂತ್ರವನ್ನು ಯಜುರ್ವೇದಿಗಳು ಮಾಧ್ಯಾಹ್ನಿಕಸಂಧ್ಯಾಕರ್ಮಕಾಲಕ್ಕೆ ಬಳಸುತ್ತಾರೆ. ದ್ವಿಜನು ತ್ರಿಕಾಲದಲ್ಲಿಯೂ ಸಂಧ್ಯಾವಂದನೆಯನ್ನು ಮಾಡಬೇಕೆಂದು ನಿಯಮವಿದೆ. ಆದರೆ ಮಾಧ್ಯಾಹ್ನಿಕಾಚರಣೆಯು ಪ್ರಾತಃ–ಸಾಯಂ ಸಂಧ್ಯಾ ಆಚರಣೆಗಿಂತ ಕಡಿಮೆಯಾಗಿದೆ–ಎನ್ನಬಹುದು. ಏಕೆಂದರೆ ದ್ವಿಜರೆಲ್ಲ ಜೀವನವೃತ್ತಿಗಾಗಿ ಸರಕಾರಿಯ ನೌಕರಿಗಳನ್ನು ಅವಲಂಬಿಸಿದ ಅನಂತರ ಇದಕ್ಕೆ ಲೋಪವು ಬರಲಾರಂಭಿಸಿತು. ಬ್ರಿಟಿಷ್ ಆಡಳಿತಗಾರರು ಸ್ಕೂಲುಕಚೇರಿಗಳ ಕೆಲಸದ ಕಾಲವನ್ನು ಬೆಳಗ್ಗೆ 11 ರಿಂದ ಸಂಜೆ 5 ರವರೆಗೆ ಗೊತ್ತುಮಾಡಿದ್ದರಾದ್ದರಿಂದ ಮಾಧ್ಯಾಹ್ನಿಕಕಾಲವು ಕಚೇರಿಯ ಕಾಲದಲ್ಲಿ ಸೇರಿಹೋಗಿ ಕರ್ಮಲೋಪಕ್ಕೆ ಅವಕಾಶವಾಯಿತು. ಈಗಂತೂ ಜನರಿಗೆ ಕರ್ಮಶ್ರದ್ಧೆಯೇ ಇಲ್ಲವಾಗಿರುವದರಿಂದ ಯಾರಿಗೂ ಮಾಧ್ಯಾಹ್ನಿಕತ್ಯಾಗದ ಚಿಂತೆಯೇ ಇಲ್ಲವಾಗಿದೆ. ಇದು ಹಾಗಿರಲಿ , ನಿಜವಾಗಿ ಮಧ್ಯಾಹ್ನಕಾಲದಲ್ಲಿ ಮಾಡುವ ಈ ಕರ್ಮವು ಸೂರ್ಯನ ಪ್ರಾರ್ಥನಾರೂಪವಾಗಿದ್ದು ಪಾಪಗಳನ್ನು ಕ್ಷಯಮಾಡುವದಲ್ಲದೆ ದೇಹಾರೋಗ್ಯ , ಬಲಪುಷ್ಟಿಗಳನ್ನು ನೀಡುತ್ತದೆ. ಈ ಕರ್ಮದಲ್ಲಿ ಪ್ರಾರಂಭಕ್ಕೆ ಈ ಮಂತ್ರದಿಂದ ಜಲವನ್ನು ಅಭಿಮಂತ್ರಿಸಿ ದ್ವಿಜರು ಪ್ರಾಶನಮಾಡುತ್ತಾರೆ. ಇದರ ಅಭಿಪ್ರಾಯವು ಹೀಗಿದೆ: **ಅಬ್ದೇವತೆಗಳು** ಭೂಮಿಯನ್ನು ಪವಿತ್ರಗೊಳಿಸಲಿ ; ಪರಿಶುದ್ಧಳಾದ ಪೃಥಿವೀದೇವತೆಯು ಕರ್ಮಾನುಷ್ಠಾನ ಮಾಡಲಿರುವ ನನ್ನನ್ನು ಶುದ್ಧನನ್ನಾಗಿ ಮಾಡಲಿ. ಹಾಗೆಯೇ ವೇದಗಳನ್ನು ಅಧ್ಯಯನಾದಿಗಳ ಮೂಲಕ ಕಾಪಾಡುವ ಆಚಾರ್ಯನನ್ನೂ ಈ ಅಬ್ದೇವತೆಗಳು ರಕ್ಷಿಸಲಿ. ಸ್ವಯಂ ಪವಿತ್ರವೇ ಆಗಿರುವ ವೇದಗಳು ಆಚಾರ್ಯನಿಂದ ನನಗೆ ಉಪದೇಶಿಸಲ್ಪಡುವವಾಗಿ ಪವಿತ್ರಗೊಳಿಸಲಿ–ಎಂದು ಕೇಳಿಕೊಳ್ಳಲಾಗಿದೆ. ಅಬ್ದೇವತೆಗಳ ಸಂಬಂಧವಿರುವಾಗಲೆಲ್ಲ ಕರ್ಮಗಳು ನಡುನಡುವೆ ವಿಚ್ಛೇದವಾದರೂ ಮತ್ತೆ ಪವಿತ್ರವಾಗುವವು. ವೈದಿಕರು ಪ್ರಯೋಗವನ್ನು ಮಾಡುವಾಗ ಮಧ್ಯದಲ್ಲಿ 'ಅಪ ಉಪಸ್ಪೃಶ್ಯ' ಎನ್ನುತ್ತಿರುತ್ತಾರೆ. ಕೆಲವು ಕರ್ಮಗಳನ್ನು ಮಾಡಿದ ಕೂಡಲೆ ಶುದ್ಧಿಗಾಗಿ ಕೈತೊಳೆದುಕೊಳ್ಳಬೇಕಾಗುತ್ತದೆ. ಕೆಲವು ವೇಳೆ ಆಚಮನ (ನೀರು

ಕುಡಿಯುವದು)ವನ್ನೂ ಮಾಡಬೇಕಾಗುತ್ತದೆ. ಇದು ಅಭ್ಯಾಸವಾದರೆ ಮನುಷ್ಯನಿಗೆ ಅನಾಚಾರದುರಾಚಾರಗಳು ತಾವೇ ದೂರವಾಗುವವು. ಏಕೆಂದರೆ ಏನಾದರೂ ತಿನ್ನುವ ಮುಂಚೆಯೂ ತಿಂದಮೇಲೂ ಕುಡಿದ ಮೇಲೂ ಕೈಬಾಯಿಗಳನ್ನು ತೊಳೆದುಕೊಳ್ಳ ಬೇಕಾಗುವದರಿಂದ ನೀರಿಲ್ಲದ ಸ್ಥಿತಿಯಲ್ಲಿ ಅವುಗಳನ್ನು ಮಾಡಲು ಇಷ್ಟವಾಗುವದಿಲ್ಲ. ಅಥವಾ ತೀರ ಆಪತ್ಕಾಲವನ್ನು ಬಿಟ್ಟರೆ ಉಳಿದ ಕಾಲದಲ್ಲಿ ಸ್ನಾನಾಚಮನಗಳಿಲ್ಲದೆ ಭಕ್ಷಣ-ಪಾನಾದಿಗಳನ್ನು ಮಾಡಲು ಬರುವದಿಲ್ಲ. ಹೀಗೆ ಜಲವು ನಮ್ಮನ್ನು ಪಾವಿತ್ರ್ಯದ ಕಡೆಗೇ ಒಯ್ಯುತ್ತದೆ. ಅದನ್ನು ದೇವತೆಯಾಗಿ ಅನುಸಂಧಾನಮಾಡಿದಾಗಲಂತೂ ಜಲವನ್ನು ಕಂಡಾಗಲೆಲ್ಲ ತೀರ್ಥ ಭಾವನೆಯೂ ಅದನ್ನು ಸ್ಪರ್ಶಿಸಿ ಶುದ್ಧವಾಗಬೇಕೆಂದೂ ಅನಿಸುತ್ತದೆ. ಇದೇ ಈ ಮಂತ್ರದಲ್ಲಿರುವ ರಹಸ್ಯವು.

ಈಗ ಸಾಧಕನು ಮತ್ತೆ ಅಬ್ದೇವತೆಯನ್ನು ಹೀಗೆಂದು ಬೇಡುತ್ತಾನೆ. ಜಲಾಭಿಮಾನಿದೇವತೆಗಳು ಈವರೆಗೆ ನಾನು ಅಜ್ಞಾನದಿಂದ ಆಚರಿಸಿರಬಹುದಾದ ಎಂಜಲು ಊಟ, ತಿನ್ನಬಾರದ್ದನ್ನು ತಿಂದಿರುವದು, ಮಾಡಬಾರದ್ದನ್ನು ಮಾಡಿರುವದೇ ಮುಂತಾದ ಏನೇ ತಪ್ಪುಗಳಿದ್ದರೂ ಅವುಗಳಿಂದ ಬಿಡುಗಡೆ ಮಾಡಿ ಶುದ್ಧಿಗೊಳಿಸಲಿ. ಹಾಗೆಯೇ ಬ್ರಾಹ್ಮಣನಾದ ನನಗೆ ಪ್ರತಿಗ್ರಹವೂ ಷಟ್ಕರ್ಮಗಳಲ್ಲಿ ಒಂದಾಗಿದ್ದು ಅನುಷ್ಠೇಯವಾಗಿದ್ದರೂ ಪ್ರತಿಗ್ರಹಮಾಡಬಾರದಂಥವುಗಳನ್ನು ಎಂದರೆ ದುರ್ದಾನ, ದುರನ್ನಗಳನ್ನು ಸ್ವೀಕರಿಸಿದ್ದರೆ ಅಂಥ ಪಾಪಗಳಿಂದಲೂ ಬಿಡುಗಡೆಮಾಡಿ ಪರಿಶುದ್ಧನನ್ನಾಗಿ ಮಾಡಲಿ-ಎಂದು ಪ್ರಾರ್ಥಿಸಿದ್ದಾನೆ.

ಓಂ ‖ ಅಗ್ನಿಶ್ಚ ಮಾಮನ್ಯುಶ್ಚ ಮನ್ಯುಪತಯಶ್ಚ ಮನ್ಯುಕೃತೇಭ್ಯಃ
ಪಾಪೇಭ್ಯೋಃ ರಕ್ಷಂತಾಮ್ । ಯದಹ್ನಾ ಪಾಪಮಕಾರ್ಷಮ್।
ಮನಸಾ ವಾಚಾ ಹಸ್ತಾಭ್ಯಾಮ್ । ಪದ್ಭ್ಯಾಮುದರೇಣ ಶಿಶ್ನಾ ।
ಅಹಸ್ತದವಲುಂಪತು । ಯತ್ಕಿಂಚ ದುರಿತಂ ಮಯಿ । ಇದಮಹಂ
ಮಾಮಮೃತ ಯೋನೌ । ಸತ್ಯೇ ಜ್ಯೋತಿಷಿ ಜುಹೋಮಿ ಸ್ವಾಹಾ‖

ಈ ಮಂತ್ರವನ್ನು ಸಾಯಂಸಂಧ್ಯಾವಂದನೆಯಲ್ಲಿ ಬಳಸಲಾಗುತ್ತದೆ. ಇದು ಕೂಡ ಪಾಪಗಳನ್ನು ಕಳೆದುಕೊಳ್ಳಲು ಉದ್ದೇಶದಿಂದ ದೇವತೆಗಳನ್ನು ಪ್ರಾರ್ಥಿಸಿ ಜಲಪಾನ ಮಾಡುವ ಉದ್ದೇಶಕ್ಕಾಗಿ ವಿನಿಯೋಗಿಸಲ್ಪಟ್ಟಿದೆ. ರಾತ್ರೆಯಲ್ಲಿ ಸೂರ್ಯನಿರುವದಿಲ್ಲವಾದ್ದ ರಿಂದ ಸೂರ್ಯನ ತೇಜಸ್ಸನ್ನು ಒಳಗೊಂಡಿರುವ ಅಗ್ನಿಯನ್ನೇ ಮನ್ಯು-ಎಂಬ ದೇವತೆಯೊಡಗೂಡಿ ಪಾಪಪರಿಹಾರಮಾಡುವಂತೆ ಕೇಳಿಕೊಂಡಿದೆ. ಮನ್ಯುಪತಿಗಳೆಂದರೆ ಕೋಪತಾಪಗಳನ್ನು ನಿಯಂತ್ರಿಸುವ ದೇವತೆಗಳು. ಇವರಲ್ಲೂ ನಾನು ಕೋಪವಶನಾಗಿ

ವಿವೇಕವಿಲ್ಲದೆ ಮಾಡಿರುವ ಆಕಾರ್ಯಗಳಿಂದಾಗಿರುವ ಪಾಪಗಳನ್ನು ಪರಿಹರಿಸಿ ಕಾಪಾಡಲಿ–ಎಂದಭಿಪ್ರಾಯ. ಇನ್ನು ಪಾಪವನ್ನು ಮನುಷ್ಯನು ಯಾವಾಗಲಾದರೂ ಮಾಡಬಹುದು. ಆದರೂ ಸಾಯಂಕಾಲದ ವೇಳೆಗೆ ಆ ದಿನದ ಹಗಲು ಕಳೆದುಹೋಗಿರುತ್ತದೆ. ಆ ಹಗಲಿನಲ್ಲಿನಾನು ಮನಸ್ಸಿನಿಂದಲೂ ಮಾತಿನಿಂದಲೂ ಎರಡೂ ಕೈಗಳಿಂದಲೂ, ಕಾಲುಗಳಿಂದಲೂ, ಹೊಟ್ಟೆಯ ನಿಮಿತ್ತವಾಗಿಯೂ ಜನನೇಂದ್ರಿಯ ನಿಮಿತ್ತವಾಗಿಯೂ ಮಾಡಿರಬಹುದಾದ ಪಾಪಗಳನ್ನು ಅಹರಭಿಮಾನಿದೇವತೆಯು ಕಳೆಯುವವನಾಗಲಿ ! ಎಂದು ಪ್ರಾರ್ಥಿಸಲಾಗಿದೆ. ಬೇರೊಬ್ಬರಿಗೆ ದ್ರೋಹಾದಿಗಳನ್ನು ಬಗೆಯುವದು, ಕೇಡನ್ನು ಹಾರೈಸುವದು–ಮುಂತಾದದ್ದು ಮಾನಸಿಕ ಪಾಪಗಳು. ಸುಳ್ಳು ಹೇಳುವದು, ಪರನಿಂದೆ ಮಾಡುವದು, ಕಾಡುಹರಟೆಹೊಡೆಯುವದು ಇತ್ಯಾದಿಗಳು ವಾಚಿಕಪಾಪಗಳು. ಪರರ ಸ್ವತ್ತನ್ನು ಕದಿಯುವದು, ಮೋಸದ ಬರವಣಿಗೆಗಳನ್ನು ಬರೆಯುವದು, ಕೆಟ್ಟಕೆಲಸಗಳನ್ನು ಎಂದರೆ ಜೂಜಾಡುವದು, ಪ್ರಾಣಿಗಳನ್ನು ಹಿಂಸಿಸುವದು, ದುರ್ದಾನಗಳನ್ನು ಸ್ವೀಕರಿಸುವದು–ಮುಂತಾದವೆಲ್ಲವೂ ಕೈಯಿಂದ ಮಾಡಬಹುದಾದ ಪಾಪಗಳು. ಪೂಜ್ಯಪದಾರ್ಥಗಳನ್ನು ಕಾಲಿನಿಂದ ಒದೆಯುವದು, ಕ್ಷುದ್ರಪ್ರಾಣಿಗಳನ್ನು ತುಳಿಯುವದು, ಹಿರಿಯರ ಮುಂದೆ ಕಾಲುಚಾಚಿ ಕೂಡುವದು–ಇತ್ಯಾದಿಗಳು ಪಾದಗಳಿಂದ ಮಾಡುವ ಪಾಪಗಳು. ಹೊಟ್ಟೆಯಪಾಡಿಗಾಗಿ ಮಾಡಬಾರದ್ದನ್ನು ಮಾಡುವದು, ನಾಲಗೆಯ ರುಚಿಗಾಗಿ ತಿನ್ನಬಾರದ್ದನ್ನು ತಿನ್ನುವದು–ಇತ್ಯಾದಿಗಳು ಹೊಟ್ಟೆಯ ನಿಮಿತ್ತವಾಗಿ ಮಾಡುವ ಪಾಪಗಳು. ಪರಸ್ತ್ರೀಗಮನ, ವೇಶ್ಯಾಗಮನಾದಿಗಳು ಶಿಶ್ನನಿಮಿತ್ತವಾಗಿ ಸಂಭವಿಸುವ ಪಾಪಗಳು. ಇವುಗಳು ಯಾವದೇ ಇರಲಿ, ಎಲ್ಲವನ್ನೂ ಅಹರಭಿಮಾನಿದೇವತೆಯು ಹೋಗಲಾಡಿಸಲಿ–ಎಂದು ಪ್ರಾರ್ಥಿಸಿದೆ. ಇನ್ನು ಇಲ್ಲಿನಿರ್ದೇಶಿಸದೆ ಉಳಿದಿರಬಹುದಾದ, ಕರಣತ್ರಯಗಳಿಂದ ಸಂಭವಿಸುವ ಯಾವ ಪಾಪವೇ ಆಗಲಿ, ಅವುಗಳನ್ನೆಲ್ಲ ನಾನು ಅಮೃತಮೂಲನೂ ಸತ್ಯಸ್ವರೂಪನೂ, ತೇಜೋಮಯನೂ ಆದ ಪರಮಾತ್ಮನಲ್ಲಿ ಹೋಮಮಾಡಿಬಿಡುವೆನು ಎಂದರೆ ಸುಟ್ಟುಬೂದಿಮಾಡಿಬಿಡುವೆನು. ಅದಕ್ಕಾಗಿ ಆಭಿಮಂತ್ರಿಸಿದ ಈ ಜಲವನ್ನು ನನ್ನ ಮುಖವೆಂಬ ಅಗ್ನಿಯಲ್ಲಿ ಸ್ವಾಹಾ ಎಂದರ್ಪಿಸುವೆನು–ಎಂದಭಿಪ್ರಾಯ. ಅಗ್ನಿ ದೇವನು ಮಾತಿನ ರೂಪದಿಂದ ಅಧ್ಯಾತ್ಮವಾಗಿ ಮುಖವನ್ನು ಪ್ರವೇಶಿಸಿರುತ್ತಾನೆಂದು ಶ್ರುತಿಯಲ್ಲಿದೆ. ಆದ್ದರಿಂದ ಜಲವನ್ನು ಅಭಿಮಂತ್ರಿಸಿ ಮುಖದಿಂದ ಪ್ರಾಶನಮಾಡಿ ಪಾಪಗಳನ್ನು ತೊಳೆದುಕೊಂಡು ಪರಿಶುದ್ಧನಾಗಬೇಕು–ಎಂದರ್ಥ.

**ಓಂ ॥ ಸೂರ್ಯಶ್ಚ ಮಾಮನ್ಯುಶ್ಚ ಮನ್ಯುಪತಯಶ್ಚ ಮನ್ಯು ಕೃತೇಭ್ಯಃ**
**ಪಾಪೇಭ್ಯೋ ರಕ್ಷಂತಾಮ್। ಯದ್ರಾತ್ರಿಯಾ ಪಾಪಮಕಾರ್ಷಮ್।**

**ಮನಸಾ ವಾಚಾ ಹಸ್ತಾಭ್ಯಾಮ್ । ಪದ್ಭ್ಯಾಮುದರೇಣ ಶಿಶ್ನಾ । ರಾತ್ರಿಸ್ತದವಲುಂಪತು । ಯತ್ಕಿಂಚ ದುರಿತಂ ಮಯಿ । ಇದಮಹಂ ಮಾಮಮೃತಯೋನೌ । ಸೂರ್ಯೇ ಜ್ಯೋತಿಷಿ ಜುಹೋಮಿ ಸ್ವಾಹಾ ॥**

ಈ ಮಂತ್ರವನ್ನು ಬೆಳಗಿನ ಸಂಧ್ಯಾವಂದನೆಯಲ್ಲಿ ಬಳಸಲಾಗುತ್ತದೆ. ಹಗಲು ಬರುವವೇಳೆಗೆ ಹಿಂದಿನ ರಾತ್ರಿಯು ಕಳೆದಿರುತ್ತದೆ. ಆ ರಾತ್ರಿಯಲ್ಲಿ ಮಾಡಿರಬಹುದಾದ ಪಾಪಗಳನ್ನು ಬೆಳಗ್ಗೆ ಸಂಧ್ಯಾವಂದನೆಕಾಲಕ್ಕೆ ಈ ಮಂತ್ರದಿಂದ ತೊಳೆದುಕೊಳ್ಳಬೇಕು. ಹೀಗೆ ಪ್ರತಿದಿನವೂ ಎರಡು ವೇಳೆಗಳಲ್ಲಿ ಸಂಧ್ಯಾವಂದನೆಯನ್ನು ಮಾಡುವದರಿಂದ ಆಯಾ ದಿನದ ಪಾಪಗಳನ್ನು ಆ ಕೂಡಲೆ ಕಳೆದುಕೊಂಡಂತಾಗಿ ಯಾವ ಶೇಷವೂ ಉಳಿಯಂತಾಗುವದು. ಮನಸ್ಸೂ ವಾಗಾದಿಕರಣಗಳೂ ನಿರ್ಮಲವಾಗುವವು. ಹಗಲಿನಲ್ಲಿ ಸೂರ್ಯನು ಎದುರಿಗೇ ಇರುವದರಿಂದ ಸೂರ್ಯನೂ ಉಳಿದ ಮನ್ಯುದೇವತೆಗಳೂ ಕೂಡಿ ಪಾಪಗಳಿಂದ ನನ್ನನ್ನು ಬಿಡಿಸಲಿ–ಎಂದು ಪ್ರಾರ್ಥಿಸಿದೆ. ಉಳಿದ ವಿವರಗಳನ್ನೆಲ್ಲ ಹಿಂದಿನ ಮಂತ್ರದಂತೆಯೇ ತಿಳಿಯಬೇಕು. ಸೂರ್ಯನ ಬೆಳಕು ಬಿದ್ದಲ್ಲೆಲ್ಲ ಶುದ್ಧಿಯಾಗುವದು. ಹಾಗೆಯೇ ಸೂರ್ಯನ ಧ್ಯಾನದಿಂದ ಒಳಗಿನ ಮನಸ್ಸು ಮಡಿಯಾಗುವದು. ಇಂಥ ಶುಚಿತ್ವವನ್ನು ದೇವತಾಸ್ಮರಣೆಯಿಂದಲೂ ಮಂತ್ರಪಠನದಿಂದಲೂ ಸಂಪಾದಿಸಿಕೊಂಡವನು ಮುಂದೆ ಬ್ರಹ್ಮವಿದ್ಯೆಗೆ ಅಧಿಕಾರಿಯಾಗುವನು.

**ಓಂ ॥ ಓಮಿತ್ಯೇಕಾಕ್ಷರಂ ಬ್ರಹ್ಮ । ಅಗ್ನಿರ್ದೇವತಾ ಬ್ರಹ್ಮ ಇತ್ಯಾರ್ಷಮ್ ।**
**ಗಾಯತ್ರಂ ಛಂದಂ ಪರಮಾತ್ಮಂ ಸರೂಪಮ್ ।**
**ಸಾಯುಜ್ಯಂ ವಿನಿಯೋಗಮ್ ॥**

ಇಲ್ಲಿಂದ ಮುಂದಿನ ಕೆಲವು ಮಂತ್ರಗಳು ಗಾಯತ್ರೀಜಪಕ್ಕೆ ಮುಂಚಿತವಾಗಿ ಪಠಿಸಲ್ಪಡುತ್ತವೆ. ಇವುಗಳಲ್ಲಿ ಗಾಯತ್ರೀದೇವಿಯ ವಿವರ–ಮತ್ತು ಮಂತ್ರದ ಋಷಿದೇವತಾಛಂದಸ್ಸುಗಳಿವೆ. ಧ್ಯಾನವು ದೇವತಾವಾಹನವೂ ಇದೆ. ಆದ್ದರಿಂದ ಗಾಯತ್ರೀಮಂತ್ರಜಪವನ್ನು ಮಾಡುವವನು ಇದನ್ನು ಪೂರ್ವಭಾವಿಯಾಗಿ ಪಠಿಸಬೇಕು. ವೇದಗಳ ಸಾರವು ಗಾಯತ್ರೀಮಂತ್ರವು. ಅದರ ಸಾರವು ವ್ಯಾಹೃತಿಗಳು. ವ್ಯಾಹೃತಿಗಳ ಸಾರವೇ ಓಂಕಾರವು. ಓಂ ಎಂಬುದೇ ಪರಬ್ರಹ್ಮವು. ಈ ಏಕಾಕ್ಷರವು ಬ್ರಹ್ಮಕ್ಕೆ ಆಲಂಬನವೂ ಪ್ರತೀಕವೂ ಆಗಿರುತ್ತದೆ. ಪ್ರತೀಕವೆಂದರೆ ಪ್ರತಿನಿಧಿಯು. ಬ್ರಹ್ಮಚಿಂತಕನಿಗೆ ಓಂಕಾರವನ್ನು ಮೊದಲು ಧ್ಯಾನಿಸುವಂತೆಯೂ ಓಂ ಎಂಬುದನ್ನೇ ಬ್ರಹ್ಮವೆಂದು ಪ್ರಾರಂಭದಲ್ಲಿ ಭಾವಿಸುವಂತೆಯೂ ಸೂಚಿಸಿರುತ್ತದೆ. ಆದ್ದರಿಂದ ಇಲ್ಲಿ ಓಂ ಎಂಬುದು

ಏಕಾಕ್ಷರವಾದ ಪರಬ್ರಹ್ಮವು–ಎಂದು ತಿಳಿಸಿರುತ್ತದೆ. ಈ ಓಂ ಎಂಬುದನ್ನೇ ಮಂತ್ರವಾಗಿಯೂ ತಿಳಿಯಬೇಕು. ಈ ಮಂತ್ರಕ್ಕೆ ಅಗ್ನಿಯು ದೇವತೆಯು . ಅಗ್ನಿ ಶಬ್ದಕ್ಕೆ ಇಲ್ಲಿ ರೂಢ್ಯರ್ಥವನ್ನು ಕೈಬಿಟ್ಟು ಯೋಗಿಕಾರ್ಥವನ್ನು ತೆಗೆದುಕೊಳ್ಳಬೇಕು. ಆಗ **'ಅಂಗತಿ ಇತಿ ಅಗ್ನಿಃ'**–ಎಂದರೆ ಸರ್ವವನ್ನೂ ವ್ಯಾಪಿಸಿರುವ ತತ್ತ್ವವು ಎಂದರ್ಥವಾಗುವದು. ಈ ತತ್ತ್ವವೇ ದೇವತೆಯು. **'ಬ್ರಹ್ಮ ಇತ್ಯಾರ್ಷಮ್'** ಎಂದರೆ ಬ್ರಹ್ಮನೇ ಋಷಿಯು ಎಂದರ್ಥ. ಒಟ್ಟಿನಲ್ಲಿ ಮಂತ್ರವೂ ಬ್ರಹ್ಮವೇ ಋಷಿಯೂ ಬ್ರಹ್ಮವೇ; ದೇವತೆಯೂ ಬ್ರಹ್ಮವೇ–ಎಂದಾಯಿತು. ಇಂಥ ಮಂತ್ರಕ್ಕೆ ಛಂದಸ್ಸು ಗಾಯತ್ರಿಯೆನಿಸುವದು. ಈ ಮಂತ್ರದಲ್ಲಿ ಒಂದೇ ಅಕ್ಷರವಿದ್ದರೂ ಉಳಿದ ಗಾಯತ್ರೀ ಮಂತ್ರಗಳಲ್ಲಿ ತಿಳಿಸಿರುವ ವಿವರಗಳೆಲ್ಲವೂ ಇದೇ ಅಕ್ಷರದ ವಿಸ್ತಾರವಾಗಿರುತ್ತದೆ. ಆದ್ದರಿಂದ ಗಾಯತ್ರಿ ಛಂದಸ್ಕವಾಗಿದೆ. ವಿನಿಯೋಗ–ಪ್ರಯೋಜನವೆಂದರೆ ಮೋಕ್ಷಪ್ರಾಪ್ತಿಯು. ಅದನ್ನು ಸಾಯುಜ್ಯವೆನ್ನುವರು. ಅದು ಪರಮಾತ್ಮನೇ ಆಗಿರುವದು. ಮತ್ತು **ಸರೂಪಂ**– ಸರ್ವಜಗತ್ತಿಗೂ ಸಮಾನವಾದ, ಸರ್ವಜಗತ್ತನ್ನೂ ವ್ಯಾಪಿಸಿರುವ ಚಿಚ್ಛಕ್ತಿರೂಪವಾಗಿರುವದು. ಹೀಗೆ ಸಾಧಕನು ಮೊದಲು ಎಲ್ಲವನ್ನೂ ಬ್ರಹ್ಮಮಯವಾಗಿ ಧ್ಯಾನಿಸಬೇಕು.

**ಓಂ ॥ ಆಯಾತು ವರದಾ ದೇವೀ ಅಕ್ಷರಂ ಬ್ರಹ್ಮ ಸಂಮಿತಮ್ ।**
**ಗಾಯತ್ರೀಂ ಛಂದಸಾಂ ಮಾತೇದಂ ಬ್ರಹ್ಮ ಜುಷಸ್ವ ಮೇ ॥**
**ಯದಹ್ನಾತ್ ಕುರುತೇ ಪಾಪಮ ತದಹ್ನಾತ್ ಪ್ರತಿಮುಚ್ಯತೇ ।**
**ಯದ್ರಾತ್ರಿಯಾತ್ ಕುರುತೇ ಪಾಪಂ ತದ್ರಾತ್ರಿಯಾತ್ ಪ್ರತಿಮುಚ್ಯತೇ॥**
**ಸರ್ವವರ್ಣೇ ಮಹಾದೇವಿ ಸಂಧ್ಯಾವಿದ್ಯೇ ಸರಸ್ವತಿ ॥**

ಅಭೀಷ್ಟಪ್ರದಳಾದ ಗಾಯತ್ರೀಚ್ಛಂದೋಭಿಮಾನಿನಿಯಾದ ದೇವಿಯು ವಿನಾಶರಹಿತವೂ ವೇದಾಂತಪ್ರಮಾಣದಿಂದ ನಿಶ್ಚಿತವಾದ್ದರಿಂದ ಸಂಮಿತವೆನಿಸಿರುವದೂ ಆಗಿರುವ ಜಗತ್ಕಾರಣವಾದ ಬ್ರಹ್ಮತತ್ತ್ವವನ್ನು ಕುರಿತು ಆಯಾತು ಬರುವವಳಾಗಲಿ; ಎಂದರೆ ನಮಗೆ ಬ್ರಹ್ಮತತ್ತ್ವವನ್ನು ಬೋಧಿಸುವದಕ್ಕಾಗಿ ಸಮೀಪಕ್ಕೆ ಬರುವವಳಾಗಲಿ– ಎಂದಭಿಪ್ರಾಯ. ತ್ರಿಷ್ಟುಬಾದಿ ಎಲ್ಲಾ ಛಂದಸ್ಸುಗಳಿಗೂ ವೇದಗಳಿಗೂ ತಾಯಿಯೆನಿಸಿರುವ ಈಕೆಯು ನನಗೆ ವೇದಾಂತಪ್ರತಿಪಾದ್ಯವಾದ ತತ್ತ್ವವನ್ನು ಉಪದೇಶಮಾಡಲಿ–ಎಂದು ಕೇಳಿಕೊಳ್ಳಲಾಗಿದೆ. ಮುಂದುವರೆದು ಪ್ರಾರ್ಥಿಸುವದೇನೆಂದರೆ: ''ಸಂಧ್ಯಾಸಮಯಗಳಲ್ಲಿ ಉಪಾಸಕರಿಗೆ ಪ್ರಸನ್ನಳಾಗಿ ಅನುಗ್ರಹಿಸುವ ವಿದ್ಯಾಸ್ವರೂಪಳೆ, ಎಲೌ ಸರಸ್ವತಿಯೆ, ನೀನು ಭಕ್ತನಾದ ನನ್ನ–ಆಯಾ ಹಗಲೂ ಹಾಗೂ ರಾತ್ರಿಗಳಲ್ಲಿ ನಾನು ಮಾಡಿರಬಹುದಾದ ಪಾಪಗಳೆಲ್ಲವನ್ನೂ ಪರಿಹಾರಮಾಡು. ಅಂಥ ಪಾಪಗಳಿಂದ ವಿಮುಕ್ತನನ್ನಾಗಿ ಮಾಡು''

ಎಂದು ಬೇಡಿಕೊಂಡಿದೆ. ಇಲ್ಲಿರುವ ಕ್ರಿಯಾಪದಗಳ ಪುರುಷವಚನಗಳನ್ನು ಅರ್ಥಾನುಗುಣವಾಗಿ ಹೊಂದಿಸಿ ಆಯಾ ಪ್ರಯೋಗಗಳ ವೈದಿಕ ಪ್ರಯೋಗಗಳೆಂದು ಗೌರವಿಸಲಾಗಿದೆ. ಹೀಗೆ ಗಾಯತ್ರೀಮಾತೆಯನ್ನು ಪ್ರಾರ್ಥಿಸಿದ ಅನಂತರ ಸಾಧಕನು ಮತ್ತೆ ಆಕೆಯನ್ನು ಈ ಕೆಳಗೆ ಕಂಡಂತೆ ಸ್ತುತಿಸುತ್ತಾನೆ. ಕೇಳಿರಿ.

**ಓಂ ॥ ಓಜೋಽಸಿ ಸಹೋಽಸಿ ಬಲಮಸಿ ಭ್ರಾಜೋಽಸಿ ದೇವಾನಾಂ ಧಾಮ ನಾಮಾಸಿ ವಿಶ್ವಮಸಿ ವಿಶ್ವಾಯುಃ ಸರ್ವಮಸಿ ಸರ್ವಾಯುರಭಿಭೂರೋಂ ಗಾಯತ್ರೀಮಾವಾಹಯಾಮಿ ಸಾವಿತ್ರೀಮಾವಾಹಯಾಮಿ ಸರಸ್ವತೀಮಾವಾಹಯಾಮಿ ಚ್ಛಂದರ್ಷೀನಾವಾಹಯಾಮಿ ಶ್ರಿಯಮಾವಾಹಯಾಮಿ ಗಾಯತ್ರಿಯಾ ಗಾಯತ್ರೀಚ್ಛಂದೋ ವಿಶ್ವಾಮಿತ್ರ ಋಷಿಸ್ಸವಿತಾ ದೇವತಾಽಗ್ನಿರ್ಮುಖಂ ಬ್ರಹ್ಮಾ ಶಿರೋ ವಿಷ್ಣುರ್ಹೃದಯಗ್ಂ ರುದ್ರಶ್ಶಿಖಾ ಪೃಥಿವೀ ಯೋನಿಃ ಪ್ರಾಣಾಪಾನವ್ಯಾನೋದಾನ ಸಮಾನಾ ಸಪ್ರಾಣಾ ಶ್ವೇತವರ್ಣಾ ಸಾಂಖ್ಯಾಯನಸಗೋತ್ರಾ ಗಾಯತ್ರೀ ಚತುರ್ವಿಂಶತ್ಯಕ್ಷರಾ ತ್ರಿಪದಾ ಷಟ್‌ಕುಕ್ಷಿಃ ಪಂಚ ಶೀರ್ಷೋಪನಯನೇ ವಿನಿಯೋಗಃ ॥**

''ಎಲೌ ಗಾಯತ್ರಿಯೆ, ನೀನು ಶಾರೀರಕಬಲಕಾರಣವಾದ ಎಂಟು ಧಾತುಗಳ ರೂಪವಾದ ಓಜೋರೂಪಳಾಗಿರುವೆ. ಹಾಗೆಯೇ ಶತ್ರುಗಳನ್ನು ಹಿಮ್ಮೆಟ್ಟಿಸುವಂಥ ಸಹನಶಕ್ತಿಯಾಗಿರುವೆ. ಇನ್ನು ಬಲವೆಂದರೆ ವ್ಯವಹಾರಸಾಮರ್ಥ್ಯರೂಪವಾದ ಶಕ್ತಿಯು. ಅದೂ ನೀನೇ ಆಗಿರುವೆ–ಎಂದರ್ಥ. ಭ್ರಾಜಸ್ಸು ಎಂದರೆ ದೀಪ್ತಿಯು–ಪ್ರಕಾಶವು ಎಂದರ್ಥ. ಅದೂ ದೇವಿಯೇ ಎಂದು ತಿಳಿಯಬೇಕು. ಅಗ್ನಿ, ಇಂದ್ರ, ವಾಯು–ಮೊದಲಾದ ದೇವತೆಗಳ ಸ್ಥಾನವು ಯಾವ ತೇಜಸ್ಸಿನಿಂದ ಹೊಳೆಯುತ್ತಿವೆಯೋ ಅಂಥ ಬೆಳಕೂ ನೀನೇ ಆಗಿರುವೆ. ಹೆಚ್ಚೇನು? ನೀನು ಜಗತ್ತೆಲ್ಲವೂ ಆಗಿರುವೆ. ಎಲ್ಲರ ಆಯುಷ್ಯರೂಪಳಾಗಿರುವೆ ಎಲ್ಲವೂ ಆಗಿರುವೆ. ಹಾಗೂ ಎಲ್ಲಾ ಜೀವಿಗಳ ಸಂಪೂರ್ಣಾಯುಷ್ಯರೂಪಳಾಗಿರುವೆ. 'ಅಭಿಭೂಃ' ಎಂಬಿದೂ ನಿನ್ನ ನಾಮವೇ. ಏಕೆಂದರೆ ಎಲ್ಲಾ ರೀತಿಯ ಪಾಪಗಳನ್ನು ತಿರಸ್ಕರಿಸಿ ನೀನು ಉನ್ನತಳಾಗಿರುವೆ. ಓಂಕಾರರೂಪಳಾಗಿರುವೆ. ಮತ್ತು ಓಂಕಾರಪ್ರತಿಪಾದ್ಯವಾದ ಪರಬ್ರಹ್ಮರೂಪಳೇ ಆಗಿರುವೆ. ಇಂಥ ಗಾಯತ್ರಿಯನ್ನು ನಾನು ಆಹ್ವಾನಿಸುವೆನು. ಹಾಗೂ ನನ್ನಲ್ಲಿಯೇ ಇರಿಸಿಕೊಳ್ಳುವೆನು; ಆವಾಹಿಸಿಕೊಳ್ಳುವೆನು'' ಎಂದು ಸ್ತುತಿಸಲಾಗಿದೆ.

ಈಗ **ಸಾವಿತ್ರೀಮಾವಾಹಯಾಮಿ**–ಎಂಬಲ್ಲಿಂದ ಮುಂದಿನ ಭಾಗವನ್ನು ವ್ಯಾಖ್ಯಾನಮಾಡಲಾಗುವದು. ಈ ಭಾಗವನ್ನು ವೇದಭಾಷ್ಯಕಾರರಾದ ಸಾಯಣಾಚಾರ್ಯರು ವಿವರಿಸಿರುವದಿಲ್ಲ. ಅರ್ಥವು ಸ್ಪಷ್ಟವಾಗಿದೆ–ಎಂದು ಹೇಳಿ ಕೈಬಿಟ್ಟಿದ್ದಾರೆ. ಆದರೆ **'ನಾರಾಯಣೋಪನಿಷತ್ ಪ್ರಕಾಶ'** ಎಂಬ ವ್ಯಾಖ್ಯಾನದಲ್ಲಿ ವಿವರಣೆ ಇದೆ. ಅದರಂತೆ ಈಗ ಮುಂದುವರಿಸಲಾಗುವದು. ಸವಿತಾ ಎಂದರೆ ಬ್ರಹ್ಮನು. ಅವನನ್ನು ಸಾಕ್ಷಾತ್ಕರಿಸಿಕೊಳ್ಳಲು ದ್ವಾರಳಾಗಿರುವವಳು **ಸಾವಿತ್ರಿ**ಯೆನಿಸುವಳು. ಅಂಥ ದೇವಿಯನ್ನು ಆಹ್ವಾನಿಸುವೆನು. ಬ್ರಹ್ಮವೆಂಬ ಜಲಧಾರೆಯನ್ನೇ ಶರೀರವಾಗಿ ಹೊಂದಿ ಯಾವಳು ನದಿಯಾಗಿ ಹರಿಯುವಳೋ ಮತ್ತು ವೇದಗಳೆಂಬ ಸರೋವರದಲ್ಲಿ ಜನಿಸಿ ತನ್ಮಯಳಾಗಿಯೇ ಯಾವಳು ಇದ್ದುಕೊಂಡಿರುವಳೋ ಆಕೆಯೇ **ಸರಸ್ವತಿಯು**. ಅಂಥವಳನ್ನು ಆವಾಹಿಸುತ್ತೇನೆ. ಇನ್ನು ವೇದಗಳನ್ನು ಕಂಡುಹಿಡಿದಿರುವ ಋಷಿಗಳೇ **ಛಂದರ್ಷಿ**ಗಳು. ಆಯಾ ಋಕ್ಕುಗಳನ್ನು ಕಂಡು ಹಿಡಿದಿರುವ ಋಷಿಗಳ ಸ್ಮರಣಪೂರ್ವಕವಾಗಿಯೇ ಆಯಾ ಮಂತ್ರಗಳನ್ನು ಪಠಿಸಬೇಕೆಂದು ವಿಧಿಸಿದೆ. ಹೀಗೆ ಛಂದರ್ಷಿಗಳು ಸಹ ಬ್ರಹ್ಮಪ್ರಾಪ್ತಿಗೆ ಕಾರಣರಾಗಿರುತ್ತಾರೆ. ಅವರುಗಳನ್ನೂ ನನ್ನಲ್ಲಿಗೆ ಬರಮಾಡಿಕೊಳ್ಳುವೆನು–ಎಂದರ್ಥ. ಇನ್ನು ಶ್ರೀ ಎಂದರೆ **ಋಗ್ಯಜುಸ್ಸಾಮ**ಗಳೆಂದೇ ಅರ್ಥ. ಅಂಥ ವೇದಗಳ ಮಾತೆಯಾದ ಶ್ರೀದೇವಿಯೆನಿಸಿರುವ ಗಾಯತ್ರಿಯನ್ನು ಆವಾಹಿಸುವೆನು–ಎಂದಭಿಪ್ರಾಯ. ಈ ರೀತಿಯಾಗಿ ಗಾಯತ್ರಿಯೊಬ್ಬಳನ್ನು ಕರೆದು ಹೃದಯದಲ್ಲಿ ಧ್ಯಾನಿಸುವದರಿಂದ ಸರ್ವವೇದಗಳನ್ನೂ ಸರ್ವಋಷಿಗಳನ್ನೂ ಸರ್ವದೇವತೆಗಳನ್ನೂ ಕರೆದು ಆರಾಧಿಸಿದಂತಾಗುವದು. ಇದೇ **ಗಾಯತ್ರೀ ಮಹಿಮೆಯು**.

ಭಗವತೀಗಾಯತ್ರಿಯ ಮಂತ್ರವು ಋಷಿದೇವತಾಛಂದಸ್ಸುಗಳೇ ಮೊದಲಾದ ಅಂಗೋಪಾಂಗಗಳಿಂದ ಕೂಡಿರುವದರಿಂದ ಜಪಕ್ಕೆ ಮುಂಚೆ ಅವುಗಳನ್ನು ಚಿಂತಿಸಲಾಗುವದು. ಈ ಮಂತ್ರದ ಅಧಿದೇವತೆಯ ಹೆಸರೂ ಛಂದಸ್ಸಿನ ಹೆಸರೂ ಎರಡೂ **'ಗಾಯತ್ರೀ'** ಎಂದೇ ಇದೆ. ಒಬ್ಬ ಯಜಮಾನನ ಮಗಳ ಹೆಸರೂ ಸೊಸೆಯ ಹೆಸರೂ ಎರಡೂ ಒಂದೇ ಇರುವದೂ ಉಂಟಷ್ಟೆ? ಹಾಗೆಯೇ ಇಲ್ಲಿಯೂ ತಿಳಿಯಬೇಕು. ಆರು ಅಕ್ಷರಗಳ ನಾಲ್ಕು ಪಾದಗಳುಳ್ಳ ಋಕ್ಕುಗಳನ್ನೆಲ್ಲ ಗಾಯತ್ರೀ ಛಂದಸ್ಸಿನವುಗಳೆಂದು ಗೊತ್ತುಪಡಿಸಲಾಗಿದೆ. ಅನಂತರ ಈ ಮಂತ್ರವನ್ನು ಕಂಡುಹಿಡಿದ ಋಷಿಯ ಹೆಸರನ್ನು ವಿಶ್ವಾಮಿತ್ರನೆಂದು ಸಂಬೋಧಿಸಲಾಗಿದೆ. ದೇವತೆಯು ಸವಿತೃ ಎಂಬ ಹೆಸರಿನ ಪರಮಾತ್ಮನು. ಸರ್ವದೇವಾತ್ಮಕನಾದ ಭಗವಂತನನ್ನು ಸ್ತ್ರೀ–ಪುಂವಾಚಕವಾದ ಯಾವ

ಶಬ್ದಗಳಿಂದಲಾದರೂ ಕರೆಯಬಹುದು. ಆದ್ದರಿಂದ ಪರಮಾತ್ಮನನ್ನು ಗಾಯತ್ರೀ ಎಂದೇ ಇಲ್ಲಿ ಹೆಸರಿಸಿದೆ. ಇದೇ ದೇವತೆಯು. ಈ ದೇವತೆಗೆ ಮುಖವು ಅಗ್ನಿಯು. ಬ್ರಹ್ಮನು ಎಂದರೆ ಚತುರ್ಮುಖನು ತಲೆಯು. ವಿಷ್ಣುವು ಹೃದಯಸ್ಥಾನೀಯನು. ತಲೆಗೂದಲೂ ರುದ್ರನು. ಹೇಗೆ ತಲೆಯಮೇಲಿನ ಕೂದಲು (ಇದನ್ನು ಜುಟ್ಟು ಎನ್ನುವರು) ಎಲ್ಲಕ್ಕಿಂತಲೂ ಎತ್ತರವಾಗಿ ಮಿಗಿಲಾಗಿರುವದೋ ಹಾಗೆಯೇ ರುದ್ರನು ಪ್ರಲಯಕಾರಣನಾದ್ದರಿಂದ ಎಲ್ಲರಿಗಿಂತ ಮಿಗಿಲಾಗಿರುವನು. ಅವನೇ ಗಾಯತ್ರಿಯ ಶಿಖೆಯೆನಿಸಿರುವನು. ಶಿಖೆಯೂ ಯಜ್ಞೋಪವೀತವೂ ಬ್ರಾಹ್ಮಣನಿಗೆ ಅಸಾಧಾರಣವಾದ ಗುರುತುಗಳು. ಇರಲಿ. ಪೃಥಿವಿಯೇ ಗಾಯತ್ರಿಗೆ ಯೋನಿಯೆನಿಸಿರುವದು. ಭೂಮಿಯು ಎಲ್ಲಾ ವಿಧವಾದ ಸ್ಥಾವರಜಂಗಮಪ್ರಾಣಿಗಳನ್ನು ಹಡೆಯುವ ತಾಯಿಯಷ್ಟೆ? ಆದ್ದರಿಂದ ಹಾಗೆ ವರ್ಣಿಸಿದೆ. ಇನ್ನು ಪ್ರಸಿದ್ಧವಾದ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನಗಳೆಂಬ ಐದೂ ಗಾಯತ್ರಿಯ ಪ್ರಾಣಗಳೆನಿಸಿರುವವು. ಆದ್ದರಿಂದಲೇ ಆಕೆಯು ಸಪ್ರಾಣಳು. ಮತ್ತು ವಾಕ್ಕೇ ಮುಂತಾದ ಐದು ಕರ್ಮೇಂದ್ರಿಯಗಳ ಮೂಲಕ ವ್ಯಾಪಾರಮಾಡುವವಳಾದ್ದರಿಂದಲೂ ಸಪ್ರಾಣಳೆನಿಸುವಳು. ಸತ್ತ್ವಗುಣಪ್ರಧಾನಳಾದ್ದರಿಂದ ಶ್ವೇತ–ಎಂದರೆ ಬಿಳುಪು ಬಣ್ಣದವಳು. ಸಾಂಖ್ಯರೆಂದರೆ ಬ್ರಹ್ಮವಿದರು. ಅವರುಗಳಿಂದ ಪಡೆಯಲ್ಪಡುವವನು ಸಾಂಖ್ಯಾಯನನು. ಅವನೇ ಪರಮಾತ್ಮನು. ಅವನೊಡನೆ ಒಂದಾದ ಎಂದರೆ ಅದೇ ಗೋತ್ರವಾಗಿ ಉಳ್ಳವನು ಸಾಂಖ್ಯಾಯನಸಗೋತ್ರಳು. ಹೀಗೆ ಗಾಯತ್ರೀದೇವಿಯು ಶೀರ್ಷಾದ್ಯವಯವಗಳುಳ್ಳವಳಾಗಿರುವಳು.

ಹೀಗೆ ದೇವತಾರೂಪದಿಂದ ಸ್ತುತಿಸಲ್ಪಟ್ಟ ಗಾಯತ್ರಿಯು ಈಗ ಮಂತ್ರರೂಪಳಾಗಿ ಸ್ತುತಿಸಲ್ಪಡುವಳು. ಮಂತ್ರರೂಪಳಾದ ಈಕೆಯು 24 ಅಕ್ಷರಗಳುಳ್ಳವಳು. 8 ಅಕ್ಷರಗಳಿಗೆ ಒಂದೊಂದರಂತೆ ಮೂರು ಪಾದಗಳುಳ್ಳವಳು. ಸಾಮಾನ್ಯವಾಗಿ ಗಾಯತ್ರೀಛಂದಸ್ಸಿನ ಮಂತ್ರಗಳೆಲ್ಲವೂ ಮೂರು ಪಾದಗಳುಳ್ಳವಾಗಿರುವವು. ಕೆಲವು ಕಡೆಗಳಲ್ಲಿ ಗಾಯತ್ರಿಯನ್ನು ನಾಲ್ಕು ಪಾದಗಳುಳ್ಳವಳು ಎಂದು ಸ್ತುತಿಸಿರುತ್ತದೆ. ಆಗ ಅನುಷ್ಟುಪ್ ಛಂದಸ್ಸಿನ ಗಾಯತ್ರೀಮಂತ್ರವನ್ನು ಪರಾಮರ್ಶಿಸಬೇಕು. ಅದು ಕೂಡ ವೇದಪ್ರಸಿದ್ಧವಾಗಿದೆ. ಅದು ಹೀಗಿದೆ:

**ತತ್ಸವಿತುರ್ವೃಣೀಮಹೇ । ವಯಂ ದೇವಸ್ಯ ಭೋಜನಮ್ ।**
**ಶ್ರೇಷ್ಠಗ್ಂ ಸರ್ವಧಾತಮಮ್ । ತುರಂ ಭಗಸ್ಯ ಧೀಮಹಿ ॥**

ಈ ಮಂತ್ರವನ್ನು ಸಾವಿತ್ರೀ ಎಂದೂ ಕರೆಯುವರು. ಇದು ಚತುಷ್ಪಾದ್ ಗಾಯತ್ರಿಯೆಂದು ಪ್ರಸಿದ್ಧವಾಗಿದೆ. ತೈತ್ತಿರೀಯಾರಣ್ಯಕದಲ್ಲಿರುವ ಈ ಮಂತ್ರದ ಹಿಂದಿನ

ಮಂತ್ರವೇ ತ್ರಿಪದಗಾಯತ್ರಿಯಾದ 'ತತ್ಸವಿತುಃ' ಎಂಬಿದು. ಆದ್ದರಿಂದ ಗಾಯತ್ರಿಯು ತ್ರಿಪದಳು ಎಂಬ ವರ್ಣನೆ ಸಮಂಜಸವೇ ಆಗಿದೆ. **ಷಟ್‌ಕುಕ್ಷಿ.** ಎಂದರೆ ಆರು ವೇದಾಂಗಗಳಾದ **ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ , ಜ್ಯೋತಿಷ, ಕಲ್ಪ**– ಎಂಬಿವುಗಳು. ಇವುಗಳೇ ಹೊಟ್ಟೆಯ ಸ್ಥಾನದಲ್ಲಿರುವದರಿಂದ ಗಾಯತ್ರಿಯು **ಷಟ್‌ಕುಕ್ಷಿ**ಯೆನಿಸಿರುವಳು. ಇನ್ನು ಐದು ತಲೆಗಳೆಂದರೆ ನಾಲ್ಕು ವೇದಗಳು, ಇತಿಹಾಸಪುರಾಣಗಳೆಂಬ ಐದನೆಯ ವೇದವೂ ಸೇರಿದರೆ ಪಂಚಶೀರ್ಷಳೆನಿಸುವಳು. ಹೀಗೆ ಗಾಯತ್ರಿಯನ್ನು ಸಾಂಗೋಪಾಂಗವಾಗಿ ಧ್ಯಾನಮಾಡಿ ಅನಂತರ ತಾನು ಕೂಡ ಹನ್ನೆರಡು ಸಹಸ್ರಸಂಖ್ಯಾಕವಾಗಿ ಗಾಯತ್ರೀ ಮಂತ್ರವನ್ನು ಜಪಿಸಿ ಅನಂತರ ವಟುವಿಗೆ ಉಪನಯನ ಮಾಡಬೇಕು. ಹೀಗೆ ಮಾಡುವ ಕ್ರಮವನ್ನು ಗಾಯತ್ರಿಯ ವಿನಿಯೋಗಗಳಲ್ಲಿ ಒಂದೆನ್ನುವರು; ಇದೇ ರೀತಿಯಾಗಿ ಗಾಯತ್ರೀಮಂತ್ರವನ್ನು ಬೇರೆಬೇರೆಯ ಉದ್ದೇಶಗಳಿಗೂ ವಿನಿಯೋಗ ಮಾಡಬಹುದಾಗಿದೆ. ವಟುವಿನ ಉಪನಯನಕ್ಕಾಗಿ ವಿನಿಯೋಗಿಸುವದನ್ನು ಇಲ್ಲಿ ಪರಾಮರ್ಶಿಸಲಾಗಿದೆ.

ಈಗ ಆವಾಹನೆಯ ಅನಂತರ ಪ್ರಾಣಾಯಾಮವನ್ನು ಕೈಗೊಂಡು ಆಮೇಲೆ ಜಪವನ್ನು ಮಾಡಬೇಕಾಗಿರುವದರಿಂದ ಪ್ರಾಣಾಯಾಮಮಂತ್ರವನ್ನು ತಿಳಿಸಲಾಗುವದು.

**ಓಂ ॥ ಭೂಃ । ಓಂ ಭುವಃ । ಓಗ್ಂ ಸುವಃ । ಓಂ ಮಹಃ । ಓಂ ಜನಃ। ಓಂ ತಪಃ । ಓಗ್ಂ ಸತ್ಯಮ್ । ಓಂ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ । ಓಮಾಪೋ ಜ್ಯೋತೀರಸೋಽಮೃತಂ ಬ್ರಹ್ಮ ಭೂರ್ಭುವಸ್ಸುವರೋಮ್ ॥**

ಭೂಃ ಎಂದಾರಂಭಿಸಿ ಸತ್ಯಂ–ಎಂಬಿದವರೆಗಿನ ಏಳು ಪದಗಳನ್ನು ವ್ಯಾಹೃತಿಗಳೆಂದು ಕರೆಯುವರು. ಇವು ಏಳೂ ಏಳು ಲೋಕಗಳನ್ನು ತಿಳಿಸುತ್ತವೆ. ಭೂಲೋಕವು ಪ್ರಸಿದ್ಧವಾಗಿದೆ. ಇದರಿಂದ ಮೇಲಕ್ಕಿರುವದೇ ಭುವರ್ಲೋಕವು ಅಥವಾ ಅಂತರಿಕ್ಷಲೋಕವು. ಅದಕ್ಕಿಂತ ಮೇಲಿರುವದು ಸುವರ್ಲೋಕ ಅಥವಾ ಸ್ವರ್ಗಲೋಕವು. ಹೀಗೆಯೇ ಮೇಲುಮೇಲಿನ ಲೋಕಗಳನ್ನು ತಿಳಿದಾಗ ಕಡೆಯಲ್ಲಿರುವ ಸತ್ಯಲೋಕವೇ ಬ್ರಹ್ಮಲೋಕವು. ಈ ಏಳು ಲೋಕಗಳನ್ನು ವ್ಯಾಹೃತಿಗಳೆಂಬ ಏಳು **ಭೂಃ** ಎಂಬ ಪದಗಳಿಂದ ನಿರ್ದೇಶಿಸಲಾಗಿದೆ. ಇವುಗಳಲ್ಲಿ ಪ್ರತಿಯೊಂದಕ್ಕೂ **ಓಂ**ಕಾರವನ್ನು ಜೋಡಿಸಿರುವದರ ಉದ್ದೇಶವೇನೆಂದರೆ: ಪ್ರಣವ ಪ್ರತಿಪಾದ್ಯವಾದ ಯಾವ ಬ್ರಹ್ಮವಿದೆಯೋ ಅದರ ಸ್ವರೂಪವಾಗಿಯೇ ಈ ಏಳು ಲೋಕಗಳೂ

ಇವೆ–ಎಂದಭಿಪ್ರಾಯದಿಂದ. ಬ್ರಹ್ಮವನ್ನು ಬಿಟ್ಟು ಯಾವ ಲೋಕಗಳು ಇರುವದಿಲ್ಲ, ಮತ್ತು ಭೂಮಿಗಿಂತ ಮೇಲಿನ ಲೋಕಗಳೆಲ್ಲವೂ ಬ್ರಹ್ಮವನ್ನು ಪಡೆಯಲು ದ್ವಾರಗಳಾಗಿವೆ. ಈ ಏಳು ಲೋಕಗಳನ್ನೂ ಸಾಧಕನು ತನ್ನ ಕರ್ಮೋಪಾಸನೆಗಳ ಬಲದಿಂದ ಒಂದೊಂದಾಗಿ ಏರಿ ಕಡೆಯಲ್ಲಿ ಸತ್ಯಲೋಕವನ್ನೂ ಮೀರಿದ ಪರಬ್ರಹ್ಮಪದವಿಯನ್ನು ಹೊಂದಬೇಕಾಗಿದೆ. ಅದೇ ಗಾಯತ್ರೀ ಮಂತ್ರಪ್ರತಿಪಾದ್ಯವಾದ ಪದವಿಯು. ಆ ಸ್ಥಾನವು ಶಾಶ್ವತವು. ಪುನರಾವೃತ್ತಿಯಿಲ್ಲದ್ದು. ಅದನ್ನು ಮೋಕ್ಷವೆನ್ನುವರು. ಅದನ್ನು 'ಸವಿತುರ್ವರೇಣ್ಯಂ.....'' ಎಂಬ ಮಂತ್ರದಿಂದ ಈಗ ಚಿಂತಿಸಲಾಗುತ್ತದೆ. ಆ ಮಂತ್ರದ ಅಭಿಪ್ರಾಯವನ್ನು ಮನನಮಾಡೋಣ.

''ಸವಿತೃದೇವನ ವರಣೀಯವಾದ ಯಾವ ತೇಜಸ್ಸಿದೆಯೋ ಅದನ್ನು ನಾವು ಧ್ಯಾನಮಾಡುವೆವು. ಯಾವ ಆ ಆತನು ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಿಸುವವನಾಗಲಿ'' ಎಂದು ಗಾಯತ್ರೀಮಂತ್ರದ ಭಾವಾರ್ಥ. ಇದನ್ನು ಎಷ್ಟುಬೇಕಾದರೂ ವಿಸ್ತರಿಸಿ ವ್ಯಾಖ್ಯಾನಮಾಡಬಹುದು. ಮುಖ್ಯವಾಗಿ ಮನುಷ್ಯನಿಗೆ ಬುದ್ಧಿಯೇ ಬಂಡವಾಳವು. ಅದು ಸರಿಯಾಗಿದ್ದಲ್ಲಿ ಅದರ ಬಲದಿಂದ ಏನನ್ನಾದರೂ ಸಂಪಾದಿಸಿಬಿಡಬಹುದು. ಅದು ನೆಟ್ಟಗಿಲ್ಲದಿದ್ದರೆ ಮಾತ್ರ ಜನರು ಅಂಥವನನ್ನು ಹುಚ್ಚನೆಂದೇ ಕರೆಯುವರು. ಆದ್ದರಿಂದ ಧೀಶಕ್ತಿಯು ಯಾವ ಲೌಕಿಕೋಪಾಯಗಳಿಂದಲೂ ಪಡೆಯತಕ್ಕದ್ದಲ್ಲ. ಅದನ್ನು ಪರಮಾತ್ಮನೇ ದಯಪಾಲಿಸಬೇಕು. ನಮ್ಮ ಆಲೋಚನೆಗಳಿಗೂ ಸಂಕಲ್ಪಗಳಿಗೂ ಹಿಂತಡಿಕೆಯಾಗಿ ಭಗವನಂತನೇ ಇದ್ದುಕೊಂಡಿರುತ್ತಾನೆ. ಅವನೇ ಸೂರ್ಯ ಮಂಡಲಾಂತರ್ಗತನಾದ ನಾರಾಯಣನು. ಗಾಯತ್ರೀದೇವತೆಯೆಂದರೂ ಅವನೇ. ಯಾರುಯಾರು ಈ ಗಾಯತ್ರಿಮಂತ್ರವನ್ನು ಜಪಿಸುವರೋ ಅಂಥವರ ಬುದ್ಧಿಯು ಶುದ್ಧವಾಗಿ ಸಾತ್ತ್ವಿಕ ಮಾರ್ಗದಲ್ಲಿಯೇ ಮುಂದುವರೆಯುವದು. ಅವರೇ ಲೋಕಕಲ್ಯಾಣವನ್ನು ಸಾಧಿಸುವವರಾಗುವರು. ಇಂಥ ಬುದ್ಧಿ ಪ್ರಚೋದನೆಯನ್ನು ಮಾಡೆಂದು ಸವಿತೃದೇವ ನೆನಿಸಿದ ಎಲ್ಲರ ಆತ್ಮನೇ ಆದ ಪರಬ್ರಹ್ಮದಲ್ಲಿ ಮತ್ತೆಮತ್ತೆ ಬೇಡಿಕೊಳ್ಳುವದೇ ಗಾಯತ್ರೀಜಪವೆನಿಸುವದು.

ಹೀಗೆ ಗಾಯತ್ರೀಮಂತ್ರದೊಡನೆ ಪ್ರಾಣಾಯಾಮವನ್ನು ಮಾಡಬೇಕು. ಈಗ ಈ ಮಂತ್ರದ ಕೊನೆಯ ವಾಕ್ಯದ ಅರ್ಥವನ್ನು ನೋಡೋಣ. ಓಮಾಪಃ......ಎಂದು ಆರಂಭವಾಗಿರುವ ಈ ವಾಕ್ಯದಲ್ಲಿ ಜಲದೇವತೆಗಳನ್ನೂ, ಜ್ಯೋತಿಶಬ್ದದಿಂದ ಸೂರ್ಯಾದಿಜ್ಯೋತಿಗಳನ್ನೂ ರಸಶಬ್ದದಿಂದ ಮಧುರಾದಿರಸಗಳನ್ನೂ ಗ್ರಹಿಸಿರುತ್ತದೆ. ಕಡೆಯಲ್ಲಿ ಅಮೃತವನ್ನು ಹೆಸರಿಸಲಾಗಿದೆ. ದೇವತೆಗಳು ಯಾವುದನ್ನು ಪಾನಮಾಡಿ ಅಮೃತರಾದರೋ ಅದು ಅಮೃತವು. ಹೀಗೆ ಅಪ್ಪು, ಜ್ಯೋತಿ, ರಸ,

ಅಮೃತಗಳೆಲ್ಲವೂ ಪ್ರಣವಪ್ರತಿಪಾದ್ಯವಾದ ಬ್ರಹ್ಮವೇ–ಎಂದು ಅಭಿಪ್ರಾಯ. ಕಡೆಯಲ್ಲಿರುವ ಭೂರಾದಿಗಳು ವ್ಯಾಹೃತಿಗಳು. ಇವೆಲ್ಲವನ್ನೂ ಉಚ್ಚರಿಸಿದಾಗ ಪ್ರಾಣಾಯಾಮವು ಪರಿಪೂರ್ಣವಾಗುವುದು. ಅಮೃತನಾದೋಪನಿಷತ್ತಿನಲ್ಲಿ ಹೀಗಿದೆ:

**ಸವ್ಯಾಹೃತಿಂ ಸಪ್ರಣವಾಂ ಗಾಯತ್ರೀಂ ಶಿರಸಾ ಸಹ ।**
**ತ್ರಿಃ ಪಠೇದಾಯತಪ್ರಾಣಃ ಪ್ರಾಣಾಯಾಮಃ ಸ ಉಚ್ಯತೇ ॥**

ವ್ಯಾಹೃತಿ ಮತ್ತು ಓಂಕಾರಗಳೊಡನೆ ಶಿರಆದಿಗಳ ಸಮೇತ ಗಾಯತ್ರಿಯನ್ನು ಮೂರು ಬಾರಿ ಪ್ರಾಣಗಳನ್ನು ಧಾರಣೆ ಮಾಡಿಕೊಂಡು ಪಠಿಸಿದರೆ ಪ್ರಾಣಾಯಾಮವೆನಿಸುವದು–ಎಂದು ಅಭಿಪ್ರಾಯ. ಈಗ ಗಾಯತ್ರೀ ಉಪಸ್ಥಾನ ಮಂತ್ರಗಳನ್ನು ತಿಳಿಸಲಾಗುವದು.

**ಓಂ ॥ ಉತ್ತಮೇ ಶಿಖರೇ ಜಾತೇ ಭೂಮ್ಯಾಂ ಪರ್ವತಮೂರ್ಧನಿ ।**
**ಬ್ರಾಹ್ಮಣೇಭ್ಯೋಽಭ್ಯನುಜ್ಞಾತಾ ಗಚ್ಛ ದೇವಿ ಯಥಾಸುಖಮ್**
**ಸ್ತುತೋ ಮಯಾ ವರದಾ ವೇದಮಾತಾ ಪ್ರಚೋದಯಂತೀ**
**ಪವನೇ ದ್ವಿಜಾತಾ। ಆಯುಃ ಪೃಥಿವ್ಯಾಂ ದ್ರವಿಣಂ ಬ್ರಹ್ಮವರ್ಚಸಂ**
**ಮಹ್ಯಂ ದತ್ವಾ ಪ್ರಜಾತುಂ ಬ್ರಹ್ಮಲೋಕಮ್ ॥**

ಉಪಸ್ಥಾನವೆಂದರೆ ಎದ್ದು ನಿಂತುಕೊಂಡು ಕೈಮುಗಿದು ಪ್ರಾರ್ಥಿಸುವುದು. ಗಾಯತ್ರೀಜಪಾನಂತರ ಸಲ್ಲಿಸಬೇಕಾದ ಪ್ರಾರ್ಥನೆಯಿದು. ಭೂಮಿಯಲ್ಲಿರುವ ಪರ್ವತಗಳಲ್ಲೆಲ್ಲ ಉತ್ತರದಿಕ್ಕಿನಲ್ಲಿರುವ ಮೇರುಪರ್ವತವು ಶ್ರೇಷ್ಠವಾದದ್ದು. ಅದರ ಅತಿ ಎತ್ತರದ ಶಿಖರದಲ್ಲಿ ಈಗ ವರ್ಣನೆಮಾಡಿದಂಥ ಗಾಯತ್ರೀದೇವಿಯು ವಾಸವಾಗಿರುತ್ತಾಳೆ. ಆಕೆಯನ್ನು ಜಪಕ್ಕೆ ಮುಂಚೆ ಸಾಧಕನು ತನ್ನ ಹೃದಯದಲ್ಲಿ ಆವಾಹನೆ ಮಾಡಿಕೊಂಡಿದ್ದನು. ಜಪಕರ್ಮವು ಪೂರೈಸಿದ ನಂತರ ಈಗ ಕಳುಹಿಸಿಕೊಡುತ್ತಾನೆ. ''ಹೇ ತಾಯೆ, ನೀನು ಬ್ರಾಹ್ಮಣರಿಂದ ಅನುಜ್ಞಾತಳಾಗಿ–ಎಂದರೆ ನೀನು ಪ್ರಸನ್ನಳಾದ್ದರಿಂದ ಸಂತುಷ್ಟರಾದ ಬ್ರಾಹ್ಮಣರು ನಿನಗೆ ಸ್ವಸ್ಥಾನಕ್ಕೆ ಹಿಂದಿರುಗಲು ಅನುಮತಿಯನ್ನು ನೀಡಿದ ನಂತರ ನಿನ್ನ ಅನುಕೂಲಕ್ಕೆ ತಕ್ಕಂತೆ ಹೊರಡುವವಳಾಗು'' ಎಂದು ಅಭಿಪ್ರಾಯ. ನಾವು ಯಾರಾದರೂ ಬಂಧುಗಳು ಅಥವಾ ಸ್ನೇಹಿತರ ಮನೆಗೆ ಹೋದಾಗ ಅವರಿಂದ ಸತ್ಕಾರಮಾನ ಪೂಜಾದಿಗಳನ್ನು ಹೊಂದಿದ ಅನಂತರ ಹೊರಡುವಾಗ ಅವರಿಗೆ ತಿಳಿಸಿ ಅನುಮತಿಯನ್ನು ಪಡೆಯುವದು ರೂಢಿಯಲ್ಲಿದೆ. ಇದೊಂದು ಸಾಮಾಜಿಕ ಶಿಷ್ಟಾಚಾರವೆನಿಸುವದು. ಹಾಗೆಯೇ ಗಾಯತ್ರಿಯೂ ಬ್ರಾಹ್ಮಣರಿಂದ ಗೌರವಿಸಲ್ಪಟ್ಟ ಅನಂತರ ಅವರ ಅನುಮತಿಯೊಡನೆ ಸ್ವಸ್ಥಾನಕ್ಕೆ ತೆರಳಬೇಕೆಂದು ತಿಳಿಸಿದೆ. ಹೀಗೆ ಹೊರಡುವಾಗ ಸಾಧಕನು

ಆಕೆಯ ಬಳಿಯಲ್ಲಿ ವಿಜ್ಞಾಪಿಸುವದೇನೆಂದರೆ: ವೇದಮಾತೆಯಾದ ದೇವಿಯು ಈವರೆಗೆ ನನ್ನಿಂದ ಸ್ತುತಿಸಲ್ಪಟ್ಟಳು. ಈಕೆಯು ಪವನ–ಎಂದರೆ ವಾಯುವಿನಂತೆ ಪ್ರಾಣಿಗಳ ಅಂತರ್ಯಾಮಿನಿಯಾಗಿರುವಳು. ಹಾಗೂ ದ್ವಿಜರಿಂದ ಉಪಾಸಿಸಲ್ಪಡುತ್ತಿರುವಳು. ಆದ್ದರಿಂದ ಅಂತರ್ಯಾಮಿನಿಯಾಗಿಯೇ ಬುದ್ಧಿವೃತ್ತಿಗಳನ್ನು ಪ್ರೇರಿಸುತ್ತಿರುವಳು. ಇಂಥ ಮಾತೆಯು ಭೂಲೋಕದಲ್ಲಿರುವ ನನಗೆ ಆಯುಷ್ಯವನ್ನೂ , ಐಶ್ವರ್ಯವನ್ನೂ , ಬ್ರಹ್ಮವರ್ಚಸ್ಸನ್ನೂ ಕೊಟ್ಟವಳಾಗಿ ಅನಂತರ ಬ್ರಹ್ಮಲೋಕಕ್ಕೆ ಹೊರಡುವವಳಾಗಲಿ–ಎಂದರ್ಥ. ಬ್ರಹ್ಮಲೋಕವೂ ಆದಿತ್ಯಲೋಕವೂ ಎರಡೂ ದೇವಿಯ ವಾಸಸ್ಥಾನಗಳೇ. ಆದ್ದರಿಂದ ಬ್ರಹ್ಮಲೋಕವೆಂಬುದಕ್ಕೆ ಗೌಣವಾಗಿ ಆದಿತ್ಯಲೋಕವೆಂದೂ ಅರ್ಥಮಾಡಬಹುದು. ಈ ಬ್ರಹ್ಮಲೋಕವು ಪ್ರಜಾತವು. ಪ್ರಜಾತ–ಎಂಬುದನ್ನು ಇಲ್ಲಿ ಪ್ರಜಾತುಮ್ ಎಂದು ಪ್ರಯೋಗಿಸಿದೆ. ಇದು ವೈದಿಕಪ್ರಯೋಗವೆಂದು ತಿಳಿಯಬೇಕು. ಭೂರಾದಿ ಎಲ್ಲಾ ಲೋಕಗಳಿಗಿಂತ ಉತ್ಕೃಷ್ಟವಾಗಿ ಸೃಷ್ಟಿಸಲ್ಪಟ್ಟಿರುವದರಿಂದ ಬ್ರಹ್ಮಲೋಕವನ್ನು ಪ್ರಜಾತವೆನ್ನುವರು. ಹೀಗೆ ದೇವಿಯು ವರಪ್ರದಳಾಗಿ ತನ್ನ ಸ್ವಸ್ಥಾನಕ್ಕೆ ಹೊರಡಲಿ–ಎಂದು ಪ್ರಾರ್ಥಿಸಲಾಗಿದೆ.

## ಆದಿತ್ಯಾದೇವತಾಚಿಂತನೆ

**ಓಂ ॥ ಘೃಣಿಸ್ಸೂರ್ಯ ಆದಿತ್ಯೋ ನ ಪ್ರಭಾ ವಾತ್ಯಕ್ಷರಮ್ । ಮಧು ಕ್ಷರಂತಿ ತದ್ರಸಮ್ । ಸತ್ಯಂ ವೈ ತದ್ರಸಮಾಪೋ ಜ್ಯೋತೀ ರಸೋಽಮೃತಂ ಬ್ರಹ್ಮ ಭೂರ್ಭುವಸ್ಸುವರೋಮ್ ॥**

ಈವರೆಗೆ ಸಂಧ್ಯಾವಂದನಮಂತ್ರಗಳನ್ನು ವ್ಯಾಖ್ಯಾನಮಾಡಲಾಯಿತು. ಈಗ ಆದಿತ್ಯದೇವತಾಜಪಮಂತ್ರವನ್ನು ವಿವರಿಸಲಾಗುವದು. ಗಾಯತ್ರೀಮಂತ್ರ ಪ್ರತಿಪಾದ್ಯವಾದುದು ಸವಿತೃದೇವತೆಯು. ಇದಾದರೋ ಆದಿತ್ಯದೇವತಾಮಂತ್ರವು. ಸವಿತೃ–ಆದಿತ್ಯ ಒಬ್ಬನೇ ಆದರೂ ವೇದಮಂತ್ರಪ್ರತಿಪಾದನಕ್ರಮದಂತೆ ಆಯಾ ಶಬ್ದಗಳು ಆಯಾ ದೇವತೆಯನ್ನೇ ಹೇಳುವವು. ಆದ್ದರಿಂದ ಸಾಧಕನು ಆದಿತ್ಯನೆಂದು ಭಗವಂತನನ್ನು ಚಿಂತಿಸುವದಾದರೆ ಅದೇ ಶಬ್ದಲಿಂಗವುಳ್ಳ ಮಂತ್ರವನ್ನು ಜಪಿಸಬೇಕು. ಪ್ರಕೃತ ಇದು ಆದಿತ್ಯದೇವತಾಕಮಂತ್ರವು. ಉಪಾಸನಾಪ್ರಕರಣದಲ್ಲಿ ಆಯಾ ಹೆಸರನ್ನು ಅದದೇ ವಿಶೇಷಣಗಳಿಂದ ಸ್ತುತಿಸಲಾಗಿರುತ್ತದೆ. ರಾಮನನ್ನು ಚಿಂತಿಸುವವನು ಕೂಡ ಬಲರಾಮನನ್ನೊ, ಅಥವಾ ಸೀತಾಸಮೇತನಾದ ರಾಮನನ್ನೋ, ಅರಣ್ಯ–ಕಿಷ್ಕಿಂಧಾಕಾಂಡದ ಕಥೆಯಂತೆ ಲಕ್ಷ್ಮಣಸುಗ್ರೀವಾದಿಸಹಿತ ರಾಮನನ್ನೊ, ಯದ್ಧಕಾಂಡ ಕೊನೆಯ ಭಾಗದ ಕಥೆಯಂತೆ ಪಟ್ಟಾಭಿರಾಮನನ್ನೊ–ಹೀಗೆ ಸಾಧಕನಿಗೆ ಯಾವದರಲ್ಲಿ

ಒಲವು ಮೂಡಿರುವದೋ ಅಂಥ ರಾಮನನ್ನೇ ಚಿಂತಿಸಬೇಕು. ರಾಮನೊಬ್ಬನೇ ಎಂಬುದು ನಿಜವಾದರೂ ಉಪಾಸನಾಕಾಲಕ್ಕೆ ಗೊತ್ತಾದ ರೂಪವೇ ಚಿಂತನೆಗೆ ಅವಶ್ಯ. ಇಲ್ಲವಾದರೆ ಸಿದ್ಧಿಯಿಲ್ಲ. ಹಾಗೆಯೇ ವೇದದಲ್ಲಿಯೂ ಆಯಾ ಶಬ್ದವಾಚ್ಯವಾದ ಮಂತ್ರದೇವತೆಯೇ ಪ್ರಧಾನವಾಗಿರುತ್ತದೆ. ಈ ಮಂತ್ರದಲ್ಲಿ ಆದಿತ್ಯನನ್ನು ಉಪಾಸನೆಮಾಡಲು ತಿಳಿಸಿದೆ. ಆತನು **ಘೃಣಿ**ಯೆನಿಸಿರುವನು. ಅತಿಶಯವಾದ ತೇಜಸ್ಸಿನಿಂದ ಕೂಡಿರುವದೇ **ಘೃಣಿತ್ವವು**. ಜಗತ್ತನ್ನೆಲ್ಲ ಪ್ರಸರಿಸುವವನಾದ್ದರಿಂದ **ಸೂರ್ಯ**ನೆನಿಸಿರುವನು. ಅದಿತಿಪುತ್ರನಾದ್ದರಿಂದ **ಆದಿತ್ಯನು**. ನಾಶವಿಲ್ಲದವನಾದ್ದರಿಂದ **ಅಕ್ಷರನು**. ಈತನ ಪ್ರಭಾ ಎಂದರೆ **ಬೆಳಕು** ಉಪಮಾನರಹಿತವಾದುದು. ನ ಎಂಬ ಶಬ್ದಕ್ಕೆ ಇವ ಎಂದರ್ಥ ಮಾಡಬೇಕು. ಆದಿತ್ಯನ ಪ್ರಭೆಯು ಆದಿತ್ಯನಂತೆಯೇ ಸರಿ–ಎಂದರ್ಥ. ಈ ಆದಿತ್ಯನು ವಾತಿ ಎಂದರೆ ಪ್ರತಿದಿನವೂ ಅಂತರಿಕ್ಷಮಾರ್ಗದಿಂದ ಸಂಚರಿಸುವನು. ಈತನು ಉತ್ಪಾದಿಸಿ ಭೂಮಿಗೆ ಅನುಗ್ರಹಿಸಿದ ರಸ–ಎಂದರೆ ನೀರನ್ನು ಮಧುರವಾದ ಜಲವನ್ನು ನದಿಗಳು ಸ್ರವಿಸುತ್ತವೆ. ಆದ್ದರಿಂದಲೇ ಇವನು ಸತ್ಯನೂ ರಸನೂ ಆಗಿರುವನು. ಮತ್ತು ಅಪ್ಪು, ಜ್ಯೋತಿಯೂ ಪದಾರ್ಥಗಳ ಸಾರವಾದ ರಸವೂ ಅಮೃತವೂ ಆಗಿರುವ ಬ್ರಹ್ಮವೇ ತಾನಾಗಿರುವನು. ಭೂರಾದಿ ಲೋಕತ್ರಯಗಳೂ ಓಂಕಾರವೂ ಎಲ್ಲವೂ ಆದಿತ್ಯನೇ– ಎಂದು ಚಿಂತಿಸಬೇಕು– ಎಂಬಿದು ಶ್ರುತಿಯ ಅಭಿಪ್ರಾಯ. ಆದಿತ್ಯನನ್ನು ಛಾಂದೋಗ್ಯೋಪನಿಷತ್ತಿನಲ್ಲಿ **ದೇವಮಧು**–ಎಂದು ಕರೆದಿದೆ. ಜೇನಿನಂತೆ ಎಲ್ಲರಿಗೂ ಪ್ರಿಯನಾಗಿದ್ದುಕೊಂಡು ಜಗತ್ತನ್ನು ಸಲಹುತ್ತಿರುವನು–ಎಂದರ್ಥ.

## ತ್ರಿಸುಪರ್ಣಮಂತ್ರಗಳು

ಈಗ ಜ್ಞಾನವುಂಟಾಗುವದಕ್ಕೆ ಅಡ್ಡಿಯಾಗಿರುವಂಥ ಬ್ರಹ್ಮಹತ್ಯಾದಿ ಮಹಾಪಾಪಗಳ ಪರಿಹಾರಕ್ಕಾಗಿ ಪಠಿಸಬೇಕಾಗಿರುವ ಮಂತ್ರಗಳನ್ನು ತಿಳಿಸಲಾಗುವದು. ಇವುಗಳಿಗೆ ತ್ರಿಸುಪರ್ಣಮಂತ್ರಗಳೆಂಬ ಹೆಸರು ಪ್ರಸಿದ್ಧವಾಗಿದೆ. ಇವು ಮೂರು ಅನುವಾಕಗಳಿವೆ. ಮೊದಲನೆಯ ಅನುವಾಕವನ್ನು ವಿಚಾರಮಾಡೋಣ:

**ಓಂ ॥ ಬ್ರಹ್ಮಮೇತು ಮಾಮ್ । ಮಧುಮೇತು ಮಾಮ್ । ಬ್ರಹ್ಮಮೇವ ಮಧುಮೇತು ಮಾಮ್ । ಯಾಸ್ತೇ ಸೋಮ ಪ್ರಜಾವತ್ಸೋಽಭಿಸೋ ಅಹಮ್ । ದುಷ್ವಪ್ನಹನ್ನ ದುರುಷ್ಷಹ । ಯಾಸ್ತೇ ಸೋಮ ಪ್ರಾಣಾಗ್ಂಸ್ತಾಂ ಜುಹೋಮಿ ॥**

ಬ್ರಹ್ಮವು ಎಂದರೆ ಪರಮಾತ್ಮನು ನನ್ನನ್ನು ಬಳಿ ಸಾರಲಿ ; ಪರಮಾನಂದ ಮಧುರವೆನಿಸಿರುವ ವಸ್ತುವಾದ (ಬ್ರಹ್ಮವು) ನನ್ನನ್ನು ಬಳಿಸಾರಲಿ. ಇಂಥ ಮಧುರವಾದ

ಬ್ರಹ್ಮವೇ ನನ್ನನ್ನು ಹೊಂದಲಿ. ಉಳಿದ ಯಾವ ಅಲ್ಪದೇವತೆಗಳೂ ನನ್ನನ್ನು ಸೇರುವದು ಬೇಡ ಎಂದರ್ಥ. ದೊಡ್ಡದನ್ನೇ ಬಯಸುವವನಿಗೆ ಚಿಕ್ಕದರಲ್ಲಿ ಆಸಕ್ತಿಯಿರುವುದಿಲ್ಲವಷ್ಟೆ? ಉದಾಹರಣೆಗೆ ರೂಪಾಯಿಗಳಿಗಿಂತ ಮೀರಿದ ದಕ್ಷಿಣೆಯನ್ನೇ ಸ್ವೀಕರಿಸುವವನಿಗೆ ಚಿಲ್ಲರೆದಕ್ಷಿಣೆ–ಎಂದರೆ ಬೇಜಾರಾಗುವದು ಸಹಜ. ಕೆಲವು ಗೃಹಸ್ಥರು ''ಚಿಲ್ಲರೆ ಎಷ್ಟು ಬೇಕು, ಪುರೋಹಿತರೆ?'' ಎಂದು ಕೇಳುವದುಂಟು. ಆಗ ನಿಜವಾದ ಪುರೋಹಿತನು 'ಚಿಲ್ಲರೆ ಬೇಡ'–ಎಂದೇ ಹೇಳುವನು ಹಾಗೆಯೇ ಇಲ್ಲಿಯೂ ತಿಳಿಯಬೇಕು. ಮಧುವಾದ ಬ್ರಹ್ಮವೇ ಬೇಕೆನ್ನುವವನು ಚಿಲ್ಲರೆ ದೇವತೆಗಳನ್ನು ಲಕ್ಷಿಸುವದಿಲ್ಲ. ಇರಲಿ. ಮುಂದಿನ ಮಂತ್ರದ ಅಭಿಪ್ರಾಯವೇನೆಂದರೆ: ಎಲೈ ಸೋಮನೆ, ದೇವತೆಗಳು, ಮನುಷ್ಯರೇ ಮುಂತಾದ ಯಾವ ಪ್ರಜೆಗಳಿರುವರೋ ಅವರುಗಳ ದೃಷ್ಟಿಯಿಂದ ನಾನೊಬ್ಬ ವತ್ಸನು–ಎಂದರೆ ಮಗುವು. ಆದ್ದರಿಂದಲೇ ನೀನು ಕರುಣೆಯನ್ನು ತೋರಿಸಲು ನಾನು ಅರ್ಹನು. ಮತ್ತು ಎಲೈ ಸಂಸಾರರೂಪವಾದ ದುಃಸ್ವಪ್ನಗಳನ್ನು ನಾಶಗೊಳಿಸುವಾತನೆ, ನೀನು ದುರುಷ್ಷಹನಾಗು–ಎಂದರೆ ಸಹಿಸಲಸಾಧ್ಯವಾದ ಸಂಸಾರದುಃಖವನ್ನು ನೀಗುವವನಾಗು. ಎಲೈ ಸೋಮನೆ, ನನ್ನ ಜೀವನಾಧಾರವಾದ ಪ್ರಾಣಾಪಾನ ವೃತ್ತಿಗಳೇನಿವೆಯೋ ಅವುಗಳನ್ನು ನೀನೇ ಉಂಟುಮಾಡಿರುವೆಯಾಗಿ ಅವುಗಳನ್ನು ನಿನ್ನಲ್ಲಿಯೇ ಅರ್ಪಿಸುವೆನು. ಹೀಗೆ ಪ್ರಾಣಾಗ್ನಿಹೋತ್ರವನ್ನು ಕೈಗೊಂಡು ಪ್ರಣಾಯಾಮಪರಾಯಣನಾಗುವೆನು. ವಿಷಯಗಳಿಂದ ನನ್ನ ಇಂದ್ರಿಯಗಳನ್ನು ಹಿಂದಿರುಗಿಸಿ ಪ್ರಾಣಗಳನ್ನು ನಿರೋಧಮಾಡಿ ನಿನ್ನಲ್ಲಿಯೇ ನೆಟ್ಟ ಮನಸ್ಸುಳ್ಳ ತಪಸ್ವಿಯಾಗುವೆನು–ಎಂದಭಿಪ್ರಾಯ. ಈ ರೀತಿಯಾದ ತಪಸ್ಸು ಸಮಸ್ತವಿಧವಾದ ಪಾಪಗಳನ್ನೂ ಸುಟ್ಟು ಬೂದಿಮಾಡಲು ಶಕ್ತವಾಗಿರುವದು. ಅದನ್ನು ಈಗಲೇ ಕೈಗೊಳ್ಳುವೆನು–ಎಂದರ್ಥ.

ಓಂ ॥ ತ್ರಿಸುಪರ್ಣಮಯಾಚಿತಂ ಬ್ರಾಹ್ಮಣಾಯ ದದ್ಯಾತ್ ।
ಬ್ರಹ್ಮಹತ್ಯಾಂ ವಾ ಏತೇ ಘ್ನಂತಿ । ಯೇ ಬ್ರಾಹ್ಮಣಾಃ ತ್ರಿಸುಪರ್ಣಂ
ಪಠಂತಿ । ತೇ ಸೋಮಂ ಪ್ರಾಪ್ನುವಂತಿ । ಆ ಸಹಸ್ರಾತ್ ಪಂಕ್ತಿಂ
ಪುನಂತಿ । ಓಂ ॥

ಸಾಮಾನ್ಯವಾಗಿ ಯಾವ ವಿದ್ಯೆಯನ್ನೇ ಆಗಲಿ ಕೇಳದೆ ಇರುವವನಿಗೆ ತಾನೆ ಹೇಳಿಕೊಡಬಾರದು. ಆದರೆ ತ್ರಿಸುಪರ್ಣವೆಂಬ ಈ ವಿದ್ಯೆಯನ್ನು ಮಾತ್ರ ಯಾವ ಬ್ರಾಹ್ಮಣನಿಗೇ ಆಗಲಿ, ಅವನು ಕೇಳದೆ ಇದ್ದರೂ ಹೇಳಿಕೊಡಬೇಕು. ವಿದ್ಯಾದಾನವನ್ನು ಮಾಡಬೇಕು. ಹೀಗೆ ಉಪದೇಶವನ್ನು ಮಾಡಿದ್ದರಿಂದ ಯಾವ ಬ್ರಾಹ್ಮಣರು ತಾವು

ಕಲಿತುಕೊಂಡ ಈ ತ್ರಿಸುಪರ್ಣವನ್ನು ಪಠನಮಾಡುವರೋ ಅವರು ಬ್ರಹ್ಮಹತ್ಯಾ ದೋಷವನ್ನು ಕೂಡ ನೀಗಿಕೊಳ್ಳುವರು. ಮತ್ತು ಸೋಮ (ಯಾಗದ) ಫಲವನ್ನು ಪಡೆಯುವರು. ಇಂಥ ಮಹನೀಯರು ಯಾವ ಪಂಕ್ತಿಯಲ್ಲಿ ಕುಳಿತು ಭೋಜನ ಮಾಡುವರೋ ಅಂಥ ಪಂಕ್ತಿಯಲ್ಲಿ ಕುಳಿತಿರುವ ಸಾವಿರದವರೆಗಿನ ಪಾಪಿಗಳನ್ನೂ ಪವಿತ್ರರನ್ನಾಗಿ ಮಾಡುವರು–ಎಂದು ಫಲಸಂಕೀರ್ತನ ಮಾಡಿರುತ್ತದೆ. ಬ್ರಾಹ್ಮಣರ ಪಂಕ್ತಿಯಲ್ಲಿ ತ್ರಿಸುಪರ್ಣಮಂತ್ರಮರಶ್ಚರಣ ಮಾಡಿ ಸಿದ್ಧಿಯನ್ನು ಹೊಂದಿರುವಂಥ ಒಬ್ಬ ವ್ಯಕ್ತಿಯಿದ್ದರೂ ಆತನು ಸಾವಿರದವರೆಗಿನ ಬ್ರಾಹ್ಮಣರ ಬ್ರಹ್ಮಹತ್ಯಾದಿ ಪಾಪಗಳನ್ನೆಲ್ಲ ಪರಿಹರಿಸಿಬಿಡುವನು ಎಂದದ್ದರಿಂದ ಈ ಮಂತ್ರದ ಮಹಿಮೆಯೂ ಹೇಳಿ ಮುಗಿಸಲಾರದಷ್ಟು ಇದೆ–ಎಂದಭಿಪ್ರಾಯ. ಈಗಿನ ಕಾಲದಲ್ಲಿ ಅನ್ನದಾನವೂ ಅದಕ್ಕೆ ಇತಿಮಿತಿಯಿಲ್ಲದ ಖರ್ಚೂ ಸಂಭವಿಸುತ್ತದೆಯಾದರೂ ವಿವೇಕ, ಶಿಸ್ತುಗಳಿಲ್ಲ. ನ್ಯಾಯವಾಗಿ ಯಾರಾದರೂ ಭೋಜನಕ್ಕೆ ಕರೆದರೆ ಅಲ್ಲಿಗೆ ಹೋಗುವ ಬ್ರಾಹ್ಮಣನು ಉಪವಾಸವಿದ್ದು ಬೆಳಗಿನಿಂದ ಏನನ್ನೂ ತೆಗೆದುಕೊಳ್ಳದೆ ತನ್ನ ಸ್ನಾನ, ಆಹ್ನಿಕ, ಜಪಾದಿಗಳನ್ನು ಮುಗಿಸಿಕೊಂಡು ಹೋಗಿ ಅಲ್ಲಿ ಎಲ್ಲಾ ಬಡಿಸಿದ ನಂತರ ಪರಿಷೇಚನಮಾಡಿ ಆಪೋಶನವನ್ನು ಸ್ವೀಕರಿಸಿ ಮೌನದಿಂದ ಭೋಜನ ಮಾಡಬೇಕು. ಇಂಥ ಬ್ರಾಹ್ಮಣರಿಗೆ ಮಡಿಯಲ್ಲಿ ಸಾತ್ತ್ವಿಕಾಹಾರಗಳನ್ನು ಸಿದ್ಧಗೊಳಿಸಿ ಬಡಿಸಬೇಕು. ಬ್ರಾಹ್ಮಣರಿಗೆ ಇಕ್ಕುವ ಮುಂಚೆ ಆ ಪದಾರ್ಥಗಳನ್ನು ಯಾರೂ ತಿಂದಿರಬಾರದು. ಮೂಸಿಯೂ ಇರಬಾರದು. ಇದನ್ನು **'ಬ್ರಾಹ್ಮಣಸಂತರ್ಪಣೆ'** ಯೆನ್ನುತ್ತಾರೆ. ಈಗಿನ ಕಾಲಕ್ಕಾದರೊ, ಜಾತಿಭೇದವಾಗಲಿ, ಆಚಾರನಿಯಮಗಳಾಗಲಿ ಇಲ್ಲದೆ ಷರಾಯಿ, ಷರ್ಟುಸಮೇತವಾಗಿ ಟೇಬಲ್ ಮೇಲೆ ಕುಳಿತು ಎಂಜಲೂಟಗಳನ್ನು ಉಂಡು ಪರಿಷೇಚನೆಯಾಗಲಿ ಆಪೋಶನವಾಗಲಿ ಇಲ್ಲದೆ–ಕಡೆಗೆ ನೀರಿನ ಪಾತ್ರೆಯನ್ನು ಸಹ ಜೊತೆಯಲ್ಲಿ ಒಯ್ಯದೆ ಅಪಾತ್ರರಾಗಿ ಹೋಗಿ ಭೋಜನ ಮಾಡುವದೇ ಪದ್ಧತಿಯಾಗಿಬಿಟ್ಟಿದೆ. ಇಂಥ ಸಂಸ್ಕೃತಿಯವರಿಗೆ ಪಂಕ್ತಿಯೆಂದರೇನು? ಪಂಕ್ತಿಪಾವನರು ಯಾರು? ತ್ರಿಸುಪರ್ಣಮಂತ್ರಗಳ ಮಹಿಮೆಯೇನು? ಎಂಬಿದನ್ನು ಮನಗಾಣಿಸುವುದು ಸಾಧ್ಯವೇ ಇಲ್ಲ. ಆದ್ದರಿಂದ ತ್ರಿಸುಪರ್ಣಮಂತ್ರಗಳ ಪಾರಾಯಣವನ್ನು ಮಾಡಿಯಾದರೂ ನಾವು ಅನಿವಾರ್ಯವಾಗಿ ಸಂಭವಿಸುವ ಪಂಕ್ತಿ ದೋಷಗಳಿಂದ ಮುಕ್ತರಾಗಬೇಕಾಗಿದೆ.

**ಓಂ ॥ ಬ್ರಹ್ಮ ಮೇಧಯಾ । ಮಧು ಮೇಧಯಾ ಬ್ರಹ್ಮಮೇವ ಮಧು ಮೇಧಯಾ । ಅದ್ಯಾ ನೋ ದೇವ ಸವಿತಃ ಪ್ರಜಾವತ್ಸಾವೀಃ ಸೌಭಗಮ್ । ಪರಾ ದುಃಷ್ವಪ್ನಿಯಗ್‌ಂಸುವ । ವಿಶ್ವಾನಿ ದೇವ ಸವಿತರ್ದುರಿತಾನಿ ಪರಾಸುವ । ಯದ್ಭದ್ರಂ ತನ್ಮ ಆಸುವ ॥**

ಇದು ತ್ರಿಸುಪರ್ಣಮಂತ್ರಗಳ ಎರಡನೆಯ ಅನುವಾಕವು. ಇಲ್ಲಿಯೂ ಬ್ರಹ್ಮಪ್ರಾರ್ಥನೆಯಿದೆ. ಸರ್ವಜಗತ್ಕಾರಣವಾದ, ಸರ್ವವೇದಾಂತವೇದ್ಯವೂ ಆದ ಬ್ರಹ್ಮವು ಮೇಧೆಯಿಂದ–ಎಂದರೆ ಗುರುಗಳು ಉಪದೇಶಿಸಿದ ವೇದಾಂತಮಹಾ ವಾಕ್ಯಗಳ ಅರ್ಥವನ್ನು ಧಾರಣೆಮಾಡಿಕೊಳ್ಳುವ ಶಕ್ತಿಯನ್ನು ಪಡೆಯುವ ಮೂಲಕ–ಲಭ್ಯವಾಗಲಿ. ಹಾಗೆಯೇ ಮಧುವೆನಿಸುವ ಬ್ರಹ್ಮವು ಮೇಧೆಯಿಂದ ಲಭ್ಯವಾಗಲಿ. ಬ್ರಹ್ಮವೇ ಮಧುವೂ ಆಗಿ ಲಭ್ಯವಾಗಲಿ–ಎಂದು ಹಿಂದಿನಂತೆಯೇ ಅನುಸಂಧಾನ ಮಾಡಬೇಕು. ಈಗ ಸವಿತೃದೇವತೆಯನ್ನು ಕುರಿತು ಹೀಗೆ ಪ್ರಾರ್ಥಿಸಲಾಗುತ್ತದೆ. ''ಎಲೈ ಬುದ್ಧಿಪ್ರಚೋದಕನಾದ ದೇವನೆ, ಈ ದಿನ ನಮಗೆ ಪ್ರಜಾವಂತನೆನಿಸಿದ ಆಚಾರ್ಯ ರೂಪವಾದ ಸೌಭಗಮ್–ಭಾಗ್ಯವನ್ನು ದಯಪಾಲಿಸು. ಪ್ರಜಾವತ್ ಎಂದರೆ ಶಿಷ್ಯ–ಶಿಷ್ಯನ ಶಿಷ್ಯ (ಪ್ರಶಿಷ್ಯ) ಎಂಬ ರೂಪವಾದ ವಿದ್ಯಾರ್ಥಿಸಂಪತ್ತು. ಒಳ್ಳೆಯ ವಿದ್ಯಾರ್ಥಿಗಳ ಗುಂಪು ದೊರಕುವದು ಪುಣ್ಯವಿಶೇಷವೇ ಸರಿ. ಇದರಿಂದ ಆಚಾರ್ಯನ ಕೀರ್ತಿಯು ಹರಡುತ್ತದೆ. ಆದ್ದರಿಂದ ಇಲ್ಲಿ ಶಿಷ್ಯರೆಂಬ ಪ್ರಜೆಗಳನ್ನು ನೀಡಿ ಆ ಮೂಲಕ ಆಚಾರ್ಯಪದವಿಯೆಂಬ ಭಾಗ್ಯವನ್ನು ಸಾವೀಃ ಎಂದರೆ ದಯಪಾಲಿಸುವವನಾಗು. ದುಃಸ್ವಪ್ನ ಸಮಾನವಾದ ದ್ವೈತಭ್ರಾಂತಿಯನ್ನು ಕಳೆಯುವವನಾಗು. ಎಲೈ ಸವಿತೃದೇವನೆ, ಎಲ್ಲಾ ಪಾಪಗಳನ್ನೂ ನಿರಾಕರಣೆಮಾಡುವವನಾಗು. ಮತ್ತು ಕಲ್ಯಾಣಕರವಾದ–ಎಂದರೆ ಏನೂ ತಿಳಿಯದಿರುವಿಕೆ, ತಪ್ಪುತಿಳಿಯುವಿಕೆ ಮುಂತಾದ ದೋಷಗಳಿಲ್ಲದ ತತ್ತ್ವಜ್ಞಾನವನ್ನು ನನಗೆ ಸಂಪೂರ್ಣವಾಗಿ ಉಂಟುಮಾಡುವವನಾಗು'' ಎಂದು ಕೇಳಿಕೊಳ್ಳಲಾಗಿದೆ. ಇಂಥ ಪ್ರಾರ್ಥನೆಯು ಆದರ್ಶವಾಗಿರುತ್ತದೆ. ಆಚಾರ್ಯನೆನಿಸಬೇಕಾದರೆ ಎಂಥ ಶಿಷ್ಯಸಂಪತ್ತು ಬೇಕು? ಹಾಗೂ ತತ್ತ್ವಜ್ಞಾನವಿರಬೇಕು? ಎಂಬಿದು ಇಲ್ಲಿ ತಿಳಿದುಬರುತ್ತದೆ. ಯಜುರ್ವೇದಿಗಳು ಸಂಧ್ಯಾವಂದನೆಯ ಕಡೆಯಲ್ಲಿ ಈ 'ಅದ್ಯಾನೋ ದೇವ' ಎಂಬ ಮಂತ್ರವನ್ನು ಪಠಿಸಿ ನೀರನ್ನು ಕಣ್ಣಿಗೆ ಒತ್ತಿಕೊಳ್ಳುತ್ತಾರೆ. ಇದರ ವಿಶೇಷವೇನೆಂಬುದನ್ನು ಸಾಂಪ್ರದಾಯಿಕರು ಗೊತ್ತುಪಡಿಸಬೇಕಾಗಿದೆ.

ಓಂ ॥ ಮಧು ವಾತಾ ಋತಾಯತೇ ಮಧು ಕ್ಷರಂತಿ ಸಿಂಧವಃ ।
ಮಾಧ್ವೀರ್ನಃ ಸಂತ್ವೋಷಧೀಃ । ಮಧು ನಕ್ತಮುತೋಷಸಿ ಮಧು
ಮತ್ಪಾರ್ಥಿವಗ್ಂ ರಜಃ । ಮಧು ದ್ಯೌರಸ್ತು ನಃ ಪಿತಾ । ಮಧು
ಮಾನ್ನೋ ವನಸ್ಪತಿರ್ಮಧುಮಾಗ್ಂ ಅಸ್ತು ಸೂರ್ಯಃ ।
ಮಾಧ್ವೀರ್ಗಾವೋ ಭವಂತು ನಃ ॥

ಈ ಮಂತ್ರವು ವೈದಿಕರು ಬಳಸುವ ಮಂತ್ರಗಳಲ್ಲಿ ಸುಪ್ರಸಿದ್ಧವಾಗಿದೆ. ಇಲ್ಲಿ ಮಧು ಎಂಬ ಶಬ್ದವು ನಾಲ್ಕಾರುಬಾರಿ ಬಂದಿರುವದರಿಂದ ದೇವತಾರ್ಚನ ಅಭಿಷೇಕ

ಕಾಲಕ್ಕೆ ಪಂಚಾಮೃತಗಳಲ್ಲಿ ಜೇನನ್ನು ದೇವರಿಗೆ ಸಮರ್ಪಿಸುವಾಗ ಇದನ್ನು ಪಠಿಸುತ್ತಾರೆ. ಇದರ ಅರ್ಥವೇನೆಂದು ತಿಳಿಯೋಣ. **ಋತಾಯತೇ** ಎಂದರೆ ಋತವೆಂಬ ಪರಬ್ರಹ್ಮವನ್ನು ಬಯಸುವ ನನಗೆ **ವಾತಾಃ**– ಎಂದರೆ ವಾಯು ದೇವತೆಗಳು **ಮಧು**– ಎಂದರೆ ಮಾಧುರ್ಯವನ್ನು ಸೂಚಿಸುವ ಸುಖವನ್ನುಂಟು ಮಾಡಲಿ. ಗಾಳಿಯು ನನಗೆ ಸುಖಕರವಾಗಿರುವಂತೆ ಬೀಸಲಿ– ಎಂದರ್ಥ. ಏಕೆಂದರೆ ಪ್ರಬಲವಾದ ಶೀತಗಾಳಿಯು ಬೀಸಿದರೆ ರೋಗಾದಿಗಳು ಸಂಭವಿಸಿ ತತ್ತ್ವಜ್ಞಾನಪ್ರಾಪ್ತಿಗೆ ವಿಘ್ನವುಂಟಾಗುತ್ತದೆ. ಹಾಗಾಗದಿರಲಿ– ಎಂದು ಕೇಳಲಾಗಿದೆ. ಹಾಗೆಯೇ ನದಿಗಳು ಮಧು ಎಂದರೆ ಆರೋಗ್ಯಕರವಾದ ನೀರನ್ನು ಹರಿಸಲಿ. ಓಷಧಿಗಳು ಎಂದರೆ ನಾವು ತಿನ್ನುವ ಧಾನ್ಯಗಳೆಲ್ಲವೂ ಮಧುರವಾಗಿಯೂ ಪಥ್ಯರೂಪವಾಗಿಯೂ ಒದಗಿಬರಲಿ. ಇನ್ನು ಬ್ರಹ್ಮವಿದ್ಯಾಕಾಂಕ್ಷಿಯಾದ ನನಗೆ ರಾತ್ರಿಯೂ ಉಷಃಕಾಲವೂ ಎಂದರೆ ಹಗಲೂ ಎರಡೂ ಮಧೂ– ಎಂದರೆ ಅನುಕೂಲಕರವಾಗಿ ಉಂಟಾಗಲಿ. ಕಾಲಸಂಬಂಧಿಯಾದ ವಿಘ್ನಗಳು ಉಂಟಾಗದಿರಲಿ. ಹಾಗೆಯೇ ಭೂಮಿಯು (ರಜಃ ಎಂದರೆ ಭೂಮಿಯ ಮಣ್ಣು ಎಂದರ್ಥ.) ನನಗೆ ಕುಳಿತುಕೊಳ್ಳಲು ಹಾಗೂ ಮಲಗುವಾಗಲೂ ಮಧು– ಸುಖಕರವಾಗಲಿ. ಕಲ್ಲು, ಮಣ್ಣುಗಳು ನನಗೆ ಹಿಂಸೆಮಾಡದಿರಲಿ. ನಡೆಯುವಾಗ ಕಾಲಿಗೆ ಕಲ್ಲು ಮುಳ್ಳುಗಳು ಚುಚ್ಚುವದು, ರಾತ್ರಿಯಲ್ಲಿ ಮಲಗುವಾಗ ಒತ್ತುವದು ಹಾಗೂ ಜಾರಿಬೀಳುವದು, ಶರೀರಕ್ಕೆ ಪೆಟ್ಟಾಗುವದು, ಅಪಘಾತವಾಗುವದು– ಇಂಥ ಅಡ್ಡಿಗಳಾಗದಂತೆ ಭೂಮಿಯು ಸುಖವುಂಟುಮಾಡಲಿ. ನಮಗೆಲ್ಲ ತಂದೆಯಂತೆ ಇರುವ ದ್ಯುಲೋಕವು ಅತಿವೃಷ್ಟಿಅನಾವೃಷ್ಟ್ಯಾದಿಗಳಿಂದ ಹಿಂಸಿಸದೆ ಸುಖವನ್ನು ಉಂಟುಮಾಡಲಿ. ಇನ್ನು ವನಸ್ಪತಿಗಳೆಂದರೆ ಆಯಾ ಕಾಲದಲ್ಲಿ ಫಲವು ಬಿಡುವ ಮಾವು, ಹಲಸು, ನೇರಳೆ, ನೆಲ್ಲಿ , ಬೇಲ– ಮುಂತಾದವುಗಳು ರಸವತ್ತಾಗಿಯೂ ರುಚಿಕರ ವಾಗಿಯೂ ಪಕ್ವವಾಗಿಯೂ ಒದಗುವಂತಾಗಲಿ. ಸೂರ್ಯನೂ ಕೂಡ ನಮ್ಮನ್ನು ಸಂತಾಪಗೊಳಿಸದೆ ಹಿತಮಿತವಾದ ಪ್ರಕಾಶ– ಔಷ್ಣ್ಯಗಳನ್ನು ನೀಡಿ ಕಾಪಾಡಲಿ. ಹಾಗೆಯೇ ಗೋವುಗಳು ರುಚಿಯಾದ ಹಾಲು– ತುಪ್ಪಗಳನ್ನು ದೊರಕಿಸಿಕೊಡಲಿ– ಎಂದು ಅಭಿಪ್ರಾಯ. ಒಟ್ಟಿನಲ್ಲಿ ಆಧ್ಯಾತ್ಮಿಕ, ಆಧಿಬೌತಿಕ, ಆಧಿದೈವಿಕವಾಗಿ ವಿಂಗಡವಾಗಿರುವ ಜಗತ್ತಿನಲ್ಲಿರುವ ಪ್ರಾಣಿಗಳು, ಸಸ್ಯವರ್ಗ, ಮನುಷ್ಯರು, ದೇವತೆಗಳೇ ಮುಂತಾಗಿ ಎಲ್ಲರೂ ನಮ್ಮ ಜೀವನೋಪಾಯವು ಸುಖಕರವಾಗುವಂತೆ ಮಾಡಲಿ. ತಾಪತ್ರಯಗಳು ನಮ್ಮನ್ನು ಬಾಧಿಸದೆ ಇರಲಿ ಎಂದು ಪ್ರಾರ್ಥಿಸಲಾಗಿದೆ. ಅನ್ನದ ಮುಂದೆ ಕುಳಿತು ಭಕ್ತಿಯಿಂದ ಈ ಮಂತ್ರವನ್ನು ಪಠನಮಾಡಿ ದೇವತೆಗಳನ್ನು ನೆನೆಯುತ್ತಾ ಭೋಜನಮಾಡಿದರೆ ಆ ಆಹಾರವು ಅಮೃತವಾಗಿ ಪರಿಣಮಿಸಿ ಬ್ರಹ್ಮವಿದ್ಯೆಗೆ ತಕ್ಕ ಚಿತ್ತಶುದ್ಧಿಯನ್ನುಂಟು ಮಾಡುತ್ತದೆ– ಎಂದು ತಿಳಿಸಿದೆ.

ಓಂ ॥ ಯ ಇಮಂ ತ್ರಿಸುಪರ್ಣಮಯಾಚಿತಂ ಬ್ರಾಹ್ಮಣಾಯ ದದ್ಯಾತ್। ಭ್ರೂಣಹತ್ಯಾಂ ವಾ ಏತೇ ಘ್ನಂತಿ। ಯೇ ಬ್ರಾಹ್ಮಣಾಃ ತ್ರಿಸುಪರ್ಣಂ ಪಠಂತಿ । ತೇ ಸೋಮಂ ಪ್ರಾಪ್ನುವಂತಿ । ಆ ಸಹಸ್ರಾತ್ ಪಂಕ್ತಿಂ ಪುನಂತಿ । ಓಮ್ ॥

ಎರಡನೆಯ ಅನುವಾಕದ ಉಪಸಂಹಾರಭಾಗವಿದು. ಇದರ ಅಭಿಪ್ರಾಯವನ್ನೂ ಮೊದಲನೆಯ ಅನುವಾಕದ ಉಪಸಂಹಾರಭಾಗದಂತೆಯೇ ತಿಳಿಯಬೇಕು. ವಿಶೇಷವೇನೆಂದರೆಃ ಯಾಚನೆಮಾಡದಿದ್ದರೂ ಯಾವನು ಈ ತ್ರಿಸುಪರ್ಣವನ್ನು ಬ್ರಾಹ್ಮಣನಿಗೆ ಕಲಿಸಿಕೊಡುವನೋ ಅವನು ಹಾಗೂ ಕಲಿತವರು ಸಹ ಇದರ ಪಠನದಿಂದ ಭ್ರೂಣಹತ್ಯೆ–ಎಂಬ ಮಹಾಪಾಪವನ್ನು ದಾಟುವರು. ಭ್ರೂಣ ಎಂದರೆ ಗರ್ಭ ಎಂದರ್ಥ. ಗರ್ಭದಲ್ಲಿರುವ ಜೀವಿಯನ್ನು ಕೊಲ್ಲುವದು ಮಹಾಪಾತಕಗಳಲ್ಲಿ ಒಂದಾಗಿದೆ. ಈಗಿನ ಕಾಲಕ್ಕೆ ಸ್ತ್ರೀಯರು ಈ ಪಾಪವನ್ನು ಮಾಡುತ್ತಿದ್ದಾರೆ. ವಿಜ್ಞಾನಶಾಸ್ತ್ರದವರ ಆಧುನಿಕ ಶೋಧಗಳೂ ಸಲಕರಣೆಗಳೂ ಈ ಕಾರ್ಯಕ್ಕೆ ಸಹಾಯಕವಾಗಿವೆ. ಜನಸಂಖ್ಯೆಯ ಹತೋಟಿಗಾಗಿ ಗರ್ಭಪಾತವು ಕಾನೂನುಬದ್ಧವೆಂದೂ ಸರ್ಕಾರದವರು ಘೋಷಿಸಿದ್ದಾರೆ. ಆದರೆ ವೇದಗಳ ಕಾಲಕ್ಕೆ ಈ ಮಹಾಪಾಪವನ್ನು ಯಾರೂ ಕೈಗೊಳ್ಳಬಾರದೆಂದು ನಿಯಮವಿತ್ತು. ಅನಿವಾರ್ಯವಾಗಿ ಅಂಥ ಸಂದರ್ಭವು ಒದಗಿದರೆ ಅದಕ್ಕೆ ಪ್ರಾಯಶ್ಚಿತ್ತವನ್ನೂ ವಿಧಿಸಲಾಗಿತ್ತು . ಆದರೆ ಈಗಿನ ಪರಿಸ್ಥಿತಿಯೇ ಬೇರೆಯಾಗಿದೆ. ಸ್ತ್ರೀಸ್ವಾತಂತ್ರ್ಯದ ಹೆಸರಿನಲ್ಲಿ ಅನಾಚಾರ–ದುರಾಚಾರಗಳು ಬೆಳೆದಿವೆ. ಕಾಲಗತಿಯನ್ನು ಯಾರೂ ಮೀರಲಾರರು ಇರಲಿ. ಭ್ರೂಣಹತ್ಯೆಯಂಥ ಮಹಾಪಾಪವನ್ನೂ ತ್ರಿಸುಪರ್ಣ ಮಂತ್ರಗಳು ತೊಡೆದು ಹಾಕುತ್ತವೆ–ಎಂದು ಇಲ್ಲಿ ಸ್ತುತಿಸಲಾಗಿದೆ. ಈಗ ಮೂರನೆಯ ಅನುವಾಕವನ್ನು ವಿಚಾರಮಾಡೋಣ.

ಓಂ ॥ ಬ್ರಹ್ಮ ಮೇಧವಾ । ಮಧು ಮೇಧವಾ । ಬ್ರಹ್ಮಮೇವ ಮಧು ಮೇಧವಾ । ಬ್ರಹ್ಮಾ ದೇವಾನಾಂ ಪದವೀಃ ಕವೀನಾಮೃಷಿರ್ವಿಪ್ರಾಣಾಂ ಮಹಿಷೋ ಮೃಗಾಣಾಮ್ । ಶ್ಯೇನೋ ಗೃಧ್ರಾಣಾಗ್ ಸ್ವಧಿತಿರ್ವನಾನಾಗ್ಂ ಸೋಮಃ ಪವಿತ್ರಮತ್ಯೇತಿ ರೇಭನ್ । ಹಗ್ಂಸಃ ಶುಚಿಷದ್ವಸುರಂತರಿಕ್ಷಸದ್ಧೋತಾ ವೇದಿಷದತಿಥಿಃ ದುರೋಣಸತ್ । ನೃಷದ್ವರಸದೃತಸದ್ವ್ಯೋಮಸದಬ್ಜಾ ಗೋಜಾ ಋತಜಾ ಅದ್ರಿಜಾ ಋತಂ ಬೃಹತ್ ॥

**ಮೇಧವಾ**—**ಮೇಧ** ಎಂದರೆ ಯಜ್ಞವು. ಯಜ್ಞದಾನತಪಆದಿಸಾಧನಗಳಿಂದ ಬ್ರಹ್ಮವನ್ನು ಅರಿತುಕೊಳ್ಳಬೇಕಾಗಿರುವದರಿಂದ ಬ್ರಹ್ಮವನ್ನು ಮೇಧವತ್ ಎಂದು ಕರೆದಿದೆ. ಅದೇ ವೈದಿಕಪ್ರಯೋಗದಂತೆ **ಮೇಧವಾ** ಎನಿಸಿದೆ. ಇಂಥ ಬ್ರಹ್ಮವು ಮಧುವೂ ಆಗಿದ್ದು ನನಗೆ ಲಭ್ಯವಾಗಲಿ—ಬ್ರಹ್ಮವೇ ದೊರಕಲಿ ಎಂದು ಕೇಳಿಕೊಂಡಿದೆ. ಅನಂತರ ಬಂದಿರುವ **'ಬ್ರಹ್ಮಾ ದೇವಾನಾಮ್'** ಮತ್ತು **'ಹಗ್ಂಸಶ್ಶುಚಿಷದ್'**—ಎಂಬೀ ಎರಡು ಮಂತ್ರಗಳನ್ನೂ ಹಿಂದೆ (ಪುಟ 98 ಮತ್ತು 99ರಲ್ಲಿ) ವ್ಯಾಖ್ಯಾನ ಮಾಡಲಾಗಿದೆ. ಈಗ ಮುಂದಿನ ಭಾಗವನ್ನು ವಿಚಾರಮಾಡೋಣ.

ಓಂ ॥ **ಋಚೇ ತ್ವಾ ಋಚೇ ತ್ವಾ ಸಮಿತ್ಸ್ರವಂತಿ ಸರಿತೋ ನ ಧೇನಾಃ । ಅಂತರ್ಹೃದಾ ಮನಸಾ ಪೂಯಮಾನಾಃ । ಘೃತಸ್ಯ ಧಾರಾ ಅಭಿಚಾಕಶೀಮಿ । ಹಿರಣ್ಯಯೋ ವೇತಸೋ ಮಧ್ಯ ಆಸಾಮ್ । ತಸ್ಮಿಂತ್ಸುಪರ್ಣೋ ಮಧುಕೃತ್ ಕುಲಾಯೀ ಭಜನ್ನಾಸ್ತೇ ಮಧು ದೇವತಾಭ್ಯಃ । ತಸ್ಯಾಽಽಸತೇ ಹರಯಃ ಸಪ್ತ ತೀರೇ ಸ್ವಧಾಂ ದುಹಾನಾ ಅಮೃತಸ್ಯ ಧಾರಾಮ್ ॥**

ಈವರೆಗೆ ತ್ರಿಸುಪರ್ಣ ಎಂಬ ಶಬ್ದವನ್ನು ರೂಢಿಯಾಗಿ ಬಳಸಲಾಗಿತ್ತು. ಈಗ ಅದರ ಲಕ್ಷ್ಯಾರ್ಥವನ್ನು ತಿಳಿಸಲಾಗುವದು. ಜಗತ್ತಿನ ಸೃಷ್ಟಿಸ್ಥಿತಿಲಯಗಳೆಂಬ ಕಾರ್ಯಗಳನ್ನು ನಿರ್ವಹಿಸುವ ಬ್ರಹ್ಮ-ವಿಷ್ಣು-ಮಹೇಶ್ವರರು ತ್ರಿಮೂರ್ತಿಗಳು. ಇವರುಗಳು ಯಾವನಿಂದ ಉಂಟಾದರೋ ಅವನೇ ತ್ರಿಸುಪರ್ಣನು. ಸರ್ವದೇವತಾಸ್ವರೂಪಿಯಾದ ಪರಮಾತ್ಮನು. ಆ ಭಗವಂತನ ಮಹಿಮೆಯನ್ನು ಪ್ರತಿಪಾದಿಸುವದರಿಮದ ಈ ಮಂತ್ರಗಳನ್ನೂ ತ್ರಿಸುಪರ್ಣಗಳೆಂದು ಕರೆಯುತ್ತಾರೆ. ಅಂಥ ತ್ರಿಸುಪರ್ಣನನ್ನು ಇಲ್ಲಿ ಸಂಬೋಧಿಸಿ ''ಎಲೈ ದೇವನೆ, **ತ್ವಾ**—ನಿನ್ನನ್ನು ಕುರಿತು, **ಋಚೇ**—ಋಗ್ವೇದರೂಪನಾದ ನಿನಗೆ ಸಮಿತ್ತನ್ನು ಅಗ್ನಿಯಲ್ಲಿ ಸಮರ್ಪಿಸುತ್ತಿರುವೆನು. ಮತ್ತು **ಋಚೇ**—ನಾನು ಸಮರ್ಪಿಸಿದ ಆಹುತಿಗೆ ಫಲರೂಪವಾಗಿ ಋಗ್ವೇದವನ್ನು ಬಯಸುವೆನು. ಅದನ್ನು ನೀಡುವವನಾಗು'' ಎಂದರ್ಥ. ಮತ್ತು ಅಗ್ನಿಯಲ್ಲಿ ನಾನು ಹೋಮ ಮಾಡಿದ ತುಪ್ಪದ ಧಾರೆಗಳು ನದಿಗಳಂತೆ ನಿನ್ನ ಕಡೆಗೆ ಹರಿಯುತ್ತಿವೆ. **ಧೇನಾಃ**—ಎಂದರೆ ದೇವತೆಗಳು ಪಾನಮಾಡುವಂಥ ಘೃತಧಾರೆಗಳು—ಎಂದರ್ಥ. ಇವು ಮನಸ್ಸಿಗೆ ಪವಿತ್ರತೆಯನ್ನುಂಟುಮಾಡುವವುಗಳೂ ಹೃದಯಪೂರ್ವಕವಾಗಿ ಸಮರ್ಪಿಸಿದವುಗಳೂ ಆಗಿವೆ, ಹಾಗಿಲ್ಲವಾದರೆ ಅಪವಿತ್ರಗಳಾಗುವವು. ದೇವತೆಗಳು ಅವುಗಳನ್ನು ಸ್ವೀಕರಿಸಲಾರರು. ಆದ್ದರಿಂದ

ಪವಿತ್ರವಾದ ಘೃತಧಾರೆಗಳನ್ನು ನಾನು ಎಲ್ಲಾ ದೇವತೆಗಳಿಗೋಸ್ಕರವಾಗಿ ಅಭಿಚಾಕಶೀಮಿ–ಕೊಡುತ್ತಿರುವೆನು–ಎಂದರ್ಥ. ದೇವತೆಗಳಿಗೆ ತುಪ್ಪವೇ ಇಷ್ಟವಾದ ಆಹಾರವು. ಅದನ್ನು ಅಗ್ನಿಯ ಮೂಲಕ ಸಮರ್ಪಿಸುವದನ್ನೇ ಹೋಮವೆನ್ನುವರು. ಈ ಹೋಮವನ್ನು ನಾನು ಪರಮಾತ್ಮನಾದ ನಿನ್ನ ಪ್ರಾಪ್ತಿಗಾಗಿ ಕೈಗೊಂಡಿರುವೆನು–ಎಂದಭಿಪ್ರಾಯ.

ಇಂಥ ಆಜ್ಯಧಾರೆಗಳ ಮಧ್ಯಭಾಗದಲ್ಲಿ ಎಂದರೆ ಆಹವನೀಯಾಗ್ನಿಯಲ್ಲಿ ಸುಪರ್ಣನು ಇದ್ದುಕೊಂಡಿರುವನು. ಆತನು ದೇವತೆಗಳಿಗೆ ಮಧುವನ್ನು ಎಂದರೆ ಮಧುರವಾದ ಹವಿಸ್ಸುಗಳನ್ನು ವಿಭಾಗಮಾಡಿ ಹಂಚುತ್ತಾ ಕುಳಿತಿರುವನು. ಯಜಮಾನನಿಗೆ ಸ್ವರ್ಗಾದಿಸುಖಗಳನ್ನು ಉಂಟುಮಾಡುತ್ತಿರುವನು. ಈತನು ಹಿರಣ್ಮಯನು–ಎಂದರೆ ಜ್ಯೋತಿರ್ಮಯನು. ಮತ್ತು ವೇತಸನು ಎಂದರೆ ಬಹುದ್ರವ್ಯಯುಕ್ತನಾಗಿರುವನು. ಹಾಗೂ ಕುಲಾಯೀ–ಎಂದರೆ ಹೃದಯ ಕುಲಾಯವೆಂಬ ಗೂಡಿನಲ್ಲಿದ್ದು ಕೊಂಡಿರುವನು. ದೇವನೊಬ್ಬನೇ ಅಗ್ನಿಯಲ್ಲಿಯೂ, ಆಜ್ಯದಲ್ಲಿಯೂ, ಮಂತ್ರದಲ್ಲಿಯೂ, ದೇವತೆಗಳಲ್ಲಿಯೂ, ಯಜಮಾನನ ಹೃದಯದಲ್ಲಿಯೂ ನೆಲಸಿರುವನು–ಎಂದಭಿಪ್ರಾಯ. ಇಂಥ ಪರಮಾತ್ಮನ ಸಮೀಪದಲ್ಲಿ ಸ್ಮರಣಮಾತ್ರದಿಂದ ಪಾಪಗಳನ್ನು ಪರಿಹರಿಸುವ ಋಷಿಗಳು ಏಳು ಜನರು ಇದ್ದುಕೊಂಡಿರುವರು. ಇವರುಗಳು ಸ್ವಧಾ–ಎಂಬ ಹೋಮಯೋಗ್ಯವಾದ ದ್ರವ್ಯವನ್ನು ದೇವತೆಗಳಿಗೆ ಪೂರೈಸುವವರಾಗಿ ಅಮೃತಧಾರೆಯನ್ನೇ ಹರಿಸುವಂತೆ ಆಜ್ಯವನ್ನು ಧಾರಾಕಾರವಾಗಿ ಸಮರ್ಪಿಸುತ್ತಾ ಇರುವರು. ಇಂಥ ಋಷಿಮಂಡಲಮಧ್ಯದಲ್ಲಿ ಭಗವಂತನು ಸುಖಾಸೀನನಾಗಿ ಕುಳಿತುಕೊಂಡಿರುವನು ಎಂದಭಿಪ್ರಾಯ. ಈಗ ಫಲಶ್ರುತಿಯನ್ನು ವಿಚಾರ ಮಾಡೋಣ.

**ಓಂ ॥ ಯ ಇದಂ ತ್ರಿಸುಪರ್ಣಮಯಾಚಿತಂ ಬ್ರಾಹ್ಮಣಾಯ ದದ್ಯಾತ್।
ವೀರಹತ್ಯಾಂ ವಾ ಏತೇ ಘ್ನಂತಿ। ಯೇ ಬ್ರಾಹ್ಮಣಾಸ್ತ್ರಿಸುಪರ್ಣಂ
ಪಠಂತಿ। ತೇ ಸೋಮಂ ಪ್ರಾಪ್ನುವಂತಿ। ಆ ಸಹಸ್ರಾತ್ ಪಂಕ್ತಿಂ
ಪುನಂತಿ। ಓಮ್ ॥**

ಹಿಂದಿನಂತೆಯೇ ಈ ಮಂತ್ರಭಾಗಕ್ಕೂ ಅರ್ಥವನ್ನು ತಿಳಿಯಬೇಕು. ಯಾರೂ ಕೇಳಿಕೊಳ್ಳದಿದ್ದರೂ ಬ್ರಾಹ್ಮಣನಿಗೆ ಈ ತ್ರಿಸುಪರ್ಣಮಂತ್ರವನ್ನು ಉಪದೇಶಿಸಿದಲ್ಲಿ ವೀರಹತ್ಯಾದೋಷವನ್ನು ಪರಿಹರಿಸುವದು. ವೀರನೆಂದರೆ ವೇದಶಾಸ್ತ್ರಸಂಪನ್ನನೂ ಶ್ರೌತಸ್ಮಾರ್ತಕರ್ಮಾನುಷ್ಠಾನಪರನೂ ಆದ ಬ್ರಾಹ್ಮಣನು ಅಥವಾ ಪಟ್ಟಾಭಿಷಿಕ್ತನಾದ

ಮಹಾರಾಜನು–ಎಂದರ್ಥ. ಇಂಥವರನ್ನು ಕೊಂದರೆ ವೀರಹತ್ಯೆಯೆನಿಸುವುದು. ಇದೂ ಮಹಾಪಾಪವೇ. ಇನ್ನು ಬ್ರಾಹ್ಮಣನಾಗಿ ಗೃಹಸ್ಥನಾಗಿದ್ದು ಅಗ್ನಿಹೋತ್ರವನ್ನು ಮಾಡದೆ ಅಗ್ನಿಯನ್ನು ಕೈಬಿಟ್ಟವನೂ ವೀರಹತ್ಯೆಯಂಥ ದೋಷಕ್ಕೆ ಗುರಿಯಾಗುವನು. ಅಂಥವನು ಸಹ ತ್ರಿಸುಪರ್ಣಮಂತ್ರವನ್ನು ಪಠನ ಮಾಡಿ ಪಾಪಪರಿಹಾರವನ್ನು ಮಾಡಿಕೊಳ್ಳಬಹುದು. ಇಂಥ ಪ್ರಭಾವವುಳ್ಳದ್ದು ಈ ಮಂತ್ರಗಳು–ಎಂದು ಸ್ತುತಿಸಿ ಉಪಸಂಹಾರಮಾಡಿರುತ್ತದೆ.

## ಮೇಧಾಸೂಕ್ತ

ಈವರೆಗೆ ಬ್ರಹ್ಮಜ್ಞಾನವುಂಟಾಗುವದಕ್ಕೆ ಅಡ್ಡಿಯಾಗುವ ಯಾವ ಮಹಾ ಪಾತಕಗಳುಂಟೋ ಅವುಗಳನ್ನು ಪರಿಹರಿಸಿಕೊಳ್ಳಲು ಮಾಡಬೇಕಾದ ಜಪಮಂತ್ರಗಳನ್ನು ಹೇಳಿದ್ದಾಯಿತು. ಪಂಚಮಹಾಪಾತಕಗಳಲ್ಲಿ ಬ್ರಾಹ್ಮಣವಧೆ ಎಂಬಿದು ದೊಡ್ಡದು. ಇಲ್ಲಿ ಬ್ರಾಹ್ಮಣನೆಂದರೆ ಆ ಜಾತಿಯಲ್ಲಿ ಹುಟ್ಟಿದ ಬ್ರಾಹ್ಮಣ ಮಾತ್ರನು–ಎಂದರ್ಥ ; ಅವನೇನೂ ಅಧ್ಯಯನ – ಶ್ರೌತಾದಿಕರ್ಮಸಂಪನ್ನನಾಗಿರಬೇಕಾಗಿಲ್ಲ. ಇಂಥ ಸಾಮಾನ್ಯ ಬ್ರಾಹ್ಮಣನನ್ನು ಕೊಂದರೂ ಮಹಾಪಾಪವೇ ಸಂಘಟಿಸುವದು. ಆದರೆ ಇದಕ್ಕಿಂತ ಹೆಚ್ಚು ಘೋರತರವಾದದ್ದು ಭ್ರೂಣಹತ್ಯೆಯು. ಅದಕ್ಕಿಂತಲೂ ಘೋರತಮವಾದದ್ದು ವೀರಹತ್ಯೆಯು. ಇಂಥ ಅತಿ ಹೆಚ್ಚಿನ ಮಹಾಪಾಪಗಳನ್ನು ಕೂಡ ತ್ರಿಸುಪರ್ಣಮಂತ್ರವು ಕಳೆಯಬಲ್ಲದು. ಆದ್ದರಿಂದ ಅದನ್ನು ಪ್ರತಿದಿನವೂ ಬದುಕಿರುವವರೆಗೂ ಜಪಿಸುತ್ತಿರಬೇಕು. ಹೀಗಿರುವಲ್ಲಿ ಈ ಮಹಾಪಾಪಗಳಿಗಿಂತ ಸ್ವಲ್ಪ ಕಿರಿದಾದ ಮದ್ಯಪಾನ, ಮಾಂಸಭಕ್ಷಣ, ಕ್ರಯವಂಚನ, ಪರದಾರಗಮನ–ಇತ್ಯಾದಿ ಪಾಪಗಳನ್ನು ಕೂಡ ಈ ಮಂತ್ರಗಳು ಹೋಗಲಾಡಿಸುವವೆಂದು ಹೇಳಬೇಕಾದದ್ದೇ ಇಲ್ಲ. ಈಗಿನ ಕಾಲದಲ್ಲಿಯಂತೂ ಬ್ರಾಹ್ಮಣರೂ ಕೂಡ ಪಾಶ್ಚಾತ್ತ್ಯಸಂಸ್ಕೃತಿಗೆ ಮರುಳಾಗಿ ಅಭಕ್ಷ್ಯಭಕ್ಷಣ ಅಪೇಯಪಾನಗಳನ್ನು ಯಾವ ಭಯವೂ ಇಲ್ಲದೆ ಕೈಗೊಂಡಿರುವರು. ಇಂಥವರು ಕೂಡ ಪಶ್ಚಾತ್ತಾಪವನ್ನು ತಂದುಕೊಂಡು ತಾವು ಮಾಡುತ್ತಿರುವ ದುಷ್ಕೃತ್ಯಗಳನ್ನು ಕೈಬಿಟ್ಟು ಹಿಂದೆ ಮಾಡಿದ್ದಕ್ಕೆ ಪ್ರಾಯಶ್ಚಿತ್ತರೂಪವಾಗಿ ಈ ತ್ರಿಸುಪರ್ಣ ಮಂತ್ರಗಳನ್ನು ಜಪಮಾಡಬೇಕು. ಇದರಿಂದ ಪಾಪಕ್ಷಯವಾಗಿ ಉದ್ಧಾರವಾಗುತ್ತಾರೆ. ಹೀಗೆ ಜ್ಞಾನಪ್ರತಿಬಂಧಕಗಳಾದ ಪಾಪಗಳನ್ನು ನಿವೃತ್ತಿಗೊಳಿಸಿಕೊಳ್ಳುವ ಮೂಲಕ ಜೀವಾತ್ಮನಿಗೂ ಪರಮಾತ್ಮನಿಗೂ ಇರುವ ಅಭೇದವನ್ನು ಅರಿಯಲೂ ಪ್ರಯತ್ನಿಸಬೇಕು. ಅಂಥ ಅಭೇದಜ್ಞಾನಕ್ಕೆ ಸಾಧನವಾದದ್ದು ಧಾರಣಾಶಕ್ತಿಯು. ಶಾಸ್ತ್ರಗಳನ್ನು ಮನಸ್ಸಿನಲ್ಲಿ ನಿರಂತರವಾಗಿ ಧರಿಸಬೇಕಾದರೆ ಅದಕ್ಕೆ ಮೇಧಾಶಕ್ತಿಯು ಬೇಕಾಗುತ್ತದೆ. ವೇದಾಧ್ಯಯನವಂತೂ ಮೇಧಾಶಕ್ತಿಯಿಲ್ಲದೆ ಸಾಗುವದೇ ಇಲ್ಲ. ಆ ಮೇಧೆಯೂ ಭಗವಂತನ ವಿಭೂತಿಯೇ

ಆಗಿದೆ. ಗೀತೆಯಲ್ಲಿ "ಸ್ಮೃತಿರ್ಮೇಧಾ ಧೃತಿಃ ಕ್ಷಮಾ" ಎಂದು ಭಗವಂತನು ಸ್ಮೃತಿಮೇಧಾದಿಗಳನ್ನು ತನ್ನ ಅಂಶವೆಂದೇ ತಿಳಿಸಿರುತ್ತಾನೆ. ಇಂಥ ಮೇಧೆಯನ್ನು ಅಥವಾ ಧಾರಣಾಶಕ್ತಿಯನ್ನು ದೇವಿಯೆಂದು ಹೊಗಳಿ ಆಕೆಯನ್ನು ಪಡೆಯಲು ಈಗ ಪ್ರಾರ್ಥಿಸಲಾಗುವದು.

**ಓಂ ॥ ಮೇಧಾ ದೇವೀ ಜುಷಮಾಣಾ ನ ಆಗಾತ್ ವಿಶ್ವಾಚೀ ಭದ್ರಾ ಸುಮನಸ್ಯಮಾನಾ । ತ್ವಯಾ ಜುಷ್ಟಾ ನುದಮಾನಾ ದುರುಕ್ತಾನ್ ಬೃಹದ್ವದೇಮ ವಿದಥೇ ಸುವೀರಾಃ ॥**

ಗ್ರಂಥ ಹಾಗೂ ಅದರ ಅರ್ಥವನ್ನು ಧರಿಸುವ ಶಕ್ತಿರೂಪಳಾದ **ಮೇಧಾ ದೇವಿಯು** ಸಂತುಷ್ಟಳಾಗಿ–ಸುಪ್ರೀತಳಾಗಿ–ನಮ್ಮನ್ನು ಸೇವಿಸುವವಳಾಗಲಿ. ಆಕೆಯು **ವಿಶ್ವಾಚಿಯೆನಿಸಿರುವವಳು.** ಏಕೆಂದರೆ ವಿಶ್ವವನ್ನೆಲ್ಲ ಚೆನ್ನಾಗಿ ಬಲ್ಲವಳಾಗಿರುವಳು. ಪ್ರತಿಯೊಂದು ವಸ್ತುವನ್ನೂ ಒಳಹೊಕ್ಕು ಬಲ್ಲವಳೇ **ವಿಶ್ವಾಚಿಯು.** ಆದ್ದರಿಂದಲೇ ಭದ್ರಳು–ಮಂಗಳರೂಪಳು–ಎಂದರ್ಥ. ಇಂಥವಳು ನಮಗೆ ಶೋಭನವಾದ–ಪ್ರಸನ್ನವಾದ ಮನಸ್ಸಿನಿಂದ ಕೂಡಿ ಅನುಗ್ರಹಮಾಡುವವಳಾಗಿ ನಮ್ಮ ಕಡೆಗೆ ಬರುವವಳಾಗಲಿ. ಮತ್ತು "ಎಲೌ ದೇವಿಯೆ, ನಿನ್ನಿಂದ ಅನುಗೃಹೀತರಾದ ನಾವು ದುರುಕ್ತಿಗಳನ್ನು ಎಂದರೆ ವೇದಬಾಹ್ಯವೂ ಪುರುಷಾರ್ಥಗಳಿಗೆ ಸಹಾಯಕವಲ್ಲದವುಗಳೂ ಆದ ಮಾತುಗಳನ್ನು **ನುದಮಾನಾಃ**–ಕೈಬಿಟ್ಟವರಾಗಿ ವೇದೈಕನಿಷ್ಠರಾಗಿ ಹಾಗೂ ಸುವೀರರಾಗಿ–ಎಂದರೆ ಯೋಗ್ಯರಾದ ಮಕ್ಕಳು ಹಾಗೂ ಶಿಷ್ಯರೊಡಗೂಡಿ ಯಜ್ಞದಲ್ಲಿ (ವಿದಥೇ) ಪ್ರವೃತ್ತರಾಗುವಂತಾಗಲಿ. ಆ ಮೂಲಕ ಶುದ್ಧಾಂತಃಕರಣರಾಗಿ **ಬೃಹದ್ವದೇಮ**–ಪರಬ್ರಹ್ಮತತ್ತ್ವವನ್ನು ಹೇಳುವೆವು–ಎಂದರೆ ಅದರ ವಿಚಾರವಾಗಿ ಮಾತನಾಡುವೆವು"–ಎಂದರ್ಥ. "**ಅನ್ಯಾ ವಾಚೋ ವಿಮುಂಚಥ**" ಎಂಬ ಮತ್ತೊಂದು ಉಪನಿಷದುಕ್ತಿಯಂತೆ ಮಿಕ್ಕ ಮಾತುಗಳನ್ನು ಕೈಬಿಟ್ಟು ಆ ಭಗವಂತನ ವಿಚಾರವನ್ನೇ ಜಿಜ್ಞಾಸೆ ಮಾಡುವಂತೆ ನೀನು ಅನುಗ್ರಹಿಸುವವಳಾಗು–ಎಂದು ಬೇಡಿಕೊಳ್ಳಲಾಗಿದೆ.

**ಓಂ ॥ ತ್ವಯಾ ಜುಷ್ಟ ಋಷಿರ್ಭವತಿ ದೇವಿ ತ್ವಯಾ ಬ್ರಹ್ಮಾ (ಆ) ಗತಶ್ರೀರುತ ತ್ವಯಾ । ತ್ವಯಾ ಜುಷ್ಟಶ್ಚಿತ್ರಂ ವಿಂದತೇ ವಸು ಸಾ ನೋ ಜುಷಸ್ವ ದ್ರವಿಣೋ ನ ಮೇಧೇ ॥**

"ಎಲಾ ಮೇಧಾದೇವಿಯೆ, ನಿನ್ನಿಂದ ಸೇವಿಸಲ್ಪಟ್ಟವನು–ಎಂದರೆ ನಿನ್ನ ಅನುಗ್ರಹಕ್ಕೆ ಪಾತ್ರನಾದವನು ಋಷಿಯಾಗುವನು–ಎಂದರೆ ಅತೀಂದ್ರಿಯಜ್ಞಾನವುಳ್ಳವ

ನಾಗುವನು. ಹಾಗೆಯೇ ನಿನ್ನ ಕೃಪಾಪಾತ್ರನಾದವನು ಬ್ರಹ್ಮನಾಗುವನು–ಎಂದರೆ ಹಿರಣ್ಯಗರ್ಭಪದವಿಯನ್ನು ಪಡೆಯುವನು. ಅಷ್ಟೇ ಅಲ್ಲ. ಅಂಥ ಪುರುಷನು ಸಂಪತ್ತುಗಳನ್ನು ಪಡೆದುಕೊಳ್ಳುವನು. ಮತ್ತು ಚಿತ್ರಂ ಎಂದರೆ ನಾನಾ ವಿಧವಾದ ಗೋವು, ಕುದುರೆ, ಚಿನ್ನ, ಧಾನ್ಯ, ವಸ್ತ್ರ ಅಲಂಕಾರಾದಿರೂಪವಾದ ಐಶ್ವರ್ಯವನ್ನು ಹೊಂದುವನು. ಸಮೃದ್ಧಿಯಾದ ಧನವನ್ನೂ ಪಡೆದುಕೊಳ್ಳುವನು. ಆದ್ದರಿಂದ ಎಲೌ ಮೇಧಾದೇವಿಯೆ, ಇಂಥ ಮಹಿಮೆಯುಳ್ಳ ನೀನು ಧನಪತಿಯು ಹೇಗೋ ಹಾಗೆ–ನಮ್ಮನ್ನು ಅನುಗ್ರಹಿಸು. ಹೇಗೆ ಧನವಂತನು ದರಿದ್ರರನ್ನು ಅನುಗ್ರಹಿಸಿ ಅವರ ಇಷ್ಟಾರ್ಥವನ್ನು ಪೂರೈಸುವನೋ ಹಾಗೆ ನಿನ್ನಿಂದ ನಾನು ಅನುಗೃಹೀತನಾಗುವೆನು''–ಎಂದರ್ಥ. ಇಲ್ಲಿ **ದ್ರವಿಣೋನ**– ಎಂಬಲ್ಲಿ ನಕಾರವು ಇವ ಎಂಬ ಉಪಮಾರ್ಥದಲ್ಲಿ ಬಂದಿದೆ. ಆದರೆ ಧನವಂತ ರಾಗಿದ್ದರೂ ಎಷ್ಟೋ ಜನರು ಬಡವರನ್ನು ಉದ್ಧರಿಸುವದಿಲ್ಲವಲ್ಲ? ಅವರಿಗೆ ಬಡವರಿ ಗಿಂತ ಹೆಚ್ಚಾಗಿ ಧನದ ಮೇಲೆಯೇ ಪ್ರೀತಿಯಿರುತ್ತದೆಯಲ್ಲ? ಎಂದರೆ ಅಂಥವರು **ದ್ರವಿಣಪತಿಗಳಲ್ಲ**– ಎಂದು ತಿಳಿಯಬೇಕು. ಲಕ್ಷ್ಮೀಪತಿಯೆನಿಸಿಕೊಳ್ಳಬೇಕಾದರೆ ಲಕ್ಷ್ಮಿಯನ್ನು ತನಗೆ ಬೇಕಾದಂತೆ ಬಳಸಿ ಭೋಗಿಸುವವನಾಗಬೇಕು. ಹಾಗಲ್ಲದೆ ಲಕ್ಷ್ಮಿಯನ್ನು ಕೂಡಿಟ್ಟರೆ ಅಂಥವನು ಲಕ್ಷ್ಮೀಪುತ್ರನೆನಿಸುವನು. ಪುತ್ರನಿಗೆ ತಾಯಿಯನ್ನು ಕಾಪಾಡುವುದು ಮಾತ್ರ ಸಾಧ್ಯವು. ಹಾಗೆಯೇ ಹಣವನ್ನು ಕೂಡಿಟ್ಟವರು ಅದನ್ನು ಕಾಪಾಡಿ ತಾವು ದರಿದ್ರರಾಗಿಯೇ ಬಾಳುವರು. ಆದ್ದರಿಂದ ದ್ರವಿಣಪತಿಗಳು ದ್ರವಿಣಪುತ್ರರಿಗಿಂತ ಬೇರೆಯೆಂದು ತಿಳಿಯಬೇಕು.

ಈಗ ಮೇಧಾಪ್ರದರಾದ ದೇವತೆಗಳನ್ನು ಕುರಿತು ಪ್ರಾರ್ಥಿಸುವ ಮಂತ್ರಗಳನ್ನು ವಿಚಾರ ಮಾಡೋಣ.

**ಓಂ ॥ ಮೇಧಾಂ ಮ ಇಂದ್ರೋ ದದಾತು ಮೇಧಾಂ ದೇವೀ ಸರಸ್ವತೀ।**
**ಮೇಧಾಂ ಮೇ ಅಶ್ವಿನಾವುಭಾವಾಧತ್ತಾಂ ಪುಷ್ಕರಸ್ರಜಾ ॥**
**ಅಪ್ಸರಾಸು ಚ ಯಾ ಮೇಧಾ ಗಂಧರ್ವೇಷು ಚ ಯನ್ಮನಃ ।**
**ದೇವೀಂ ಮೇಧಾ ಸರಸ್ವತೀ ಸಾ ಮಾಂ ಮೇಧಾ**
**ಸುರಭಿರ್ಜುಷತಾಗ್ಂ ಸ್ವಾಹಾ ॥**

ಇಂದ್ರನು ಮೇಧಾಪ್ರದನು. ಶಿಕ್ಷಾವಲ್ಲಿಯಲ್ಲಿಯೂ **''ಸ ಮೇಂದ್ರೋ ಮೇಧಯಾ ಸ್ಪೃಣೋತು''** ಎಂದು ಪ್ರಾರ್ಥಿಸಲಾಗಿದೆ. ಹಾಗೆಯೇ ದೇವಿಯಾದ ಸರಸ್ವತಿಯೂ ಮೇಧೆಯನ್ನು ದಯಪಾಲಿಸುವವಳಾಗಿದ್ದಾಳೆ. ಇನ್ನು ಪುಷ್ಕರಸ್ರಜರಾದ ಎಂದರೆ ಪದ್ಮಪುಷ್ಪಗಳ ಮಾಲೆಯಿಂದ ಅಲಂಕೃತರಾದ ಅಶ್ವಿನೀದೇವತೆಗಳು ಸಹ ನನಗೆ

ಮೇಧಾಶಕ್ತಿಯನ್ನು ಅನುಗ್ರಹಿಸಲಿ–ಎಂದು ಪ್ರಾರ್ಥಿಸಲಾಗಿದೆ. ಈ ಮೂವರು ದೇವಗತೆಗಳನ್ನೂ ಮೇಧಾಕಾಮನಾದವನು ಉಪಾಸನೆಮಾಡಬೇಕು. ವಿಶೇಷವಾಗಿ ಮೇಧಾಗುಣವು ದೇವತಾಸ್ತ್ರೀಯರಾದ ಅಪ್ಸರೆಯರಲ್ಲಿರುವದು. ಹಾಗೂ ದೇವಲೋಕದ ಗಾಯಕರಾದ ಗಂಧರ್ವರಲ್ಲಿರುವದು. ಅವರುಗಳ ಮನಸ್ಸು ಮೇಧಾತ್ಮಕವಾಗಿರುವದು. ಹಾಗೆಯೇ ದೈವೀ–ಎಂದರೆ ಹಿರಣ್ಯಗರ್ಭನೇ ಮೊದಲಾದ ದೇವತೆಗಳಲ್ಲಿರುವ ಮೇಧೆಯೂ ಅಸಾಧಾರಣವಾದುದು. ಸರಸ್ವತೀ ಎಂದರೆ ವೇದಶಾಸ್ತ್ರರೂಪವಾಗಿ ಪ್ರಸಿದ್ಧವಾಗಿರುವ ವಿದ್ಯೆಗಳೆಲ್ಲವೂ ಮೇಧಾದೇವಿಯ ಮಹಿಮೆಗಳೇ ಆಗಿರುವವು. ಇಂಥ ಸುರಭಿ ಎಂದರೆ ಕಾಮಧೇನುವಿನಂತೆ ಸಕಲ ಇಷ್ಟಾರ್ಥಗಳನ್ನೂ ಉಂಟು ಮಾಡಿಕೊಡುವ ಸರ್ವದೇವತಾತ್ಮಕಳಾದ ಮೇಧಾಮಾತೆಯು ಯಾವಾಗಲೂ ನನ್ನನ್ನು ಸೇವಿಸುವವಳಾಗಲಿ–ಎಂದು ಬೇಡಿಕೊಳ್ಳಲಾಗಿದೆ.

ಓಂ ॥ ಆ ಮಾಂ ಮೇಧಾ ಸುರಭಿರ್ವಿಶ್ವರೂಪಾ ಹಿರಣ್ಯವರ್ಣಾಜಗತೀ ಜಗಮ್ಯಾ । ಊರ್ಜಸ್ವತೀ ಪಯಸಾ ಪಿನ್ವಮಾನಾ ಸಾ ಮಾಂ ಮೇಧಾ ಸುಪ್ರತೀಕಾ ಜುಷಂತಾಮ್ ॥

ಮತ್ತೊಮ್ಮೆ ಇಲ್ಲಿ ಮೇಧಾದೇವಿಯನ್ನು ಪ್ರಾರ್ಥಿಸಲಾಗಿದೆ. ಸುರಭಿ ಎಂದರೆ ಸುಗಂಧಪೂರಿತಳಾದ, ಸಕಲ ಶಾಸ್ತ್ರಗಳನ್ನೂ ಧರಿಸುವ ಶಕ್ತಿಯುಳ್ಳವಳಾದ್ದರಿಂದ ವಿಶ್ವರೂಪಳೆನಿಸಿರುವ, ದೇವತೆಗಳ ಶರೀರಗಳನ್ನು ಹೊಕ್ಕು ಸುವರ್ಣಸಮಾನವಾದ ಮೈಬಣ್ಣವುಳ್ಳವಳಾಗಿ ಹಿರಣ್ಯವರ್ಣಳೆನಿಸಿರುವ, ಎಲ್ಲೆಲ್ಲಿಯೂ ಇದ್ದುಕೊಂಡು ಜಗದ್ವ್ಯಾಪಕಳಾಗಿದ್ದು ಜಗತೀ ಎನಿಸಿರುವ, ಪುರುಷಾರ್ಥಗಳನ್ನು ಬಯಸುವವರಿಂದ ಆರಾಧಿಸಲ್ಪಡುವವಳಾದ್ದರಿಂದ ಜಗಮ್ಯಾ ಎನಿಸಿರುವ, ಬಲ ಸಂಪನ್ನಳಾದ್ದರಿಂದ ಊರ್ಜಸ್ವತಿಯೂ ಹಾಲು–ಮುಂತಾದ ರಸಗಳಿಂದ ನಮ್ಮನ್ನು ಸಂತೋಷಗೊಳಿಸುವವಳೂ ಆದ ಮೇಧಾದೇವಿಯು ಸುಪ್ರೀತಳಾಗಿ ಎಂದರೆ ಸುಖಪ್ರದಳಾಗಿ ನಮ್ಮನ್ನು ಬಂದು ಸೇರಲಿ–ಎಂದಭಿಪ್ರಾಯ.

ಓಂ ॥ ಮಯಿ ಮೇಧಾಂ ಮಯಿ ಪ್ರಜಾಂ ಮಯ್ಯಗ್ನಿಸ್ತೇಜೋ ದಧಾತು ಮಯಿ ಮೇಧಾಂ ಮಯಿ ಪ್ರಜಾಂ ಮಯಿ ಮಯೀಂದ್ರ ಇಂದ್ರಿಯಂ ದಧಾತು ಮಯಿ ಮೇಧಾಂ ಮಯಿ ಪ್ರಜಾಂ ಮಯಿ ಸೂರ್ಯೋ ಭ್ರಾಜೋ ದಧಾತು ॥

ಈ ಮಂತ್ರದಲ್ಲಿ ಮತ್ತೆ ಅಗ್ನಿ , ಇಂದ್ರ , ಸೂರ್ಯರುಗಳನ್ನು ಮೇಧಾಸಿದ್ಧಿಗಾಗಿ ಪ್ರಾರ್ಥಿಸಲಾಗಿದೆ. ಸಾಮಾನ್ಯವಾಗಿ ಹೋಮಗಳನ್ನು ನಡೆಯಿಸಿದ ಅನಂತರ ಕೊನೆಯಲ್ಲಿ ಅಗ್ನಿಯನ್ನು ಪೂಜೆಮಾಡಿ ಈ ಮಂತ್ರಗಳಿಂದ ಪ್ರಾರ್ಥಿಸುವದು ವಾಡಿಕೆಯಲ್ಲಿದೆ. ಬ್ರಹ್ಮಚಾರಿಗಳು ಮಾಡುವ ಅಗ್ನಿಕಾರ್ಯದ ಕಡೆಯಲ್ಲಿಯೂ ಈ ಮಂತ್ರವನ್ನು ಹೇಳಿ ನಮಸ್ಕರಿಸುವಂತೆ ತಿಳಿಸಲಾಗುತ್ತದೆ. ಇಲ್ಲಿ ಅಗ್ನಿಯು ಮೇಧೆ–ಪ್ರಜೆ ಎಂಬ ಸಿದ್ಧಿಗಳೊಡನೆ ತೇಜಸ್ಸನ್ನು ನೀಡಲಿ ಎಂದು ಕೇಳಿಕೊಳ್ಳಲಾಗಿದೆ. ವೇದಾಧ್ಯಾಯನದಿಂದ ಲಭಿಸುವ ತೇಜಸ್ಸೇ ಬ್ರಹ್ಮವರ್ಚಸವೆನಿಸುವದು. ಹಾಗೆಯೇ ಇಂದ್ರನು ಮೇಧಾ– ಪ್ರಜಾಸಂಪತ್ತುಗಳೊಡನೆ ಇಂದ್ರಿಯವನ್ನು ಎಂದರೆ ವೀರ್ಯಪುಷ್ಟಿಯನ್ನುಂಟುಮಾಡಲಿ–ಎಂದು ಪ್ರಾರ್ಥಿಸಿದೆ. ಅನಂತರ ಸೂರ್ಯನು ಮೇಧಾ ಪ್ರಜಾಸಂತತಿಯೊಡನೆ ಭ್ರಾಜಸ್ಸನ್ನು ಎಂದರೆ ಕಾಣಿಸಿಕೊಂಡ ಮಾತ್ರದಿಂದ ಶತ್ರುವಿಗೆ ಭಯವನ್ನುಂಟುಮಾಡುವಂಥ ಮುಖಕಾಂತಿಯನ್ನು ಕೊಡಲಿ–ಎಂದು ಬೇಡಿಕೊಳ್ಳಲಾಗಿದೆ. ಇಲ್ಲಿ ಅಗ್ನಿ ಸೂರ್ಯರು ಪ್ರತ್ಯಕ್ಷದೇವತೆಗಳು. ಇಂದ್ರನು ಪರೋಕ್ಷದೇವತೆಯು. ಆದರೂ ಪ್ರತ್ಯಕ್ಷದೇವತೆಗಳಂತೆಯೇ ಪರೋಕ್ಷದೇವತೆಯನ್ನೂ ಮಂತ್ರಶಕ್ತಿಯಿಂದ ಹೃದಯದಲ್ಲಿ ಭಾವಿಸಿ ಸಾಕ್ಷಾತ್ಕರಿಸಿಕೊಂಡು ವರಗಳನ್ನು ಬೇಡಿಕೊಳ್ಳಬೇಕು ಎಂದಭಿಪ್ರಾಯ.

## ಮೃತ್ಯುನಿವಾರಣಮಂತ್ರಗಳು

**ಓಂ ॥ ಅಪೈತು ಮೃತ್ಯುರಮೃತಂ ನ ಆಗನ್ ವೈವಸ್ವತೋ ನೋ ಅಭಯಂ ಕೃಣೋತು । ಪರ್ಣಂ ವನಸ್ಪತೇರಿವಾಭಿ ನಃ ಶೀಯತಾಗ್ಂ ರಯಿಃ ಸಚತಾಂ ನಃ ಶಚೀಪತಿಃ ॥**

ಈ ಮಂತ್ರದಿಂದಾರಂಭಿಸಿ ಕೆಲವು ಮಂತ್ರಗಳಿಂದ ಮೃತ್ಯುನಿವಾರಣೆಗಾಗಿಯೂ ಆಯುಷ್ಯಾರೋಗ್ಯ ಐಶ್ವರ್ಯಾದಿಗಳ ಪ್ರಾಪ್ತಿಗಾಗಿಯೂ ಭಗವಂತನನ್ನು ಪ್ರಾರ್ಥಿಸಲಾಗುವದು. ಎಲೈ ಪರಮಾತ್ಮನೆ, ಮೃತ್ಯುವು ನಮ್ಮಿಂದ ದೂರವಾಗಿ ತೊಲಗಲಿ, ಅಮೃತವು ಎಂದರೆ ಮೋಕ್ಷಸುಖವು ನಮಗೆ ಲಭಿಸಲಿ; ನಮ್ಮನ್ನು ಬಂದು ಸೇರಲಿ; ಅದಕ್ಕಾಗಿ ಯಮನು–ನಮಗೆ ನರಕದುಃಖಾದಿಗಳಿಲ್ಲದ ಅಭಯಪದವಿಯನ್ನು ಉಂಟುಮಾಡಲಿ; ಯಮನೂ ಬ್ರಹ್ಮಜ್ಞಾನಿಯಾದ್ದರಿಂದ ಮೋಕ್ಷಸುಖವನ್ನು ದಯಪಾಲಿಸಬಲ್ಲವನಾಗಿರುತ್ತಾನೆ. ಆತನು ನಮ್ಮ ಪಾಪಗಳನ್ನೆಲ್ಲ ಅರಳಿಯೇ ಮುಂತಾದ ಮರಗಳ ಹಣ್ಣಾದ ಎಲೆಗಳು ಉದುರಿಹೋಗುವಂತೆ ಹೋಗಲಾಡಿಸಲಿ. ಮತ್ತು ನಮಗೆ ರಯಿ–ಎಂದರೆ ಮಹದೈಶ್ವರ್ಯವನ್ನು ಕೊಟ್ಟು ಸಚತಾಂ–ಕಾಪಾಡಲಿ. ಅಂಥ ರಯಿಯು ಎಂದರೆ

ಸಂಪತ್ತು ಶಚೀಪತಿಃ–ಶಚೀದೇವಿಯ ಪತಿಯಾದ ದೇವೇಂದ್ರನ ಸಂಪತ್ತಿನಂತೆಯೇ ಅಪರಿಮಿತವೂ ಆನಂದಕರವೂ ಉತ್ಕೃಷ್ಟವಾದುದೂ ಆಗಿರಲಿ–ಎಂದು ಪ್ರಾರ್ಥಿಸಲಾಗಿದೆ.

ಓಂ ॥ **ಪರಂ ಮೃತ್ಯೋ ಅನುಪರೇಹಿ ಪಂಥಾಂ ಯಸ್ತೇ ಸ್ವ ಇತರೋ ದೇವಯಾನಾತ್ । ಚಕ್ಷುಷ್ಮತೇ ಶೃಣ್ವತೇ ತೇ ಬ್ರವೀಮಿ ಮಾನಃ ಪ್ರಜಾಗ್ಂ ರೀರಿಷೋ ಮೋತ ವೀರಾನ್ ॥**

ಈ ಮಂತ್ರದಲ್ಲಿ ಮೃತ್ಯುದೇವತೆಯನ್ನು ಕುರಿತು ಹೀಗೆಂದು ಕೇಳಿಕೊಳ್ಳಲಾಗಿದೆ. ''ಎಲೈ ಮೃತ್ಯುವೆ, ದೇವಯಾನವೆಂಬ ಶುಕ್ಲಗತಿ ಹಾಗೂ ಪಿತೃಯಾಣವೆಂಬ ಕೃಷ್ಣಗತಿ ಇವೆರಡೂ ಉಪಾಸಕರಿಗೂ ಕರ್ಮಿಗಳಿಗೂ ಪರಲೋಕಕ್ಕೆ ಹೋಗುವ ದಾರಿಗಳಾಗಿವೆಯಷ್ಟೆ. ಅವುಗಳಲ್ಲಿ ಯಾವದಾದರೊಂದು ಮಾರ್ಗದಲ್ಲಿ ನಾನು ಪ್ರಯಾಣ ಮಾಡಲಿದ್ದೇನೆ. ನೀನಾದರೊ, ಆ ಎರಡು ಮಾರ್ಗಗಳಲ್ಲಿಯೂ ಬರಬೇಡ. ಏಕೆಂದರೆ ನಾನು ನಿನ್ನನ್ನು ನೋಡಲಾರೆನು. ಆದ್ದರಿಂದ ನಿನ್ನ ಮಾರ್ಗದಲ್ಲಿಯೇ ನೀನು ಹೋಗುವವನಾಗು. (ಮೃತ್ಯುಮಾರ್ಗವು ದಕ್ಷಿಣಾಯನೋತ್ತರಾಯಣ ಮಾರ್ಗಗಳಿಗಿಂತ ಬೇರೆಯೇ ಆಗಿರುವದು). ನಿನ್ನ ಪರಂ ಎಂದರೆ ತೃತೀಯಮಾರ್ಗದಲ್ಲಿ ನೀನು ಸಂಚರಿಸುವವನಾಗು. ಮತ್ತು ನಮ್ಮ ಪ್ರಜೆಗಳನ್ನಾಗಲಿ, ವೀರರಾದ ಸೇವಕರನ್ನಾಗಲಿ ನೀನು ಹಿಂಸೆ ಮಾಡಬೇಡ. ಮತ್ತು ನೀನು ಕಣ್ಣು, ಕಿವಿಗಳುಳ್ಳವನು. ಇಂಥ ನಿನಗೆ ನಾನು ಹೇಳುತ್ತಿರುವೆನು. ಆದ್ದರಿಂದ ನನ್ನ ಪ್ರಾರ್ಥನೆಯನ್ನು ಸಫಲಗೊಳಿಸುವವನಾಗು'' ಎಂದರ್ಥ. ಮೃತ್ಯುದೇವತೆಗೆ ಕರುಣೆಯಿಲ್ಲ. ಆದ್ದರಿಂದ ಕಣ್ಣುಕಿವಿಗಳಿದ್ದರೂ ಇಲ್ಲದಂತೆ ಎಂದು ಹೇಳುವುದುಂಟು. ಮೃತ್ಯುವು ನ್ಯಾಯನಿಷ್ಠನು. ನ್ಯಾಯಕ್ಕೆ ಕಣ್ಣಿಲ್ಲ ಎಂದೂ ಜನರು ಆಡಿಕೊಳ್ಳುತ್ತಾರೆ. ಏಕೆಂದರೆ ಕೃಪೆಮಾಡಿದರೆ ಪಕ್ಷಪಾತಮಾಡಿದಂತಾಗಿ ನ್ಯಾಯವು ಲೋಪವಾಗುವದು. ತಕ್ಕಡಿ ಬಡತನವನ್ನು ಬಲ್ಲದೆ? ಎಂದಂತೆ ಮೃತ್ಯುದೇವತೆಯು ಪಕ್ಷಪಾತವಿಲ್ಲದೆ ನ್ಯಾಯಪ್ರಾಪ್ತವಾದ ತನ್ನ ಕಾರ್ಯವನ್ನು ಚಾಚೂತಪ್ಪದೆ ನೆರವೇರಿಸಿಬಿಡುವನು. ಆಗ ಅವನು ''ನನ್ನನ್ನೇಕೆ ಬೇಡುತ್ತೀಯೆ ? ನಾನು ಕಣ್ಣುಕಿವಿಗಳಿಲ್ಲದವನು. ಇಂಥವನ ಮುಂದೆ ನೀನು ಪ್ರಾರ್ಥಿಸಿ ಫಲವೇನು? ನಾನು ಸಮವರ್ತಿಯು'' ಎಂದುಬಿಟ್ಟರೆ ಮಾಡುವದೇನು ? ಅದಕ್ಕಾಗಿ ಭಕ್ತನು ಹೀಗೆ ಬೇಡುತ್ತಿದಾನೆ: ಎಲೈ ಮೃತ್ಯುವೆ, ನೀನು ದೇವತೆಯಾಗಿದ್ದು ಪಾಪಿಗಳನ್ನು ನಿನ್ನ ಕರ್ತವ್ಯಕ್ಕೆ ತಕ್ಕಂತೆ ನಿಗ್ರಹಿಸುವಾಗ ಕಣ್ಣುಕಿವಿಗಳಿಲ್ಲದವನಂತೆಯೇ ವರ್ತಿಸುವದು ಸರಿ. ಆದರೆ ನಿನ್ನನ್ನು ಆರಾಧನೆ ಮಾಡಿದ ಭಕ್ತರಿಗೆ ವರಪ್ರದಾನ ಮಾಡುವಾಗ ನೀನು ಚಕ್ಷುಷ್ಮಂತನೂ

ಶ್ರೋತ್ರವಂತನೂ ಆಗಿಯೇ ಇರುವೆ. ಅಂಥ ನಿನ್ನಲ್ಲಿ ಈ ನನ್ನ ಪ್ರಾರ್ಥನೆಗಳನ್ನು ಇಡುತ್ತಿದೇನೆ''–ಎಂದಭಿಪ್ರಾಯ.

**ಓಂ ॥ ವಾತಂ ಪ್ರಾಣಂ ಮನಸಾಽನ್ವಾರಭಾಮಹೇ ಪ್ರಜಾಪತಿಂ ಯೋ ಭುವನಸ್ಯ ಗೋಪಾಃ। ಸ ನೋ ಮೃತ್ಯೋಸ್ತ್ರಾಯತಾಂ ಪಾತ್ವಗ್ಂಹಸೋ ಜ್ಯೋಗ್ ಜೀವಾ ಜರಾಮಶೀಮಹಿ ॥**

ಇದು ಪ್ರಜಾಪತಿಯನ್ನು ಪ್ರಾರ್ಥಿಸುವ ಮಂತ್ರವಾಗಿದೆ. ನಾವು ಆ ಪ್ರಜಾಪತಿಯನ್ನು **ಮನಸಾ**–ಎಂದರೆ ಅಂತರಂಗಭಕ್ತಿಪೂರ್ವಕವಾಗಿ ಸ್ತುತಿಸುತ್ತೇವೆ. ಆರಾಧಿಸುತ್ತೇವೆ. ಆತನು ಯಾರು? ಎಂದರೆ ವಾತನು–ಅಂತರಿಕ್ಷದಲ್ಲಿ ವಾಯುರೂಪದಿಂದ ಇದ್ದುಕೊಂಡಿರುವ ದೇವತೆಯು. ಆತನೇ ಪ್ರಾಣನು. ಆಧ್ಯಾತ್ಮಿಕವಾಗಿ ಸಮಸ್ತಜೀವರುಗಳ ಶರೀರವನ್ನೂ ಹೊಕ್ಕು ಪ್ರಾಣಾಪಾನಾದಿರೂಪದಲ್ಲಿನೆಲಸಿರುವವನು. ಹಾಗೂ **ಭುವನಸ್ಯ ಗೋಪಾಃ**–ಬ್ರಹ್ಮಾಂಡವನ್ನೆಲ್ಲ ಕಾಪಾಡುವವನು. ಇಂಥ ಆತನು ನಮ್ಮನ್ನು ಅಪಮೃತ್ಯುದೇವತೆಯ ದೆಸೆಯಿಂದ ಕಾಪಾಡಲಿ. ಮತ್ತು ಪಾಪಗಳಿಂದಲೂ ಬಿಡಿಸಿ ಕಾಪಾಡಲಿ. ನಾವು ಬಹುಕಾಲ ಬದುಕುವವರಾಗಿ ವಾರ್ಧಕ್ಯವನ್ನು ಹೊಂದುವಂತಾಗಲಿ–ಎಂದರೆ ಸಂಪೂರ್ಣವಾದ ಆಯುಷ್ಯವನ್ನು ಹೊಂದಿ ಬಾಲ್ಯ– ಕೌಮಾರ–ಯೌವನಾವಸ್ಥೆಗಳನ್ನು ಅನುಭವಿಸಿದಂತೆಯೇ ವಾರ್ಧಕ್ಯವನ್ನೂ ಅನುಭವಿಸಿ ಆಯುಸ್ಸು ಪೂರ್ಣವಾದ ಮೇಲೆ ದೇಹತ್ಯಾಗವನ್ನು ಮಾಡುವಂತಾಗಲಿ. ಕಾಲಮೃತ್ಯುವು ಬರಲಿ–ಅಕಾಲ ಮೃತ್ಯುವು ಬಾರದಿರಲಿ–ಎಂದಭಿಪ್ರಾಯ.

**ಓಂ ॥ ಅಮುತ್ರ ಭೂಯಾದಥ ಯದ್ಯಮಸ್ಯ ಬೃಹಸ್ಪತೇ ಅಭಿಶಸ್ತೇರಮುಂಚಃ । ಪ್ರತ್ಯೌಹತಾಮಶ್ವಿನಾ ಮೃತ್ಯುಮಸ್ಮಾದ್ದೇವಾನಾಮಗ್ನೇ ಭಿಷಜಾ ಶಚೀಭಿಃ ॥**

ಇದು ಭಗವಂತನನ್ನು ಪ್ರಾರ್ಥಿಸುವ ಮಂತ್ರವಾಗಿದೆ. ಬೃಹಸ್ಪತಿಯೆಂದು ಭಗವಂತನನ್ನೇ ಇಲ್ಲಿಸಂಬೋಧಿಸಲಾಗಿದೆ. ಬೃಹತ್ತಾದ ವೇದವಾಕ್ಕುಗಳಿಗೆಲ್ಲಪತಿಯಾದ ಪರಬ್ರಹ್ಮವನ್ನು ಯಮನ ಸಂಬಂಧವಾದ ಭಯದಿಂದ ಬಿಡಿಸಬೇಕೆಂದು ಕೇಳಿದೆ. ''ಎಲೌ ಬೃಹಸ್ಪತಿಯೆ, ನೀನು ಯಮನಿಗೂ ಯಮನು. ಆದ್ದರಿಂದ ನಿನ್ನನ್ನು ಮೊರೆಹೊಕ್ಕವರಿಗೆ ಯಮನ ಬಾಧೆಯಿಲ್ಲ. ಹಾಗೆಯೇ ಅಭಿಶಸ್ತಿಯೆಂದರೆ ಅಪಕೀರ್ತಿಯು. ಅದರಿಂದಲೂ ನನ್ನನ್ನು ಬಿಡುಗಡೆಮಾಡು'' –ಎಂದು ಪ್ರಾರ್ಥಿಸಲಾಗಿದೆ. ಇವೆರಡರಿಂದಲೂ ನನ್ನನ್ನು ಬಿಡುಗಡೆಮಾಡಿದ ಅನಂತರ **'ಅಮುತ್ರಭೂಯಾತ್'** ಎಂದರೆ ಪರಲೋಕದಲ್ಲಿ

ಉಂಟಾಗುವ ಸುಖದಿಂದ ನನ್ನನ್ನು ಸಂಯೋಜನೆಮಾಡು. ಪರಲೋಕದ ಭೋಗಗಳು ನನಗೆ ಅಲ್ಲಿಸಿದ್ಧಿಸುವಂತೆ ಕೃಪೆ ಮಾಡು–ಎಂದರ್ಥ. ಇನ್ನು ಅಶ್ವಿನೀದೇವತೆಗಳೆಂಬವರು ದೇವವೈದ್ಯರಷ್ಟೆ. ಅವರು ನನಗೆ ಒದಗಬಹುದಾದ ಮೃತ್ಯುವನ್ನು ದೂರೀಕರಿಸುವವರಾಗಲಿ. ಅಗ್ನಿದೇವನೂ ದೇವವೈದ್ಯರಲ್ಲಿ ಒಬ್ಬನಾಗಿರುವನು. ಆತನು ಕೂಡ ನನ್ನನ್ನು ಕಾಪಾಡಲಿ. ಅಗ್ನಿಯು ವೈದ್ಯನು, ಹೇಗೆಂದರೆ: ಯಜ್ಞದಲ್ಲಿ ಯಜಮಾನನು ಅರ್ಪಿಸಿದ ಹವಿಸ್ಸುಗಳನ್ನು ಆಯಾ ದೇವತೆಗಳಿಗೆ ಒಯ್ದು ಮುಟ್ಟಿಸಿ ಅವರ ಹಸಿವು ಎಂಬ ರೋಗವನ್ನು ಪರಿಹರಿಸುವನು. ಆ ಅಭಿಪ್ರಾಯದಿಂದ ವೈದ್ಯನೆಂದಿದೆ. ಮಂತ್ರದ ಕಡೆಯಲ್ಲಿರುವ ''ಶಚೀಭಿಃ' ಎಂಬಿದರ ಅಭಿಪ್ರಾಯವೇನೆಂದರೆ ಶಚೀ ಎಂಬುವಳು ಇಂದ್ರಪತ್ನಿಯು. ಆಕೆಯು ಅಪರಿಮಿತವಾದ ಐಶ್ವರ್ಯಸಂಪನ್ನಳು. ಅವಳು ಪಡೆದಿರುವಂಥ ಸಂಪತ್ತುಗಳಿಗೆಲ್ಲ ಸಮಾನವಾದ ಸಂಪತ್ತು ಹಾಗೂ ಭೋಗಗಳೊಡನೆ ನನ್ನನ್ನು ಸಂಯೋಜನೆ ಮಾಡು. ನನಗೂ ಅಂಥ ಭೋಗಭಾಗ್ಯಗಳನ್ನು ನೀಡುವವನಾಗು–ಎಂದು ಪ್ರಾರ್ಥಿಸಿದೆ.

**ಓಂ ॥ ಹರಿಗ್ಂ ಹರನ್ತಮನುಯಂತಿ ದೇವಾ ವಿಶ್ವಸ್ಯೇಶಾನಂ ವೃಷಭಂ ಮತೀನಾಮ್। ಬ್ರಹ್ಮಸರೂಪಮನು ಮೇದಮಾಗಾದಯನಂ ಮಾ ವಿವಧೀರ್ವಿಕ್ರಮಸ್ವ ॥**

ಇದು ಕೂಡ ಭಗವತ್ಪ್ರಾರ್ಥನಾ ಮಂತ್ರವಾಗಿದೆ. ''ಎಲೈ ಭಗವಂತನೆ, ಹರಿಂ–ವಿಷ್ಣುರೂಪನಾದ, ವಿಶ್ವಕ್ಕೆಲ್ಲ ಒಡೆಯನೂ ಸರ್ವಪ್ರಾಣಿಗಳ ಬುದ್ಧಿಪ್ರೇರಕನೂ ಆದ ನಿನ್ನನ್ನು ದೇವತೆಗಳೆಲ್ಲರೂ ಹಿಂಬಾಲಿಸುತ್ತಿರುವರು.'' ಆದ್ದರಿಂದಲೇ ಗಾಯತ್ರೀ ಮಂತ್ರದಲ್ಲಿ 'ಆ ದೇವನು ನಮ್ಮ ಬುದ್ಧಿವೃತ್ತಿಗಳನ್ನು ಪ್ರಚೋದಿಸಲಿ' ಎಂದು ಕೇಳಿಕೊಳ್ಳಲಾಗಿದೆ. ಆಧ್ಯಾತ್ಮಿಕವಾಗಿ ಮನೋರೂಪನಾಗಿದ್ದುಕೊಂಡಿರುವ ದೇವನನ್ನು ಉಳಿದ ಇಂದ್ರಿಯದೇವತೆಗಳೆಲ್ಲರೂ ಹಿಂಬಾಲಿಸುತ್ತಿರುವರು–ಎಂಬ ಅರ್ಥವೂ ಹೊಂದುತ್ತದೆ. ಏಕೆಂದರೆ ಇಂದ್ರಿಯಗಳ ಪ್ರವೃತ್ತಿಗೆಲ್ಲ ಮನಸ್ಸೇ ಮೂಲವು. ಇಂದ್ರಿಯಗಳಲ್ಲಿ ಮನಸ್ಸು ನಾನು–ಎಂದು ಗೀತೆಯಲ್ಲಿಯೂ ತಿಳಿಸಿದೆ. ಹೀಗೆ ಬುದ್ಧಿಯೆಂಬ ಮನೋವೃತ್ತಿಯು ಉಳಿದ ಇಂದ್ರಿಯ ವೃತ್ತಿಗಳಿಗೆ ಪ್ರೇರಕವಾಗಿದ್ದರೂ ಬುದ್ಧಿಗೂ ಪ್ರೇರಕನೂ ವೃಷಭನೆಂದರೆ ಒಡೆಯನೂ ಆದವನು ಭಗವಂತನು–ಎಂದರ್ಥ. ಈತನ ಅನುಗ್ರಹದಿಂದ ಬ್ರಹ್ಮವು ಎಂದರೆ ನಾಲ್ಕು ವೇದಗಳೂ ಆಯಾ ಪ್ರಕೃತಿಪ್ರತ್ಯಯ ಗಳೊಡಗೂಡಿದ ಒಳ್ಳೆಯ ಶಬ್ದಗಳ ರೂಪದಿಂದ ಅಪಶಬ್ದರಹಿತವಾಗಿ ನನ್ನನ್ನು ಬಂದು ಸೇರಲಿ. ತ್ರೈವರ್ಣಿಕರೂ ಅಧ್ಯಯನ ಮಾಡುವ ವೇದಗಳು ನನ್ನನ್ನು

ಅನುಗ್ರಹಿಸಲಿ. ಹಾಗೆಯೇ ನಾನು ಸಂಪಾದಿಸಲಿರುವ ಆಯನಂ–ಮೋಕ್ಷಮಾರ್ಗವನ್ನು ಮಾವಿವಧೀಃ–ನಾಶಗೊಳಿಸಬೇಡ. ಆದರೆ ಆ ಮುಕ್ತಿಮಾರ್ಗವನ್ನು ನನಗೆ ಕೊಡುವದಕ್ಕಾಗಿ ವಿಕ್ರಮಸ್ವ–ಹೆಜ್ಜೆಯಿಡುವವನಾಗು, ಮುಂದುವರೆದು ಬರುವವನಾಗು–ಎಂದಭಿಪ್ರಾಯ.

ಓಂ ॥ ಶಲ್ಕೈರಗ್ನಿಮಿಂಧಾನ ಉಭೌ ಲೋಕೌ ಸನೇಮಹಮ್ ।
ಉಭಯೋರ್ಲೋಕಯೋರ್‌ಧ್ವಾಽತಿ ಮೃತ್ಯುಂ ತರಾಮ್ಯಹಮ್॥

"ಎಲೈ ಭಗವಂತನೆ, ನಾನು ಶಲ್ಕೈಃ– ಸಮಿತ್ತುಗಳೆಂಬ ಒಣಗಿದ ಕಾಷ್ಠಗಳಿಂದ ಅಗ್ನಿಯನ್ನು ಚೆನ್ನಾಗಿ ಹೊತ್ತಿಸಿ ಬೆಳಗಿಸುವವನಾಗಿ ಎರಡು ಲೋಕಗಳನ್ನೂ–ಎಂದರೆ ಇಹಲೋಕಪರಲೋಕಗಳನ್ನು ಸನೇಮ್–ಪಡೆದುಕೊಳ್ಳುವೆನು"–ಎಂದರ್ಥ. ಇಹಲೋಕದಲ್ಲಿನಾವು ಪುತ್ರ–ಕಳತ್ರ–ಧನಧಾನ್ಯ–ಕೀರ್ತಿ ಅಧಿಕಾರಾದಿಸಂಪತ್ತುಗಳನ್ನು ಪಡೆಯುವದಕ್ಕೂ ಪರಲೋಕಗಳಲ್ಲಿ ಸ್ವರ್ಗಾದಿಗಳಲ್ಲಿ ಲಭಿಸುವ ವಿಶೇಷವಾದ ಅಮಾನುಷಸುಖಭೋಗಗಳನ್ನು ಪಡೆಯುವದಕ್ಕೂ ಅಗ್ನಿಯಲ್ಲಿಹವಿರರ್ಪಣರೂಪವಾದ ವೈದಿಕಯಜ್ಞಗಳನ್ನು ಕೈಗೊಳ್ಳಬೇಕು. ಅಂಥ ಕರ್ಮಗಳನ್ನು ನಾನು ಮಾಡುವವನಾಗಿ ಇಹಪರಗಳಲ್ಲಿ ಸುಖಗಳನ್ನು ಪಡೆಯುವೆನು–ಎಂದು ಅಭಿಪ್ರಾಯ. ಹೀಗೆ ಎರಡು ಲೋಕಗಳನ್ನೂ ಗೆದ್ದುಕೊಂಡವನಾಗಿ ಮೃತ್ಯುವನ್ನು ದಾಟುವೆನು. ಆಯುಷ್ಯವಿರುವ ವರೆಗೂ ಈ ಲೋಕದ ಭೋಗಭಾಗ್ಯಗಳನ್ನೆಲ್ಲ ಅನುಭವಿಸಿ ಕಡೆಯಲ್ಲಿ ಪರಲೋಕವನ್ನು ಸೇರಿ ದೇವತೆಯಾಗಿ ಬಾಳುವೆನು. ಮೃತ್ಯುವನ್ನು ಮೀರಿಬಿಡುವೆನು–ಎಂದು ಅಭಿಪ್ರಾಯ.

ಓಂ ॥ ಮಾ ಛಿದೋ ಮೃತ್ಯೋ ಮಾ ವಧೀರ್ಮಾ ಮೇ ಬಲಂ ವಿವೃಹೋ ಮಾ ಪ್ರಮೋಷೀಃ । ಪ್ರಜಾಂ ಮಾ ಮೇ ರೀರಿಷ ಆಯುರುಗ್ರ ನೃಚಕ್ಷಸಂ ತ್ವಾ ಹವಿಷಾ ವಿಧೇಮ ॥

ಈ ಮಂತ್ರದಲ್ಲಿ ಉಗ್ರ–ಎಂಬ ಶಬ್ದವಿರುವದರಿಂದ ವೈದಿಕರು ಇದನ್ನು ಉಗ್ರರಥಶಾಂತಿಕಾಲದಲ್ಲಿ ಜಪಹೋಮಾದಿಗಳಿಗೆ ಬಳಸುತ್ತಾರೆ. ಈ ಪ್ರಕರಣದಲ್ಲಿ ಬಂದಿರುವ ಬಹುಪಾಲು ಮಂತ್ರಗಳನ್ನು ಶಾಂತ್ಯಾದಿಕರ್ಮಗಳಲ್ಲಿ ಉಪಯೋಗಿಸುವ ದುಂಟು. ಇಲ್ಲಿ ಮೃತ್ಯುವನ್ನೇ ಹೀಗೆ ಬೇಡಿಕೊಳ್ಳಲಾಗಿದೆ. "ಎಲೈ ಉಗ್ರನಾದ–ಕ್ರೂರನಾದ ಮೃತ್ಯುವೆ, ನೀನು ನಮ್ಮ ಒಳ್ಳೆಯ ಬುದ್ಧಿಯನ್ನು ನಾಶಗೊಳಿಸಬೇಡ. ಹಾಗೆಯೇ ನಮ್ಮ ಸತ್ಕರ್ಮಾನುಷ್ಠಾನಗಳನ್ನೂ ಹಿಂಸಿಸಬೇಡ. ಅಡ್ಡಿಗೊಳಿಸಿ ಹಾಳುಮಾಡಬೇಡ"–ಎಂದರ್ಥ. ಮನುಷ್ಯನಿಗೆ ವಯಸ್ಸಾದಂತೆಲ್ಲ ಇಂದ್ರಿಯಾಂತಃ ಕರಣಗಳ ಶಕ್ತಿಯು ಕುಗ್ಗಿ

ಕರ್ಮಾನುಷ್ಠಾನಗಳ ಬಗ್ಗೆ ಆಲಸ್ಯವುಂಟಾಗುವದು. ಆದರೆ ದೇಹಕ್ಕೆ ತಗಲಬಹುದಾದ ಮುಪ್ಪು ಬುದ್ಧಿಗೆ ತಗಲಬಾರದು. ಬುದ್ಧಿಯು ಪ್ರೌಢವಾಗಿದ್ದರೆ ದೇಹವನ್ನು ಶ್ರಮಪಡಿಸಿಯಾದರೂ ಕರ್ಮಗಳನ್ನು ಮಾಡಬಹುದು. ಮನುಷ್ಯನು ಸತ್ಕರ್ಮಗಳ ಆಚರಣೆಗೆ ಮನಸ್ಸೇ ಮಾಡದಿದ್ದರೆ ಮಾತ್ರ ಕೇಡಾಗುವದು. ಹಾಗಾಗದಂತೆ ನಮ್ಮ ಬುದ್ಧಿಯನ್ನು ಕಾಪಾಡು–ಎಂದು ಕೇಳಿಕೊಂಡಿದೆ. ಮತ್ತು ನನ್ನ ಶರೀರಬಲವನ್ನೂ **ಮಾ ವಿವೃಹ**–ಪೀಡಿಸುವವನಾಗಬೇಡ. ನಮ್ಮ ಐಶ್ವರ್ಯವೆನಿಸಿರುವ ಪರಲೋಕ ಸಾಧನವಾದ ಈ ಶರೀರಸ್ವಾಸ್ಥ್ಯವನ್ನು **ಮಾ ಪ್ರಮೋಷೀಃ**–ಕದಿಯಬೇಡ–ಅಪಹರಿಸಬೇಡ–ಎಂದರ್ಥ. ಇನ್ನು ನನ್ನ ಮಕ್ಕಳನ್ನೂ ಆಯುಸ್ಸನ್ನೂ ಹಿಂಸೆಮಾಡಬೇಡ. ಅದಕ್ಕಾಗಿ ನೃಚಕ್ಷನಾದ ನಿನ್ನನ್ನು ನಾವು ಹವಿಸ್ಸುಗಳಿಂದ ಆರಾಧಿಸುವೆವು. ನೃಚಕ್ಷನೆಂದರೆ–ನರರನ್ನು–ಮನುಷ್ಯರನ್ನು ಅವರವರ ಪಾಪಪುಣ್ಯಗಳ ಗಣನೆಗಾಗಿ ಮೃತ್ಯುವು ಯಾವಾಗಲೂ ನೋಡುತ್ತಿರುವನು. ಆತನಿಗೆ ಗೊತ್ತಾಗದಂತೆ ಮನುಷ್ಯನು ಯಾವ ಕರ್ಮವನ್ನೂ ಮಾಡಲಾರನು. ಹೀಗೆ ಕರ್ಮಸಾಕ್ಷಿಯಾಗಿರುವ ನಿನ್ನನ್ನು ಹವಿರ್ದಾನ–ದಕ್ಷಿಣಾದಿಗಳಿಂದ ಆರಾಧಿಸುವೆವು–ಎಂದಭಿಪ್ರಾಯ.

**ಓಂ ॥ ಮಾ ನೋ ಮಹಾಂತಮುತ ಮಾ ನೋ ಅರ್ಭಕಂ ಮಾನಉಕ್ಷಂತ ಮುತ ಮಾ ನ ಉಕ್ಷಿತಮ್ । ಮಾ ನೋ ವಧೀಃ ಪಿತರಂ ಮೋತ ಮಾತರಂ ಪ್ರಿಯಾ ಮಾ ನಸ್ತನುವೋ ರುದ್ರ ರೀರಿಷಃ ॥**

ಈ ಮಂತ್ರವೂ ಮುಂದಿನ ಮಂತ್ರವೂ ರುದ್ರಾಧ್ಯಾಯದಲ್ಲಿಯೂ* ಪಠಿಸಲ್ಪಟ್ಟಿದೆ. ಇಲ್ಲಿ ರುದ್ರನನ್ನು ಹೀಗೆಂದು ಕೇಳಿಕೊಳ್ಳಲಾಗಿದೆ: "ಎಲೈ ದುಷ್ಟರನ್ನು ಅಳುವಂತೆ ಮಾಡುವ ರುದ್ರನೆ, ನಮ್ಮ ಸಂಬಂಧಿಗಳಾದ ಮಹಾಂತರನ್ನು ಎಂದರೆ ಗುರುಗಳನ್ನೂ ಪೂಜಾಯೋಗ್ಯರಾದ ಹಿರಿಯರನ್ನೂ ಅರ್ಭಕಂ–ಮೊಲೆಹಾಲನ್ನುಣ್ಣುವ ವಯಸ್ಸಿನ ಶಿಶುಗಳನ್ನೂ **ಉಕ್ಷಂತಂ**–ರೇತಃಸೇಚನಸಮರ್ಥನಾದ ತರುಣನನ್ನೂ **ಉಕ್ಷಿತಂ**–ಸೇಚನಮಾಡಲ್ಪಟ್ಟು ಮಾತೃಗರ್ಭದಲ್ಲಿ ಬೆಳೆಯುತ್ತಿರುವ ಭ್ರೂಣವನ್ನೂ ಹಾಗೂ ನಮ್ಮ ತಂದೆಯನ್ನೂ ತಾಯಿಯನ್ನೂ ಆ ವರ್ಗದ ಹಿರಿಯರನ್ನೂ ಮತ್ತು ಇಲ್ಲಿ ಹೆಸರಿಸಿರುವ ಅಥವಾ ಹೆಸರಿಸದೆ ಇರುವ ಯಾರೇ ವ್ಯಕ್ತಿಗಳು ನಮಗೆ ಪ್ರಿಯರಾದವರಿರಲಿ, ಅಂಥವರೆಲ್ಲರನ್ನೂ ಹಿಂಸೆಮಾಡದಿರು. ನಮ್ಮನ್ನೂ ನಮ್ಮ ಹಿತೈಷಿಗಳೂ, ಪ್ರೀತಿಪಾತ್ರರೂ,

* ಇದೇ ಗ್ರಂಥಕಾರರು ರುದ್ರಾಧ್ಯಾಯಕ್ಕೂ ಕನ್ನಡದಲ್ಲಿ ವಿರವಣೆಯನ್ನು ಬರೆದು ಕಾರ್ಯಾಲಯದ ಮೂಲಕ ಪ್ರಕಟಿಸಿದ್ದಾರೆ. ಆ ಗ್ರಂಥವೂ ಸಿಗುತ್ತದೆ.

ಬಂಧುಗಳೂ, ಸ್ನೇಹಿತರೂ ಆಗಿರುವವರೆಲ್ಲರನ್ನೂ ಕಾಪಾಡುವವನಾಗು. ಯಾವದೇ ರೋಗ–ಭಯ–ಶೋಕ–ಮನಸ್ತಾಪ–ಋಣ–ದಾರಿದ್ರ್ಯ–ಅಪಮೃತ್ಯು–ಹಸಿವು–ಮುಂತಾದ ಪೀಡೆಗಳಿಂದ ನೋಯಿಸಬೇಡ''–ಎಂದರ್ಥ .

ಓಂ ॥ ಮಾ ನಸ್ತೋಕೇ ತನಯೇ ಮಾ ನ ಆಯುಷಿ ಮಾ ನೋ ಗೋಷು
ಮಾ ನೋ ಅಶ್ವೇಷು ರೀರಿಷಃ । ವೀರಾನ್ಮಾ ನೋ ರುದ್ರ
ಭಾಮಿತೋವಧೀರ್ಹವಿಷ್ಮನ್ತೋ ನಮಸಾ ವಿಧೇಮ ತೇ ॥

''ಎಲೈ ಮಹಾರುದ್ರನೆ, **ತೋಕ**–ಎಂದರೆ ಬಾಲಕನಾದ ಮಗನನ್ನು, **ತನಯ**–ಎಂದರೆ ತರುಣನಾದವನನ್ನು, ಹಾಗು ನನ್ನ ಆಯುಷ್ಯ, ಗೋವುಗಳು, ಕುದುರೆಗಳು, ವೀರರಾದ ಪರಿಜನರು–ಇವರು ಯಾರನ್ನೂ ಹಿಂಸೆಮಾಡಬೇಡ. ಏಕೆಂದರೆ ನೀನು **ಭಾಮಿತನಾಗಿರುವೆ**–ಎಂದರೆ ನಾವುಗಳೆಲ್ಲರೂ ಮಾಡುವ ಅಪರಾಧಗಳಿಂದ ಕುಪಿತನಾಗಿರುವೆ. ಆದರೂ ಕ್ಷಮಿಸಿ ಕಾಪಾಡುವವನಾಗು. ಅದಕ್ಕಾಗಿ ನಾವುಗಳು ಹವಿಷ್ಮಂತರಾಗಿ–ಎಂದರೆ ನಿನಗೆ ಅರ್ಪಿಸಲು ಯೋಗ್ಯವಾದ ಚರುಪುರೋಡಾಶಾದಿ ಹವಿಸ್ಸುಗಳಿಂದಲೂ ಗಂಧಪುಷ್ಪಫಲಧೂಪದೀಪನೈವೇದ್ಯ ತಾಂಬೂಲಾದಿಗಳಿಂದಲೂ ಬಳಿ ಸಾರುವೆವು. ಭಕ್ತಿಯಿಂದ ನಿನ್ನನ್ನು ಆರಾಧಿಸುವೆವು. ನಮಸ್ಕಾರಗಳಿಂದ ಸಂತೋಷಗೊಳಿಸುವೆವು. ನಮ್ಮನ್ನು ಯಾವಾಗಲೂ ಅನುಗ್ರಹಿಸುವವನಾಗು'' ಎಂದಭಿಪ್ರಾಯ.

## ಪ್ರಜಾಪತಿ ಪ್ರಾರ್ಥನಾಮಂತ್ರ

ಓಂ ॥ ಪ್ರಜಾಪತೇ ನ ತ್ವದೇತಾನ್ಯನ್ಯೋ ವಿಶ್ವಾ ಜಾತಾನಿ ಪರಿತಾ
ಬಭೂವ । ಯತ್ಕಾಮಾಸ್ತೇ ಜುಹುಮಸ್ತನ್ನೋ
ಅಸ್ತು ವಯಗ್ಂಸ್ಯಾಮ ಪತಯೋ ರಯೀಣಾಮ್ ।

ಇಲ್ಲಿ ಪ್ರಜಾಪತಿಯೆಂದರೆ ತ್ರಿಮೂರ್ತ್ಯಾತ್ಮಕನಾದ ಪರಮಾತ್ಮನನ್ನೇ ಹೇಳಿದೆ–ಎಂದು ಭಾಷ್ಯಕಾರರು ತಿಳಿಸುತ್ತಾರೆ. ಆತನು ಜಗತ್ತಿನ ಸೃಷ್ಟಿಸ್ಥಿತಿಲಯವ್ಯಾಪಾರಗಳನ್ನು ಕೈಗೊಳ್ಳುವವನಾಗಿರುವನು. ಆದ್ದರಿಂದ ಆತನನ್ನು ಇಲ್ಲಿ ಸ್ತುತಿಸಲಾಗಿದೆ. ''ಎಲೈ ಪ್ರಜಾಪತಿಯೆ, ನಿನ್ನಿಂದ ಉಂಟಾಗಿರುವ **ವಿಶ್ವಾ**–ಎಂದರೆ ಸಮಸ್ತದೇವಾಸುರನರ ತಿರ್ಯಗಾದಿಭೇದಸಹಿತವಾದ ಪ್ರಪಂಚವೆಲ್ಲವೂ ಭೂತಗಳೆಲ್ಲವೂ–ಎಲ್ಲ ಬ್ರಹ್ಮಾಂಡ

ಪಿಂಡಾಂಡಗಳೂ ನಿನ್ನ ಹೊರತಾಗಿ ಯಾರಿಂದಲೂ ಪರಿಬಭೂವ- ಉಪಸಂಹಾರ ಮಾಡಲ್ಪಡಲಿಲ್ಲ–ಎಂದರೆ ಲಯಮಾಡಲ್ಪಟ್ಟಿಲ್ಲ'' ಇಲ್ಲಿ ಲಯವನ್ನು ಉಪಲಕ್ಷಣವಾಗಿ ತೆಗೆದುಕೊಂಡು ಸೃಷ್ಟಿಸ್ಥಿತಿಗಳನ್ನೂ ಜೊತೆಗೆ ಗ್ರಹಿಸಬೇಕು. ಸೃಷ್ಟ್ಯಾದಿ ಯಾವ ವ್ಯಾಪಾರಗಳನ್ನೂ ನಿನ್ನ ಹೊರತು ಉಳಿದವರು ಯಾರೂ ಮಾಡಲಾರರು. ಆ ಜಗದ್ವ್ಯಾಪಾರಗಳಿಗೆ ಅವಶ್ಯವಾದ ಸರ್ವಜ್ಞತ್ವವು ನಿನ್ನಲ್ಲಿ ಮಾತ್ರವೇ ಇದೆ– ಎಂದಭಿಪ್ರಾಯ. ಆದ್ದರಿಂದ ನಾವುಗಳು ಏನನ್ನು ಬಯಸುವವರಾಗಿ ನಿನ್ನನ್ನು ಕುರಿತು ಆಹುತಿಗಳನ್ನು ಅರ್ಪಿಸುವೆವೋ ಅಂಥ ಐಹಿಕಾಮುಷ್ಮಿಕಭೋಗಫಲಗಳು ನಮಗೆ ಉಂಟಾಗಲಿ. ನೀನು ಎಲ್ಲಾ ಕರ್ಮಗಳಿಗೂ ಫಲದಾತನಾಗಿರುವದರಿಂದ ನಾವು ಮಾಡುವ ಕರ್ಮಗಳಿಗೂ ಯೋಗ್ಯವಾದ ಫಲಗಳನ್ನು ನೀಡುವವನಾಗು. ನಿನ್ನ ದೃಷ್ಟಿಪಾತದಿಂದ ನಾವುಗಳು ರಯೀಣಾಂ–ಎಂದರೆ ವಿದ್ಯಾವಿನಯಸಂಪತ್ತುಗಳು, ಇಹಪರ ಸುಖಗಳೆಲ್ಲಕ್ಕೂ ಒಡೆಯರಾಗುವಂತೆ ಆಗಲಿ'' ಎಂದು ಪ್ರಾರ್ಥಿಸಿದೆ. ಈ ಮಂತ್ರವನ್ನು ವೈದಿಕರು ಬ್ರಾಹ್ಮಣಭೋಜನಕಾಲಕ್ಕೆ ಆಪೋಶನವನ್ನು ಹಾಕುವಾಗ ಬಳಸುತ್ತಾರೆ. ಅಲ್ಲಿಯೂ ಪ್ರಜೆಗಳಿಗೆಲ್ಲ ಪತಿಯಾದ ಭಗವಂತನೇ ಸ್ತುತಿಸಲ್ಪಡುತ್ತಾನೆ. ಆದರೆ ಜುಹುಮಃ–ಎಂಬ ಕ್ರಿಯಾಪದಕ್ಕೆ ಬ್ರಾಹ್ಮಣರೆಂಬ–ಅಗ್ನಿದೇವತೆಗಳ ಮುಖದಲ್ಲಿ ಮೃಷ್ಟಾನ್ನಗಳೆಂಬ ಹವಿಸ್ಸನ್ನು ನಾವು ಹೋಮಮಾಡುವೆವು–ಎಂದು ಸಂದರ್ಭಾನುಸಾರವಾಗಿ ಅರ್ಥಮಾಡಿಕೊಳ್ಳಬೇಕು. ಬಾಹ್ಮಣಸಂತರ್ಪಣೆಯು ಇಂಥ ಅನ್ನಯಜ್ಞವೆನಿಸುವದು. **ಯಾರೇ ಆಗಲಿ, ಯಜ್ಞವನ್ನು ಕೈಗೊಳ್ಳುವವರು ಅಗ್ನಿಯಲ್ಲಿ ಆಹುತಿಗಳನ್ನು ಎಷ್ಟು ಸಂಖ್ಯೆಯಲ್ಲಿ ಸಮರ್ಪಿಸುವರೋ ಅದರ ಹತ್ತು ಪಟ್ಟು ಬ್ರಾಹ್ಮಣರಿಗೆ ಅನ್ನದಾನ ಮಾಡಬೇಕೆಂದು ಶಾಸ್ತ್ರದಲ್ಲಿ ತಿಳಿಸಿದೆ.** ಅನ್ನದಾನವಿಲ್ಲದ ಯಜ್ಞವು ತಾಮಸವೆಂದೂ ಗೀತೆಯಲ್ಲಿ ಹೇಳಿದೆ. ಆದ್ದರಿಂದ ಅನ್ನಯಜ್ಞವು ಬಹುಮುಖ್ಯವಾದದ್ದು. ಅದು ಕೂಡ ಪ್ರಜಾಪತಿಯ ಪ್ರೀತಿಗಾಗಿಯೆ ಮಾಡತಕ್ಕದ್ದು. ಅದರಿಂದ ಸಂತುಷ್ಟನಾದ ಪ್ರಜಾಪತಿಯು ನಮ್ಮನ್ನು ಐಶ್ವರ್ಯವಂತರನ್ನಾಗಿಯೂ ಸುಖಿಗಳನ್ನಾಗಿಯೂ ಮಾಡಲಿ ಎಂದು ಅಭಿಪ್ರಾಯ. ಈ ಕಾರಣದಿಂದಲೇ ಈಗಲೂ ಯಾವುದೇ ಶುಭಾಶುಭಕಾರ್ಯಗಳಲ್ಲಿಯೂ ಸಾಮೂಹಿಕವಾಗಿ ಆಯಾ ಸ್ಥಳಗಳಲ್ಲಿ ನಡೆಯುವ ತೇರುಜಾತ್ರೆ ಉತ್ಸವಾದಿಗಳಲ್ಲಿಯೂ ಅನ್ನದಾನವು ನಡೆಯುತ್ತದೆ. ಇದನ್ನು ಪ್ರಜಾಪತಿಯ ತೃಪ್ತಿಗಾಗಿ ಮಾಡುವ ಯಜ್ಞವೆಂಬ ಭಾವನೆಯುಳ್ಳವರು ಮಾತ್ರ ವಿರಳರಾಗಿರುತ್ತಾರೆ. ಪ್ರಜಾಪತಿಯು ಅನ್ನಬ್ರಹ್ಮನಾಗಿ ಪ್ರತ್ಯಕ್ಷದರ್ಶನವನ್ನು ನೀಡಿ ತನ್ನ ಸಹಸ್ರಬಾಹುಗಳಿಂದಲೂ ಸಹಸ್ರಮುಖಗಳಿಂದಲೂ ಭೋಜನ ಮಾಡುತ್ತಾನೆ ಎಂಬ ಅನುಸಂಧಾನವು ನಮಗೆ ಬಂದದ್ದೇ ಆದರೆ ಕೃತಾರ್ಥರಾಗುವೆವು.

**ಓಂ ॥ ಸ್ವಸ್ತಿದಾ ವಿಶಸ್ಪತಿರ್ವೃತ್ರಹಾ ವಿಮೃಧೋ ವಶೀ ।**
**ವೃಷೇಂದ್ರಃ ಪುರ ಏತು ನಃ ಸ್ವಸ್ತಿದಾ ಅಭಯಂಕರಃ ॥**

ಇದು ಇಂದ್ರನನ್ನು ಪ್ರಾರ್ಥಿಸುವ ಮಂತ್ರವಾಗಿದೆ. ಇದರಲ್ಲಿ ಎರಡು ಬಾರಿ ಸ್ವಸ್ತಿದಾ–ಎಂಬ ಮಾತು ಬಂದಿದೆ. ಆದ್ದರಿಂದ ಮೊದಲನೆಯ ಪದಕ್ಕೆ ಭೂಲೋಕಕ್ಕೆಲ್ಲ ಸುಖವನ್ನುಂಟುಮಾಡುವ–ಎಂದೂ ಎರಡನೆಯದಕ್ಕೆ ಪರಲೋಕಗಳಲ್ಲಿಯೂ ನಮಗೆ ಸುಖಪ್ರದನಾಗಿರುವ ದೇವತೆಯೆಂದೂ ಅರ್ಥಮಾಡಬೇಕು. ಇಂಥ ದೇವತೆಯೇ ಇಂದ್ರನು. ಅವನು ವಿಶಸ್ಪತಿಯು. ವಿಶರೆಂದರೆ ನಾನಾವಿಧರಾದ ಪ್ರಜೆಗಳು. ಅವರಿಗೆಲ್ಲ ಆತನು ಪತಿಯು. ವೃತ್ರನೆಂಬ ಅಸುರನನ್ನು ಸಂಹರಿಸಿದವನಾದ್ದರಿಂದ ವೃತ್ರಹಾ–ಎನಿಸಿರುವನು. ಇನ್ನು **ವಿಮೃಧ**ನೆಂದರೆ ರಾಕ್ಷಸರನ್ನೆಲ್ಲ ಸಂಹರಿಸುವವನು ಎಂದರ್ಥ. **ವಶೀ** ಎಂದರೆ ಮೂರು ಲೋಕಗಳನ್ನೂ ತನ್ನ ವಶದಲ್ಲಿಟ್ಟುಕೊಂಡಿರುವವನು. **ವೃಷೇಂದ್ರ**ನೆಂದರೆ ಮಳೆಯ ರೂಪದಿಂದ ನೀರನ್ನು ಸುರಿಸುವವನು–ಎಂದಭಿಪ್ರಾಯ. **ಅಭಯಂಕರ**ನೆಂದರೆ ತನ್ನನ್ನು ಆಶ್ರಯಿಸಿದವರಿಗೆ ಅಭಯವನ್ನುಂಟುಮಾಡುವವನು. ಇಂಥ ಇಂದ್ರನು ನಮ್ಮೆದುರಿಗೆ ತೋರಿಕೊಳ್ಳಲಿ–ಎಂದು ಪ್ರಾರ್ಥಿಸಲಾಗಿದೆ. ಎದುರಿಗೆ ಎಂಬಿದನ್ನು ಉಪಲಕ್ಷಣವಾಗಿಟ್ಟುಕೊಂಡರೆ ಮುಂದುಗಡೆ ಹಿಂದುಗಡೆ–ಎಡ ಬಲ–ಮೇಲ್ಭಾಗ–ಕೆಳಭಾಗ–ಹೀಗೆ ಎಲ್ಲಾ ಸ್ಥಳಗಳಲ್ಲಿಯೂ ಇಂದ್ರನು ತನ್ನ ವಜ್ರಾಯುಧವನ್ನು ಧರಿಸಿದವನಾಗಿ ನಮ್ಮ ಹಿಂದೆಯೇ ಇದ್ದು ಕಾಪಾಡಲಿ. ಇದರಿಂದ ನಾವು ನಿರ್ಭಯರಾಗಿ ಬಾಳೋಣ–ಎಂದು ಬೇಡಿಕೊಳ್ಳಲಾಗಿದೆ. ಈ ಮಂತ್ರವನ್ನು ಹಿಂದೆ (ಪು.52) ಯೂ ವಿವರಿಸಲಾಗಿದೆ.

**ಓಂ ॥ ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಮ್ ।**
**ಉರ್ವಾರುಕಮಿವ ಬಂಧನಾನ್ಮೃತ್ಯೋರ್ಮುಕ್ಷೀಯ**
**ಮಾಽಮೃತಾತ್ ॥**

ಇದು ಪರಮೇಶ್ವರನಾದ ಶಿವನನ್ನು ಪ್ರಾರ್ಥಿಸುವ ಮಂತ್ರವು. ಮೃತ್ಯುಂಜಯ ಮಂತ್ರವೆಂದೂ ಕರೆಯುತ್ತಾರೆ. ಮಹಾದೇವನಾದ ಈತನು ತ್ರಿಯಂಬಕನು–ಎಂದರೆ ಮೂರು ಕಣ್ಣುಗಳುಳ್ಳವನು–ಎಂದರ್ಥ. ಸಾಮಾನ್ಯವಾಗಿ ಸೃಷ್ಟಿಯಲ್ಲಿ ಯಾವ ಜೀವರಿಗೂ ಮೂರು ಕಣ್ಣುಗಳಿರುವದಿಲ್ಲ. ಎರಡೇ ಕಣ್ಣುಗಳು ಪ್ರಪಂಚದ ಕಡೆಗೇ ನೋಡುವಂಥವು ಇರುತ್ತವೆ. ಆದರೆ ಪರಮೇಶ್ವರನಿಗೆ ಹಣೆಯಲ್ಲಿರುವ ಕಣ್ಣು ಜ್ಞಾನಚಕ್ಷುಸ್ಸು ಎನಿಸಿದೆ. ಅದರಿಂದ ಆತನು ಕಾಮನನ್ನೇ ಸುಟ್ಟು ಹಾಕಿರುತ್ತಾನೆ. ಇಂಥ ಅಸಾಧಾರಣವಾದ

ತೃತೀಯನೇತ್ರವುಳ್ಳವನವನು. ಆದ್ದರಿಂದ ತ್ರ್ಯಂಬಕನೆಂದು ಸ್ತುತಿಸಲಾಗಿದೆ. ಹಾಗೆಯೇ ಆತನು ಸುಗಂಧಿಯೂ ಆಗಿರುವನು. ಹೇಗೆ ಕೇತಕೀ, ಸಂಪಿಗೆ–ಮುಂತಾದ ಹೂವುಗಳು ಸುವಾಸನೆಯುಳ್ಳವಾಗಿದ್ದು ಅವುಗಳನ್ನು ಮುಡಿದವನು ದೂರದಲ್ಲೇ ಇದ್ದರೂ ಗಾಳಿಯಿಂದ ವಾಸನೆಯು ಹರಡಿದಾಗ ಸುಗಂಧವು ಅನುಭವಕ್ಕೆ ಬರುವದೋ, ಆಗ ಆ ಸುಗಂಧವನ್ನು ಯಾರು ಹೊರಸೂಸುತ್ತಾರೆಂದು ಕುತೂಹಲದಿಂದ ನಾವು ನೋಡಿದಾಗ ಸುಗಂಧಿಯಾದವನು ಕಂಡುಬರುವನೊ, ಹಾಗೆಯೇ ಮೃತ್ಯುಂಜಯ ಭಗವಂತನು ಸುಗಂಧಿಯೆನಿಸಿ ಭಕ್ತರ ಪಾಪವಾಸನೆಗಳನ್ನೆಲ್ಲ ಹೋಗಲಾಡಿಸಿ ಪುಣ್ಯವಾಸನೆಗಳನ್ನುಂಟುಮಾಡಿಸಲಹುವನು. ತನ್ನ ಶರೀರದಿಂದಲೂ ಸುಗಂಧವನ್ನೇ ಹರಡುತ್ತಿರುವನು. ಮತ್ತು ಪುಷ್ಟಿವರ್ಧನನಾಗಿಯೂ ಇರುವನು. ಪುಷ್ಟಿಯೆಂದರೆ ಶಾರೀರಕವಾದ ಹಾಗೂ ಧನಧಾನ್ಯ ಆರೋಗ್ಯಾದಿರೂಪವಾದ ಸಮೃದ್ಧಿಯು. ಪರಮೇಶ್ವರನ ಭಕ್ತರಿಗೆ ಬಡತನವಾಗಲಿ, ಶಾರೀರಕದೌರ್ಬಲ್ಯವಾಗಲಿ ಇರಲಾರದು. ಅವರು ಎಲ್ಲಾ ರೀತಿಯಿಂದಲೂ ಪುಷ್ಟರಾಗಿರುವರು. ಇಂಥ ಭಗವಂತನನ್ನು ನಾವು ಯಜಾಮಹೇ– ಆರಾಧಿಸುವೆವು–ಎಂದಭಿಪ್ರಾಯ. ಅನಂತರ ''ಎಲೈ ತ್ರ್ಯಂಬಕನೆ, ನಿನ್ನ ಕೃಪೆಯಿಂದ ನಾವು ಉರ್ವಾರುಕಫಲದಂತೆ ಮೃತ್ಯುವಿನ ಬಂಧನದಿಂದ ಬಿಡುಗಡೆಯನ್ನು ಹೊಂದುವವರಾಗುವೆವು. ಆದರೆ ಮೋಕ್ಷವೆಂಬ ಅಮೃತಪದವಿಯಿಂದ ಬಿಡುಗಡೆಯಾಗದಿರಲಿ; ಅದು ನಮಗೆ ತಪ್ಪಿಹೋಗದೆ ಇರಲಿ'' ಎಂದು ಪ್ರಾರ್ಥಿಸಲಾಗಿದೆ. ಸೌತೆಕಾಯಿಯು ಪಕ್ವವಾದ ಕೂಡಲೆ ಅತ್ಯಂತ ಹಗುರವಾಗಿ ತೊಟ್ಟಿನಿಂದ ತಾನಾಗಿಯೇ ಕಳಚಿಕೊಳ್ಳುವದು. ಸಾಮಾನ್ಯವಾಗಿ ಹಣ್ಣುಗಳೆಲ್ಲವೂ ಹಾಗೆಯೇ ಬಿಟ್ಟುಕೊಳ್ಳುತ್ತವೆ. ಉರ್ವಾರಕವು ಇನ್ನೂ ಸುಲಭವಾಗಿ ಕಳಚಿಕೊಳ್ಳುತ್ತದೆ. ಅದರಂತೆ ನಿನ್ನ ಅನುಗ್ರಹದಿಂದ ನಾವು ಮೃತ್ಯುವಿನ ದವಡೆಯಿಂದ ಪಾರಾಗುವೆವು. ಅದಕ್ಕಾಗಿ ನಿನ್ನನ್ನು ಆರಾಧಿಸುವೆವು–ಎಂದಭಿಪ್ರಾಯ.

**ಓಂ ॥ ಯೇ ತೇ ಸಹಸ್ರಮಯುತಂ ಪಾಶಾ ಮೃತ್ಯೋ ಮರ್ತ್ಯಾಯ ಹಂತವೇ । ತಾನ್ ಯಜ್ಞಸ್ಯ ಮಾಯಯಾ ಸರ್ವಾನವ ಯಜಾಮಹೇ ॥**

ಈ ಮಂತ್ರದಲ್ಲಿ ಮೃತ್ಯುದೇವತೆಯನ್ನು ಸಂಭೋಧಿಸಿ ಹೇಳಲಾಗಿದೆಃ–''ಎಲೈ ಮೃತ್ಯುವೆ, ಪ್ರಾಣಿಮಾತ್ರವನ್ನು ಕೊಲ್ಲುವ ನಿನ್ನ ಸಹಸ್ರಾರು ಸಂಖ್ಯಾಕವಾದ ಯಾವ ನಿನ್ನ ಪಾಶಗಳಿವೆಯೋ ಆ ಎಲ್ಲಾ ಪಾಶಗಳನ್ನೂ ನಾವು ಅವಯಜಾಮಹೇ– ನಿವಾರಿಸಿ ಕೊಳ್ಳುತ್ತೇವೆ–ಎಂದರೆ ಅವುಗಳಿಂದ ಬಿಡುಗಡೆಯನ್ನು ಹೊಂದುತ್ತೇವೆ.'' ಯಾವ

ಉಪಾಯದಿಂದ? ಎಂದರೆ ಯಜ್ಞಸ್ಯ– ಯಜ್ಞಗಳೆಂಬ ಸತ್ಕರ್ಮಾನುಷ್ಠಾನಗಳನ್ನು ಮಾಡಿ ಆ ಕರ್ಮರೂಪವಾದ ಮಾಯಯಾ–ನೆಪದಿಂದ ಎಂದರ್ಥ. ಯಜ್ಞಾದಿರೂಪವಾದ ಕ್ರಿಯೆಗಳು ಮರಣವನ್ನು ತಪ್ಪಿಸಲಾರವಾದರೂ ದುರ್ಗತಿಯಿಂದ ಪಾರುಮಾಡಬಲ್ಲವು. ಮನುಷ್ಯನು ಪಾಪಕರ್ಮಗಳ ನಿಮಿತ್ತವಾಗಿಯೇ ಮೃತ್ಯುವಿಗೆ ಹೆದರಬೇಕಾಗಿದೆ. ಆದರೆ ಪುಣ್ಯಕರ್ಮಗಳನ್ನು ಮಾಡಿದವನಿಗೆ ಮೃತ್ಯುವೇ ಪ್ರಸನ್ನನಾಗಿ ಆಯಾ ಕರ್ಮಕ್ಕೆ ತಕ್ಕ ಉತ್ತಮ ಲೋಕಗಳನ್ನು ಸೇರಲು ಸಹಾಯಕನಾಗುವನು. ಆಗ ಅವನು ಸೌಮ್ಯನಾಗಿರುವನು. ಪುಣ್ಯವಂತರನ್ನು ಗೌರವದಿಂದ ಕಾಣುವನು. ಅವನ ಪಾಶಗಳು ಅಂಥವರನ್ನು ಬಂಧಿಸುವದಿಲ್ಲ. ಆದ್ದರಿಂದ ಯಜ್ಞಾದಿಕರ್ಮಗಳ ನೆಪದಿಂದ ಅವನನ್ನು ದಾಟಲೂಬಹುದಾಗಿದೆ. ಹೇಗೆ ಗಂಡುಮಕ್ಕಳನ್ನು ಪಡೆಯುವದರಿಂದ ಪಿತೃಋಣವನ್ನು ತೀರಿಸುತ್ತಾನೆ ಅಥವಾ ಅದರಿಂದ ದಾಟುತ್ತಾನೆ–ಎಂದು ಪ್ರಯೋಗಿಸುವರೋ ಹಾಗೆಯೇ ಇಲ್ಲಿಯೂ ಮೃತ್ಯುಪಾಶವನ್ನು ಯಜ್ಞಗಳ (ಮಾಯಯಾ) ನೆಪದಿಂದ ದಾಟುತ್ತಾನೆ– ಎಂದರ್ಥ ಮಾಡಿಕೊಳ್ಳಬೇಕು.

**ಓಂ ॥ ಮೃತ್ಯವೇ ಸ್ವಾಹಾ ಮೃತ್ಯವೇ ಸ್ವಾಹಾ ॥**

ಇದು ಪಾಪಪರಿಹಾರಕ್ಕಾಗಿ ಮಾಡಬೇಕಾದ ಹೋಮಾರ್ಥವಾದ ಮಂತ್ರವು. ಸ್ವಾಹಾಕಾರ ಪ್ರಯೋಗವಿರುವದರಿಂದ ಹಾಗೆ ತಿಳಿಯಬೇಕು. ಯಾವನು ಮೊದಲು ಅನೇಕ ವಿಧವಾದ ಪಾಪಕರ್ಮಗಳನ್ನು ಮಾಡಿದವನಾಗಿ ತಿಳಿವಳಿಕೆಯು ಉಂಟಾದ ಅನಂತರ ಅವುಗಳನ್ನು ತೊಳೆದುಕೊಳ್ಳಲಿಚ್ಛಿಸುವನೋ ಅಂಥವನು ಈ ಹೋಮವನ್ನು ಕೈಗೊಳ್ಳಬೇಕು. ತನ್ನ ಗೃಹ್ಯಾಗ್ನಿಯಲ್ಲಿಯೇ ಅಗ್ನಿಮುಖವನ್ನಾಚರಿಸಿ ಆಜ್ಯಸಂಸ್ಕಾರಾದಿಗಳು ಆದ ನಂತರ ಮೇಲ್ಕಂಡ ಮಂತ್ರದಿಂದ ಎರಡು ಬಾರಿ ಆಜ್ಯದಿಂದ ಪ್ರಧಾನಾಹುತಿಗಳನ್ನು ಅರ್ಪಿಸಬೇಕು. ಉಳಿದ ಪ್ರಾಯಶ್ಚಿತ್ತಹೋಮಗಳನ್ನು ಮಾಡಿ ಪೂರೈಸಬೇಕು. ಮೃತ್ಯು ಎಂದರೆ ಯಾವ ದೇವತೆಯು ಪ್ರಾಣಿಗಳ ಸಾವಿಗೆ ಕಾರಣನೋ ಅವನು. ಅಂಥ ದೇವತೆಯನ್ನು ತೃಪ್ತಿಗೊಳಿಸಿ ಅವನ ಅನುಗ್ರಹವನ್ನು ಸಂಪಾದಿಸುವದೇ ಈ ಹೋಮದ ಉದ್ದೇಶವು.

## ಪಾಪನಿವಾರಕಮಂತ್ರಗಳು

**ಓಂ ॥ ದೇವಕೃತಸ್ಯೈನಸೋಽವಯಜನಮಸಿ ಸ್ವಾಹಾ । ಮನುಷ್ಯ ಕೃತಸ್ಯೈನಸೋಽವಯಜನಮಸಿ ಸ್ವಾಹಾ । ಪಿತೃಕೃತಸ್ಯೈನ**

ಸೋಽವಯಜನಮಸಿ ಸ್ವಾಹಾ । ಆತ್ಮಕೃತಸ್ಯೈನಸೋಽವ
ಯಜನಮಸಿ ಸ್ವಾಹಾ । ಅನ್ಯಕೃತಸ್ಯೈನಸೋಽವಯಜನಮಸಿ
ಸ್ವಾಹಾ। ಅಸ್ಮತ್ಕೃತಸ್ಯೈನಸೋಽವಯಜನಮಸಿ ಸ್ವಾಹಾ। ಯದ್ದಿವಾ
ಚ ನಕ್ತಂ ಚೈನಶ್ಚಕೃಮತಸ್ಯಾಽವಯಜನಮಸಿ ಸ್ವಾಹಾ । ಯತ್
ಸ್ವಪಂತಶ್ಚ ಜಾಗ್ರತಶ್ಚೈನಶ್ಚಕೃಮ ತಸ್ಯಾಽವಯಜನಮಸಿ ಸ್ವಾಹಾ।
ಯತ್ಸುಷುಪ್ತಶ್ಚ ಜಾಗ್ರತಶ್ಚೈನ ಶ್ಚಕೃಮ ತಸ್ಯಾಽವಯಜನಮಸಿ
ಸ್ವಾಹಾ । ಯದ್ವಿದ್ವಾಗ್ಂಸಶ್ಚಾವಿದ್ವಾಗ್ಂಸಶ್ಚೈನಶ್ಚಕೃಮ
ತಸ್ಯಾಽವಯಜನಮಸಿ ಸ್ವಾಹಾ । ಏನಸ
ಏನಸೋಽವಯಜನಮಸಿ ಸ್ವಾಹಾ ॥

ಈ ಹನ್ನೊಂದು ಮಂತ್ರಗಳಿಗೆ ದೇವತೆಯು ಯಾರೆಂದು ನಿರ್ದೇಶಿಸಿಲ್ಲವಾದ್ದರಿಂದ ಅಗ್ನಿಯನ್ನೇ ದೇವತೆಯಾಗಿಟ್ಟುಕೊಳ್ಳಬೇಕೆಂದು ಭಾಷ್ಯಕಾರರು ತಿಳಿಸಿರುತ್ತಾರೆ. ಆದ್ದರಿಂದ ಹೀಗೆ ಅರ್ಥಮಾಡಬಹುದಾಗಿದೆಃ 'ಎಲೈ ಅಗ್ನಿಯೆ, ನೀನು ಏನಸಃ– ಎಂದರೆ ಪಾಪಗಳ ಅವಯಜನನು– ನಿವಾರಕನು' ಎಂದರ್ಥ. ಅವ ಎಂಬ ಉಪಸರ್ಗಪೂರ್ವಕವಾದ ಯಜಧಾತುವಿಗೆ ನಿವಾರಣೆ ಎಂಬರ್ಥವು ಪ್ರಸಿದ್ಧವಾಗಿದೆ. ನೀನು ಅವಯಜನನಾದ್ದರಿಂದಲೇ ಈ ಆಜ್ಯಾಹುತಿಯನ್ನು ನಿನಗೆ ಅರ್ಪಿಸುತ್ತಿರುವೆನು. ಇದರಿಂದ ನನಗೆ ಸಂಭವಿಸಲಿದ್ದ ದೇವಕೃತವಾದ ಏನಸಗಳನ್ನು ನಾಶಗೊಳಿಸುವವನಾಗು. ದೇವತಾಸಂಬಂಧವಾದ ಕರ್ಮಗಳಲ್ಲಿ ಉಂಟಾಗಿರಬಹುದಾದ ನ್ಯೂನಾತಿರೇಕಗಳು, ಲೋಪದೋಷಗಳನ್ನು ಪರಿಹರಿಸುವವನಾಗು– ಎಂದು ಪ್ರಾರ್ಥಿಸಲಾಗಿದೆ. ಇನ್ನುಳಿದ ಹತ್ತು ಮಂತ್ರಗಳಲ್ಲಿಯೂ ಅವಯಜನಮಸಿ ಎಂದೇ ಪಲ್ಲವಿಯಿರುವದರಿಂದ ಅದನ್ನು ಸೇರಿಸಿಕೊಂಡು ಉಳಿದ ಮಂತ್ರಭಾಗವನ್ನು ಅರ್ಥಮಾಡಿಕೊಳ್ಳಬೇಕು. ಮುಂದಿನ ಭಾಗವನ್ನು ಈಗ ವಿಚಾರಿಸೋಣ.

ಮನುಷ್ಯಸಂಬಂಧವಾದ ಪಾಪಗಳಲ್ಲಿ– ಎಂದರೆ ಯಾರನ್ನಾದರೂ ಧಿಕ್ಕರಿಸುವದು, ಅಪಮಾನ– ತೇಜೋವಧೆ ಮಾಡುವದು, ಅನ್ನದಾನ ಮಾಡದೆ ಇರುವದು, ಇತ್ಯಾದಿರೂಪವಾದ ಪಾಪಗಳಿದ್ದರೆ ಅವುಗಳನ್ನೂ ತೊಳೆಯುವವನಾಗು– ಎಂದು ಅರ್ಥ. ಅನಂತರ ಪಿತೃಕರ್ಮಗಳ ಅನುಷ್ಠಾನಕಾಲಕ್ಕೆ ಸಂಭವಿಸುವ ಲೋಪದೋಷಗಳಿದ್ದಲ್ಲಿ ಅವುಗಳನ್ನು ನಿವಾರಿಸುವವನಾಗು. ಹಾಗೆಯೇ ತಾನೇ ಮಾಡಿಕೊಂಡಿರುವ ಪಾಪಗಳು, ಎಂದರೆ ಪರಸ್ತ್ರೀಗಮನ, ಅಪೇಯಪಾನ, ಅಭಕ್ಷ ಭಕ್ಷಣ, ಸುಳ್ಳು ಹೇಳುವದೇ ಮುಂತಾದ

ಸ್ವಯಂಕೃತಾಪರಾಧಗಳೇನಿದ್ದರೂ ಅವುಗಳನ್ನೂ ಪರಿಹರಿಸುವವನಾಗು. **ಅನ್ಯಕೃತ**– ಎಂದರೆ ತನ್ನವರೇ ಆದ ಹೆಂಡತಿ, ಮಕ್ಕಳು, ಸೋದರರು–ಇತ್ಯಾದಿ ವರ್ಗದವರು ಮಾಡಿರಬಹುದಾದ ಪಾಪಗಳಿದ್ದರೂ ಅವುಗಳನ್ನೂ ನಿವಾರಿಸಿ ಬಿಡುವವನಾಗು. ಇನ್ನು **ಅಸ್ಮತ್ಕೃತ**– ಎಂದರೆ ಸಾಮೂಹಿಕವಾಗಿ ಎಲ್ಲರೂ ಸೇರಿ ಮಾಡಿರುವಂಥ ಅಕಾರ್ಯಗಳು. ಇದು ಒಂದು ಕುಟುಂಬದವರಾಗಲಿ, ಜನಾಂಗದವರಾಗಲಿ, ಊರಿನವರಾಗಲಿ– ಯಾವ ರೀತಿಯಿಂದಲಾದರೂ ಮಾಡಿರಬಹುದಾದ ಪಾಪಗಳು–ಎಂದಭಿಪ್ರಾಯ. ಈಗಿನ ಕಾಲಕ್ಕಂತೂ ಜನರು ಯೂನಿಯನ್–ಎಂಬ ಹೆಸರಿನಿಂದ ಸಂಘಗಳನ್ನು ಕಟ್ಟಿ ಸ್ವಾರ್ಥ ಸಾಧನೆಗಾಗಿ ನ್ಯಾಯಾನ್ಯಾಯವಿವೇಚನೆಯಿಲ್ಲದೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪಾಪಗಳನ್ನು ಮಾಡುತ್ತಿರುವರು. ಇಂಥವೆಲ್ಲವೂ **ಅಸ್ಮತ್–ಕೃತ** ಎಂಬ ಗುಂಪಿಗೇ ಸೇರುತ್ತವೆ. ಅಂಥವುಗಳನ್ನು ಕೂಡ ಪರಿಹರಿಸು–ಎಂದರ್ಥ. ವೋಟಿನ ಬಲದಿಂದ ರಾಜ್ಯ ವಾಳುತ್ತಿರುವ ಈ ಕಾಲದಲ್ಲಿ ಬಹುಮತಪಡೆದವರು ತಮ್ಮ ವಿರೋಧಿಗಳ ವಿಷಯಕ್ಕೆ ದ್ರೋಹವನ್ನು ಬಗೆದೇ ತೀರುವರು. ಅದು ಪಾಪವೆಂದೂ ಕೂಡ ಅವರಿಗೆ ಅನಿಸ ಲಾರದು. ಇಂಥವುಗಳನ್ನು ಕೂಡ ಪರಿಹರಿಸಿ ಕಾಪಾಡಬೇಕೆಂದು ಕೇಳಿಕೊಳ್ಳಲಾಗಿದೆ.

ಇನ್ನು ಹಗಲು ರಾತ್ರಿಗಳಲ್ಲಿ ನಾವು ಏನೇನು ಪಾಪಗಳನ್ನು ಮಾಡಿರುವೆವೋ– ಮಲಗಿರುವಾಗ ಹಾಗೂ ಎಚ್ಚರವಾಗಿರುವಾಗ ಏನೇನು ಪಾಪಗಳು ಸಂಭವಿಸಿರುವವೋ ಗಾಢನಿದ್ರಾವಶರಾಗಿದ್ದಾಗ ಸಂಭವಿಸಬಹುದಾದ ಪಾಪಗಳು ಏನಿವೆಯೋ ಅಂಥವುಗಳನ್ನೂ ಪರಿಹರಿಸುವವನಾಗು–ಎಂದಭಿಪ್ರಾಯ. ಮಲಗಿರುವಾಗಲೂ ಗಾಢನಿದ್ರೆಯಲ್ಲಿಯೂ ಪಾಪವು ಸಂಭವಿಸುವದು ಹೇಗೆ? ಎಂದು ಕೇಳಬಹುದು. ಅದನ್ನು ಎಚ್ಚರದ ದೃಷ್ಟಿಯಿಂದ ಪರಿಹರಿಸಿಕೊಳ್ಳಬೇಕು. ಉದಾಹರಣೆಗೆ ಸ್ಥಳ ಸಂಕೋಚನಿಮಿತ್ತ ನಾಲ್ಕಾರು ಜನರು ಒಟ್ಟಿಗೆ ಮಲಗಿರುವಾಗ ನಿದ್ರಾವಶದಿಂದ ಒಬ್ಬರ ಕಾಲು ಮತ್ತೊಬ್ಬರಿಗೆ ತಗಲುವದು, ಕತ್ತಲೆಯಲ್ಲಿ ಕಾಣದೆ ನಿದ್ರೆಗಣ್ಣಲ್ಲಿ ಹಿರಿಯರನ್ನು ತುಳಿಯುವದು, ಮುಂತಾದ ರೂಪದಲ್ಲಿ ಪಾಪವು ಸಂಭವಿಸಬಹುದು. ಗಾಢನಿದ್ರೆಯ ಭರದಲ್ಲಿ ಎಚ್ಚರವಿಲ್ಲದೆ ಸೂರ್ಯೋದಯಕಾಲಕ್ಕೂ ಮಲಗಿರುವದು, ಆಗ್ಗೆ ಮಾಡಬೇಕಾಗಿದ್ದ ಕರ್ತವ್ಯಗಳನ್ನು ಮಾಡದೆ ಇರುವದು–ಇತ್ಯಾದಿ ರೂಪವಾದ ತಪ್ಪುಗಳು ಸಂಭವಿಸಲೇಬಹುದಾಗಿದೆ. ಇವುಗಳೆಲ್ಲದರಿಂದ ಬಿಡಿಸು ಎಂದು ಪ್ರಾರ್ಥಿಸಿದೆ. ಇನ್ನು ತಿಳಿದೂ, ತಿಳಿಯದೆಯೂ– ಮಾಡಿರುವ ಪಾಪಗಳೂ ಬಹಳಷ್ಟಿರುವವು. ಮತ್ತು **'ಏನಸ ಏನಸೋ'** ಎಂದರೆ ಪಾಪಮಾಡಿರುವಂಥ ಜನರ ಸಂಪರ್ಕದಿಂದ ಸಂಭವಿಸಿರಬಹುದಾದ ಪಾಪಗಳು ಎಂದರ್ಥ. ಏಕೆಂದರೆ ಪಾಪಿಗಳ ಒಡನಾಟವೂ ಪಾಪಮಾಡಿದಂತೆಯೇ ಎಂದಭಿಪ್ರಾಯ. ಇಂಥ ಸಂದರ್ಭಗಳಲ್ಲೆಲ್ಲ ಏನೇನು ಅಪರಾಧಗಳು ಸಂಭವಿಸಿದ್ದರೂ ಅವುಗಳನ್ನೆಲ್ಲ

ಪರಿಹರಿಸುವವನಾಗು–ಎಂದು ಅಗ್ನಿಯನ್ನು ಪ್ರಾರ್ಥಿಸಲಾಗಿದೆ. ಇದರಿಂದ ಹಿಂದಿನ ಮಹರ್ಷಿಗಳು ಎಂಥ ಪಾಪಭೀರುಗಳಾಗಿದ್ದರೆಂಬುದು ತಿಳಿದುಬರುತ್ತದೆ.

ಓಂ ॥ ಯದ್ವೋ ದೇವಾಶ್ಚಕೃಮ ಜಿಹ್ವಯಾ ಗುರುಮನಸೋ ವಾ
ಪ್ರಯುತೀ ದೇವಹೇಡನಮ್ । ಅರಾ ವಾಯೋ ನೋ
ಅಭಿದುಚ್ಛುನಾಯತೇ ತಸ್ಮಿನ್ ತದೇನೋ ವಸವೋ ನಿಧೇತನ
ಸ್ವಾಹಾ ॥

ಇದು ಎಲ್ಲಾ ದೇವತೆಗಳನ್ನೂ ಒಟ್ಟಾಗಿ ಪ್ರಾರ್ಥಿಸುವ ಮಂತ್ರವಾಗಿದೆ ವಸುಗಳೆಂದರೆ ಎಲ್ಲೆಲ್ಲಿಯೂ ವಾಸವಾಗಿರುವವರು ಮತ್ತು ಎಲ್ಲಾ ಪ್ರಾಣಿಗಳಿಗೂ ನಿವಾಸಸ್ಥಾನೀಯರು. ಪಂಚಭೂತಾತ್ಮಕರಾದ ದೇವತೆಗಳೇ ನಮಗೆಲ್ಲ ಆಶ್ರಯದಾತರಾಗಿರುವರು. ಇಂಥ ದೇವತೆಗಳನ್ನು ಸಂಬೋಧಿಸಿ ಇಲ್ಲಿ ಪ್ರಾರ್ಥಿಸಲಾಗಿದೆ. "ಎಲೈ ವಸುಗಳಾದ ದೇವತೆಗಳಿರಾ, ನೀವು **ಗುರುಮನಸ್ಕರು**–ಎಂದರೆ ಗಂಭೀರವಾದ ಚಿತ್ತವುಳ್ಳವರು. ಕ್ಷುದ್ರಚಿತ್ತರಲ್ಲ. ಅವ್ಯವಸ್ಥಿತಚಿತ್ತರೂ ಅಲ್ಲ. ಯಾವದೇ ವಿಚಾರವನ್ನಾದರೂ ಆಳವಾಗಿ ಚಿಂತಿಸಿ ದೂರಾಲೋಚನೆಯಿಂದ ಸ್ವೀಕರಿಸಿ ನಿರ್ಣಯಿಸತಕ್ಕವರು. ಆದ್ದರಿಂದ ನಾವು ನಿಮ್ಮಗಳ ವಿಷಯದಲ್ಲಿ ನಾಲಗೆಯಿಂದ ಎಂದರೆ ಮಾತಿನಿಂದ ಪ್ರಯುತಸಂಖ್ಯಾಕವಾದ–ಕೋಟಿಗಳನ್ನೂ ದಾಟಿದ ಸಂಖ್ಯೆಯು ಪ್ರಯುತವೆನಿಸುವದು. ಅಷ್ಟೊಂದು ಸಂಖ್ಯೆಯ ದೇವ ಹೇಳನಗಳನ್ನು ನಾವು ಮಾಡಿರುವೆವು. ಹೇಳನವೆಂದೆ ತಿರಸ್ಕಾರ ಮತ್ತು ತಾರತಮ್ಯಭಾವ–ಎಂದರ್ಥ. ಇದು ಮನುಷ್ಯಮಾತ್ರದವರೆಲ್ಲ ಮಾಡುವ ಅಪರಾಧವಾಗಿದೆ. ನಾಸ್ತಿಕರಂತೂ ಪ್ರಪ್ರಥಮ ಅಪರಾಧಿಗಳು. ಇನ್ನು ಆಸ್ತಿಕರಲ್ಲಿಯೂ ದೇವರ ವಿಷಯಕ್ಕೆ ಗೌರವವಿದ್ದರೂ ದೇವತೆಗಳ ವಿಷಯಕ್ಕೆ ಕಟ್ಟಾ (Rigid) ವಾದಿಗಳಾಗಿರುವ ಮತಾಭಿಮಾನಿಗಳಿರುತ್ತಾರೆ. ಶಿವನೇ ಸರ್ವೋತ್ತಮನೆಂದು ಶೈವರೂ, ಹರಿಯೇ ಸರ್ವೋತ್ತಮನೆಂದು ವೈಷ್ಣವರೂ ನೆರೆನಂಬಿ ಈ ಹಿನ್ನೆಲೆಯಲ್ಲಿ ಉಳಿದ ದೇವತೆಗಳನ್ನು ತಾರತಮ್ಯಭಾವದಿಂದ ಕಾಣುತ್ತಾರೆ. ವ್ಯವಹಾರಕಾಲಕ್ಕೆ ಇದು ಸರಿಯೆನಿಸಿದರೂ ತತ್ತ್ವದೃಷ್ಟಿಯಿಂದ ಸರಿಯಲ್ಲ. ಎಲ್ಲಾ ದೇವತೆಗಳೂ ತನ್ನ ತನ್ನ ಆತ್ಮರೂಪದಿಂದ ಸರ್ವೋಚ್ಚವಾಗಿದೆ. ಅದನ್ನರಿಯದೆ ತಾರತಮ್ಯವನ್ನೇ ಧೃಡಪಡಿಸಿ ದೇವತಾದ್ವೇಷವನ್ನು ಕೂಡ ಮತಧರ್ಮಗಳ ಹೆಸರಿನಲ್ಲಿ ಸಾಧಿಸುವದುಂಟು. ಇದು ಅಪರಾಧವಲ್ಲದೆ ಇನ್ನೇನಾದೀತು? ಇಂಥ ಅಪರಾಧಗಳಿಗೆ ಮನುಷ್ಯನ ಅಲ್ಪತನವೇ ಕಾರಣ. ಅದನ್ನೂ ಈ ಮಂತ್ರದಲ್ಲೇ ಸೂಚಿಸಲಾಗಿದೆ. ಹೇಗೆಂದರೆಃ ಮೂಲದಲ್ಲಿರುವ 'ಜಿಹ್ವಯಾ ಗುರುಮನಸಃ' ಎಂಬಿದನ್ನು

'ಜಿಹ್ವಯಾऽಗುರುಮನಸಃ' ಎಂದೂ ಉಚ್ಚರಿಸಬಹುದು. ಆಗ '**ಆಗುರುಮನಸಃ**' ಎಂದು ಪದವಾಗುವದು. **ಆಗುರು**–ಎಂದರೆ ವಿಶಾಲವಲ್ಲದ, ವ್ಯಾಪಕವಲ್ಲದ ಅಲ್ಪವಾದ ಬುದ್ಧಿಯವರು ಎಂದರ್ಥ. ಆಗ ಈ ವಿಶೇಷಣವು ನಮ್ಮನ್ನು ಹಿಂಬಾಲಿಸುತ್ತದೆ. ಮನಸ್ಸಿನ ಅಲ್ಪತನದಿಂದಲೇ ನಾವು ದೇವತಾಪರಾಧಗಳನ್ನು ಮಾಡುತ್ತಿದೇವೆ. ಇದನ್ನು ಸರ್ವರೂ ಆತ್ಮಪರೀಕ್ಷೆಯಿಂದಲೇ ಗೊತ್ತುಪಡಿಸಿಕೊಳ್ಳಬೇಕು. ಬೇರೆ ಯಾರಾದರೂ ಹೇಳಿದರೆ ನಮಗೆ ಹಿಡಿಸುವದಿಲ್ಲ. ಅಷ್ಟೇ ಅಲ್ಲ. ಕೋಪವೇ ಬರುತ್ತದೆ. ಆದ್ದರಿಂದ ಯಾರೊಬ್ಬರಿಗೇ ಆಗಲಿ, ತಾನು ದೇವತಾಪರಾಧಿ–ಎಂಬ ತಿಳಿವಳಿಕೆಯು ತನ್ನ ಅಂತಃಕರಣದಿಂದಲೇ ಗೊತ್ತಾದಲ್ಲಿ ಒಳ್ಳೆಯದು. ಶ್ರುತಿಮಾತೆಯು ಇಲ್ಲಿ ನಮ್ಮನ್ನು ಎಚ್ಚರಿಸಿ ತಿಳಿಸುತ್ತಿದ್ದಾಳೆ. ಹೀಗೆ ನಾವು ಮಾಡುವ ಅಪರಾಧಗಳನ್ನು ತಿರಸ್ಕಾರ–ಗರ್ಹಣಾದಿಗಳನ್ನೂ "ಎಲೈ ದೈವತೆಗಳಿರಾ, ನೀವು ನಿಧೇತನ–ಮನಸ್ಸಿನಲ್ಲಿಯೇ ಇಟ್ಟುಕೊಳ್ಳಿರಿ. ಮಾತಿನಿಂದ ಆಡಬೇಡಿರಿ–ಸಹಿಸಿಕೊಳ್ಳಿರಿ"–ಎಂದರ್ಥ. ಮತ್ತು "ಎಲೈ ವಾಯುದೇವನೇ, ನಮ್ಮ ಸಂಬಂಧವಾದ ಪಾಪಗಳು **ಅರಾ** ಎನಿಸಿವೆ. **ಅರಾ** ಎಂದರೆ ಮರಣವನ್ನೇ ಉಂಟು ಮಾಡತಕ್ಕಂಥ ಮಹಾಪರಾಧಗಳು; ಅವು ಅಭಿದುಚ್ಛುನಾಯತೇ–ನಮ್ಮ ಸುತ್ತಲೂ ಕೆಟ್ಟನಾಯಿಯಂತೆ ಹಿಂಬಾಲಿಸಿ ಅಪವಿತ್ರರನ್ನಾಗಿ ಮಾಡಿವೆ. ಅವುಗಳನ್ನೆಲ್ಲ ನೀನು ಪರಿಹರಿಸುವವನಾಗು" ಎಂದು ಪ್ರಾರ್ಥಿಸಲಾಗಿದೆ. ಮಂತ್ರದ ಕಡೆಯಲ್ಲಿ ಸ್ವಾಹಾಕಾರವಿರುವದರಿಂದ ಇದನ್ನು ವಾಯು, ವಸುಗಳೇ ಮುಂತಾದ ದೇವತೆಗಳಿಗೆ ಹೋಮಮಾಡುವಾಗ ಪಠಿಸಬೇಕು. ಹಾಗೂ ಆಜ್ಯಾಹುತಿಯನ್ನು ಅಗ್ನಿಯಲ್ಲಿ ಅರ್ಪಿಸಬೇಕು–ಎಂದು ಅಭಿಪ್ರಾಯ.

**ಓಂ ॥ ಕಾಮೋऽಕಾರ್ಷೀನ್ನಮೋ ನಮಃ । ಕಾಮೋऽಕಾರ್ಷೀತ್ ಕಾಮಃ ಕರೋತಿ ನಾಹಂ ಕರೋಮಿ ಕಾಮಃ ಕರ್ತಾ ನಾಹಂ ಕರ್ತಾ ಕಾಮಃ ಕಾರಯಿತಾ ನಾಹಂ ಕಾರಯಿತಾ ಏಷ ತೇ ಕಾಮ ಕಾಮಾಯ ಸ್ವಾಹಾ ॥**

ಇದು ಕೂಡ ದೇವತಾಪ್ರಾರ್ಥನ ಮಂತ್ರವು. "ಎಲೈ ಮೂವತ್ತು ಮೂರು ಕೋಟಿ ದೇವತೆಗಳಿರಾ, ನಿಮ್ಮೆಲ್ಲರಿಗೂ ನಮೋ ನಮಃ । ಮತ್ತೆ ಮತ್ತೆ ನಮಸ್ಕಾರಗಳು. ಈ ಹಿಂದೆ ಪ್ರಸ್ತಾಪಿಸಲ್ಪಟ್ಟ ಪಾಪಗಳನ್ನೆಲ್ಲ ಕಾಮನು ಮಾಡಿದನು"–ಎಂದರ್ಥ. ಗೀತೆಯಲ್ಲಿಯೂ ಇದೇ ಅಭಿಪ್ರಾಯವಿದೆ. ಅರ್ಜುನನು "ಮನುಷ್ಯನು ಯಾವನಿಂದ ಪ್ರೇರಿತನಾಗಿ ಪಾಪಗಳನ್ನು ಮಾಡುತ್ತಾನೆ?" ಎಂದು ಕೇಳಿದಾಗ ಭಗವಂತನು "ಕಾಮವೇ, ಕ್ರೋಧವೇ ಪಾಪಪ್ರೇರಕಗಳು" ಎಂದು ಉತ್ತರಿಸಿರುತ್ತಾನೆ. ಇಲ್ಲಿ ಕ್ರೋಧವನ್ನು ಮನ್ಯು

ಎಂದು ಕರೆದಿದೆ. ಮತ್ತು ಕಾಮ ಮನ್ಯುಗಳಿಬ್ಬರನ್ನೂ ದೇವತೆಗಳೆಂದೇ ಪರಿಗಣನೆ ಮಾಡಿದೆ. ಅವರಿಗೂ ಹೋಮವನ್ನು ವಿಧಿಸಲಾಗಿದೆ. ಹೀಗೆ ಭಕ್ತನು ದೇವತೆಗಳಲ್ಲಿ ಮೊರೆಯಿಡುವದೇನೆಂದರೆ ''ಪಾಪಗಳನ್ನು ಮಾಡಿದ ತಪ್ಪು ನನ್ನದಲ್ಲ, ಕಾಮನೇ ಅವುಗಳನ್ನು ಮಾಡಿದನು. ನಾನು ಪಾಪಕರ್ತನಲ್ಲ ಅಥವಾ ಪ್ರೇರಕನಾಗಿದ್ದುಕೊಂಡು ಮಾಡಿಸುವವನೂ ಅಲ್ಲ, ಕಾಮನೇ ಹಾಗೆ ಮಾಡಿಸುವವನು''–ಎಂದಿರುತ್ತಾನೆ. ''ದುರಾಶೆಯು ನನ್ನಿಂದ ಈ ಕೆಲಸ ಮಾಡಿಸಿತು'' ಎಂದು ಜನರು ಈಗಲೂ ಆಡಿಕೊಳ್ಳುತ್ತಾರೆ ಆದ್ದರಿಂದ ''ಎಲೈ ಕಾಮನೆ, ಪಾಪಗಳ ಪರಿಹಾರಕ್ಕಾಗಿ ಇದೊ, ನಿನಗೆ ಸ್ವಾಹಾ–ಆಹುತಿಯನ್ನು ಸಮರ್ಪಿಸುವೆನು'' ಎಂದರ್ಥ. ಕಾಮನು ಪ್ರೇರಕನೆಂಬುದೇನೋ ನಿಜ. ಆತನ ಪ್ರೇರಣೆಯೇ ಪಾಪಮೂಲವು–ಎಂಬಿದೂ ಸರಿ. ಆದರೆ ಅದೇ ಕಾಮನು ವ್ಯವಹಾರಸಿದ್ಧಿಗೂ ಕಾರಣನಾಗಿದ್ದಾನೆ. ಆಶೆಯೆಂಬುದೇ ಸಂಪೂರ್ಣವಾಗಿ ಇಲ್ಲವಾದರೆ ಮನುಷ್ಯನು ಬದುಕುವದು ಹೇಗಾದೀತು? ಕರ್ಮವನ್ನಾದರೂ ಏಕೆ ಮಾಡಿಯಾನು? ತಾನು, ತನ್ನ ತಂದೆ ತಾಯಿಗಳು, ಹೆಂಡಿರುಮಕ್ಕಳು ಎಂಬ ಪ್ರೀತಿಯಿಲ್ಲವಾದರೆ ಪ್ರಪಂಚವ್ಯವಹಾರವು ಸಾಗುವದಾದರೂ ಹೇಗೆ ಆದ್ದರಿಂದ **ಧರ್ಮಕ್ಕೆ ವಿರೋಧಿಯಲ್ಲದ ಕಾಮವು ಪೂಜ್ಯವೇ–ಸ್ವೀಕಾರ್ಯವೆ** ಆಗಿದೆ. ಅದನ್ನು ಪುರುಷಾರ್ಥವೆಂದೇ ಕರೆಯಲಾಗಿದೆ. ಭಗವಂತನು ಗೀತೆಯಲ್ಲಿ 'ಧರ್ಮಕ್ಕೆ ವಿರೋಧಿಯಲ್ಲದ ಕಾಮನು ನಾನೇ' ಎಂದೂ ತಿಳಿಸಿರುತ್ತಾನೆ. ಇಂಥ ಕಾಮನು ದೇವತೆಯೆಂಬುದು ನ್ಯಾಯವಾಗಿದೆ. ಆದ್ದರಿಂದ ಅವನನ್ನು ಯಜ್ಞದಿಂದ ಸಂತೋಷಗೊಳಿಸಬೇಕು–ಎಂದಭಿಪ್ರಾಯ.

**ಓಂ ॥ ಮನ್ಯುರಕಾರ್ಷೀನ್ನಮೋ ನಮಃ । ಮನ್ಯುರಕಾರ್ಷೀನ್ಮನ್ಯುಃ ಕರೋತಿ ನಾಹಂ ಕರೋಮಿ ಮನ್ಯುಃ ಕರ್ತಾ ನಾಹಂ ಕರ್ತಾ ಮನ್ಯುಃ ಕಾರಯಿತಾ ನಾಹಂ ಕಾರಯಿತಾ ಏಷ ತೇ ಮನ್ಯೋ ಮನ್ಯವೇ ಸ್ವಾಹಾ ॥**

'ದೇವತೆಗಳಿಗೆ ನಮಸ್ಕಾರಗಳು. ನಾನು ಮಾಡಿದ ಪಾಪಗಳಿಗೆಲ್ಲ ಮನ್ಯುವೇ ಕಾರಣನು; ಆತನೇ ಎಲ್ಲವನ್ನೂ ಮಾಡಿದ್ದಾನೆ–ಹಾಗೂ ಮಾಡಿಸಿರುತ್ತಾನೆ'–ಎಂದು ಈ ಮಂತ್ರದ ಅಭಿಪ್ರಾಯ. ಹಿಂದಿನ ಮಂತ್ರದಂತೆಯೇ ಇದರ ಉಳಿದ ಭಾಗಕ್ಕೆಲ್ಲ ಅರ್ಥವನ್ನು ತಿಳಿಯಬೇಕು. ಮನ್ಯುವೆಂದರೆ ಕೋಪವು. ಇದು ಕೂಡ ಅನರ್ಥಕ್ಕೆ ಕಾರಣವಾಗಿದ್ದರೂ ಸ್ಥಾನೇ ಕೋಪವು ಯುಕ್ತವಾದದ್ದೇ ಸರಿ. ಸ್ಥಾನೇ ಎಂದರೆ ಯುಕ್ತವಾದ ಜಾಗದಲ್ಲಿ ಹಾಗೂ ಯುಕ್ತವಾದ ಸಮಯದಲ್ಲಿ ಎಂದರ್ಥ. ಆಗ ಮನ್ಯುವನ್ನು ದೇವತೆಯಾಗಿ ತಿಳಿಯಬೇಕು. ಅಂಥ ದೇವತೆಗೆ ಇಲ್ಲಿ ಆಹುತಿಯನ್ನು ಅರ್ಪಿಸಲಾಗಿದೆ. ಒಟ್ಟಿನಲ್ಲಿ ಕಾಮ

ಮನ್ಯುಗಳು ಯಾವನಿಗೆ ಸ್ವಾಧೀನದಲ್ಲಿಲ್ಲದೆ, ಅವುಗಳಿಗೇ ಯಾವನು ವಶನಾಗಿ ಬಿಡುವನೋ ಅಂಥವನನ್ನು ಅವು ಅನರ್ಥಕ್ಕೆ ಎಳೆದೊಯ್ಯುವವು. ಅವುಗಳಿಗೆ ಅಧೀನ ನಾದವನು ಗೋಳಾಡುವದೇ ಗತಿಯಾಗುವದು. ಆಗ "ಕಾಮಮನ್ಯುಗಳೇ ಎಲ್ಲವನ್ನೂ ಮಾಡುತ್ತಾರೆ, ನನ್ನಿಂದಲೂ ಮಾಡಿಸುತ್ತಾರೆ ; ನಾನು ಸ್ವತಂತ್ರನಲ್ಲ ; ನನಗೆ ಬೇಡವಾದದ್ದನ್ನೂ ನನ್ನಿಂದ ಅವರು ಮಾಡಿಸಿಬಿಡುವರು. ಅವರ ಹಿಡಿತದಿಂದ ನನ್ನನ್ನು ಕಾಪಾಡುವವರಾರು?" ಎಂದು ಪಶ್ಚಾತ್ತಾಪಪಡುವವನಿಗೆ ಆ ಪಶ್ಚಾತ್ತಾಪವೇ ಪ್ರಾಯಶ್ಚಿತ್ತವಾಗಿ ಪರಿಣಮಿಸಿ ಪಾಪಗಳಿಂದ ಬಿಡುಗಡೆಯನ್ನು ಮಾಡಿಸಬಲ್ಲದು. ಆದರೆ ಅಂಥ ವಿವೇಕವಾದರೂ ಮನುಷ್ಯನಿಗೆ ಉಂಟಾಗುವದು ದುರ್ಲಭವೇ ಸರಿ. ಸಾಮಾನ್ಯವಾಗಿ ಜನರಿಗೆ ನಾನು ಮಾಡುತ್ತೇನೆ–ಎಂದೇ ಅಹಂಕಾರವಿರುವದು. ಅದು ಹೋಗಿ ವಿವೇಕವುಂಟಾದಾಗ ಮಾತ್ರ ಈಗ ತಿಳಿಸಿರುವಂಥ ಭಾವನೆಯು ಬರುವದು. ಅಂಥ ಭಾವುಕನಾದವನು ಈ ಮಂತ್ರವನ್ನು ಪಠಿಸುತ್ತಾನೆಂದು ತಿಳಿಯಬೇಕು. ಆಗ ಪಾಪದೋಷಗಳು ಯಾವನು ಮಾಡಿಸುತ್ತಾನೋ ಅವನಿಗೆ ಸಲ್ಲುತ್ತವೆ–ಎಂದಾಗುವದು. ಕಾಮಮನ್ಯುಗಳೇ ಪಾಪಕರ್ತೃಗಳೆಂದಾದಲ್ಲಿ ಅವುಗಳನ್ನು ಮನುಷ್ಯನು ನಿಗ್ರಹಿಸಿಕೊಂಡು ಅವುಗಳಿಗೆ ವಶನಾಗದೆ ಬಾಳಬೇಕು–ಎಂದು ಅಭಿಪ್ರಾಯವಾಗುವದು.

## ವಿರಜಾಹೋಮಮಂತ್ರಗಳು

ಈಗ ವಿರಜಾಹೋಮಮಂತ್ರಗಳನ್ನು ವಿಚಾರಮಾಡಲಾಗುವದು. ರಜಸ್ಸು ಎಂದರೆ ಪಾಪವು. ಎಲ್ಲಾ ವಿಧವಾದ ಪಾಪಗಳನ್ನೂ ಇಲ್ಲವಾಗಿಸಿಕೊಂಡಾಗಲೇ ವಿರಜಸ್ಕರಾಗುವೆವು. ಆದರೆ ಜ್ಞಾನವುಂಟಾಗದೆ ಸಮಸ್ತಪಾಪಗಳೂ ಹೋಗಲಾರವು. ಆ ಸ್ಥಿತಿಯಲ್ಲಿ ಪುಣ್ಯವನ್ನೂ ಪಾಪವೆಂದೇ ಪರಿಗಣಿಸಲಾಗುವದು. ಈ ಪಾಪಪುಣ್ಯಗಳೆರಡನ್ನೂ ಕೊಡವಿ ಹಾಕಿ ವಿರಜಸ್ಕರಾಗುವದು ತತ್ತ್ವಜ್ಞಾನವನ್ನು ಪಡೆದು ಪರಮಹಂಸಸಂನ್ಯಾಸಿಯಾದಾಗ ಮಾತ್ರವೇ ಸರಿ. ಇಲ್ಲಿ ಕರ್ಮಕಾಂಡದ ಅಂತಸ್ತಿನಿಂದ ಅರ್ಥಮಾಡಿದಾಗ ಪಾಪಗಳು–ಎಂದರೆ ಶಾಸ್ತ್ರನಿಷಿದ್ಧವಾದ ಕರ್ಮಗಳನ್ನು ಮಾಡಿದ್ದರಿಂದ ಉಂಟಾಗಿರುವ ದುರಿತಗಳನ್ನು ಕಳೆದುಕೊಂಡು ವಿರಜಸ್ಕರಾಗಿ ಪುಣ್ಯಲೋಕಗಳನ್ನು ಪಡೆಯುವದಕ್ಕೆ ಈ ಮಂತ್ರಗಳಿಂದ ಹೋಮಮಾಡುವದು ಅವಶ್ಯವಾಗಿರುತ್ತದೆ. ಕರ್ಮಕಾಂಡದಲ್ಲಿ ಪಾಪಕರ್ತೃಗಳಿಗೆ ಪ್ರಾಯಶ್ಚಿತ್ತಗಳಿಂದ ಶುದ್ಧಿಯನ್ನು ಹೇಳಿರುತ್ತದೆ. ಅಂಥ ಪ್ರಾಯಶ್ಚಿತ್ತಗಳೂ ಕರ್ಮಗಳೇ ಆಗಿರುವವು. ವಿರಜಾಹೋಮವೂ ಅಂಥ ಕರ್ಮಗಳಲ್ಲಿ ಒಂದಾಗಿದೆ. ಇದನ್ನು ವರ್ಷಕ್ಕೊಮ್ಮೆ

ಆಚರಿಸುವದರಿಂದ ಆಯಾ ಸಂವತ್ಸರಗಳಲ್ಲಿ ಮಾಡಿದ ಪಾಪಗಳು ಪರಿಹಾರವಾಗುವವು. ಇನ್ನು ಗೃಹಸ್ಥನಾಗಿದ್ದವನು ವಿರಕ್ತನಾಗಿ ಸಂನ್ಯಾಸಾಶ್ರಮವನ್ನು ಸ್ವೀಕಾರಮಾಡುವ ಕಾಲಕ್ಕೆ ಶುದ್ಧಿಗಾಗಿ ಪೂರ್ವಭಾವಿಯಾಗಿ ಈ ಹೋಮಗಳನ್ನು ಮಾಡಿಸುತ್ತಾರೆ. ಹೀಗೆ ಈ ಮಂತ್ರಗಳು ಪಾಪಪರಿಹಾರಕಗಳೆಂದು ಪ್ರಸಿದ್ಧವಾಗಿವೆ. ಇವುಗಳ ಅರ್ಥವನ್ನೂ ಹೋಮದ ವಿವರಗಳನ್ನೂ ಈಗ ಪರಿಶೀಲಿಸೋಣ:

**ಓಂ ॥ ತಿಲಾನ್ ಜುಹೋಮಿ ಸರಸಾಗ್ಂ ಸಪಿಷ್ಟಾನ್ ಗಂಧಾರ ಮಮ ಚಿತ್ತೇ ರಮಂತು ಸ್ವಾಹಾ । ಗಾವೋ ಹಿರಣ್ಯಂ ಧನಮನ್ನಪಾನಗ್ಂ ಸರ್ವೇಷಾಂ ಶ್ರಿಯೈ ಸ್ವಾಹಾ । ಶ್ರಿಯಂ ಚ ಲಕ್ಷ್ಮಿಂ ಚ ಪುಷ್ಟಿಂ ಚ ಕೀರ್ತಿಂ ಚಾನೃಣ್ಯತಾಮ್ । ಬ್ರಹ್ಮಣ್ಯಂ ಬಹುಪುತ್ರತಾಮ್ । ಶ್ರದ್ಧಾಮೇಧೇ ಪ್ರಜಾಃ ಸಂದದಾತು ಸ್ವಾಹಾ ॥**

ಈ ಮಂತ್ರಗಳಲ್ಲೆಲ್ಲ ಪರಮಾತ್ಮನನ್ನೇ ಸಂಬೋಧಿಸಿದೆ–ಎಂದು ಭಾಷ್ಯಕಾರರು ಅಭಿಪ್ರಾಯಪಡುತ್ತಾರೆ. ''ಎಲೈ ಪರಮಾತ್ಮನೆ, ನೀನು ಗಂಧಾರನು''–ಎಂದರೆ ದೇಹದಲ್ಲಿ ಉತ್ತಮವಾದ ಸುಗಂಧವನ್ನು ಸೂಸುತ್ತಿರುವವನು. ಹೇಗೆ ಗಂಧದಮರವು ಎಲ್ಲಾ ಅವಯವಗಳಲ್ಲಿಯೂ ಸುಗಂಧವನ್ನೇ ಹೊಂದಿರುವದೋ ಅಂಥ ಗಂಧದ್ರವ್ಯವನ್ನೇ ಯಾವನು ತನ್ನ ಆತ್ಮಶಕ್ತಿಯಿಂದ ಉಂಟುಮಾಡಿರುವನೋ ಅವನು ಗಂಧಾರನೇ ಸರಿ. ಇಂಥ ನಿನಗಾಗಿ ನಾನು ರಸಯುಕ್ತವಾದ ಮತ್ತು ಪಿಷ್ಟ ಎಂದರೆ ಹಿಟ್ಟಿನ ಒಡಗೂಡಿದ ತಿಲವನ್ನು (ಎಳ್ಳನ್ನು) ಹೋಮ ಮಾಡುವೆನು–ಎಂದರ್ಥ. ಆದ್ದರಿಂದ ಈ ವಿರಜಾಹೋಮಕ್ಕೆ ಅಕ್ಕಿಯ ಹಿಟ್ಟು ಬೆರೆತಿರುವ ಎಳ್ಳು ದ್ರವ್ಯವು–ಎಂದು ಗೊತ್ತಾಗುತ್ತದೆ. ಇಂಥ ಹೋಮದ ಫಲವಾಗಿ ನಿನ್ನ ಪರಮಪಾವನವಾದ ಸದ್ಗುಣಗಳು ನನ್ನ ಮನಸ್ಸಿನಲ್ಲಿ ರಮಿಸುವಂತಾಗಲಿ ! ನಿನ್ನ ಗುಣಗಳನ್ನೇ ಅದು ಅನುಸಂಧಾನ ಮಾಡಲಿ–ಎಂದರ್ಥ. ಮತ್ತು 'ಎಲೈ ಪರಮಾತ್ಮನೆ, ನಿನ್ನ ಪ್ರಸಾದದಿಂದ ಗೋವುಗಳು, ಚಿನ್ನ , ಹಣ, ಅನ್ನ ನೀರುಗಳು–ಮುಂತಾದ ಭೋಗವಸ್ತುಗಳೆಲ್ಲವೂ ಕೊರತೆಯಿಲ್ಲದೆ ಯಥೇಚ್ಛವಾಗಿ ನನಗೆ ದೊರಕಲಿ. ಗಜಾಂತವಾದ ಐಶ್ವರ್ಯವು ನನಗೆ ಸಿದ್ಧಿಸುವದಕ್ಕಾಗಿ ಈ ಹವಿಸ್ಸನ್ನು ನಿನಗೆ ಅರ್ಪಿಸುತ್ತಿರುವೆನು'– ಎಂದರ್ಥ. ಹಿಂದಿನ ಕಾಲಕ್ಕೆ ಐಶ್ವರ್ಯವಂತರನ್ನು ಅಳೆಯುವಾಗ ಯಾವನು ಆನೆಯನ್ನು ಸಾಕುವವನಾಗಿದ್ದು ಅದನ್ನು ಹೊಂದಿರುತ್ತಿದ್ದನೋ ಅವನು ಆ ರಾಜ್ಯದಲ್ಲಿ ಎಲ್ಲರಿಗಿಂತ ಶ್ರೀಮಂತನೆಂಬ ಭಾವನೆಯಿತ್ತು. ಅದರ ಸೂಚನೆಯೋ ಎಂಬಂತೆ

ಆಗ್ಗೆ ರಾಜಮಹಾರಾಜರುಗಳೂ ಗುರುಪೀಠಾಧಿಪತಿಗಳೂ ಆನೆಗಳನ್ನು ತಮ್ಮ ಐಶ್ವರ್ಯದ ಕುರುಹಾಗಿ ಹೊಂದಿರುತ್ತಿದ್ದರು. ಇದು **ಗಜಾಂತೈಶ್ವರ್ಯ**ವೆನಿಸುವದು. ಇನ್ನು ನಾನು ರಾಜ್ಯಲಕ್ಷ್ಮಿಯನ್ನೂ ಮೋಕ್ಷಲಕ್ಷ್ಮಿಯನ್ನೂ ಶರೀರಾದಿಗಳ ಪುಷ್ಟಿಯನ್ನೂ ಮೂರು ಲೋಕಗಳಿಗೂ ಹರಡುವಂತ ಕೀರ್ತಿಯನ್ನೂ , ದೇವಋಣ–ಋಷಿಋಣ –ಪಿತೃಋಣಗಳಿಂದ ಮುಕ್ತಿಯನ್ನೂ , ಸರ್ವೋತ್ತಮವಾದ ಬ್ರಾಹ್ಮಣ್ಯವನ್ನೂ , ಬಹಳಜನ ಮಕ್ಕಳನ್ನೂ, ಗುರುವಾಕ್ಯ , ವೇದಾಂತವಾಕ್ಯಗಳಲ್ಲಿ ಶ್ರದ್ಧೆಯನ್ನೂ , ಶಾಸ್ತ್ರಾರ್ಥಗ್ರಹಣ ರೂಪವಾದ ಮೇಧಾಶಕ್ತಿಯನ್ನೂ , ಹೆಣ್ಣುಮಕ್ಕಳೆಂಬ ಪ್ರಜೆಗಳನ್ನೂ ಬಯಸುವೆನು. ಅವುಗಳೆಲ್ಲವನ್ನೂ ಪರಮಾತ್ಮನು ನನಗೆ ಚೆನ್ನಾಗಿ ಕೊಡಲಿ, ದಯಪಾಲಿಸಲಿ– ಎಂದಭಿಪ್ರಾಯ.

**ಓಂ ||** **ತಿಲಾಃ ಕೃಷ್ಣಾಃ ತಿಲಾಃ ಶ್ವೇತಾಸ್ತಿಲಾ ಸೌಮ್ಯಾ ವಶಾನುಗಾಃ ।**
**ತಿಲಾಃ ಪುನಂತು ಮೇ ಪಾಪಂ ಯತ್ಕಿಂಚಿದ್ ದುರಿತಂ ಮಯಿ**
**ಸ್ವಾಹಾ ||**

''ಎಲೈ ಪರಮಾತ್ಮನೆ, ಕೆಲವು ಕಾಳುಗಳು ಕಪ್ಪಾಗಿರುವ ಎಳ್ಳುಗಳು, ಬಿಳುಪಾಗಿರುವ ಎಳ್ಳುಗಳು, **ಸೌಮ್ಯಾಃ**–ಎಂದರೆ ರೋಗವೇ ಮುಂತಾದ ತೊಂದರೆಗಳನ್ನುಂಟುಮಾಡದೆ ಇರುವಂಥವು–ಹಾಗೂ **ವಶಾನುಗಾಃ**– ಯಜಮಾನ ನಾದ ನನ್ನ ವಶದಲ್ಲಿರುವವುಗಳು ಎಂದರೆ ನಾನು ನ್ಯಾಯವಾದ ಮಾರ್ಗದಿಂದ ಸಂಪಾದಿಸಿದ ಹಣದಿಂದ ಕೊಂಡುತಂದಂಥವುಗಳು'' –ಎಂದರ್ಥ. ಹಾಗಲ್ಲದೆ ಕಳ್ಳತನದಿಂದಾಗಲಿ, ವಂಚನೆಯಿಂದಾಗಲಿ ತಂದದ್ದಲ್ಲ ಎಂದರ್ಥ. ಇದರಿಂದ ತಿಳಿಯಬರುವದೇನೆಂದರೆ: ಪಾಪಪರಿಹಾರಮಾಡಿಕೊಳ್ಳಬೇಕಾದವನು ಪಾಪದ್ರವ್ಯವನ್ನು ಬಳಸಿ ದೇವತಾ ಕರ್ಮಗಳನ್ನು ಮಾಡಬಾರದು. ಹಾಗಾದರೆ ದೇವತೆಗಳು ಮೆಚ್ಚುವದಿಲ್ಲ -ಎಂದರ್ಥ. ಒಂದು ವೇಳೆ ಹಾಗೆ ಮಾಡಿದರೂ ಅದು ಸಫಲವಾಗುವದಿಲ್ಲ–ಎಂದು ತಿಳಿಯಬೇಕು. ಹೀಗೆ ತಾನು ಸಂಪಾದಿಸಿದ ನ್ಯಾಯನಿಷ್ಠವಾದ ಹವಿರ್ದ್ರವ್ಯವು ಪರಮಾತ್ಮನ ಕೃಪೆಯಿಂದ ಪಾಪವನ್ನು ಪರಿಹಾರ ಮಾಡಲಿ–ಎಂದು ತಿಳಿಸಿದೆ. ಎಳ್ಳಿಗೆ ಪಾಪನಾಶನಸಾಮರ್ಥ್ಯವು ಭಗವಂತನ ಅನುಗ್ರಹದಿಂದ ಬಂದಿರುತ್ತದೆ. ಅದು ಮಹಾವಿಷ್ಣುವು ವರಹಾವತಾರ ಮಾಡಿ ಭೂಮಿಯನ್ನೆತ್ತಿದ ಕಾಲಕ್ಕೆ ಮೈಬೆವರಿದಾಗ ಹನಿಗಳಾಗಿ ಬಿದ್ದ ನೀರಿನಿಂದ ಉಂಟಾದವುಗಳೆಂದೂ ಪವಿತ್ರವಾದವುಗಳೆಂದೂ ಗರುಡಪುರಾಣದಲ್ಲಿ ತಿಳಿಸಿದೆ. ಆದ್ದರಿಂದಲೇ ಶುಭಾಶುಭಕರ್ಮಗಳೆರಡರಲ್ಲೂ ಎಳ್ಳಿನ

ಉಪಯೋಗವಿದೆ. ಮಕರಸಂಕ್ರಾಂತಿಯ ದಿನ ಎಳ್ಳನ್ನು ಮನೆಮನೆಗೆ ಹಂಚುವದು ಈಗಲೂ ರೂಢಿಯಲ್ಲಿದೆ. ಎಳ್ಳನ್ನು ದಾನಕೊಡುವಾಗ ಹೇಳುವ ಈ ಪದ್ಯವನ್ನು ಕೇಳಿರಿ.

**ತಿಲಾಃ ಕಾಶ್ಯಪಸಂಭೂತಾಃ ತಿಲಾಃ ಪಾಪಹರಾಃ ಶುಭಾಃ ।**
**ತಿಲಾದಾನಾದಸಹ್ಯಂ ಮೇ ಪಾಪಂ ನಾಶಯ ಕೇಶವ ॥**

ತಿಲಗಳು ಕಾಶ್ಯಪಬ್ರಹ್ಮರ ಸೃಷ್ಟಿಯು. ಅವು ಪಾಪಗಳನ್ನು ಕಳೆಯಬಲ್ಲವುಗಳು ; ಶುಭಪ್ರದವಾದವುಗಳು. ಎಲೈ ಕೇಶವನೆ, ತಿಲದಾನದಿಂದ ನನ್ನ ಅತಿ ಹೆಚ್ಚಿನ ಸಹಿಸಲಸಾಧ್ಯವಾದ ಪಾಪವನ್ನು ಕಳೆಯುವವನಾಗು–ಎಂದು ಶ್ಲೋಕಾರ್ಥವು. ಹೀಗೆ ತಿಲವು ನಮ್ಮ ದುರಿತಗಳನ್ನು ನೀಗಲಿ–ಎಂದು ಹೇಳಿ ಹೋಮವನ್ನು ಮಾಡಬೇಕೆಂದು ತಿಳಿಸಿದೆ.

**ಓಂ ॥ ಚೋರಸ್ಯಾನ್ನಂ ನವಶ್ರಾದ್ದಂ ಬ್ರಹ್ಮಹಾ ಗುರುತಲ್ಪಗಃ ।**
**ಗೋಸ್ತೇಯಗ್ಂ ಸುರಾಪಾನಂ ಭ್ರೂಣಹತ್ಯಾ ತಿಲಾ**
**ಶಾಂತಿಗಂ ಶಮಯನ್ತು ಸ್ವಾಹಾ ॥ ಶ್ರೀಶ್ಚ ಲಕ್ಷ್ಮೀಶ್ಚ ಪುಷ್ಟೀಶ್ಚ**
**ಕೀರ್ತಿಂ ಚಾನೃಣ್ಯತಾಮ್ । ಬ್ರಹ್ಮಣ್ಯಂ ಬಹು ಪುತ್ರತಾಮ್।**
**ಶ್ರದ್ಧಾಮೇಧೇ ಪ್ರಜ್ಞಾ ತು ಜಾತವೇದಃ ಸಂದದಾತು ಸ್ವಾಹಾ ॥**

ಈ ಮಂತ್ರದಲ್ಲಿಯೂ ಮಹಾಪಾಪಗಳ ಪರಿಹಾರಕ್ಕಾಗಿ ಪ್ರಾರ್ಥಿಸಲಾಗಿದೆ. ಬೇರೊಬ್ಬರ ಮನೆಯಲ್ಲಿ ಭೋಜನಮಾಡುವದು ಒಂದು ಪಾಪಸಂಘಟನೆಯೆನಿಸುವದು. ಆದ್ದರಿಂದಲೇ ಪರಾನ್ನಭೋಜನಮಾಡುವದು ನಿಷಿದ್ಧವೆಂದು ಸಾಮಾನ್ಯ ನಿಯಮವಿದೆ. ಇನ್ನೊಬ್ಬರ ಮನೆಯ ಅನ್ನವು ಅವನ ಪಾಪಗಳನ್ನು ಪ್ರತಿನಿಧಿಸುವದರಿಂದ ಊಟ ಮಾಡುವವನು ಅವನ ಪಾಪಗಳನ್ನೇ ತಿನ್ನುವವನಾಗುತ್ತಾನೆ. ಏಕೆಂದರೆ ಮನುಷ್ಯರು ಮಾಡಿರುವ ಪಾಪಗಳೆಲ್ಲವೂ ಅನ್ನವನ್ನಾಶ್ರಯಿಸಿ ಕುಳಿತಿರುವವು–ಎಂದು ಸ್ಮೃತಿವಾಕ್ಯವಿದೆ. ಹೀಗಿರುವಲ್ಲಿ ಕಳ್ಳನ ಮನೆಯ ಅನ್ನ, ಅಪರಕರ್ಮಗಳ ಕಾಲಕ್ಕೆ ಹನ್ನೊಂದನೆಯದಿನ ಮಾಡುವ ಏಕೋದ್ದಿಷ್ಟವೆಂಬ ಶ್ರಾದ್ಧದಲ್ಲಿ ಪ್ರೇತನಿಗಾಗಿ ಅರ್ಪಿಸಿದ ಅನ್ನ, ಬ್ರಹ್ಮಹತ್ಯೆಯನ್ನು ಮಾಡಿರುವವನ ಮನೆಯ ಅನ್ನ, ಗುರುತಲ್ಪಗಮನವೆಂಬ ಮಹಾಪಾಪವನ್ನು ಮಾಡಿರುವವನ ಮನೆಯ ಅನ್ನ, ಗೋವುಗಳನ್ನು ಕಳವು ಮಾಡಿರುವವನ ಮನೆಯ ಅನ್ನ, ಮದ್ಯಪಾನವನ್ನು ಮಾಡಿರುವವನ ಮನೆಯ ಅನ್ನ, ಭ್ರೂಣಹತ್ಯೆಯನ್ನು ಮಾಡಿರುವವನ ಮನೆಯ ಅನ್ನ–ಹೀಗೆ ಮಹಾಪಾಪಗಳ ನಿಮಿತ್ತವಾಗಿ ಸಂಘಟಿಸಿರುವ ದುರನ್ನಗಳನ್ನು ತಿಂದವನಿಗೆ ಪಾಪಗಳು ಅಂಟಿಕೊಳ್ಳದೆ ಇರುತ್ತವೆಯೆ?

ಆದರೆ ಯಾರ ಮನೆಗಾದರೂ ಭೋಜನಕ್ಕೆ ಹೋದಾಗ ಅವರು ಹಿಂದೆ ಏನೇನು ಪಾಪಗಳನ್ನು ಮಾಡಿರುತ್ತಾರೋ ನಮಗೆ ತಿಳಿದಿರುತ್ತದೆಯೆ? ಇಲ್ಲ. ಆದ್ದರಿಂದ ತಿಲಹೋಮವು ಈ ನಮ್ಮ ಎಲ್ಲಾ ವಿಧವಾದ ಅನ್ನಸಂಸರ್ಗದಿಂದುಂಟಾದ ಪಾಪಗಳನ್ನೂ ಶಮನಗೊಳಿಸಲಿ. ಭಗವಂತನು ನಮ್ಮನ್ನು ಪರಿಶುದ್ಧರನ್ನಾಗಿ ಮಾಡಲಿ–ಎಂದಭಿಪ್ರಾಯ.

ಇನ್ನು ಹಿಂದಿನ ಮಂತ್ರದಂತೆಯೇ ಐಶ್ವರ್ಯಾದಿಗಳನ್ನೂ ಭಗವಂತನು ದಯ ಪಾಲಿಸಲಿ–ಎಂದು ಬೇಡಲಾಗಿದೆ. ಈ ಮಂತ್ರಭಾಗದ ಅರ್ಥವನ್ನು ವಿವರಿಸಿದ್ದಾಗಿದೆ. ವಿಶೇಷವೇನೆಂದರೆ: ಜಾತವೇದನೆಂದು ಇಲ್ಲಿ ಪರಮಾತ್ಮನನ್ನೇ ಸಂಬೋಧಿಸಿದೆ. ಸಾಮಾನ್ಯವಾಗಿ ಈ ಶಬ್ದವು ಅಗ್ನಿಯನ್ನು ಹೇಳುತ್ತದೆ. ಆದರೆ ಯಾವ ದೇವತಾವಾಚಕಶಬ್ದದಿಂದಲಾದರೂ ಪರಮಾತ್ಮನನ್ನು ಕರೆಯಬಹುದಾಗಿದೆ. ಇಂಥ ಜಾತವೇದನು ಶ್ರದ್ಧಾದಿಗಳೊಡನೆ ಪ್ರಜ್ಞೆಯನ್ನೂ–ಎಂದರೆ ಚುರುಕಾದ ಸೂಕ್ಷ್ಮವಾದ ಬುದ್ಧಿಸಾಮರ್ಥ್ಯವನ್ನೂ ನೀಡಲಿ–ಎಂದು ಬೇಡಿಕೊಳ್ಳಲಾಗಿದೆ.

ಓಂ ॥ ಪ್ರಾಣಾಪಾನವ್ಯಾನೋದಾನಸಮಾನಾ ಮೇ ಶುಧ್ಯಂತಾಂ
ಜ್ಯೋತಿರಹಂ ವಿರಜಾ ವಿಪಾಪ್ಮಾ ಭೂಯಾಸಗ್ಂ ಸ್ವಾಹಾ ।
ವಾಙ್ಮನಃ ಚಕ್ಷುಃ ಶ್ರೋತ್ರ ಜಿಹ್ವಾಘ್ರಾಣರೇತೋ ಬುದ್ಧ್ಯಾ
ಕೂತಿಃ ಸಂಕಲ್ಪಾ ಮೇ ಶುಧ್ಯಂತಾಂ ಜ್ಯೋತಿರಹಂ ವಿರಜಾ
ವಿಪಾಪ್ಮಾ ಭೂಯಾಸಗ್ಂ ಸ್ವಾಹಾ । ತ್ವಕ್ ಚರ್ಮಮಾಗ್ಂಸ
ರುಧಿರಮೇದೋ ಮಜ್ಜಾಸ್ನಾಯವೋಽಸ್ಥೀನಿ ಮೇ ಶುಧ್ಯಂತಾಂ
ಜ್ಯೋತಿರಹಂ ವಿರಜಾ ವಿಪಾಪ್ಮಾ ಭೂಯಾಸಗ್ಂ ಸ್ವಾಹಾ ।
ಶಿರಃ ಪಾಣಿಪಾದಪಾರ್ಶ್ವಪೃಷ್ಠೋರೂದರಜಂಘಶಿಶ್ನೋಪಸ್ಥ
ಪಾಯವೋ ಮೇ ಶುಧ್ಯಂತಾಂ ಜ್ಯೋತಿರಹಂ ವಿರಜಾ ವಿಪಾಪ್ಮಾ
ಭೂಯಾಸಗ್ಂ ಸ್ವಾಹಾ । ಉತ್ತಿಷ್ಠ ಪುರುಷ ಹರಿತ ಪಿಂಗಲ
ಲೋಹಿತಾಕ್ಷಿ ದೇಹಿ ದೇಹಿ ದದಾಪಯಿತಾ ಮೇ ಶುಧ್ಯಂತಾಂ
ಜ್ಯೋತಿರಹಂ ವಿರಜಾ ವಿಪಾಪ್ಮಾ ಭೂಯಸಗ್ಂ ಸ್ವಾಹಾ ॥

ಈ ಐದು ಮಂತ್ರಗಳಲ್ಲಿಯೂ 'ಜ್ಯೋತಿರಹಂ......ಭೂಯಾಸಂ' ಎಂಬ ವಾಕ್ಯವು ಪುನರುಕ್ತವಾಗಿದೆ. ಪಾಪವಿರಹಿತವೂ ದೋಷವಿರಹಿತವೂ ಆದ ಜ್ಯೋತಿಯು ನಾನಾಗಲಿರುವೆನು. ಅದಕ್ಕಾಗಿ ಈ ಹೋಮವನ್ನು ಆಚರಿಸುವೆನು–ಎಂದರ್ಥ. ಜ್ಞಾನಕ್ಕೆ ಪ್ರತಿಬಂಧಕವಾದ ದುಷ್ಕೃತವನ್ನು ಪಾಪವೆಂದೂ ಪಾಪಮಾಡುವದಕ್ಕೆ ಪ್ರೇರಕವಾದ

ರಜೋಗುಣವನ್ನು ರಜಶ್ಶಬ್ದದಿಂದಲೂ ಇಲ್ಲಿ ನಿರ್ದೇಶಿಸಲಾಗಿದೆ. ಇವುಗಳು ಇಲ್ಲವಾದಾಗ ಸಾಧಕನು **ವಿಪಾಪ್ಮನೂ ವಿರಜನೂ** ಆಗುವನು. ಇದು ಸಿದ್ಧಿಸಬೇಕಾದರೆ ಅಧ್ಯಾತ್ಮ , ಅಧಿಭೂತ, ಅಧಿದೈವವಾಗಿ ಹರಡಿಕೊಂಡಿರುವ ಪ್ರಪಂಚವೆಲ್ಲವೂ ತನ್ನ ಪಾಲಿಗೆ ಶುದ್ಧವಾಗುವಂತೆ ಭಗವಂತನನ್ನು ಬೇಡಿಕೊಳ್ಳಬೇಕು. ಭೂಮಿಗೆಲ್ಲ ಚರ್ಮವನ್ನು ಹೊದಿಸಿ ಮುಳ್ಳುಕಲ್ಲುಗಳು ಚುಚ್ಚದಂತೆ ಮಾಡಲಾಗುವದಿಲ್ಲವಾದರೂ ತಾನು ಹೆಜ್ಜೆಯಿಟ್ಟಲ್ಲೆಲ್ಲ ಮೆತ್ತಗಾಗುವಂತೆ ಹೇಗೆ ಪಾದರಕ್ಷೆಯನ್ನುಪಯೋಗಿಸಿ ಜಾಣತನದಿಂದ ವರ್ತಿಸಬಹುದೋ ಹಾಗೆಯೇ ಈ ಹೋಮ ಹಾಗೂ ಮಂತ್ರಜಪಾದಿಗಳಿಂದ ನಮ್ಮನ್ನು ನಾವು ವಿರಜಸ್ಕರನ್ನಾಗಿ ಮಾಡಿಕೊಳ್ಳಲು ಸಾಧ್ಯವಿದೆ. ಅದಕ್ಕಾಗಿ ಇಲ್ಲಿ ಒಂದೊಂದಾಗಿ ಎಲ್ಲಾ ಭೂತಗಳೂ ಪ್ರಕೃತಿವಿಕೃತಿಗಳೂ ಶುದ್ಧವಾಗಲಿ ಎಂದು ಬೇಡಿಕೊಳ್ಳಲಾಗಿದೆ. ಶುದ್ಧಿಯು ಮೊದಲು ಒಳಗಿನಿಂದಲೇ ಆಗಬೇಕು. ಹೇಗೆ ಹೆಂಗಸರು ಅಡಿಗೆಮನೆಯ ಕಸವನ್ನು ಗುಡಿಸಿ ಅನಂತರ ವರಾಂಡದ. ಕಸವನ್ನು ಗುಡಿಸುತ್ತಾರೋ, ಹಾಗೆ ನಮ್ಮ ಶರೀರದೊಳಗಿನ ಪ್ರಾಣಗಳು, ವಾಗಾದೀಂದ್ರಿಯಗಳು, ಶಿರ ಆದಿ ಅವಯವಗಳು–ಹೀಗೆ ಕ್ರಮವಾಗಿ ಶುದ್ಧವಾಗಬೇಕಾಗಿದೆ. ಅದನ್ನೇ ಇಲ್ಲಿ ಪ್ರಸ್ತಾಪಿಸಿರುತ್ತಾರೆ.

**ಪ್ರಾಣ, ಅಪಾನ, ಸಮಾನ, ಉದಾನ, ವ್ಯಾನ**–ಎಂಬಿವು ಐದು ವಾಯುಗಳು. ಇವುಗಳಲ್ಲಿ ಮೊದಲನೆಯ ನಾಲ್ಕು ಕ್ರಮವಾಗಿ ಮನುಷ್ಯ ಶರೀರದಲ್ಲಿ ಹೃದಯ–ಗುದ–ಹೊಕ್ಕಳು–ಕಂಠಗಳಲ್ಲಿರುವವು. ವ್ಯಾನವೆಂಬುದು ಇಡಿಯ ಶರೀರವನ್ನೆಲ್ಲ ವ್ಯಾಪಿಸಿಕೊಂಡಿರುವದು. ಈ ವಾಯುಗಳು ತಮ್ಮ ಕಾರ್ಯವನ್ನು ಮಾಡುವದರೊಡನೆ–ಪಾಪಕಾರ್ಯಗಳಿಗೆ ನಮ್ಮನ್ನು ಸೆಳೆದೊಯ್ಯದಂತೆ ಶುದ್ಧವಾಗಿ ಸಂಚರಿಸಲಿ–ಎಂದರ್ಥ. ಉದಾಹರಣೆಗೆ ಉದಾನವೆಂಬ ವಾಯುವು ಮಾತನಾಡಲು ಸಹಾಯಕವಾಗಿರುವದು. ಆದರೆ ಅದು ಕೆಟ್ಟ ಮಾತನ್ನು ಹೊರಡಿಸದೆ ಇರಲಿ. ಹಾಗೆ ಪವಿತ್ರವಾಗಿರಲಿ–ಎಂದಭಿಪ್ರಾಯ. ಹೀಗೆಯೇ ಐದು ಕರ್ಮೇಂದ್ರಿಯಗಳೂ ಐದು ಜ್ಞಾನೇಂದ್ರಿಯಗಳೂ ಮನಸ್ಸೂ ಪರಿಶುದ್ಧವಾಗಲೆಂದು ಪ್ರಾರ್ಥಿಸಲಾಗಿದೆ. ಅವು ಯಾವವೆಂದರೆ **ಮಾತು, ಮನಸ್ಸು , ಕಣ್ಣುಗಳು, ಕಿವಿಗಳು, ನಾಲಗೆ, ಮೂಗು, ಗುಹ್ಯೇಂದ್ರಿಯ, ಬುದ್ಧಿ**ಯೆಂಬ ನಿಶ್ಚಯಾತ್ಮಕವಾದ ಅಂತಃಕರಣದ ವೃತ್ತಿ , ಅನಿಶ್ಚಯರೂಪವೃತ್ತಿಯಾದ **ಆಕೂತಿ**–ಎಂಬಿದು, ನಿರ್ಣಯರೂಪವಾದ ಸಂಕಲ್ಪವೃತ್ತಿ–ಇವೆಲ್ಲವೂ ಪರಿಶುದ್ಧಿಯನ್ನು ಪಡೆಯಲಿ. ಸತ್ಯವನ್ನೂ ಧರ್ಮವನ್ನೂ ಹಿಂಬಾಲಿಸಿ ಪ್ರವರ್ತಿಸಲಿ–ಎಂದರ್ಥ. ಹಾಗೆಯೇ ಸ್ಥೂಲಶರೀರದ ಅಂತರಂಗದ ಅವಯವಗಳಾದ ಸಪ್ತಧಾತುಗಳೂ ಶುದ್ಧವಾಗಲಿ–ಎಂದು ಕೇಳಲಾಗಿದೆ. ಅವು ಯಾವವೆಂದರೆ **ತ್ವಕ್**–ಚರ್ಮಗಳು ಎಂದರೆ ಚರ್ಮದ

ಹೊರಭಾಗ ಒಳಭಾಗಗಳು, ಮಾಂಸ, ರಕ್ತ, ಜಿಡ್ಡು(ಮೇದಸ್ಸು) ಮಜ್ಜೆಎಂಬ ಧಾತು, ನರಗಳು, ಮೂಳೆಗಳು–ಇವೆಲ್ಲವೂ ಪರಿಶುದ್ಧವಾಗಲಿ; ಆ ಮೂಲಕ ಪಾಪಕರ್ಮಗಳಲ್ಲಿ ಇವು ಪ್ರವರ್ತಿಸದೆ ಇರಲಿ–ಎಂದರ್ಥ. ಇನ್ನು ಸ್ಥೂಲಶರೀರಭಾಗಗಳೂ ಶುದ್ಧಿಗೊಳ್ಳುವಂತೆ ಕೇಳಲಾಗಿದೆ. ಅವು ಹೀಗಿವೆ; ತಲೆ, ಕೈಗಳು, ಕಾಲುಗಳು, ಪಕ್ಕೆಗಳು, ಬೆನ್ನು ಹಾಗೂ ಆಸನಭಾಗ, ತೊಡೆಗಳು, ಹೊಟ್ಟೆ , ಮಂಡಿಗಳು, (ಸ್ತ್ರೀಪುರುಷ ಭೇದದಿಂದ) ಜನನೇಂದ್ರಿಯಗಳು, ಪಾಯ್ವಿಂದ್ರಿಯ (ಗುದ)–ಇವುಗಳೂ ಶುದ್ಧವಾಗಲಿ–ಎಂದಭಿಪ್ರಾಯ.

ಈಗ ಅಗ್ನಿಶರೀರಕನಾದ ಭಗವಂತನನ್ನು ಶುದ್ಧಿಗಾಗಿ ಮತ್ತೆ ಪ್ರಾರ್ಥನೆ ಮಾಡಲಾಗುತ್ತದೆ. ಎಲ್ಲಾ ದೇವತಾಕರ್ಮಗಳೂ ಅಗ್ನಿಯ ಮೂಲಕವೇ ನೆರವೇರಬೇಕಾಗಿದೆ. ಅದಕ್ಕಾಗಿ ಹೀಗೆ ಕೇಳಲಾಗಿದೆ; "ಎಲೈ ಅಗ್ನಿಶರೀರಸ್ಥನಾದ ಪರಮಾತ್ಮನೆ, ನೀನು ಪುರುಷನು. ಎಲ್ಲಾ ಪ್ರಾಣಿಗಳ ಶರೀರದಲ್ಲಿಯೂ ಇದ್ದುಕೊಂಡಿರುವನಾದ್ದರಿಂದ ಪುರುಷನೆನಿಸಿರುವೆ. ಹಾಗೂ ನೀನು ಹರಿತನು. ಪಾಪಗಳೆಂಬ ಪ್ರತಿಬಂಧಕಗಳನ್ನು ಹರಣಮಾಡುವವನು. ಮತ್ತು ಪಿಂಗಳನು ಎಂದರೆ ಪಿಂಗಳವರ್ಣನು. ಮತ್ತು ಲೋಹಿತಾಕ್ಷಿಯು. ಕೆಂಪಾದ ಕಣ್ಣುಗಳುಳ್ಳವನು. ಇಂಥ ನೀನು ಉತ್ತಿಷ್ಠ–ಮೇಲೇಳುವವನಾಗು. ದೇಹಿ ದೇಹಿ–ಮತ್ತೆಮತ್ತೆ ನನಗೆ ಪರಿಶುದ್ಧಿಯನ್ನು ಉಂಟುಮಾಡು. ದದಾಪಯಿತಾ–ಗುರು ಮುಖದಿಂದ ತತ್ತ್ವಜ್ಞಾನವನ್ನು ವಿಶೇಷವಾಗಿ ನೀಡುವವನಾಗು. ಅದಕ್ಕಾಗಿ ಚಿತ್ತಶುದ್ಧಿಯನ್ನು ಉಂಟುಮಾಡುವವನಾಗು. ನಾನು ವಿರಜನೂ ವಿಪಾಪ್ಮನೂ ಆಗುವಂತೆ ಅನುಗ್ರಹಿಸು"–ಎಂದಭಿಪ್ರಾಯ.

ಓಂ ॥ ಪೃಥವ್ಯಪ್ತೇಜೋವಾಯುರಾಕಾಶಾ ಮೇ ಶುಧ್ಯಂತಾಂ
ಜ್ಯೋತಿರಹಂ ವಿರಜಾ ವಿಪಾಪ್ಮಾ ಭೂಯಾಸ್ಸಗ್ ಸ್ವಾಹಾ ।
ಶಬ್ದಸ್ಪರ್ಶರೂಪರಸಗಂಧಾ ಮೇ ಶುಧ್ಯಂತಾಂ ಜ್ಯೋತಿರಹಂ
ವಿರಜಾ ವಿಪಾಪ್ಮಾ ಭೂಯಾಸಗ್ಂ ಸ್ವಾಹಾ । ಮನೋವಾಕ್ಕಾಯ
ಕರ್ಮಾಣಿ ಮೇ ಶುಧ್ಯಂತಾಂ ಜ್ಯೋತಿರಹಂ ವಿರಜಾ ವಿಪಾಪ್ಮಾ
ಭೂಯಾಸಗ್ಂ ಸ್ವಾಹಾ । ಅವ್ಯಕ್ತಭಾವೈರಹಂಕಾರೈರ್ಜ್ಯೋತಿ
ರಹಂ ವಿರಜಾ ವಿಪಾಪ್ಮಾ ಭೂಯಾಸಗ್ಂ ಸ್ವಾಹಾ ॥

ಈಗ ಆಧಿಭೌತಿಕ–ಆಧ್ಯಾತ್ಮಿಕಜಗತ್ತುಗಳೆರಡೂ ನನಗೆ ಪರಿಶುದ್ಧವಾಗಿ ದೊರಕಲೆಂದು ಪ್ರಾರ್ಥಿಸಲಾಗುತ್ತದೆ. ಪಂಚಮಹಾಭೂತಗಳೆನಿಸಿರುವ ಭೂಮಿ, ನೀರು,

ಬೆಳಕು, ಗಾಳಿ, ಆಕಾಶಗಳು ಶುದ್ಧವಾಗಲಿ–ಎಂದು ಪ್ರಾರ್ಥಿಸಲಾಗಿದೆ. ನಾವು ವಾಸ ಮಾಡುವ ಜಾಗವು ಹೆಚ್ಚಿನ ಶೀತೋಷ್ಣಾದಿಗಳಿಲ್ಲದೆ ಸಜ್ಜನರಿಂದ ಕೂಡಿದ್ದಾಗಿ ವಾಸಕ್ಕೆ ಅನುಕೂಲವಾಗಿದ್ದು ಎಲ್ಲಾ ವಿಧದಿಂದಲೂ ಪೀಡಾರಹಿತವಾಗಿದ್ದಲ್ಲಿ ಶುದ್ಧಿಯೆನಿಸುತ್ತದೆ. ಈಗಿನ ಕಾಲಕ್ಕೆ ಜನಸಂದಣಿ, ವಾಹನಗಳ ಗದ್ದಲ, ಜಲ–ವಾಯುಮಾಲಿನ್ಯಗಳು–ಇವು ನಮ್ಮ ವಾಸಸ್ಥಳಗಳನ್ನು ಕೆಡಿಸಿವೆ. ತೀರ್ಥಕ್ಷೇತ್ರಗಳಂತೂ ವರ್ಣಿಸಲಾಗದಷ್ಟು ಮಾಲಿನ್ಯಕ್ಕೊಳಗಾಗಿವೆ. ಆದ್ದರಿಂದ ಪಂಚಭೂತಗಳು ಶುದ್ಧವಾಗಿ ದೊರಕುವ ಜಾಗದಲ್ಲಿ ನಾವು ವಾಸಮಾಡುವದೇ ಪುಣ್ಯವಿಶೇಷವೆನಿಸುತ್ತದೆ. ಅದು ಸಜ್ಜನರಿಂದಲೂ ಉತ್ತಮನಾಗರಿಕರಿಂದಲೂ ಕೂಡಿದ್ದಲ್ಲಿ ನಮ್ಮ ಪಾಪಗಳ ಕ್ಷಯಕ್ಕೆ ಅವಕಾಶವು ದೊರೆತಂತೆಯೇ ಸರಿ. ಹೀಗೆ ಪಂಚಮಹಾಭೂತಗಳ ಶುದ್ಧಿಯನ್ನು ಬೇಡಿಕೊಳ್ಳಲಾಗಿದೆ. ಅನಂತರ ನಾವು ಪಂಚೇಂದ್ರಿಯಗಳಿಂದಲೂ ಸೇವಿಸುವ ಶಬ್ದಸ್ಪರ್ಶರೂಪರಸಗಂಧಗಳು ಪರಿಶುದ್ಧವಾಗಲಿ–ಎಂದು ಪ್ರಾರ್ಥಿಸಿದೆ. ಇದನ್ನು ಜಗತ್ತಿನಲ್ಲಿ ನಾವೇ ಆರಿಸಿಕೊಳ್ಳಬೇಕು. ಉದಾಹರಣೆಗೆ ಶಬ್ದಗಳಲ್ಲಿ ವೇದಾಧ್ಯಯನ, ಸಂಗೀತಾದಿಗಳೂ ಕಾಡು ಹರಟೆ, ರಾಜಕೀಯ ಸುದ್ದಿಗಳು, ಅಪಘಾತ, ದೊಂಬಿ–ಜಗಳ ವೃತ್ತಾಂತಗಳು–ಎಲ್ಲವೂ ಇರುತ್ತವೆ. ನಾವು ಒಳ್ಳೆಯದನ್ನು ಇಂದ್ರಿಯಗಳಿಗೆ ಅಭ್ಯಾಸಮಾಡಿಸಿದರೆ ಅವು ಅಂಥವನ್ನೇ ಆರಿಸಿಕೊಳ್ಳುತ್ತವೆ. ಆಗ ಶುದ್ಧಿಯಾಗುವದು. ಅನಂತರ ನಮ್ಮ ಮನಸ್ಸು, ಮಾತು, ಕೆಲಸ–ಇವು ಮೂರು ಶುದ್ಧವಾಗಲಿ–ಎಂದು ಬೇಡಿಕೊಳ್ಳಲಾಗಿದೆ. ಮನಸ್ಸು ಒಳ್ಳೆಯದನ್ನೇ ಯೋಚಿಸುವಂತಾದರೆ ಬಾಯಲ್ಲಿಯೂ ಒಳ್ಳೆಯ ಮಾತುಗಳೇ ಹೊರಡುತ್ತವೆ. ಮಾಡುವ ಕೆಲಸಗಳೂ ಒಳ್ಳೆಯವೇ ಆಗಿರುತ್ತವೆ. ಇದ್ಕಕೆ ತ್ರಿಕರಣಶುದ್ಧಿ–ಎಂದು ಹೆಸರು. ಇಂಥ ತ್ರಿಕರಣಶುದ್ಧಿಯು ಹೋಮದ ಫಲವಾಗಿ ದೊರಕಲಿ–ಎಂದಭಿಪ್ರಾಯ. ಇನ್ನು ತಾನು ಅಹಂಕಾರಗಳಿಂದಲೂ ನಿರ್ಮುಕ್ತನಾಗಬೇಕೆಂದೂ ಆ ಅಹಂಕಾರವೆಂಬುದು ಲೋಕದ ಜನರೊಡನೆ ವ್ಯವಹರಿಸುವಾಗ ತನ್ನನ್ನು ತಾನು ಮರೆಮಾಚಿಕೊಂಡು ಬೇರೊಂದು ರೀತಿಯಲ್ಲಿ ಹೊರತೋರಿಕೊಳ್ಳುವ ಸ್ವಭಾವದ್ದಾಗಿದ್ದರೆ ಅಂಥ ಸ್ಥಿತಿಯಿಂದಲೂ ಬಿಡುಗಡೆಯಾಗಬೇಕೆಂದೂ ಭಗವಂತನಲ್ಲಿ ಕೇಳಿಕೊಂಡಿದೆ. ಜನರು ಸಾಮಾನ್ಯವಾಗಿ ಮೊದಮೊದಲು ಇನ್ನೊಬ್ಬರೊಡನೆ ಕಲೆತಾಗ ತಮ್ಮ ಅಂತರಂಗವನ್ನು ತೋರ್ಪಡಿಸಿಕೊಳ್ಳುವದಿಲ್ಲ. ಬಹಳ ಆಪ್ತರಲ್ಲಿ ಮಾತ್ರ ತಿಳಿಸುತ್ತಾರೆ. ಉಳಿದವರಿಗೆ ಮರೆಮಾಚುತ್ತಾರೆ. ಈ ಸ್ವಭಾವವನ್ನೇ ಅವ್ಯಕ್ತಭಾವವೆಂದಿದೆ. ದೇವತೆಗಳಲ್ಲಿ ಮಾತ್ರ ಹಾಗೆ ನಾವು ಪ್ರಚ್ಛನ್ನವ್ಯವಹಾರ ಮಾಡಬಾರದು. ಹೀಗೆ ಅಹಂಕಾರ, ಅವ್ಯಕ್ತಭಾವಗಳಿಂದ ನಾನು ಬಿಡುಗಡೆ ಹೊಂದಿ ಜ್ಯೋತೀರೂಪನಾಗಿ ದೋಷರಹಿತನೂ ಪಾಪರಹಿತನೂ ಆಗುವಂತೆ ಪರಮಾತ್ಮನು ಅನುಗ್ರಹಿಸಲೆಂದು ಪ್ರಾರ್ಥಿಸಲಾಗಿದೆ.

ಓಂ ॥ ಆತ್ಮಾ ಮೇ ಶುಧ್ಯಂತಾಂ ಜ್ಯೋತಿರಹಂ ವಿರಜಾ ವಿಪಾಪ್ಮಾ ಭೂಯಾಸಗ್ಂ ಸ್ವಾಹಾ । ಅಂತರಾತ್ಮಾ ಮೇ ಶುಧ್ಯಂತಾಂ ಜ್ಯೋತಿರಹಂ ವಿರಜಾ ವಿಪಾಪ್ಮಾ ಭೂಯಾಸಗ್ಂ ಸ್ವಾಹಾ । ಪರಮಾತ್ಮಾ ಮೇ ಶುಧ್ಯಂತಾಂ ಜ್ಯೋತಿರಹಂ ವಿರಜಾ ವಿಪಾಪ್ಮಾ ಭೂಯಾಸಗ್ಂ ಸ್ವಾಹಾ । ಕ್ಷುಧೇ ಸ್ವಾಹಾ । ಕ್ಷುತ್ಪಿಪಾಸಾಯ ಸ್ವಾಹಾ । ವಿವಿಟ್ಯೈ ಸ್ವಾಹಾ । ಋಗ್ವಿಧಾನಾಯ ಸ್ವಾಹಾ । ಕಷೋತ್ಕಾಯ ಸ್ವಾಹಾ । ಕ್ಷುತ್ ಪಿಪಾಸಾಮಲಂ ಜ್ಯೇಷ್ಠಾಮಲಕ್ಷೀಂ ನಾಶಯಾಮ್ಯಹಮ್ । ಅಭೂತಿಮಸಮೃದ್ಧಿಂ ಚ ಸರ್ವಾನ್ನಿರ್ಣುದ ಮೇ ಪಾಪ್ಮಾನಗ್ಂ ಸ್ವಾಹಾ । ಅನ್ನಮಯ ಪ್ರಾಣಮಯಮನೋಮಯವಿಜ್ಞಾನ ಮಯಮಾನಂದಮಯಮಾತ್ಮಾ ಮೇ ಶುಧ್ಯಂತಾಂ ಜ್ಯೋತಿ ರಹಂ ವಿರಜಾ ವಿಪಾಪ್ಮಾ ಭೂಯಾಸಗ್ಂ ಸ್ವಾಹಾ ॥

ಈ ಮಂತ್ರಗಳಲ್ಲಿ ಅಧ್ಯಾತ್ಮವಾದ ಜಗತ್ತು–ತನ್ನೊಳಗಿನ ಪ್ರಪಂಚವು ಶುದ್ಧವಾಗ ಲೆಂದು ಬೇಡಿಕೊಳ್ಳಲಾಗಿದೆ. ಆತ್ಮನೆಂದರೆ ದೇಹವು–ಎಂದರ್ಥ ಮಾಡಬೇಕು. ಹಾಗೆಯೇ ಅಂತರಾತ್ಮನೆಂದರೆ ಅಂತಃಕರಣವೆಂದೂ ಪರಮಾತ್ಮನೆಂದರೆ ಭಗವಂತನೆಂದೂ ಅರ್ಥ. ಶರೀರಾಂತಃಕರಣಗಳ ಶುದ್ಧಿಯೇನೋ ಸರಿಯೆ; ಆದರೆ ನಿತ್ಯಶುದ್ಧನಾದ ಪರಮಾತ್ಮನು ಶುದ್ಧನಾಗಲಿ–ಎಂದರೇನರ್ಥ ? ಇದಕ್ಕೆ ಉತ್ತರವೇನೆಂದರೆ: ಅವಿದ್ಯಾದಿದೋಷದಿಂದ ಉಪಾಧಿಗಳ ಮೂಲಕ ತೋರುವ ಪರಬ್ರಹ್ಮವು ಆಯಾ ಉಪಾಧಿಸಂಬಂಧದಿಂದ ಮಲಿನವಾಗಿರುವಂತೆ ತೋರುತ್ತದೆ. ಹೇಗೆ ಶುದ್ಧವಾದ ಸ್ಫಟಿಕವು ಸಮೀಪದಲ್ಲಿರುವ ಕೆಂಪು ಹೂವಿನ ನಿಮಿತ್ತ ತಾನೂ ಕೆಂಪಾಗಿ ತೋರುವದೋ ಹೂವನ್ನು ತೆಗೆದರೆ ಹೇಗೆ ಶುಭ್ರವಾಗಿ ತೋರುವದೋ, ಕೆಂಪಾಗಿ ಕಂಡಾಗಲೂ ಹೇಗೆ ಅದು ಕೆಂಪನ್ನು ಅಂಟಿಸಿಕೊಳ್ಳದ ಹಾಗೆ ಆಗಿದ್ದಂತೆ ತೋರಿ ಅನಂತರ ಸ್ವಭಾವದಿಂದ ಕಂಡುಬಂದಿತೋ ಹಾಗೆಯೇ ಪರಮಾತ್ಮನೂ ಉಪಾಧಿವಶದಿಂದ ಸಂಸಾರಿಯೆಂದೂ ತೋರಿದರೂ ಸಂಸಾರಧರ್ಮವಿಲ್ಲದವನೇ ಆಗಿರುತ್ತಾನೆ. ಆದ್ದರಿಂದ ತತ್ತ್ವದೃಷ್ಟಿಯಿಂದ ಪರಮಾತ್ಮನಿಗೆ ಶುದ್ಧಿ–ಅಶುದ್ಧಿಗಳಿಲ್ಲ . ಉಪಾಧಿದೃಷ್ಟಿಯಿಂದ ಅಶುದ್ಧನಾದಂತೆ ತೋರಿದವನು ಶುದ್ಧನಾಗಲಿ–ಎಂದು ಪ್ರಾರ್ಥಿಸಿದೆ–ಎಂದು ತಿಳಿಯಬೇಕು. ಹೀಗೆ ಆತ್ಮ–ಅಂತರಾತ್ಮ–ಪರಮಾತ್ಮರುಗಳ ಶುದ್ಧಿಯನ್ನು ಪ್ರಾರ್ಥಿಸಿದ

ಅನಂತರ ಹಸಿವು ಮತ್ತು ಬಾಯಾರಿಕೆ–ಎಂಬಿವುಗಳೂ ದೇವತೆಗಳೆಂದೇ ಭಾವಿಸಿ ಅವುಗಳ ಪ್ರೀತಿಗಾಗಿಯೂ ಹವಿಸ್ಸನ್ನು ಅರ್ಪಿಸಲಾಗಿದೆ.

ಈಗ ಪರಮಾತ್ಮನನ್ನೇ **ವಿವಿಟ್ಟಿ, ಋಗ್ವಿಧಾನ, ಕಷೋತ್ಕ**–ಎಂಬ ಹೆಸರುಗಳಿಂದ ಕರೆದು ಆಹುತಿಯನ್ನರ್ಪಿಸಲಾಗಿದೆ. ಈ ವಿಶೇಷಶಬ್ದಗಳ ಅರ್ಥ ವೇನೆಂದರೆ: ವ್ಯಾಪ್ತಿಎಂಬರ್ಥದ ಧಾತುವಿನಿಂದ ಹುಟ್ಟಿದ್ದು, ಸರ್ವತ್ರವೂ ವಿಶೇಷವಾಗಿ ವ್ಯಾಪಿಸಿರುವ ತತ್ತ್ವವೇ **ವಿವಿಟ್ಟೀ**–ಎನಿಸುವದು. ಹಾಗೆಯೇ ಋಕ್ಕುಗಳನ್ನು ವಿಧಾನ ಮಾಡುವದು–ಎಂದರೆ ಉತ್ಪತ್ತಿಮಾಡುವ ಪರಬ್ರಹ್ಮವು **ಋಗ್ವಿಧಾನ**ವೆನಿಸುವದು. ಇನ್ನು **ಕಷೋತ್ಕ**ನೆಂದರೆ ಮಾಡು ಎಂಬರ್ಥದ ಕಷಧಾತುವಿನಿಂದ ಹುಟ್ಟಿರುವ ಈ ಶಬ್ದವು ನಾಮರೂಪಕರ್ಮಾತ್ಮಕವಾದ ಕಾರ್ಯಪ್ರಪಂಚವನ್ನುಂಟುಮಾಡಿ ಅದನ್ನು ಸಲಹುವದಕ್ಕೆ ಉದ್ಯುಕ್ತನಾದ ಪರಮಾತ್ಮನನ್ನು ಹೇಳುವದು. ಅಂಥ ಭಗವಂತನಿಗಾಗಿ ಆಹುತಿಯನ್ನು ಅರ್ಪಿಸಿದೆ.

ಈಗ ''ಕ್ಷುತ್ಪಿಪಾಸಾಮಲಂ.....'' ಎಂಬ ಮಂತ್ರಾರ್ಥವನ್ನು ವಿಚಾರ ಮಾಡೋಣ. ಈ ಮಂತ್ರವು **ಶ್ರೀಸೂಕ್ತ**ದಲ್ಲಿಯೂ ಬಂದಿದೆ. ಇಲ್ಲಿ ತಿಳಿಸಿರುವಂತೆ ಇದರ ಅಭಿಪ್ರಾಯವೇನೆಂದರೆ: ''ಎಲೈ ಪರಮಾತ್ಮನೆ, ನಿನ್ನ ಪ್ರಸಾದದಿಂದ ನಾನು ಹಸಿವು ಬಾಯಾರಿಕೆಗಳೆಂಬ ಹಿರಿಯಳಾದ ಅಲಕ್ಷ್ಮಿಯನ್ನು ಮತ್ತು ಐಶ್ವರ್ಯಹೀನತೆ, ಸಮೃದ್ಧಿಯಿಲ್ಲದೆ ಇರುವಿಕೆಗಳನ್ನೂ ನಾಶಗೊಳಿಸುವೆನು. ಮತ್ತು ನೀನು ನನ್ನ ಪಾಪಗಳನ್ನು ಕಳೆಯುವವನಾಗು. ಅದಕ್ಕಾಗಿ ಈ ಆಹುತಿಯನ್ನು ಅರ್ಪಿಸುವೆನು''–ಎಂದು ಬೇಡಿ ಕೊಂಡಿದೆ. ಮನುಷ್ಯನಿಗೆ ಶರೀರವಿರುವವರೆಗೂ ಹಸಿವು ಬಾಯಾರಿಕೆಗಳು ತಪ್ಪಿದ್ದಲ್ಲ. ಆದರೆ ಹಸಿದವೇಳೆಗೆ ಅನ್ನವೂ ಬಾಯಾರಿದ ವೇಳೆಗೆ ಪಾನೀಯವೂ ಯಾವಾಗಲೂ ದೊರಕುವಂತಿದ್ದರೆ ಅವುಗಳಿಗಾಗಿ ಭಯಪಡುವ ಪ್ರಸಂಗವಿರುವದಿಲ್ಲ. ಹಾಗಿರಬೇಕಾದರೆ ಮಾನವನು ಐಶ್ವರ್ಯಸಮೃದ್ಧನಾಗಿರಬೇಕು. ಐಶ್ವರ್ಯವು ಯಾವಾಗಲೂ ಅಸ್ಥಿರವು. ಅದನ್ನು ಸ್ಥಿರಗೊಳಿಸಿಕೊಂಡು ಹಸಿವು ಮುಂತಾದದ್ದರ ಭಯವನ್ನು ಹೋಗಲಾಡಿಸಿಕೊಳ್ಳಬೇಕಾದರೆ ಭಗವದನುಗ್ರಹವು ಬೇಕು. ಅದು ಪಾಪಪರಿಹಾರದಿಂದಲೇ ದೊರಕಲು ಸಾಧ್ಯ. ಹೀಗೆ ಪಾಪಪರಿಹಾರಕಮಂತ್ರವಾಗಿ ಇದು ವಿನಿಯುಕ್ತವಾಗಿದೆ.

ಕಡೆಯದಾಗಿ ಈ ವಿರಾಜಾಹೋಮದಲ್ಲಿನ ''ಅನ್ನಮಯ....'' ಎಂಬೀ ಮಂತ್ರಾರ್ಥವನ್ನು ನೋಡೋಣ. ಅನ್ನಮಯ–ಪ್ರಾಣಮಯ–ಮನೋಮಯ–ವಿಜ್ಞಾನಮಯ–ಆನಂದಮಯ–ಈ ಐದು ಕೋಶಗಳೆಂದು ಪ್ರಸಿದ್ಧವಾಗಿವೆ. ಇವು

ಒಂದಕ್ಕಿಂತ ಒಂದು ಸೂಕ್ಷ್ಮವೂ ವ್ಯಾಪಕವೂ ಆಗಿರುವವು. ಇವುಗಳನ್ನೆಲ್ಲ ದಾಟಿ ಒಳಗೆ ಇರುವ ಪ್ರತ್ಯಗಾತ್ಮನನ್ನು ಕಂಡುಕೊಳ್ಳುವದೇ ಬ್ರಹ್ಮವಿದ್ಯೆಯು. ಇದರ ಹೆಚ್ಚಿನ ವಿವರಗಳನ್ನು ಆನಂದವಲ್ಲಿ–ಎಂಬ ತೈತ್ತಿರೀಯೋಪನಿಷದ್ಭಾಗದಲ್ಲಿ ಕೊಡಲಾಗಿದೆ. ಇವುಗಳು ಅತ್ಮನಿಗೆ ಒಂದು ರೀತಿಯ ಮುಸುಕುಗಳಿದ್ದಂತೆ. ಇವುಗಳನ್ನು ವಿವೇಕದಿಂದಲೇ ದಾಟಬೇಕು. ಅಲ್ಲಿಯವರೆಗೆ ಇವುಗಳೂ ಆತ್ಮವಿದ್ಯೆಗೆ ಉಪಕಾರವಾಗುವ ರೀತಿಯಲ್ಲಿ ಪರಿಶುದ್ಧವಾಗಿರಲಿ; ಈ ಕೋಶಗಳ ಅಭಿಮಾನಿಯಾದ ಆತ್ಮನು ತನ್ನೊಳಗಿನ ಅಂತರಾತ್ಮನನ್ನು ಕಂಡುಕೊಳ್ಳುವಂಥ ಸಂಸ್ಕಾರವನ್ನು ಹೊಂದಿ ಉತ್ತರೋತ್ತರವಾಗಿ ಆನಂದಮಯಾತ್ಮನಿಗೂ ಅಂತರನಾದ ಆನಂದಾತ್ಮನನ್ನು ಕಂಡುಕೊಳ್ಳುವಷ್ಟು ಪರಿಶುದ್ಧತೆಯು ದೊರೆಯಲಿ–ಎಂದು ಪ್ರಾರ್ಥಿಸಿ ಆಹುತಿಯನ್ನು ಅರ್ಪಿಸಿದೆ. ಇಲ್ಲಿಗೆ ವಿರಾಜಾಹೋಮಮಂತ್ರಗಳು ಪೂರೈಸಿವೆ.

## ವೈಶ್ವದೇವಮಂತ್ರಗಳು

ಓಂ ॥ ಅಗ್ನಯೇ ಸ್ವಾಹಾ । ವಿಶ್ವೇಭ್ಯೋ ದೇವೇಭ್ಯಃ ಸ್ವಾಹಾ ।
ಧ್ರುವಾಯ ಭೂಮಾಯ ಸ್ವಾಹಾ । ಧ್ರುವಕ್ಷಿತಯೇ ಸ್ವಾಹಾ।
ಅಚ್ಯುತಕ್ಷಿತಯೇ ಸ್ವಾಹಾ । ಅಗ್ನಯೇ ಸ್ವಿಷ್ಟಕೃತೇ ಸ್ವಾಹಾ ॥

ವೈಶ್ವದೇವವೆಂಬುದು ಗೃಹಸ್ಥನು ಮಾಡಬೇಕಾದ ಒಂದು ಸ್ಮಾರ್ತಕರ್ಮವು. ಇದು ನಿತ್ಯಕರ್ಮವೆನಿಸಿದೆ. ಇದರ ಉದ್ದೇಶವೇನೆಂದರೆ ನಾವು ತಿನ್ನುವ ಅನ್ನವು ಸಂಸ್ಕೃತ ವಾಗಬೇಕು. ಸಂಸ್ಕಾರವನ್ನು ಹೊಂದಿದ ಅನ್ನವನ್ನು ಊಟ ಮಾಡಿದರೆ ಮಾತ್ರ ಸದ್ಬುದ್ಧಿಯು ಉಂಟಾಗುತ್ತದೆ. ಅನಂತರ ಆತ್ಮಜ್ಞಾನಕ್ಕೆ ಯೋಗ್ಯತೆಯುಂಟಾಗುವದು. ಹೀಗೆ ಅನ್ನಶುದ್ಧಿ ಹಾಗೂ ಸಂಸ್ಕಾರಕ್ಕಾಗಿ ಈ ಕರ್ಮವನ್ನು ಹೇಳಿದೆ. ಹಾಗಿಲ್ಲದೆ ಹಸಿದಾಗ ಊಟಮಾಡುವದೊಂದೇ ನಮ್ಮ ಗುರಿಯಾದರೆ ಅಂಥ ಅನ್ನವು ಹಸಿವನ್ನು ಕಳೆಯುತ್ತದೆಯಾದರೂ ಬುದ್ಧಿಸಂಸ್ಕಾರವನ್ನುಂಟುಮಾಡುವದಿಲ್ಲ . ಎಂಥ ಅನ್ನವನ್ನು ತಿನ್ನುವೆವೋ ಅಂಥ ಬುದ್ಧಿಯೇ ಬರುತ್ತದೆ. ಆದ್ದರಿಂದ ತಿನ್ನುವ ಅನ್ನಕ್ಕೆ ಶುದ್ಧಿಯು ಅತ್ಯಗತ್ಯವಾಗಿದೆ. ಅದನ್ನು ವೈಶ್ವದೇವಕರ್ಮದಿಂದ ಸಾಧಿಸಬೇಕಾಗಿದೆ. ಈ ಕರ್ಮವು ಹೆಸರಿಗೆ ತಕ್ಕಂತೆ ವಿಶ್ವದೇವತೆಗಳನ್ನೂ–ಎಂದರೆ ಎಲ್ಲಾ ದೇವತೆಗಳನ್ನೂ ಪ್ರಧಾನವಾಗಿ ಹೊಂದಿರುತ್ತದೆ. ನಾವು ತಿನ್ನಬೇಕಾಗಿರುವ ಅನ್ನವನ್ನು ಮೊದಲು ಸಮಸ್ತದೇವತೆಗಳಿಗೂ ಸಮರ್ಪಿಸುವುದೇ ಈ ಕರ್ಮದ ಮುಖ್ಯೋದ್ದೇಶವು. ದೇವತೆಗಳಿಗೆ ಅರ್ಪಿಸ

ಬೇಕಾಗಿರುವ ಅನ್ನವನ್ನು ನಾವು ಪವಿತ್ರವಾಗಿಯೇ ಸಿದ್ಧಗೊಳಿಸಿರಬೇಕು. ಅದನ್ನು ಹವಿಸ್ಸೆಂದು ಗೌರವದಿಂದ ಕರೆಯುತ್ತಾರೆ. ಈ ಹವಿರರ್ಪಣೆಯಲ್ಲಿ ಮೊದಲಿನ (ಮೇಲೆ ತಿಳಿಸಿರುವ) ಆರು ಮಂತ್ರಗಳಿಂದ ಅಗ್ನಿಯಲ್ಲಿ ಹೋಮಮಾಡಲಾಗುತ್ತದೆ. ಈ ಮಂತ್ರಗಳ ಅರ್ಥವೇನೆಂದರೆ : (1) ಅಗ್ನಿಗೆ ಸ್ವಾಹಾ– ಎಂದು ಸಮರ್ಪಿಸುವಿಕೆ. ಅಗ್ನಿಯೇ ನಮಗೂ ದೇವತೆಗಳಿಗೂ ನಡುವೆ ಸಂಬಂಧವನ್ನು ಕಲ್ಪಿಸುವ ದೇವತೆಯಾಗಿದ್ದಾನೆ. ಪ್ರತಿಯೊಂದು ಹೋಮಾರಂಭದಲ್ಲಿಯೂ ಮೊದಲು ಅಗ್ನಿಗೆ ಆಹುತಿಯನ್ನರ್ಪಿಸಲಾಗುವದು. (2) ವಿಶ್ವೇದೇವತೆಗಳೆಂಬವರು ದೇವತೆಗಳಲ್ಲಿಯೇ ಒಂದು ಗುಂಪಿನವರು. ಇವರು ಎಂಟು ಜನರಿದ್ದು ಇಬ್ಬಿಬ್ಬರಂತೆ ನಾಲ್ಕು ವಿಭಾಗಗಳಾಗಿದ್ದಾರೆ. (3) ಭೂಮನೆಂಬ ಧ್ರುವದೇವತೆಗೆ ಆಹುತಿಯ ಅರ್ಪಣೆ. (4) ಧ್ರುವಕ್ಷಿತಿಯೆಂಬವನೂ ದೇವತೆಯೇ ಆಗಿರುವನು. ಶಾಶ್ವತವಾದ ಅವಸ್ಥಿತಿ ಎಂದರೆ ಬಾಳು– ಉಳ್ಳವನು. (5) ನಾಶವಾಗದ ಬಾಳು ಉಳ್ಳವನೇ ಅಚ್ಯುತಕ್ಷಿತಿಯು. ಇವರಿಗೆಲ್ಲ ಹವಿರರ್ಪಣೆಯು ಅಗ್ನಿಯ ಮೂಲಕ ಆಗಬೇಕು. ಅನಂತರ (6) ಸ್ವಿಷ್ಟಕೃತ್ ಎಂಬ ಅಗ್ನಿಗೂ ಆಹುತಿಯನ್ನು ನೀಡಬೇಕು. ಕರ್ಮವನ್ನು ಮಾಡುವಾಗ ಯಾವಾಗಲಾದರೂ ಎಚ್ಚರದಪ್ಪಿದವರಾಗಿ ಅಥವಾ ಸೋಮಾರಿತನದಿಂದ ಸರಿಯಾಗಿ ಅಗ್ನಿಯಲ್ಲಿ ಹವಿಸ್ಸನ್ನು ಹಾಕದೆ ಇದ್ದಾಗ ಉಂಟಾದ ದೋಷವನ್ನು ಯಾವನು ಸರಿಪಡಿಸಿ ಸು–ಇಷ್ಟ–ಸ್ವಿಷ್ಟ– ಎಂದರೆ ಸರಿಯಾದ ರೀತಿಯಲ್ಲಿಯೇ ಹೋಮಮಾಡಿದಂತೆ ಮಾಡುವನೋ ಅವನೇ ಸ್ವಿಷ್ಟಕೃದಗ್ನಿಯು. ಅವನಿಗೂ ಆಹುತಿಪ್ರಧಾನವನ್ನು ಈಗ ಮಾಡಲಾಗಿದೆ– ಎಂದರ್ಥ .

ಓಂ ॥ ಧರ್ಮಾಯ ಸ್ವಾಹಾ । ಅಧರ್ಮಾಯ ಸ್ವಾಹಾ । ಅದ್ಭ್ಯಃ ಸ್ವಾಹಾ। ಓಷಧಿವನಸ್ಪತಿಭ್ಯಃ ಸ್ವಾಹಾ । ರಕ್ಷೋದೇವಜನೇಭ್ಯಃ ಸ್ವಾಹಾ । ಗೃಹ್ಯಾಭ್ಯಃ ಸ್ವಾಹಾ । ಅವಸಾನೇಭ್ಯಃ ಸ್ವಾಹಾ । ಅವಸಾನಪತಿಭ್ಯಃ ಸ್ವಾಹಾ । ಸರ್ವಭೂತೇಭ್ಯಃ ಸ್ವಾಹಾ । ಕಾಮಾಯ ಸ್ವಾಹಾ । ಅಂತರಿಕ್ಷಾಯ ಸ್ವಾಹಾ ॥

ಈ ಮಂತ್ರಗಳಿಂದ ಮುಂದಕ್ಕೆ ಪೂರ ಹೋಮವಿಲ್ಲ. ಬಲಿಹರಣಕ್ಕೆ ಮಾತ್ರ ಬಳಸಬೇಕು. ಬಲಿಹರಣವೆಂದರೆ ಅನ್ನವನ್ನು ನೆಲದ ಮೇಲೆ ಮಾಡಿರುವ ಮಂಡಲದಲ್ಲಿ ಕ್ರಮವಾಗಿ ಇಡುತ್ತಾ ಬರುವದು. ಈ ಮಂಡಲವು ಬೀಸಣಿಗೆಯ ಆಕಾರದಲ್ಲಿರುವದು. ಈ ಕರ್ಮವನ್ನು ಮಾಡಲಿಚ್ಛಿಸುವವನು ಮೊದಲು ಬಲ್ಲವರಿಂದ ತರಪೇತಿಯನ್ನು ಪಡೆಯಬೇಕು. ಪ್ರಯೋಗಗ್ರಂಥಗಳಲ್ಲಿ ಈ ಬಲಿಹರಣಕ್ರಮವನ್ನು ಚಿತ್ರರೂಪವಾಗಿಯೇ

ಅಳವಡಿಸಿ ವಿವರಿಸಿರುತ್ತಾರೆ. ಅದರಂತೆಯೇ ಆಹುತಿಗಳನ್ನು ಸಮರ್ಪಿಸಬೇಕು. ಈಗ ಮಂತ್ರಾರ್ಥವನ್ನು ವಿಚಾರಮಾಡೋಣ. **ಧರ್ಮ, ಅಧರ್ಮ**–ಎರಡೂ ಪ್ರಸಿದ್ಧ ದೇವತೆಗಳು. ಅಧರ್ಮವನ್ನು ಭಗವಂತನು ತನ್ನ ಆಸನದಲ್ಲಿ ಅಳವಡಿಸಿಕೊಂಡಿರುತ್ತಾನೆ. ಹೇಗೆ ನಾವು ಕುರ್ಚಿಯ ಮೇಲೆ ಕೂಡುವಾಗ ದಿಂಬನ್ನು ನಮ್ಮ ಆಸನದ ಕೆಳಗಡೆ ಹಾಕಿಕೊಂಡು ಅದರ ಮೇಲೆ ಕುಳಿತುಕೊಳ್ಳುವೆವೋ ಹಾಗೆ ಭಗವಂತನು ಅಧರ್ಮವನ್ನು ಧರಿಸಿದ್ದಾನೆ. ಆದ್ದರಿಂದ ಆ ದೇವತೆಗೂ ಆಹುತಿಯನ್ನು ಅರ್ಪಿಸಬೇಕು. ಬಂದೀಖಾನೆಯಲ್ಲಿರುವ ತಪ್ಪಿತಸ್ಥರಿಗೂ ಕೊಲೆಗಡುಕರಿಗೂ ಹೇಗೆ ಸರಕಾರವೇ ಆಹಾರವನ್ನು ಸರಬರಾಜು ಮಾಡುವದೋ ಹಾಗೆಯೇ ಇಲ್ಲಿಯೂ ತಿಳಿಯಬೇಕು. ಹೀಗೆ ಧರ್ಮಾಧರ್ಮಗಳೆರಡಕ್ಕೂ ವ್ಯವಹಾರಸಮಯದಲ್ಲಿ ಅಸ್ತಿತ್ವವುಂಟು. ಇನ್ನು ಅಬ್ದೇವತೆಗಳಿಗೆ ಎಂತ ಅರ್ಪಿಸುವ ಆಹುತಿಯೂ **ಓಷಧಿ**ಗಳೆಂದರೆ ಪೈರುಗಳಿಗೆ ಅಭಿಮಾನಿಯಾದ ದೇವತೆಗೂ **ವನಸ್ಪತಿ**– ಎಂದರೆ ಕಾಡಿನಲ್ಲಿ ಬೆಳೆಯುವ ಗಿಡಮರಗಳಿಗೆ ಅಭಿಮಾನಿಗಳಾದ ದೇವತೆಗಳಿಗೂ ಹವಿರರ್ಪಣೆಯನ್ನು ವಿಧಿಸಲಾಗಿದೆ. ಹಾಗೆಯೇ ರಾಕ್ಷಸವರ್ಗದವರಿಗೂ ದೇವತಾವರ್ಗದವರಿಗೂ–ಇಬ್ಬರೂ ಪ್ರಜಾಪತಿಯ ಮಕ್ಕಳೇ ಆದ್ದರಿಂದ ಅವರಿಗೂ ಹವಿರರ್ಪಣೆ ಮಾಡಬೇಕು. ರಾಕ್ಷಸರಲ್ಲೇ ಕೆಲವರು ದೇವತೆಗಳ ಪಟ್ಟಿಗೂ ಸೇರಿರುತ್ತಾರೆ. ಉದಾಹರಣೆಗೆ **ನಿರ್ಋತಿ**–ಎಂಬ ದೇವತೆ ಹಾಗೂ ಪುರಾಣಪ್ರಸಿದ್ಧರಾದ **ರಾಹುಕೇತು**ಗಳು, **ವಿಭೀಷಣ, ಪ್ರಹ್ಲಾದಾ**ದಿಗಳು. ಇವರನ್ನೆಲ್ಲ **ರಕ್ಷೋದೇವಜನ**ರೆಂಬ ಗುಂಪಿನಲ್ಲಿ ಸೇರಿಸಬಹುದಾಗಿದೆ. ಇನ್ನು **ಗೃಹ್ಯ**ರೆಂದರೆ ಮನೆಯಲ್ಲಿಯೇ ನಮ್ಮೊಡನೆಯೇ ಇರುವ ದೇವತೆಗಳು. ಕುಲದೇವತೆಗಳು ಹಾಗೂ ಇಷ್ಟದೇವತೆಗಳು–ಎಂದರ್ಥ . ಇಂಥ ದೇವತೆಗಳನ್ನೆಲ್ಲ ನಾವು ಮನೆಯಲ್ಲಿ ದೇವರ ಗೂಡು–ಎಂತ ಜಾಗವನ್ನು ಕಲ್ಪಿಸಿ ಅಲ್ಲಿ ಸ್ಥಾಪಿಸಿರುತ್ತೇವೆ. ಆದರೆ ಎಷ್ಟೋ ಮನೆಗಳಲ್ಲಿ ಗೂಡಿನಲ್ಲಿರುವ ದೇವತೆಗಳಿಗೆ ಏನೊಂದೂ ಪೂಜೆಯು ನಡೆಯುವದೇ ಇಲ್ಲ. ಕಡೆಯ ಪಕ್ಷ ಧೂಳನ್ನಾದರೂ ಕೊಡವಿ, ಹೊಸ ಹೂವುಗಳನ್ನಿಟ್ಟು ದೀಪವನ್ನು ಬೆಳಗಿ ನಮಸ್ಕಾರ ಮಾಡುವ ಪದ್ಧತಿಯನ್ನು ಇಟ್ಟುಕೊಳ್ಳಬೇಕು. ಇಲ್ಲವಾದರೆ ಆ ದೇವತೆಗಳು ಮುನಿಸಿಕೊಳ್ಳುವರು. ವಿಶೇಷ ದಿನಗಳಲ್ಲಿಯಂತೂ ದೇವರ ಪೂಜೆಯನ್ನು ನೆರವೇರಿಸಲೇಬೇಕು. ಇರಲಿ. ಈ ದೇವತೆಗಳಿಗಾಗಿ ಇಲ್ಲಿ ಆಹುತಿಪ್ರದಾನವನ್ನು ಹೇಳಿದೆ. ಹಾಗೆಯೇ **ಅವಸಾನರು–ಅವಸಾನಪತಿ**ಗಳು ಎಂಬುವರೂ ದೇವತೆಗಳೇ ಆಗಿದ್ದಾರೆ. ಇವರುಗಳು ಯಾರೆಂದರೆ ನಮ್ಮನಮ್ಮ ಮನೆಗಳ ಸಮೀಪದಲ್ಲಿ ಅಥವಾ ನಮ್ಮ ಬೀದಿ, ಕೇರಿಗಳಲ್ಲಿರುವವರು. ಇಂಥವರಿಗೂ ಆಹುತಿಗಳನ್ನು ಅರ್ಪಿಸಬೇಕು. ಇದರಿಂದ

ತಿಳಿದುಬರುವದೇನೆಂದರೆ; ನಾವು ವಾಸಮಾಡುತ್ತಿರುವ ಪರಿಸರಗಳಲ್ಲಿರುವ ದೇವಾಲಯಗಳಲ್ಲಿ ಸ್ಥಾಪಿಸಲ್ಪಟ್ಟಿರುವ ದೇವತೆಗಳೆಲ್ಲರಿಗೂ ಪೂಜಾದಿಗಳು ನಡೆಯುವಂತೆಯೂ ಉಪಚಾರಗಳೂ ಉತ್ಸವಗಳೂ ಸಲ್ಲುವಂತೆಯೂ ನಾವು ಆಸಕ್ತಿಯನ್ನು ವಹಿಸಬೇಕು. ವೈಶ್ವದೇವಕಾಲಕ್ಕೂ ಆ ದೇವತೆಗಳನ್ನು ಸ್ಮರಿಸಿಕೊಂಡು ಆಹುತಿ ಪ್ರದಾನ ಮಾಡಬೇಕು. 'ಸರ್ವಭೂತೇಭ್ಯಃ; ಎಂಬಿದು ಎಲ್ಲಾ ಪಂಚ ಮಹಾಭೂತಗಳಿಗೂ ಅವುಗಳಿಂದ ಹೊರಬಂದಿರುವ ಪ್ರಾಣಿಗಳಿಗೂ ಅನ್ವಯಿಸುತ್ತದೆ. ಅವುಗಳಿಗೆಲ್ಲ ಆಹುತಿಪ್ರದಾನವನ್ನು ಹೇಳಿದೆ. ಕಾಮ—ನು ಅಧ್ಯಾತ್ಮವಾಗಿರುವ ದೇವತೆ. ಅವನಿಗೂ ಅಂತರಿಕ್ಷ ಎಂದರೆ ಅಲ್ಲಿರುವ ವಾಯುದೇವತೆಗೂ ಆಹುತಿ ಸಮರ್ಪಣೆ— ಎಂದರಿಯಬೇಕು.

**ಓಂ ॥ ಯದೇಜತಿ ಜಗತಿ ಯಚ್ಚ ಚೇಷ್ಟತಿ ನಾಮ್ನೋ ಭಾಗೋಽಯಂ ನಾಮ್ನೇ ಸ್ವಾಹಾ । ಪೃಥಿವ್ಯೈ ಸ್ವಾಹಾ । ಅಂತರಿಕ್ಷಾಯ ಸ್ವಾಹಾ। ದಿವೇ ಸ್ವಾಹಾ । ಸೂರ್ಯಾಯ ಸ್ವಾಹಾ । ಚಂದ್ರಮಸೇ ಸ್ವಾಹಾ। ನಕ್ಷತ್ರೇಭ್ಯಃ ಸ್ವಾಹಾ ॥**

ಇಲ್ಲಿ ತಿಳಿಸಿರುವ ದೇವತೆಗಳಿಗೂ ವೈಶ್ವದೇವಬಲಿಹರಣವನ್ನು ಸಮರ್ಪಿಸಬೇಕು. '**ಯದೇಜತಿ**—ಎಂಬ ಮಂತ್ರಕ್ಕೆ ಪರಮಾತ್ಮನೇ ದೇವತೆಯಾಗಿರುತ್ತಾನೆ. ಎಲ್ಲಾ ವೈದಿಕಶಬ್ದರಾಶಿಗಳಿಂದಲೂ ಪರಮಾತ್ಮನೇ ಹೇಳಲ್ಪಡುವನಾದ್ದರಿಂದ ನಾಮ್ನೇ—ಎಂದರೆ ಆಯಾ ನಾಮಗಳಿಂದ ಸ್ತುತಿಸಲ್ಪಡುವ ಪರಬ್ರಹ್ಮನಿಗೆ—ಎಂದರ್ಥ. ಆ ಪರಮಾತ್ಮನ ಚೈತನ್ಯಶಕ್ತಿಯಿಂದಲೇ **ಯದೇಜತಿ**—ಗಿಡಮರಗಳೇ ಮುಂತಾದವು ಗಾಳಿಯಿಂದ ಅಲ್ಲಾಡುತ್ತಿವೆಯೋ ಮತ್ತು ಜಗತ್ತಿನಲ್ಲಿ ಯಾವಯಾವ ಪ್ರಾಣಿಗಳು ತಮ್ಮತಮ್ಮ ಜೀವನವ್ಯಾಪಾರವನ್ನು ನಡೆಯಿಸುತ್ತಿರುವವೋ ಈ ಎಲ್ಲಾ ಪದಾರ್ಥಸಮೂಹವೂ ನಾಮ—ನೆನಿಸಿರುವ ಭಗವಂತನ ಅನ್ನವು. ಏಕೆಂದರೆ ಪ್ರಲಯಕಾಲದಲ್ಲಿ ಎಲ್ಲವನ್ನೂ ಆತನೇ ತನ್ನೊಳಗೆ ಲಯಮಾಡಿಕೊಳ್ಳುತ್ತಾನೆ. ಅಂಥ ನಾಮವೆಂಬ ದೇವತೆಗೆ ಈ ಎಲ್ಲವೂ ಸಲ್ಲತಕ್ಕದ್ದಾಗಿದೆ. ಅವನಿಗೆ ಈ ಆಹುತಿಯನ್ನು ಸಮರ್ಪಿಸುವೆನು—ಎಂದಭಿಪ್ರಾಯ. ಹಾಗೆಯೇ ಪೃಥಿವೀ—ಎಂದರೆ ಭೂಮಿದೇವತೆಯು. ಅಂತರಿಕ್ಷವೆಂದರೆ ಇಲ್ಲಿ ನಡುವಣ ಅವಕಾಶ—ಅಥವಾ ಆಕಾಶವೆಂದರ್ಥ. ಅದೂ ದೇವತೆಯೇ ಆಗಿದೆ. ಈ ಇಬ್ಬರು ದೇವತೆಗಳಿಗೂ ಹವಿಸ್ಸನ್ನು ಅರ್ಪಿಸುವೆನು—ಎಂದರ್ಥ. ದಿವೇ—ಎಂದರೆ ದ್ಯುಲೋಕ ದೇವತೆಗೂ, ಸೂರ್ಯನಿಗೂ, ಚಂದ್ರನಿಗೂ, ನಕ್ಷತ್ರದೇವತೆಗಳಿಗೂ ಹವಿರರ್ಪಣೆ ಮಾಡುವೆನು—ಎಂದಭಿಪ್ರಾಯ.

ಓಂ ॥ ಇಂದ್ರಾಯ ಸ್ವಾಹಾ । ಬೃಹಸ್ಪತಯೇ ಸ್ವಾಹಾ । ಪ್ರಜಾಪತಯೇ ಸ್ವಾಹಾ । ಬ್ರಹ್ಮಣೇ ಸ್ವಾಹಾ । ಸ್ವಧಾ ಪಿತೃಭ್ಯಃ ಸ್ವಾಹಾ । ನಮೋ ರುದ್ರಾಯ ಪಶುಪತಯೇ ಸ್ವಾಹಾ । ದೇವೇಭ್ಯಃ ಸ್ವಾಹಾ। ಪಿತೃಭ್ಯಃ ಸ್ವಧಾಸ್ತು। ಭೂತೇಭ್ಯೋ ನಮಃ। ಮನುಷ್ಯೇಭ್ಯೋ ಹಂತಾ । ಪ್ರಜಾಪತಯೇ ಸ್ವಾಹಾ । ಪರಮೇಷ್ಠಿನೇ ಸ್ವಾಹಾ ॥

ಈ ಮಂತ್ರಗಳಲ್ಲಿ ಹೆಸರಿಸಿರುವ ದೇವತೆಗಳಿಗೂ ವೈಶ್ವದೇವಬಲಿಹರಣವನ್ನು ಸಮರ್ಪಿಸಬೇಕು. ಇಂದ್ರನು ಪ್ರಸಿದ್ಧನಾದ ದೇವರಾಜನು. ಬೃಹಸ್ಪತಿಯು ದೇವಪುರೋಹಿತನು. ಪ್ರಜಾಪತಿಯೆಂದರೆ ವಿರಾಡಾತ್ಮನು ಅಥವಾ ವಿರಾಟ್ ಪುರುಷನು. ಬ್ರಹ್ಮನೆಂದರೆ ಹಿರಣ್ಯಗರ್ಭನು. ಹೀಗೆ ಈ ದೇವತೆಗಳಿಗೆಲ್ಲ ಹವಿರರ್ಪಣವಾಗಲಿ–ಎಂದು ಭಾವ. ಅನಂತರ ದೇವತೆಗಳಲ್ಲಿಯೇ ಒಂದು ಗುಂಪಿನವರಾದ ಪಿತೃದೇವತೆಗಳು. ಅವರಿಗೂ ಹವಿಸ್ಸನ್ನು ಅರ್ಪಿಸುವೆನು ಎಂದು ಅಭಿಪ್ರಾಯ. ಇನ್ನು ಎಲ್ಲಾ ಹೋಮಗಳಲ್ಲಿಯೂ–ಎಂದರೆ ಅದು ಯಾವ ಪ್ರಧಾನದೇವತೆಯನ್ನು ಕುರಿತೇ ಮಾಡಿದ್ದಾಗಿರಲಿ–ಕಡೆಯಲ್ಲಿ ಪಶುಪತಿಯಾದ ರುದ್ರನಿಗೆ ಭಾಗವನ್ನು ನೀಡಬೇಕು. ಯಾರ ಯಜ್ಞಯಾಗಾದಿಗಳಲ್ಲಿಯೂ ಅವನನ್ನು ಕೈಬಿಡಬಾರದು. ಹಾಗೆ ತಿರಸ್ಕರಿಸಿದರೆ ಅದು ದಕ್ಷಯಜ್ಞವಾಗುತ್ತದೆ. ಹೇಗೆ ದಕ್ಷನು ಶಿವದ್ವೇಷದಿಂದ ತಾನು ಮಾಡಿದ ಯಜ್ಞದಲ್ಲಿ ಶಿವನನ್ನು ಆಹ್ವಾನಿಸದೆ ಇದ್ದ ತಪ್ಪಿಗಾಗಿ ತನ್ನ ತಲೆಯನ್ನೇ ಒಪ್ಪಿಸಬೇಕಾಯಿತೋ ಹಾಗೆ ಪಶುಪತಿಯಾದ ರುದ್ರನನ್ನು ಹೋಮದಲ್ಲಿ ಕರೆಯದೆ ಮರೆತುಬಿಡುವ ಯಜಮಾನನಿಗೆ ದಕ್ಷನಿಗೆ ಆದಂತೆಯೇ ಶಿಕ್ಷೆಯಾಗುವದು. ಆದ್ದರಿಂದ ಹಾಗಾಗಬಾರದೆಂದು ಇಲ್ಲಿ ರುದ್ರನನ್ನೂ ಆಹ್ವಾನಿಸಿ ಆಹುತಿ ಸಮರ್ಪಣೆಯನ್ನು ಮಾಡಿದೆ. ಇಲ್ಲಿ ದೇವತೆಗಳಿಗೆ, ಪಿತೃಗಳಿಗೆ, ಭೂತಗಳಿಗೆ ಮನುಷ್ಯರಿಗೆ–ಈ ನಾಲ್ವರಿಗೂ ಹವಿರರ್ಪಣೆಯನ್ನು ಮಾಡುವಾಗ ಕ್ರಮವಾಗಿ ಸ್ವಾಹಾ–ಸ್ವಧಾ–ನಮಃ–ಹಂತ–ಎಂಬೀ ಅವ್ಯಯಗಳನ್ನು ಬಳಸಲಾಗಿದೆ. ಬೃಹದಾರಣ್ಯಕೋಪನಿಷತ್ತಿನಲ್ಲಿ ಒಂದು ಕಡೆ ವಾಕ್ಕನ್ನು ಹಸುವೆಂದು ಚಿಂತಿಸಬೇಕೆಂದೂ ಅದಕ್ಕೆ ನಾಲ್ಕು ಮೊಲೆಗಳೆಂದೂ ಸ್ವಾಹಾ–ಸ್ವಧಾ–ಹಂತ–ವಷಟ್ ಎಂಬಿವೇ ಅವುಗಳೆಂದೂ ಆ ಮೊಲೆಗಳಲ್ಲಿ ಸ್ವಾಹಾ, ವಷಟ್–ಗಳನ್ನು ದೇವತೆಗಳೂ ಹಂತ–ಎಂಬಿದನ್ನು ಮನುಷ್ಯರೂ ಸ್ವಧಾ ಎಂಬಿದನ್ನು ಪಿತೃಗಳೂ ಅವಲಂಬಿಸಿಕೊಂಡಿರುತ್ತಾರೆಂದೂ ತಿಳಿಸಿದೆ. ಆದ್ದರಿಂದ ದೇವತೆಗಳಿಗೆ ಹವಿರರ್ಪಣೆ ಮಾಡುವಾಗಲೆಲ್ಲ ಸ್ವಾಹಾ–ಎಂದೂ ಪಿತೃಗಳಿಗೆ ಸ್ವಧಾ–ಎಂದೂ ಮನುಷ್ಯರಿಗೆ ಹಂತ ಎಂದೂ ಉಚ್ಚರಿಸಿ ಬಲಿಪ್ರದಾನ ಮಾಡಬೇಕು. ಈ ಶಬ್ದಗಳನ್ನು ಉಚ್ಚರಿಸಿ

ಹವಿಸ್ಸನ್ನು ಕೊಡುವದರಿಂದ ಆಯಾ ವರ್ಗದವರಿಗೆ ತೃಪ್ತಿಯಾಗುತ್ತದೆ. ಅದನ್ನೇ ಇಲ್ಲಿ ಸ್ಫುಟವಾಗಿ ತಿಳಿಸಿದೆ. ನಮಃ ಎಂಬುದು ಭೂತಗಳ ಎಂದರೆ ಪ್ರಾಣಿಗಳಿಗೆ ಅರ್ಪಿಸುವ ಆಹುತಿಗೆ–ಎಂಬಿದು ಇಲ್ಲಿ ವಿಶೇಷವಾಗಿ ಹೇಳಲ್ಪಟ್ಟಿದೆ. ಇನ್ನು ಪ್ರಜಾಪತಿ ಎಂಬ ದೇವತೆಗೆ ಎರಡು ಬಾರಿ ಹವಿರರ್ಪಣೆ ಮಾಡಬೇಕು. ಅದನ್ನು ಪರಮೇಷ್ಠೀ ಎಂಬ ನಾಮಾಂತರದಿಂದ ನಿರ್ದೇಶಿಸಿ ತಿಳಿಸಲಾಗಿದೆ.

**ಓಂ ॥ ಯಥಾ ಕೂಪಃ ಶತಧಾರಃ ಸಹಸ್ರಧಾರೋ ಅಕ್ಷಿತಃ । ಏವಾ ಮೇ ಅಸ್ತು ಧಾನ್ಯಗ್ಂ ಸಹಸ್ರಧಾರಮಕ್ಷಿತಮ್ । ಧನಧಾನ್ಯೈ ಸ್ವಾಹಾ ॥**

ಈ ಮಂತ್ರದಲ್ಲಿ ಧಾನ್ಯಸಂಗ್ರಹವು ಅಕ್ಷಯವಾಗಲೆಂದು ಕೇಳಲಾಗಿದೆ. ಹೇಗೆ ಒಂದು ಬಾವಿಯು ಶತಸಹಸ್ರಧಾರೆಗಳುಳ್ಳದ್ದಾಗಿರುವದೋ–ಎಂದರೆ ನೂರಾರು ಅಥವಾ ಸಾವಿರಾರು ಕೊಡಗಳಷ್ಟು ನೀರನ್ನು ಮೇಲಕ್ಕೆ ಸೆಳೆದುಕೊಂಡು ನಾವು ಬಳಸಿದರೂ ಇನ್ನೂ ನೀರುಳ್ಳದ್ದಾಗಿರುವದೋ, ಹಾಗೆಯೇ ಭಗವಂತನ ಪ್ರಸಾದದಿಂದ ನನಗೆ ಧಾನ್ಯವು ಭಂಡಾರದಲ್ಲಿ ಅಕ್ಷಯವಾಗಿ ಬೆಳೆಯಲಿ–ಎಂದು ಪ್ರಾರ್ಥಿಸಿದೆ. ಏಕೆಂದರೆ ಧಾನ್ಯಗಳಿದ್ದರೆ ಅನ್ನದಾನವೂ ಅತಿಥಿಗಳಿಗೂ ಸಂನ್ಯಾಸಿಬ್ರಹ್ಮಚಾರಿಗಳಿಗೂ ಭಿಕ್ಷೆಯನ್ನು ನೀಡುವದೂ ಸಾಧ್ಯವಾಗುತ್ತದೆ. ವೈಶ್ವದೇವ ಮಾಡಲು ಅವಕಾಶವಾಗುತ್ತದೆ. ಆದ್ದರಿಂದ ಒಂದು ಸುಗ್ಗಿಯಿಂದ ಮತ್ತೊಂದು ಸುಗ್ಗಿಯವರೆಗೆ ಆಗುವಷ್ಟು ಧಾನ್ಯದ ಭಂಡಾರಗಳನ್ನು ತುಂಬಿರಲಾಗಿ ಅಂಥ ಗೃಹದಲ್ಲಿ ವೈಶ್ವದೇವವು ಅಡೆತಡೆಯಿಲ್ಲದೆ ನಡೆಯುತ್ತದೆ. ಬತ್ತಿಹೋಗದ ತುಂಬಿದ ಬಾವಿಯಂತೆ ನಮ್ಮ ಧಾನ್ಯಭಂಡಾರವೂ ಖಾಲಿಯಾಗದೆ ಇರಲಿ–ಅಕ್ಷಯವಾಗಲಿ–ಎಂದರ್ಥ. ಇನ್ನು ಧನವನ್ನು ಕೊಡುವ ಒಂದು ದೇವತೆ ಯುಂಟು. ಆಕೆಯನ್ನು ಧನದಾನೀ–ಎನ್ನುವರು. ಆಕೆಗೂ ಹವಿರರ್ಪಣೆ ಮಾಡುವೆನು–ಎಂದರ್ಥ .

**ಓಂ ॥ ಯೇ ಭೂತಾಃ ಪ್ರಚರನ್ತಿ ದಿವಾ ನಕ್ತಂ ಬಲಿಮಿಚ್ಛನ್ತೋ ವಿತುದಸ್ಯ ಪ್ರೇಷ್ಯಾಃ । ತೇಭ್ಯೋ ಬಲಿಂ ಪುಷ್ಟಿಕಾಮೋ ಹರಾಮಿ ಮಯಿ ಪುಷ್ಟಿಂ ಪುಷ್ಟಿಪತಿರ್ದಧಾತು ಸ್ವಾಹಾ ।**

ಈ ಮಂತ್ರದಲ್ಲಿ ಭೂತಬಲಿಯನ್ನು ಕುರಿತು ಪ್ರಸ್ತಾಪಿಸಿದೆ. ವಿತುದ–ಎಂದರೆ ವಿಶೇಷವಾಗಿ ಪ್ರಲಯಕಾಲದಲ್ಲಿ ಪ್ರಾಣಿಗಳನ್ನು ಹಿಂಸೆಗೊಳಿಸುವ ಶ್ಮಶಾನವಾಸಿಯಾದ ರುದ್ರನು–ಎಂದರ್ಥ. ಈತನಿಂದ ಪ್ರೇಷ್ಯರಾದ–ಕಳುಹಿಸಲ್ಪಟ್ಟಂಥ ಹಾಗೂ ಹಗಲೂ

ರಾತ್ರಿಯೂ ಬಲಿಯನ್ನು ಬಯಸುವವರಾದ ಯಾವ ಭೂತಗಣಗಳು ಸಂಚರಿಸುತ್ತಿರುವರೋ ಅಂಥವರಿಗೆಲ್ಲನಾನು ಬಲಿಯನ್ನು ಈಗ ಸಮರ್ಪಿಸುವೆನು. ನಾನು ಪುಷ್ಟಿಯನ್ನು ಎಂದರೆ ಶರೀರಪೋಷಣೆಯನ್ನೂ ಕುಟುಂಬ ಧನಧಾನ್ಯಕೋಶಾದಿಗಳ ಪೋಷಣೆಯನ್ನೂ ಬಯಸುವೆನು. ಅಂಥ ಪುಷ್ಟಿಯನ್ನು ಪುಷ್ಟಿಪತಿಯೆನಿಸಿದ ಪರಮಾತ್ಮನು ನನಗೆ ಉಂಟುಮಾಡಲಿ–ಎಂದು ಪ್ರಾರ್ಥಿಸುತ್ತಾ ಅನ್ನವನ್ನು ಭೂಮಿಯಲ್ಲಿ ಇಟ್ಟು ವೈಶ್ವ ದೇವಕರ್ಮವನ್ನು ಪೂರ್ಣಗೊಳಿಸಬೇಕು. ಹೀಗೆ ಗೃಹಸ್ಥನು ದೇವತೆಗಳಿಂದಾರಂಭಿಸಿ ಒಂದು ಇರುವೆಯವರೆಗಿನ ಪ್ರಾಣಿಗಳೆಲ್ಲಕ್ಕೂ ಅನ್ನದಾತನಾಗಿರುವನು. ಮನುಸ್ಮೃತಿಯಲ್ಲಿ ಗೃಹಸ್ಥನ ಧರ್ಮಗಳನ್ನು ವಿವರವಾಗಿ ತಿಳಿಸಿ ಅವನು ಆಶ್ರಮಿಗಳಲ್ಲಿ ಜ್ಯೇಷ್ಠನೆಂದು ಹೊಗಳಿದೆ. ಶ್ರೌತಸ್ಮಾರ್ತಕರ್ಮಗಳನ್ನು ಯಥಾವಿಧಿಯಾಗಿ ನೆರವೇರಿಸುವ ಗೃಹಸ್ಥನು ಜ್ಯೇಷ್ಠನೂ ಶ್ರೇಷ್ಠನೂ ಆಗುವನು. ಗೃಹಸ್ಥಧರ್ಮವು ಬಹು ಹೆಚ್ಚಿನದಾದ್ದರಿಂದಲೇ ಹಿಂದೂಮತದ ದೇವರುಗಳೆಲ್ಲ ಹೆಚ್ಚಾಗಿ ಗೃಹಸ್ಥರೇ ಆಗಿದ್ದಾರೆ. ಸೀತಾರಾಮ, ರಾಧಾಕೃಷ್ಣ, ಲಕ್ಷ್ಮೀನಾರಾಯಣ, ಗೌರೀಶಂಕರ–ಇತ್ಯಾದಿ ಹೆಸರುಗಳೆಲ್ಲಾ ಗೃಹಸ್ಥದೇವರುಗಳನ್ನೇ ತಿಳಿಸುತ್ತವೆ. ಎಲ್ಲಾ ದೇವಾಲಯಗಳಲ್ಲಿಯೂ ಅಮ್ಮನವರ ಹೆಸರುಗಳಲ್ಲಿಯೂ 'ಅಮ್ಮನವರ ಸನ್ನಿಧಿ' ಇದ್ದೇ ಇರುತ್ತದೆ. ಹೀಗೆ ಗೃಹಸ್ಥಾಶ್ರಮವು ಅದರ ಅಗ್ನಿಹೋತ್ರವೈಶ್ವದೇವಾದಿಕರ್ಮಗಳ ನಿಮಿತ್ತ ಸ್ತುತ್ಯವಾಗಿದೆ. ಇಲ್ಲಿಗೆ ವೈಶ್ವದೇವಮಂತ್ರಗಳು ಪೂರೈಸಿವೆ.

## ಪಾಪನಿವಾರಕಜಪಮಂತ್ರ

**ಓಂ ॥ ಓಂ ತದ್ಬ್ರಹ್ಮ । ಓಂ ತದ್ವಾಯುಃ । ಓಂ ತದಾತ್ಮಾ । ಓಂ ತತ್ಸತ್ಯಮ್ । ಓಂ ತತ್ಸರ್ವಮ್ । ಓಂ ತತ್ಪುರೋರ್ನಮಃ । ಅಂತಶ್ಚರತಿ ಭೂತೇಷು ಗುಹಾಯಾಂ ವಿಶ್ವಮೂರ್ತಿಷು । ತ್ವಂ ಯಜ್ಞಸ್ತ್ವಂ ವಷಟ್ಕಾರಸ್ತ್ವಮಿಂದ್ರಸ್ತ್ವಗ್ಂ ರುದ್ರಸ್ತ್ವಂ ವಿಷ್ಣುಸ್ತ್ವಂ ಬ್ರಹ್ಮತ್ವಂ ಪ್ರಜಾಪತಿಃ । ತ್ವಂ ತದಾಪ ಆಪೋ ಜ್ಯೋತೀರಸೋಽಮೃತಂ ಬ್ರಹ್ಮ ಭೂರ್ಭುವಃ ಸುವರೋಮ್ ॥**

ಈ ಮಂತ್ರವು ಪರಬ್ರಹ್ಮಸ್ತುತಿಪರವಾಗಿದೆ. ಬಹುದೊಡ್ಡದಾಗಿರುವೆಲ್ಲಕ್ಕೂ ಅತಿ ದೊಡ್ಡದೆನಿಸಿದ ವಸ್ತುವೇ ಬ್ರಹ್ಮವು. ಅದು ವೇದಾಂತವೇದ್ಯವಾದ ಓಂ ಎಂಬಿದೇ ಆಗಿದೆ. ಓಂ ಎಂಬುದು ಪರಬ್ರಹ್ಮದ ನಾಮವು. ಮತ್ತು ಆ ಓಂ ಎಂಬಿದೇ ವಾಯುವು. ಎಂದರೆ

ಪ್ರಾಣನು. ಅಥವಾ ಸೂತ್ರಾತ್ಮನು ಎಂದರ್ಥ. ಹಾಗೂ ಅದೇ ಆತ್ಮನು–ಎಂದರೆ ಜೀವಾತ್ಮನು. ಅದೇ ಸತ್ಯವು. ತ್ರಿಕಾಲಾಬಾಧಿತವಾದದ್ದು. ಹೀಗೆ ಚರಾಚರತ್ಮಕ ವಾದದ್ದೆಲ್ಲವೂ ಓಂ ಎಂಬಿದೇ ಆಗಿದೆ. ಅದೇ ಓಂ ಎಂಬಿದು **ಪುರೋಃ**–ಎಂದರೆ ವಿಸ್ತೀರ್ಣವಾದ ಬ್ರಹ್ಮಾಂಡಕ್ಕೆಲ್ಲ ಕಾರಣವು. ಅದಕ್ಕೆ ನಮಸ್ಕಾರಗಳು–ಇಂಥ ಬ್ರಹ್ಮವು ಎಲ್ಲಾ ಭೂತಗಳ ಒಳಗೂ ಇದ್ದುಕೊಂಡು ಪ್ರಾಣಿಗಳ ವ್ಯಾಪಾರಕ್ಕೆ ಕಾರಣನಾಗಿರುವದು. ಎಲ್ಲಾ ಮೂರ್ತಿಗಳಲ್ಲಿಯೂ ಎಂದರೆ ಶರೀರಗಳಲ್ಲಿಯೂ ವ್ಯಾಪಿಸಿರುವದು–ಎಂದರ್ಥ. ಈ ರೀತಿಯಾಗಿ ಪರೋಕ್ಷವಾಗಿ ಬ್ರಹ್ಮವನ್ನು ಈವರೆಗೆ ಸ್ತುತಿಮಾಡಲಾಗಿದೆ.

ಈಗ ಪ್ರತ್ಯಕ್ಷವಾಗಿ–ಎಂದರೆ ನೇರಾಗಿ ಸ್ತುತಿಸಲಾಗುವದು. ಎಲೈ ಪರಮಾತ್ಮನೆ, ನೀನು ಯಜ್ಞನು–ಎಂದರೆ ವಿವಿಧವಾದ ವೈದಿಕಕರ್ಮಗಳ ಸ್ವರೂಪನಾಗಿರುವೆ. ನೀನೇ ದೇವತೆಗಳಿಗೆ ಹವಿರರ್ಪಣಕಾಲಕ್ಕೆ ಹೇಳುವ '**ವಷಟ್**' ಎಂಬ ಶಬ್ದರೂಪವಾಗಿರುವೆ. ಇಂದ್ರನೂ ರುದ್ರನೂ ವಿಷ್ಣುವೂ ನೀನೇ ಆಗಿರುವೆ. ಬ್ರಹ್ಮನೂ ಪ್ರಜಾಪತಿಯೂ ನೀನೇ ಆಗಿರುವೆ. ಹಾಗೆಯೇ ನೀನೇ ಅದು–ಎಂದರೆ ಬ್ರಹ್ಮಾಂಡವು; **ಆಪಃ** ಎಂದರೆ ಜಲವೆಲ್ಲವೂ **ಜ್ಯೋತಿಃ**–ಸೂರ್ಯಾದಿಗಳೂ–**ರಸಃ** ಎಂದರೆ ಮಧುರಾದಿಷಡ್ರಸಗಳೂ–**ಅಮೃತವೂ** ಎಂದರೆ ದೇವಲೋಕದ ಸುಧೆಯೂ ಬ್ರಹ್ಮವೆಂದರೆ ವೇದಶಾಸ್ತ್ರಗಳೂ ಹೀಗೆ ಎಲ್ಲವೂ ನೀನೇ ಆಗಿರುವೆ. ಇನ್ನು ಭೂಃ, ಭೂವಃ, ಸುವಃ–ಎಂಬ ಲೋಕಗಳೂ ನೀನೇ, ಒಟ್ಟಿನಲ್ಲಿ ಓಂ ಶಬ್ದವಾಚ್ಯವಾದ ಬ್ರಹ್ಮವೂ ನೀನೇ–ಎಂದು ಸ್ತುತಿಸಿದೆ.

## ಪ್ರಾಣಾಹುತಿಮಂತ್ರಗಳು

ಓಂ ॥ ಶ್ರದ್ಧಾಯಾಂ ಪ್ರಾಣೇ ನಿವಿಷ್ಟೋಽಮೃತಂ ಜುಹೋಮಿ ।
ಶ್ರದ್ಧಾಯಾಮಪಾನೇ ನಿವಿಷ್ಟೋಽಮೃತಂ ಜುಹೋಮಿ ।
ಶ್ರದ್ಧಾಯಾಂವ್ಯಾನೇ ನಿವಿಷ್ಟೋಽಮೃತಂ ಜುಹೋಮಿ ।
ಶ್ರದ್ಧಾಯಾಮುದಾನೇ ನಿವಿಷ್ಟೋಽಮೃತಂ ಜುಹೋಮಿ ।
ಶ್ರದ್ಧಾಯಾಗ್ಂ ಸಮಾನೇ ನಿವಿಷ್ಟೋಽಮೃತಂ ಜುಹೋಮಿ ।
ಬ್ರಹ್ಮಣಿ ಮ ಆತ್ಮಾಮೃತತ್ವಾಯ । ಅಮೃತೋಪಸ್ತರಣಮಸಿ ॥

ಈಗ ಪ್ರಾಣಾಹುತಿಮಂತ್ರಗಳನ್ನು ತಿಳಿಸಲಾಗುವದು. ವೈಶ್ವದೇವಾನಂತರ ಅತಿಥಿಗಳ ಸತ್ಕಾರವೂ ಪೂರೈಸಿದ ಮೇಲೆ ಗೃಹಸ್ಥನು ಭೋಜನ ಮಾಡಬೇಕು.

ಅಲ್ಲಿಯವರೆಗೂ ಉಪವಾಸದಿಂದಿರಬೇಕು; ಎಂದರೆ ಸೂರ್ಯೋದಯಾದಿ ಭೋಜನ ಕಾಲದವರೆಗೆ ಏನೊಂದೂ ಆಹಾರನ್ನಾಗಲಿ, ಪಾನೀಯವನ್ನಾಗಲಿ ಸೇವಿಸಿರಬಾರದು. ಇಂಥವನು ಭೋಜನ ಮಾಡುವ ಮುಂಚೆ ಈ ಪ್ರಾಣಾಹುತಿಗಳನ್ನು ಕೊಡಬೇಕು. ಇದರಿಂದ ಸಕಲಜೀವರುಗಳೂ ತೃಪ್ತರಾಗುವರೆಂದೂ ಪ್ರಾಣೋಪಾಸಕನಾದ ಇಂಥವನು ಭೋಜನಮಾಡುವದನ್ನೇ ಹಸಿದ ಎಲ್ಲಾ ಪ್ರಾಣಿಗಳೂ ಕಾದುಕೊಂಡಿರುವ ವೆಂದೂ ಇವನು ಊಟಮಾಡಿದ್ದೇ ಆದರೆ ಉಳಿದವರಿಗೂ ತೃಪ್ತಿಯಾಗುವದೆಂದೂ ಛಾಂದೋಗ್ಯೋಪನಿಷತ್ತಿನಲ್ಲಿ ತಿಳಿಸಿದೆ. ಇದನ್ನೇ ಇತಿಹಾಸದಲ್ಲಿ ದೂರ್ವಾಸಾತಿಥ್ಯದ ಕಥೆಯಲ್ಲಿ ವಿವರಿಸಲಾಗಿದೆ. ಕೃಷ್ಣಭಗವಂತನು ಪ್ರಾಶನ ಮಾಡಿದ ಅತ್ಯಲ್ಪವಾದ ಆಹಾರವೇ ದೂರ್ವಾಸರ ಶಿಷ್ಯರುಗಳಿಗೆಲ್ಲತೃಪ್ತಿಯನ್ನು ನೀಡಿತು– ಎಂದು ಅಲ್ಲಿ ತಿಳಿಸಿದೆ. ಹೀಗೆ **ಪ್ರಾಣಾಗ್ನಿಹೋತ್ರ**ವೆನಿಸಿರುವ ಈ ಕರ್ಮವು ಊಟಕ್ಕೆ ಮುಂಚೆ ಮಾಡತಕ್ಕದ್ದಾಗಿದೆ. ಆಗ ಅಭಿಮಂತ್ರಿಸುವ ಮಂತ್ರಗಳಿವು. ಇವುಗಳ ಅಭಿಪ್ರಾಯವು ಹೀಗಿದೆ: ವೈದಿಕಕರ್ಮಗಳಲ್ಲಿರುವ ವಿಶ್ವಾಸಾತಿಶಯವೇ ಶ್ರದ್ಧೆಯೆನಿಸುವದು. ಅದರಿಂದ ಕೂಡಿದವನಾದ ನಾನು ನನ್ನ ಹೃದಯಾಂತರ್ಗತವಾದ ಪ್ರಾಣವಾಯುವಿನಲ್ಲಿ ನಿಷ್ಠೆಯುಳ್ಳವನಾಗಿ ಈ **ಅಮೃತ (ಯಜ್ಞಶಿಷ್ಟವಾದ ಅನ್ನ)** ವನ್ನು ಹೋಮ ಮಾಡುವೆನು– ಎಂದರ್ಥ . ಪ್ರಾಣಿಗಳ ಹೊಟ್ಟೆಯಲ್ಲಿ **ವೈಶ್ವಾನರ**ನೆಂಬ ಹೆಸರಿನ ಅಗ್ನಿಯಿರುವನು. ಇವನನ್ನು **ಜಾಠರಾಗ್ನಿ**ಯೆಂದೇ ಕರೆಯುವರು. ತಿಂದ ಆಹಾರಗಳನ್ನು ಜೀರ್ಣ ಗೊಳಿಸುವವನೇ ಇವನು. ಭಗವಂತನೇ ತಾನೇ ಜಠರಾಗ್ನಿ ರೂಪದಿಂದ ಪ್ರಾಣಿಗಳಲ್ಲಿರುವೆನು– ಎಂದು ಗೀತೆಯ 15ನೆಯ ಅಧ್ಯಾಯದಲ್ಲಿ ತಿಳಿಸಿರುತ್ತಾನೆ. ಆದ್ದರಿಂದಲೋ, ಏನೊ, ಬಲ್ಲವರು ಭೋಜನ ಸಮಯಕ್ಕೆ ಗೀತೆಯ 15ನೆಯ ಅಧ್ಯಾಯವನ್ನೆಲ್ಲಪಠನ ಮಾಡುತ್ತಾರೆ. ಇರಲಿ. ಈ ಜಾಠರಾಗ್ನಿಗೆ ಅರ್ಪಿಸುವ ಆಹಾರವನ್ನು **ಆಹುತಿ**ಯೆಂದೇ ಕರೆದಿದೆ. ಇದರಿಂದ ತಿಳಿದು ಬರುವುದೇನೆಂದರೆ: ಹೇಗೆ ಅಗ್ನಿಯಲ್ಲಿ ಅರ್ಪಿಸುವಾಗ ಪವಿತ್ರವಾದ ಹವಿಸ್ಸನ್ನೇ ಹಾಕುವೆವೋ ಹಾಗೆಯೇ ನಾವು ತಿನ್ನುವಾಗಲೂ ಪರಿಶುದ್ಧವಾದ ಸಾತ್ತ್ವಿಕಾಹಾರವನ್ನೇ ತಿನ್ನಬೇಕು– ಎಂದಾಗುವದು. ಇದರಿಂದ ಭಕ್ಷ್ಯಾಭಕ್ಷ್ಯವಿವೇಕವು ಸಿದ್ಧವಾಗುತ್ತದೆ. ಮತ್ತು ಪದೇಪದೇ ಅನವಶ್ಯಕವಾಗಿ ತಿಂಡಿತೀರ್ಥಗಳನ್ನು ತೆಗೆದುಕೊಳ್ಳುವ ದುರಭ್ಯಾಸವೂ ತಪ್ಪುತ್ತದೆ. ಆರೋಗ್ಯಕ್ಕೂ ಅನುಕೂಲವಾಗುತ್ತದೆ. ಹೀಗೆ ಅನ್ನವನ್ನು ಅಭಿಮಂತ್ರಿಸಿ ಸಿದ್ಧಗೊಳಿಸಬೇಕು. ಐದು ಪ್ರಾಣಗಳಿಗೆ ಆಹುತಿಯನ್ನು ಅರ್ಪಿಸಬೇಕಾಗಿರುವದರಿಂದ ಐದು ಮಂತ್ರಗಳಿಂದ ಹವಿಸ್ಸನ್ನು ಸಿದ್ಧಗೊಳಿಸಬೇಕು. ಆಯಾ ಅಭಿಮಂತ್ರಣಕ್ಕೆ ಆಯಾ ವಾಯುದೇವತೆಯ ಹೆಸರನ್ನು ಉಚ್ಚರಿಸಬೇಕು. ಅವೆಲ್ಲವನ್ನೂ ಮಂತ್ರದಲ್ಲಿಯೇ ತಿಳಿಸಿದೆ. ಈ ಐದು

ಆಹುತಿಗಳನ್ನು ಪ್ರಾಣಾದಿದೇವತೆಗಳಿಗೆ ನೀಡುವ ಉದ್ದೇಶವೇನೆಂದರೆ: 'ಬ್ರಹ್ಮಣಿ ಮ ......' ಎಂಬ ವಾಕ್ಯದಲ್ಲಿ ಅದನ್ನು ಸ್ಫುಟಗೊಳಿಸಿದೆ. ಅಮೃತತ್ವಕ್ಕಾಗಿ ಎಂದರೆ ಮೋಕ್ಷಕ್ಕಾಗಿ ಆತ್ಮನು–ಜೀವನು, ಬ್ರಹ್ಮಣಿ–ಪರಬ್ರಹ್ಮದಲ್ಲಿ ಒಂದಾಗಲು ಇಚ್ಛಿಸುವನು–ಎಂದರ್ಥ . ಹೀಗೆ ಪ್ರಾರ್ಥಿಸಿ ಬಲಗೈನ ಅಂಗೈಯಲ್ಲಿ ನೀರನ್ನು ಹಿಡಿದುಕೊಂಡು 'ಅಮೃತೋಪಸ್ತರಣಮಸಿ' ಎಂದು ಹೇಳುತ್ತಾ ಕುಡಿಯಬೇಕು. ಇದಕ್ಕೆ ಆಪೋಶನವೆನ್ನುವರು. ಇದನ್ನು ಸ್ವೀಕರಿಸುವ ಉದ್ದೇಶವೇನೆಂದರೆ ಪ್ರಾಣದೇವತೆಗೂ ನೀರಿಗೂ ಯಾವಾಗಲೂ ನಿಕಟ ಸಂಬಂಧವಿದೆ. ಆದ್ದರಿಂದ ಏನನ್ನಾದರೂ ತಿನ್ನುವ ಮುಂಚೆಯೂ ತಿಂದ ಮೇಲೂ ನೀರು ಕುಡಿಯಬೇಕು. ಬರಿಯ ಬಾಯಿಗೆ ಆಹಾರವನ್ನು ಹಾಕಿದಾಗ ಕೆಲವು ವೇಳೆ ಕೆಮ್ಮು ಬರಲಿದೆ. ಇದನ್ನು ನೆತ್ತಿಹತ್ತುವದು–ಎಂದು ಕರೆಯುತ್ತಾರೆ. ಹಾಗೆ ಆದಾಗ ಕೂಡಲೆ ನೀರು ಕುಡಿದರೆ ಸರಿಹೋಗುತ್ತದೆ. ಇದನ್ನೇ ಶಾಸ್ತ್ರೀಯವಾಗಿ ಆಚರಿಸುವಾಗ ಮೊದಲು ಕುಡಿಯುವ ನೀರನ್ನು ಪೂರ್ವಾಪೋಶನವೆನ್ನುವರು. ಇದು ಪ್ರಾಣದೇವತೆಗೆ ಉಪಸ್ತರಣವಾಗುತ್ತದೆ–ಎಂದರೆ ಹಾಸಿಗೆಯಂತೆ ಹರಡಲ್ಪಟ್ಟ ವಸ್ತ್ರವಾಗುತ್ತದೆ–ಎಂದರ್ಥ. ಜಲವನ್ನು ಅಮೃತವೆಂದೇ ಕರೆದಿರುವದರಿಂದ ಅಮೃತದ ವಸ್ತ್ರವನ್ನು ಪ್ರಾಣನಿಗೆ ಸಮರ್ಪಿಸಿದಂತೆ ಆಯಿತು. ಹೀಗೆ ಜಲವನ್ನು ವಸ್ತ್ರರೂಪವಾಗಿ ಭಾವಿಸಿ ಪ್ರಾಣನಿಗೆ ಹೊದಿಸಬೇಕೆಂದು ವಾಜಸನೇಯೋಪನಿಷತ್ತಿನಲ್ಲಿಯೂ ತಿಳಿಸಿದೆ. ಆದ್ದರಿಂದ ಆಚಮನಮಾಡಿ ಆಪೋಶನವನ್ನು ಸ್ವೀಕರಿಸಿಯೇ ಭೋಜನವನ್ನಾರಂಭಿಸ ಬೇಕು–ಎಂದು ಶಾಸ್ತ್ರವು ತಿಳಿಸುತ್ತದೆ.

ಓಂ ॥ ಶ್ರದ್ಧಾಯಾಂ ಪ್ರಾಣೇ ನಿವಿಷ್ಟೋಽಮೃತಂ ಜುಹೋಮಿ ।
ಶಿವೋ ಮಾ ವಿಶಾಪ್ರದಾಹಾಯ । ಪ್ರಾಣಾಯ ಸ್ವಾಹಾ ।
ಶ್ರದ್ಧಾಯಾಮಪಾನೇ ನಿವಿಷ್ಟೋಽಮೃತಂ ಜುಹೋಮಿ ।
ಶಿವೋ ಮಾ ವಿಶಾಪ್ರದಾಹಾಯ । ಅಪಾನಾಯ ಸ್ವಾಹಾ ।
ಶ್ರದ್ಧಾಯಾಂ ವ್ಯಾನೇ ನಿವಿಷ್ಟೋಽಮೃತಂ ಜುಹೋಮಿ ।
ಶಿವೋ ಮಾ ವಿಶಾಪ್ರದಾಹಾಯ । ವ್ಯಾನಾಯ ಸ್ವಾಹಾ ।
ಶ್ರದ್ಧಾಯಾಮುದಾನೇ ನಿವಿಷ್ಟೋಽಮೃತಂ ಜುಹೋಮಿ ।
ಶಿವೋ ಮಾ ವಿಶಾಪ್ರದಾಹಾಯ । ಉದಾನಾಯ ಸ್ವಾಹಾ ।
ಶ್ರದ್ಧಾಯಾಗ್ಂ ಸಮಾನೇ ನಿವಿಷ್ಟೋಽಮೃತಂ ಜುಹೋಮಿ ।

**ಶಿವೋ ಮಾ ವಿಶಾಪ್ರದಾಹಾಯ । ಸಮಾನಾಯ ಸ್ವಾಹಾ ।**
**ಬ್ರಹ್ಮಣಿ ಮ ಆತ್ಮಾಮೃತತ್ವಾಯ ಅಮೃತಾಪಿಧಾನಮಸಿ ॥**

ಹಿಂದಿನ ಮಂತ್ರಗಳಿಂದ ಅಭಿಮಂತ್ರಿಸಿದ ಅನ್ನವನ್ನು ಈಗ ಜಠರಾಗ್ನಿಯಲ್ಲಿ ಪ್ರಾಣಾದಿದೇವತೆಗಳ ತೃಪ್ತಿಗಾಗಿ ಹೋಮಮಾಡಲಾಗುವದು. ಭೋಜನವೂ ಒಂದು ಹೋಮವೇ ಆಗಿದೆ. ಇಲ್ಲಿ '**ಶಿವೋ ಮಾ ......**' ಎಂಬ ವಾಕ್ಯವು ಐದು ಬಾರಿ ಪುನರುಕ್ತಿಯಾಗಿ ಬಂದಿದೆ. ಉಳಿದ ವಾಕ್ಯಗಳೆಲ್ಲ ಹಿಂದಿನ ಮಂತ್ರದವುಗಳೇ ಆಗಿವೆ. ಯಾವ ಅನ್ನವನ್ನು ಹೋಮಮಾಡುವೆವೋ (ತಿನ್ನುವೆವೋ) ಅದನ್ನು ಕುರಿತು ಹೀಗೆಂದಿದೆ: ''ಎಲೈ ದ್ರವ್ಯವಿಶೇಷವೆ, ನೀನು ಶಿವವಾಗಿ ಎಂದರೆ ಶಾಂತನಾಗಿ ನನ್ನನ್ನು ಪ್ರವೇಶಿಸುವವನಾಗು. ಏಕೆಂದರೆ '**ಅಪ್ರದಾಹಾಯ**' ಹಸಿವಿನಿಂದಾದ ಉರಿಯನ್ನು ನಾಶಗೊಳಿಸಿ ಅದು ಸುಡದಂತೆ ಮಾಡುವದಕ್ಕಾಗಿ ನೀನು ಪ್ರವೇಶಿಸು''–ಎಂದರ್ಥ. ಹೀಗೆ ಐದು ಬಾರಿ ಆಹುತಿಗಳನ್ನು ಅರ್ಪಿಸಿದ ಅನಂತರ ಉಳಿದ ಪದಾರ್ಥಗಳನ್ನು ಹೊಟ್ಟೆತುಂಬ ಊಟಮಾಡಬೇಕು. **ಊಟಮಾಡುವಾಗ ಮಾತನಾಡಬಾರದು.** ದೇವರ ನಾಮಗಳನ್ನು ಉಚ್ಚರಿಸಬಹುದು. ಕೊನೆಯಲ್ಲಿ '**ಅಮೃತಾಪಿಧಾನಮಸಿ**' ಎಂದು ಉತ್ತರಾಪೋಶನವನ್ನು ತೆಗೆದುಕೊಂಡು ಏಳಬೇಕು. 'ಎಲೈ ಜಲವೆ, ನೀನು ಅಮೃತವೆಂಬ ಮುಚ್ಚುಬಟ್ಟೆಯಾಗಿರುವೆ'–ಎಂದರ್ಥ . ಪ್ರಾಣದೇವತೆಯನ್ನು ಹೀಗೆ ಮೇಲೂ ಕೆಳಗೂ ಹೊದಿಸಬೇಕು. ಇದೇ ಆಪೋಶನದ ಮಹತ್ತ್ವವು. ಇಲ್ಲವಾದರೆ ಪ್ರಾಣನಿಗೆ ನಗ್ನತ್ವ (ಬರಿಮೈಯಿನ ಸ್ಥಿತಿ) ಯುಂಟಾಗುವದು. ಅದು ನಿಷಿದ್ಧವು–ಎಂದು ಶಾಸ್ತ್ರದಲ್ಲಿ ತಿಳಿಸಿದೆ. ಅಂತೂ ಲೌಕಿಕಕರ್ಮವಾದ ಭೋಜನವನ್ನು ಕೂಡಾ ಶಾಸ್ತ್ರೀಯ ವಾಗಿ ಮಾರ್ಪಡಿಸಿಕೊಂಡು ಆತ್ಮಸಂಸ್ಕಾರಮಾಡಿಕೊಳ್ಳಬೇಕು– ಎಂದಭಿಪ್ರಾಯ.

ಓಂ ॥ **ಶ್ರದ್ಧಾಯಾಂ ಪ್ರಾಣೇ ನಿವಿಶ್ಯಾಮೃತಗ್ಂ ಹುತಮ್ ।**
**ಪ್ರಾಣಮನ್ನೇನಾಪ್ಯಾಯಸ್ವ । ಶ್ರದ್ಧಾಯಾಮಪಾನೇ ನಿವಿಶ್ಯಾ**
**ಮೃತಗ್ಂ ಹುತಮ್ । ಅಪಾನಮನ್ನೇನಾಪ್ಯಾಯಸ್ವ ।**
**ಶ್ರದ್ಧಾಯಾಂ ವ್ಯಾನೇ ನಿವಿಶ್ಯಾಮೃತಗ್ಂ ಹುತಮ್ ।**
**ವ್ಯಾನಮನ್ನೇನಾಪ್ಯಾಯಸ್ವ । ಶ್ರದ್ಧಾಯಾಮುದಾನೇ ನಿವಿಶ್ಯಾ**
**ಮೃತಗ್ಂ ಹುತಮ್ । ಉದಾನಮನ್ನೇನಾಪ್ಯಾಯಸ್ವ ।**
**ಶ್ರದ್ಧಾಯಾಗ್ಂ ಸಮಾನೇ ನಿವಿಶ್ಯಾಮೃತಗ್ಂ ಹುತಮ್ ।**
**ಸಮಾನಮನ್ನೇನಾಪ್ಯಾಯಸ್ವ ॥**

ಈ ಮಂತ್ರಗಳನ್ನು ಊಟಮಾಡಿದ ಮೇಲೆ ಹೇಳಬೇಕು. ಉತ್ತರಾಪೋಶನ ವನ್ನು ಸ್ವೀಕರಿಸಿದ ಅನಂತರ ಹೇಳುವ ಈ ಮಂತ್ರಗಳು ಉಂಡ ಅನ್ನವನ್ನು ಅಭಿಮಂತ್ರಣಮಾಡತಕ್ಕವಾಗಿವೆ. ಊಟವು ಪ್ರಾಣಸಂಚಾರಕ್ಕಾಗಲಿ, ಹೊಟ್ಟೆಗಾಗಲಿ ಪೀಡೆಯಾಗುವಂತಿರಬಾರದು. ಮತ್ತು ಸೇವಿಸಿದ ಆಹಾರವು ನಮ್ಮ ಶರೀರದೊಡನೆ ಸಾತ್ಮ್ಯವನ್ನು ಹೊಂದಿ ಕಾಲಕಾಲಕ್ಕೆ ಅರಗಿ ಬಲಪುಷ್ಟಿಗಳನ್ನು ಉಂಟುಮಾಡಬೇಕು. ಅದಕ್ಕಾಗಿ ಈ ಅಭಿಮಂತ್ರಣವನ್ನು ಹೇಳಿದೆ. ಹಿಂದಿನಂತೆಯೇ ಶ್ರದ್ಧಾ ಎಂದರೆ ವೈದಿಕಕರ್ಮಗಳಲ್ಲಿರುವ ವಿಶ್ವಾಸವು. ಅಂಥ ಶ್ರದ್ಧೆಯನ್ನವಲಂಬಿಸಿ ಪ್ರಾಣವಾಯುವಿನಲ್ಲಿ ಪೂಜ್ಯಬುದ್ಧಿಯನ್ನಿರಿಸಿ ಅಮೃತವೆಂಬ ಅನ್ನವನ್ನು ಹೋಮಮಾಡಿರುತ್ತೇನೆ. ಆ ಅನ್ನದಿಂದ ಪ್ರಾಣದೇವತೆಯೆ, ನೀನು ನನ್ನ ಪ್ರಾಣವನ್ನು ಸಂತೋಷಗೊಳಿಸು, ತೃಪ್ತಿಗೊಳಿಸು– ಎಂದರ್ಥ . ಇದೇ ರೀತಿಯಾಗಿ ಅಪಾನಾದಿದೇಹಾಂತರ್ಗತವಾಯು ಗಳನ್ನು ಆಯಾ ಅಭಿಮಾನಿದೇವತೆಗಳು ತೃಪ್ತಿಗೊಳಿಸಲಿ–ಎಂದರ್ಥ . ಇಲ್ಲಿಗೆ ಭೋಜನಕರ್ಮವು ಮುಗಿದಿದೆ.

ಓಂ ॥ ಅಂಗುಷ್ಠಮಾತ್ರಃ ಪುರುಷೋಽಙ್ಗುಷ್ಠಂ ಚ ಸಮಾಶ್ರಿತಃ ।
ಈಶಃ ಸರ್ವಸ್ಯ ಜಗತಃ ಪ್ರಭುಃ ಪ್ರೀಣಾತಿ ವಿಶ್ವಭುಕ್ ॥

ಭೋಜನಾನಂತರ ಹಸಿವೇ ಮುಂತಾದ ಪೀಡೆಗಳು ತೊಲಗಿರುವದರಿಂದ ಮನಸ್ಸು ಶಾಂತವಾಗುತ್ತದೆ. ಜೀವನದಲ್ಲಿ ನಾವು ಹೆಣಗುವದೆಲ್ಲ ಹೊಟ್ಟೆಪಾಡಿಗಾಗಿಯೇ ಅಲ್ಲವೆ? ''ಎಲ್ಲಾರು ದುಡಿಯುವದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ'' ಎಂದು ದಾಸರೂ ಹಾಡಿರುತ್ತಾರೆ. ಆದ್ದರಿಂದ ತತ್ಕಾಲಕ್ಕೆ ಮನಶ್ಶಾಂತಿಯಾದಾಗ ಭೋಕ್ತೃವಾದ ಜೀವನು ತನ್ನ ಸ್ವರೂಪನಾದ ಪರಮೇಶ್ವರನನ್ನು ಅನುಸಂಧಾನಮಾಡಬೇಕು. ಅದಕ್ಕಾಗಿ ಈ ಮಂತ್ರವನ್ನು ಹೇಳಲಾಗಿದೆ. ಇದರ ಅಭಿಪ್ರಾಯವು ಹೀಗಿದೆಃ ನಮ್ಮ ದೇಹದಲ್ಲಿ ಹೃದಯಮಧ್ಯದಲ್ಲಿ ನಮ್ಮ ಅಂಗುಷ್ಠಬೆರಳಿನ ಅಳತೆಯಷ್ಟು ಆಕಾಶವಿದೆ. ಅಲ್ಲಿ ಬುದ್ಧಿಯೊಡನೆ ಇರುವ ಆತ್ಮನೂ ಅಂಗುಷ್ಠಮಾತ್ರನೆನಿಸುವನು. ಒಂದು ಕುಡಿಕೆಯೊಳಗೆ ತೋರುವ ಆಕಾಶವನ್ನು ಕರಕಾಕಾಶ–ಎಂದಂತೆ ಆತ್ಮನೂ ಉಪಾಧಿಯಿಂದ ಅಂಗುಷ್ಠಮಾತ್ರನೆಂದು ವ್ಯವಹರಿಸಲ್ಪಡುವನು. ಈ ಪುರುಷನು–ಎಂದರೆ ಜೀವನು ಇಡಿಯ ದೇಹವನ್ನೆಲ್ಲ ವ್ಯಾಪಿಸಿಕೊಂಡಿರುವನು– ಎಂಬಿದನ್ನು 'ಅಂಗುಷ್ಠಂ ಚ ಸಮಾಶ್ರಿತಃ' ಎಂಬ ಮಾತು ತಿಳಿಸುತ್ತದೆ. ಅಂಗುಷ್ಠದಲ್ಲಿಯೂ ಇರುವನು ಎಂದದ್ದರಿಂದ ಶರೀರದಲ್ಲೆಲ್ಲ ಇರುವನು ಎಂದು ಸಿದ್ಧವಾಗುವದು. ಆದರೆ ಈತನು ದೇಹವೆಂಬ ಉಪಾಧಿಗಿಂತ ವಿಲಕ್ಷಣನಾಗಿ ಸಮಸ್ತಜಗತ್ತಿಗೂ ಈಶನಾಗಿರುತ್ತಾನೆ. ಅರ್ಥಾತ್ ಜೀವಾತ್ಮನೆಂದು ಈಗ

ವ್ಯವಹೃತನಾಗಿದ್ದರೂ ತನ್ನ ಚೈತನ್ಯಸ್ವರೂಪದಿಂದ ಪರಮಾತ್ಮನೇ ಆಗಿದ್ದಾನೆ. **'ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ'** ಎಂದು ಗೀತೆಯಲ್ಲಿಯೂ ತಿಳಿಸಿದೆ. ಇಂಥ ಪ್ರಭುವು **ವಿಶ್ವಭುಕ್**–ಎಲ್ಲರನ್ನೂ ತಿನ್ನುವವನಾಗಿರುವನು. ತನ್ನ ವ್ಯಾಪಕರೂಪದಿಂದ ಜಗತ್ತನ್ನೇ ಅನ್ನವಾಗಿ ಮಾಡಿಕೊಂಡಿರುವನು. ಇಂಥ ದೇವನು ಈ ಭೋಜನದಿಂದ ಸುಪ್ರೀತನಾಗಲಿ–ಎಂದರ್ಥ. ಜೀವನು ಉಪಾಧಿಯಿಂದ ಅಂಗುಷ್ಠಮತ್ರನಾಗಿ ಕಂಡುಬರುವನೆಂದೂ ಸ್ವತಃ ಅವನು ಪರಬ್ರಹ್ಮವೇ–ಎಂದೂ ಕಠೋಪನಿಷತ್ತಿನಲ್ಲಿ ಎರಡು ಕಡೆ ತಿಳಿಸಿದೆ. ಹೀಗೆ ಭೋಜನಾನಂತರ ಆತ್ಮಸ್ವರೂಪವನ್ನು ಅನುಸಂಧಾನಮಾಡಬೇಕು. ಕರ್ಮಕಾಂಡದ ಮಟ್ಟದಲ್ಲಿ ಈ ಮಂತ್ರವನ್ನು ಹೀಗೂ ಬಳಸಬಹುದು. ಆತ್ಮನು ಹೃದಯದಲ್ಲಿ ಅಂಗುಷ್ಠಪರಿಮಾಣನಾಗಿರುವದರಿಂದ ನಮ್ಮ ನಮ್ಮ ಬಲಗೈ ಅಂಗುಷ್ಠವನ್ನು ಆ ಆತ್ಮನಿಗೆ ಪ್ರತಿನಿಧಿಯೆಂದು ಭಾವಿಸಬೇಕು. ಅದರಲ್ಲಿ ಅಮೃತವಿರುತ್ತದೆ ಎನ್ನುತ್ತಾರೆ. ಆದ್ದರಿಂದಲೇ ಮಕ್ಕಳು ಅಂಗುಷ್ಠವನ್ನು ಬಾಯಲ್ಲಿಟ್ಟು ಚೀಪುತ್ತವೆ. ಈ ಅಂಗುಷ್ಠವನ್ನು ಊಟವಾದ ನಂತರ ತೊಳೆದ ಮೇಲೆ ಆ ನೀರನ್ನು ಬಲಗಣ್ಣಿಗೆ ಹಾಗೂ ಎಡಗಣ್ಣಿಗೂ ಬಿಟ್ಟುಕೊಳ್ಳಬೇಕೆಂದೂ ಇದರಿಂದ ಕಣ್ಣಿಗೆ ಸಂಬಂಧಪಟ್ಟ ರೋಗಗಳು ಬರುವದಿಲ್ಲವೆಂದೂ ದೃಷ್ಟಿಪಾಟವವು ಚುರುಕಾಗುವದೆಂದೂ ಬಲ್ಲವರು ತಿಳಿಸುತ್ತಾರೆ. ಈ ಶ್ಲೋಕವನ್ನು ನೋಡರಿ.

**ಶರ್ಯಾತಿಂ ಚ ಸುಕನ್ಯಾಂ ಚ ಚ್ಯವನಂ ಚೇಂದ್ರಮಶ್ವಿನೌ ।**
**ಭೋಜನಾಂತೇ ಸ್ಮರನ್ ಅಕ್ಷ್ಣೋಃ ಅಂಗುಷ್ಠಾಗ್ರಾಂಬು ನಿಕ್ಷಿಪೇತ್॥**

ಊಟದ ಕೊನೆಯಲ್ಲಿ ಶರ್ಯಾತಿ, ಚ್ಯವನ, ಇಂದ್ರ, ಅಶ್ವಿನೀದೇವತೆಗಳನ್ನೂ ಪತಿವ್ರತೆಯಾದ ಸುಕನ್ಯಾದೇವಿಯನ್ನೂ ಸ್ಮರಿಸುತ್ತಾ ಅಂಗುಷ್ಠದ ತುದಿಯ ನೀರನ್ನು ಎರಡು ಕಣ್ಣುಗಳಿಗೂ ಬಿಟ್ಟುಕೊಳ್ಳಬೇಕು–ಎಂದು ಇದರ ಅರ್ಥ. ಈ ಶ್ಲೋಕವು ಎಲ್ಲಿಯದೋ ತಿಳಿಯದು. ಈ ಪ್ರಕರಣಕ್ಕೆ ಹೊಂದುತ್ತದೆಯಾದ್ದರಿಂದ ಉಲ್ಲೇಖಿಸಿದೆ.

**ಓಂ ॥ ವಾಙ್ಮ ಆಸನ್ । ನಸೋಃ ಪ್ರಾಣಃ । ಅಕ್ಷ್ಯೋಶ್ಚಕ್ಷುಃ ।**
**ಕರ್ಣಯೋಃ ಶ್ರೋತ್ರಮ್ । ಬಾಹುವೋರ್ಬಲಮ್ ।**
**ಊರು ವೋರೋಜಃ । ಅರಿಷ್ಟಾ ವಿಶ್ವಾನ್ಯಂಗಾನಿ ತನೂಃ ।**
**ತನು ವಾ ಮೇ ಸಹ ನಮಸ್ತೇ ಅಸ್ತು ಮಾ ಮಾ ಹಿಂಗ್ಂಸೀಃ ॥**

ಭೋಜನದ ಅನಂತರ ಶರೀರದ ಅಂಗಗಳಿಗೆಲ್ಲ ಸ್ವಸ್ಥತೆಯನ್ನು ಎಂದರೆ ಸುಖವನ್ನು ಉಂಟು ಮಾಡಲೆಂದು ಭಗವಂತನನ್ನು ಪ್ರಾರ್ಥಿಸುವ ಮಂತ್ರವಿದು. ''ಎಲೈ ಭಗವಂತನೆ, ನನ್ನ ವಾಗೀಂದ್ರಿಯವು ಮುಖವೆಂಬ ಸ್ವಸ್ಥಾನದಲ್ಲಿ ನೆಲೆಗೊಳ್ಳಲಿ. ಹಾಗೆಯೇ ಘ್ರಾಣಪ್ರಾಣನು ಮೂಗಿನಲ್ಲಿಯೂ, ನೇತ್ರೇಂದ್ರಿಯವು ಕಣ್ಣುಗಳಲ್ಲಿಯೂ, ಶ್ರವಣೇಂದ್ರಿಯವು ಕಿವಿಗಳಲ್ಲಿಯೂ ನೆಲಸಲಿ. ಹಾಗೆಯೇ ತೋಳುಗಳಲ್ಲಿ ಬಲವೂ ತೊಡೆಗಳಲ್ಲಿ ಓಡಾಡುವ ಶಕ್ತಿಯೂ ನೆಲೆಗೊಳ್ಳಲಿ. ಹಾಗೆ ನೀನು ಅನುಗ್ರಹಿಸು– ಎಂದರ್ಥ. ಮತ್ತು ನನ್ನ ಎಲ್ಲಾ ಶರೀರಾವಯವಗಳೂ ಅರಿಷ್ಟಾನಿ– ಎಂದರೆ ನೋವು– ಹಿಂಸೆಗಳಿಗೆ ಒಳಗಾಗದೆ ಸುಖಕರವಾಗಿ ಅನುಕೂಲವಾಗಿ ಒದಗಲಿ. ಮತ್ತು ತನುವಾ–ಎಂದರೆ ಸೂಕ್ಷ್ಮಶರೀರದೊಡನೆ ಸ್ಥೂಲಶರೀರವೂ ಸ್ವಸ್ಥವಾಗಲಿ–ಎಂದು ಕೇಳಲಾಗಿದೆ. ಎಲ್ಲಾ ಅಂಗಗಳಿಗೂ ಇಂದ್ರಿಯಗಳಿಗೂ ತುಷ್ಟಿಯೂ ಪುಷ್ಟಿಯೂ ಬಲಸಾಮರ್ಥ್ಯಗಳೂ ಅನ್ನದಿಂದಲೇ ಉಂಟಾಗುವವು. ಆದರೆ ಆ ಅನ್ನವೆಂಬುದು ಭಗವಂತನೇ ಆಗಿರುವದು. ಹೀಗೆ ಅನ್ನದ ದ್ವಾರದಿಂದ ಬಲಪುಷ್ಟ್ಯಾದಿಗಳನ್ನು ನೀಡುವ ಭಗವಂತನನ್ನು ಊಟವಾದ ಮೇಲೆ ಸ್ಮರಿಸುವದು ಬಹಳ ಶ್ರೇಷ್ಠವಾದ ಕಾರ್ಯವಾಗಿದೆ. ಹಾಗೆ ಸ್ಮರಿಸುತ್ತಾ ಪ್ರತಿದಿನವೂ ನನಗೆ ಹೀಗೆಯೇ ಅನ್ನವನ್ನು ನೀಡಿ ಬಲಶಕ್ತಿಗಳನ್ನು ಅನುಗ್ರಹಿಸಿ ಯಾವಜ್ಜೀವವೂ ಕಾಪಾಡುವವನಾಗು–ಎಂದು ಕೇಳಿಕೊಳ್ಳಲಾಗಿದೆ. ಇದಕ್ಕಾಗಿ ಕೃತಜ್ಞತೆಯನ್ನು ಅರ್ಪಿಸುವ ಸಲುವಾಗಿ ನಮಸ್ಕಾರಗಳನ್ನು ಮಾಡಲಾಗಿದೆ. ಮತ್ತು ಬದುಕಿರುವವರೆಗೂ ನಮ್ಮನ್ನು ಯಾವದೇ ಆಧಿವ್ಯಾಧಿಗಳು ಪೀಡಿಸದಂತೆ ಕಾಪಾಡು–ಎಂದೂ ಪ್ರಾರ್ಥಿಸಿದೆ. ಹೀಗೆ ಭಗವಂತನು ನಮಗೆ ದಯಪಾಲಿಸಿರುವ ಶರೀರೇಂದ್ರಿಯಾದಿಗಳು, ಅವುಗಳ ಪೋಷಣೆಗಾಗಿ ಆಹಾರ, ಅನಂತರ ಅದು ಜೀರ್ಣವಾಗಿ ಬಲಪುಷ್ಟಿಗಳನ್ನುಂಟು ಮಾಡುವಿಕೆ–ಇವೆಲ್ಲವೂ ಪರಮೇಶ್ವರನ ಕೃಪೆಯಿಂದಲೇ ಮಾನವನಿಗೆ ದೊರಕಿರುವದರಿಂದ ಅವನನ್ನು ನೆನೆದು ನಮ್ಮ ಕೃತಜ್ಞತೆಗಳನ್ನು ಸಲ್ಲಿಸಬೇಕು–ಎಂಬುದು ಈ ಮಂತ್ರದ ಅಭಿಪ್ರಾಯವಾಗಿದೆ.

## ಇಂದ್ರ–ಸಪ್ತರ್ಷಿಸಂವಾದ

ಓಂ ॥ ವಯಸ್ಸುಪರ್ಣಾ ಉಪಸೇದುರಿಂದ್ರಂ ಪ್ರಿಯಮೇಧಾ ಋಷಯೋ ನಾಧಮಾನಾಃ । ಅಪಧ್ವಾಂತಮೂರ್ಣುಹಿ ಪೂರ್ಧಿ ಚಕ್ಷು – ರ್ಮುಮುಗ್ಧ್ಯಸ್ಮಾನ್ನಿಧಯೇऽವಬದ್ಧಾನ್ ॥

ಒಮ್ಮೆ ಭೂಲೋಕದಿಂದ ಸ್ವರ್ಗಲೋಕಕ್ಕೆ ೬ ಘು ಜನ ಋಷಿಗಳು ಹೊರಟು ಆ ಲೋಕವನ್ನು ಸೇರಿದರು. ಅವರ ಉದ್ದೇಶವು ಎಲ್ಲಾ ಪ ಣಿಗಳಿಗೂ ಪ್ರಿಯವಾದದ್ದನ್ನು ಉಂಟುಮಾಡಬೇಕೆಂಬುದಾಗಿತ್ತು. ಅದಕ್ಕಾಗಿ ದೇವೇ ಲ್ಲಿವರವನ್ನು ಯಾಚಿಸಲು ಬಂದಿದ್ದರು. ಆ ಋಷಿಗಳು ಹಕ್ಕಿಗಳಂತೆ ಶೀಘ್ರವಾದ ನವುಳ್ಳವರಾಗಿ ದ್ಯುಲೋಕಕ್ಕೆ ತಲುಪಿದರು. ಅನಂತರ ದೇವೇಂದ್ರನನ್ನು ಸಂದರ್ಶಿಸಿದರು. ಆ ದೇವೇಂದ್ರನು ತನ್ನೊಳಗಿನ ಅಜ್ಞಾನಾಂಧಕಾರವನ್ನು ಕಳೆದುಕೊಂಡ ಬ್ರಹ್ಮಜ್ಞಾನಿಯಾಗಿದ್ದನು. ಇಂದ್ರನು ಮಹಾಜ್ಞಾನಿಯೂ ಸದ್ಗುರುವೂ ಆಗಿದ್ದಾನೆ. ಪ್ರತರ್ದನನೆಂಬ ಶಿಷ್ಯನಿಗೆ ತತ್ತ್ವೋಪದೇಶ ವನ್ನು ಮಾಡಿದನೆಂದು ಕೌಷೀತಕಿಬ್ರಾಹ್ಮಣೋಪನಿಷತ್ತಿನಲ್ಲಿದೆ. ಇಂಥ ಇಂದ್ರನನ್ನು ಕುರಿತು ಋಷಿಗಳು ಹೀಗೆಂದು ಕೇಳಿದರು. ''ಎಲೈ ಇಂದ್ರನೆ, **ಊರ್ಣುಹಿ**– ನಮ್ಮನ್ನು ದಿವ್ಯವಾದ ವಸ್ತುಗಳಿಂದ ಅಲಂಕರಿಸಿ ಗೌರವಿಸುವವನಾಗು. ಇನ್ನು ನಮ್ಮ ಕಣ್ಣುಗಳನ್ನು, **ಪೂರ್ಧಿ**– ಉತ್ತಮವಾದ ಸೌಂದರ್ಯವಿಶಿಷ್ಟವಾದ ಅಸಾಧಾರಣವಾದ ಸ್ವರ್ಗಲೋಕದ ಮನಸೆಳೆಯುವ ನೋಟಗಳಿಂದ ತೃಪ್ತಿಗೊಳಿಸುವವನಾಗು. ಪಾಪಗಳಿಂದ ನಮ್ಮನ್ನು ಬಿಡುಗಡೆಮಾಡುವವನಾಗು. ಹಾಗೂ ನಿಧಯೇ–ಅನೇಕ ಧನರತ್ನಾದಿಗಳಿಂದ ಅನುಗ್ರಹಿಸಿ ಅವುಗಳನ್ನು ಜನಕಲ್ಯಾಣಕ್ಕೆ ಬಳಸಲು ತೊಡಗುವಂತೆ ಮಾಡು'' ಎಂದು ಕೇಳಿಕೊಂಡರು. ಇದು ಈ ಮಂತ್ರದ ಅಭಿಪ್ರಾಯವು. ಹೀಗೆ ಬೇಡಿಕೊಂಡ ಋಷಿಗಳಿಗೆ ಇಂದ್ರನು ಸಾಕಷ್ಟು ಭೋಗಭಾಗ್ಯಗಳನ್ನು ಅನುಗ್ರಹಿಸಿ ಕಳುಹಿಸಿಕೊಟ್ಟನು. ಬ್ರಹ್ಮಜ್ಞಾನಿಯಾದವನಿಗೆ ಅಣಿಮಾದಿ ಐಶ್ವರ್ಯಗಳೆಲ್ಲವೂ ಕರಗತವಾಗಿದ್ದು ಅವನನ್ನು ಅರ್ಚಿಸಿದವರಿಗೆ ಅವು ದೊರಕುವವು–ಎಂದು ಮುಂಡಕೋಪನಿಷತ್ತಿನಲ್ಲಿ ತಿಳಿಸಿದೆ. ಇಲ್ಲಿ ಇಂದ್ರನು ಬ್ರಹ್ಮಜ್ಞಾನಿಯಾದ್ದರಿಂದ ಋಷಿಗಳಿಗೆ ಬೇಕಾದ ವರಗಳನ್ನು ನೀಡಿದನೆಂದು ಅಭಿಪ್ರಾಯ. ಋಷಿಗಳು ಗೃಹಸ್ಥರಾಗಿದ್ದುದರಿಂದ ತಮ್ಮ ಗಾರ್ಹಸ್ಥ್ಯಕರ್ಮಗಳಿಗೆ ಬೇಕಾಗುವಂಥ ವಸ್ತುಗಳನ್ನು ಇಂದ್ರನಲ್ಲಿ ಬೇಡಿದ್ದು ತಪ್ಪೇನಲ್ಲ ಅವರುಗಳು ದೇವೇಂದ್ರನು ದಯಪಾಲಿಸಿದ ಐಶ್ವರ್ಯದಿಂದ ಶಾಸ್ತ್ರೀಯಕರ್ಮಗಳನ್ನು ಅನುಷ್ಠಿಸಿ ಜಗತ್ತಿಗೆ ಕ್ಷೇಮ–ಸುಭಿಕ್ಷ–ಆರೋಗ್ಯಾದಿಗಳನ್ನು ಪ್ರಾರ್ಥಿಸಿದ್ದಾರೆಂತ ತಿಳಿಯಬೇಕು. ಹೀಗೆ ಬ್ರಾಹ್ಮಣನಾದವನಿಗೆ ಬೇಕಾದ ಐಶ್ವರ್ಯಾದಿಗಳನ್ನು ದಯಪಾಲಿಸುವವರು ದೇವತೆಗಳಾದ್ದರಿಂದ ಅವನು ಯಾವಾಗಲೂ ದೇವತಾರಾಧನತತ್ಪರನಾಗಿರಬೇಕು–ಈ ಮಂತ್ರವನ್ನು ಜಪಮಾಡುತ್ತಿರಬೇಕು–ಎಂದೂ ತಿಳಿಸಿದಂತಾಗಿದೆ.

**ಓಂ ॥ ಪ್ರಾಣಾನಾಂ ಗ್ರಂಥಿರಸಿ ರುದ್ರೋ ಮಾ ವಿಶಾಂತಕಃ ।**
**ತೇನಾನ್ನೇನಾಪ್ಯಾಯಸ್ವ । ನಮೋ ರುದ್ರಾಯ ವಿಷ್ಣವೇ**
**ಮೃತ್ಯುರ್ಮೇ ಪಾಹಿ ॥**

ಈ ರೀತಿಯಾಗಿ ಜಪ ಮಾಡಿದ ಅನಂತರ ಈ ಮಂತ್ರದಿಂದ ಹೃದಯವನ್ನು ಮುಟ್ಟಿಕೊಳ್ಳಬೇಕು. ಮತ್ತು ಇದನ್ನೂ ಪುರಶ್ಚರಣ ಮಾಡಬೇಕು. ಇದರ ಅಭಿಪ್ರಾಯವೇನೆಂದರೆ: ''ಎಲೈ ಅಹಂಕಾರದೇವತೆಯೆ, ನೀನು ಪ್ರಾಣಾದಿವಾಯು ರೂಪರೂ, ಚಕ್ಷುರಾದೀಂದ್ರಿಯರೂಪರೂ ಆದ ಪ್ರಾಣದೇವತೆಗಳಿಗೆಲ್ಲ ಗ್ರಂಥಿಯಾಗಿರುವೆ–ಎಂದರೆ ಒಂದನ್ನೊಂದು ಅಂಟಿಕೊಂಡಿರುವಂತೆ ಜೋಡಿಸಿರು ವವನಾಗಿರುವೆ. ಇಂಥ ನೀನು ರುದ್ರನೆನಿಸಿರುವೆ. ಈಗ ನೀನು ನಮ್ಮ ದುಃಖಗಳ ಅಂತಕನು–ಕೊನೆಗಾಣಿಸುವವನು ಆಗು. ಹಾಗೂ ಮಾ ವಿಶ–ನನ್ನೊಳಗೆ ಪ್ರವೇಶಿಸುವವನಾಗು. ಇನ್ನು ನಾನು ಊಟಮಾಡಿದಂಥ ಅನ್ನದಿಂದ ಆಪ್ಯಾಯಸ್ವ–ನನ್ನನ್ನು ಬೆಳೆಸುವವನಾಗು''. ಹೀಗೆಂದು ಪ್ರಾರ್ಥಿಸಿ ಹೃದಯವನ್ನು ಅಭಿಮಂತ್ರಣಮಾಡಿಕೊಂಡು ಅಪಮೃತ್ಯುಪರಿಹಾರಕ್ಕಾಗಿ ಪ್ರಾರ್ಥಿಸಲಾಗುವದು. ''ರುದ್ರನಾದ ಪಾರ್ವತೀಪತಿಗೆ ನಮಸ್ಕಾರಗಳು. ಲಕ್ಷ್ಮೀಪತಿಯಾದ ವಿಷ್ಣುವಿಗೆ ಕೂಡ ನಮಸ್ಕಾರಗಳು. ಎಲೈ ರುದ್ರನೆ, ಎಲೈ ವಿಷ್ಣುವೆ, ಮೃತ್ಯುವಿನ ದೆಸೆಯಿಂದ ನನ್ನನ್ನು ಕಾಪಾಡುವವರಾಗಿರಿ'' ಎಂದಭಿಪ್ರಾಯ.

## ಅಗ್ನಿಸ್ತುತಿಮಂತ್ರ

ಓಂ ॥ ತ್ವಮಗ್ನೇ ದ್ಯುಭಿಸ್ತ್ವ ಮಾಶುಶುಕ್ಷಣಿಸ್ತ್ವಮದ್ಭ್ಯಃ ತ್ವಮಶ್ಮನ–
ಸ್ಪರಿ । ತ್ವಂ ವನೇಭ್ಯಸ್ತ್ವಮೋಷಧೀಭ್ಯಸ್ತ್ವಂ ನೃಣಾಂ
ನೃಪತೇ ಜಾಯಸೇ ಶುಚಿಃ ॥

ಈ ಮಂತ್ರದಲ್ಲಿ ಅಗ್ನಿಯನ್ನು ಕೊಂಡಾಡಿದೆ. ''ಎಲೈ ಅಗ್ನಿಯೆ, ನೀನು ದ್ಯುಭಿಃ– ಉತ್ತಮವಾದ ಕಾಂತಿಯಿಂದ ಕೂಡಿದವನಾಗಿ ನಮಗೆ ಒದಗಿರುವ ಮೃತ್ಯುವನ್ನು ಪರಿಹರಿಸುವವನಾಗು. ನೀನು ಭಕ್ತರ ಪಾಪಗಳನ್ನು ಶೀಘ್ರವಾಗಿ ಶೋಷಣೆ ಮಾಡುವೆಯಾದ್ದರಿಂದ ಆಶುಶುಕ್ಷಣಿಯೆನಿಸಿರುವೆ. ಮತ್ತು ನೀನು ಜಲತತ್ತ್ವಕ್ಕಿಂತ ವ್ಯಾಪಕನೂ ಮಿಗಿಲಾದವನೂ ಕಾರಣನೂ ಆಗಿರುವೆ. ಅಶ್ಮನಃ ಎಂದರೆ ಮಹಾಮೇರುವೆನಿಸಿದ ಪರ್ವತದ ಮೇಲೆ ಇರುವವನಾಗಿರುವೆ. ಮೇರು ಪರ್ವತದ ಎತ್ತರವಾದ ಶಿಖರಗಳಲ್ಲಿ ಅಗ್ನಿಯೇ ಮುಂತಾದ ದೇವತೆಗಳ ವಾಸಸ್ಥಾನವಿರುವದೆಂದು ಪುರಾಣಗಳಲ್ಲಿ ತಿಳಿಸಿದೆ. ಇಂಥ ಮಹಾಮಹಿಮನು ನೀನು–ಎಂದರ್ಥ. ಇನ್ನು ನೀನು ವನೇಭ್ಯಃ–ಎಂಬಿದನ್ನು ವನೇಷು ಎಂದು ವಿಭಕ್ತಿ ವ್ಯತ್ಯಯಮಾಡಿಕೊಂಡು ಅರ್ಥಮಾಡಬೇಕು. ನಂದನಾದಿವನಗಳಲ್ಲಿ ವಿಹಾರ ಮಾಡುವವನಾಗಿರುವೆ. ಹಾಗೂ ಓಷಧಿಗಳೆನಿಸಿರುವ ಸೋಮಲತಾದಿಗಳಲ್ಲಿಯೂ ಅವ್ಯಕ್ತನಾಗಿದ್ದುಕೊಂಡಿರುವೆ. ಎಲೈ ನೃಪತಿಯೆ, ಎಂದರೆ ಮನುಷ್ಯರಿಗೆಲ್ಲ ಒಡೆಯನೆ, ನೀನು ಯಾಗಮಾಡುವಂಥ

ಯಜಮಾನರುಗಳಿಗೆಲ್ಲ ಪೂಜ್ಯನಾಗಿ, ಜಾಯಸೇ–ಆಗಿರುವೆ. ಮತ್ತು ನೀನು ಯಾವಾಗಲೂ ಶುಚಿಯು. ವೈದಿಕಲೌಕಿಕಯಜ್ಞಗಳಲ್ಲಿಯೂ ಅಪರಕರ್ಮಗಳ ಅನುಷ್ಠಾನಕಾಲಕ್ಕೆ ಶ್ಮಶಾನಾದಿಗಳಲ್ಲಿಯೂ ಇದ್ದುಕೊಂಡು ಎಲ್ಲಾ ವಿಧವಾದ ಹವಿಸ್ಸುಗಳನ್ನೂ ಸ್ವೀಕರಿಸುವವನಾಗಿದ್ದರೂ ಸರ್ವದಾ ಶುಚಿಯಾಗಿಯೇ ಇದ್ದುಕೊಂಡಿರುವೆ. ಇಂತ ಪ್ರಭಾವವುಳ್ಳ ನೀನು ನನ್ನನ್ನು ಮೃತ್ಯುವಿನ ಕಡೆಯಿಂದ ಕಾಪಾಡುವವನಾಗು''–ಎಂದು ಪ್ರಾರ್ಥಿಸಲಾಗಿದೆ.

## ಅಭೀಷ್ಟಯಾಚನಾಮಂತ್ರ

**ಓಂ ॥ ಶಿವೇನಮೇ ಸಂತಿಷ್ಠಸ್ವ ಸ್ಯೋನೇನ ಮೇ ಸಂತಿಷ್ಠಸ್ವ ಸು –**
**ಭೂತೇನ ಮೇ ಸಂತಿಷ್ಠಸ್ವ ಬ್ರಹ್ಮವರ್ಚಸೇನ ಮೇ**
**ಸಂತಿಷ್ಠಸ್ವ ಯಜ್ಞಸ್ಯರ್ಧಿಮನು ಸಂತಿಷ್ಠಸ್ವೋಪ ತೇ**
**ಯಜ್ಞ ನಮ ಉಪ ತೇ ನಮ ಉಪ ತೇ ನಮಃ ॥**

ಈ ಮಂತ್ರದಲ್ಲಿ ಪರಮಾತ್ಮನ ಕಡೆಯಿಂದ ತನಗೆ ಬೇಕಾದ ಇಷ್ಟಾರ್ಥಗಳನ್ನು ಪಡೆಯುವದಕ್ಕಾಗಿ ಮಾಡುವ ಪ್ರಾರ್ಥನೆಯಿದೆ. '**ಉಪ ತೇ ನಮಃ**' ಎಂದು ಎರಡು ಬಾರಿ ಹೇಳಿರುವದು ಆದರವನ್ನು ತೋರಿಸುವದಕ್ಕೆ–ಎಂದು ತಿಳಿಯಬೇಕು. ಯಜ್ಞ ಎಂಬಿದು ಸಂಬೋಧನೆಯು. ''ಎಲೈ ಪರಮಾತ್ಮನೆ, ಯಜ್ಞನಾಮಕನೆ, ನಿನಗೆ **ಉಪ**– ಎಂದರೆ ಸಮೀಪದಿಂದ ನಮಸ್ಕರಿಸುವೆನು. ನಿನ್ನ ಸನ್ನಿದಿಯಲ್ಲಿ ನಿನ್ನ ಎದುರಿಗೆ ಮತ್ತೆಮತ್ತೆ ವಂದಿಸುವೆನು–ಎಂದರ್ಥ. ನೀನು ಶಿವೇನ–ಕಲ್ಯಾಣವನ್ನುಂಟು ಮಾಡುವ ಮೂಲಕ ನನ್ನ ಮನೆಯಲ್ಲಿ ವಾಸವಾಗಿರು. ಹಾಗೂ ಸ್ಯೋನೇನ–ಐಹಿಕಸುಖಗಳನ್ನು ದಯಪಾಲಿಸುವ ಮೂಲಕ ನಮ್ಮೊಡನೆ ಇರುವವನಾಗು. ಹಾಗೆಯೇ ಸುಭೂತೇನ– ಮಹತ್ತಾದ ಐಶ್ವರ್ಯವನ್ನು ದಯಪಾಲಿಸುವ ಮೂಲಕವೂ ಬ್ರಹ್ಮವರ್ಚಸೇನ– ಬ್ರಹ್ಮವಿದ್ಯೆಯಿಂದ ದೊರಕುವ ತೇಜಸ್ಸಿನ ಮೂಲಕವೂ ನೀನು ನನ್ನ ಹೃದಯದಲ್ಲಿ ಪ್ರಸನ್ನನಾಗಿರಲಾಗಿ ನಾನು ಕೂಡ ಒಳ್ಳೆಯ ಗುಣಸಂಪನ್ನನಾಗಲು ಸಾಧ್ಯವಾಗುವದು ಎಂದರ್ಥ. ಮತ್ತು ನಿನ್ನ ಪ್ರೀತಿಗಾಗಿ ನಾನು ಕೈಗೊಳ್ಳುವ ಪೂಜಾ– ಹೋಮಾದಿರೂಪವಾದ ಯಜ್ಞದಲ್ಲಿ ಸಮೃದ್ಧಿಯನ್ನುಂಟುಮಾಡು. ಆ ಸಮೃದ್ಧಿಯ ನಿಮಿತ್ತ ಮತ್ತೆಮತ್ತೆ ದೇವತಾಕಾರ್ಯಗಳನ್ನು ನಾನು ಕೈಗೊಳ್ಳಲಾಗಿ ನಮ್ಮ ಮನೆಯಲ್ಲೇ ಅಳ್ಳಾಡದೆ ನೆಲೆಸಿಬಿಡುವವನಾಗು''–ಎಂದರ್ಥ. ಶ್ರೀಸೂಕ್ತದಲ್ಲಿಯೂ ಇದೇ ಬಗೆಯ ಪ್ರಾರ್ಥನೆಯಿದೆ. '**ಶ್ರೀಯಂ ವಾಸಯ ಮೇ ಕುಲೇ**' ಎಂದು ಅಲ್ಲಿ ಬೇಡಿಕೊಳ್ಳಲಾಗಿದೆ.

# ಪರತತ್ತ್ವನಿರೂಪಣ

ಓಂ ॥ ಸತ್ಯಂ ಪರಂ ಪರಗ್ಂ ಸತ್ಯಂ ಸತ್ಯೇನ ನ ಸುವರ್ಗಾತ್
ಲೋಕಾಚ್ಚ್ಯವಂತೇ ಕದಾಚನ ಸತಾಗ್ಂ ಹಿ ಸತ್ಯಂ ತಸ್ಮಾತ್
ಸತ್ಯೇ ರಮಂತೇ ॥

ಈವರೆಗೆ ಭೋಜನಪ್ರಕರಣ, ಕರ್ಮವಿಚಾರಗಳನ್ನೆಲ್ಲ ವಿವರಿಸಿದ್ದಾಯಿತು. ಕೆಲವು ಪ್ರಾರ್ಥನಾಮಂತ್ರಗಳನ್ನೂ ಕಾಮ್ಯವಾದ ಫಲಗಳನ್ನು ಭಗವಂತನಿಂದಲೇ ಬೇಡಿ ಪಡೆದುಕೊಳ್ಳಬೇಕೆಂಬುದನ್ನೂ ತಿಳಿಸಿದ್ದಾಯಿತು. ಈಗ ಕರ್ಮಮಯವಾದ ಈ ಸಂಸಾರದಲ್ಲಿ ಸುಖದುಃಖಜರಾಮರಣಗಳ ಪ್ರವಾಹವು ಅನಾದ್ಯನಂತವಾಗಿ ಹರಿದುಬರುತ್ತಿರುವದರಿಂದ ಕರ್ಮದಿಂದಲೇ ಕರ್ಮಲೋಕಗಳನ್ನು ಗೆಲ್ಲುವದಾಗ ಲಾರದು. ಕರ್ತೃತ್ವಭೋಕ್ತೃತ್ವರೂಪವಾದ ದುಃಖವನ್ನು ದಾಟಲು ಮತ್ತೆಮತ್ತೆ ಕರ್ತೃವಾಗಿ ಕರ್ಮಗಳನ್ನು ಮಾಡುವದು ಉಪಾಯವೇ ಅಲ್ಲ. ಕರ್ಮಬೀಜವಾದ ಕಾಮವನ್ನೂ ಅದಕ್ಕೆ ಮೂಲವಾದ ಅವಿದ್ಯೆಯನ್ನೂ ಕಳೆದುಕೊಂಡಲ್ಲದೆ ಮುಕ್ತಿಯಿಲ್ಲ. ಇದಕ್ಕೆ ಕರ್ಮಸಂನ್ಯಾಸವೇ ಮೆಟ್ಟಲು. ಇದರಿಂದ ಪರಮಾರ್ಥಸಂನ್ಯಾಸವನ್ನು ಸಾಧಿಸಿ ನೈಷ್ಕರ್ಮ್ಯಸಿದ್ಧಿಯನ್ನು ಪಡೆಯಬೇಕು. ಇಂಥ ಸಂನ್ಯಾಸವನ್ನು ಸಾಧಿಸಲು ಬೇಕಾದ ಉಳಿದ ಅಂತರಂಗಸಾಧನಗಳನ್ನು ಈಗ ಪ್ರಸ್ತಾಪಿಸಲಾಗುವದು. ಇಲ್ಲಿ ಸಂನ್ಯಾಸ, ಪರಬ್ರಹ್ಮ, ಮೋಕ್ಷ–ಈ ಎಲ್ಲ ಶಬ್ದಗಳೂ ಪರಮಾತ್ಮವಾಚಕವೆಂದು ತಿಳಿಯಬೇಕು. ಈಗ ಸತ್ಯಾದಿ ಹನ್ನೊಂದು ಸಾಧನಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗುವದು. ಇದೇ ಸಾಧನಗಳನ್ನೇ ಇನ್ನೂ ವಿಸ್ತಾರವಾಗಿ ಮುಂದಿನ ಅನುವಾಕದಲ್ಲಿ ತಿಳಿಸಲಾಗುವದರಿಂದ ಇಲ್ಲಿ ಅಗತ್ಯವಾದಷ್ಟು ವ್ಯಾಖ್ಯಾನ ಮಾಡಲಾಗುವದು.

ಈಗ ಮೊದಲನೆಯದಾಗಿ ಸತ್ಯವೆಂಬ ಸಾಧನವನ್ನು ಪ್ರಸ್ತಾಪಿಸುತ್ತಾರೆ. ಇದು ವಾಚಕವಾದ ಸಾಧನವು–ಎಂದರೆ ಬಾಯಿಂದ ಆಡುವಂಥದ್ದು. ತಾನು ಕಂಡದ್ದನ್ನು ಮಾತ್ರ ಹಾಗೂ ತಿಳಿದದ್ದನ್ನು ಮಾತ್ರ ಇದ್ದದ್ದು ಇದ್ದಂತೆ ನುಡಿಯುವದೇ ಸತ್ಯವೆನಿಸುವದು. ಇದನ್ನು ಆಚರಣೆಯಲ್ಲಿ ತರುವದು ಸುಲಭವಲ್ಲ. ನಿಜವು ಎಲ್ಲಾ ಕಾಲಕ್ಕೂ ನಿಜವೇ ಆಗಿರುವದರಿಂದ ಹಾಗೂ ಅಳಿಸಿಹೋಗುವದಿಲ್ಲವಾದ್ದರಿಂದ ಪರಬ್ರಹ್ಮದಂತೆ ಅದು ಪರಮಾರ್ಥವು–ಎಂಬರ್ಥದಲ್ಲಿ ಮತ್ತೆ ಪರಂ ಸತ್ಯಂ–ಎಂದು ಹೊಗಳಿದೆ. ಉದಾಹರಣೆಗೆ ಕೊಲಂಬಸ್ ಎಂಬವನು ಅಮೆರಿಕಾವನ್ನು ಕಂಡು ಹಿಡಿದನು–ಎಂದು ಹೇಳಿದರೆ ಅದು ಯಾವಾಗಲಾದರೂ ಸುಳ್ಳಾಗುವ ಸಂಭವವಿದೆಯೆ? ಹಾಗೆಯೇ

ಸ್ವರಾಜ್ಯಚಳುವಳಿಗೆ ಮಹಾತ್ಮಗಾಂಧಿಯವರು ಪ್ರಧಾನನಾಯಕರು–ಎಂಬಿದೂ ಎಲ್ಲಾ ಕಾಲಕ್ಕೂ ನಿಜವಷ್ಟೆ? ಅದೇ ರೀತಿಯಾಗಿ ಮನುಷ್ಯನು ವ್ಯವಹಾರಕಾಲಕ್ಕೆ ತನಗೆ ಗೊತ್ತಿರುವದನ್ನು ಹಾಗೂ ಕಂಡದ್ದನ್ನು , ಇಂದ್ರಿಯಗಳಿಗೆ ವೇದ್ಯವಾದದ್ದನ್ನು ಮಾತಿನಲ್ಲಿ ಹಾಗೇ ನುಡಿಯಬೇಕು. ಇದೇ ಸತ್ಯವು. ಯಾರು ತಾವು ಬದುಕಿರುವವರೆಗೂ ಹೀಗೆ ಸತ್ಯವನ್ನೇ ನುಡಿಯುವರೋ ಅಂಥವರು ಸ್ವರ್ಗಲೋಕದಿಂದ ಎಂದೆಂದೂ ಜಾರಿ ಬೀಳುವದಿಲ್ಲ. ಕರ್ಮಿಗಳು ತಮ್ಮ ಪುಣ್ಯಕರ್ಮಫಲನಿಮಿತ್ತವಾಗಿ ಸ್ವರ್ಗಕ್ಕೇರಬಹುದು. ಆದರೆ ಅವರು ಸತ್ಯವಂತರಾಗಿರದಿದ್ದರೆ ಕರ್ಮಫಲವು ಪೂರ್ಣವಾಗದಿದ್ದರೂ ಜಾರಿ ಬೀಳುತ್ತಾರೆ. ಆದ್ದರಿಂದ ಸತ್ಯವು ಕರ್ಮಫಲಗಳಿಗಿಂತ ದೊಡ್ಡದು–ಎಂದರ್ಥ. ಇನ್ನು ಸತ್ಪುರುಷರಾದವರು ಯಾವಾಗಲೂ ತಮ್ಮ ಜೀವನದಲ್ಲಿ ಸತ್ಯವನ್ನೇ ಅನುಸರಿಸುವರು. ಹೀಗೆ ಸತ್ಯವು ಹೆಚ್ಚಿನ ಅಧ್ಯಾತ್ಮಸಾಧನವೆನಿಸಿರುವದರಿಂದ ಕೆಲವು ಮಹಾತ್ಮರು ಸತ್ಯವನ್ನು ನುಡಿಯುವದೇ ಮೋಕ್ಷಸಾಧನವೆಂದು ಭಾವಿಸಿ ಯಾವಾಗಲೂ ಸತ್ಯಪರರಾಗಿರುವರು. ಅದರಲ್ಲೇ ಆನಂದಿಸುವರು.

**ಓಂ ॥ ತಪ ಇತಿ ತಪೋ ನಾನಶನಾತ್ಪರಂ ಯದ್ಧಿ ಪರಂ ತಪಸ್ತ–**
**ದ್ದುರ್ಧರ್ಷಂ ತದ್ದುರಾಧರ್ಷಂ ತಸ್ಮಾತ್ತಪಸಿ ರಮಂತೇ**
**ದಮ ಇತಿ ನಿಯತಂ ಬ್ರಹ್ಮಚಾರಿಣಸ್ತಸ್ಮಾದ್ದಮೇ ರಮಂತೇ**
**ಶಮ ಇತ್ಯರಣ್ಯೇ ಮುನಯಸ್ತಸ್ಮಾಚ್ಛಮೇ ರಮಂತೇ ॥**

ಈಗ ತಮಸ್ಸು, ದಮ, ಶಮ–ಎಂಬ ಸಾಧನಗಳನ್ನು ಪ್ರಸ್ತಾಪಿಸಲಾಗುವದು. ಕೆಲವರು ತಪಸ್ಸೇ ಮೋಕ್ಷಸಾಧನವೆಂದು ಭಾವಿಸಿರುತ್ತಾರೆ. ತಪಸ್ಸಿನ ಪ್ರಭೇದಗಳು ಬಹಳವಾಗಿವೆ. ತೀರ್ಥಯಾತ್ರೆ, ಜಪ, ಆಹ್ನಿಕ, ಪಾರಾಯಣ, ತರ್ಪಣಾದಿಗಳು, ಸ್ತೋತ್ರಪಾಠ, ಹೋಮ–ಇತ್ಯಾದಿರೂಪವಾದ ತಪಸ್ಸುಗಳಿವೆಯಾದರೂ ಅನಶನಕ್ಕಿಂತ ಹೆಚ್ಚಿನ ತಪಸ್ಸಿಲ್ಲವೆಂದು ಹೇಳುವರು. ಅನಶನವೆಂದರೆ ಏನನ್ನೂ ತಿನ್ನದೆ ಉಪವಾಸವಿರುವದು. ಅಥವಾ ದಿನಕ್ಕೊಂದು ಬಾರಿ, ಎರಡು ದಿನಕ್ಕೊಂದು ಬಾರಿ ಮಾತ್ರ ಅಲ್ಪಾಹಾರವನ್ನು ಸೇವಿಸುವದು–ಇತ್ಯಾದಿ ಎಂದು ತಿಳಿಯಬೇಕು. ಇನ್ನು ಕೃಚ್ಛ್ರ, ಚಾಂದ್ರಾಯಣಗಳೆಂಬ ಹೆಸರುಗಳುಳ್ಳ ತಪಸ್ಸುಗಳೂ ಇವೆ. ಕೃಚ್ಛ್ರವೆಂದರೆ ಬಹಳ ಕಠಿನವಾದ ವ್ರತವೆಂದರ್ಥ. ಉದಾಹರಣೆಗೆ ಬೇವಿನಸೊಪ್ಪು, ಬಿಲ್ವಪತ್ರೆ–ಇಂಥವುಗಳನ್ನು ತಿಂದು ಶರೀರಾಧರಣೆಮಾಡಿಕೊಳ್ಳುವುದು–ಇತ್ಯಾದಿ. ಚಾಂದ್ರಾಯಣ ವೆಂದರೆ ಚಂದ್ರನ ವೃದ್ಧಿಕ್ಷಯಗಳಿಗೆ ಅನುಗುಣವಾಗಿ ಆಹಾರವನ್ನು ಹಿಗ್ಗಿಸುತ್ತಾ ಕುಗ್ಗಿಸುತ್ತಾ

ಹೋಗುವದು. ಉದಾಹರಣೆಗೆ ಬಿದಿಗೆ ದಿನ ಒಂದು ತುತ್ತು, ತದಿಗೆ ದಿನ ಎರಡು ತುತ್ತು ಹೀಗೆ ಹೆಚ್ಚಿಸುತ್ತಾ ಪೂರ್ಣಿಮಾವರೆಗೆ ಬೆಳೆಸಿ ಅನಂತರ ಕೃಷ್ಣಪಕ್ಷದಲ್ಲಿ ಹಾಗೆಯೇ ಒಂದೊಂದು ತುತ್ತನ್ನು ಕಡಿಮೆ ಮಾಡುತ್ತಾ ಬರುವದು. ಅಮಾವಾಸ್ಯೆ–ಪಾಡ್ಯಗಳಲ್ಲಿ ಪೂರ ನಿರಾಹಾರನಾಗಿರುವದು–ಇಂಥ ಬಗೆಯ ತಪಸ್ಸುಗಳು ನಿಜವಾಗಿಯೂ ತಡೆದುಕೊಳ್ಳಲು ಅಸಾಧ್ಯವಾದವುಗಳು. ಆದರೂ ಧೀರರು ಇಂಥ ತಪಸ್ಸುಗಳನ್ನು ಆಚರಿಸುವರು. ಉಳಿದವರಿಗೆ ಆಗಲಾರದು. ಆದ್ದರಿಂದ ಕೆಲವು ಶ್ರದ್ಧಾವಂತರು–ಇಂಥ ತಪಸ್ಸೇ ಮೋಕ್ಷ ಸಾಧನವೆನ್ನುವರು. ಅದರಲ್ಲಿಯೇ ನಿರತರಾಗಿರುವರು ಎಂದರ್ಥ. ಇನ್ನು ಕೆಲವರು ಮಾತು, ಕಣ್ಣು , ಕಿವಿ–ಮುಂತಾದ ಇಂದ್ರಿಯಗಳನ್ನು ಅದರದರ ವಿಷಯಗಳಿಂದ ಹಿಂದಿರುಗಿಸಿ ಹಿಡಿತದಲ್ಲಿಟ್ಟುಕೊಳ್ಳುವ ದಮ–ಎಂಬ ಸಾಧನವನ್ನೇ ಮೋಕ್ಷೋಪಾಯವೆನ್ನುವರು. ಅದಕ್ಕಾಗಿ ನೈಷ್ಠಿಕಬ್ರಹ್ಮಚರ್ಯವನ್ನೇ ಕೈಗೊಂಡಿರುವರು. ಅದರಲ್ಲಿಯೇ ನಿರತರಾಗಿರುವರು. ಇನ್ನು ಕೆಲವರು ಕೋಪ, ಭಯ, ಆಲಸ್ಯ, ಪ್ರಮಾದ–ಮುಂತಾದ ದೋಷಗಳನ್ನು ಗೆಲ್ಲುವದೇ ಮೋಕ್ಷಸಾಧನವೆಂದು ನಂಬಿರುವರು. ಇದನ್ನು ಶಮವೆನ್ನುವರು. ಆದ್ದರಿಂದ ಅದರಲ್ಲಿಯೇ ನಿರತರಾಗಿರುವರು. ಹೀಗೆ ಸತ್ಯ, ತಪಸ್ಸು, ದಮ, ಶಮಗಳು–ಎಲ್ಲವೂ ಮೋಕ್ಷಕ್ಕೆ ಸಾಧನಗಳೇ–ಎಂದಭಿಪ್ರಾಯ.

**ಓಂ ॥ ದಾನಮಿತಿ ಸರ್ವಾಣಿ ಭೂತಾನಿ ಪ್ರಶಗ್ಂಸಂತಿ ದಾನಾನ್ನಾತಿ ದುಶ್ಚರಂ ತಸ್ಮಾದ್ದಾನೇ ರಮಂತೇ ಧರ್ಮ ಇತಿ ಧರ್ಮೇಣ ಸರ್ವಮಿದಂ ಪರಿಗೃಹೀತಂ ಧರ್ಮಾನ್ನಾತಿ ದುಷ್ಕರಂ ತಸ್ಮಾದ್ಧರ್ಮೇ ರಮಂತೇ ॥**

ಈಗ ದಾನ–ಧರ್ಮಗಳೆಂಬ ಸಾಧನಗಳನ್ನು ತಿಳಿಸುತ್ತಾರೆ. ಗೋವುಗಳು, ಚಿನ್ನ, ವಸ್ತ್ರ–ಮುಂತಾದ ಪದಾರ್ಥಗಳನ್ನು ಶಾಸ್ತ್ರೋಕ್ತವಾದ ಕ್ರಮದಿಂದ ಯೋಗ್ಯರಾದವರಿಗೆ ಕೈಯೆತ್ತಿಕೊಡುವದು ದಾನವೆನಿಸುವದು. ಅದು ಶ್ರೇಷ್ಠವಾದುದೆಂದು ಎಲ್ಲರೂ ಪ್ರಶಂಸೆಮಾಡುವರು; ಏಕೆಂದರೆ ಅದು ಎಲ್ಲರಿಗೂ ದಕ್ಕತಕ್ಕದ್ದಲ್ಲ. ಯಾವನೊಬ್ಬನಿಗಾದರೂ ತನ್ನ ಪದಾರ್ಥವನ್ನು ಬೇರೊಬ್ಬನಿಗೆ ಕೊಡುವ ಬುದ್ಧಿಯು ಬರಬೇಕಾದರೆ ಪುಣ್ಯವೇ ಸರಿ. ಅವಶ್ಯವಾಗಿ ಕೊಡಲೇ ಬೇಕಾಗಿ ಬಂದಾಗಲೂ ಕನಿಷ್ಠದರ್ಜೆಯ ಪದಾರ್ಥಗಳನ್ನೇ ದಾನಕ್ಕಾಗಿ ಆರಿಸಿಕೊಳ್ಳುತ್ತಾನೆ. ಕೆಲವರಂತೂ ಪ್ರಾಣವನ್ನಾದರೂ ಬಿಡಲು ಸಿದ್ಧರೇ ಹೊರತು ಧನವನ್ನು ಕೈಬಿಡಲಾರರು. ಹೀಗಿರುವಲ್ಲಿ ದಾನವು ದುಷ್ಕರವೆಂದು ಹೇಳುವದೇನಿದೆ? ಆದ್ದರಿಂದ ದಾನಮಾಡುವದು ಹೆಚ್ಚಿನ ಸಾಧನವೇ ಸರಿ–ಎಂದು ನಂಬಿ ಕೆಲವು ಮಹನೀಯರು ದಾನದಲ್ಲಿಯೇ ನಿರತರಾಗಿದ್ದು

ಆನಂದಿಸುತ್ತಾರೆ. ಇನ್ನು ಧರ್ಮವೆಂದರೆ ಛತ್ರ, ದೇವಾಲಯ, ತೋಪು—ಇವುಗಳ ನಿರ್ಮಾಣ, ಕೆರೆಬಾವಿಗಳನ್ನು ಕಟ್ಟಿಸುವದು—ಇಂಥ ಪುಣ್ಯಕಾರ್ಯಗಳನ್ನು ಮಾಡುತ್ತಾರೆ. ಇದಕ್ಕೆ ಧರ್ಮವೆಂದು ಹೆಸರು. ಇದೇ ಮೋಕ್ಷಸಾಧನವೆಂದು ಅವರ ಅಭಿಪ್ರಾಯವಾಗಿರುತ್ತದೆ. ಧರ್ಮದಿಂದಲೇ ಈ ಜಗತ್ತೆಲ್ಲವೂ ವಶಗೊಳಿಸಿಕೊಳ್ಳಲ್ಪಡುತ್ತದೆ, ಏಕೆಂದರೆ ಜನೋಪಕಾರಕವಾದ ಇಂಥ ಕರ್ಮಗಳಿಂದ ಲೋಕವೆಲ್ಲವೂ ಮೆಚ್ಚುತ್ತದೆ. ಆದರೆ ಇದು ಕೂಡ ಮಾಡುವದು ಕಷ್ಟಸಾಧ್ಯವು. ಕೆಲವರ ಅಭಿಪ್ರಾಯದಂತೆ ಇದಕ್ಕಿಂತ ಕಠಿನವಾದದ್ದಿಲ್ಲ. ಆದ್ದರಿಂದ ಇದೇ ಮೋಕ್ಷಸಾಧನವೆಂದು ಕೆಲವರು ನಂಬಿ ಇದರಲ್ಲೇ ನಿರತರಾಗಿರುವರು.

**ಓಂ॥ ಪ್ರಜನ ಇತಿ ಭೂಯಾಗ್ಂಸಸ್ತಸ್ಮಾದ್ ಭೂಯಿಷ್ಠಾಃ ಪ್ರಜಾಯಂತೇ ತಸ್ಮಾತ್ ಭೂಯಿಷ್ಠಾಃ ಪ್ರಜನನೇ ರಮನ್ತೇಽಗ್ನಯ ಇತ್ಯಾಹ ತಸ್ಮಾದಗ್ನಯ ಆಧಾತವ್ಯಾ ಅಗ್ನಿಹೋತ್ರ ಮಿತ್ಯಾಹ ತಸ್ಮಾದಗ್ನಿಹೋತ್ರೇ ರಮಂತೇ ॥**

ಈಗ ಪ್ರಜಾ, ಅಗ್ನ್ಯಾಧಾನ, ಅಗ್ನಿಹೋತ್ರಗಳೆಂಬ ಸಾಧನಗಳನ್ನು ತಿಳಿಸುತ್ತಾರೆ. ಪ್ರಜನವೆಂದರೆ ಮಕ್ಕಳನ್ನು ಪಡೆಯುವದು. ವಂಶಾಭಿವೃದ್ಧಿಗಾಗಿ ಮಕ್ಕಳನ್ನು ಪಡೆಯಬೇಕೆಂದು ಶಾಸ್ತ್ರವು ವಿಧಿಸುತ್ತದೆ. ಅದರಲ್ಲಿಯೂ ಗಂಡು ಮಕ್ಕಳನ್ನು ಪಡೆದೇ ಪಿತೃಋಣವನ್ನು ತೀರಿಸಬೇಕೆಂದು ಶಾಸ್ತ್ರದಲ್ಲಿ ಸೂಚಿಸಿದೆ. ಆದ್ದರಿಂದ ಕೆಲವರು ಪ್ರಜೆಗಳನ್ನು ಹೊಂದುವದೇ ಹೆಚ್ಚಿನ ಪುಣ್ಯವೆಂದು ಭಾವಿಸಿ ಅದಕ್ಕಾಗಿ ವ್ರತನೇಮನಿಷ್ಠೆಗಳನ್ನೂ ತೀರ್ಥಯಾತ್ರೆ, ದೇವರಸೇವೆಗಳನ್ನೂ ಮಾಡುವರು. ಮಕ್ಕಳಿಲ್ಲದವರಿಗೆ ಜೀವನದಲ್ಲಿ ಅದೊಂದು ಕೊರಗು ನಿಂತುಬಿಡುವದು. ಅದಕ್ಕಾಗಿ ಏನಾದರೂ ಪ್ರಯತ್ನಗಳನ್ನು ಮಾಡಿ ಮಕ್ಕಳನ್ನು ಪಡೆದುಕೊಳ್ಳುವರು. ಧನಿಕರಾಗಲಿ, ದರಿದ್ರನಾಗಿರಲಿ—ಎಲ್ಲರೂ ಮಕ್ಕಳನ್ನು ಬಯಸುವರು. ಕೆಲವರು ಆರೆಂಟು ಮಕ್ಕಳಾದರೂ ಬೇಕೆನ್ನುವರು. ಹೀಗೆ ಹೆಚ್ಚು ಮಕ್ಕಳಿದ್ದರೆ ಯಾವನಾದರೊಬ್ಬನು ನಮಗೆ ವೃದ್ಧಾಪ್ಯದಲ್ಲಿ ಸೇವೆ ಮಾಡಿಯಾನು, ನಮಗೆ ಮರಣಾನಂತರದಲ್ಲಿ ಶ್ರಾದ್ಧದಾನಾದಿಗಳನ್ನು ನಡೆಸಿಯಾನು, ಕನ್ಯಾದಾನ, ವೃಷೋತ್ಸರ್ಗ, ಗಯಾಶ್ರಾದ್ಧಾದಿಗಳನ್ನು ಕೈಗೊಂಡಾನು—ಎಂದು ಬಯಸುವರು. ಆ ಮೂಲಕ ನಾವು ಉದ್ಧಾರವಾದೇವು—ಎಂಬಿದು ಅವರ ಗುರಿಯಾಗಿರುವದು. ಹೀಗೆ ಪ್ರಜಾಸಂತತಿಯಲ್ಲಿ ಆಶೆಯುಳ್ಳವರು ಅದೇ ಸಾಧನೆಯನ್ನು ಕೈಗೊಂಡು ಅದರಲ್ಲಿಯೇ ನಿರತರಾಗಿರುವರು. ಇನ್ನು ಕೆಲವರು ಅಗ್ನಿಯನ್ನು ಆಧಾನ ಮಾಡುವದೇ ದೊಡ್ಡ ಸಾಧನವೆಂದು ಭಾವಿಸುವರು. ಅಗ್ನಿಯೇ ಪ್ರತ್ಯಕ್ಷದೇವತೆ. ಅವನನ್ನು

ಪ್ರತಿದಿನವೂ ಸಾಯಂಪ್ರಾತಃಕಾಲಗಳಲ್ಲಿ ಅರ್ಚಿಸಬೇಕು—ಎಂದು ತಿಳಿದು ಹೋಮಾದಿಗಳನ್ನು ಕೈಗೊಳ್ಳುವರು. ಇಂಥ ಅಗ್ನ್ಯಾರಾಧಕರಲ್ಲಿಯೇ ಅಗ್ನಿಹೋತ್ರವೆಂಬ ಶ್ರೌತಕರ್ಮವು ಮೋಕ್ಷಸಾಧನವೆಂದು ಭಾವಿಸಿ ಅದನ್ನೇ ಕೈಗೊಳ್ಳುವವರೂ ಇದ್ದಾರೆ. ಇದು ಕೂಡ ದುರನುಷ್ಠೇಯವು—ಎಂದರೆ ಅಂಗೋಪಾಂಗಗಳೊಡನೆ ಲೋಪವಿಲ್ಲದಂತೆ ಯಾವಜ್ಜೀವವೂ ಕೈಗೊಳ್ಳಬೇಕಾದರೆ ಬಹಳವಾದ ಧರ್ಮಶ್ರದ್ಧೆಯೂ ಅನುಕೂಲವೂ ಬೇಕಾಗುವದು. ಹೀಗೆ ಪ್ರಜನನ, ಅಗ್ನ್ಯಾಧಾನ, ಅಗ್ನಿಹೋತ್ರಗಳೂ ಪರಂಪರೆಯಾಗಿ ಮೋಕ್ಷಸಾಧನಗಳಾಗಿವೆ—ಎಂಬುದು ಈ ಮಂತ್ರದ ಅಭಿಪ್ರಾಯ.

**ಓಂ ॥ ಯಜ್ಞ ಇತಿ ಯಜ್ಞೋ ಹಿ ದೇವಾಸ್ತಸ್ಮಾದ್ಯಜ್ಞೇ ರಮಂತೇ ಮಾನಸಮಿತಿ ವಿದ್ವಾಗ್ಂಸಸ್ತಸ್ಮಾದ್ವಿದ್ವಾಗ್ಂ ಸ ಏವ ಮಾನಸೇ ರಮಂತೇ ॥**

ಈಗ ಯಜ್ಞ, ಉಪಾಸನೆ—ಎಂಬ ಎರಡು ಸಾಧನಗಳನ್ನು ತಿಳಿಸಲಾಗುವದು. ದ್ರವ್ಯಯಜ್ಞಗಳು ಅನೇಕವಿಧವಾಗಿರುವವು. ಜ್ಯೋತಿಷ್ಟೋಮವೆಂಬುದು ಒಂದು ಪ್ರಸಿದ್ಧವಾದ ಯಜ್ಞವು. ಹೀಗೆಯೇ ಅತಿರಾತ್ರ, ವಾಜಪೇಯ—ಮುಂತಾಗಿ ಅನೇಕ ಯಜ್ಞಗಳಿವೆ. ಇವೇ ಮೋಕ್ಷಸಾಧನಗಳೆಂದು ಕೆಲವರ ಅಭಿಪ್ರಾಯ. ಏಕೆಂದರೆ ಈಗ ಇಂದ್ರಾದಿದೇವತೆಗಳ ಸ್ಥಾನವನ್ನು ಪಡೆದಿರುವವರು ಹಿಂದೆ ಯಜ್ಞಗಳನ್ನು ಆಚರಿಸಿದವರೇ ಆಗಿರುತ್ತಾರೆ. ಒಂದು ನೂರು ಅಶ್ವಮೇಧಯಜ್ಞಗಳನ್ನು ಮಾಡಿದವನು ದೇವೇಂದ್ರಪದವಿಯನ್ನೇರುತ್ತಾನೆಂದು ಶಾಸ್ತ್ರದಲ್ಲಿ ತಿಳಿಸಿದೆ. ಆದ್ದರಿಂದ ಕೆಲವರು ಯಜ್ಞದಲ್ಲಿಯೇ ನಿರತರಾಗಿರುತ್ತಾರೆ. ಇನ್ನು ಕೆಲವರು ದ್ರವ್ಯಯಜ್ಞಕ್ಕಿಂತ ಮಾನಸಯಜ್ಞವು ಶ್ರೇಷ್ಠವೆಂದು ಹೇಳುವರು. ಇದನ್ನು ಉಪಾಸನೆ—ಎನ್ನುವರು. ಇದು ಕೂಡ ಚಿತ್ತಶುದ್ಧಿಯಿಲ್ಲದವರಿಗೆ ಅಸಾಧ್ಯವೇ ಸರಿ. ಆದರೆ ಕೆಲವು ಸಾಧಕರು ಪ್ರಯತ್ನಮಾಡಿ ಮನಸ್ಸನ್ನು ಯೋಗಾದಿಸಾಧನಗಳಿಂದ ವಶಪಡಿಸಿಕೊಂಡು ದೇವತೋಪಾಸನೆಗಳನ್ನು ಕೈಗೊಳ್ಳುವರು. ಆಯಾ ದೇವತಾಸಾಯುಜ್ಯಪ್ರಾಪ್ತಿಯ ಮೂಲಕ ಮುಂದೆ ಮೋಕ್ಷವನ್ನು ಪಡೆಯಲು ಪ್ರಯತ್ನಿಸುವರು. ಹೀಗೆ ಉಪಾಸನೆಯಲ್ಲೇ ನಿರತರಾಗಿ ಮಾನಸಯಜ್ಞವನ್ನೇ ಹೆಚ್ಚಿನದೆಂದು ನಂಬಿರುವವರೂ ಇದ್ದಾರೆ. ಆದ್ದರಿಂದ ದ್ರವ್ಯಯಜ್ಞಗಳೂ ಮುಕ್ತಿ ಸಾಧನಗಳೇ—ಎಂದಭಿಪ್ರಾಯ.

**ಓಂ ॥ ನ್ಯಾಸ ಇತಿ ಬ್ರಹ್ಮಾ ಬ್ರಹ್ಮಾ ಹಿ ಪರಃ ಪರೋ ಹಿ ಬ್ರಹ್ಮಾ ತಾನಿ ವಾ ಏತಾನ್ಯವರಾಣಿ ಪರಗ್ಂಸಿ ನ್ಯಾಸ ಏವಾತ್ಯರೇಚಯತ್ ಯ ಏವಂ ವೇದೇತ್ಯುಪನಿಷತ್ ॥**

ಈಗ ಸಂನ್ಯಾಸವೆಂಬ ಉತ್ಕೃಷ್ಟವಾದ ಮೋಕ್ಷಸಾಧನವನ್ನು ತಿಳಿಸುತ್ತಾರೆ. ಈವರೆಗೆ ವರ್ಣಿಸಿರುವ ಸಾಧನಗಳಲ್ಲಿ ಮಾಡತಕ್ಕದ್ದು ಪ್ರಧಾನವಾಗಿತ್ತು. ಇದು ಮಾಡುವದನ್ನು ಬಿಡುವ ರೀತಿಯದಾಗಿದೆ. ಮೇಲು ನೋಟಕ್ಕೆ ಮಾಡುವದಕ್ಕಿಂತ ಬಿಡುವದೇ ಸುಲಭವೆಂದು ಕಂಡುಬರುತ್ತದೆಯಾದರೂ ಅದು ಸರಿಯಲ್ಲ. ಏಕೆಂದರೆ ಒಂದು ಕ್ಷಣವೂ ಮನುಷ್ಯನು ಕರ್ಮಮಾಡದೆ ಬದುಕಿರಲಾಗುವದಿಲ್ಲ. ಆದ್ದರಿಂದ ಕರ್ಮಗಳನ್ನು ಬಿಡುವದೆಂದರೆ ಕರ್ಮಸಂಗವನ್ನೂ ಅಹಂಕಾರವನ್ನು ಬಿಡುವದು, ಕರ್ತೃತ್ವಬುದ್ಧಿಯನ್ನು ಬಿಡುವದು–ಎಂದೇ ಅರ್ಥ. ಈ ಅಭಿಪ್ರಾಯದಂತೆ ಸಂನ್ಯಾಸವು ಕಷ್ಟಸಾಧ್ಯವೇ ಸರಿ. ಏಕೆಂದರೆ ಶರೀರದಿಂದ ಮಾಡುವದನ್ನು ಬಿಡಬಹುದಾದರೂ ಮನಸ್ಸು ಮಾತ್ರ ಏನ್ನನಾದರೂ ಚಿಂತಿಸುತ್ತಲೇ ಇರುತ್ತದೆ. ಇದು ಶಾಂತವಾದರೆ ಕರ್ಮಸಂನ್ಯಾಸವಾದೀತು. ಆದರೆ ಜನಸಾಮಾನ್ಯರಿಗೆಲ್ಲ ಗಾಢನಿದ್ರೆಯ ಕಾಲ ಹೊರತು ಉಳಿದ ಸಮಯದಲ್ಲಿ ಮನಸ್ಸಮಾಧಾನವಿರುವದೇ ಇಲ್ಲ. ಹೀಗೆ ಕರ್ಮಸಂನ್ಯಾಸವು ದಕ್ಕುವದು ದುಷ್ಕರವಾಗಿರುತ್ತದೆ. ಆದ್ದರಿಂದಲೇ ಉಳಿದೆಲ್ಲ ಸಾಧನಗಳಿಗಿಂತಲೂ ಸಂನ್ಯಾಸವು ಹೆಚ್ಚಿನದು–ಎಂದು ಇಲ್ಲಿ ತಿಳಿಸಿದೆ. ಯಾವನು ಶಾಸ್ತ್ರೀಯಕರ್ಮಗಳನ್ನೆಲ್ಲ ಅನುಷ್ಠಾನಮಾಡಿದಮೇಲೆ ಅವುಗಳ ಅನಿತ್ಯತ್ವವನ್ನು ಮನಗಂಡವನಾಗಿ ನಿತ್ಯವಾದ ಸುಖಪ್ರಾಪ್ತಿಗೆ ಕರ್ಮಾನುಷ್ಠಾನವು ಸಾಧನವಲ್ಲವೆಂದು ಅರಿತವನಾಗಿ ಅದನ್ನು ಮೆಲ್ಲಮೆಲ್ಲನೆ ಬಿಡುವನೋ, ಆದರೆ ಶಾರೀರಕವಾಗಿ ಮಾಡುತ್ತಿದ್ದುದನ್ನು ಮಾತ್ರ ಬಿಟ್ಟವನಾಗಿ ಮಾನಸಿಕವಾದ ಕರ್ಮವನ್ನು (ಉಪಾಸನೆಯನ್ನು) ಕೈಗೊಂಡಿರುವನೋ ಅವನು ಸಂನ್ಯಾಸದ ಮೆಟ್ಟಿಲನ್ನೇರಿದವನಾಗುವನು. ಆದರೂ ಅಂಥವನು ಕೂಡ ಸಾಧನೆಮಾಡಬೇಕಾದದ್ದು ಬಹಳವಾಗಿರುವದು. ಆ ಸಾಧಕನು ಕ್ರಮವಾಗಿ ಎಲ್ಲಾ ದೇವತೆಗಳನ್ನೂ ಹಿರಣ್ಯಗರ್ಭಬ್ರಹ್ಮನಲ್ಲಿ ಒಂದಾಗಿಸಿಕೊಂಡು ಆ ಹಿರಣ್ಯಗರ್ಭನ ಉಪಾಸನೆಯನ್ನೇ ಕೈಗೊಂಡಾಗ ಬಹಳಮಟ್ಟಿನ ಸಂನ್ಯಾಸವು ದಕ್ಕಿದಂತಾಗುತ್ತದೆ. ಅನಂತರ ಹಿರಣ್ಯಗರ್ಭೋಪಾದಿಯನ್ನೂ ಮೀರಿದ ಸರ್ವಾತ್ಮವಾದ ಪರಬ್ರಹ್ಮವನ್ನು ಶ್ರವಣಮನನನಿದಿಧ್ಯಾಸನಗಳಿಂದ ತನ್ನಲ್ಲಿಯೇ ತಾನೇ ಅರಿತುಕೊಂಡವನಾಗಿ ನೆಲೆನಿಂತಲ್ಲಿ ಸಂಪೂರ್ಣವಾದ ಸಂನ್ಯಾಸವು ಸಿದ್ಧಿಸುವದು. ಇಂಥ ನೈಷ್ಕರ್ಮ್ಯಸಿದ್ಧಿರೂಪವಾದ ಸಂನ್ಯಾಸವು ಉತ್ತಮವೆಂದು ಚತುರ್ಮುಖಬ್ರಹ್ಮನು ಬಲ್ಲವನಾಗಿದ್ದಾನೆ–ಎಂಬಿದನ್ನು **'ನ್ಯಾಸ ಇತಿ ಬ್ರಹ್ಮಾ'** ಎಂಬ ಮಾತು ತಿಳಿಸುವದು. ಆ ಹಿರಣ್ಯಗರ್ಭನಾದರೊ **'ಬ್ರಹ್ಮಾ ಹಿ ಪರಃ'** ಪರಬ್ರಹ್ಮವೇ ಆಗಿರುವನು. ಏಕೆಂದರೆ ಭಗವಂತನು ಅವನನ್ನು ಸೃಷ್ಟಿಮಾಡಿ ವೇದಗಳನ್ನೂ ಅಧ್ಯಾತ್ಮಜ್ಞಾನವನ್ನೂ ಅವನಿಗೆ ಅನುಗ್ರಹಿಸಿರುತ್ತಾನೆ. ಆತನೇ ಅಥರ್ವಾದಿ ಋಷಿಗಳಿಗೆ ಬ್ರಹ್ಮವಿದ್ಯೋಪದೇಶವನ್ನು ಮಾಡಿದನೆಂದು ಮುಂಡಕೋಪನಿಷತ್ತಿನಲ್ಲಿ

ತಿಳಿಸಿದೆ. ಆದ್ದರಿಂದ ಅವನನ್ನು 'ಪರೋ ಹಿ ಬ್ರಹ್ಮಾ' ಎಂದು ಇಲ್ಲಿ ಹೊಗಳಿದೆ. ಇಂಥವನು ಸಂನ್ಯಾಸವೇ ಹೆಚ್ಚಿನದೆಂದು ಘೋಷಿಸಿದ ಮೇಲೆ ಕೇಳಬೇಕೆ? ಆದ್ದರಿಂದ ಹಿಂದೆ ಹೇಳಿದ ಸತ್ಯಾದಿಸಾಧನಗಳೆಲ್ಲವೂ 'ಪರಾಂಸಿ' ಹೆಚ್ಚಿನವೇ ಆದರೂ ಸಂನ್ಯಾಸಕ್ಕೆ ಹೋಲಿಸಿದರೆ 'ಅವರಾಣಿ' ಕಡಿಮೆಯದಾಗಿರುತ್ತವೆ. ಸಂನ್ಯಾಸವೇ 'ಅತ್ಯರೇಚಯತ್' ಎಲ್ಲವನ್ನೂ ಮೀರಿಮಿಗಿಲಾಗಿ ನಿಂತಿರುವದು. ಹೀಗೆ ಯಾವನು ತಿಳಿದಿರುವನೋ ಅವನೇ ವಿದ್ವಾಂಸನು. ಹೀಗೆ ರಹಸ್ಯವಾದ ಉಪನಿಷತ್ತನ್ನು ಹೇಳಲಾಗಿದೆ.

## ಜ್ಞಾನಸಾಧನನಿರೂಪಣ

ಓಂ ॥ ಪ್ರಾಜಾಪತ್ಯೋ ಹಾರುಣಿಃ ಸುಪರ್ಣೇಯಃ ಪ್ರಜಾಪತಿಂ ಪಿತರಮುಪಸಸಾರ ಕಿಂ ಭಗವನ್ತಃ ಪರಮಂ ವದಂತೀತಿ ತಸ್ಮೈ ಪ್ರೋವಾಚ ॥

ಹಿಂದಿನ ಅನುವಾಕದಲ್ಲಿ ಪ್ರಸ್ತಾಪಿಸಲಾದ ಸತ್ಯಾದಿಸಾಧನಗಳನ್ನೇ ಮೊದಲು ಇಲ್ಲಿಯೂ ವಿಸ್ತರಿಸಿ ತಿಳಿಸಲಾಗುತ್ತದೆ. ಅನಂತರ ಪರತತ್ತ್ವದ ನಿರೂಪಣೆಯಿದೆ. ಹಿಂದೊಮ್ಮೆ ಆರುಣಿ— ಎಂಬ ಸಾಧಕನಿದ್ದನು. ಇವನ ತಂದೆಯು ಪ್ರಜಾಪತಿಯೆಂಬವನು. ತಾಯಿಯ ಹೆಸರು ಸುಪರ್ಣಾ ಎಂದಿತ್ತು. ಆದ್ದರಿಂದ ಇವನಿಗೆ ಪ್ರಾಜಾಪತ್ಯನೆಂದೂ ಸುಪರ್ಣೇಯನೆಂದೂ ಬೇರೆಯ ಹೆಸರುಗಳೂ ಇದ್ದವು. ಇವನು ಒಮ್ಮೆ ತಂದೆಯಾದ ಪ್ರಜಾಪತಿಯನ್ನು ಬಳಿ ಸಾರಿ 'ಪೂಜ್ಯರೆ, ಭಗವನ್ತರಾದ ಋಷಿಗಳು ಮೋಕ್ಷಸಾಧನಗಳಲ್ಲಿ ಪರಮವಾದದ್ದು ಎಂದರೆ ಉತ್ಕೃಷ್ಟವಾದದ್ದು ಯಾವದು? ಎಂಬ ಬಗ್ಗೆ ಏನು ಹೇಳುತ್ತಾರೆ?' ಎಂದು ಕೇಳಿದನು. ಆಗ ತಂದೆಯು ಹೀಗೆಂದನು

ಓಂ ॥ ಸತ್ಯೇನ ವಾಯುರಾವಾತಿ ಸತ್ಯೇನಾದಿತ್ಯೋ ರೋಚತೇ ದಿವಿ ಸತ್ಯಂ ವಾಚಃ ಪ್ರತಿಷ್ಠಾ ಸತ್ಯೇ ಸರ್ವಂ ಪ್ರತಿಷ್ಠಿತಂ ತಸ್ಮಾತ್ ಸತ್ಯಂ ಪರಮಂ ವದಂತಿ ॥

"ಮಗುವೆ, ಕೇಳುಃ ಋಷಿಗಳು ಸತ್ಯವೇ ಪರಮವಾದ ಸಾಧನವೆನ್ನುವರು. ಹಿಂದೆ ಒಬ್ಬ ಸಾಧಕನಾದವನು ಸತ್ಯವನ್ನೇ ಜೀವಮಾನದಲ್ಲೆಲ್ಲ ನುಡಿದದ್ದರಿಂದ ಅದರ ಫಲವಾಗಿ ವಾಯುವೆಂಬ ದೇವತೆಯಾಗಿ ಈಗ ಅಂತರಿಕ್ಷವನ್ನೆಲ್ಲ ವ್ಯಾಪಿಸಿರುವನು. ಪ್ರಾಣಿಗಳಿಗೆ ಜೀವನಾಧಾರನಾಗಿರುವನು. ಹಾಗೆಯೇ ಮತ್ತೊಬ್ಬ ಸಾಧಕನೂ ಸಹ

ಸತ್ಯವನ್ನೇ ಪಾಲಿಸಿದ್ದರಿಂದ ಈಗ ಸೂರ್ಯನಾಗಿ ಆಕಾಶದಲ್ಲಿ ಬೆಳಗುತ್ತಿರುವನು. ಹೀಗೆ ಸತ್ಯವು ದೇವತಾಸ್ಥಾನಗಳ ಪ್ರಾಪ್ತಿಗೆ ಕಾರಣವಾಗಿರುವದು. ಮತ್ತು ಮಾತು ಎಂಬುದಕ್ಕೆ ಸತ್ಯವೇ ಆಧಾರವಾಗಿರುವದು. ಸತ್ಯದಲ್ಲಿಯೇ ಎಲ್ಲವೂ ಅಡಗಿರುತ್ತದೆ. ಇದು ಎಂದೂ ಬಾಧಿತವಾಗುವದಿಲ್ಲ. ಯಾವನೇ ಆಗಲಿ ಸುಳ್ಳನ್ನು ಆಡಿದರೆ ನಿಜವನ್ನು ಬಲ್ಲವನು ಅದನ್ನು ನಿರಾಕರಿಸುವನು. ಆದರೆ ನಿಜವನ್ನು ಆಡಿದರೆ ಯಾರೂ ನಿರಾಕರಿಸಲಾಗುವದಿಲ್ಲ. ಹೀಗೆ ಸತ್ಯವು ಶಾಶ್ವತವೂ ಅವಿನಾಶಿಯೂ ಆಗಿರುವದು. ಆದ್ದರಿಂದ ಸತ್ಯವೇ ಪರಮವಾದ ಸಾಧನವು'' ಎಂದು ತಿಳಿಸಿದನು. ''ಸತ್ಯಮೇವ ಜಯತೇ'' ಎಂಬಿದು ಮುಂಡಕೋಪನಿಷತ್ತಿನಲ್ಲಿರುವ ಪ್ರಸಿದ್ಧವಾದ ವಾಕ್ಯವು. ಭಾರತಸರ್ಕಾರದವರು ಇದನ್ನು ತಮ್ಮ ಲಾಂಛನವಾಗಿ ಬಳಸಿದ್ದಾರೆ. ಕಂಡದ್ದನ್ನು ಕಂಡಂತೆ ನುಡಿಯುವದು, ಹಾಗೂ ಮನಸ್ಸಿನಲ್ಲಿದ್ದುದನ್ನೇ ಬಾಯಲ್ಲಿ ಆಡುವದು ಸತ್ಯವೆನಿಸಿರುವದು. ಸತ್ಯವು ಪ್ರಿಯವಾಗಿಯೂ ಇದ್ದರೆ ಮಾತ್ರ ನುಡಿಯಬೇಕೆಂದು ಶಾಸ್ತ್ರವು ತಿಳಿಸುತ್ತದೆ. ಅಲ್ಲದೆ ಸತ್ಯವಾಗಿದ್ದ ಮಾತ್ರದಿಂದಲೇ ನುಡಿಯಲೇಬೇಕೆಂಬ ನಿರ್ಬಂಧವೇನೂ ಇಲ್ಲ. ಅಪ್ರಿಯವಾದ ಸತ್ಯವಾದರೆ ನುಡಿಯದೆ ಸುಮ್ಮನಿರಲೂಬಹುದು. ಸತ್ಯವನ್ನು ಹೊಗಳಿ ಕೊಂಡಾಡುವ ಅನೇಕ ಕಥೆಗಳು ನಮ್ಮ ಪುರಾಣಗಳಲ್ಲಿವೆ. ಇದರಲ್ಲಿ ಸತ್ಯಹರಿಶ್ಚಂದ್ರನ ಕಥೆ ಪ್ರಸಿದ್ಧವಾದುದು. ಮಹಾಭಾರತದಲ್ಲಿರುವ ಒಂದು ಶ್ಲೋಕದಲ್ಲಿ ಹೀಗಿದೆ: ಒಮ್ಮೆ ಋಷಿಗಳು ಸತ್ಯದ ಬೆಲೆಯನ್ನು ಗೊತ್ತು ಮಾಡುವದಕ್ಕಾಗಿ ಒಂದು ತಕ್ಕಡಿಯ ಒಂದು ಪಾರ್ಶ್ವದಲ್ಲಿ ಸತ್ಯವನ್ನೂ ಮತ್ತೊಂದು ಪಾರ್ಶ್ವದಲ್ಲಿ ಸಾವಿರ ಅಶ್ವಮೇಧಯಜ್ಞಗಳ ಫಲವನ್ನೂ ಜೋಡಿಸಿ ತೂಗಿದರಂತೆ. ಆಗ ಸತ್ಯದ ತೂಕವೇ ಅಧಿಕವಾಗಿತ್ತಂತೆ. ಹೀಗೆ ಸತ್ಯದ ಮಹಿಮೆಯನ್ನು ಹೊಗಳಿದೆ. ಈಚೆಗೆ ನಮ್ಮಲ್ಲಿ ಹೆಚ್ಚಾಗಿ ಪ್ರಚಾರದಲ್ಲಿರುವ ಸತ್ಯನಾರಾಯಣವ್ರತವೂ ಈ ಉಪನಿಷದ್ವಾಕ್ಯದ ಆಧಾರವುಳ್ಳದ್ದಾಗಿದೆ. ಅಲ್ಲಿರುವ ಕಥೆಯಲ್ಲಿ ಕೂಡ ಸತ್ಯವನ್ನು ಮರೆಮಾಚಿದವರಿಗೆ ದುಃಖವುಂಟಾದದ್ದನ್ನೂ ಮತ್ತೆ ಅದನ್ನು ಮೊರೆಹೊಕ್ಕವರಿಗೆ ದುಃಖಪರಿಹಾರವಾದದ್ದನ್ನೂ ತಿಳಿಸಿದೆ. ಸತ್ಯವನ್ನೇ ನಾರಾಯಣನೆಂಬ ದೇವರಾಗಿ ಕಲ್ಪಿಸಿ ಪೂಜಾದಿಗಳಿಂದ ತೃಪ್ತಿಗೊಳಿಸುವ ಕ್ರಮವನ್ನೂ ತಿಳಿಸಿದೆ. ಭಾಗವತದಲ್ಲಿರುವ ಈ ಶ್ಲೋಕವೂ ಮನನೀಯವಾಗಿದೆ:

**ಸತ್ಯವ್ರತಂ ಸತ್ಯಪರಂ ತ್ರಿಸತ್ಯಂ ಸತ್ಯಸ್ಯ ಯೋನಿಂ ನಿಹಿತಂ ಚ ಸತ್ಯೇ ।**
**ಸತ್ಯಸ್ಯ ಸತ್ಯಂ ಋತಸತ್ಯನೇತ್ರಂ ಸತ್ಯಾತ್ಮಕಂ ತ್ವಾ ಶರಣಂ ಪ್ರಪನ್ನಾಃ ॥**

ಹೀಗೆಂದು ದೇವತೆಗಳು ದೇವಕೀಗರ್ಭಸ್ಥನಾದ ಶ್ರೀಕೃಷ್ಣನನ್ನು ಪ್ರಾರ್ಥಿಸಿದರೆಂದಿದೆ. ಹೀಗೆ ನಮ್ಮ ವೈದಿಕಪೌರಾಣಿಕ ಸಂಸ್ಕೃತಿಯಲ್ಲಿಯೂ ಪ್ರಪಂಚದಲ್ಲಿರುವ ಎಲ್ಲಾ

ಮತಧರ್ಮಗಳಲ್ಲಿಯೂ ಸತ್ಯವನ್ನು ಎತ್ತಿ ಹೇಳದೆ ಇರುವದಿಲ್ಲ. ಇಂಥ ಸತ್ಯವು ಮೋಕ್ಷಸಾಧನವೆಂದು ಅಭಿಪ್ರಾಯ.

ಓಂ ॥ ತಪಸಾ ದೇವಾ ದೇವತಾಮಗ್ರ ಆಯನ್ ತಪಸರ್ಷಯಃ
ಸುವರನ್ವವಿಂದನ್ ತಪಸಾ ಸಪತ್ನಾನ್ ಪ್ರಣುದಾಮಾರಾತೀಃ
ತಪಸಿ ಸರ್ವಂ ಪ್ರತಿಷ್ಠಿತಂ ತಸ್ಮಾತ್ ತಪಃ ಪರಮಂ ವದಂತಿ ॥

ಪ್ರಜಾಪತಿಯು ಮುಂದುವರೆದು ''ಮಗು, ಮತ್ತೆ ಕೆಲವರು ತಪಸ್ಸೇ ಪರಮವಾದ ಸಾಧನವೆನ್ನುವರು; ಏಕೆಂದರೆ ಅಗ್ನೀಂದ್ರಾದಿ ದೇವತೆಗಳು ಹಿಂದಿನ ಜನ್ಮಗಳಲ್ಲಿ ಮಾಡಿದ ತಪಸ್ಸಿನ ಫಲವಾಗಿಯೇ ಈಗ ದೇವತೆಗಳಾಗಿ ಅಗ್ರಪೂಜ್ಯರಾಗಿರುತ್ತಾರೆ. ಹಾಗೆಯೇ ವಸಿಷ್ಠಾದಿಮಹರ್ಷಿಗಳು ಸಹ ತಮ್ಮ ತಪಶ್ಚರ್ಯೆಯಿಂದ ಸ್ವರ್ಗಲೋಕವನ್ನು ಪಡೆದಿರುತ್ತಾರೆ. ಹಾಗೆಯೇ ಈಗ ನಾವು ಕೂಡ ತಪಸ್ಸಿನ ಬಲದಿಂದಲೇ ಶತ್ರುಗಳನ್ನು ನಿರಾಕರಿಸುವವರಾಗಿದ್ದೇವೆ–ಎಂದರೆ ಸೋಲಿಸಿರುತ್ತೇವೆ. ನಮ್ಮ ಧನಕನಕಾದಿಗಳನ್ನು ಕಾಪಾಡಿಕೊಳ್ಳುವದಕ್ಕೂ ನಮಗೆ ಪ್ರಾಪ್ತವಾಗಬೇಕಾಗಿರುವ ಐಶ್ವರ್ಯಕ್ಕೆ ಅಡ್ಡಿಪಡಿಸುವವರನ್ನು ಹಿಮ್ಮೆಟ್ಟಿಸುವದಕ್ಕೂ ತಪಸ್ಸನ್ನು ಬಳಸುತ್ತೇವೆ. ಹೀಗೆ ತಪಸ್ಸಿನಲ್ಲಿ ಎಲ್ಲವೂ ಇದ್ದುಕೊಂಡಿದೆ. ಆದ್ದರಿಂದ ತಪಸ್ಸೇ ಹೆಚ್ಚಿನದು–ಎಂದು ಕೆಲವರ ಅಭಿಪ್ರಾಯ'' ಎಂದನು. ಕೃಚ್ಛ್ರಚಾಂದ್ರಾಯಣಾದಿ ತಪಸ್ಸುಗಳ ವಿಚಾರವಾಗಿ ಹಿಂದೆ ಪ್ರಸ್ತಾಪಿಸಿದೆ. ಉಪವಾಸವೆಂಬುದು ಹೆಚ್ಚಿನ ತಪಸ್ಸೆಂದು ಇಲ್ಲಿ ಅಭಿಪ್ರಾಯಪಡಲಾಗಿದೆ. ಈಗಿನ ಕಾಲಕ್ಕೂ ರಾಜಕೀಯವ್ಯಕ್ತಿಗಳಾದ ಮಹಾತ್ಮಗಾಂಧಿಯವರು ಉಪವಾಸಸತ್ಯಾಗ್ರಹದಿಂದ ಬ್ರಿಟಿಷ್‌ರಾಜ್ಯವನ್ನು ಸೋಲಿಸಿದ್ದು ಪ್ರಸಿದ್ಧವಾಗಿದೆ. ಯಾವದು ದುಸ್ಸಾಧ್ಯವೆಂದು ಕಂಡುಬರುವದೋ ಅಂಥದ್ದನ್ನು ತಪಸ್ಸಿನಿಂದ ಸಾಧಿಸಿದಂಥ ಮಹನೀಯರಿದ್ದಾರೆ. ವಿಶ್ವಾಮಿತ್ರರು ಇದಕ್ಕೊಂದು ಉದಾಹರಣೆಯಾಗಿದ್ದಾರೆ. ಅವರು ಬ್ರಾಹ್ಮಣ್ಯಸಂಪಾದನೆಗಾಗಿ ಕೈಗೊಂಡ ಮಹಾತಪಸ್ಸು ಪ್ರಸಿದ್ಧವಾಗಿದೆ. ಹಾಗೆಯೇ ಪಾರ್ವತೀದೇವಿಯು ಪರಮೇಶ್ವರನನ್ನು ಪತಿಯಾಗಿ ಹೊಂದಲು ತೀರ ಚಿಕ್ಕವಯಸ್ಸಿನಲ್ಲಿಯೇ ತಪಸ್ಸನ್ನು ಕೈಗೊಂಡಳು. ಕಾಮವಶನಾಗದೆ ಸಮಾಧಿನಿಷ್ಠನಾಗಿ ಕುಳಿತ ಈಶ್ವರನನ್ನು ತಪಸ್ಸಿನಿಂದಲೇ ಒಲಿಸಿಕೊಳ್ಳುವದಾಗಿ ಸಂಕಲ್ಪಿಸಿ ಸಾಧನೆಮಾಡಿ ಆಕೆಯು ಜಯಶೀಲಳಾದಳು. ಇನ್ನು ರಾಕ್ಷಸರುಗಳಂತೂ ತಮ್ಮ ಕಾಷ್ಠ ತಪಸ್ಸುಗಳಿಂದ ಬ್ರಹ್ಮ–ಶಿವ–ಇಂದ್ರಾದಿಗಳನ್ನು ಮೆಚ್ಚಿಸಿ ಅಸಾಧಾರಣವಾದ ವರಗಳನ್ನು ಪಡೆದುಕೊಂಡ ಪೌರಾಣಿಕ ಕಥೆಗಳು ಹೇರಳವಾಗಿವೆ. ಹೀಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ತಪೋಮಹಿಮೆಯು ಇದ್ದುಕೊಂಡೇ ಇದೆ. ಈಗಿನ ಭೌತಿಕವಿಜ್ಞಾನಿಗಳು ಕೂಡ ತಮ್ಮ

ಪ್ರಯೋಗಶಾಲೆಗಳಲ್ಲಿ ಕೈಗೊಳ್ಳುವ ಸಂಶೋಧನೆಗಳು ಒಂದು ರೀತಿಯ ತಪಸ್ಸೇ ಎಂದು ಹೇಳಬಹುದು. ಮನಸ್ಸನ್ನೂ ಇಂದ್ರಿಯಗಳನ್ನೂ ಏಕಾಗ್ರಗೊಳಿಸುವ ರೂಪವಾದ ಈ ತಪಸ್ಸು ಧರ್ಮಗಳಲ್ಲೆಲ್ಲ ಹೆಚ್ಚಿನದೆಂದು ಸ್ಮೃತಿವಚನವೂ ಇದೆ. ಆದ್ದರಿಂದ ಇಲ್ಲಿ ತಿಳಿಸಿರುವಂತೆ ಒಂದು ದೃಷ್ಟಿಯಿಂದ ತಪಸ್ಸು ಪರಮಸಾಧನವೆಂಬುದು ಸರಿಯಾದ ಉಪದೇಶವೇ ಆಗಿದೆ.

ಓಂ ॥ ದಮೇನ ದಾಂತಾಃ ಕಿಲ್ಬಿಷಮವಧೂನ್ವನ್ತಿ ದಮೇನ ಬ್ರಹ್ಮಚಾರಿಣಃ ಸುವರಗಚ್ಛನ್ ದಮೋ ಭೂತಾನಾಂ ದುರಾಧರ್ಷಂ ದಮೇ ಸರ್ವಂ ಪ್ರತಿಷ್ಠಿತಂ ತಸ್ಮಾದ್ದಮಃ ಪರಮಂ ವದನ್ತಿ ॥

ತಪಸ್ಸನ್ನು ಮೋಕ್ಷಸಾಧನವೆಂದು ಪ್ರತಿಪಾದಿಸಿದ ಮೇಲೂ ಆರುಣಿಗೆ ತೃಪ್ತಿಯಾಗಲಿಲ್ಲ. ಇನ್ನೂ ಅದಕ್ಕಿಂತ ಹೆಚ್ಚಿನದಾದ ನಿಕಟವಾದ ಸಾಧನವಿರಬಹುದೆಂದು ಅವನು ಭಾವಿಸಿದನು. ಆಗ ಪ್ರಜಾಪತಿಯು ಹೀಗೆಂದನು: "ಮಗು, ದಮವೆಂಬುದೂ ಒಂದು ಹೆಚ್ಚಿನ ಸಾಧನವೆಂದು ಬಲ್ಲವರು ಹೇಳುತ್ತಾರೆ. ದಮವೆಂದರೆ ಬಾಹ್ಯೇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವದು. ಮಾತು, ಕೈಗಳು, ಕಾಲುಗಳು–ಮುಂತಾದವುಗಳ ಹಿಡಿತವು ದಮವೆಂಬ ತಪಸ್ಸೆನಿಸುವದು. ಬಹಳ ಜನರಿಗೆ ಇದು ಕಷ್ಟಕರವಾಗಿರುವದು. ಅನವಶ್ಯಕವಾಗಿ ಮಾತನಾಡುತ್ತಿರುವದು, ಕೈಕಾಲುಗಳನ್ನು ಅಲ್ಲಾಡಿಸುವದು, ಚಾಚಿಕೊಳ್ಳುವದು, ಮಾತು ಹಾಗೂ ಶರೀರಾವಯವಗಳಿಂದ ಕಾಮಕ್ರೋಧಾದಿನಿಮಿತ್ತವಾದ ವಿಕಾರಗಳನ್ನು ಪ್ರದರ್ಶಿಸುವದು–ಹೀಗೆ ದಮವಿಲ್ಲದವರಾಗಿ ಜನರು ಕಂಡು ಬರುತ್ತಾರೆ. ಅಂಥವರಿಗೆ ಮುಕ್ತಿಯು ಮಾತಿರಲಿ, ಸದ್ಗತಿಯೂ ದುರ್ಲಭವಾಗಿರುವದು. ಆದ್ದರಿಂದ ಶ್ರೇಯಸ್ಕಾಮನಾದವನು ಮೊದಲು ದಮವನ್ನು ಕಲಿಯಬೇಕು. ಯಾರು ದಮವನ್ನು ಅಭ್ಯಾಸಮಾಡಿ ಬಾಹ್ಯೇಂದ್ರಿಯಗಳ ಚಾಪಲ್ಯವನ್ನು ತಡೆದುಕೊಂಡು ಸದ್ಗುಣಗಳನ್ನು ಬೆಳೆಯಿಸಿಕೊಳ್ಳುವರೋ ಅಂಥವರು ತಮ್ಮ ಪಾಪಗಳನ್ನು ಕೊಡವಿಕೊಂಡವರಾಗುತ್ತಾರೆ. ಮತ್ತು ತಮ್ಮ ಬ್ರಹ್ಮಚರ್ಯಬಲದಿಂದ ಸ್ವರ್ಗಲೋಕವನ್ನು ಹೊಂದುತ್ತಾರೆ. ಪ್ರಾಣಿಗಳಿಗೆ ದಮವೆಂಬುದು ಪಡೆಯಲಸಾಧ್ಯವಾದ ಸಾಧನವು–ಎಂದರೆ ಅದನ್ನು ಅತಿಪ್ರಯಾಸದಿಂದ ಸಂಪಾದಿಸಿಕೊಳ್ಳತಕ್ಕದ್ದಾಗಿದೆ. ವಿಶೇಷವಾಗಿ ಮನುಷ್ಯರಲ್ಲಿ ದಮವಂತರು ಪ್ರಶಂಸಾರ್ಹರಾಗಿರುತ್ತಾರೆ. ನಳನ ಪತ್ನಿಯಾದ ದಮಯಂತಿಯು ತನ್ನ ಕಷ್ಟಕಾಲದಲ್ಲಿ ದಮವನ್ನು ಕಾಪಾಡಿಕೊಂಡು ಹೆಸರನ್ನು ಸಾರ್ಥಕಗೊಳಿಸಿಕೊಂಡಳು. ಆದ್ದರಿಂದ ದಮದಲ್ಲಿ ಎಲ್ಲವೂ–ಎಲ್ಲಾ ಪುರುಷಾರ್ಥಗಳೂ ನೆಲೆಸಿರುತ್ತವೆ. ಆದ್ದರಿಂದ ಬಲ್ಲವರು ದಮವನ್ನು ಹೆಚ್ಚಿನದೆನ್ನುತ್ತಾರೆ" ಎಂದು ಪ್ರಜಾಪತಿಯು ತಿಳಿಸಿದನು.

ಓಂ ॥ ಶಮೇನ ಶಾಂತಾಃ ಶಿವಮಾಚರನ್ತಿ ಶಮೇನ ನಾಕಂ ಮುನಯೋ ನ್ವವಿಂದನ್ ಶಮೋ ಭೂತಾನಾಂ ದುರಾಧರ್ಷ೦ ಶಮೇ ಸರ್ವ೦ ಪ್ರತಿಷ್ಠಿತಂ ತಸ್ಮಾತ್ ಶಮಃ ಪರಮಂ ವದನ್ತಿ ॥

ದಮವನ್ನು ಮುಕ್ತಿಸಾಧನವೆಂದು ತಿಳಿಸಿದಮೇಲೂ ಆರುಣಿಯು ತೃಪ್ತನಾಗಲಿಲ್ಲ. ಅದಕ್ಕಿಂತಲೂ ಹೆಚ್ಚಿನ ಸಾಧನವಿರಬೇಕೆಂದು ಭಾವಿಸಿದನು. ಆಗ ತಂದೆಯು ಹೀಗೆಂದನು: ''ಮಗು, ಶಮವೆಂಬುದೂ ಒಂದು ಅಧ್ಯಾತ್ಮಸಾಧನವೆನಿಸಿದೆ. ಶಮವೆಂದರೆ ಮನಸ್ಸನ್ನು ಕಾಮ, ಕ್ರೋಧ, ಭಯ, ಚಿಂಥೆ–ಇವುಗಳಿಂದ ಬಿಡುಗಡೆಮಾಡಿಸಿ ಸ್ವಚ್ಛವಾಗಿರಿಕೊಳ್ಳುವದು. ಬಗ್ಗಡವಾದ ನೀರಿನಂತೆ ಮನಸ್ಸು ವ್ಯವಹಾರಕಾಲಕ್ಕೆ ಯಾವಾಗಲೂ ದೋಷಯುಕ್ತವೂ ಚಂಚಲವೂ ಆಗಿರುತ್ತದೆ. ಅಂಥ ಮನಸ್ಸು ಆತ್ಮಜ್ಞಾನವನ್ನು ಗ್ರಹಿಸಲಾರದು. ಮತ್ತು ವ್ಯವಹಾರದಲ್ಲಿಯೂ ಔನ್ನತ್ಯವನ್ನು ಸಾಧಿಸಲಾರದು. ಆದ್ದರಿಂದ ಮುನಿಗಳು ಶಮವನ್ನು ಅಭ್ಯಾಸಮಾಡಿ ಮನಸ್ಸನ್ನು ಮಂಗಳಕರವಾದ ವೃತ್ತಿಗಳಿಂದ ಕಾಪಾಡಿಕೊಳ್ಳುವರು. ಅದರಿಂದ ಶ್ರೇಯಸ್ಸನ್ನು ಸಂಪಾದಿಸಿಕೊಳ್ಳುವರು. ಸ್ವರ್ಗಾದಿ ಲೋಕಗಳನ್ನೂ ಪಡೆದುಕೊಳ್ಳುವರು. ಶಮವು ಸಹ ಸಾಧಕರಿಗೆ ದುರ್ಗಮವಾಗಿರುವದು. ಆದರೂ ಜಾಣರು ತಮ್ಮ ಪ್ರಯತ್ನವಿಶೇಷಗಳಿಂದ ಅದನ್ನು ಸಂಪಾದಿಸಿಕೊಳ್ಳುವರು. ಶಮದಲ್ಲಿಯೇ ಎಲ್ಲಾ ಪುರುಷಾರ್ಥಗಳೂ ಅಡಕವಾಗಿವೆ. ಆದ್ದರಿಂದ ಶಮವು ಹೆಚ್ಚಿನ ಸಾಧನವೆಂದು ಬಲ್ಲವರು ಹೇಳುವರು'' ಎಂದನು.

ಹೀಗೆ ಅಂತರಂಗಸಾಧನಗಳನ್ನು ಉಪದೇಶಿಸಿದ ಬಳಿಕ ಪ್ರಜಾಪತಿಯು ಜ್ಞಾನದ ಬಹಿರಂಗಸಾಧನಗಳನ್ನೂ ಮಗನಿಗೆ ತಿಳಿಸುವ ಉದ್ದೇಶದಿಂದ ಹೀಗೆಂದನು:

ಓಂ ॥ ದಾನಂ ಯಜ್ಞಾನಾಂ ವರೂಥಂ ದಕ್ಷಿಣಾ ಲೋಕೇ ದಾತಾರಗ್ಂ ಸರ್ವಭೂತಾನ್ಯುಪಜೀವನ್ತಿ ದಾನೇನಾರಾತೀರಪಾನುದನ್ತ ದಾನೇನ ದ್ವಿಷನ್ತೋ ಮಿತ್ರಾ ಭವಂತಿ ದಾನೇ ಸರ್ವ೦ ಪ್ರತಿಷ್ಠಿತಂ ತಸ್ಮಾದ್ದಾನಂ ಪರಮಂ ವದನ್ತಿ ॥

''ಮಗು, ದಾನವೆಂಬುದೂ ಒಂದು ಮುಖ್ಯಸಾಧನವು. ದಾನವೆಂದರೆ ಯಜ್ಞಾದಿಗಳನ್ನು ಮಾಡುವ ಕಾಲಕ್ಕೆ ಋತ್ವಿಜರಿಗೆ ಕೊಡುವ ಗೋವುಗಳು, ಚಿನ್ನ, ಭೂಮಿ–ಮುಂತಾದ ದಕ್ಷಿಣೆಗಳನ್ನು ದಾನವೆನ್ನುವರು. ಇದು 'ವರೂಥಮ್' ಶ್ರೇಷ್ಠವಾದದ್ದು'' ಎಂದು ಪ್ರಜಾಪತಿಯು ತಿಳಿಸುತ್ತಾನೆ. ಈಗಿನ ಕಾಲಕ್ಕೆ ದಾನವೆಂಬುದೂ ತನ್ನ ನಿಜವಾದ ಅರ್ಥವನ್ನು ಕಳೆದುಕೊಂಡಿದೆ. ಏಕೆಂದರೆ ದಾನಮಾಡುವವರಲ್ಲಿ

ನಿಜವಾದ, ನ್ಯಾಯಮಾರ್ಗದಿಂದ ಶ್ರಮಪಟ್ಟು ಸಂಪಾದಿಸಿದ ಧನವು ಇರುವದಿಲ್ಲ. ಅಂಥ ಧನವುಳ್ಳವರಿಗೆ ತ್ಯಾಗಬುದ್ಧಿಯೇ ಇರುವದಿಲ್ಲ. ಧನವು ಎಂಥದ್ದೇ ಆಗಿರಲಿ– ದಾನ ಮಾಡೋಣ ಎಂಬ ಭಾವವುಳ್ಳವವನು ದೊರೆತರೆ ಅದೇ ಈಗಿನ ಕಾಲಕ್ಕೆ ಹೆಚ್ಚಿನದೆನಿಸುವದು. ಆದರೆ ಇಲ್ಲಿ ಪ್ರಸ್ತಾಪಿಸಿರುವ ದಾನವು ವೈದಿಕಕರ್ಮವೆನಿಸಿರುತ್ತದೆ. ಅದನ್ನು ಯಜ್ಞವೇದಿಕೆಯಲ್ಲೇ ವಿಧಿವತ್ತಾಗಿ ದೇಶಕಾಲಪಾತ್ರಗಳನ್ನರಿತು ಸೂಕ್ತರೀತಿಯಿಂದ ಮಾಡಬೇಕಾಗಿದೆ. ಬಲಿಚಕ್ರವರ್ತಿಯು ಇದಕ್ಕೆ ಉದಾಹರಣೆಯೆನ್ನಬಹುದು. ಅವನು ತನ್ನ ಸೌಜನ್ಯ ಹಾಗೂ ಪೂರ್ವಪುಣ್ಯಫಲದಿಂದ ಸಂಪಾದಿಸಿದ ರಾಜ್ಯವನ್ನು ಮನಃಪೂರ್ವಕವಾಗಿ ಸಾಕ್ಷಾದ್ ವಿಷ್ಣುವೇ ಆದ ವಾಮನಮೂರ್ತಿಗೆ ದಾನಮಾಡಿದಾಗ ಅವನಿಗೆ ಭಗವಂತನ ವಿಶ್ವರೂಪದ ಸಾಕ್ಷಾತ್ಕಾರವಾಯಿತು. ತ್ರಿವಿಕ್ರಮನಾಗಿ ವಿಷ್ಣುವು ಅವನಿಗೆ ದರ್ಶನವನ್ನು ನೀಡಿ ಉದ್ಧರಿಸಿದನು. ಸಾತ್ತ್ವಿಕದಾನದ ಫಲವು ಹೀಗಿರುವದು. ಇದು ಅವಶ್ಯವಾಗಿ ಚಿತ್ತಶುದ್ಧಿಯನ್ನುಂಟುಮಾಡಿ ಮೋಕ್ಷಕ್ಕೆ ಸಾಧನವಾಗುವದು. ದಾನದಲ್ಲಿ ಪದಾರ್ಥವು ಪ್ರಧಾನವಲ್ಲ. ಆದರೆ ವಿತ್ತಶಾಠ್ಯವಿಲ್ಲದೆ ಒಳ್ಳೆಯ ಮನಸ್ಸಿನಿಂದ ಉದಾರವಾಗಿ ಕೊಡುವದನ್ನು ದಾನವೆನ್ನುವರು. ಯೋಗ್ಯತೆಯಿದ್ದರೂ ದಾನಮಾಡುವಾಗ ಜಿಪುಣತನವನ್ನು ಪ್ರದರ್ಶಿಸಬಾರದು. ಹಾಗೆಯೇ ಅನುಕೂಲವಿಲ್ಲದಾಗ ಸಾಲಮಾಡಿ ದಾನಮಾಡಬಾರದು. ಇವುಗಳಿಂದ ಮನಸ್ಸಿನ ಕಿರಿಕಿರಿಯು ಹೆಚ್ಚುವದೇ ಹೊರತು ಶಾಂತಿಯು ಸಿಗುವದಿಲ್ಲ. ದಾನಮಾಡಿದ ಅನಂತರವೂ ಹೊಗಳಿಸಿಕೊಳ್ಳುವದು, ತಾನು ದಾನಿಯೆಂದು ಪ್ರಕಟಿಸಿಕೊಳ್ಳುವದು–ಸಹ ಸರಿಯಲ್ಲ. ಇಂಥ ದೋಷಗಳಿಂದ ದಾನಿಯು ಮುಕ್ತನಾಗಿರಬೇಕು. ಯಾವ ದಾನದಲ್ಲಿ ಗುಣಾಧಿಕ್ಯವೂ ಅಲ್ಪ ದೋಷವೂ ಇರುವದೋ ಅಂಥದ್ದು ಅಧ್ಯಾತ್ಮಸಾಧನವಾಗಲಿದೆ.

ಪ್ರಜಾಪತಿಯು ಈಗ ಮುಂದುವರೆದು ಹೇಳುತ್ತಿದ್ದಾನೆ: ''ಲೋಕದಲ್ಲಿ ಎಲ್ಲಾ ಪ್ರಾಣಿಗಳೂ ದಾನಮಾಡುವವನ್ನೇ ಆಶ್ರಯಿಸಿಕೊಂಡಿರುವವು; ದಾನದಿಂದಲೇ ಶತ್ರುಗಳನ್ನೂ ಸಹ ನಿವಾರಣೆಮಾಡಿಕೊಳ್ಳಬಹುದಾಗಿದೆ. ನಮ್ಮನ್ನು ದ್ವೇಷಿಸುವವರನ್ನು ಕೂಡ ದಾನದಿಂದ ಸ್ನೇಹಿತರನ್ನಾಗಿ ಮಾರ್ಪಡಿಸಬಹುದಾಗಿದೆ. ಹೀಗೆ ದಾನದಲ್ಲಿ ಎಲ್ಲವೂ ಪ್ರತಿಷ್ಠಿತವಾಗಿರುತ್ತದೆ. ಆದ್ದರಿಂದ ದಾನವನ್ನು ಪರಮವೆನ್ನುವರು.'' ಈ ಉಪದೇಶವು ಎಲ್ಲಾ ಜನರಿಗೂ ಎಲ್ಲಾ ಕಾಲಕ್ಕೂ ಅನ್ವಯಿಸತಕ್ಕದ್ದಾಗಿದೆ. ಯಜ್ಞವೇದಿಕೆಯಲ್ಲಿ ಮಾಡುವ ದಾನವೇ ಅಲ್ಲದೆ ಅನುಪಕಾರಿಯಾದವನಿಗೆ ಅವನ ಅರ್ಹತೆಯನ್ನರಿತು ಉತ್ತಮವಾದ ದೇಶಕಾಲಗಳಲ್ಲಿ ಯಾವ ಫಲಾಪೇಕ್ಷೆಯೂ ಇಲ್ಲದೆ ಕೇವಲ 'ಕೊಡತಕ್ಕದ್ದು ಕರ್ತವ್ಯ' ಎಂಬ ಬುದ್ಧಿಯಿಂದ ದಾನಮಾಡಿದರೆ ಸಾತ್ತ್ವಿಕವೆನಿಸುವದು. ಇಂಥ ದಾನಿಗಳಿದ್ದುದೇ ಆದರೆ ಎಲ್ಲರ ಜೀವನವೂ ಸುಗಮವಾಗಿ ಸಾಗುತ್ತದೆ. ಇಂಥವರನ್ನಾಶ್ರಯಿಸಿಕೊಂಡೇ

ಎಲ್ಲರೂ ಬದುಕಿರುತ್ತಾರೆ. ಮತ್ತು ಕೆಲವು ವೇಳೆ ಶತ್ರುಗಳನ್ನು ಪರಿಹರಿಸಿಕೊಳ್ಳಲು ದಾನವು ನೆರವಾಗುವದು. ಹೇಗೆಂದರೆ ನಮಗಿಂತ ಶತ್ರುವು ಪ್ರಬಲನಾಗಿದ್ದಾಗ ಏನಾದರೂ ದ್ರವ್ಯವನ್ನು ಅವನಿಗೆ ನೀಡಿ ಪ್ರಸನ್ನನನ್ನಾಗಿ ಮಾಡಿಕೊಳ್ಳಬಹುದು. ರಾಜನೀತಿಯ ಪ್ರಕಾರ ಚತುರ್ವಿಧ ಉಪಾಯಗಳಲ್ಲಿ ದಾನವನ್ನೂ ಹೇಳಿದೆ. ಹಾಗೆಯೇ ನಮ್ಮನ್ನು ಎದುರಿಸಲು ಶಕ್ತಿಯಿಲ್ಲದವರೂ ಅಸೂಯೆಯಿಂದ ನಮ್ಮನ್ನು ನೋಯಿಸಬಹುದು. ಹಗೆತನವನ್ನೂ ಮಾಡಬಹುದು. ಅಂಥ ಸಂದರ್ಭದಲ್ಲಿ ಔದಾರ್ಯದಿಂದ ಅವನಿಗೆ ನಾವೇ ಏನಾದರೂ ನೀಡಿದರೆ ಅವನು ದ್ವೇಷವನ್ನು ತ್ಯಜಿಸಿ ನಮ್ಮವನಾಗುವನು. ಅಂಥವನ ಸ್ನೇಹದಿಂದ ನಮಗೆ ಉಪಯೋಗವಿಲ್ಲದಿರಬಹುದು. ಆದರೆ ಅವನ್ನನು ನಮ್ಮವನನ್ನಾಗಿ ಪರಿವರ್ತಿಸಿಕೊಂಡದ್ದರಿಂದ ನೆಮ್ಮದಿಯಾಗುವದು. ಹೀಗೆ ದಾನದಿಂದ ವ್ಯವಹಾರದಲ್ಲಿಯೇ ಬೇಕಾದಷ್ಟು ಕಾರ್ಯಸಾಧನೆಮಾಡಬಹುದು. ಇನ್ನು ನಿಜವಾದ ಅರ್ಥದಲ್ಲಿ ಅಧ್ಯಾತ್ಮಸಾಧನವಾಗಿ ದಾನವನ್ನು ಕೈಗೊಂಡರೆ ಅದು ಪುರಷಾರ್ಥಪ್ರಾಪ್ತಿಗೆ ಹಾದಿಯಾಗುವದೆಂಬುದರಲ್ಲಿ ಸಂಶಯವೇ ಇಲ್ಲ. ಹೀಗೆ ದಾನದಲ್ಲಿ ಎಲ್ಲಾ ಶ್ರೇಯಸ್ಸೂ ಅಡಕವಾಗಿದೆ. ಆದ್ದರಿಂದ ಬಲ್ಲವರು ದಾನವನ್ನು ಪರಮವೆನ್ನುವರು– ಎಂದಭಿಪ್ರಾಯ.

ಈಗ ಪ್ರಜಾಪತಿಯು ಧರ್ಮವೆಂಬ ಸಾಧನವನ್ನು ತಿಳಿಸುತ್ತಾನೆ.

ಓಂ ॥ ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ ಲೋಕೇ ಧರ್ಮಿಷ್ಠಂ
ಪ್ರಜಾ ಉಪಸರ್ಪಂತಿ ಧರ್ಮೇಣ ಪಾಪಮಪನುದತಿ
ಧರ್ಮೇ ಸರ್ವಂ ಪ್ರತಿಷ್ಠಿತಂ ತಸ್ಮಾದ್ಧರ್ಮಂ ಪರಮಂ ವದನ್ತಿ ॥

ಇಲ್ಲಿ ಧರ್ಮವೆಂಬ ಶಬ್ದಕ್ಕೆ ಭಾಷ್ಯಕಾರರು ಬಾವಿ, ಕೆರೆ, ತೋಪು, ದೇವಾಲಯ –ಮುಂತಾದವುಗಳನ್ನು ಕಟ್ಟಿಸುವದು, ಅರವಟ್ಟಿಗೆಗಳನ್ನಿಡಿಸುವದು, ಅನ್ನಛತ್ರ ಗಳನ್ನೇರ್ಪಡಿಸುವದು– ಮುಂತಾದ ಪೂರ್ತಕರ್ಮಗಳೆಂದು ಅರ್ಥಮಾಡಿದ್ದಾರೆ. ಇವೆಲ್ಲವೂ ಧರ್ಮಕಾರ್ಯಗಳೇ ನಿಜ. ಆದರೆ ಇಡಿಯ ಜಗತ್ತಿಗೇ ಧರ್ಮವು ಆಧಾರವು–ಎಂಬ ಮಾತಿನ ಹಿನ್ನೆಲೆಯಲ್ಲಿ ಇನ್ನೂ ವಿಶಾಲವಾದ ಅರ್ಥವನ್ನೂ ಮಾಡಬಹುದು. ವೇದೋಕ್ತವಾದ ಪ್ರವೃತ್ತಿನಿವೃತ್ತಿಲಕ್ಷಣ ಧರ್ಮಗಳೆಲ್ಲವೂ ಆಗ ಧರ್ಮಶಬ್ದದಲ್ಲಿ ಅಡಕವಾಗುವವು. ಹೀಗೆ ಜಗತ್ತಿಗೇ ಧರ್ಮವು ಆಸರೆಯಾಗಿರುವದ ರಿಂದ ಜನರು ಧರ್ಮಿಷ್ಠನಾದವನನ್ನು ಬಳಿಸಾರುವರು. ಧರ್ಮವನ್ನು ಒಮ್ಮೆ ಆಶ್ರಯಿಸಿದವನಿಗೆ ಅದನ್ನು ಬಿಡಲು ಮನಸ್ಸಾಗುವದಿಲ್ಲ. ಹಾಗೆಯೇ ಧರ್ಮವನ್ನು ಮಾಡುವವನನ್ನೇ ಹುಡುಕಿಕೊಂಡು ಯಾಚಕರೂ ಬರುತ್ತಾರೆ. ಕಾಲಗತಿಯಿಂದ ಧರ್ಮಿಷ್ಠನೂ ಒಮ್ಮೊಮ್ಮೆ ನಿರ್ಧನನಾಗಬಹುದು. ಆದರೂ ಜನರು ಅವನನ್ನು ಅನುಸರಿಸುವದನ್ನು ಬಿಡುವದೇ ಇಲ್ಲ. ಉದಾಹರಣೆಗೆ ಧರ್ಮರಾಜನು ತನ್ನ

ಐಶ್ವರ್ಯವನ್ನೆಲ್ಲ ಜೂಜಿನಲ್ಲಿ ಕಳೆದುಕೊಂಡು ಧನವಿಲ್ಲದವನಾದರೂ, ಆತನು ಕಾಡಿಗೆ ಹೊರಟಿರುವಾಗಲೂ ಹತ್ತುಸಾವಿರ ಮಂದಿ ಅಗ್ನಿಹೋತ್ರಿಗಳಾದ ಬ್ರಾಹ್ಮಣರು ಅವನನ್ನು ಕೈಬಿಡಲೇ ಇಲ್ಲ, ಬೆನ್ನುಹತ್ತಿಯೇ ಬಿಟ್ಟರು. ಕಾರಣವೇನೆಂದರೆ: ಜನರಿಗೆ ಧರ್ಮಿಷ್ಠರ ಬಗ್ಗೆ ಬಹಳ ವಿಶ್ವಾಸವು ಗೌರವವೂ ಇರುತ್ತದೆ. ನೀರಿರುವಾಗ ಕೆರೆಯ್ನಾಶ್ರಯಿಸುವದು ಸರಿಯಾದರೂ ನೀರಿಲ್ಲದಾಗಲೂ ಜನರು ಕೆರೆಯನ್ನು ಕೈಬಿಡದೆ–ಕೆರೆಯಾದ್ದರಿಂದಲೇ ಒಳಗಾದರೂ ನೀರಿದೆಯೆಂದೇ ನಂಬಿ ಕೆರೆಯಲ್ಲೇ ಗುಂಡಿಯನ್ನು ತೋಡುತ್ತಾರಲ್ಲವೆ? ಈ ವಿಶ್ವಾಸವು ಎಂಥದ್ದು? ಹಾಗೆಯೇ ಧರ್ಮಿಷ್ಠನನ್ನೂ ಪ್ರಜೆಗಳು ಬಳಿಸಾರಿಯೇ ತೀರುವರು. ಇನ್ನು ಧರ್ಮಕಾರ್ಯಗಳಿಂದ ಪಾಪವು ಪರಿಹಾರವಾಗುವದು ಎಂಬಿದನ್ನು ವಿಚಾರಿಸೋಣ. ಅನೇಕರು ತಾವು ಮಾಡಿರುವ ಗುರುತರವಾದ ಪಾಪಗಳ ಪರಿಹಾರಕ್ಕಾಗಿ ಸಣ್ಣಪುಟ್ಟ ಧರ್ಮಕಾರ್ಯಗಳನ್ನು ಮಾಡುತ್ತಾರೆ. ಉದಾಹರಣೆಗೆ ಒಂದು ದೊಡ್ಡ ಸೇತುವೆಯ ನಿರ್ಮಾಣದ ಕಂಟ್ರಾಕ್ಟ್ ಮಾಡಿದವನು ಕಡೆಯಲ್ಲಿ ಆ ಸೇತುವೆ ಮಗ್ಗಲಲ್ಲಿ ಒಂದು ಪುಟ್ಟ ದೇವಾಲಯವನ್ನು ನಿರ್ಮಿಸುವದುಂಟು. ಆದರೆ ಇಷ್ಟರಿಂದಲೇ ಪಾಪಪರಿಹಾರವಾದೀತೆನ್ನುವದಕ್ಕಿಲ್ಲ. ಇಲ್ಲಿ ಹೇಳಿರುವದರ ಅಭಿಪ್ರಾಯವೇನೆಂದರೆ: ತಾನು ಬದುಕಿರುವಾಗ ಈ ಜನ್ಮದಲ್ಲಿ ತನಗೆ ಗೊತ್ತಿದ್ದಂತೆ ಯಾವ ಪಾಪವನ್ನೂ ಮಾಡದೆ ಇದ್ದು ಜನ್ಮಾಂತರಗಳಲ್ಲಿಯಾದರೂ ಏನಾದರೂ ಪಾಪಗಳನ್ನು ಮಾಡಿರಬಹುದೆಂಬ ಆಶಂಕೆಯಿಂದ ಅವುಗಳ ಪರಿಹಾರಕ್ಕಾಗಿ ಸೂಕ್ತವಾದ ಧರ್ಮಕಾರ್ಯಗಳನ್ನು ಈಗ ಮಾಡಿದಲ್ಲಿ ಅಂಥ ಧರ್ಮದಿಂದ ಪಾಪಗಳು ಹೋಗುತ್ತವೆ–ಎಂದು ತಿಳಿಯಬೇಕು. ಮತ್ತು ಪುಣ್ಯಕರ್ಮಗಳನ್ನು ಅಹಂಕಾರ ಫಲಾಭಿಸಂಧಿಗಳಿಲ್ಲದೆ ಮಾಡಿ ಭಗವದರ್ಪಣೆಯನ್ನೂ ಮಾಡಿರಬೇಕು. ಧರ್ಮವನ್ನು ಎತ್ತಿ ಹೊಗಳಿರಬಾರದು. ಗೋಪ್ಯವಾಗಿಟ್ಟಿರಬೇಕು. ಪ್ರಶಂಸೆಮಾಡಿಕೊಂಡಂತೆಲ್ಲ ಧರ್ಮದ ಶಕ್ತಿಯು ಕುಂದುವದು. ಆದ್ದರಿಂದ ಧರ್ಮಛತ್ರ ದೇವಾಲಯಗಳನ್ನು ನಿರ್ಮಿಸಿದವರು ತಮ್ಮ ಹೆಸರನ್ನು ಗೋಪ್ಯವಾಗಿಡುವದೇ ಶ್ರೇಯಸ್ಕರವು. ಹೀಗೆ ಪೂರ್ತಕರ್ಮಗಳ ರೂಪವಾದ ಧರ್ಮದಿಂದ ಪಾಪವು ನಶಿಸುವದು–ಎಂದು ಇಲ್ಲಿ ತಿಳಿಸಿದೆ. ಅಂತೂ ಧರ್ಮಕರ್ಮಗಳಲ್ಲಿ ಶ್ರೇಯಸ್ಸೆಲ್ಲ ಅಡಕವಾಗಿದೆ. ಆದ್ದರಿಂದ ಧರ್ಮವನ್ನೇ ಪರಮವೆಂದು ಬಲ್ಲವರು ಹೇಳುತ್ತಾರೆ–ಎಂದು ಪ್ರಜಾಪತಿಯು ತಿಳಿಸಿದನು.

ಈಗ ಧರ್ಮಪ್ರಜೋತ್ಪತ್ತಿಯೂ ಶ್ರೇಯಸ್ಸಾಧನವೆಂದು ತಿಳಿಸಲಾಗುವದು.

ಓಂ ॥ ಪ್ರಜನನಂ ವೈ ಪ್ರತಿಷ್ಠಾ ಲೋಕೇ ಸಾಧು ಪ್ರಜಾಯಾಸ್ತಂತುಂ ತನ್ವಾನಃ ಪಿತೃಣಾಮನೃಣೋ ಭವತಿ ತದೇವ ತಸ್ಯಾ ಅನೃಣಂ ತಸ್ಮಾತ್ ಪ್ರಜನನಂ ಪರಮಂ ವದಂತಿ ॥

ಗೃಹಸ್ಥನಾದವನಿಗೆ ಧರ್ಮಪತ್ನಿಯಲ್ಲಿ ಸತ್ಪ್ರಜೆಯನ್ನು ಉತ್ಪತ್ತಿಮಾಡುವ ದೆಂಬಿದು ಒಂದು ಹೆಗ್ಗಳಿಕೆಯು. ಏಕೆಂದರೆ ತನ್ನ ಕಾಲಾನಂತರವೂ ಪುತ್ರನು ಧರ್ಮಕರ್ಮಗಳನ್ನು ವಿಚ್ಛೇದವಿಲ್ಲದೆ ನಡೆಸುವವನಾಗುವನು. ಆದ್ದರಿಂದ ಪುತ್ರೋತ್ಪತ್ತಿಯನ್ನು ಕರ್ತವ್ಯವಾಗಿ ಹೇಳಿದೆ. ವಿದ್ಯಾವಂತರೂ, ಧರ್ಮವಂತರೂ, ಆಚಾರವಿಚಾರಸಂಪನ್ನರೂ, ಬುದ್ಧಿಜೀವಿಗಳೂ, ಜಾಣರೂ ಆದವರು ಪ್ರಜಾ ಸಂತತಿಯನ್ನು ಬೆಳೆಸಬೇಕು. ವಿದ್ಯಾವಂತರೂ, ಶೂರರೂ, ಸಮರ್ಥರೂ, ವಿವೇಕಿಗಳೂ ಆದ ಪ್ರಜೆಗಳ ಪರಂಪರೆಯು ಮುಂದುವರಿಯಬೇಕು. ಪಾರಲೌಕಿಕವದ ಪ್ರಯೋಜನವು ಇದರಿಂದ ಉಂಟು. ಏನೆಂದರೆ: ತಾನು ಇಂಥ ಪ್ರಜೆಯನ್ನು ಪಡೆಯುವದರಿಂದ ತನ್ನ ತಂದೆತಾತಂದಿರೆಲ್ಲರ ಸಾಲವನ್ನೂ ತೀರಿಸಿದವನಾಗುತ್ತಾನೆ. ಅವರಿಗೆ ಸಲ್ಲಿಸಬೇಕಾದ ಶ್ರಾದ್ಧ ತರ್ಪಣಾದಿಗಳು ಕಡಿವಡೆಯದಂತೆ ಮಾಡಿದವನಾಗುತ್ತಾನೆ. ಇದೇ ಅನೃಣತ್ವವು. ತಾನು ಮಗನನ್ನು ಪಡೆದು ಅವನನ್ನು ಯೋಗ್ಯವಾದ ಧಾರ್ಮಿಕ ಹಾದಿಯಲ್ಲಿ ನೆಲೆಗೊಳಿಸಿ ಅವನಿಗೂ ಮಕ್ಕಳಾಗುವವರೆಗೂ ಯಜಮಾನನು ಜವಾಬ್ದಾರಿಯನ್ನು ವಹಿಸಬೇಕು. ಇದಕ್ಕಾಗಿಯೇ ವೇದದಲ್ಲಿ ಪ್ರಜಾ, ಪ್ರಜನನ, ಪ್ರಜಾತಿ–ಎಂದು ಮೂರನ್ನೂ ಬಿಡಿಬಿಡಿಯಾಗಿ ಹೇಳಿದೆ. ಕೌಟುಂಬಿಕ ವ್ಯವಸ್ಥೆಯು ಪಾಶ್ಚಾತ್ಯದೇಶಗಳಲ್ಲಿಲ್ಲ. ಧರ್ಮಾನುಷ್ಠಾನ, ಕುಟುಂಬ, ಸಮಾಜ, ರಾಷ್ಟ್ರಧರ್ಮಗಳ ಬಗ್ಗೆ ಪಾಶ್ಚಾತ್ಯರಿಂದ ನಾವು ಕಲಿಯಬೇಕಾದದ್ದು ಹೆಚ್ಚಾಗಿ ಏನೂ ಇಲ್ಲ. ನಮ್ಮ ಪ್ರಾಚೀನ ಋಷಿಗಳೇ ಎಲ್ಲವನ್ನೂ ಸಮಗ್ರವಾಗಿ ತಿಳಿಸಿರುತ್ತಾರೆ. ಆದ್ದರಿಂದ ಪ್ರಜನನವೆಂಬ ಧರ್ಮವು ವೇದೋಕ್ತವೇ ಆಗಿದ್ದು ಭಾರತೀಯ ಸ್ತ್ರೀಪುರುಷರು ಈ ಗಾರ್ಹಸ್ಥ್ಯ ಧರ್ಮಕ್ಕೆ ತಲೆಬಾಗಿ ನಡೆಯಬೇಕು. ಇದರಲ್ಲಿ ಸ್ವೇಚ್ಛಾಚಾರವು ಸಲ್ಲದು. ಗಾರ್ಹಸ್ಥ್ಯ ಧರ್ಮವೆಂದರೆ ಗೃಹಿಣೀಧರ್ಮವೂ ಸ್ತ್ರೀಧರ್ಮವೂ ಅಡಕವಾಗಿದೆ. ಆಕೆಯು ಗೃಹಲಕ್ಷ್ಮಿಯಾಗಿಯೂ ಮಾತೆಯಾಗಿಯೂ ನಿರ್ವಹಿಸಬೇಕಾಗಿರುವ ಧರ್ಮಗಳಿವೆ. ಇಲ್ಲವಾದರೆ ಸತ್ಪ್ರಜೆಗಳನ್ನು ಹೊಂದಲಾಗುವದೇ ಇಲ್ಲ. ಕೇವಲ ಪುರುಷ ಸಾಧ್ಯವಾದ ದರ್ಮವಿದಲ್ಲ. ಸ್ತ್ರೀಪುರುಷರಿಬ್ಬರ ಸಹಕಾರವೂ, ಸಹಚಾರವೂ, ಸಹಬಾಳ್ವೆಯೂ ಇದಕ್ಕೆ ಅಗತ್ಯವಾಗಿದೆ. 'ನಾರಿ, ಸ್ವರ್ಗಕ್ಕೆ ದಾರಿ' ಎಂದಾಗಲು ಈ ಧರ್ಮವನ್ನು ಆಚರಿಸಬೇಕು.

ಈಗ ಪ್ರಜಾಪತಿಯು ಅಗ್ನಿಪರಿಚರ್ಯವೆಂಬ ಧರ್ಮವನ್ನು ತಿಳಿಸುತ್ತಾನೆ:

**ಓಂ ॥ ಅಗ್ನಯೋ ವೈ ತ್ರಯೀವಿದ್ಯಾ ದೇವಯಾನಃ ಪಂಥಾ ಗಾರ್ಹ ಪತ್ಯ ಋಕ್‌ಪೃಥಿವೀ ರಥಂತರಮನ್ವಾಹಾರ್ಯಪಚನಂ**

**ಯಜುರನ್ತರಿಕ್ಷಂ ವಾಮದೇವ್ಯಮಾಹವನೀಯಃ ಸಾಮ ಸುವರ್ಗೋ ಲೋಕೋ ಬೃಹತ್ತಸ್ಮಾದಗ್ನೀನ್ ಪರಮಂ ವದಂತಿ ॥**

ವೈದಿಕಪರಿಭಾಷೆಯಂತೆ ಅಗ್ನಿಗಳು ಮೂವರು (1) ಗಾರ್ಹಪತ್ಯ (2) ಆಹವನೀಯ (3) ದಕ್ಷಿಣಾಗ್ನಿ–ಇವೇ ಯಜ್ಞದಲ್ಲಿ ಆರಾಧಿಸಲ್ಪಡುತ್ತವೆ. ಆದ್ದರಿಂದ ತ್ರೇತಾಗ್ನಿಗಳೆಂಬ ಈ ಮೂವರನ್ನು ತ್ರಯೀವಿದ್ಯೇ–ವೇದವಿದ್ಯೆ ಎಂದು ಕರೆಯಲಾಗಿದೆ. ಹಾಗೂ ದೇವಯಾನಮಾರ್ಗವೆಂದೂ ಕರೆದಿದೆ. ಏಕೆಂದರೆ ಯಾಗಾದಿಗಳ ಮೂಲಕ ಇವು ದೇವತ್ವಕ್ಕೆ ಯಜಮಾನನ್ನು ಒಯ್ಯುತ್ತವೆ. ಮತ್ತು ಗಾರ್ಹಪತ್ಯಾಗ್ನಿಯು ಋಗ್ವೇದರೂಪನು. ಪೃಥಿವೀಲೋಕರೂಪನೂ ರಥಂತರವೆಂಬ ಸಾಮರೂಪನೂ ಆಗಿರುವನು. ಇದೇ ರೀತಿಯಾಗಿ ದಕ್ಷಿಣಾಗ್ನಿಯು ಅಥವಾ ಅನ್ವಾಹಾರ್ಯಪಚನವೆಂಬ ಮತ್ತೊಂದು ಹೆಸರುಳ್ಳ ಈತನು ಯಜುರ್ವೇದರೂಪನೂ ಅಂತರಿಕ್ಷಲೋಕ, ವಾಮದೇವ್ಯಸಾಮಾತ್ಮಕನೂ ಆಗಿರುವನು. ಆಹವನೀಯನು ಸಾಮವೇದರೂಪನೂ ಸ್ವರ್ಗಲೋಕ ಹಾಗೂ ಬೃಹತ್ತೆಂಬ ಸಾಮರೂಪನೂ ಆಗಿರುವನು. ಇವುಗಳನ್ನು ಈ ಮಂತ್ರದಲ್ಲಿ ತಿಳಿಸಿದೆ. ಹೀಗೆ ತ್ರೇತಾಗ್ನಿಗಳು ವೇದಪ್ರಸಿದ್ಧರಾಗಿರುವದರಿದ ಇವರ ಆರಾಧನೆಯು ಶ್ರೇಯಃಪದವು. ಮತ್ತು ಕರ್ಮಾಧಿಕಾರಿಗಳಾದ ದ್ವಿಜರಿಗೆ ಅಗ್ನಿಯೇ ಪ್ರತ್ಯಕ್ಷ ದೇವತೆಯು. ಅವನನ್ನು ಪೂಜಿಸುವದಕ್ಕಿಂತ ಹೆಚ್ಚಿನ ಪೂಜೆ ಯಾವದೂ ಇಲ್ಲ. ಹೀಗೆ ಅಗ್ನಿಯನ್ನೇ ಪರಮನಾಗಿ ತಿಳಿದು ಆತನು ರೂಪತ್ರಯಗಳಾದ ತ್ರೇತಾಗ್ನಿಗಳನ್ನು ಸೇವಿಸುವದೇ ಪರಮಪರುಷಾರ್ಥವೆಂಬ ಪ್ರಜಾಪತಿಯು ಉಪದೇಶಿಸಿದನು.

ಈಗ ಪ್ರಜಾಪತಿಯು ಅಗ್ನಿಹೋತ್ರವೆಂಬ ಕರ್ಮವೇ ಪರಮವೆಂದು ತಿಳಿಸುತ್ತಾನೆ.

**ಓಂ ॥ ಅಗ್ನಿಹೋತ್ರಂ ವೈ ಸಾಯಂ ಪ್ರಾತಃ ಗೃಹಾಣಾಂ ನಿಷ್ಕೃತಿಃ ಸ್ವಿಷ್ಟಂ ಸುಹುತಂ ಯಜ್ಞಕ್ರತೂನಾಂ ಪ್ರಾಯಣಗ್ಂ ಸುವರ್ಗಸ್ಯ ಲೋಕಸ್ಯ ಜ್ಯೋತಿಸ್ತಸ್ಮಾದಗ್ನಿಹೋತ್ರಂ ಪರಮಂ ವದಂತಿ ॥**

ಅಗ್ನಿಹೋತ್ರವೆಂಬುದು ಒಂದು ಶ್ರೌತಕರ್ಮವು ಹಾಗೂ ನಿತ್ಯಕರ್ಮವು. ಆದ್ದರಿಂದ ಗೃಹಸ್ಥನಾದವನು ಅಗ್ನಿಯನ್ನು ಧಾರಯಾಗ್ನಿಯಾಗಿ ಸ್ಥಾಪಿಸಿಕೊಂಡು ಪ್ರತಿಹಗಲೂ ರಾತ್ರೆಯೂ ಆ ಅಗ್ನಿಯಲ್ಲಿ ಹೋಮವನ್ನು ಮಾಡಬೇಕು. ಅಗ್ನಿಯೇ ಆರಿಹೋಗದಂತೆ ಸದಾಕಾಲವೂ 365 ದಿನಗಳೂ ಕಾಪಾಡಿಕೊಂಡಿರುವದೇ ಧಾರಯಾಗ್ನಿಯೆನಿಸುವದು. ಗೃಹದಲ್ಲಿ ವಾಸವಾಗಿರುವ ಗಾರ್ಹಪತ್ಯನೆಂಬ ಅಗ್ನಿಗೆ

ಪ್ರತಿದಿನವೂ ಅಹೋರಾತ್ರಿಗಳಲ್ಲಿ ಆಹುತಿಗಳನ್ನು ಕೊಡುವದು ನಿಷ್ಕೃತಿಯೆನಿಸುವದು. ನಿಷತಿ ಎಂದರೆ ದೇವತೆಗಳು ನಮಗೆ ಮಳೆಬೆಳೆ, ಸುಭಿಕ್ಷಾದಿಗಳನ್ನೂ ಪತ್ನೀಪುತ್ರಪಶ್ವಾದಿ ಸಂಪತ್ತನ್ನೂ ಆಯುರಾರೋಗ್ಯಬಲಬುದ್ಧ್ಯಾದಿಗಳನ್ನೂ ಕೊಟ್ಟದ್ದಕ್ಕೆ ಪ್ರತಿಯಾಗಿ ಕೃತಜ್ಞತೆಯನ್ನೂ ಸೂಚಿಸಿ ಸಮರ್ಪಿಸುವ ಪೂಜೆಯು–ಎಂದರ್ಥ. ಅಗ್ನಿಯನ್ನು ಗೃಹದಲ್ಲಿ ಸ್ಥಾಪಿಸಿ ಕಾಲಕಾಲಕ್ಕೆ ಆಹುತಿಗಳನ್ನು ನೀಡದಿದ್ದರೆ ಹಸಿದಿರುವ ಅಗ್ನಿಯು ಮನೆಯನ್ನೇ ಸುಟ್ಟು ನಾಶಗೊಳಿಸಿಬಿಡುವನು. ಆದ್ದರಿಂದ ಪ್ರತಿದಿನ ಎರಡೂ ವೇಳೆಯಲ್ಲಿ ಅಧಿಕಾರಿಯಾದವನು ಅಗ್ನಿ ಹೋತ್ರವನ್ನು ಮಾಡಬೇಕು ಎಂದು ಪ್ರಜಾಪತಿಯೂ ತಿಳಿಸುತ್ತಿದ್ದಾನೆ, ಮುಂದುವರೆದು ಹೀಗೆನ್ನುತ್ತಾನೆ. ಅಗ್ನಿಹೋತ್ರವು ಸ್ವಿಷ್ಟವೂ ಸುಹುತವೂ ಆಗಿರುವದು. ಇದು ಶೋಭನಯಾಗವೆನಿಸುವದು ; ಹಾಗೂ ಶೋಭನವಾದ ಹೋಮವು ಎಂದರ್ಥ. ಆದ್ದರಿಂದಲೇ ಯಜ್ಞಯಾಗಾದಿಗಳಿಗೆಲ್ಲ ಇದು ಪ್ರಾಯಣ–ಪ್ರಾರಂಭವು ಎಂದರ್ಥ. ಯಜ್ಞಗಳು ಏಳು, ಯಾಗಗಳು ಏಳು–ಎಂದು ಮೀಮಾಂಸಾಶಾಸ್ತ್ರದಲ್ಲಿ ತಿಳಿಸಿದೆ. ಸೋಮರಸದ ವಿನಿಯೋಗವುಳ್ಳವು ಯಾಗಗಳೆನಿಸುವವು. (1) ಅಗ್ನಿಷ್ಟೋಮ (2) ಅತ್ಯಗ್ನಿಷ್ಟೋಮ (3) ಉಕ್ಥ್ಯ (4) ಷೋಡಶೀ (5) ವಾಜಪೇಯ (6) ಅತಿರಾತ್ರ (7) ಅಪ್ತೋರ್ಯಾಮ ಎಂಬಿವೇ ಯಾಗಗಳು. ಸೋಮರಸವಿಲ್ಲದವುಗಳು ಯಜ್ಞಗಳೆನಿಸುವವು. (1) ಅಗ್ನ್ಯಾಧೇಯ (2) ಅಗ್ನಿಹೋತ್ರ (3) ದರ್ಶಪೂರ್ಣಮಾಸ (4) ಆಗ್ರಯಣ (5) ಚಾತುರ್ಮಾಸ್ಯ (6) ನಿರೂಢಪಶುಬಂಧ (7) ಸೌತ್ರಾಮಣಿ–ಇವು ಹವಿರ್ಯಜ್ಞಗಳೆನಿಸುವವು. ಈ ಎಲ್ಲಾ ಯಜ್ಞಯಾಗಗಳನ್ನೂ ಮಾಡಬೇಕಾದರೆ ಆ ಕರ್ತೃವು ಅಗ್ನಿಹೋತ್ರಿಯಾಗಿರಲೇಬೇಕು. ಆದ್ದರಿಂದ ಅಗ್ನಿಹೋತ್ರವು ಎಲ್ಲಾ ಯಜ್ಞಗಳಿಗೂ ಪ್ರಥಮವು ಎಂದು ಹೇಳಿದೆ. ಹಾಗೆಯೇ ಅದು ಸ್ವರ್ಗಲೋಕವನ್ನು ಬೆಳಗುವ ಜ್ಯೋತಿಯು ಎಂದೂ ಹೊಗಳಲಾಗಿದೆ. ಸ್ವರ್ಗಲೋಕಕ್ಕೆ ಯಜಮಾನನ್ನು ಕರೆದೊಯ್ಯುವ ದಾರಿದೀಪವೇ ಅಗ್ನಿಹೋತ್ರವು. ಆದ್ದರಿಂದ ಅಗ್ನಿಹೋತ್ರವು ಪರಮವೆನಿಸಿದೆ–ಎಂದು ಪ್ರಜಾಪತಿಯು ತಿಳಿಸಿದನು.

ಈಗ ಪ್ರಜಾಪತಿಯು ಯಜ್ಞವೆಂಬ ಸಾಧನವನ್ನು ತಿಳಿಸುತ್ತಾನೆ.

**ಓಂ ॥ ಯಜ್ಞ ಇತಿ ಯಜ್ಞೇನ ಹಿ ದೇವಾ ದಿವಂಗತಾ ಯಜ್ಞೇನಾಸುರಾನ್ ಅಪಾನುದಂತ ಯಜ್ಞೇನ ದ್ವಿಷನ್ತೋ ಮಿತ್ರಾ ಭವಂತಿ ಯಜ್ಞೇ ಸರ್ವಂ ಪ್ರತಿಷ್ಠಿತಂ ತಸ್ಮಾದ್ ಯಜ್ಞಂ ಪರಮಂ ವದಂತಿ ॥**

ಅಗ್ನಿಹೋತ್ರವನ್ನು ಹೊಗಳಿದ್ದರಿಂದಲೇ ಯಜ್ಞವನ್ನೂ ಸ್ತುತಿಸಿದಂತಾಗಿದೆ. ಆದರೂ ಅದಕ್ಕೂ ಹೆಚ್ಚಿನದಾದ ಬೇರೆಬೇರೆಯ ಯಜ್ಞಗಳು ವೇದದಲ್ಲಿ ಹೇಳಲ್ಪಟ್ಟಿವೆ.

ಅವುಗಳನ್ನೂ ಕೂಡ ಕಾಮರಹಿತರಾಗಿ ಮಾಡುವಂಥವರಿಗೆ ಶ್ರೇಯಸ್ಸಾಧನ ಗಳಾಗುವವು– ಎಂದು ಇಲ್ಲಿ ತಿಳಿಸಲಾಗಿದೆ. ವೇದದ ಕರ್ಮಕಾಂಡದಲ್ಲಿ ವಿಧಿಸಿರುವ ಅನೇಕ ಯಜ್ಞಗಳು ಕಾಮ್ಯವೇ ನಿಜ. ಅವುಗಳು ದೇವತೆಗಳಿಗೆ ಸ್ವರ್ಗಲೋಕವನ್ನೂ ದಿಕ್ಪಾಲಾದಿಗಳ ಸ್ಥಾನವನ್ನೂ ಒದಗಿಸಿಕೊಟ್ಟಿವೆ. ಇಂದ್ರನು ದೇವರಾಜನಾದದ್ದು ಯಜ್ಞಗಳ ಫಲವಾಗಿಯೇ–ಎಂಬಿದು ಪ್ರಸಿದ್ಧವಾಗಿದೆ. ಅವನಿಗೆ ಶತಕ್ರುವೆಂದೇ ಹೆಸರಿದೆ. ಹೀಗೆ ದೇವತೆಗಳಿಗೆ ಪುರುಷಾರ್ಥಸಾಧನವಾದ ಯಜ್ಞವು ಒಮ್ಮೊಮ್ಮೆ ಅವರ ಶತ್ರುಗಳಾದ ರಾಕ್ಷಸರನ್ನು ಗೆಲ್ಲುವದಕ್ಕೂ ಸಾಧನವಾಗಿರುತ್ತದೆ. ಮತ್ತು ದ್ವೇಷಿಸುವವರನ್ನು ಶಾಂತಗೊಳಿಸಲು ಸಹ ಯಜ್ಞವು ಸಹಾಯಕವಾಗುವದು. ಅನಂತರ ಅವರು ಮಿತ್ರರೇ ಆಗಿಬಿಡುವರು. ಹೀಗೆ ಐಹಿಕಪಾರಲೌಕಿಕ ಸುಖಸಾಧನವಾಗಿರುವ ಯಜ್ಞವು ನಿಷ್ಕಾಮವಾಗಿ ಭಗವಂತನ ಪ್ರೀತಿಗಾಗಿ ಆಚರಿಸಲ್ಪಟ್ಟರೆ ಮುಕ್ತಿಸಾಧನವೂ ಆಗಲಿದೆ. ಈ ಯಜ್ಞವು ಶ್ರೌತಕರ್ಮವೆನಿಸಿರುವಂತೆ ಸ್ಮಾರ್ತಕರ್ಮವೆಂದೂ ಎಣಿಸಲ್ಪಟ್ಟಿದೆ. ಹೇಗೆಂದರೆ ಪೂಜಾಯಜ್ಞ, ಜಪಯಜ್ಞ, ಪಾರಾಯಣಯಜ್ಞ, ನಾಮಕೀರ್ತನಯಜ್ಞ– ಹೀಗೆ ಎಲ್ಲವೂ ಆಚರಿಸಬಹುದಾದ ಸುಲಭವಾದ ಯಜ್ಞಗಳೂ ಇವೆ. ಅವುಗಳನ್ನೆಲ್ಲ ಸ್ಮೃತಿಪುರಾಣಗಳಲ್ಲಿ ಶಿಷ್ಯರು ವಿವರಿಸಿದ್ದಾರೆ. ಈ ರೀತಿಯಾಗಿ ಎಲ್ಲಾ ವಿಧವಾದ ಶ್ರೌತಸ್ಮಾರ್ತಯಜ್ಞಗಳೂ ಸಾಧಕರಿಗೆ ಶ್ರೇಯಃಸಂಪಾದನೆಗೆ ಅಗತ್ಯವಾಗಿರುವದರಿಂದ ಪ್ರಜಾಪತಿಯು ಯಜ್ಞವನ್ನೇ ಪರಮವೆಂದು ಉಪದೇಶಿಸಿದನು.

**ಓಂ ॥ ಮಾನಸಂ ವೈ ಪ್ರಾಜಾಪತ್ಯಂ ಪವಿತ್ರಂ ಮಾನಸೇನ ಮನಸಾ**
**ಸಾಧು ಪಶ್ಯತಿ ಮಾನಸಾ ಋಷಯಃ ಪ್ರಜಾ ಅಸೃಜನ್ತ**
**ಮಾನಸೇ ಸರ್ವಂ ಪ್ರತಿಷ್ಠಿತಂ ತಸ್ಮಾನ್ಮಾನಸಂ ಪರಮಂ ವದಂತಿ ॥**

ದಾನದಿಂದ ಯಜ್ಞದವರೆಗಿನ ಬಹಿರಂಗಸಾಧನಗಳನ್ನು ವಿವರಿಸಿದ ಅನಂತರ ಪ್ರಜಾಪತಿಯು ಈಗ ಮಾನಸ–ಎಂದರೆ ಮನಸ್ಸಿನಿಂದಲೇ ಮಾಡಬೇಕಾದ ಧ್ಯಾನ, ಅಥವಾ ಉಪಾಸನೆಯೆಂಬ ಅಂತರಂಗಸಾಧನವನ್ನು ವಿವರಿಸಲು ಹೊರಟಿರುತ್ತಾನೆ. ಮಾನಸವೆನಿಸಿರುವ ಧ್ಯಾನವು ಪ್ರಜಾಪತಿಯ ಸ್ಥಾನವನ್ನು ಪಡೆಯಲು ಉಪಾಯವಾಗಿರುವದು. ಪ್ರಜಾಪತಿ ಅಥವಾ ಹಿರಣ್ಯಗರ್ಭನನ್ನು ಮನೋಮಯನೆಂದು ಅವನ ಲೋಕವನ್ನು ಸತ್ಯಲೋಕವೆಂದೂ ಕರೆಯುವರು. ಕರ್ಮಕಾಲಕ್ಕೆ ಕೂಡ ವೈದಿಕರು ಪ್ರಜಾಪತಿದೇವತಾಕವಾದ ಮಂತ್ರವನ್ನು ಮನಸ್ಸಿನಲ್ಲೇ ಪಠಿಸುತ್ತಾರೆ. ಆದ್ದರಿಂದ ಮಾನಸಿಕವಾದ ಧ್ಯಾನವಿಲ್ಲದೆ ಪ್ರಜಾಪತಿಲೋಕ ಪ್ರಾಪ್ತಿಯಾಗಲಾರದು. ಆ ಲೋಕದಲ್ಲಿರುವ ಪದಾರ್ಥಗಳೂ ಭೋಗಗಳೂ ಮಾನಸಿಕವಾದವುಗಳೇ ಎಂದು

ಉಪನಿಷತ್ತುಗಳಲ್ಲಿ ತಿಳಿಸಿಯೂ ಇದೆ. ಇಂಥ ಬ್ರಹ್ಮಲೋಕಪ್ರಾಪ್ತಿಸಾಧನವಾದ ಉಪಾಸನೆಯು ಪವಿತ್ರವು ಎಂದರೆ ಚಿತ್ತಶುದ್ಧಿಕರವಾಗಿದೆ. ಹಾಗೆಯೇ ಉಪಾಸನೆಯ ಬಲದಿಂದ ಸಾಧಕನು ಸಾಧು–ಪಶ್ಯತಿ ಎಂದರೆ ಭೂತಭವಿಷ್ಯದ್ವರ್ತಮಾನಗಳನ್ನೆಲ್ಲಾ ಅರಿಯುತ್ತಾನೆ–ನೋಡಬಲ್ಲನು'' ಎಂದರ್ಥ. ಮನೋನಿಗ್ರಹವುಳ್ಳ ಯೋಗಿಯು ಪಡೆಯುವ ಅಣಿಮಾದಿಸಿದ್ಧಿಗಳನ್ನು ಯೋಗಶಾಸ್ತ್ರದಲ್ಲಿ ವಿವರವಾಗಿ ತಿಳಿಸಲಾಗಿದೆ. ಮಾನಸವೆನಿಸಿರುವ ಯೋಗಸಾಧನವು ಹಿಂದೆ ಮಹರ್ಷಿಗಳಿಗೆ ಕೈವಶವಾಗಿತ್ತು. ಅದರ ಬಲದಿಂದಲೇ ಅವರು ಪ್ರಜಾಸಂತಾನವನ್ನೂ ಪಡೆದುಕೊಳ್ಳುತ್ತಿದ್ದರು. ಚಿತ್ತಶುದ್ಧಿಯೇ ಅಧಿಕವಾಗಿದ್ದ ಆದಿಕಾಲದಲ್ಲಿ ಪ್ರಜಾಪತಿಗಳು ಮಾನಸಸೃಷ್ಟಿಯನ್ನೇ ಮಾಡುತ್ತಿದ್ದರು. ಅವರು ಮನಸ್ಸಿನಲ್ಲಿ ಬಯಸಿದರೆ ಸಾಕು ಕಾಮಗಳೆಲ್ಲ ನೆರವೇರಿಬಿಡುತ್ತಿದ್ದವು. ಹೀಗೆ ಮಾನಸದಲ್ಲಿ ಎಲ್ಲಾ ಪುರುಷಾರ್ಥಗಳೂ ಅಡಕವಾಗಿವೆ. ಬಹಿರಂಗವಾಗಿ ಮಡುವ ಯಜ್ಞಾದಿಗಳಿಗಿಂತಲೂ ಅಂತರಂಗವಾಗಿ ಮಾಡುವ ಉಪಾಸನೆಯು ಹೆಚ್ಚಿನದೆಂಬುದು ಎಲ್ಲರಿಗೂ ಸಮ್ಮತವೇ ಆಗಿದೆ. ಆದ್ದರಿಂದ ಉಪಾಸನೆಯನ್ನು ಪರಮವೆನ್ನುವರು–ಎಂದು ಪ್ರಜಾಪತಿಯು ತಿಳಿಸಿದನು.

ಈಗ ಸಂನ್ಯಾಸವೆಂಬ ಸಾಧನವನ್ನು ತಿಳಿಸಲಾಗುವದು.

**ಓಂ ॥ ನ್ಯಾಸ ಇತ್ಯಾಹುರ್ಮನೀಷಿಣೋ ಬ್ರಹ್ಮಾಣಂ ಬ್ರಹ್ಮಾ ವಿಶ್ವಃ ಕತಮಃ ಸ್ವಯಂಭು ಪ್ರಜಾಪತಿಃ ಸಂವತ್ಸರ ಇತಿ ಸಂವತ್ಸರೋಽಸಾವಾದಿತ್ಯೋ ಯ ಏಷ ಆದಿತ್ಯೇ ಪುರುಷಃ ಸ ಪರಮೇಷ್ಠೀ ಬ್ರಹ್ಮಾತ್ಮಾ ॥**

ಕರ್ಮಗಳೆಲ್ಲವೂ ಕಾಮಪ್ರಯುಕ್ತವಾಗಿರುವದರಿಂದ ಕಾಮಗಳಿಲ್ಲದವನು ಅವುಗಳನ್ನು ಬಿಡುವದೇ ಯುಕ್ತವಾಗಿದೆ. ಆದರೆ ಕಾಮಗಳೆಲ್ಲ ಪೂರ್ಣವಾಗಿ ದೊರೆತಿದ್ದರೆ ಮಾತ್ರ ಅಕಾಮನಾಗಬಹುದು. ಪರಬ್ರಹ್ಮವನ್ನು ಪಡೆದವನಿಗೆ ಮಾತ್ರ ಸರ್ವಕಾಮಗಳೂ ದೊರಕಿರುತ್ತವೆ; ಏಕೆಂದರೆ ಎಲ್ಲವೂ ಬ್ರಹ್ಮವೇ ಆಗಿರುವದರಿಂದ ಆತ್ಮನಿಗಿಂತ ಅನ್ಯವಾಗಿ ಕಾಮಗಳಿರುವದಿಲ್ಲ. ಹೀಗೆ ಆತ್ಮಕಾಮನಾದರೆ ಆಪ್ತಕಾಮನಾಗಿ ಅಕಾಮನಾಗುವನು. ಅವನಿಗೆ ಸಂನ್ಯಾಸವೇ ಸ್ವಭಾವವಾಗಿರುವದು. ಇದೇ ಬ್ರಹ್ಮವು. ಆದ್ದರಿಂದ ನ್ಯಾಸವನ್ನು–ಬಲ್ಲವರು ಬ್ರಹ್ಮವೆಂದೇ ಕರೆಯುವರು–ಎಂದು ತಿಳಿಸಿದೆ. ಈ ಬ್ರಹ್ಮವೇ ಹಿರಣ್ಯಗರ್ಭನಾಗಿಯೂ ತೋರಿಕೊಂಡಿದೆ. ಆತನನ್ನೇ ಬ್ರಹ್ಮಾ–ಎಂದು ಇಲ್ಲಿ ಪರಾಮರ್ಶಿಸಿದೆ. ಆ ಪ್ರಜಾಪತಿಯು ವಿಶ್ವವೆಲ್ಲವನ್ನೂ ವ್ಯಾಪಿಸಿಕೊಂಡಿರವನು. ಆತನು ಕತಮನು ಎಂದರೆ ಅತಿಶಯವಾದ ಸೂಕ್ಷ್ಮರೂಪವುಳ್ಳವನು. ಮತ್ತು ಸ್ವಯಂಭುವೂ ಆಗಿರುವನು. ಆತನು

ಅತೀಂದ್ರಿಯನೂ, ಅಗ್ರಾಹ್ಯನೂ, ಸೂಕ್ಷ್ಮನೂ, ಅವ್ಯಕ್ತನೂ, ಸನಾತನನೂ, ಸರ್ವಭೂತಮಯನೂ, ಅಚಿಂತ್ಯನೂ ಆಗಿದ್ದು ತಾನೇ ತನ್ನಿಂದಲೇ ಉಂಟಾದನು– ಎಂದು ಮನುಸ್ಮೃತಿಯಲ್ಲಿ ತಿಳಿಸಿದೆ. ಮಾತಾಪಿತೃಗಳ ಸಂಬಂಧವಿಲ್ಲದೆ ಉಂಟಾದನು ಎಂದಭಿಪ್ರಾಯ. ಪ್ರಜೆಗಳನ್ನು ಪರಿಪಾಲನೆಮಾಡುವದರಿಂದ ಪ್ರಜಾಪತಿಯೂ ಆಗಿರುವನು. ಹಾಗೆಯೇ ಕಾಲಾತ್ಮಕನಾದ್ದರಿಂದ ಸಂವತ್ಸರನೆನಿಸಿರುವನು. ಅವನೇ ಆದಿತ್ಯನು. ಏಕೆಂದರೆ ಆದಿತ್ಯನ ಸಂಚಾರದಿಂದಲೇ ಸಂವತ್ಸರದ ಎಣಿಕೆಯಾಗುತ್ತದೆ. ಸುಪ್ರಸಿದ್ಧವಾಗಿರುವ ಈ ಆದಿತ್ಯಮಂಡಲದಲ್ಲಿ ಪುರುಷನೆನಿಸಿರುವ ಪರಮೇಷ್ಠಿಯಾದ ಈ ಹಿರಣ್ಯಗರ್ಭನು ಇದ್ದುಕೊಂಡಿರುವನು. ಅವನೇ ಎಲ್ಲರಿಗೂ ಆತ್ಮನೆನಿಸಿರುವನು. ಈ ಹಿರಣ್ಯಗರ್ಭಾತ್ಮನ ಔಪಾಧಿಕರೂಪಗಳೇ ದೇವತೆಗಳೆನಿಸಿರುವರು. ಆಯಾ ದೇವತೆಗಳ ಸಾಯುಜ್ಯಪ್ರಾಪ್ತಿಗೆ ಆಯಾ ದೇವತೋಪಾಸನೆಗಳು ಸಾಧನವಾಗಿರುವವು. ಆದರೆ ಎಲ್ಲಾ ದೇವತೆಗಳ ಸಮಷ್ಟಿಯಾದ ಹಿರಣ್ಯಗರ್ಭನಿಗೂ ಪ್ರತ್ಯಗಾತ್ಮನೆನಿಸಿರುವ ಪರಬ್ರಹ್ಮವನ್ನು ಪಡೆಯಲು ಉಳಿದ ದೇವತಾರಾಧನ–ಚಿಂತನರೂಪವಾದ ಶಾರೀರಕ ಮಾನಸಿಕ ಕರ್ಮಗಳನ್ನೆಲ್ಲ ಸಂನ್ಯಾಸಮಾಡಿ ಕೇವಲ ಆತ್ಮಚಿಂತನೆಯಲ್ಲೇ ನೆಲೆಗೊಳ್ಳುವದೇ ಸಾಧನವಾಗಿರುವದು. ಇಂಥ ಸಂನ್ಯಾಸವು ಸಾಧನಗಳಲ್ಲೆಲ್ಲ ಮೂರ್ಧನ್ಯವೂ ಸಕಲಸಾಧನಗಳ ಸಾರವೂ ಆಗಿದೆ ಎಂದು ಪ್ರಜಾಪತಿಯು ತಿಳಿಸಿರುತ್ತಾನೆ.

**ಓಂ ॥ ಯಾಭಿರಾದಿತ್ಯಸ್ತಪತಿ ರಶ್ಮಿಭಿಃ ತಾಭಿಃ ಪರ್ಜನ್ಯೋ ವರ್ಷತಿ ಪರ್ಜನ್ಯೇನೌಷಧಿವನಸ್ಪತಯಃ ಪ್ರಜಾಯಂತ ಓಷಧಿ ವನಸ್ಪತಿಭಿರನ್ನಂ ಭವತಿ ॥**

ಈಗ ಪರಬ್ರಹ್ಮವೇ ಹಿರಣ್ಯಗರ್ಭನಾಗಿಯೂ ಆದಿತ್ಯನಾಗಿಯೂ ತೋರಿಕೊಂಡು ಜಗದನುಗ್ರಹವನ್ನು ಮಾಡುತ್ತಿದೆ. ವ್ಯವಹಾರದಶೆಯಲ್ಲಿ ಎಲ್ಲವೂ ಆದಿತ್ಯನ ಅನುಗ್ರಹದಿಂದಲೇ ಜೀವನವನ್ನು ನಡೆಸುತ್ತಾರೆ. ಆದರೆ ಜೀವನದ ಉದ್ದೇಶವು ಆನಂದರೂಪನಾದ ಪರಮಾತ್ಮನ ಜ್ಞಾನದಿಂದಲೇ ಪರಿಪೂರ್ಣವಾಗುವದು–ಎಂದು ತಿಳಿಸುವದಕ್ಕಾಗಿ ಆದಿತ್ಯನು ಮಾಡುವ ಜಗದ್ರಕ್ಷಣಕಾರ್ಯವನ್ನು ಮೊದಲು ಪ್ರಸ್ತಾಪ ಮಾಡಲಾಗುವದು. ಆದಿತ್ಯನು ತನ್ನ ಪ್ರಚಂಡಕಿರಣಗಳಿಂದ ಬೆಳಗುವಾಗ ಅವುಗಳ ಮೂಲಕ ಭೂಮಿಯ ಮೇಲಿರುವ ನೀರನ್ನೆಲ್ಲ ಹೀರಿಕೊಳ್ಳುವನು. ಆ ನೀರೇ ಪರ್ಜನ್ಯ ಎಂದರೆ ಮಳೆಯಾಗಿ ಮತ್ತೆ ಭೂಮಿಯ ಮೇಲೆಯೇ ಸುರಿಯುತ್ತದೆ. ಹೀಗೆ ಮಳೆ ಬಂದರೆ ಮಾತ್ರವೇ ಗಿಡಮರಗಳೂ ಸಸ್ಯಗಳೂ ಹುಟ್ಟಿ ಬೆಳೆಯುತ್ತವೆ. ಆ ಸಸ್ಯರಾಶಿಯಿಂದ ಪ್ರಾಣಿಗಳು ತಿನ್ನುವ ಅನ್ನವುಂಟಾಗುತ್ತದೆ– ಎಂದು ತಿಳಿಸಿದೆ. ಹೀಗೆ ಆದಿತ್ಯನು ಜಗತ್ತನ್ನೆಲ್ಲ

ಪೋಷಿಸುವದರಿಂದ ಪೂಷಾ–ಎಂದು ಅವನನ್ನು ಕರೆಯುವರು. ಆತನೇ ಪ್ರಜಾಪತಿಯೆಂದೂ ಹೊಗಳಲ್ಪಟ್ಟಿರುವನು.

ಓಂ ॥ ಅನ್ನೇನ ಪ್ರಾಣಾಃ ಪಾಣ್ಯೈರ್ಬಲಂ ಬಲೇನ ತಪಸ್ತಪಸಾ ಶ್ರದ್ಧಾ
ಶ್ರದ್ಧಯಾ ಮೇಧಾ ಮೇಧಯಾ ಮನೀಷಾ ಮನೀಷಯಾ
ಮನೋ ಮನಸಾ ಶಾಂತಿಶ್ಶ್ಯಾಂತ್ಯಾ ಚಿತ್ತಂ ಚಿತ್ತೇನ ಸ್ಮೃತಿಗ್ಂ
ಸ್ಮೃತ್ಯಾ ಸ್ಮಾರಗ್ಂ ಸ್ಮಾರೇಣ ವಿಜ್ಞಾನಂ ವಿಜ್ಞಾನೇನಾತ್ಮಾನಂ
ವೇದಯತಿ ತಸ್ಮಾದನ್ನಂ ದದತ್ ಸರ್ವಾಣ್ಯೇತಾನಿ ದದಾತಿ ॥

ಅನ್ನವನ್ನು ಉಂಡು ಬದುಕುವದು ಪ್ರಾಣಿಗಳ ಧರ್ಮವೆನೋ ಸರಿ; ಆದರೆ ಪ್ರಾಣಿಗಳಲ್ಲಿ ಶ್ರೇಷ್ಠನಾದ ಮನುಷ್ಯನು ಕೇವಲ ಬದುಕನ್ನೇ ಗುರಿಯಾಗಿಟ್ಟುಕೊಳ್ಳಬಾರದು. ಆ ಬದುಕು ಆನಂದದಲ್ಲಿ ಪರ್ಯವಸಾನವಾಗಬೇಕು. ಅದಕ್ಕೆ ತಕ್ಕಂತೆ ಅನ್ನವನ್ನು ಉಪಯೋಗಿಸಿಕೊಳ್ಳಬೇಕು. ಆಗಲೇ ಅನ್ನವನ್ನು ಉಂಡದ್ದು ಸಾರ್ಥಕವಾಗಲಿದೆ. ಹೇಗೆಂದರೆ: ಅನ್ನವನ್ನು ಊಟಮಾಡಿದರೆ ಪ್ರಾಣಧಾರಣೆಯಾಗುತ್ತೆ. ಪ್ರಾಣದಿಂದ ಬಲವು ಬರುತ್ತದೆ. ಬಲವಿದ್ದಲ್ಲಿ ತಪಸ್ಸು ಮಾಡಲು ಸಾಧ್ಯವಾಗುವದು. ತಪಸ್ಸನ್ನು ಕೈಗೊಳ್ಳುವದರಿಂದ ತತ್ತ್ವಜ್ಞಾನವಿಷಯದಲ್ಲಿ ಶ್ರದ್ಧೆಯುಂಟಾಗುವದು. ಶ್ರದ್ಧೆಯಿಂದ ಗುರುಗಳು ಉಪದೇಶಮಾಡಿದ ತತ್ತ್ವದಲ್ಲಿ ಧಾರಣೆಯು (ಮೇಧೆಯು) ಉಂಟಾಗುವದು ಮೇಧೆಯಿಂದ ಮನೀಷೆಯು (ಸದ್ಬುದ್ಧಿಯು) ಉಂಟಾಗುವದು. ಅದರಿಂದ ನಿರಂತರವೂ ತತ್ತ್ವವನ್ನು ಮನನಮಾಡಲು ಸಾಧ್ಯವಾಗುವದು. ಮನನ ಎಂಬುದನ್ನು ಇಲ್ಲಿ ಶ್ರುತಿಯಲ್ಲಿ ಮನ ಎಂದಿದೆ. ಮುಂದೆ ಮನನದಿಂದ ಶಾಂತಿಯು ಲಭಿಸುವದು. ಶಾಂತಿಯೆಂದರೆ ರಾಗದ್ವೇಷಕೋಪಾದಿಗಳು ಮನಸ್ಸಿನಲ್ಲೆದ್ದು ಚಾಂಚಲ್ಯವಾಗುವಿಕೆಯ ತಪ್ಪುವಿಕೆ. ಇಂಥ ಶಾಂತಿಯಿಂದ ಚಿತ್ತವು ಎಂದರೆ ತತ್ತ್ವದ ವಿಷಯದಲ್ಲಿ ಪ್ರಮಾಣಜನ್ಯವಾದ ಜ್ಞಾನವು ಆಗುವದು. ಇದರಿಂದ ಧ್ರುವಾಸ್ಮೃತಿಃ ಎಂದಂತೆ ನಿರಂತರವಾಗಿ ತತ್ತ್ವದ ನೆನಪಾಗುವದು. ಇದರಿಂದ ಸ್ಮಾರವು ಎಂದರೆ ದೃಢವೂ ಪ್ರವಾಹರೂಪವೂ ಆದ ನೆನಪಿನ ಸರಣಿಯುಂಟಾಗಿ ಕಡೆಯಲ್ಲಿ ವಿಜ್ಞಾನದಲ್ಲಿ ಎಂದರೆ ಆತ್ಮಾವಗತಿಯಲ್ಲಿ ನೆಲೆಗೊಳ್ಳುವದು. ಇದರಿಂದ ಆತ್ಮನನ್ನೇ ನಿಶ್ಚಿತವಾಗಿ ಅರಿತುಕೊಂಡುಬಿಡುತ್ತಾನೆ. ಹೀಗೆ ಅನ್ನದಿಂದ ವಿಜ್ಞಾನದವರೆಗೂ ಸೋಪಾನವೂ ಇರುವದರಿಂದ ಅನ್ನವನ್ನುಂಡು ಅರಗಿಸಿಕೊಂಡ ಮಾತ್ರದಿಂದ ಜನ್ಮಸಾರ್ಥಕ್ಯವಾಗಲಾರದು. ಅದು ವಿಜ್ಞಾನದಲ್ಲಿ ಕೊನೆಗೊಳ್ಳುವಂತೆ ಸತತ ಪ್ರಯತ್ನಮಾಡಬೇಕು. ಯಾವನಾದರೂ ಲೋಕದಲ್ಲಿ ಬೇಡಿದವನಿಗೆ ಅನ್ನವನ್ನು

ಕೊಟ್ಟವನಾದರೆ ಅವನು ವಿಜ್ಞಾನದವರೆಗಿನ ಈ ಎಲ್ಲಾ ಸಂಪತ್ತನ್ನೂ ನೀಡಿದವನಾಗುವನು. ಹೀಗೆಂದು ಅನ್ನದಾನವನ್ನು ಮಾಡಿದವನನ್ನು ಇಲ್ಲಿ ಸ್ತುತಿಸಲಾಗಿದೆ.

**ಓಂ ॥ ಅನ್ನಾತ್ ಪ್ರಾಣಾ ಭವಂತಿ ಭೂತಾನಾಂ ಪ್ರಾಣೈರ್ಮನೋ ಮನಸಶ್ಚ ವಿಜ್ಞಾನಂ ವಿಜ್ಞಾನಾದಾನಂದೋ ಬ್ರಹ್ಮಯೋನಿಃ ॥**

ಈಗ ಹಿಂದೆ ಹೇಳಿದ ಅಭಿಪ್ರಾಯವನ್ನೇ ಮತ್ತೊಮ್ಮೆ ಸಂಕ್ಷೇಪಿಸಿ ತಿಳಿಸಲಾಗುತ್ತದೆ. ಅನ್ನದಿಂದ ಪ್ರಾಣಿಗಳ ಜೀವನವು ಸಾಗುತ್ತದೆ. ಪ್ರಾಣಿಗಳಲ್ಲಿ ಮನಸ್ಸುಳ್ಳ ಮನುಷ್ಯರು ಪ್ರಾಣದ ಎಂದರೆ ಆಯುಷ್ಯದ ಸದುಪಯೋಗದಿಂದ ಮನಸ್ಸನ್ನು ವಿಜ್ಞಾನಕ್ಕೆ ಸಿದ್ಧಗೊಳಿಸಿಕೊಳ್ಳುವರು. ವಿಜ್ಞಾನವನ್ನು ಸಂಪಾದಿಸಲಿಲ್ಲವಾದರೆ ಮನಸ್ಸಿರುವ ಮನುಷ್ಯನೂ ಪ್ರಾಣಿಗಳಂತೆಯೇ ಆಗಿಬಿಡುವನು. ಆದ್ದರಿಂದ ಹಾಗಾಗದಂತೆ ಅನ್ನಪ್ರಾಣಗಳ ಸದುಪಯೋಗದಿಂದ ವಿಜ್ಞಾನಿಯಾಗಿ ಪರಿವರ್ತನೆ ಹೊಂದಿದವನಾಗಿ ಅದರಿಂದ ಜಗತ್ಕಾರಣವಾದ ಬ್ರಹ್ಮವನ್ನರಿತು ಆನಂದಸ್ವರೂಪದಲ್ಲಿ ನೆಲೆನಿಲ್ಲಬೇಕು. ಹಾಗೆ ನೆಲೆನಿಂತವನು ತಾನೇ ಬ್ರಹ್ಮವಾಗಿ ಬಿಡುವನು. ಹೀಗೆ ಹಿಂದೆ ತಿಳಿಸಿದ ಸತ್ಯವೇ ಮುಂತಾದ ಹನ್ನೆರಡು ಸಾಧನಗಳಲ್ಲಿ ಕಡೆಯದಾದ ಸಂನ್ಯಾಸವು ಬ್ರಹ್ಮಪದವಿಯನ್ನೇ ಸಾಧಕನಿಗೆ ದೊರಕಿಸಿಕೊಡುವದರಿಂದ ಅದು ಜ್ಞಾನಕ್ಕೆ ಅವಶ್ಯವೆಂದಾಯಿತು. ಅಂಥ ಜ್ಞಾನದಿಂದ ಅರಿತುಕೊಳ್ಳಬೇಕಾಗಿರುವ ಪುರುಷನು ಯಾರೆಂಬುದನ್ನು ಈಗ ತಿಳಿಸಲಾಗುವದು.

**ಓಂ ॥ ಸ ವಾ ಏಷ ಪುರುಷಃ ಪಂಚಧಾ ಪಂಚಾತ್ಮಾ ಯೇನ ಸರ್ವಮಿದಂ ಪ್ರೋತಂ ಪೃಥಿವೀ ಚಾಂತರಿಕ್ಷಂ ಚ ದ್ಯೌಶ್ಚ ದಿಶಶ್ಚಾವಾಂತರದಿಶಾಶ್ಚ ಸ ವೈ ಸರ್ವಮಿದಂ ಜಗತ್ ಸ ಸ ಭೂತಗ್‌ಂ ಸ ಭವ್ಯಮ್ ॥**

ಆ ಈ ಪುರುಷನು ಐದು ವಿಧವಾದ ಕರಣಗಳ ಗುಂಪುಳ್ಳ ಪಂಚಾತ್ಮನಾಗಿರುವನು–ಎಂದರೆ ಇಪ್ಪತ್ತೈದು ತತ್ತ್ವಗಳ ರೂಪನಾಗಿರುವನು. ಶಬ್ದ, ಸ್ಪರ್ಶ, ರೂಪ, ರಸ, ಗಂಧ–ಗಳೆಂಬ ಐದು ವಿಷಯಗಳು. ಪೃಥಿವಿ, ಜಲ, ತೇಜಸ್ಸು, ವಾಯು, ಆಕಾಶ–ಗಳೆಂಬ ಐದು ಮಹಾಭೂತಗಳು. ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ– ಎಂಬ ಐದು ಜ್ಞಾನೇಂದ್ರಿಯಗಳು. ವಾಕ್ಕು, ಪಾಣಿ, ಪಾದ , ಪಾಯು , ಉಪಸ್ಥ–ಗಳೆಂಬ ಐದು ಕರ್ಮೇಂದ್ರಿಯಗಳು. ಪ್ರಾಣ, ಅಪಾನ, ವ್ಯಾನ, ಉದಾನ, ಸಮನ–ಗಳೆಂಬ ಐದು ವಾಯುಗಳು–ಹೀಗೆ ಇಪ್ಪತ್ತೈದು ವಸ್ತುಗಳ ರೂಪದಲ್ಲಿಯೂ

ಇದ್ದುಕೊಂಡು ಪಂಚಧಾ–ಪಂಚಾತ್ಮನೆನಿಸಿರುವನು. ಪುರಾಣಗಳಲ್ಲಿ ಪಂಚಧಾ ಆತ್ಮನಾದ ಭಗವಂತನನ್ನು ಹೀಗೆ ವರ್ಣಿಸಿದ್ದಾರೆ: 1) ಭೂತಾತ್ಮನು 2) ಇಂದ್ರಿಯಾತ್ಮನು 3) ಪ್ರಧಾನಾತ್ಮನು 4) ಜೀವಾತ್ಮನು 5) ಪರಮಾತ್ಮನು–ಎಂದು ನೀನೊಬ್ಬನೇ ತೋರಿಕೊಳ್ಳುತ್ತಿರುವೆ–ಎಂದು ಒಂದು ಪುರಾಣಶ್ಲೋಕದಲ್ಲಿ ಸ್ತುತಿಸಲಾಗಿದೆ. ಇದೇ ಪಂಚಾತ್ಮನಾಗಿರುವಿಕೆ–ಎಂದರ್ಥ. ಈತನು ಪೃಥಿವೀ, ಅಂತರಿಕ್ಷ, ದ್ಯುಲೋಕ, ದಿಕ್ಕುಗಳು, ಅವಾಂತರದಿಕ್ಕುಗಳು–ಮುಂತಾಗಿ ಎಲ್ಲವನ್ನೂ ಹಾಸುಹೊಕ್ಕಾಗಿ ವ್ಯಾಪಿಸಿರುವನು. ಆದ್ದರಿಂದ ಈ ಜಗತ್ತೆಲ್ಲವೂ ಅವನೇ–ಎಂದಭಿಪ್ರಾಯ. ಮತ್ತು ಭೂತಕಾಲವೂ ಭವಿಷ್ಯತ್ಕಾಲವೂ ಅವನೇ ವರ್ತಮಾನಕಾಲರೂಪನಾಗಿಯಂತೂ ಇದ್ದೇ ಇರುವನಷ್ಟೆ, ಹೀಗೆ ಸರ್ವವ್ಯಾಪಿಯೂ ದೇಶಕಾಲಗಳನ್ನು ವ್ಯಾಪಿಸಿ ಅವುಗಳನ್ನು ಮೀರಿಯೂ ಎಂದೆಂದೂ ಇದ್ದುಕೊಂಡಿರುವ ಮಹಾಪುರುಷನನ್ನೇ ಬ್ರಹ್ಮವಿದರು ತಮ್ಮ ಆತ್ಮನನ್ನಾಗಿ ತಿಳಿದಿರುವರು–ಎಂದರ್ಥ.

ಓಂ ॥ ಜಿಜ್ಞಾಸಕ್ಲೃಪ್ತ ಋತಜಾ ರಯಿಷ್ಠಾ ಶ್ರದ್ಧಾ ಸತ್ಯೋ ಮಹ
ಸ್ವಾನ್ ತಮಸೋಪರಿಷ್ಟಾತ್ ಜ್ಞಾತ್ವಾ ತಮೇವಂ ಮನಸಾ
ಹೃದಾ ಚ ಭೂಯೋ ನ ಮೃತ್ಯುಮುಪಯಾಹಿ ವಿದ್ವಾನ್
ತಸ್ಮಾನ್ನ್ಯಾಸಮೇಷಾಂ ತಪಸಾಮತಿರಿಕ್ತಮಾಹುಃ ॥

ಬ್ರಹ್ಮವನ್ನು ಬಲ್ಲವರು ಸರ್ವವೂ ಆಗುವರು–ಎಂಬ ಮಾತನ್ನು ಕೇಳಿ ಕೆಲವರು ಹೀಗೆ ಆಕ್ಷೇಪಿಸಬಹುದು. ಬ್ರಹ್ಮವಿದರೂ ಸಹ ಎಲ್ಲರಂತೆ ಶರೀರಧಾರಿಗಳಾಗಿ ಪರಿಚ್ಛಿನ್ನರಾಗಿರುತ್ತಾರೆಯೇ ಹೊರತು ಜಗದ್ರೂಪದಿಂದೇನೂ ಕಂಡುಬರುವದಿಲ್ಲವಲ್ಲ? ಎಂದರೆ ಅದಕ್ಕೆ ಇಲ್ಲಿ ಉತ್ತರಿಸಲಾಗಿದೆ. ನಿಜ, ಬಾಹ್ಯದಲ್ಲಿ ಹಾಗೆಯೇ ಸರಿ. ಆದರೆ ಅಂತರ್ಯದಲ್ಲಿ ಅವರ ಜ್ಞಾನವು ಸರ್ವಾತ್ಮಭಾವದಲ್ಲಿಯೇ ನೆಲೆಗೊಂಡಿರುತ್ತದೆ. ಅವರು ವೇದಾಂತಜಿಜ್ಞಾಸೆಯಿಂದ ನಿಶ್ಚಿತವಾದ ಅರಿವುಳ್ಳವರಾಗಿ ಜ್ಞಾನದಿಂದ ಎಲ್ಲವನ್ನೂ ತಮ್ಮಲ್ಲಿ ಕಂಡುಕೊಂಡಿರುತ್ತಾರೆ. ಮತ್ತು ಋತಜರೂ ಆಗಿರುತ್ತಾರೆ. ಋತವೆಂದರೆ ಸತ್ಯವು. ಪ್ರಾಮಾಣಿಕವಾದ ಜ್ಞಾನದಿಂದ ಅವರು ಕೂಡಿರುತ್ತಾರೆ. ಇದೇ ಋತಜತ್ವವು. ಮತ್ತು ಅವರು ರಯಿಷ್ಠರೂ ಹೌದು. ರಯಿ ಎಂದರೆ ಧನ ಎಂದರ್ಥ. ಗುರೂಪದೇಶವೆಂಬ ಧನದಿದ ಸಂಪನ್ನರಾಗಿ ಅದರಲ್ಲಿಯೇ ನೆಲೆನಿಂತಿರುತ್ತಾರೆ. ಮತ್ತು ಶ್ರದ್ಧೆ, ಸತ್ಯ , ಇವುಗಳಿಂದ ಮಹಿಮಾವಂತರೂ ಆಗಿರುವರು. ಆದ್ದರಿಂದಲೇ ಅವರು ಅಜ್ಞಾನವೆಂಬ ಕತ್ತಲೆಯನ್ನು ದಾಟಿ ಮೇಲಿರುವರು–ಎಂದು ತಿಳಿಸಿದೆ.

ಹೀಗೆ ಯಾವನು ಆ ಬ್ರಹ್ಮವನ್ನು ಈಗ ತಿಳಿಸಿದ ಬ್ರಹ್ಮವಿದರಂತೆಯೇ ಆಗಮಾನುಸಾರವಾಗಿ ಅರಿತುಕೊಳ್ಳುವನೋ ಅವನು ಅಮೃತನಾಗುತ್ತಾನಾದ್ದರಿಂದ ನೀನು ಕೂಡ ''ಎಲೈ ಆರುಣಿಯೆ, ಆ ಪರಬ್ರಹ್ಮವನ್ನು ಹೃದಯರೂಪವಾದ ಮನಸ್ಸಿನಿಂದ ಎಂದರೆ ಹೃದಯಾಂತರ್ವರ್ತಿಯಾಗಿ ಆತ್ಮನಿದಾನೆಂದು ನಿಶ್ಚಯಿಸುವ ಮೂಲಕ ಅರಿತವನಾಗಿ ಮತ್ತೆಮತ್ತೆ ಮೃತ್ಯುವಶನಾಗದೆ ಬಾಳುವವನಾಗು. ಜ್ಞಾನಿಯಾಗಿ ಕೃತಾರ್ಥನಾಗು''–ಎಂದು ಪ್ರಜಾಪತಿಯು ತಿಳಿಸಿದನು. ಆದ್ದರಿಂದ ಜ್ಞಾನವು ಪರಮಲಾಭವೆಂದಾಯಿತು. ಅದರೊಡನೆ ಸಂನ್ಯಾಸವೂ ಕೂಡಿದಾಗ ಇನ್ನೂ ಅಧಿಕತರವಾದ ಪದವಿಯನ್ನು ಪಡೆದವನಾಗುವನು. ಹೀಗೆ ಸಂನ್ಯಾಸವನ್ನೇ ಸತ್ಯಾದಿಸಾಧನಗಳಲ್ಲಿ ಅತಿ ಹೆಚ್ಚಿನ ತಪಸ್ಸೆಂದು ಹೇಳುವರು. ಆದ್ದರಿಂದ ಸಂನ್ಯಾಸಸಹಿತವಾದ ಜ್ಞಾನವು ಶ್ರೇಯಸ್ಸಾಧನವೆಂದು ತಿಳಿಯಬೇಕು.

**ಓಂ ॥ ವಸುರಣ್ವೋ ವಿಭೂರಸಿ ಪ್ರಾಣೇ ತ್ವಮಸಿ ಸಂಧಾತಾ ಬ್ರಹ್ಮನ್**
**ತ್ವಮಸಿ ವಿಶ್ವಧೃತ್ತೇಜೋದಾಸ್ತ್ವಮಸ್ಯಗ್ನಿರಸಿ**
**ವರ್ಚೋದಾಸ್ತ್ವಮಸಿ ಸೂರ್ಯಸ್ಯದ್ಯುಮ್ನೋದಾಸ್ತ್ವಮಸಿ**
**ಚಂದ್ರಮಸ ಉಪಯಾಮಗೃಹೀತೋಽಸಿ ಬ್ರಹ್ಮಣೇ ತ್ವಾ ಮಹಸೇ॥**

ಸಂನ್ಯಾಸವನ್ನು ಸ್ವೀಕರಿಸಿದ ಅನಂತರ ಓಂಕಾರದ ದ್ವಾರದಿಂದ ತನ್ನೊಳಗೇ ಸಮಾಧಾನವನ್ನು ಹೊಂದಿ ಆತ್ಮದರ್ಶನ ಮಾಡುವ ಸಲುವಾಗಿ ವಿಘ್ನಗಳನ್ನು ನಿವಾರಣೆಮಾಡಿಕೊಳ್ಳಲು ಅಂತರ್ಯಾಮಿಯಾದ ಭಗವಂತನನ್ನು ಈಗ ಸ್ತುತಿಸಲಾಗುವದು. ''ಎಲೈ ಬ್ರಹ್ಮನೆ, ನೀನು ವಸುರಣ್ವನಾಗಿರುವೆ. ವಸು ಎಂದರೆ ವಸ್ತುತತ್ತ್ವವು. ಅದನ್ನು ರಣ್ವ–ಎಂದರೆ ವಶಪಡಿಸಿಕೊಂಡಿರುವವನು. ಹಾಗೂ ಸಾಧಕರ ಅನುಗ್ರಹಾರ್ಥವಾಗಿ ಉಪದೇಶಿಸುವವನೂ ಆಗಿದ್ದೀಯೆ. ಹಾಗೆಯೇ ಹಿರಣ್ಯಗರ್ಭ–ವಿರಾಡಾದಿರೂಪದಿಂದ ತೋರಿಕೊಂಡು ವಿಭುವೆನಿಸಿರುವೆ. ವಾಯುರೂಪನಾದ ಜೀವಾತ್ಮನನ್ನು (ಶರೀರದಲ್ಲಿ) ಜೋಡಿಸುವವನಾಗಿರುವೆ, ಹಾಗೂ ವಿಶ್ವವನ್ನೆಲ್ಲ ಧರಿಸಿರುವ ಸೂತ್ರಾತ್ಮನಾಗಿರುವೆ. ಭೂಲೋಕದಲ್ಲಿರುವ ಅಗ್ನಿಗೆ ತೇಜಸ್ಸನ್ನು ಕೊಟ್ಟಿರುವವನಾಗಿರುವೆ. ದ್ಯುಲೋಕದಲ್ಲಿರುವ ಸೂರ್ಯನಿಗೆ ವರ್ಚಸ್ಸನ್ನು ನೀಡಿರುವವನಾಗಿರುವೆ. ಹಾಗೆಯೇ ಚಂದ್ರನಿಗೆ ಕಾಂತಿ–ತಂಪುರೂಪವಾದ ಧನವನ್ನು ದಯಪಾಲಿಸಿರುವೆ. ಹಾಗೆಯೇ ಯಾಗದಲ್ಲಿ ಮರದಿಂದ ಮಾಡಿದ ಪಾತ್ರೆಯಿಂದ ಹಿಡಿಯಲ್ಪಟ್ಟಿರುವ ಸೋಮರಸವಾಗಿರುವೆ. ಹೀಗೆ ನಾನಾರೂಪನೂ ಮಹಾಂತನೂ ಆದ ಜ್ಯೋತಿಃಸ್ವರೂಪನಾದ ಬ್ರಹ್ಮನಾದ ನಿನಗೆ ನಮಸ್ಕಾರಗಳು'' ಎಂದಭಿಪ್ರಾಯ.

**ಓಂ ॥ ಓಮಿತ್ಯಾತ್ಮಾನಂ ಯುಂಜೀತೈತದ್ವೈ ಮಹೋಪನಿಷದಂ ದೇವಾನಾಂ ಗುಹ್ಯಂ ಯ ಏವಂ ವೇದ ಬ್ರಹ್ಮಣೋ ಮಹಿಮಾನ ಮಾಪ್ನೋತಿ ತಸ್ಮಾದ್ಬ್ರಹ್ಮಣೋ ಮಹಿಮಾನಮಿತ್ಯುಪನಿಷತ್ ॥**

ಹೀಗೆ ಸ್ತುತಿಸಿದ ಅನಂತರ ಸಾಧಕನು ಓಂ ಎಂದು ಧ್ಯಾನಮಾಡುತ್ತಾ ತನ್ನನ್ನು ಓಂಕಾರಲಕ್ಷ್ಯವಾದ ಪರಮಾತ್ಮತತ್ತ್ವದಲ್ಲಿಯೇ ಸಂಯೋಜನೆಮಾಡಿಕೊಳ್ಳಬೇಕು. ಸಂನ್ಯಾಸಿಗಳಿಗೆ ಓಂಕಾರಧ್ಯಾನವನ್ನು ಬಿಟ್ಟರೆ ಮತ್ತೇನೂ ಕರ್ತವ್ಯವಿರುವದಿಲ್ಲ. ಅದೊಂದೇ ಧ್ಯಾನಕ್ಕೂ ವಿಚಾರಕ್ಕೂ ಆಲಂಬನವು. ಓಂಕಾರವೇ ಪರಬ್ರಹ್ಮವು ಎಂದು ಚಿಂತಿಸುತ್ತಾ ಓಂಕಾರದ ತ್ರಿಮಾತ್ರೆಗಳನ್ನೂ ಆತ್ಮನ ಪಾದಗಳೊಡನೆ ಐಕ್ಯಮಾಡಿಕೊಂಡು ವಿಚಾರಿಸುತ್ತಿರಬೇಕು. ಹಾಗೆಯೇ ಮುಂದುವರೆದು ಅಮಾತ್ರನೂ ಅಪಾದನೂ ಆದ ತುರೀಯನೇ ಪರಮಾತ್ಮನು. ಅವನೇ ನಾನು–ಎಂಬ ಅಭೇದಜ್ಞಾನದಲ್ಲಿ ನೆಲೆನಿಂತಲ್ಲಿ ಮತ್ತೇನೂ ಮಾಡಬೇಕಾದದ್ದಿಲ್ಲವಾಗುವದು. ಅದೇ ಕಟ್ಟಕಡೆಯ ಮಜಲಾಗಿರುವದು. ಸಾಧಕನು ಆಗ ಸಿದ್ಧನೆನಿಸಿ ಕೃತಾರ್ಥನಾಗುವನು.

ಇದೇ **ಮಹೋಪನಿಷತ್ತು** ಎನಿಸುವದು. **ಉಪನಿಷತ್ತು** ಎಂದರೆ **ಉಪ**–ಸಮೀಪಕ್ಕೆ ನಿ–ನಿಶ್ಚಯವಾಗಿ ಷದ್–ಒಯ್ದು ಬಿಡುವದು–ಪ್ರಣವವೆಂಬ ಆಲಂಬನದ ಮೂಲಕ ಪರಬ್ರಹ್ಮವನ್ನೇ ಸಾಧಕನಿಗೆ ದೊರಕಿಸಿಕೊಡುವದರಿಂದ ಉಪನಿಷತ್ತೆನಿಸುವದು. ಮಹೋಪನಿಷತ್ತುಎಂದರೆ ಪರಬ್ರಹ್ಮಪ್ರತಿಪಾದಕವಾದ ಅನೇಕ ಉಪನಿಷತ್ತುಗಳಲ್ಲಿ ಇದು ಹೆಚ್ಚಿನದೂ ಗ್ರಂಥರೂಪದಿಂದಲೂ ದೊಡ್ಡದಾಗಿಯೂ ಇರವದು–ಎಂದರ್ಥ. ಇಷ್ಟೇ ಅಲ್ಲ. ಇದು ದೇವತೆಗಳಿಗೆ ಕೂಡ ರಹಸ್ಯವೆನಿಸಿರುವದು. ಏಕೆಂದರೆ ಇಂದ್ರಾದಿದೇವತೆಗಳು ಕೂಡ ಗುರುಶುಶ್ರೂಷಾಬ್ರಹ್ಮಚರ್ಯಾದಿಸಾಧನ ಸಂಪತ್ತುಗಳನ್ನು ಸಂಪಾದಿಸಿಕೊಂಡು ಕಡೆಗೆ ಗುರೂಪದೇಶದಿಂದಲೇ ಆತ್ಮತತ್ತ್ವವನ್ನು ಕಂಡುಕೊಂಡವರಾದರು. ಆದ್ದರಿಂದ ಗುಹ್ಯವೆನಿಸಿತು. ಯಾವನು ಇದನ್ನು ಸಂನ್ಯಾಸಿಯಾಗಿ ಓಂಕಾರದ್ವಾರದಿಂದ ಬ್ರಹ್ಮತತ್ತ್ವದಲ್ಲಿ ನೆಲೆಗೊಂಡವನಾಗಿ ಅರಿತುಕೊಳ್ಳುವನೋ ಅವನು ಬ್ರಹ್ಮನ ಮಹಿಮೆಯನ್ನು ಹೊಂದುವನು. ಮಹಿಮೆಯೆಂದರೆ 'ಬ್ರಹ್ಮವು ಜೀವಾತ್ಮನಲ್ಲ. ಅದರಲ್ಲಿ ದೇಶಕಾಲಪರಿಚ್ಛೇದಗಳಿಲ್ಲ . ಅದು ಅಸಂಸಾರಿಯೂ ಜನನಮರಣಾದಿ ರಹಿತವೂ ಅಪಹತಪಾಪ್ಮವೂ ಸರ್ವಜ್ಞ–ಸರ್ವಶಕ್ತನೂ ಸರ್ವಾತ್ಮನೂ ನಿತ್ಯವೂ ನಿರಂಜನವೂ ಅಸಂಗವೂ ಅದ್ವಿತೀಯವೂ ಆಗಿ ಎಂದೆಂದೂ ಇದ್ದುಕೊಂಡಿದೆ'–ಎಂಬ ತಿಳಿವಳಿಕೆಯು. ಬ್ರಹ್ಮವನ್ನು ಬಲ್ಲವನು ಬ್ರಹ್ಮವೇ ಆಗುವನು ಎಂಬ ನ್ಯಾಯದಿಂದ ಅಂಥ ಬ್ರಹ್ಮವಾಗಿ ನೆಲೆನಿಲ್ಲುವದೇ ಮಹಿಮಾಪ್ರಾಪ್ತಿಯೆನಿಸುವದು. ಅದೇ ಜೀವನ್ಮುಕ್ತಿಯು. ಹೀಗೆ

ಬದುಕಿರುವಾಗಲೇ ಜ್ಞಾನದಿಂದ ಮುಕ್ತನಾಗಿರುವವನಿಗೆ ಮತ್ತೊಮ್ಮೆ ಬ್ರಹ್ಮದ ಮಹಿಮೆಯನ್ನು ಹೊಂದುವನು–ಎಂದು ಹೇಳಿದ್ದರಿಂದ ಜ್ಞಾನಿಯು ಪ್ರಾರಬ್ಧಕರ್ಮ ಶೇಷವಿರುವವರೆಗೂ ಯಾವ ದೇಹದಲ್ಲಿ ತತ್ತ್ವಜ್ಞಾನವುಂಟಾಯಿತೋ ಆ ದೇಹವನ್ನು ಬಾಧಿತಾನುವೃತ್ತಿಯಿಂದ ಧರಿಸಿದ್ದು ಪ್ರಾರಬ್ಧಕ್ಷಯವಾಗಲು ದೇಹವನ್ನು ಬಿಸುಟು ವಿದೇಹಮುಕ್ತನಾಗುವನು. ಅವನಿಗೆ ಮತ್ತೆ ಸಂಸಾರಿಗಳಂತೆ ದೇಹಗ್ರಹಣವಿಲ್ಲ. ಅವನು ಪೂರ್ಣವಾಗಿ ಸಂಸಾರದಿಂದ ಬಿಡುಗಡೆಯಾಗುವನು–ಎಂಬಿದೇ ಉಪನಿಷತ್ತು ಎಂದು ಉಪಸಂಹಾರ ಮಾಡಿದೆ.

## ಆತ್ಮಯಜ್ಞ

ಓಂ ॥ ತಸ್ಯೈವಂ ವಿದುಷೋ ಯಜ್ಞಸ್ಯಾತ್ಮಾ ಯಜಮಾನಃ ಶ್ರದ್ಧಾ ಪತ್ನೀ ಶರೀರಮಿಧ್ಮಮುರೋ ವೇದಿರ್ಲೋಮಾನಿ ಬರ್ಹಿರ್ವೇದಃ ಶಿಖಾ ಹೃದಯಂ ಯೂಪಃ ಕಾಮ ಆಜ್ಯಂ ಮನ್ಯುಃ ಪಶುಸ್ತಪೋಽ–ಗ್ನಿರ್ದಮಃ ಶಮಯಿತಾ ದಕ್ಷಿಣಾ ವಾಗ್ಘೋತಾ ಪ್ರಾಣ ಉದ್ಗಾತಾ ಚಕ್ಷುರಧ್ವರ್ಯುರ್ಮನೋ ಬ್ರಹ್ಮಾಶ್ರೋತ್ರಮಗ್ನೀತ್ ॥

ಹಿಂದಿನ ಅನುವಾಕದಲ್ಲಿ ವಿಸ್ತಾರವಾಗಿ ಸತ್ಯಾದಿ ದ್ವಾದಶಸಾಧನಗಳನ್ನೂ ಸಂನ್ಯಾಸದಿಂದ ದೊರಕುವ ಜ್ಞಾನ ಮತ್ತು ಬ್ರಹ್ಮಪದವಿಯನ್ನೂ ತಿಳಿಸಿದ ಅನಂತರ ಈಗ ಸಂನ್ಯಾಸಿಯಾದ ಜ್ಞಾನಿಯೂ ತನ್ನ ಆತ್ಮಾನುಸಂಧಾನವನ್ನೇ ಯಜ್ಞವಾಗಿ ಪರಿವರ್ತಿಸಿ ಕೊಂಡು ಅನುಷ್ಠಿಸುತ್ತಾನೆ. ಆತನ ಇಡಿಯ ಜೀವನವೂ ಸಕಲಲೌಕಿಕ–ಆಶ್ರಮ–ಕರ್ಮಗಳೂ ಯಜ್ಞಮಯವಾಗಿದ್ದು ದ್ರವ್ಯಯಜ್ಞಾದಿಗಳಿಗಿಂತ ಮಿಗಿಲಾದ ಆತ್ಮಯಜ್ಞವನ್ನೇ ಆತನು ದೇಹಧಾರಣಪರ್ಯಂತವೂ ಅನುಷ್ಠಿಸುತ್ತಿರುತ್ತಾನೆ–ಎಂಬೀ ಜ್ಞಾನಸಂನ್ಯಾಸಗಳ ಸ್ತುತಿಯನ್ನು ಪ್ರಸ್ತಾಪಿಸಲಾಗುವದು. ಇಲ್ಲಿ ಯಜ್ಞವೆಂದರೂ, ಸನ್ಯಾಸವೆಂದರೂ, ಜ್ಞಾನವೆಂದರೂ, ಪರಮಾತ್ಮನೆಂದೇ ಅಭಿಪ್ರಾಯ. ಬ್ರಹ್ಮದ ಮಹತ್ತ್ವವನ್ನು ಸಾಕ್ಷಾತ್ಕರಿಸಿಕೊಂಡ ಇಂಥ ಜ್ಞಾನಿಯು ಕೈಗೊಳ್ಳುವ ಯಜ್ಞವು ಹೀಗಿದೆ: ಈ ಆತ್ಮಯಜ್ಞದಲ್ಲಿ ಸರ್ವಜಗದ್ವ್ಯಾಪಾರಸಾಕ್ಷಿಯಾದ ಆತ್ಮನೇ ಯಜಮಾನನು. ಶ್ರದ್ಧೆಯೇ ಹೆಂಡತಿಯು. ಪತ್ನಿಯಿಲ್ಲದವನಿಗೆ ಯಾಗದಲ್ಲಿ ಅಧಿಕಾರವಿಲ್ಲವಾದ್ದರಿಂದ–ಆದರೆ ಸಂನ್ಯಾಸಿಯು ಪತ್ನಿಯನ್ನು ತ್ಯಜಿಸಿರುವದರಿಂದ ಯಜ್ಞವು ಹೇಗಾದೀತು? ಎಂದರೆ ಶ್ರದ್ಧೆಯೇ ಪತ್ನೀಸ್ಥಾನದಲ್ಲಿರುವಳು ಎಂದು ತಿಳಿಯಬೇಕು. ಇದೇ ರೀತಿಯಾಗಿ ಮುಂದೆಯೂ ಅರ್ಥ ಮಾಡಿಕೊಳ್ಳಬೇಕು. ಇನ್ನು ಯಜ್ಞಕ್ಕೆ ಇಧ್ಮವೆಂಬ ಸಮಿತ್ತುಗಳ ಒಂದು ಕಟ್ಟು ಬೇಕಾಗುವದು.

ಅದನ್ನು ಪ್ರಾರಂಭದಲ್ಲಿಯೇ ಪ್ರಧಾನಾಹುತಿಗಳನ್ನು ಅರ್ಪಿಸುವ ಮುಂಚೆಯೇ ಅಗ್ನಿ ಪ್ರಜ್ವಾಲನೆಗಾಗಿ ಕೊಡುತ್ತಾರೆ. ಆತ್ಮಯಜ್ಞದಲ್ಲಿ ಈ ಶರೀರವೆಂಬುದೇ ಇಧ್ಮಸ್ಥಾನದಲ್ಲಿರುವದು. ಹಾಗೆಯೇ ವೇದಿಕೆಯನ್ನು ಸಿದ್ಧಗೊಳಿಸಿ ಅದರ ಮೇಲೆ ಅಗ್ನಿಯನ್ನು ಯಜ್ಞದಲ್ಲಿ ಸ್ಥಾಪಿಸುತ್ತಾರೆ. ಇಲ್ಲಿ ಎದೆ–ಎಂಬುದೇ ವೇದಿಕೆಯು. ಎದೆಯ ಮೇಲೆ ಇರುವ ಕೂದಲುಗಳೇ ಬರ್ಹಿಯೆಂದು ಚಿಂತಿಸಬೇಕು. ಬರ್ಹಿಯೆಂದರೆ ಆಜ್ಯಪಾತ್ರೆಯನ್ನಿಡಲು ಕೆಳಭಾಗದಲ್ಲಿ ಹರಡುವ ದರ್ಭೆಗಳು. ಯಜ್ಞ ಮಾಡುವ ಕರ್ತೃವಿಗೆ ತಲೆಯಲ್ಲಿ ಜುಟ್ಟು (ಶಿಖೆ) ಇರಬೇಕು. ಸಂನ್ಯಾಸಿಯು ಮುಂಡನವನ್ನು ಮಾಡಿಸಿಕೊಂಡಿರುವದರಿಂದ ಜುಟ್ಟಿಲ್ಲವಾಗಿ ಆತ್ಮಯಜ್ಞದಲ್ಲಿ ವೇದಗಳನ್ನೇ ಶಿಖೆಯೆಂದು ಭಾವಿಸಬೇಕು. ಇನ್ನು ಯಜ್ಞದಲ್ಲಿ ಪಶುವನ್ನು ಬಂಧಿಸುವದಕ್ಕೆ ಒಂದು ಕಂಬವಿರುತ್ತದೆ. ಅದನ್ನು **ಯೂಪವೆಂದು** ಕರೆಯುತ್ತಾರೆ. ಈ ಆತ್ಮಯಜ್ಞದಲ್ಲಿ ಹೃದಯವೇ ಯೂಪವು–ಎಂದು ತಿಳಿಯಬೇಕು. ಯಜ್ಞಗಳಲ್ಲಿ ಹೋಮಮಾಡುವದಕ್ಕೆ ತುಪ್ಪವನ್ನು ಪ್ರಧಾನವಾಗಿ ಬಳಸುತ್ತಾರೆ. **ಪುರೋಡಾಶ, ಚರು, ಸೋಮ**–ಮುಂತಾದ ದ್ರವ್ಯಗಳಿದ್ದರೂ ಆಜ್ಯವು ಕಡ್ಡಾಯವಾಗಿದ್ದೇ ಇರಬೇಕು. **ವಸೋರ್ಧಾರಾ–ಪೂರ್ಣಾಹುತಿ**–ಮುಂತಾದ ಸಂದರ್ಭಗಳಲ್ಲಿ ತುಪ್ಪವನ್ನೇ ಬಳಸುತ್ತಾರೆ. ಆದ್ದರಿಂದ ಆತ್ಮಯಜ್ಞದಲ್ಲಿ ತುಪ್ಪವು ಯಾವದು? ಎಂದರೆ ಕಾಮವು. ಹಾಗೆಯೇ ಕೋಪವೆಂಬುದೇ ಪಶುವು. ಯಾಗಗಳಲ್ಲಿ ಪಶುವನ್ನು ವಧಿಸಿ ವಪೆ ಎಂಬ ಭಾಗವನ್ನು ದೇವತೆಗಳಿಗೆ ಸಮರ್ಪಿಸುತ್ತಾರೆ. ಆದ್ದರಿಂದ ಅದು ಯಾಗದ್ರವ್ಯದಲ್ಲಿ ಸೇರಿದೆ. ಇಲ್ಲಿ ಕೋಪವನ್ನೇ ಪಶುವಾಗಿ ಬಳಸಬೇಕು–ಎಂದರ್ಥ. ಇನ್ನು ಯಜ್ಞಕ್ಕೆ ಅಗ್ನಿಯು ಬೇಕು. ದಕ್ಷಿಣೆಯೂ ಬೇಕು. ಆತ್ಮಯಜ್ಞದಲ್ಲಿ ತಪಸ್ಸೆಂಬುದೇ ಅಗ್ನಿಯು. ಇಂದ್ರಿಯಗಳ ಚಾಂಚಲ್ಯವನ್ನು ಸ್ವಾಧೀನದಲ್ಲಿರಿಸಿಕೊಳ್ಳುವ ದಮವೆಂಬುದೇ ಇಲ್ಲಿ ದಕ್ಷಿಣೆಯೆಂದು ತಿಳಿಯಬೇಕು. ಇದನ್ನೇ ಸರ್ವೇಂದ್ರಿಯಗಳಿಗೂ ಶಮನಕಾರಿಯೆಂಬ ಕಾರಣದಿಂದ **ಶಮಯಿತಾ**–ಎಂದಿದೆ.

ಇನ್ನು ಯಜ್ಞದಲ್ಲಿ **ಹೋತಾ, ಉದ್ಗಾತಾ, ಅಧ್ವರ್ಯು, ಬ್ರಹ್ಮಾ, ಅಗ್ನೀದ್ರ**–ಮುಂತಾದ ಋತ್ವಿಜರಿರುತ್ತಾರೆ. ಒಂದು ಶ್ರೌತಯಜ್ಞಕ್ಕೆ ಹದಿನಾರು ಜನ ಋತ್ವಿಜರು ಕನಿಷ್ಠವಾಗಿ ಬೇಕು. ಅವರಲ್ಲಿ ನಾಲ್ವರು ಪ್ರಮುಖರು. ಅವರುಗಳನ್ನೇ ಮೇಲಿನಂತೆ ಹೆಸರಿಸಲಾಗಿರುತ್ತದೆ. ಆತ್ಮಯಜ್ಞದಲ್ಲಿ ಈ ಋತ್ವಿಜರುಗಳು ಯಾರೆಂದರೆ: ವಾಕ್ಕು (ಮತು) ಎಂಬಿದೇ ಹೋತೃವು. ಪ್ರಾಣನೇ ಉದ್ಗಾತೃವು. ಚಕ್ಷು (ಕಣ್ಣು) ಗಳೇ ಅಧ್ವರ್ಯುವು. ಮನಸ್ಸೇ ಬ್ರಹ್ಮವು. ಕಿವಿಗಳೇ ಅಗ್ನೀದ್ರನು–ಎಂದು ಭಾವಿಸಿಕೊಳ್ಳಬೇಕು. ಹೀಗೆ ಆತ್ಮಯಜ್ಞಕ್ಕೆ ಬೇಕಾದ ಸಕಲಸಾಮಗ್ರಿಗಳೂ ಜ್ಞಾನಿಗೆ ಇದೇ ದೇಹದಲ್ಲಿಯೇ ದೊರಕಿರುತ್ತವೆ–ಎಂದು ಸ್ತುತಿಸಲಾಗಿದೆ.

ಓಂ || ಯಾವದ್ಧ್ರಿಯತೇ ಸಾ ದೀಕ್ಷಾ ಯದಶ್ನಾತಿ ತದ್ಧವಿರ್ಯತ್ಪಿಬತಿ ತದಸ್ಯ ಸೋಮಪಾನಂ ಯದ್ರಮತೇ ತದುಪಸದೋ ಯತ್ಸಂ ಚರತ್ಯುಪವಿಶತ್ಯುತ್ತಿಷ್ಠತೇ ಚ ಸ ಪ್ರವರ್ಗ್ಯೋ ಯನ್ಮುಖಂ ತದಾಹವನೀಯೋ ಯಾ ವ್ಯಾಹೃತಿರಾಹುತಿರ್ಯದಸ್ಯ ವಿಜ್ಞಾನಂ ತಜ್ಜುಹೋತಿ ಯತ್ಸಾಯಂ ಪ್ರಾತರತ್ತಿ ತತ್ಸಮಿಧಂ ಯತ್ಪ್ರಾತರ್ಮಧ್ಯಂದಿನಗ್ಂ ಸಾಯಂ ಚ ತಾನಿ ಸವನಾನಿ ||

ಈಗ ಯಜ್ಞಾಂಗವಾದ ಉಳಿದ ಕರ್ಮಗಳೆಲ್ಲವೂ ಜ್ಞಾನಿಯ ಶರೀರಧಾರಣೆಯಲ್ಲೇ ಅಡಕವಾಗಿವೆ–ಎಂದು ತಿಳಿಸಲಾಗುವದು. ಹೇಗೆಂದರೆ: ಎಲ್ಲಿಯವರೆಗೆ ಎಂದರೆ ಪ್ರತಿದಿನವೂ ಎಷ್ಟು ಹೊತ್ತಿನವರೆಗೆ ಊಟಮಾಡದೆ ಇರುವನೋ ಅದೇ ಆತ್ಮಯಜ್ಞದ ದೀಕ್ಷೆಯು. ಅನಂತರ ಏನನ್ನು ಊಟಮಾಡುವನೋ ಅದೇ ಹವಿರರ್ಪಣವು. ಏನನ್ನು ಕುಡಿಯುವನೋ ಅದೇ ಸೋಮಪಾನವು. ಇಂದ್ರಿಯಗಳಿಂದ ಮಾಡುವ ರಮಣ (ಕ್ರೀಡೆ)ಗಳೇ ಉಪಸದಗಳು. ಇನ್ನು ಸಂಚಾರಮಾಡುವದು, ಕುಳಿತಿರುವದು, ಎದ್ದೇಳುವದು–ಇವುಗಳೇ ಪ್ರವರ್ಗ್ಯಗಳು. ಮುಖವೇ ಆಹವನೀಯಾಗ್ನಿಯು; ವ್ಯಾಹೃತಿಗಳನ್ನುಚ್ಚರಿಸುವಿಕೆಯೇ ಆಹುತಿಗಳು. ಇಂದ್ರಿಯಗಳ ಮೂಲಕ ಮನಸ್ಸಿನಲ್ಲುಂಟಾಗುವ ಪ್ರತ್ಯಯಗಳೇ ವಿಜ್ಞಾನವು. ಅದೇ ಹೋಮವು. ಸಂಜೆ ಹಾಗೂ ಬೆಳಗ್ಗೆ ತಿನ್ನುವಂಥ ಪದಾರ್ಥಗಳೇ ಸಮಿತ್ತುಗಳು. ಹಾಗೆಯೇ ಮಧ್ಯಾಹ್ನವೂ ಸೇರಿ ಮೂರು ವೇಳೆಗಳಲ್ಲೂ ಸೇವಿಸುವ ವಿಷಯಗಳೇ ಮೂರು ಸವನಗಳು. ಹೀಗೆ ಯಜ್ಞದ ಎಲ್ಲಾ ಅಂಗೋಪಾಂಗಕ್ರಿಯೆಗಳೂ ಜ್ಞಾನಿಯ ಶರೀರದ ನಿತ್ಯಯಾತ್ರೆಯಲ್ಲಿದ್ದುಕೊಂಡಿವೆ– ಎಂದರ್ಥ.

ಓಂ || ಯೇ ಅಹೋರಾತ್ರೇ ತೇ ದರ್ಶಪೂರ್ಣಮಾಸೌ ಯೇಽರ್ಧ ಮಾಸಾಶ್ಚ ಮಾಸಾಶ್ಚ ತೇ ಚಾತುರ್ಮಾಸ್ಯಾನಿ ಯ ಋತವಸ್ತೇ ಪಶುಬಂಧಾ ಯೇ ಸಂವತ್ಸರಾಶ್ಚ ಪರಿವತ್ಸರಾಶ್ಚ ತೇಽಹರ್ಗಣಾ ಸ್ಸರ್ವವೇದಸಂ ವಾ ಏತತ್ಸತ್ರಂ ಯನ್ಮರಣಂ ತದವಭೃಥಃ ||

ಈಗ ನಾನಾ ವಿಧವಾದ ಯಾಗಗಳೆಲ್ಲವೂ ಜ್ಞಾನಿಯ ಆಯುಃಕಾಲವಿಶೇಷದಲ್ಲಿ ಹೊಂದಿಕೊಂಡಿರುವದನ್ನು ವಿವರಿಸಲಾಗುವದು. ಜ್ಞಾನಿಯ ಬದುಕಿನ ಅಹೋರಾತ್ರೆಗಳೇ ದರ್ಶಪೂರ್ಣಮಾಸಗಳೆನಿಸುವವು. ಪಕ್ಷಗಳೂ ಮಾಸಗಳೂ ಚಾತುರ್ಮಾಸ್ಯಗಳೆನಿಸು

ವವು. ಋತುಗಳು ಪಶುಬಂಧಯಜ್ಞಗಳೆನಿಸುವವು. ಸಂವತ್ಸರ–ಪರಿವತ್ಸರ–ಇಡಾವತ್ಸರ–ಅನುವತ್ಸರ–ಇದ್ವತ್ಸರಗಳೆಲ್ಲವೂ ಪ್ರಭವಾದಿ ಸಂವತ್ಸರಗಳ ಐದೈದರ ಗುಂಪಾಗಿರುವವು. ಪ್ರಭವಾದಿ ಅರುವತ್ತು ವರ್ಷಗಳನ್ನು ಐದೈದರಂತೆ ಹನ್ನೆರಡು ಗುಂಪಾಗಿ ಮಾಡಿದಾಗ ಮೊದಲನೆಯ ಐದನ್ನು ಕ್ರಮವಾಗಿ ಮೇಲ್ಕಂಡ ಹೆಸರುಗಳಿಂದ ಕರೆಯುತ್ತಾರೆ. ಅದರ ಗುಂಪಿಗೆ ಯುಗವೆಂದು ಸಂಜ್ಞೆಯಿದೆ. ಹೀಗೆ ಜ್ಞಾನಿಯ ಆಯುಷ್ಯವೆಲ್ಲ ಪಂಚಸಂವತ್ಸರಮಯವಾಗಿರುವದು. ಇನ್ನು ಅಹರ್ಗಣವೆಂದರೆ ಎರಡು ರಾತ್ರೆಗಳು ಒಂದು ಹಗಲು ಸೇರಿ ಉಂಟಾಗುವ ಕಾಲವು. ಒಟ್ಟು 36 ಘಂಟೆಗಳು ಎನ್ನೋಣ. ಈ ಕಾಲವೇ ಜ್ಞಾನಿಗೆ ಸರ್ವವೇದಸವೆಂಬ ಸರ್ವಸ್ವದಕ್ಷಿಣಾರೂಪವಾದ ಯಜ್ಞವೆನಿಸುವದು. ಹೀಗೆ ಸಂಪೂರ್ಣವಾದ ಆಯುಷ್ಯವೆಲ್ಲವೂ ಯಜ್ಞವೇ ಆಗಿರುವದು. ಇದೇ ಆತ್ಮಯಜ್ಞರೂಪವಾದ ಅಗ್ನಿಹೋತ್ರವು–ಎಂದು ತಿಳಿಯಬೇಕು. ಈ ಅಗ್ನಿಹೋತ್ರದ ಅವಭೃಥ–ಎಂದರೆ ಸಮಾಪ್ತಿಯೆಂಬುದು ಮರಣ–ದೇಹತ್ಯಾಗವೇ ಎಂದಭಿಪ್ರಾಯ.

ಓಂ ॥ ಏತದ್ವೈ ಜರಾಮರ್ಯಮಗ್ನಿಹೋತ್ರಗ್ಂ ಸತ್ರಂ ಯ ಏವಂ ವಿದ್ವಾನುದಗಯನೇ ಪ್ರಮೀಯತೇ ದೇವಾನಾಮೇವ ಮಹಿ ಮಾನಂ ಗತ್ವಾದಿತ್ಯಸ್ಯ ಸಾಯುಜ್ಯಂ ಗಚ್ಛತ್ಯಥ ಯೋ ದಕ್ಷಿಣೇ ಪ್ರಮೀಯತೇ ಪಿತೃಣಾಮೇವ ಮಹಿಮಾನಂ ಗತ್ವಾ ಚಂದ್ರಮಸಃ ಸಾಯುಜ್ಯಗ್ಂ ಸಲೋಕತಾಮಾಪ್ನೋತ್ಯೇತೌ ವೈ ಸೂರ್ಯಾಚಂದ್ರಮಸೋರ್ಮಹಿಮಾನೌ ಬ್ರಾಹ್ಮಣೋ ವಿದ್ವಾನಭಿಜಯತಿ ತಸ್ಮಾದ್ ಬ್ರಹ್ಮಣೋ ಮಹಿಮಾನ ಮಾಪ್ನೋತಿ ತಸ್ಮಾದ್ ಬ್ರಹ್ಮಣೋ ಮಹಿಮಾನಮ್ ॥

ಹೀಗೆ ಜರಾಮರಣವು ಪ್ರಾಪ್ತವಾಗುವವರೆಗೂ ಸಾಗಿಸಲ್ಪಡುವ ಜೀವನವೆಲ್ಲ ಜ್ಞಾನಿಗೆ ಅಗ್ನಿಹೋತ್ರವೇ ಆಗಿರುವದು. ಯಾವನು ಪರಮಾತ್ಮಜ್ಞಾನ ಸಂಪನ್ನನಾಗಿ ಇಲ್ಲಿ ಬದುಕಿರುವಾಗಲೇ ಬ್ರಹ್ಮನಿಷ್ಠನಾಗಿಬಿಡುವನೋ ಅವನಿಗೆ ಗತ್ಯಾಗತಿಗಳೇನೂ ಇಲ್ಲ. ಅವನ ದೇಹವು ಬಿದ್ದುಹೋಗುವದು ಗೌಣವೇ ಆಗಿದೆ. ಏಕೆಂದರೆ ಜೀವಂತನಾಗಿರುವಾಗಲೇ ಜ್ಞಾನಿಯು–ಹಾವು ಪೊರೆಯನ್ನು ಬಿಟ್ಟಂತೆ–ದೇಹದಿಂದ ಬಿಡುಗಡೆಯನ್ನು ಹೊಂದಿರುತ್ತಾನೆ–ಎಂದರೆ ಅಭಿಮಾನರಹಿತನಾಗಿರುತ್ತಾನೆ. ಈ ಉನ್ನತಮಟ್ಟವನ್ನು ತಲುಪಲಾರದೆ ಸಾಧಕನಾದರೊ, ಇದೇ ಆತ್ಮಯಜ್ಞವನ್ನು ಚಿಂತಿಸಲೂಬಹುದು. ಆಗ

ಅವನನ್ನು ಉಪಾಸಕನೆನ್ನುವರು. ಸಾಧಕನು ಸಾಯುವ ಕಾಲಕ್ಕೂ ಉಪಾಸಕನಾಗಿಯೇ ಉಳಿದುಕೊಂಡರೆ ಲೋಕಾಂತರಗತಿಯಾಗುವದು. ಅದು ಎರಡು ವಿಧವಾಗಿದೆ. ಮೊದನೆಯದು ಉತ್ತರಾಯಣಗತಿಯು. ಅದನ್ನು ಈಗ ತಿಳಿಸುತ್ತಾರೆ. ಯಾವ ಉಪಾಸಕನು ಹೀಗೆ ಚಿಂತಿಸುವವನಾಗಿ ಉತ್ತರಾಯಣಕಾಲದಲ್ಲಿ ದೇಹವನ್ನು ಬಿಡುವನೋ ಅವನು ದೇವತೆಗಳ ಎಂದರೆ ಇಂದ್ರಾದಿಗಳ ಐಶ್ವರ್ಯವನ್ನೇ ಪಡೆದು ಅನಂತರ ಆದಿತ್ಯನ ಸಾಯುಜ್ಯವನ್ನು ಹೊಂದಿ ಹಿರಣ್ಯಗರ್ಭಲೋಕವನ್ನು ಪಡೆಯುವನು. ಅಲ್ಲಿ ಅವನಿಗೆ ಕ್ರಮಮುಕ್ತಿಯಾಗುವದು. ಇನ್ನು ಯಾವನು ಉಪಾಸನೆಯು ಚೆನ್ನಾಗಿ ಪಕ್ವವಾಗದೆ ಇದ್ದಾಗಲೇ ಮರಣವನ್ನು ಹೊಂದುವನೋ ಹಾಗೂ ಆ ಕಾಲವು ದಕ್ಷಿಣಾಯನವಾಗಿದ್ದು ಕೃಷ್ಣಗತಿಯಿಂದ ಪರಲೋಕವನ್ನು ಕುರಿತು ಪ್ರಯಾಣ ಬೆಳಸುವನೋ ಅವನು ಪಿತೃಲೋಕವನ್ನು ಸೇರಿ ಅಲ್ಲಿಯ ಭೋಗಗಳನ್ನು ಅನುಭವಿಸಿ ಪಿತೃಗಳೊಡೆಯನಾದ ಚಂದ್ರನ ಸಾಯುಜ್ಯವನ್ನು ಹೊಂದುವನು. ಆದರೆ ಚಂದ್ರನು ವೃದ್ಧಿಕ್ಷಯಗಳನ್ನು ಹೊಂದುವಂತೆ ಇವನು ಪುಣ್ಯವು ಕ್ಷೀಣವಾಗಲು ಮತ್ತೆ ಮರ್ತ್ಯಲೋಕಕ್ಕೆ ಹಿಂದಿರುಗುವನು. ಹೀಗೆ ಇವೆರಡೇ ಗತಿಗಳು ಸಾಧಕರಿಗೆ ಗೊತ್ತಾಗಿರುವವು. ಆದರೆ ಈ ಸೂರ್ಯಚಂದ್ರರ ಲೋಕಗಳನ್ನು ದೊರಕಿಸಿಕೊಡುವಂಥ ಉಪಾಸನೆ–ಕರ್ಮಮಾರ್ಗಗಳೆರಡನ್ನೂ ಬಲ್ಲ ಬ್ರಾಹ್ಮಣನು ಈ ಸಾಧನಗಳ ಮೂಲಕ ಹಿರಣ್ಯ ಗರ್ಭಬ್ರಹ್ಮನ ಲೋಕವನ್ನು ಹೊಂದಬಲ್ಲವನಾಗಿರುವನು. ಹಾಗೂ ತನ್ನ ಸಾಧನ ವಿಶೇಷಗಳಿಂದ ಅಲ್ಲಿರುವವರಿಗೂ ಪೂಜ್ಯನಾಗಬಲ್ಲನು. ಕಡೆಗೆ ಹಿರಣ್ಯಗರ್ಭನೇ ಆಗಿ ನೆಲೆನಿಲ್ಲಬಲ್ಲನು. ಹಾಗೆ ಆಗಲಾಗಿ ಬ್ರಹ್ಮದ ಮಹಿಮೆಯನ್ನೂ ಕ್ರಮವಾಗಿ ಅರಿತವನಾಗಿ ಪರಬ್ರಹ್ಮದೊಡನೆ ಒಡಗೂಡಿ ಸರ್ವಕಾಮಗಳನ್ನೂ ಏಕಕಾಲದಲ್ಲಿ ಅನುಭವಿಸಬಲ್ಲವನಾಗುವನು. ಕರ್ಮ, ಉಪಾಸನೆ, ಜ್ಞಾನಗಳ ಫಲವೆಲ್ಲ ಇದರಲ್ಲಿ ಅಡಕವಾಗಿದೆ. ಇದೇ ಬ್ರಾಹ್ಮಣನ ಮಹಿಮೆಯು. 'ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ' ಎಂದು ಬೇರೊಂದು ಶ್ರುತಿಯೂ ತಿಳಿಸುತ್ತಿದೆ. ಕರ್ಮಗಳಿಂದ ಕುಗ್ಗದೆ ಹಿಗ್ಗದೆ ಎಂದೆಂದೂ ಸಮವಾಗಿರುವ ಬ್ರಹ್ಮಪದವಿಯನ್ನು ಪಡೆಯುವದಕ್ಕಿಂತ ಹೆಚ್ಚಿನ ಪುರುಷಾರ್ಥವಿಲ್ಲ. ಹೀಗೆಂದು ತಿಳಿಸುತ್ತಾ ಉಪನಿಷತ್ತು ಪರಿಸಮಾಪ್ತವಾಗಿದೆ.

ಈಗ ಒಮ್ಮೆ ಇಡಿಯ ಉಪನಿಷತ್ತನ್ನು ಸಿಂಹಾವಲೋಕನ ಮಾಡೋಣ. ಈವರೆಗೆ ವಿವರಿಸಿರುವ ಈ ಆಂಧ್ರಪಾಠಮಂತ್ರಗಳು ಎಂಭತ್ತು ಅನುವಾಕಗಳುಳ್ಳದ್ದಾಗಿದೆಯೆಂತ ಪ್ರಾರಂಭದಲ್ಲೇ ತಿಳಿಸಲಾಗಿದೆ. ವೇದಾಂತೋಕ್ತವಾದ ಪರಬ್ರಹ್ಮತತ್ತ್ವವೂ ಅದರ ಪ್ರಾಪ್ತಿಗೆ ಸಾಧನಗಳಾದ ಜ್ಞಾನ–ಸಂನ್ಯಾಸಗಳೂ ಇಲ್ಲಿ ಮುಖ್ಯವಾಗಿ ಪ್ರತಿಪಾದಿತವಾಗಿವೆ. ಆದರೆ ಇದು ಉತ್ತಮಾಧಿಕಾರಿಗಳಿಗೆ ಮಾತ್ರ ಅನ್ವಯಿಸುವದರಿಂದ

ಬ್ರಹ್ಮಪ್ರತಿಪಾದಕಮಂತ್ರಗಳನ್ನು ಬಿಟ್ಟರೆ ಹೆಚ್ಚಿನವು ಉಪಾಸನಾಪರವಾಗಿವೆ. ಪುರಾಣಗಳಲ್ಲಿ ಪ್ರತಿಪಾದಿಸಿರುವ **ಶಿವ, ವಿಷ್ಣು , ದೇವಿ, ಗಣಪತಿ**–ಮುಂತಾದ ಭೇದಗಳಿಂದ ಇಲ್ಲಿ ಯಾವ ಉಪಾಸನೆಯನ್ನೂ ಸಗುಣಸಾಕಾರವಾಗಿ ನಿರೂಪಿಸಿರುವದಿಲ್ಲ. **ನಾರಾಯಣ, ವಿಷ್ಣು, ಆದಿತ್ಯ , ಮೃತ್ಯು , ರುದ್ರ**–ಮುಂತಾದ ಶಬ್ದಪ್ರಯೋಗಗಳೂ ಆಯಾ ದೇವತೆಯ ಸ್ತುತಿಗಳೂ ಇವೆಯಾದರೂ ಅವೆಲ್ಲವೂ ಪರಬ್ರಹ್ಮವಾಚಕಗಳೆಂದೇ ಭಾವಿಸಿ ಏಕದೇವತಾ ವಾದವನ್ನೇ ಪುಷ್ಟಿಗೊಳಿಸಲಾಗಿದೆ. ಭಾವುಕರು ತಮಗೆ ಇಷ್ಟವಾದ ನಾಮದಿಂದ ಇಲ್ಲಿ ಸ್ತುತಿಸಿರುವ ಆಯಾ ದೇವತಾರೂಪವನ್ನು ಅನುಸಂಧಾನ ಮಾಡಿಕೊಂಡು ಇತಿಹಾಸಪುರಾಣಗಳಲ್ಲಿ ಆ ದೇವತೆಯ ವಿಷಯಕ್ಕೆ ಕೊಟ್ಟಿರುವ ಗುಣಕರ್ಮಲೀಲೆಗಳನ್ನು ಸಹ ಅಳವಡಿಸಿಕೊಂಡು ಸಗುಣೋಪಾಸನೆಯ ಮೂಲಕ ಮೋಕ್ಷಾರ್ಹರಾಗಬಹುದು. ಆದರೆ ಯಾವದೇ ಮತಧರ್ಮಗಳ ಸಂಕುಚಿತದೃಷ್ಟಿಯನ್ನವಲಂಬಿಸಿ ಆಯಾ ಮತವೇ ಶ್ರೇಷ್ಠವೆಂದೂ ಅದಕ್ಕೆ ಈ ಉಪನಿಷತ್ತಿನ ಬೆಂಬಲವಿದೆಯೆಂದೂ ವಾದಿಸುವವರಿಗೆ ಇಲ್ಲಿರುವ ಎಲ್ಲಾ ಮಂತ್ರಗಳ ಸಮನ್ವಯವಾಗಲಿ ಪರಮತಾತ್ಪರ್ಯವಾಗಲಿ ದಕ್ಕಲಾರದು.

ಇದು ಯಜ್ಞಿಕೀ ಉಪನಿಷತ್ತೆಂದು ಹೆಸರನ್ನು ಹೊಂದಿರುವದರಿಂದ ಸಾಮಾನ್ಯಾಧಿಕಾರಿಗಳಾದ ಹಾಗೂ ಬಹಿರಂಗದೃಷ್ಟಿಪ್ರಧಾನರಾದ ಸಾಧಕರಿಗೆ ಅನುಕೂಲವಾಗುವಂಥ ಕರ್ಮಗಳನ್ನೂ ತಿಳಿಸಲಾಗಿದೆ. ಮತ್ತು ಕರ್ಮಾನುಷ್ಠಾನಕ್ಕೆ ಯೋಗ್ಯತೆಯುಂಟಾಗುವದಕ್ಕೆ ಪಾಪಪರಿಹಾರಕಗಳಾದ ಮಂತ್ರಗಳನ್ನೂ ಕೆಲವು ಹೋಮಾದಿಪ್ರಾಯಶ್ಚಿತ್ತಗಳನ್ನೂ ತಿಳಿಸಿದೆ. ಹಾಗೆಯೇ ದುರಿತಕ್ಷಯಕ್ಕಾಗಿ ಅನುಷ್ಠಿಸಬೇಕಾದ ನಿತ್ಯಾಹ್ನಿಕಕರ್ಮಗಳಾದ ಸಂಧ್ಯಾವಂದನೆ, ಗಾಯತ್ರೀಜಪ, ವೈಶ್ವದೇವಾದಿಕರ್ಮಗಳಿಗೆ ಉಪಯುಕ್ತವಾಗುವ ಮಂತ್ರಗಳನ್ನೂ ಅಳವಡಿಸಲಾಗಿದೆ. ಇವುಗಳನ್ನೆಲ್ಲ ಅಧಿಕಾರಿಗಳಾದವರು ಉಪಯೋಗಿಸಿಕೊಳ್ಳಬಹುದು. ದೇವತಾರ್ಚನೆ, ಹೋಮಹವನಾದಿಗಳಿಗೂ ತೀರ್ಥಸ್ನಾನ, ಶ್ರಾದ್ಧಾದಿಕರ್ಮಗಳಿಗೂ ಬಳಸುವಂಥ ಮಂತ್ರಗಳೂ ಇವೆ. ಕರ್ಮಶ್ರದ್ಧೆಯುಳ್ಳವರಿಗೆ ಇವೆಲ್ಲವೂ ಉಪಯೋಗಕರವಾಗಿದ್ದು ಮಂತ್ರಾರ್ಥಗಳನ್ನು ತಿಳಿದು ಆಯಾ ಕರ್ಮಾನುಷ್ಠಾನಗಳನ್ನು ಮಾಡುವವರಿಗೆ ಅಧಿಕವಾದ ಫಲಗಳನ್ನೂ ಕೊಡುವದರಲ್ಲಿ ಸಂಶಯವಿಲ್ಲ.

ಶ್ರೀಶಂಕರಭಗವತ್ಪಾದರು ಈ ಉಪನಿಷತ್ತಿಗೆ ಭಾಷ್ಯವನ್ನು ರಚಿಸದಿದ್ದರೂ ಇದರಲ್ಲಿರುವ ಅನೇಕ ಮಂತ್ರಗಳನ್ನು ತಮ್ಮ ಭಾಷ್ಯಗಳಲ್ಲಿ ಪ್ರಮಾಣವಚನಗಳಾಗಿ ಬಳಸಿರುವದರಿಂದ ಶಂಕರಭಾಷ್ಯೋಕ್ತಿವೇದಾಂತಸಿದ್ಧಾಂತಸಾಧನಗಳ ಅವಲಂಬನೆಯಿಂದಲೇ ಇಲ್ಲಿನ ಎಲ್ಲಾ ಮಂತ್ರಗಳಿಗೂ ವಿವರಣೆಯನ್ನು ಬರೆಯಲಾಗಿದೆ. ನಿಜವಾಗಿ

ಈ ಕಾರ್ಯವು ಬ್ರಹ್ಮೀಭೂತ ಶ್ರೀಶ್ರೀ. ಸಚ್ಚಿದಾನಂದೇಂದ್ರ ಸರಸ್ವತೀ ಮಹಾಸ್ವಾಮಿಗಳಿಂದಲೇ ಆಗಬೇಕಾಗಿತ್ತು. ಆದರೆ ಅದು ಸಾಧ್ಯವಾಗಲಿಲ್ಲ. ಪೂಜ್ಯ ಶ್ರೀಶ್ರೀಗಳವರ ರಚನೆಯ ಮಟ್ಟವನ್ನು ಈ ನನ್ನ ವಿವರಣೆಯು ಮುಟ್ಟಲಾರದೆಂಬುದು ನನಗೆ ತಿಳಿದಿದೆ. ಆದರೂ ಗುರುಭಕ್ತಿಪ್ರೇರಿತನಾಗಿ ಈ ಕಾರ್ಯವನ್ನು ಕೈಗೊಂಡೆನು. ಇದನ್ನು ತಮ್ಮ ಕೃತಿಯೇ ಎಂಬ ಅನುಗ್ರಹಪೂರ್ವಕವಾದ ಅಂತಃಪ್ರೇರಣೆಯಿದ ಸದ್ಗುರುಗಳೇ ಪೂರ್ಣಗೊಳಿಸಿದ್ದಾರೆ. ಆದ್ದರಿಂದ ಈ ಪವಿತ್ರಗ್ರಂಥವನ್ನು ನನ್ನ ಅಲ್ಪಕಾಣಿಕೆಯಾಗಿ ಅವರ ಪಾದಾರವಿಂದಗಳಲ್ಲಿ ಸಮರ್ಪಿಸಿದ್ದೇನೆ. ದೋಷಗಳಿದ್ದರೆ ಅವು ನನ್ನವು. ಗುಣಗಳಿದ್ದರೆ ಅವು ಸದ್ಗುರುವರ್ಯರದೇ–ಎಂದು ಭಾವಿಸಿ ವಾಚಕರು ಈ ಗ್ರಂಥವನ್ನು ಓದಿ ನನ್ನನ್ನು ಹರಸಬೇಕಾಗಿ ಪ್ರಾರ್ಥನೆ.

**ಓಂ ॥ ಸಹ ನಾವವತು । ಸಹ ನೌ ಭುನಕ್ತು । ಸಹ ವೀರ್ಯಂ ಕರವಾವಹೈ । ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ ॥**

**ಓಂ ಶಾಂತಿಃ ಶಾಂತಿಃ ಶಾಂತಿಃ**

**ಹರಿಃ ಓಂ**

(ಪರಮೇಶ್ವರನು ಗುರುಶಿಷ್ಯರಾದ)ನಮ್ಮಿಬ್ಬರನ್ನೂ ಜೊತೆಯಲ್ಲಿ ಕಾಪಾಡಲಿ ; ನಮ್ಮಿಬ್ಬರನ್ನೂ ಜೊತೆಯಲ್ಲಿ ಪೋಷಿಸಲಿ ; (ನಾವು) ಜೊತೆಯಲ್ಲಿ ಸಾಮರ್ಥ್ಯವನ್ನು ಉಂಟು ಮಾಡುವಂತಾಗಲಿ ; ನಮ್ಮಿಬ್ಬರ ಅಧ್ಯಯನವು ತೇಜಸ್ವಿಯಾಗಲಿ ; (ನಾವು ಪರಸ್ಪರ) ದ್ವೇಷಮಾಡದೆ ಇರುವಂತಾಗಲಿ.

**ಓಂ ಶಾಂತಿಃ ಶಾಂತಿಃ ಶಾಂತಿಃ**

13. ಭಗವನ್ನಾಮಚಂದ್ರಿಕೆ : (ಅಷ್ಟೋತ್ತರಗಳ ಸಂಗ್ರಹ) 52
14. ಸನತ್ಸುಜಾತೀಯಮ್ : (ಪ್ರಕರಣಗಳು , ಸಂಪುಟ 7)
(ಮಹಾಭಾರತಾಂತರ್ಗತ ಸನತ್ಸುಜಾತೀಯ ; ಶಾಂಕರ
ಭಾಷ್ಯ ಅನುವಾದ ಸಹಿತ) 254
15. ಪ್ರಬೋಧ ಸುಧಾಕರ : (ಪ್ರಕರಣಗಳು, ಸಂಪುಟ 8) ಪ್ರಬೋದ ಸುಧಾಕರ,
ಪ್ರಶ್ನೋತ್ತರ ರತ್ನಮಾಲಿಕಾ, ಶ್ರೀರಾಮಭುಜಂಗ ಪ್ರಯಾತ, ದತ್ತಲಹರಿ ಸಹಿತ) 112
16. ದೇವೀಮಾಹಾತ್ಮ್ಯ : (ದುರ್ಗಾ ಸಪ್ತಶತೀ – ಮೂಲ, ಭಾವಾರ್ಥ ಸಹಿತ ) 128
17. ಗೀತಾಮನನ : (101 ಶ್ಲೋಕಗಳಲ್ಲಿ ಗೀತೆಯ ಸಂಗ್ರಹ – ವಿವರಣೆ ) 50
18. ಗೃಹ ಪ್ರವೇಶ :(ಹೊಸದಾಗಿ ಮನೆಯನ್ನು ಕಟ್ಟಿದವರು ಅನುಸರಿಸಬೇಕಾದ ಕ್ರಮಗಳ
ಅರ್ಥವಿವರಣೆ, ಗೃಹಸ್ಥಧರ್ಮದ ಪ್ರಾಶಸ್ತ್ಯದೊಡನೆ–ಅಧ್ಯಾತ್ಮತತ್ತ್ವವಿಚಾರ ಸಹಿತ ) 46
19. ಸ್ತುತಿ ಪುಷ್ಪಾಂಜಲಿ : (ಭಕ್ತರೆಲ್ಲರೂ ಮತ್ತು ಮಕ್ಕಳು ಕಂಠಪಾಠಮಾಡಲು
ಯೋಗ್ಯವಾದ ಶ್ಲೋಕಗಳು, ಪ್ರತಿಪದಾರ್ಥಗಳ ಸಹಿತ) 72

### III. ಅಧ್ಯಾತ್ಮಜಿಜ್ಞಾಸುಗಳಿಗೆ (ತತ್ತ್ವಪ್ರಧಾನವಾದ ಮುಮುಕ್ಷುಗಳಿಗೆ )

20. ಮಹಾನಾರಾಯಣೋಪನಿಷತ್ತು : (ಕನ್ನಡದಲ್ಲಿ ವಿಸ್ತಾರವಾದ ಅರ್ಥವಿವರಣೆ ) 219
21. ತೈತ್ತಿರಿಯೋಪನಿಷದ್ಭಾಷ್ಯವಾರ್ತಿಕ : (ಮೂಲ– ಅನುವಾದ ಸಹಿತ ) 200
22. ಆತ್ಮಪ್ರತಿಬೋಧಃ (ಕೇನೋಪನಿಷತ್ತಿನ ಕುರಿತ ಪ್ರಬಂಧ) 48
23. ಸರಸ್ವತೀರಹಸ್ಯೋಪನಿಷಚ್ಚಂದ್ರಿಕೆ : (ಈ ಹೆಸರಿನ ಉಪನಿಷತ್ತಿನ ಮೇಲೆ
ಬರೆದಿರುವ ವಿವರಣೆ 74
24. ಬೃಹದಾರಣ್ಯಕೋಪನ್ಯಾಸಮಂಜರಿ : (ಶಾಂಕರ ಭಾಷ್ಯಾನುಸಾರವಾದ
ಲಘು ವಿವರಣೆ 360
25. ಛಾಂದೋಗ್ಯೋಪನ್ಯಾಸಮಂಜರಿ : (ಶಾಂಕರ ಭಾಷ್ಯಾನುಸಾರವಾದ
ಲಘು ವಿವರಣೆ 348
26. ಶ್ವೇತಾಶ್ವತರೋಪನ್ಯಾಸಮಂಜರಿ : ( ಉಪನಿಷತ್ತಿನ ಲಘು ವಿವರಣೆ) 356
27. ತೈತ್ತೀರಿಯೋಪನ್ಯಾಸಮಂಜರಿ : ( ಉಪನಿಷತ್ತಿನ ಲಘು ವಿವರಣೆ) 84
28. ಐತರೇಯೋಪನ್ಯಾಸಮಂಜರಿ : (ಉಪನಿಷತ್ತಿನ ಲಘು ವಿವರಣೆ) 36
29. ಗೀತಾ ಶಾಸ್ತ್ರಾರ್ಥ ವಿವೇಕ : (ಶ್ರೀ ಶ್ರೀಗಳವರ ಸಂಸ್ಕೃತ ಗ್ರಂಥದ ಕಿರುಪರಿಚಯ) 52

# ದಿ. ವೇ॥ ಬ್ರ॥ ಶ್ರೀ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳು

## (1928 - 2007)

ಅಧ್ಯಾತ್ಮ ವಿದ್ಯಾಪ್ರವೀಣ ವೇ॥ ಬ್ರ॥ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹ ಮೂರ್ತಿಗಳು ತಾ॥ 2-6-1928ರಂದು ನರಸಿಂಹರಾಜಪುರದಲ್ಲಿ ಜನಿಸಿದರು. ಇವರ ಪೂಜ್ಯ ತಂದೆಯವರು ಶೃಂಗೇರಿಯ ಕೃಷ್ಣಯಜುರ್ವೇದ ಸಲಕ್ಷಣ ಘನಾಂತ ಸ್ಮಾರ್ತಪ್ರಯೋಗ ವಿದ್ವಾಂಸರಾಗಿದ್ದ ವೇ॥ ಶ್ರೀಕಂಠಘನಪಾಠಿಗಳವರು ಮತ್ತು ತಾಯಿಯವರು ಸೌ॥ ಕಮಲಮ್ಮನವರು. ಶ್ರೀ ಮೂರ್ತಿಯವರು ಒಂಬತ್ತನೆಯ ವಯಸ್ಸಿನಲ್ಲಿಯೇ ಬ್ರಹ್ಮಚರ್ಯಾಶ್ರಮವನ್ನು ಸ್ವೀಕರಿಸಿ ತಂದೆಯವರಲ್ಲಿಯೇ ಉಪಯುಕ್ತವಾದ ವೇದಭಾಗವನ್ನು ಅಭ್ಯಾಸ ಮಾಡಿದರು. ಆದರೆ ತಮ್ಮ 14ನೇ ವಯಸ್ಸಿನಲ್ಲಿ ಪಿತೃವಿಯೋಗವಾದ್ದರಿಂದ ಮುಂದೆ ಬೇಲೂರಿನ ಸಂಸ್ಕೃತ ಪಾಠಶಾಲೆಯಲ್ಲಿ 4 ವರ್ಷ ವ್ಯಾಸಂಗ ಮಾಡಿ, ಚಂಪೂ ನಾಟಕ (ಸಾಹಿತ್ಯ) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ನಂತರ 1947ರಲ್ಲಿ ಹೊಳೆನರಸೀಪುರದಲ್ಲಿ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳಿಂದ ಸ್ಥಾಪಿತವಾಗಿದ್ದ ''ಅಧ್ಯಾತ್ಮ ವಿದ್ಯಾನಿಲಯ''ದಲ್ಲಿ ಶ್ರೀಗಳಿಂದಲೇ 5 ವರ್ಷ ಕಾಲ ಶಾಂಕರಭಾಷ್ಯ ಪ್ರಸ್ಥಾನಗಳನ್ನು ಅಧ್ಯಯನ ಮಾಡಿ 1952ರಲ್ಲಿ ''ಅಧ್ಯಾತ್ಮ ವಿದ್ಯಾಪ್ರವೀಣ'' ಎಂಬ ಪ್ರಶಸ್ತಿಯನ್ನು ಪಡೆದರು. ನಂತರ ಕಾರ್ಯಾಲಯದಲ್ಲೇ ಪಂಡಿತರಾಗಿ ನೇಮಕಗೊಂಡು ಪಾಠ, ಪ್ರವಚನ, ವೇದಾಂತಪ್ರಚಾರ, ಗ್ರಂಥಪ್ರಕಾಶನ, ಗ್ರಂಥರಚನೆ ಮುಂತಾದ ಹಲವಾರು ಕಾರ್ಯಗಳನ್ನು ನಡೆಸಿಕೊಡುತ್ತಾ ಜನಪ್ರಿಯರಾಗಿ ಶ್ರೀ ಶ್ರೀಗಳವರ ಶಿಷ್ಯರಲ್ಲಿ ಗಣ್ಯರಾಗಿದ್ದು ಕಾರ್ಯಾಲಯದ ಪುರೋಭಿವೃದ್ಧಿಗೆ ಬಹುಮುಖವಾಗಿ ಕಾರಣರಾದರು.

ಶ್ರೀ ಶ್ರೀಗಳು 1975ರಲ್ಲಿ ಬ್ರಹ್ಮೀಭೂತರಾದ ಮೇಲೆ ಶ್ರೀ ಮೂರ್ತಿಗಳೇ ಅಧ್ಯಾತ್ಮ ಪ್ರಕಾಶ ಮಾಸ ಪತ್ರಿಕೆಯ ಸಂಪಾದಕರಾದರು. 1997-98 ಮತ್ತು 2001-02 ಈ ಅವಧಿಯಲ್ಲಿ ಇವರು ನಡೆಸಿಕೊಟ್ಟ ಶಾಂಕರಭಾಷ್ಯಾನುಸಾರ ಬ್ರಹ್ಮಸೂತ್ರಭಾಷ್ಯ, ಉಪನಿಷತ್ ಭಾಷ್ಯ, ಭಗವದ್ಗೀತಾಭಾಷ್ಯ ಮತ್ತು ಭಾಗವತಗಳ ವೇದಾಂತ ಶಿಬಿರಗಳು ಚಿರಸ್ಮರಣೀಯವಾಗಿವೆ. ಈ ಶಿಬಿರಗಳಲ್ಲಿನ ಪ್ರವಚನಗಳು ಸಿ.ಡಿ. (MP3)DVD, ರೂಪದಲ್ಲಿ ದೊರೆಯುತ್ತವೆ. ಇಷ್ಟಲ್ಲದೆ ಶ್ರೀ ಮೂರ್ತಿಗಳು ವೇದ, ವೇದಾಂತ, ಸಂಪ್ರದಾಯಸ್ತೋತ್ರ ಇತ್ಯಾದಿ ವಿಷಯಗಳ ಒಟ್ಟು 29 ಗ್ರಂಥಗಳನ್ನೂ ರಚಿಸಿರುತ್ತಾರೆ. ಈ ಗ್ರಂಥಗಳೆಲ್ಲವೂ ಕಾರ್ಯಾಲಯದಲ್ಲಿ ದೊರೆಯುತ್ತವೆ.

ಇಂತಹ ಪುಣ್ಯಜೀವಿಗಳು ತೀವ್ರ ಅನಾರೋಗ್ಯ ನಿಮಿತ್ತ ತಾ॥ 4-2-2007 ರಂದು ತಮ್ಮ 79ನೇ ವಯಸ್ಸಿನಲ್ಲಿ ಹೊಳೆನರಸೀಪುರದಲ್ಲಿ ಕೀರ್ತಿಶೇಷರಾದರು. ಪೂಜ್ಯರ ಸುಮಾರು 55 ವರ್ಷಗಳ ಕಾಲದ ನಿಃಸ್ವಾರ್ಥಸೇವೆಯನ್ನು ಕಾರ್ಯಾಲಯವು ಸದಾ ಕಾಲವೂ ಅತ್ಯಂತ ಕೃತಜ್ಞತೆಯಿಂದ ಸ್ಮರಿಸುತ್ತದೆ.